# ಸಹಕಾರ ಅವಲೋಕನಾ

- ಶಶಿಧರ ಎಲೆ
ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055
ದೂ : 080-23378375-80, ವೆಬ್ ತಾಣ : www.Souharda.coop

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಧ್ಯೇಯ, ದೃಷ್ಟಿ ಹಾಗೂ ಮೌಲ್ಯಗಳು

**ಧ್ಯೇಯ** : ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಜೊತೆಗೆ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣ.

**ದೃಷ್ಟಿ** : ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿಪರ ವಿಶ್ವಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

**ಮೌಲ್ಯಗಳು** : ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ, ಉತ್ತರದಾಯಿತ್ವ.

## Karnataka State Souharda Federal Vision , Mission and Values

**Vision** : Our vision is to emerge as world class model Cooperative by our Statutory, educational, training, research and development activities.

**Mission** : Our mission is to contribute to build a strong cooperative system which works on Autonomous, Professional, Transparent , Accountable & Economic viability.

**Values** : Our values are : Service - Knowledge- commitment- involvement & Accountability

# ಸಹಕಾರ ಅವಲೋಕನಾ

– ಶಶಿಧರ ಎಲೆ

ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

# COOPERATIVES OVERVIEW

- SHASHIDAR YALE

Additional Registrar of Cooperative Societies (Retd)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಬೆಂಗಳೂರು
2024

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

# ಸಹಕಾರ ಅವಲೋಕನಾ


| | | |
|---|---|---|
| **ಪ್ರಕಾಶಕರು** | : | **ವ್ಯವಸ್ಥಾಪಕ ನಿರ್ದೇಶಕರು,**<br>**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**<br>ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ,<br>ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055<br>ದೂರವಾಣಿ: 080–23378375–80<br>ಇ–ಮೇಲ್: souharda@souharda.coop<br>ವೆಬ್‌ಸೈಟ್: www.souharda.coop |
| **ಮುದ್ರಣ ವರ್ಷ** | : | ಆಗಸ್ಟ್ 2024 |
| **ಪುಟಗಳು** | : | 208 |
| **ಪ್ರತಿಗಳು** | : | 200 |
| **ಬೆಲೆ** | : | 200/– |
| **ವಿನ್ಯಾಸ** | : | **ಶಂಕರ್ ಎಸ್** |
| **ಮುದ್ರಕರು** | : | |

# ಪರಿವಿಡಿ


| ಕ್ರ.ಸಂ | ವಿಷಯಗಳು | ಪುಟ ಸಂಖ್ಯೆ |
|---|---|---|
| | ಭಾಗ 01 : ಸಹಕಾರ ಸಾಮಾನ್ಯ ವಿಷಯಗಳು | |
| 1 | ಸೌಹಾರ್ದ ಸಹಕಾರ ಚಳುವಳಿ – ಕರ್ನಾಟಕದ ಹೆಮ್ಮೆ | 9–15 |
| 2 | ಸಹಕಾರ 'ಅಸ್ಮಿತೆ' ಮತ್ತು 21ನೇ ಶತಮಾನದಲ್ಲಿ ಸಹಕಾರ ಸಂಘಗಳ 'ಅಸ್ತಿತ್ವ' | 15–20 |
| 3 | 'ಆತ್ಮ ನಿರ್ಭರ'– ಸಹಕಾರವೇ ಸೂಕ್ತ ಅಲ್ಲವೇ? | 20–22 |
| 4 | ಸಮೃದ್ಧಿ ಸಾಧನೆಗೆ ಸಹಕಾರ ವಾಹಕ ಎದುರಿಸಬೇಕಾದ ಸವಾಲುಗಳು – ಪರಿಹಾರಗಳ ಪಕ್ಷಿನೋಟ | 23–26 |
| 5 | ನವಭಾರತ ನಿರ್ಮಾಣದಲ್ಲಿ ಸಹಕಾರ ಆಂದೋಲನ ಸ್ವರೂಪ – ಒಂದು ಚಿಂತನೆ | 26–30 |
| 6 | ಸಂಕ್ರಮಣ ಕಾಲದಲ್ಲಿ 'ಸಹಕಾರ' ಎತ್ತ ಸಾಗಿದೆ? ಒಂದು ಚಿಂಥನ– ಮಂಥನ | 30–35 |
| 7 | ಸರ್ವರನ್ನೊಳಗೊಂಡ ನ್ಯಾಯ ಸಮ್ಮತ ಬೆಳವಣಿಗೆ – ಸಹಕಾರದ ಪಾತ್ರ | 35–41 |
| 8 | ಸಹಕಾರ ಸಂಘಗಳ ಮೂಲಕ ಆರ್ಥಿಕ ಸೇರ್ಪಡೆ, ಯುವಕರು, ಮಹಿಳೆಯರು ಮತ್ತು ದುರ್ಬಲ ವರ್ಗಗಳ ಬಲಪಡಿಸುವಿಕೆ | 41–46 |
| 9 | ಯುವ ಜನತೆ ಮತ್ತು ಸಹಕಾರ | 47–49 |
| 10 | ಮಹಿಳಾ ಸಬಲತೆ–ಸಹಕಾರವೇ ಸೂಕ್ತ | 49–52 |
| 11 | ಸಾರ್ವಜನಿಕ –ಖಾಸಗಿ–ಸಹಕಾರಿ– ಸಹ ಭಾಗಿತ್ವವನ್ನು ಬಲಪಡಿಸುವುದು | 53–56 |
| 12 | ಭಾರತದ ಆರ್ಥಿಕತೆಗೆ ತಿರುವು ಸಹಕಾರ ಆಗಬಲ್ಲದೇ – ಒಂದು ಚಿಂತನೆ | 57–60 |
| 13 | ಸಹಕಾರ ಸಂಘ ಸ್ಥಾಪನೆ : ಅಸಂಘಟಿತ ಕಾರ್ಮಿಕರಿಗೆ ಆಸರೆ | 60–62 |
| 14 | ಹಸಿವು ಮುಕ್ತಭಾರತ – ಸಹಕಾರ ಚಳವಳಿಯ ಪಾತ್ರ | 62–65 |
| 15 | ಆಹಾರ ಭದ್ರತೆ – ಸಹಕಾರ ಚಳುವಳಿ, ಒಂದು ವಿಶ್ಲೇಷಣೆ | 65–70 |
| 16 | ಸಹಕಾರ ಚಳುವಳಿಯ ಅವಶ್ಯಕತೆ : ಅತ್ಯುತ್ತಮ ವ್ಯವಸ್ಥಾಪನಾ ರೂಢಿಗಳು ಮತ್ತು ವೃತ್ತಿಪರತೆ | 70–74 |
| 17 | ಸಹಕಾರ ಚಳುವಳಿ – ಮಾಹಿತಿ ತಂತ್ರಜ್ಞಾನ ಅಳವಡಿಕೆ ಅನಿವಾರ್ಯ | 74–77 |
| 18 | ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಸಹಕಾರವೇ ಮೂಲಮಂತ್ರ: ಒಂದು ಅವಲೋಕನ | 77–81 |
| 19 | ಸಂದಿಗ್ಧ ಪರಿಸ್ಥಿಗೆ ಪರಿಹಾರ – ಸಹಕಾರ | 81–83 |
| 20 | ಕೋವಿಡ್ ಎರಡನೆಯ ಅಲೆಯ ನಿಯಂತ್ರಣಕ್ಕೆ' ಸಹಕಾರ ಚಳವಳಿ'ಯ ಕೊಡುಗೆ | 83–85 |

| | | |
|---|---|---|
| 21 | ಸಹಕಾರ ಸಂಘಗಳು–ಕೊರೋನ ಪ್ರಸರಣ ತಡೆಗೆ 'ನಡವಳಿಕೆ ಬದಲಾವಣೆ' ತರುವ ಬಗ್ಗೆ | 86–88 |
| 22 | ಸಹಕಾರ ಚಳುವಳಿಯ ಬೆಳವಣಿಗೆ ಹಾಗೂ ಸವಾಲುಗಳು : ಬೆಳವಣಿಗೆಯಲ್ಲಿ ಸಹಕಾರಿ ಕಾರ್ಯಕರ್ತರ ಪಾತ್ರ | 88–91 |
| 23 | ಭಾರತ ಸರ್ಕಾರದಲ್ಲಿ – ಸಹಕಾರ ಸಚಿವಾಲಯ ಸಾಧಕ ಬಾಧಕಗಳು | 91–94 |
| 24 | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ :ಚರ್ಚಾ ಸ್ಪರ್ಧೆ ಮರೆಯಲಾಗದ ಅನುಭವ – ಒಂದು ಅವಲೋಕನ (ಸಹಕಾರ ಕ್ಷೇತ್ರ ಕುರಿತು ಚರ್ಚಾ ಸ್ಪರ್ಧೆ) | 94–97 |
| 25 | ಭಾರತದ ಆರ್ಥಿಕತೆಯಲ್ಲಿ ಸಹಕಾರದ ಪಾತ್ರ, ಪಾಲು – ಒಂದು ವಿಮರ್ಶೆ | 98–100 |
| **ಭಾಗ 02 ಸಹಕಾರ ಮೌಲ್ಯಗಳು, ತತ್ವಗಳು , ಇತರೆ** | | |
| 26 | ಸಹಕಾರ ಸಂಘಗಳಲ್ಲಿ 'ಸಹಕಾರ ಮೌಲ್ಯ'ಗಳ ಪಾಲನೆಯ ಅಗತ್ಯತೆ | 100–104 |
| 27 | ಸಹಕಾರ ತತ್ವಗಳ ಪಾಲನೆಯಿಂದ ಆಗುವ ಧನಾತ್ಮಕ ಪರಿಣಾಮಗಳು | 104–108 |
| 28 | ಸಹಕಾರ ಸಂಘಗಳು ಮತ್ತು ಪ್ರಮುಖ ಸಹಕಾರ ತತ್ವ ಪಾಲನೆ – ಒಂದು ವಿಶ್ಲೇಷಣೆ | 109–111 |
| 29 | ಅಂತರಾಷ್ಟ್ರೀಯ ಸಹಕಾರ ವರ್ಷ –2025 – ಪ್ರಾಮುಖ್ಯತೆ ಒಂದು ಅವಲೋಕನ | 111–113 |
| 30 | ಅಂತರರಾಷ್ಟ್ರೀಯ ಸಹಕಾರ ದಿನ ಧ್ಯೇಯ : ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು | 113–116 |
| 31 | ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ – ಮಹತ್ವ (ಜುಲೈನ ಮೊದಲ ಶನಿವಾರ, 3ನೇ ಜುಲೈ 2021) | 116–119 |
| 32 | ಅಂತರರಾಷ್ಟ್ರೀಯ ಸಹಕಾರ ದಿನ – ಅದರ ಮಹತ್ವ– ಅವಲೋಕನ | 119–123 |
| 33 | ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ – ಭೇಟಿ, ಅನುಭವ | 123–126 |
| **ಭಾಗ 03 : ಸಹಕಾರ ವ್ಯವಸ್ಥಾಪನೆ, ನಿಧಿಗಳ ನಿರ್ವಹಣೆ** | | |
| 34 | ಸಹಕಾರ ಸಂಘ ಲಾಭಗಳಿಸಲೇಬೇಕೆ? ಏಕೆ? ಹೇಗೆ | 127–130 |
| 35 | ಸಹಕಾರ ಸಂಘಗಳಲ್ಲಿ 'ಸಾಮಾನ್ಯ ನಿಕಾಯ' ಸಭೆಯ ಪ್ರಾಮುಖ್ಯತೆ | 131–133 |
| 36 | ಸಹಕಾರ ಸಂಘಗಳಲ್ಲಿ ವಾರ್ಷಿಕ ಮಹಾಸಭೆ ಇದರ ಪ್ರಾಮುಖ್ಯತೆ | 134–136 |
| 37 | ಆಡಳತ ಮಂಡಲಿ ಸರ್ವ ಸದಸ್ಯರ ಸಭೆಗೆ ಉತ್ತರದಾಯಿತ್ವ ಸದಸ್ಯರಿಗೆ ಅವಕಾಶ | 136–138 |
| 38 | ಸಹಕಾರ ಸಂಘಗಳು, ವರ್ಷಾಂತ್ಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು | 138–140 |
| 39 | ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ – ಪ್ರಾಮುಖ್ಯತೆ | 141–142 |
| 40 | ಕೃಷಿಯೇತರ ಪತ್ತಿನ ಸಹಕಾರ ಸಂಘಗಲ್ಲಿ ಲಾಭಗಳಿಕೆಯ ಮಾರ್ಗೋಪಾಯಗಳು | 143–145 |

| | | |
|---|---|---|
| 41 | ಪತ್ತಿನ ಸಹಕಾರ ಸಂಘಗಳು ಮತ್ತು ಆರ್ಥಿಕ ಶಿಸ್ತು ಪಾಲನೆ ಪ್ರಾಮುಖ್ಯತೆ | 146–148 |
| 42 | ಪತ್ತಿನ ಸಹಕಾರ ಸಂಘ/ಬ್ಯಾಂಕ್‌ಗಳಲ್ಲಿ ಸಕಾಲಿಕ ಕ್ರಮಗಳು | 148–151 |
| 43 | ಸಹಕಾರ ಚಳುವಳಿಯು ಪ್ರಸ್ತುತ ಪರಿಸ್ಥಿತಿಯಲ್ಲಿ ಪತ್ತಿನ ಸಹಕಾರ ಸಂಘಗಳ ವ್ಯವಸ್ಥೆ | 151–155 |
| 44 | ಪತ್ತಿನ ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಸಮರ್ಪಕ ಬಂಡವಾಳ ಹೊಂದುವ ಅವಶ್ಯಕತೆಯ ಪ್ರಾಮುಖ್ಯತೆ | 155–158 |
| 45 | ಪತ್ತಿನ ಸಹಕಾರ ಸಂಘಗಳಲ್ಲಿ ಠೇವಣಿ ಸಂಗ್ರಹಣೆ, ಸಾಲ ವಿತರಣೆ, ಸಾಲ ವಸೂಲಾತಿಯ ಕ್ರಮಗಳು | 158–163 |
| | **ಭಾಗ 04 : ಅಲ್ಪಾವಧಿ ಕೃಷಿ ಪತ್ತು ರಚನೆ** | |
| 46 | ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ಜವಾಬ್ದಾರಿಯುತ ಕಾರ್ಯ ನಿರ್ವಹಿಸುತ್ತವೆ. | 163–167 |
| 47 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯ ಪ್ರಾಮುಖ್ಯತೆ | 167–169 |
| 48 | ಪ್ಯಾಕ್ಸ್‌ಗಳನ್ನು ವಿವಿದೋದ್ದೇಶ ಸೇವಾ ಕೇಂದ್ರಗಳಾಗಿ ಪರಿವರ್ತನೆ : ಇದರ ಅವಶ್ಯಕತೆ – ವಿಶ್ಲೇಷಣೆ | 170–174 |
| 49 | ಅಲ್ಪಾವಧಿ ಕೃಷಿ ಪತ್ತು ರಚನೆಯಲ್ಲಿ ಮೇಲ್ವಿಚಾರಕರ ಪಾತ್ರ ಮತ್ತು ಜವಾಬ್ದಾರಿ | 174–177 |
| 50 | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ವಿಲೀನ ಸಾಧಕ – ಬಾಧಕಗಳು | 177–179 |
| | **ಭಾಗ 05 : ಇತರೆ ವಿಭಾಗಗಳು** | |
| 51 | ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸಾಲ ವಸೂಲಾತಿ ಪ್ರಮುಖ್ಯತೆ | 179–181 |
| 52 | ಸಹಕಾರ ಬ್ಯಾಂಕ್‌ಗಳಲ್ಲಿ "ಆಲ್ಕೋ" (ALCO) ಪ್ರಾಮುಖ್ಯತೆ | 182–185 |
| 53 | ಬ್ಯಾಂಕಿಂಗ್ ನಿಯಂತ್ರಣ(ತಿದ್ದುಪಡಿ) ಕಾಯ್ದೆ 2020 ಇದರ ಪರಿಣಾಮಗಳು | 185–187 |
| 54 | ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಮಗ್ರ ಅಭಿವೃದ್ಧಿಯ ಹೆಜ್ಜೆಗಳು | 187–190 |
| 55 | ಸಹಕಾರ ಮಾರುಕಟ್ಟೆ ಮತ್ತು ರೈತರ ಬಲವರ್ಧನೆ | 190–193 |
| 56 | ವಸತಿ ಸಹಕಾರ ಸಂಘಗಳ ಇತಿಹಾಸ ಬೆಳವಣಿಗೆ –ಭವಿಷ್ಯ | 194–196 |
| 57 | ಆರ್ಥಿಕ ಅಸಮಾನತೆ, ದುಷ್ಪರಿಣಾಮ, ಪರಿಹಾರ "ಸಹಕಾರ" | 196–198 |
| 58 | ಕಿರು ಹಣಕಾಸು ಗುಂಪು ಆಧಾರಿತ ಏಕೆ? ಒಂದು ಮನೋ ವೈಜ್ಞಾನಿಕ ವಿಶ್ಲೇಷಣೆ | 198–204 |
| 59 | ಅಂತರಾಷ್ಟ್ರೀಯ ಸಹಕಾರ ದಿನ 06ನೇ ಜುಲೈ 2024 | 204–206 |

## ಮೊದಲ ಮಾತು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರಿಗಳಿಗೆ ಉಪಯೋಗವಾಗುವ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಅಧ್ಯಯನ ಯೋಗ್ಯ ಪುಸ್ತಕಗಳನ್ನು ಪ್ರತಿವರ್ಷ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಪ್ರಕಟಿಸುತ್ತ ಬಂದಿದೆ. ನಮ್ಮ ದೇಶದಲ್ಲಿ ಸಹಕಾರಿ ಕ್ಷೇತ್ರ ಬೃಹದಾಕಾರವಾಗಿ ಬೆಳೆದಿದೆ. ಹೀಗಾಗಿ ತಿಳಿದುಕೊಳ್ಳಬಹುದಾದ ಅನೇಕ ವಿಷಯಗಳ ಸಾಹಿತ್ಯದ ಮಾಹಿತಿಗಳ ಅವಶ್ಯಕತೆಯನ್ನು ಸಹಕಾರಿಗಳಿಗೆ ಒದಗಿಸುವ ಪ್ರಯತ್ನವನ್ನು ಸಂಯುಕ್ತ ಸಹಕಾರಿಯು ಮಾಡುತ್ತಾ ಬಂದಿದೆ. ಈ ಪ್ರಯತ್ನವನ್ನು ಗುರುತಿಸಿದ ಅನೇಕ ಲೇಖಕರು ತಮ್ಮ ಪುಸ್ತಕವನ್ನು ಪ್ರಕಟಿಸುವ ವಿನಂತಿಯೊಂದಿಗೆ ಸಂಯುಕ್ತ ಸಹಕಾರಿಗೆ ಕಳುಹಿಸಿದಾಗ ಆಡಳಿತ ಮಂಡಳಿಯವರು ಸದರಿ ಪುಸ್ತಕವನ್ನು ಪರಿಶೀಲಿಸಿ ಪ್ರಕಟಣೆಗೆ ಯೋಗ್ಯವೆನಿಸಿದಲ್ಲಿ ಪ್ರಕಟಣೆಗೆ ಕ್ರಮವಿಡಲು ತೀರ್ಮಾನಿಸಿರುತ್ತಾರೆ.

ಪ್ರಸಕ್ತ ಶ್ರೀ ಶಶಿಧರ ಎಲೆಯವರು ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಬೆಂಗಳೂರು ಇವರು ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಅನೇಕ ಹುದ್ದೆಗಳಲ್ಲಿ ಅನೇಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವದ ಹಿನ್ನೆಲೆಯಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಸದರಿ ಲೇಖನಗಳು ಸಹಕಾರ ವಾರ ಪತ್ರಿಕೆ, ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆ ಹೀಗೆ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಮತ್ತು ಪ್ರಸಕ್ತ ಸಹಕಾರ ಚಳುವಳಿಯ ಅಭಿವೃದ್ಧಿಗೆ ಮಾರ್ಗದರ್ಶನ ಮಾಡುವಂತಿವೆ.

ಶ್ರೀ ಶಶಿಧರ ಎಲೆಯವರ ಹಲವಾರು ಲೇಖನಗಳನ್ನು ಅವಲೋಕಿಸಿದಾಗ ಎಲ್ಲ ಲೇಖನಗಳು ಒಂದು ಪುಸ್ತಕದಲ್ಲಿ ಪ್ರಕಟಿಸಿದರೆ ಸಹಕಾರಿಗಳಿಗೆ ಇನ್ನೂ ಹೆಚ್ಚು ಪ್ರಯೋಜನವಾಗಬಹುದು ಎಂಬ ಉದ್ದೇಶದಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಎಲ್ಲ ಲೇಖನಗಳನ್ನು ಒಳಗೊಂಡ **"ಸಹಕಾರ ಅವಲೋಕನ"** ಎಂಬ ಹೆಸರಿನಲ್ಲಿ ಪುಸ್ತಕವನ್ನು ಪ್ರಕಟಿಸಲು ಕ್ರಮ ಜರುಗಿಸಿದೆ. ಈ ಲೇಖನಗಳ ಸಂಗ್ರಹ ಪುಸ್ತಕ ಅಧ್ಯಯನ ಯೋಗ್ಯ ಹಾಗೂ ಸಂಗ್ರಹ ಯೋಗ್ಯವಾಗಿದೆ. ಸಹಕಾರಿಗಳು ಈ ಪುಸ್ತಕವನ್ನು ತಮ್ಮ ಸಹಕಾರಿಯ ಗ್ರಂಥಾಲಯದ ಪುಸ್ತಕ ಭಂಡಾರದಲ್ಲಿ ಸಹಕಾರಿಯ ಸದಸ್ಯರು ಅಧ್ಯಯನ ಅನುಕೂಲಕ್ಕಾಗಿ ಸಂಗ್ರಹಿಸಲು ಯೋಗ್ಯವಾಗಿದೆ.

ಈ ಪುಸ್ತಕವನ್ನು ಪ್ರಕಟಿಸಲು ಸಂಯುಕ್ತ ಸಹಕಾರಿಗೆ ಅವಕಾಶ ನೀಡಿರುವುದಕ್ಕಾಗಿ ಶ್ರೀ ಶಶಿಧರ ಎಲೆ ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**– ಜಿ. ನಂಜನಗೌಡ**
**ಅಧ್ಯಕ್ಷರು**

# ಭಾಗ : 01

## 1. ಸೌಹಾರ್ದ ಸಹಕಾರ ಚಳುವಳಿ – ಕರ್ನಾಟಕದ ಹೆಮ್ಮೆ.

ವಿಶ್ವದಲ್ಲಿ ಸಹಕಾರ ಚಳುವಳಿ ಆರಂಭಗೊಂಡು ಎರಡು ಶತಮಾನ ಕಳೆದಿದೆ. ಭಾರತದಲ್ಲಿ ಒಂದು ಶತಮಾನ ಮೇಲೆ ಎರಡು ದಶಕ ಕಳೆದಿವೆ. ಸಹಕಾರದ ಧ್ಯೇಯ ಎಲ್ಲರನ್ನೂ ಒಳಗೊಳ್ಳುವುದು. "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು". ಈ ದಿಸೆಯಲ್ಲಿ ಸಹಕಾರ ಆಂದೋಲನ ತನ್ನದೇ ಕೊಡುಗೆ ನೀಡುತ್ತಲೇ ಬರುತ್ತಿದೆ. 1990ರ ದಶಕದಿಂದ ಭಾರತದಲ್ಲಿ ಆದ ಆರ್ಥಿಕ ಪರಿಸರದಲ್ಲಿ ಆದ ಬೆಳವಣಿಗೆ ಮತ್ತು ಸರ್ಕಾರದ ನೀತಿ ಸಹಕಾರ ಚಳುವಳಿಯ ಮೇಲೆ ಪ್ರಭಾವ ಬೀರಿತು. ಸರ್ಕಾರದ ಬೆಂಬಲ, ಪೋಷಣೆ ಇಲ್ಲದೆ ಸಹಕಾರ ಚಳುವಳಿ ಸ್ವತಂತ್ರವಾಗಿ ಬದುಕಲು ಬೆಳೆಯಲು ಸಾಧ್ಯವಾಗಬೇಕೆಂಬ ವಾತಾವರಣ ನಿರ್ಮಾಣವಾಯಿತು. ಭಾರತದಲ್ಲಿ ಸಹಕಾರ ಚಳುವಳಿ ಸ್ಪರ್ಧಾತ್ಮಕ ಯುಗದಲ್ಲಿ ತನ್ನ ಮಾರುಕಟ್ಟೆ ಪಾಲನ್ನು ಕಳೆದು ಕೊಳ್ಳುವತ್ತ ಸಾಗಿತು. ಈ ಪರಿಸರದಲ್ಲಿ ಹುಟ್ಟಿದ ಚಿಂತನೆ "ಮಾಡು ಅಥವ ಮಡಿ". "Flourish or perish". ಇದರ ಪರಿಣಾಮವೇ ಕರ್ನಾಟಕದಲ್ಲಿ "ಸೌಹಾರ್ದ ಸಹಕಾರ ಚಳುವಳಿ"ಯ ಉಗಮ ಉಗಮವಾಗಿ ಎರಡು ದಶಕ ಕಳೆದಿದೆ. ಇದರ ಒಂದು ಅವಲೋಕನ ಈ ದಿನದ ಅಗತ್ಯತೆ.

ಸೌಹಾರ್ದ ಸಹಕಾರ ಕಾಯ್ದೆ ಜಾರಿ ಆದ ವರ್ಷಕ್ಕೆ 75 ಸಹಕಾರಿಗಳಿದ್ದು ಒಂದು ದಶಕಕ್ಕೆ 2014–15ಕ್ಕೆ 3173 ಸಹಕಾರಿಗಳಿದ್ದು, 28 ಲಕ್ಷ ಸದಸ್ಯರಿದ್ದರು ಇದ್ದು, 2023–24 ಕ್ಕೆ 6259 ಸಹಕಾರಿಗಳು ಸದಸ್ಯತ್ವ 72 ಲಕ್ಷಗಳಿಗೆ ಏರಿಕೆ ಆಗಿರುವುದು ಈ ಚಳುವಳಿ ಕರ್ನಾಟಕದಲ್ಲಿ ಯಶಸ್ವಿಯಾಗಿ ನಡೆಯುತ್ತಿರುವ ಧ್ಯೋತಕವಾಗಿದೆ ಎಂದರೆ ತಪ್ಪಾಗಲಾರದು. ಅಲ್ಲದೆ ಇದು "ಕರ್ನಾಟಕದ ಹೆಮ್ಮೆ".

**ಹಿನ್ನೆಲೆ;** ಭಾರತದಲ್ಲಿ "ಸಹಕಾರ"ವು ಅಭಿವೃದ್ಧಿಗೆ ಅದರಲ್ಲೂ ಕೃಷಿ, ಕೃಷಿ ಅವಲಂಭಿತ, ಮೀನುಗಾರಿಕೆ, ಕೈಗಾರಿಕೆ ಈ ರೀತಿಯ ಎಲ್ಲ ವೃತ್ತಿಗಳಿಗೆ ಸಂಬಂಧಿಸಿದಂತೆ, ಸಹಕಾರ ಸಂಘಗಳನ್ನು ಆಂಭಿಸಲಾಯಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಇವುಗಳ ಅಭಿವೃದ್ಧಿಗೆ ಹಣಕಾಸು ನೆರವು ಒದಗಿಸಲಾಯಿತು. ಷೇರು ಬಂಡವಾಳ, ಕೊಡುಗೆ, ಸುಲಭ ಸಾಲ, ಸಬ್ಸಿಡಿ, ಸಾಲಕ್ಕೆ ಖಾತ್ರಿ ಈ ರೀತಿಯಲ್ಲಿ ಸರ್ಕಾರ ಬೆಂಬಲವಾಗಿ ನಿಂತು ಚಳುವಳಿಯು ಸರ್ಕಾರ ಅವಲಂಭಿತ ಚಳುವಳಿಯಾಯ್ತು. ಅದಕ್ಕೆ ಅನುಗುಣವಾಗಿ ಸಹಕಾರ ಕಾಯ್ದೆಯಲ್ಲಿ ಸಹಕಾರಕ್ಕೆ ಅನುಕೂಲಕರ (privileges) ಸರ್ಕಾರ ಕೂಡ ಬಂಡವಾಳ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಯಿತು. ಇದರೊಡನೆ ನಿಯಂತ್ರಣಗಳು ಮತ್ತು ಚುನಾಯಿತ ಆಡಳಿತ ಮಂಡಳಿ ಮೇಲೆ ಕ್ರಮಗಳು, ರದ್ಧತಿ, ತಿಳುವಳಿಕೆ ಕ್ರಮಗಳಿಲ್ಲದೆಯೇ ರದ್ಧತಿ, ನಾಮ ನಿರ್ದೇಶನ, ಚುನಾವಣೆಗಳನ್ನು ಒಳಗೊಂಡ ವಾರ್ಷಿಕ ಮಹಾಸಭೆಗಳ ಮುಂದೂಡಿಕೆ, ಸರ್ಕಾರಕ್ಕೆ / ನಿಬಂಧಕರಿಗೆ ನಿರ್ದೇಶನಗಳನ್ನು ನೀಡುವ ಅವಕಾಶ ಗಳಿದ್ದವು. ಈ ಅವಕಾಶಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳಿಗೆ ಮಾರಕವಾಗಿಯೂ ಮತ್ತು ಸರ್ಕಾರದ "ಹಸ್ತಕ್ಷೇಪ" ಎಂದು ಪರಿಗಣಿಸುವುದಲ್ಲದೆ ಇದನ್ನು "ಕ್ರೂರ" ಕಾನೂನುಗಳು (draconian laws) ಎಂದೇ ಪರಿಗಣಿಸಲಾಗಿತ್ತು. ಇದರಿಂದ "ಸಹಕಾರ" ದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ" (autonomy & independence)ಗೆ ಧಕ್ಕೆ ಯಾಗುತ್ತಿದೆ ಎಂಬದು ಕಂಡ ಬಂದಿತಲ್ಲದೇ ಚಳುವಳಿಯ ಬೆಳವಣಿಗೆಗೂ ಮಾರಕವಾಗುತ್ತಿದೆ ಎಂಬುದು ಕಂಡು ಬಂತು. ಇದಕ್ಕೆ ಪರಿಹಾರ ವನ್ನು ಕಂಡಹಿಡಿಯಲು ಅರ್ಧನಾರೀಶ್ವನ್ ಸಮಿತಿ(1985) ರಚಿಸಲಾಯಿತು. ಇದರ ಶಿಫಾರಸಿನಂತೆ ರಾಜ್ಯ ಸರ್ಕಾರಗಳಿಗೆ ತಮ್ಮ ಸಹಕಾರ ಸಂಘಗಳ ಕಾಯ್ದೆಯಲ್ಲಿನ ಮೇಲಿನ ಅಂಶಗಳ ಅವಕಾಶಗಳನ್ನು ತೆಗೆದು ಪ್ರಜಾಸತ್ತಾತ್ಮಕ ಮತ್ತು ವೃತ್ತಿಪರತೆ ಯನ್ನು ಅಳವಡಿಸಿಕೊಳ್ಳಲು ಭಾರತ ಸರ್ಕಾರ ತಿಳಿಸಿತು. ಆದರೆ ಇದು ಸಫಲವಾಗಲಿಲ್ಲ. ತದ ನಂತರ ಚೌದರಿ ಬ್ರಹ್ಮ

ಪ್ರಕಾಶ ಸಮಿತಿ(1990) ರಚಿಸಲಾಯಿತು. ಈ ಸಮಿತಿ ಶಿಫಾರಿಸ್ಸಿನಂತೆ ಪರ್ಯಾಯವಾಗಿ ಮಾದರಿ ಕಾಯ್ದೆ ತಯಾರು ಮಾಡಿ ಹಾಲಿ ಕಾಯ್ದೆ ಯಾಡನೆ ಪರ್ಯಾಯವಾಗಿ ಈ ಮಾದರಿ ಕಾಯ್ದೆಯನ್ನು ಜಾರಿ ಮಾಡಲು ತಿಳಿಸಲಾಯಿತು. ಯಾವುದೇ ರಾಜ್ಯ ಸರ್ಕಾರಗಳು ಸುಲಭವಾಗಿ ಈ ಕ್ರಮವನ್ನು ಸ್ವಾಗತಿಸಲಿಲ್ಲವಾದರೂ ಆಂಧ್ರ ಪ್ರದೇಶ(1995)ದಲ್ಲಿ ಆಂಧ್ರ ಪ್ರದೇಶ ಪರಸ್ಪರ ಸಹಾಯ ಸಹಕಾರ ಸಂಘಗಳ ಕಾಯ್ದೆ (ಆದರ್ಶ ಸಹಕಾರ ಕಾಯ್ದೆ) ಜಾರಿಗೆ ತರಲಾಯಿತು. ಈಗಲೂ ಈ ರೀತಿಯ ಕಾಯ್ದೆ ರಾಷ್ಟ್ರದಲ್ಲಿ ಒಂಭತ್ತು (09) ರಾಜ್ಯಗಳಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಅವು ಆಂಧ್ರ ಪ್ರದೇಶ, ಬಿಹಾರ, ಚತ್ತೀಸಘಡ, ಜಮ್ಮು ಮತ್ತು ಕಾಶ್ಮೀರ, ಝಾರ್ಕಂಡ್, ಕರ್ನಾಟಕ, ಮಧ್ಯ ಪ್ರದೇಶ. ಒರಿಸ್ಸಾ, ಮತ್ತು ಉತ್ತರಾಂಚಲ ರಾಜ್ಯಗಳು. ಇವುಗಳಲ್ಲಿ ಅತಿ ಯಶಸ್ವಿಯಾಗಿ ಗೋಚರವಾಗುವಂತೆ ಕಂಡುಬರುತ್ತಿರುವುದು ಕರ್ನಾಟಕದಲ್ಲಿ ಎಂಬುದು ಸಹಕಾರಿಗಳಿಗೆ ಹೆಮ್ಮೆಯ ವಿಷಯವಾಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಯ ವಿಶಿಷ್ಟ ಅಂಶಗಳು ಮತ್ತು ಕ.ರಾ.ಸ.ಸಂ. ಕಾಯ್ದೆಯೊಡನೆ ಭಿನ್ನತೆ; ಕರ್ನಾಟಕ ಸೌಹಾರ್ದ ಅಧಿನಿಯಮ(ಕಾಯ್ದೆ) 1997 ವಿಧೇಯಕ (ಬಿಲ್) ಮಂಡಿಸುವಾಗ ಉದ್ದೇಶ ಮತ್ತು ಹೇಳಿಕೆಯಲ್ಲಿ ಈ ಕಾಯ್ದೆಯಲ್ಲಿನ ಪ್ರಮುಖ ಅಂಶಗಳ ಬಗ್ಗೆ ಸ್ಪಷ್ಟೀಕರಿಸಲಾಗಿದೆ. ಅದು ಈ ಕೆಳಕಂಡಂತಿದೆ.

(1) ಸದಸ್ಯರೇ, ಸಂಪೂರ್ಣ ಒಡೆತನ ಹೊಂದಿರುವ ,ನಿರ್ವಹಿಸುವ, ಮತ್ತು ನಿಯಂತ್ರಿಸುವ ಸ್ವ ಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ, ಆರ್ಥಿಕ ಉಧ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು.

(2) ನೊಂದಣಿ ಮತ್ತು ರದ್ಧಿಯಾ ತಿಗಳನ್ನು ಬಿಟ್ಟು ಉಳಿದಂತೆ ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ತಡೆಯೊಡ್ಡುವ ಸರ್ಕಾರದ ಎಲ್ಲ ರೀತಿಯ ನಿರ್ಬಂಧಗಳು ಮತ್ತು ನಿಯಂತ್ರಣಗಳು ಮತ್ತು ಹಸ್ತಕ್ಷೇಪಗಳನ್ನು ನಿವಾರಿಸುವುದು.

(3) ಪೂರಕ ಸಂಸ್ಥೆಗಳಿಗೆ, ಸಹಕಾರಿಗಳ ನಡುವೆ ಪಾಲುದಾರಿಕೆ ಮತ್ತು ಸಹಕಾರಿಗಳು ಹಾಗೂ ಇತರ ಸಂಸ್ಥೆಗಳ ನಡುವೆ ಸಹೋದ್ಯಮಕ್ಕೆ ಉತ್ತೇಜನ ನೀಡುವುದು.

(4) ಮೇಲೆ ಹೇಳಿದ ಮುಂದುವರಿಕೆಯಲ್ಲಿ ಸಹಕಾರಿಗಳು, ಒಕ್ಕೂಟ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯನ್ನು ನೊಂದಣಿ ಮಾಡುವುದು.

(5) 1959 ರ ಕ.ಸ.ಸಂ. ಅಧಿನಿಯಮ ಅಡಿಯಲ್ಲಿ ನೊಂದಾಯಿಸಲಾದ ಸಹಕಾರ ಸಂಘಗಳನ್ನು ಪ್ರಸ್ಥಾವಿತ ಶಾಸನದ ಅಡಿ ಸಹಕಾರಿಯಾಗಿ ಪರಿವರ್ತಿಸುವುದು.

ಈ ಮೇಲಿನ ಕಂಡಿಕೆಯಿಂದ ಸೌಹಾರ್ದ ಕಾಯ್ದೆಗೂ ಹಿಂದಿನ ಕಾಯ್ದೆಗೂ ಇರುವ ಭಿನ್ನತೆಯನ್ನು ಅರಿಯಬಹುದು. ಹಿಂದಿನ ಕಾಯ್ದೆಯಲ್ಲಿದ್ದ ನಿಬಂಧಕರ ಮತ್ತು ಸರ್ಕಾರದ ನಿಯಂತ್ರಣ ಅವಕಾಶಗಳನ್ನು ಈ ಕಾಯ್ದೆಯಲ್ಲಿ ಇಲ್ಲವಾಗಿಸಿದೆ. ನೊಂದವಣಿ, ರದ್ಧತಿ, ವಿವಾದ ವಿಲೆ, ಮುಂದೆ ತಿದ್ದುಪಡಿ ಆದಂತೆ ಕೋರಿಕೆ ಮೇರೆಗೆ ವಿಚಾರಣೆ ಇಂತಹ ಕೆಲವು ಅಧಿಕಾರಗಳು ನಿಬಂಧಕರಲ್ಲಿ ನಿಹಿತವಾಗಿದ್ದು ಉಳಿಕೆ ಸೌಹಾರ್ದ ಸಹಕಾರಿಗಳು ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಅವಕಾಶ ವಿದ್ದರೂ ಸದಸ್ಯರ ಹಿತದೃಷ್ಟಿಯಿಂದ ಮತ್ತು ಚಳುವಳಿಯ ಹಿತದೃಷ್ಟಿಯಿಂದ ಇತರೆ ಸಹಕಾರಿಯ ವ್ಯವಸ್ಥಾಪನೆ ಮತ್ತು ಅತ್ಯುತ್ತಮ ರೂಢಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ ಇತರೆ ನಿಯಂತ್ರಣಾಧಿಕಾರವನ್ನು ತಮ್ಮದೇ ಶೃಂಗ ಸಂಸ್ಥೆಯಾದ “ಸಂಯುಕ್ತ ಸಹಕಾರಿ”ಗೆ ನೀಡಲಾಗಿದೆ. ಇದು ಇತರೆ ರಾಜ್ಯಗಳಲ್ಲಿ ಇಲ್ಲದ ವ್ಯವಸ್ಥೆಯಾಗಿದ್ದು

ಕ.ಸೌ.ಸ. ಅಧಿನಿಯಮದ ವೈಶಿಷ್ಟ್ಯವಾಗಿರುತ್ತದೆ. ಈ ವಿಶಿಷ್ಟತೆಯಿಂದ ಕರ್ನಾಟಕದಲ್ಲಿ ಸೌಹಾರ್ದ ಚಳುವಳಿ ಯಶಸ್ವಿ ಕಾರ್ಯಾಚರಣೆಗೆ ಕಾರಣವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇದಕ್ಕಾಗಿಯೇ ಪ್ರತ್ಯೇಕ ಅಧ್ಯಾಯ ವಿರಿಸಲಾಗಿದೆ. ಚುನಾಯಿತ ಪ್ರತಿನಿಧಿಗಳಿಗೆ ಶಾಸನ ಬದ್ಧ ಅಧಿಕಾರ ನೀಡಿರುವುದು ವಿಶೇಷ. ಅದರಂತೆ ಸ್ವಾಯತ್ತತೆ, ಸ್ವಯಂ ಆಡಳಿತಕ್ಕೆ ಕಾಯ್ದೆಯಂತೆ ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ಸೌಹಾರ್ದಸಂಯುಕ್ತ ಸಹಕಾರಿ ನಿಯಮಿತ ವು ತನ್ನ ಧ್ಯೇಯ–ದೃಷ್ಟಿ–ಮೌಲ್ಯ(Mission -Vission-Values) ವಾಕ್ಯೆಯನ್ನು ಧ್ಯೇಯ– ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರ ದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣ. ದೃಷ್ಟಿ– ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿ ಪರ ವಿಶ್ವ ಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು. ಮೌಲ್ಯಗಳು– ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ, ಉತ್ತರ ಧಾಯಿತ್ವ ಎಂದು ರೂಪಿಸಿರುವುದು ಶ್ಲಾಘನೀಯ.

ಸೌಹಾರ್ದ ಸಹಕಾರಿಗಳ ಪ್ರಗತಿ; ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಕಾಯ್ದೆ 1ನೇ ಜನವರಿ 2001 ರಿಂದ ಜಾರಿಯಾಗಿರುತ್ತದೆ. ಆರಂಭದಲ್ಲಿ ನಿಬಂಧಕರ/ಸರ್ಕಾರದ ನಿಯಂತ್ರಣವಿಲ್ಲದೇ ಸಹಕಾರ ಸಂಘಗಳು ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ನೊಂದಾಯಿತ ಸಂಸ್ಥೆಗಳಿಗೆ 'ಸಹಕಾರಿ'ಗಳೆಂದು 1959 ರಡಿಯಲ್ಲಿ ನೊಂದಾಯಿತ ಸಂಸ್ಥೆಗಳಿಗೆ 'ಸಹಕಾರ ಸಂಘ' ಎಂದು ಕರೆಯಲಾಗುತ್ತಿತ್ತು ಆದರೆ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿ ತಂದು ಅವುಗಳೂ 'ಸಹಕಾರ ಸಂಘಗಳು' ಎಂದು ಸ್ಪಷ್ಟೀಕರಿಸಲಾಗಿದೆ ಕಾರ್ಯವೆಸಗಬಲ್ಲವೇ ಎಂಬ ಅನುಮಾನಗಳಿದ್ದು ನೊಂದಣಿಗೆ ಹಿಂಜರಿಕೆ ಇತ್ತು. ಕೆಲವು ಪಟ್ಟಣ ಸಹಕಾರ ಬ್ಯಾಂಕುಗಳ (ಹಿಂದಿನಿಂದಲೂ ನಿಬಂಧಕರ ನಿಯಂತ್ರಣ ಕಡಿಮೆಯೇ ಇತ್ತು ಏಕೆಂದರೆ ಸರ್ಕಾರ ಷೇರು ಬಂಡವಾಳ ಹೂಡಿಕೆ ಮಾಡದ ಕಾರಣ) ಸೌಹಾರ್ದ ಕಾಯ್ದೆಗೆ ವಲಸೆಗೊಂಡವು ಆದರೆ ಬಹಳ ಸಹಕಾರ ಸಂಘಗಳಲ್ಲಿ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ನಿಬಂಧಕರ/ಸರ್ಕಾರದ ನಿಯಂತ್ರಣ ವ್ಯವಸ್ಥೆ ಅವಶ್ಯಕತೆ ಇದೆ ಎಂದು ಕಂಡು ಬಂದು ನೂತನ ಕಾಯ್ದೆಗೆ ವಲಸೆ ಹೋಗಲಿಲ್ಲ. ತದನಂತರಲ್ಲಿ ಹಲವು ರೀತಿಯ ಸಹಕಾರ ಸಂಘಗಳು ಎಲ್ಲಿ ಸರ್ಕಾರದ ಷೇರು ಬಂಡವಾಳ ಹೂಡಿಕೆ ಇಲ್ಲದವು ವಲಸೆಯಾದವು. ತದ ನಂತರದಲ್ಲಿ ಇದು ಚಳುವಳಿಯ ರೂಪವನ್ನು ಪಡೆದದ್ದು ಇತಿಹಾಸವೇ ಸರಿ.

ಒಟ್ಟಾರೆ ಸ್ಥಾಪಿತವಾಗಿರುವ ಸಹಕಾರಿಗಳಲ್ಲಿ ಶೇ.70, 18 ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸೇರಿ ಪತ್ತಿನ ಸಹಕಾರಿಗಳಾಗಿವೆ. ಇತರೆ ಸಹಕಾರಿಗಳು ವಿವಿದೋದ್ದೇಶ, ಬಳಕೆ, ಶಿಕ್ಷಣ, ನೌಕರರಹೈನುಗಾರಿಕೆ, ಕೈಗಾರಿಕೆ, ಕೃಷಿ ಉತ್ಪನ್ನ, ಕಾರ್ಮಿಕ ಸಹಕಾರಿಗಳಿವೆ. 31.03.2024 ಕ್ಕೆ 6259 ಸಹಕಾರಿಗಳಿದ್ದು, ಸಹಕಾರ ಚಳುವಳಿ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ಮತ್ತು ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಹೆಚ್ಚಿನ ಸೌಹಾರ್ದ ಸಹಕಾರಿಗಳು ಸ್ಥಾಪನೆಯಾಗಿರುವುದು ಕಂಡುಬರುತ್ತದೆ. ಸಹಕಾರದ ಬಗ್ಗೆ ಅರಿವು ನಾಯಕತ್ವ, ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂಬ ಅಂಶವನ್ನು ಇದರಿಂದ ತಿಳಿಯಬಹುದಾಗಿದೆ. ಈ ಮಟ್ಟಕ್ಕೆ ಸೌಹಾರ್ದ ಸಹಕಾರ ಚಳುವಳಿ ಬೆಳೆಯಲು ಕಾರಣ ಕರ್ನಾಟಕ ರಾಜ್ಯ ಸೌಹಾರ್ದಸಂಯುಕ್ತ ಸಹಕಾರಿ ನಿಯಮಿತದ ಅವಿರತ ಪ್ರಯತ್ನ, ಅದರ ಸಕ್ರಿಯ ಚಟುವಟಿಕೆಗಳು ಎಂಬುದು ಉತ್ಪ್ರೇಕ್ಷವಲ್ಲ, ಕ.ರಾ.ಸೌ.ಸಂ.ಸ.ನಿ. ಮತ್ತು ಅದರ ಚಟುವಟಿಕೆಗಳು; ಸೌಹಾರ್ದ ಸಹಕಾರ ಕಾಯ್ದೆಯಡಿಯಲ್ಲಿ ಒಂದು "ಸಹಕಾರಿ" ನೊಂದಣಿಯಾದ ಕೂಡಲೆ ತಾನೇ ತಾನಾಗಿ "ಸಂಯುಕ್ತ ಸಹಕಾರಿ"ಯ ಸದಸ್ಯ ವಾಗುತ್ತದೆ. ಈ ಸಂಸ್ಥೆಗಳ ಅಭಿವೃದ್ಧಿ ಮತ್ತು ನಿಯಂತ್ರಣದ ಜವಾಬ್ದಾರಿ "ಸಂಯುಕ್ತ ಸಹಕಾರಿ"ಯ ಜವಾಬ್ದಾರಿಯಾಗುತ್ತದೆ. ಈ ಜವಾಬ್ದಾರಿಯನ್ನು ಈ ಶೃಂಗ ಸಂಸ್ಥೆ ಜವಾಬ್ದಾರಿಯುತವಾಗಿ ನಿರ್ವಹಿಸುತ್ತ ಬಂದಿರುವುದರಿಂದ ಈ "ಚಳುವಳಿ" ಯಶಸ್ವಿಯಾಗಿ ನಡೆಯುತ್ತಾ

ಬಂದಿದೆ. ಇದರ ಕೆಲಸ ಕಾರ್ಯಗಳನ್ನು ನಾವು ಮೂರು ವಿಧವಾಗಿ ವಿಂಗಡಿಸಬಹುದು.(1) ನಿಯಂತ್ರಣ (ಶಾಸನ ಬದ್ಧ ಜವಾಬ್ದಾರಿಗಳು),(2) ವಿಸ್ತರಣೆ ಜವಾಬ್ದಾರಿ, ಕಾರ್ಯಕ್ರಮಗಳು (3) ಸಾಮರ್ಥ್ಯಭಿವೃದ್ಧಿ ಕಾರ್ಯಕ್ರಮಗಳು.

(1) ನಿಯಂತ್ರಣ (ಶಾಸನ ಬದ್ಧ ಜವಾಬ್ಧಾರಿಗಳು) ಕಾರ್ಯಕ್ರಮಗಳು; ಸದಸ್ಯ ಸಹಕಾರಿಗಳ ಪರಿವೀಕ್ಷಣೆ, ವಿಚಾರಣೆ, ಆಡಳಿತ ಮಂಡಳಿ ರದ್ಧಿಯಾಯಿತಿ, ವಿಶೇಷಾಧಿಕಾರಿ ನೇಮಕಾತಿ ಮುಂತಾದವುಗಳು.

(2) ವಿಸ್ತರಣಾ ಜವಾಬ್ದಾರಿಗಳು; ಮಾದರಿ ಉಪವಿಧಿಗಳ ರಚನೆ, ಮಾರ್ಗ ದರ್ಶನ, ವ್ಯವಸ್ಥಾಪನ ಅಭಿವೃದ್ಧಿ ಸೇವೆಗಳನ್ನು ಒದಗಿಸುವುದು, ನಡತೆ ಸಂಹಿತೆ ರೂಪಿಸುವುದು, ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು, ಕಾನೂನು ನೆರವು ಸಲಹೆ ಒದಗಿಸುವುದು, ಇತರೆ ಸೇವೆಗಳನ್ನು ಒದಗಿಸುವುದು, ಉದ್ದಿಮೆಗಳನ್ನು ಉತ್ತೇಜಿಸುವುದು. ಸಹಕಾರ ವಿಚಾರಧಾರೆಯನ್ನು ಅನ್ವಯಿಸುವಂತ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು, ಸಹಕಾರಿಗಳ ನಡುವೆ ಸಹಕಾರ ಮತ್ತು ಸಂಪರ್ಕ ಕಲ್ಪಿಸುವುದು, ಅಂಕಿ ಅಂಶಗಳ ಬ್ಯಾಂಕಿನಂತೆ ವರ್ತಿಸುವುದು.

(3) ಸಾಮರ್ಥ್ಯಭಿವೃದ್ಧಿ ಕಾರ್ಯಕ್ರಮಗಳು ; ಸಹಕಾರ ಶಿಕ್ಷಣ, ತರಬೇತಿ ಹಾಗೂ ತಿಳುವಳಿಕೆ ನೀಡುವುದು ಸಹಕಾರ ತತ್ವಗಳ ಬಗ್ಗೆ ಪ್ರಚಾರ ಮಾಡುವುದು.

ಈ ದಿಸೆಯಲ್ಲಿ "ಸಂಯುಕ್ತ ಸಹಕಾರಿ"ಯು ಗೆಳೆಯ, ಹಿತ ಚಿಂತಕ, ಮಾರ್ಗದರ್ಶಿಯಾಗಿ ತನ್ನ ಅನೇಕ ಕಾರ್ಯಕ್ರಮಗಳ ಮೂಲಕ ನಡೆಸಿಕೊಂಡು ಬರುತ್ತಿರುವದು ಶ್ಲಾಘನೀಯ. ತನ್ನ ಕೇಂದ್ರ ಕಚೇರಿ ಮತ್ತು ವಿಭಾಗೀಯ ಕಚೇರಿಗಳ ಮೂಲಕ ನಡೆಸಿಕೊಂಡು ಬರುತ್ತಿದೆ. ಈ ನಿರ್ವಹಣೆಗೆ ಸ್ವಂತ ಕಟ್ಟಡಗಳನ್ನು ಖಾಯಂ ವಿವಿಧ ವೃಂದ ಶ್ರೇಣಿಯ ವೃತ್ತಿಪರ ಸಿಬ್ಬಂದಿ ಹೊಂದಿರುವುದು ಅಭಿನಂದನೀಯ. ಇ–ಸ್ಟಾಂಪಿಂಗ್ ವ್ಯವಹಾರದ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿರುವುದಲ್ಲದೇ ಸಂಸ್ಥೆಗಳಿಗೆ ನಿಧಿಯೇತರ ಆಧಾಯಕ್ಕೆ ಮೂಲವಾಗಿದೆ. ಶಿಕ್ಷಣ, ತರಬೇತಿ, ಪ್ರಚಾರಕ್ಕೆ ಪ್ರತ್ಯೇಕ ವಿಭಾಗ ತೆರೆದು ವಿವಿಧ ಅವಧಿಯ, ವಿವಿಧ ವಿಷಯಗಳ ಬಗ್ಗೆ ಸಹಕಾರಿಗಳ ಸದಸ್ಯರಿಗೆ, ಸಿಬ್ಬಂದಿಗೆ, ಆಡಳಿತ ಮಂಡಳಿಗೆ, ಪದಾಧಿಕಾರಿಗಳಿಗೆ ಶಿಕ್ಷಣ, ತರಬೇತಿ ನಡೆಸುತ್ತಿರುವುದು, ಗ್ರಾಮೀಣ ವಿಶ್ವವಿದ್ಯಾಲಯ ಗದಗ ಸಹಯೋಗದೊಂದಿಗೆ ಡಿ.ಸಿ.ಬಿ.ಎಂ. ಡಿಪ್ಲೋಮಾ ತರಗತಿ ನಡೆಸುತ್ತಿರುವುದು ಬಡ್ತಿ ಪಡೆಯಲು ಇದನ್ನು ಅರ್ಹ ಮಾನದಂಡ ರೂಪಿಸುತ್ತಿರುವುದು, "ಸ್ವಾಭಿಮಾನಿ ಸಹಕಾರಿ" ಪತ್ರಿಕೆ ಪ್ರಕಟಣೆ, ಸಹಕಾರ ವಿಷಯಗಳ ಬಗ್ಗೆ ಪುಸ್ತಕಗಳ ಪ್ರಕಟಣೆ, ತನ್ನದೇ ವೆಬ್ ಸೈಟ್ ನಿರ್ವಹಣೆ ಇಂತಹ ಸಾಮರ್ಥ್ಯಭಿವೃದ್ಧಿ ಕಾರ್ಯಕ್ರಮಗಳು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಕಾರಣವಾಗಿದ್ದು ಚಳುವಳಿಯ ಬೆಳವಣಿಗೆಗೆ ಕಾರಣವಾಗಿರುತ್ತದೆ. ಕೈಗೊಂಡಿರುವ ಸಂಶೋಧನೆ ಅಧ್ಯಯನಗಳು ಚಳುವಳಿಯ ಬಗ್ಗೆ ವಿಶ್ವ ಮಟ್ಟದಲ್ಲಿ ಅರಿವು ಮೂಡಿಸುತ್ತಿರುವುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಲು ಸಾಧ್ಯವಾಗಿದೆ. ವಿವಾದಗಳ ಇತ್ಯರ್ಥಕ್ಕೆ ಪ್ರತ್ಯೇಕ ಸಹಕಾರ ನ್ಯಾಯಾಲಯ ಸ್ಥಾಪಿಸಿರುವುದು ಶ್ರೀಘ್ರ ವಿಲೇಗೆ ಕಾರಣವಾಗಿದ್ದು ತ್ವರಿತ ಗತಿಯ ಸಾಲ ವಸೂಲಿಗೆ ಸಹಕಾರಿಯಾಗಿದೆ.

ಸೌಹಾರ್ದ ಸಹಕಾರಿ ಚಳುವಳಿಯ ಯಶಸ್ವಿ ಯಶೋಗಾಥೆ; ಸ್ವಾಯತ್ತತೆ ಮತ್ತು ಸ್ವಾತಂತ್ರತೆ ಯಿಂದ, ಸ್ವಯಂ ನಿಯಂತ್ರಣ ಸಹಕಾರ ವ್ಯವಸ್ಥೆ ಯಶಸ್ಸು ಆಗುವುದೇ ಎಂಬ ಅನುಮಾನ ದಿಂದ ಆರಂಭ ಗೊಂಡ ಚಳುವಳಿ ಈಗ ಯಶಸ್ಸಿನ ಹಾದಿಯಲ್ಲಿದೆ ಎಂಬುದು ಸಹಕಾರಿಗಳಿಗೆ ಹೆಮ್ಮೆಯ ವಿಷಯ. ಈ ಸ್ವಾತಂತ್ರ್ಯವನ್ನು ಕೆಲವು ಹಿತಾಸಕ್ತರು ದುರ್ಬಳಕೆ ಮಾಡಿಕೊಂಡಿರುವ ಸಂರ್ಭಗಳಿಲ್ಲದಿಲ್ಲ. ಇಲ್ಲಿ ಸಮರ್ಥ, ನಿಸ್ವಾರ್ಥ, ಪ್ರಮಾಣಿಕ, ಬದ್ಧತೆವುಳ್ಳ, ದೂರ ದೃಷ್ಟಿವುಳ್ಳ ನಾಯಕತ್ವ ಬಹು ಮುಖ್ಯ ಪಾತ್ರ ನಿರ್ವಹಿಸುತ್ತದೆ. ಮೇಲಾಗಿ ಪ್ರಬುದ್ಧ ಅರಿವುಳ್ಳ ಸದಸ್ಯತ್ವ ಅದರ ಭಾಗಿತ್ವ ಅತ್ಯಂತ

ಅವಶ್ಯಕ. ಸದಸ್ಯ ಚಾಲಿತ ಸಹಕಾರ ಈ ದಿನದ ಅವಶ್ಯಕತೆ. ಈ ಗುಣಗಳುಳ್ಳ 'ಸಹಕಾರಿ'ಗಳನ್ನು "ಸಂಯುಕ್ತ ಸಹಕಾರಿ"ಯ ಸಹಯೋಗದಿಂದ ಅಧ್ಯಯನ ಮಾಡಿ ಸಂಶೋಧನ ಲೇಖನಗಳು ಪ್ರಕಟಗೊಂಡಿವೆ ಮತ್ತು ಕಾರ್ಯಗಾರಗಳಲ್ಲಿ ಪ್ರಸ್ತುತ ಪಡಿಸಲಾಗಿದೆ. ಅಲ್ಲದೇ, ಇನ್ನು ಅನೇಕ ಸಂಸ್ಥೆಗಳು ಸ್ವಾಯತ್ತತೆ, ಅತ್ಯುತ್ತಮ ವ್ಯವಸ್ಥಾಪನಾ ರೂಢಿ ಪದ್ಧತಿಗಳಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಪ್ರಥವಾಗಿ ಸಂಯುಕ್ತ ಸಹಕಾರಿ ಸಂಸ್ಥೆಯಾಗಿ ಮಾದರಿಯನ್ನಾಗಿ ಕಾಣುತ್ತಿದ್ದೇವೆ. ಒಂದು ಸ್ವಯಂ ಆಡಳಿತ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಿ (Self-governed & democrtic institution) ಆಗಿ ಸದಸ್ಯ ಸಂಸ್ಥೆಗಳಿಗೆ ಮಾದರಿಯಾಗಿ ಮತ್ತು ಚಳುವಳಿ ಬೆಳವಣಿಗೆಗೆ ಕಾರಣವಾಗಿರುತ್ತದೆ. ಈ ವಲಯದಲ್ಲಿ ಅತ್ಯಂತ ವಿಭಿನ್ನವಾಗಿ ಅತ್ಯಂತ ಸಣ್ಣ ರೈತರು, ಮಲೆನಾಡಿನ ಕಿರು ಅರಣ್ಯ ಉತ್ಪನ್ನಗಳನ್ನು ಬ್ರಾಂಡ್ ಮಾಡಿ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಒದಗಿಸುತ್ತಿರುವ ಸಿರ್ಸಿಯ "ಕದಂಬ ಮಾರುಕಟ್ಟೆ ಸಹಕಾರ ಸಂಘ. ಬಡ ಜನತೆಗೆ ಹಣಕಾಸು ದೊರೆಯುವಂತೆ ಮಾಡಿ ಸುಸ್ಥಿರ ಜೀವನಕ್ಕೆ ದಾರಿ ಮಾಡಿಕೊಟ್ಟಿದೆ. ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದಪತ್ತಿನ ಸಹಕಾರ ಸಂಘ ನೂತನ ತಂತ್ರಗಾರಿಕೆ (strategy) ಮೂಲಕ ಸ್ಥಳೀಯ ಅವಶ್ಯಕತೆಗಳನುಸಾರ ಠೇವಣಿ ಉತ್ಪನ್ನಗಳು ಮತ್ತು ಸಾಲ(ಪತ್ತು) ಉತ್ಪನ್ನಗಳನ್ನು ಬಿಡುಗಡೆ ಮಾಡಿರುವುದು, ಅಧಿಕಾರಗಳ ವಿಕೇಂದ್ರಿಕರಣ ಮತ್ತು ಜವಾಬ್ದಾರಿ ನಿಗದಿಪಡಿಸುವ ಜೊತೆಗೆ ಸದಸ್ಯರಿಗೆ ತ್ವರಿತ ಗತಿಯ ಸೇವೆ. ಪ್ರತ್ಯಕ್ಷ ಅಥವ ನೇರ ಉದ್ಯೋಗ ಮತ್ತು ಅಪ್ರತ್ಯಕ್ಷ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿರುವುದು. ಇವುಗಳಿಗೆ ಈ ಸಹಕಾರಿಯು ಉದಾಹರಣೆಯಾಗಿದೆ. ಸ್ವಾಯತ್ತತೆ ಮತ್ತು ವೃತ್ತಿ ಪರತೆಗೆ ಉದಾಹರಣೆ ಸರಸ್ವತಿ ಪತ್ತಿನ ಸಹಕಾರಿ. ಯುವ ಜನತೆಯಿಂದಲೇ ಆರಂಭಗೊಂಡು ಅವರ ನಾಯಕತ್ವದಲ್ಲಿ ನಡೆಯುತ್ತಿರುವ ಸಹಕಾರಿಗಳು, ಮಹಿಳೆಯರಿಂದಲೇ ಆರಂಭಗೊಂಡು ಅವರ ಸದಸ್ಯತ್ವ ಹೊಂದಿ ಅವರನ್ನು ನವೋದ್ಯಮಿಗಳನ್ನಾಗಿ ಮಾಡಲು ಕಾರಣವಾಗಿರುವ ಸಹಕಾರಿಗಳು, ಸ್ವಸಹಾಯ ಸಂಘಗಳಗಳಿಗೆ ಸಾಲಗಳನ್ನು ಒದಗಿಸಿ ಯುವಜನತೆ ಮತ್ತು ಮಹಿಳೆಯರ ಒಳಗೊಳ್ಳುವಿಕೆ ಮತ್ತು ಅವರನ್ನು ಆರ್ಥಿಕ ಸಬಲರನ್ನಾಗಿ ಮಾಡುತ್ತಿವೆ. ಒಟ್ಟಾರೆ ಸ್ವಾತಂತ್ರ್ಯ, ಸ್ವಾಯತ್ತತೆ, ಅತ್ಯುತ್ತಮ ವ್ಯವಸ್ಥಾಪನಾ ರೂಢಿ ಪದ್ಧತಿಗಳು ಅಬಲರಲ್ಲಿ ಸಶಕ್ತತೆಯನ್ನು ಉಂಟುಮಾಡಿರುತ್ತದೆ. ಸರ್ವರ ಒಳಗೊಳ್ಳುವಿಕೆ, ಅತ್ಯುತ್ತಮ ನಾಯಕತ್ವ ಬೆಳವಣಿಗೆಗೆ ಸದಸ್ಯರ ಆಸೆ, ಆಕಾಂಕ್ಷೆ, ಅವಶ್ಯಕತೆಗಳನ್ನು ಪೂರೈಸುವ ಮೂಲಕ ಈ ಸೌಹಾರ್ದ ಸಹಕಾರ ಚಳುವಳಿ ವಿಶ್ವಕ್ಕೆ ಮಾದರಿಯಾಗಿ, ಬಂಡವಾಳ ಶಾಹಿಗೆ ಅಸಮಾನತೆ ಯ ಸಮಾಜ ನಿರ್ಮಾಣಕ್ಕೆ ಕಾರಣವಾಗಿರುವ ವ್ಯವಸ್ಥೆಗೆ ಸ್ಪರ್ಧೆ ಒಡ್ಡಲಿ, ಸಮಾತಾ ಸಮಾಜ ನಿರ್ಮಾಣಕ್ಕೆ ಕಾರಣವಾಗಲಿ ಎಂಬುದು ಸದಾಶಯ. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ 1997 ಜಾರಿಯಾಗಲು ಕಾರಣರಾದ ಶ್ರೀ ಎಸ್.ಎಸ್. ಪಾಟೀಲ ಮಾಜಿ ಸಹಕಾರ ಸಚಿವರು ಕರ್ನಾಟಕ ರಾಜ್ಯ ಮತ್ತು ಈ ಕಾಯ್ದೆ ರೂಪುಗೊಳ್ಳುವಲ್ಲಿ ಆಸ್ಥೆ, ಶ್ರಮ ವಹಿಸಿದ ಶ್ರೀ ಸಿ. ಎನ್. ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರನ್ನು ಸಹಕಾರಿಗಳು ಮರೆಯುವಂತಿಲ್ಲ. ಕ.ರಾ.ಸ. ಮಹಾಮಂಡಳದ ಸೇವೆಯಿಂದ ನಿವೃತ್ತಿ ಆದ ನಂತರ ಅವರ ಅನುಭವಯುತ ಸೇವೆಯನ್ನು "ಸೌಹಾರ್ದ ಸಂಯುಕ್ತ ಸಹಕಾರಿ"ಗೆ ಒದಗಿಸುತ್ತಿರುವ ಶ್ರೀ ವಿಠಲ ಜೆ. ಕಾರಕೂನ ರವರ ಸೇವೆ ಪ್ರಶಂಸಾರ್ಹ.

**ಮಹಾ ಕಾರ್ಯಗಳನ್ನು ಮಹಾತ್ಯಾಗದಿಂದ ಮಾತ್ರ ಸಾಧಿಸಲು ಸಾಧ್ಯ. ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆ ಆಗದು. – ಸ್ವಾಮಿ ವಿವೇಕಾನಂದ.**

**(ಆಧಾರ: ಕ.ಸೌ.ಸ.ಕಾಯ್ದೆ, "ಸೌಹಾರ್ದ ಸಂಯುಕ್ತ ಸಹಕಾರಿ" ಪ್ರಗತಿ ವರದಿಗಳು, ಡಾ॥ ಯಶವಂತ ಡೊಂಗ್ರೆ, ಶ್ರೀ ಶರಣಗೌಡ ಜಿ. ಪಾಟೀಲ, ವ್ಯ.ನಿ., ಕ.ಸೌ.ಸಂ.ಸ.ನಿ; ಡಾ. ಪರಂಜ್ಯೋತಿ, ಟಿ. ಇಂದಿರಾ ಎಂ. ರವರ ಸಂಶೋಧನ ಲೇಖನಗಳು)**

**ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಪಕ್ಷಿನೋಟ :** ರಾಜ್ಯದಲ್ಲಿ 6259ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿವೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 72 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ.

| ವಿವರ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಸಹಕಾರಿಗಳ ಸಂಖ್ಯೆ | 5045 | 5298 | 5534 | 5597 | 6259 |
| ಸದಸ್ಯರು | 62 ಲಕ್ಷ | 62 ಲಕ್ಷ | 6 4ಲಕ್ಷ | 64 ಲಕ್ಷ | 72 ಲಕ್ಷ |
| ಶೇರು ಬಂಡವಾಳ | 917 ಕೋಟಿ | 989 ಕೋಟಿ | 1,047 ಕೋಟಿ | 1,047 ಕೋಟಿ | 1610 ಕೋಟಿ |
| ಠೇವಣಿಗಳು | 21,578 ಕೋಟಿ | 24,172 ಕೋಟಿ | 24,352 ಕೋಟಿ | 27,352 ಕೋಟಿ | 43,704 ಕೋಟಿ |
| ನೀಡಿದ ಸಾಲಗಳು | 17,322 ಕೋಟಿ | 18,839 ಕೋಟಿ | 20,596 ಕೋಟಿ | 20,596 ಕೋಟಿ | 34,030 ಕೋಟಿ |
| ದುಡಿಯುವ ಬಂಡವಾಳ | 24,436 ಕೋಟಿ | 27,663 ಕೋಟಿ | 30,872 ಕೋಟಿ | 30,872 ಕೋಟಿ | 49,396 ಕೋಟಿ |
| ಲಾಭ | 361 ಕೋಟಿ | 321 ಕೋಟಿ | 365 ಕೋಟಿ | 365 ಕೋಟಿ | 626 ಕೋಟಿ |
| ಕಾಯ್ದಿಟ ನಿಧಿಗಳು | 1,667 ಕೋಟಿ | 2,180 ಕೋಟಿ | 2,270 ಕೋಟಿ | 2,270 ಕೋಟಿ | 3,690 ಕೋಟಿ |
| ಉದ್ಯೋಗ ದಲ್ಲಿರುವವರು | 55000 | 55000 | 58000 | 60000 | 75000 |
| ಇ–ಸ್ಟಾಂಪಿಂಗ್ ಕೇಂದ್ರಗಳು | 1351 | 1372 | 1505 | 1624 | 1631 |

**ದಿನಾಂಕ 31.03.2024ರ ಅಂಕಿ–ಅಂಶದಂತೆ ಸೌಹಾರ್ದ ಸಹಕಾರಿಗಳ ವಿವರ :**

- ಸಹಕಾರಿಗಳ ಸಂಖ್ಯೆ – 6259
- ಶೇರು ಬಂಡವಾಳ – 1610 ಕೋಟಿ
- ಠೇವಣಿ – 43,704 ಕೋಟಿ
- ನೀಡಿದ ಸಾಲಗಳು – 34,030 ಕೋಟಿ
- ಪಡೆದ ಸಾಲಗಳು – 392 ಕೋಟಿ

- ಕಾಯ್ದಿಟ್ಟ ನಿಧಿಗಳು – 3,690 ಕೋಟಿ
- ದುಡಿಯುವ ಬಂಡವಾಳ – 49,396 ಕೋಟಿ
- ಲಾಭ – 626 ಕೋಟಿ
- ಉದ್ಯೋಗದಲ್ಲಿರುವವರು – 75000
- ಸೌಹಾರ್ದ ಸಹಕಾರಿಗಳ ಮೂಲಕ ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ – 1631

*****************************************************************************************

## 2. ಸಹಕಾರ 'ಅಸ್ಮಿತೆ' ಮತ್ತು 21ನೇ ಶತಮಾನದಲ್ಲಿ ಸಹಕಾರ ಸಂಘಗಳ 'ಅಸ್ತಿತ್ವ'

ಸಹಕಾರ ಚಳುವಳಿ ಭಾರತದಲ್ಲಿ ನೆಲೆಗೊಂಡು ನೂರ ಹದಿನೈದು ವರ್ಷಗಳಾಗಿವೆ. ಚಳುವಳಿ ಎದುರಿಸಿರುವ ಸವಾಲುಗಳು ಅನೇಕ. ಆದರೆ 1990ರ ದಶಕದಿಂದೀಚೆಗೆ ಎದುರಿಸುತ್ತಿರುವ ಸವಾಲು ಅತ್ಯಂತ ಮಹತ್ತರವಾದದು. ಭಾರತದ ಆರ್ಥಿಕ ಚಿಂತನೆಯ ದಿಕ್ಕು ಬದಲಾಗಿದೆ. ಸಹಕಾರದ ಚಳುವಳಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಸರ್ಕಾರ ಮತ್ತು ಸಾರ್ವಜನಿಕ ವಲಯ ಸಹಕಾರ ವಲಯಕ್ಕೆ ಪೂರಕವಾಗಿ ನಿಂತಿದ್ದು, ಅದರ ಬೆಳವಣಿಗೆಗೂ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಭಾರತದಲ್ಲಿನ ಆರ್ಥಿಕ ನೀತಿ ಮಿಶ್ರ ಆರ್ಥಿಕ ನೀತಿಯಿಂದ ಹೊರಳಿ ಖಾಸಗಿ ವಲಯಕ್ಕೆ ಒತ್ತಾಸೆನಿಂತಾಗಿನಿಂದ ಸಹಕಾರ ವಲಯ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿದೆ. ಬದಲಾದ ಪರಿಸರಕ್ಕೆ ಸಜ್ಜುಗೊಳ್ಳದೆ ಇರುವುದೇ ಇದಕ್ಕೆ ಕಾರಣವಾಗಿದೆ. ವಿಶ್ವ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಭಾರತ ಒಂದು ದ್ವೀಪವಾಗಿ ಉಳಿಯದೇ ತಾನೂ 'ಉದಾರೀಕರಣ, ಖಾಸಗೀಕರಣ, ಜಾಗತೀಕರಣ'ಕ್ಕೆ ಒಡ್ಡಿಕೊಳ್ಳಲೇಬೇಕಾದ ಸ್ಥಿತಿ ಅನಿವಾರ್ಯವೂ, ಅವಶ್ಯಕತೆಯೂ ಆಗಿರುತ್ತದೆ. ಇದರ ನೇರ ಪರಿಣಾಮ ಸಹಕಾರ ವಲಯದ ಮೇಲಾಗಿದ್ದು, ತನ್ನ ಅಸ್ತಿತ್ವದ ಅವಶ್ಯಕತೆಯ ಮೇಲೆಯೇ ದುಷ್ಪರಿಣಾಮ ಬೀರಿದೆ.

ಈ ಮೇಲಿನ ಪರಿಸ್ಥಿತಿಯಲ್ಲಿ ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಮೇಲೆ ಆಗಿರುವ ಋಣಾತ್ಮಕ ಪರಿಣಾಮಗಳ ಅಧ್ಯಯನ ಅಗತ್ಯ. ಒಂದು ಸಮೀಕ್ಷೆಯಂತೆ ಭಾರತದಲ್ಲಿನ ಸಿರಿವಂತ ಶೇಕಡ 01 ಜನ 2010ರಲ್ಲಿ ಸಿರಿವಂತಿಕೆಯ ಶೇಕಡ 40 ಪಾಲು ಹೊಂದಿದ್ದು, ಕಳೆದ ಐದು ವರ್ಷದಲ್ಲಿ ಈ ಪಾಲು ಶೇಕಡ 60ಕ್ಕೆ ಏರಿದೆ. ಭಾರತದ ಒಟ್ಟಾರೆ ಸಿರಿವಂತಿಕೆಯ ಶೇಕಡ 90 ಪಾಲನ್ನು ಶೇಕಡ 10 ಜನರು ಮಾತ್ರ ಹೊಂದಿರುತ್ತಾರೆ. ಉಳ್ಳವರು ಮತ್ತು ಇತರರ ನಡುವಿನ ಅಂತರದ ಅಗಾಧತೆಯನ್ನು ಇದು ಬಿಂಬಿಸುತ್ತದೆ. ಇದರ ಸಾಮಾಜಿಕ ಪರಿಣಾಮಗಳನ್ನು ಊಹಿಸಲು ಅಸಾಧ್ಯ. ಹೀಗಿರುವಾಗ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕಿಸುವ ಕ್ಷೇತ್ರ/ವಲಯ ಸಹಕಾರ ವಲಯ. ಇದರ ಮೌಲ್ಯಗಳು, ತತ್ವಗಳು, ಇದನ್ನೇ ಪ್ರತಿಪಾದಿಸುತ್ತವೆ. ಒಟ್ಟಾರೆ ಆರ್ಥಿಕತೆಯಲ್ಲಿ ಇದರ ಪಾಲು ಗಣನೀಯವಾಗಿ ಇಳಿಯುತ್ತಿರುವುದು ಖೇದಕರ ಸಂಗತಿಯಾಗಿರುತ್ತದೆ. ಸಾಮಾಜಿಕ ಕಳಕಳಿಯುಳ್ಳ ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಸಾಧ್ಯವಾಗಬಹುದಾದ ಸಹಕಾರ ವಲಯ ತನ್ನ 'ಅಸ್ಮಿತೆ'ಯನ್ನು ಉಳಿಸಿಕೊಳ್ಳಲು ತಮ್ಮ 'ಪ್ರತಿಮೆ'ಯನ್ನು ನಿರ್ಮಾಣ ಮಾಡುವಲ್ಲಿ ಎಡವುತ್ತಿರುವುದು ಆತಂಕಕಾರಿ, ಕಳವಳಕಾರಿ ವಿಷಯವಾಗಿರುತ್ತದೆ. ಈ ಚಳುವಳಿಯ/ವಲಯದ ನಾಯಕತ್ವವನ್ನು ವಹಿಸಿಕೊಂಡಿರುವ ನಾಯಕರು ಇದರ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆ ಈ ದಿನಮಾನಗಳಲ್ಲಿ ಬಹುಮುಖ್ಯ ಅಂಶವಾಗಿದೆ.

ಸಹಕಾರ 'ಅಸ್ಮಿತೆ' (identity) 'ಅನನ್ಯತೆ' ಒಂದು ಹೆಗ್ಗುರುತಾಗಿ, ಛಾಪು ಮೂಡಿಸುವಂತೆ (ಬ್ರಾಂಡ್) ಆಗಿ

ರೂಪುಗೊಳ್ಳುವ ಅವಶ್ಯಕತೆ ಇದೆ. 'ಅಮೂಲ್', 'ಇಫ್ಕೊ', 'ನಂದಿನಿ', 'ಕ್ಯಾಂಪ್‌ಕೊ', 'ಸಫಲ್' ಬ್ರಾಂಡ್ ಆಗಿ ರೂಪುಗೊಂಡಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಅದರಂತ ಅದೇ ರೀತಿ ಇಡೀ 'ಸಹಕಾರ'ವೇ 'ಒಂದು ಬ್ರಾಂಡ್' ಆಗಿ ರೂಪುಗೊಳ್ಳವ ಅವಶ್ಯಕತೆ ಇದೆ. ಸಹಕಾರ ಎಂದರೆ ಕಳಂಕರಹಿತ ಎಂಬ ಪ್ರತಿಮೆ (image) ಬೆಳೆಸಬೇಕಾದ ಅವಶ್ಯಕತೆ ಇದೆ. ಇದರಿಂದ ಮಾತ್ರ ಜನಸಾಮಾನ್ಯರನ್ನು, ನಿಮ್ನ ಶೋಷಿತ ವರ್ಗವನ್ನು ಒಳಗೊಂಡು ಸಹಕಾರ ವಲಯ ಬೆಳೆಯಲು ಸಾಧ್ಯವಾಗುತ್ತದೆ. ಹಾಲಿ ಒಟ್ಟಾರೆಯಾಗಿ ಸಹಕಾರ ವಲಯದ ಪ್ರತಿಮೆ ಪ್ರಜ್ವಲವಾಗಿದೆ ಎಂದೆನಿಸುವುದಿಲ್ಲ. ಮಾಧ್ಯಮಗಳಲ್ಲಿ ವರದಿಯಾಗುವಂತೆ ಕಳಂಕಗಳು, ದುರ್ನಡತೆಗಳು, ಆಪಾದನೆಗಳು, ಹೆಚ್ಚು ಹೆಚ್ಚು, ಮೇಲಿನಿಂದ ಮೇಲೆ ಪ್ರತಿಧ್ವನಿಸುತ್ತಿರುವುದನ್ನು ಕಾಣುತ್ತಲಿದ್ದೇವೆ. ಇದರಿಂದಾಗಿ ಸಾರ್ವಜನಿಕವಾಗಿ ಮತ್ತು ಸರ್ಕಾರದಲ್ಲಿ ಪ್ರತಿಮೆಯು ನಕಾರಾತ್ಮಕವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಸಕಾರಾತ್ಮಕ ಜನುಪಯೋಗಿ, ಸಾರ್ಥಕ ಸೇವೆ ಸೌಲಭ್ಯಗಳನ್ನು ಈ ವಲಯ ಒದಗಿಸಿಕೊಟ್ಟಿರುವುದು ಮತ್ತು ಒದಗಿಸಿಕೊಟ್ಟಿರುವುದರ ಬಗ್ಗೆ ಮಾಧ್ಯಮ ಮೌನವಾಗಿರುವುದು, ಫಲಾನುಭವಿಗಳು ಅದರ ಉಪಕಾರದ ಬಗ್ಗೆ ಚಕಾರ ಎತ್ತದಿರುವುದು ದುರ್ದೈವದ ಸಂಗತಿಯಾಗಿರುತ್ತದೆ. ಸಹಕಾರದ 'ಅಸ್ತಿತ್ವ'ದ ಪ್ರಶ್ನೆ ಮೂಡಿದಾಗ ಸಕಾರಾತ್ಮಕ ಅಂಶಗಳಿಂದ ಕೂಡಿದ 'ಪ್ರತಿಮೆ'ಯ ನಿರ್ಮಾಣ ಈ ದಿನಗಳ ಅವಶ್ಯಕತೆ. ಈ ದಿಶೆಯಲ್ಲಿ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ವಿಶ್ವದ ಸಹಕಾರ ರಂಗವೇ ಒಂದು 'ಅಸ್ಮಿತೆ' (identity) ನಿರ್ಮಾಣ ಮಾಡುವಂತೆ ವಿಶ್ವದ ಎಲ್ಲಾ ಸಹಕಾರ ವಲಯಗಳಿಗೆ ಕರೆಕೊಟ್ಟಿದೆ. 'ವಿಶ್ವ ಸಹಕಾರ ಅಸ್ಮಿತೆ' (The Global Co-operative Identity) ಎಂದು ಕರೆದಿದೆ. ಅದಕ್ಕಾಗಿ ಒಂದು 'ಗುರುತು' (Mark)ನ್ನು (Marque) ತಮ್ಮ 'ಬ್ರಾಂಡ್'ನೊಡನೆ ಈ 'ಗುರುತ'ನ್ನು ಅವರಿಂದ ಪಡೆದು ಉಪಯೋಗಿಸಿದಲ್ಲಿ ಈ ಉತ್ಪನ್ನ 'ಸಹಕಾರ' ವಲಯದ್ದು ಎಂದು ತಿಳಿದುಬರುತ್ತದೆ. ಇದನ್ನು ಏಳು ಬಣ್ಣಗಳಲ್ಲಿ ನಿರ್ಮಿಸಿದೆ. ತಮ್ಮ ವಲಯಕ್ಕೆ ಸೂಕ್ತ ಬಣ್ಣವನ್ನು ಆರಿಸಿಕೊಳ್ಳಬಹುದು (global@identity.coop) ವೆಬ್ ವಿಳಾಸವನ್ನು ಸಂಪರ್ಕಿಸಬಹುದಾಗಿದೆ. 'Co-operative enterprises build a better world' 'ಸಹಕಾರ ಔದ್ಯೋಗಿಕ ಸಂಸ್ಥೆಗಳು ಉತ್ತಮ ಪ್ರಪಂಚವನ್ನು ನಿರ್ಮಾಣ ಮಾಡುತ್ತವೆ' ಎಂಬುದು ಘೋಷ ವಾಕ್ಯವಾಗಿರುತ್ತದೆ. ಸಹಕಾರ ವಲಯವನ್ನೇ ಅವಲಂಭಿಸಲು ಏಳು ಕಾರಣಗಳಿವೆ.

- People together are stronger.

  ಜನ ಒಟ್ಟಿಗೆ ಇದ್ದಲ್ಲಿ ಸಮರ್ಥರಾಗಿರುತ್ತಾರೆ.

- Serving the needs of the people every where.

  ಎಲ್ಲಡೆಯಲ್ಲಿಯೂ ಜನರ ಅವಶ್ಯಕತೆಯನ್ನ ಪೂರೈಕೆ ಮಾಡಲಾಗುತ್ತಿದೆ.

- A growing and sustainable model of enterprise.

  ಬೆಳೆಯುತ್ತಿರುವ ಮತ್ತು ಸುಸ್ತಿರ ಔದ್ಯೋಗಿಕ ಮಾದರಿ.

- A proven self help model for good times and bad.

  ಒಳ್ಳೆಯ ಮತ್ತು ಕಷ್ಟ ಕಾಲದಲ್ಲಿ ಸಾಭೀತಾದ ಸ್ವಸಹಾಯ ಮಾದರಿ.

- Environmental concern, financial sustainability, social purpose.

  ಪರಿಸರ ಕಾಳಜಿ, ಆರ್ಥಿಕ ಸುಸ್ತಿರತೆ, ಸಾಮಾಜಿಕ ಉದ್ದೇಶ.

- Co-operative working together under a shared identity.

  ಹಂಚಿಕೊಂಡ ಅಸ್ಮಿತೆಯಡಿಯಲ್ಲಿ ಸಹಕಾರ ಸಂಘಗಳೆಲ್ಲವೂ ಒಟ್ಟಿಗೆ ಕಾರ್ಯ ಮಾಡುವುದು.

- People centered business, driving, social innovation, putting people first.

  ಜನ ಕೇಂದ್ರೀಕೃತ ವ್ಯವಹಾರ, ಸಾಮಾಜಿಕ ನಾವಿನ್ಯತೆಯ ಚಲನೆ, ಜನರು ಪ್ರಥಮ.

**ಈ ಕಾರಣಗಳೊಡನೆ ಕೋ–ಆಪ್ (Co-op) ಗುರುತು ಉಪಯೋಗಿಸುವುದರಿಂದ ಆಗುವ ಏಳು ಪ್ರಯೋಜನಗಳನ್ನು ತಿಳಿಸಿದೆ.**

- ಸಹಕಾರ ಮೌಲ್ಯಗಳೊಡನೆ ಮಿಲಿತಗೊಂಡಿರುತ್ತೇವೆ ಎಂಬುದನ್ನು ತಿಳಿಸುತ್ತದೆ. ಖಾಸಗಿ ಮತ್ತು ಬಂಡವಾಳಶಾಹಿಗಿಂತ ವಿಭಿನ್ನ ರೀತಿಯ ವ್ಯವಹಾರ ಎಂಬುದನ್ನು ತಿಳಿಸುತ್ತದೆ.
- 'ಆನ್‌ಲೈನ್‌ನಲ್ಲಿ ಅಸ್ಮಿತೆ' ಗುರುತನ್ನು 'ದೃಷ್ಯ ಮಾಧ್ಯಮದ ಗುರುತನ್ನಾಗಿ' ಸಹಕಾರ ಸಂಘವು ಉಪಯೋಗಿಸಬಹುದಾಗಿದೆ.
- ಇ–ಅಂಚೆ ಮತ್ತು ವೆಬ್ ಪೇಜ್ ಗಳಲ್ಲಿ 'ಗುರುತು' ನೂತನ ವ್ಯವಹಾರ ಅವಕಾಶಗಳನ್ನು ಒದಗಿಸುತ್ತದೆ.
- 'ಕೊ–ಆಪ್' ಗುರುತನ್ನು ಇ–ಅಂಚೆ ಸಹಿ, ಹೋಂ ಪೇಜ್ ಉತ್ಪನ್ನಗಳ, ಪ್ಯಾಕೇಜ್‌ಗಳ ಮೇಲೆ ಬಳಸುವುದರಿಂದ ಸಹಕಾರ ಬ್ರಾಂಡ್‌ನ ಜಾಹಿರಾತಿಗೆ ಅನುಕೂಲವಾಗುತ್ತದೆ. ದಿನದ 24 ಗಂಟೆ ವಾರದ 7 ದಿನ ವರ್ಷದ 52 ವಾರಗಳು
- ಸಂಕ್ಷಿಪ್ತವಾಗಿರುವುದರಿಂದ, ವಿಶೇಷವಾಗಿರುವುದರಿಂದ ಸುಲಭವಾಗಿ ನೆನಪಿಸಿಕೊಳ್ಳಬಹುದು ಮತ್ತು ಪ್ರಚಾರ ಮಾಡಬಹುದು.
- ನಿಘಂಟು ಸಹಕಾರ (Directory Coop) ಸ್ವಯಂ ಪಟ್ಟಿಯಲ್ಲಿ ಸೇರುವುದರಿಂದ ಇತರರು ಸುಲಭವಾಗಿ ಗುರುತಿಸುತ್ತಾರೆ.
- ಡೊಮೈನ್ ಕೋ–ಆಪ್ ಮೂಲಕ ಕಡಿಮೆ ದರದಲ್ಲಿ ಹೆಸರನ್ನು ಗಳಿಸಲು ಸಾಧ್ಯ. ಆದುದ್ದರಿಂದ ಇದರಲ್ಲಿ ಹೂಡಿಕೆ ಮಾಡಿ.

21ನೇ ಶತಮಾನದಲ್ಲಿ ಸಹಕಾರ ಚಳುವಳಿ ಅಸ್ತಿತ್ವದಲ್ಲಿರಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಿದೆ. ಹೀಗಿರುವಾಗ ಸಹಕಾರ ತನ್ನ 'ಅಸ್ಮಿತೆಯೊಡನೆ' ಸಕಾರಾತ್ಮಕ 'ಪ್ರತಿಮೆ' ನಿರ್ಮಾಣವಾಗದಿದ್ದಲ್ಲಿ ಇದು ಅಸಾಧ್ಯವಾಗುತ್ತದೆ. ಈ ಶತಮಾನ ಮಾಹಿತಿ ತಂತ್ರಜ್ಞಾನದ ಯುಗದ ಆರಂಭದಲ್ಲಿದೆ. ಕ್ರಾಂತಿಕಾರಕ ಅವಿಷ್ಕಾರಗಳೊಡನೆ ನಾಗಾಲೋಟದ ಬದಲಾವಣೆಯನ್ನು ಕಾಣುತ್ತಲ್ಲಿದ್ದೇವೆ. ಅದರಂತೆ ಜನರ ಅವಶ್ಯಕತೆಗನುಸಾರ ನೂತನ ರೀತಿಯ ವಿಭಿನ್ನ ವಿಶಿಷ್ಟ ಸಹಕಾರ ಸಂಘಗಳು ರಚನೆಯಾಗದಿದ್ದಲ್ಲಿ ಈ ಸಹಕಾರ ಚಳುವಳಿ ಅಸ್ತಿತ್ವದಲ್ಲಿರಲು ಸಾಧ್ಯವಾಗುವುದಿಲ್ಲ. ಕೃಷಿ ಉತ್ಪಾದನೆ, ಮಾರಾಟ, ಗ್ರಾಹಕ ಕ್ಷೇತ್ರಗಳನ್ನೇ ಭಾರತದ ಪರಿಸ್ಥಿತಿಯಲ್ಲಿ ಅವಲೋಕನ ಮಾಡುವುದಾದರೆ 'ಗಂಭೀರ' ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಕೃಷಿ ಉತ್ಪನ್ನ, ತೋಟಗಾರಿಕಾ ಉತ್ಪನ್ನಗಳು ಸಂಘಟಿತ ಸಹಕಾರ ವಲಯದಲ್ಲಿ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿರುವುದಿಲ್ಲ. ಉತ್ಪನ್ನ ಕ್ಷೇತ್ರದಲ್ಲಿ ಸಣ್ಣ, ಅತಿ ಸಣ್ಣ ರೈತರು ಸಾಮೂಹಿಕ ಕೃಷಿ ಅಳವಡಿಸಿಕೊಂಡಿದ್ದಲ್ಲಿ ಮತ್ತು ಮಾರಾಟ ವ್ಯವಸ್ಥೆ ಮಾಡಿಕೊಂಡಲ್ಲಿ ಆಧುನಿಕ ತಂತ್ರಜ್ಞಾನದಲ್ಲಿ ಹೆಚ್ಚು ಇಳುವರಿ ಮತ್ತು ಗುಣಮಟ್ಟದ ಆಧುನಿಕ ಗ್ರಾಹಕರ

ಅವಶ್ಯಕತೆಗನುಸಾರ ಪೂರೈಕೆ ಸಾಧ್ಯ. ಖರೀದಿ ಮತ್ತು ಮಾರಾಟದಲ್ಲಿ, ದಾಸ್ತಾನು ಮಾಡುವಲ್ಲಿ ಆಧುನಿಕ ಸೌಲಭ್ಯಗಳನ್ನು ಸಂಘಟಿತರಾಗಿ ರಚಿಸಿಕೊಂಡು ಸಾಮಾನ್ಯ ಸೌಲಭ್ಯ ಉಪಯೋಗಿಸಿಕೊಂಡಲ್ಲಿ ವೆಚ್ಚವನ್ನೂ ಕಡಿತಗೊಳಿಸಬಹುದು ಮತ್ತು ಮಾರಾಟದಲ್ಲಿ ಹೆಚ್ಚಿನ ದರವನ್ನು ಗಳಿಸಬಹುದಾಗಿದೆ. ಬಹುರಾಷ್ಟ್ರೀಯ ಕಂಪನಿಗಳೂ ಆವರಿಸಿಕೊಂಡಿರುವ ಚಿಲ್ಲರೆ ಮಾರಾಟ ಕ್ಷೇತ್ರದೊಡನೆ ಸಂಘಟನೆಯಿಂದ 'ಚೌಕಾಶಿ' ಶಕ್ತಿ ಬಂದೊದಗುತ್ತದೆ. ಎಲ್ಲವನ್ನು 'ಆನ್ ಲೈನ್'ನಲ್ಲಿ ಮಾರಾಟ ಮಾಡುವ ಮತ್ತು ಕೊಳ್ಳುವ ಶಕ್ತಿ, ಯುಕ್ತಿ ನಿರ್ಮಾಣವಾಗಿರುವ ಈ ದಿನಗಳಲ್ಲಿ ಉತ್ಪಾದಕರು ಈ ಆಧುನಿಕ ಉತ್ಪನ್ನ ಸಂಸ್ಕರಣೆ, ಸಂಗ್ರಹಣೆ, ಮಾರಾಟ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳದಿದ್ದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದಿದ್ದಲ್ಲಿ ಈ ಕ್ಷೇತ್ರ ಅಳಿವಿನಂಚಿನಲ್ಲಿದೇ ಎಂದೇ ತಿಳಿಯಬೇಕಾಗುತ್ತದೆ. ಇದರಿಂದ ಉತ್ಪಾದಕರು ನಷ್ಟ ಹೊಂದುತ್ತಾರೆ. ಮಧ್ಯವರ್ತಿಗಳು ಹೆಚ್ಚು ಲಾಭ ಪಡೆಯುತ್ತಾರೆ.

ಗ್ರಾಹಕ ಕ್ಷೇತ್ರದಲ್ಲಿ ಅತ್ಯಾಧುನಿಕ ತಂತ್ರಾಂಶಗಳು ಲಭ್ಯವಿದ್ದು ವಸ್ತು ಖರೀದಿ, ದಾಸ್ತಾನು, ಬೆಲೆ ನಿಗಧಿಪಡಿಸುವುದು, ಮಾರಾಟ ಮಾಡುವುದು, ದಾಸ್ತಾನು ನಿರ್ವಹಣೆಯವರೆಗೆ ಸುಲಭವಾಗಿ ನಿರ್ವಹಿಸ ಬಹುದಾಗಿದೆ. ಹಿಂದಿನ ಜಾಡಿನಲ್ಲಿ ನಡೆದರೆ ಖಾಸಗಿಯವರು ಮಾತ್ರ ಅಸ್ತಿತ್ವದಲ್ಲಿದ್ದು ಗ್ರಾಹಕ ಸಹಕಾರ ಸಂಘಗಳು ಇಲ್ಲವಾಗುತ್ತವೆ. ಹಾಲು ಉತ್ಪಾದನೆಯಲ್ಲಿ ಯಶಸ್ವಿಯಾದ ಕೆಲವು ರಾಜ್ಯಗಳಲ್ಲಿ ಖಾಸಗಿ ಕ್ಷೇತ್ರದ ಪ್ರಭಾವ ರಾಜಕೀಯ ನಾಯಕರ ಹಿತಾಸಕ್ತಿಯಿಂದ ಸಹಕಾರ ಕ್ಷೇತ್ರ ಬಳಲಿದೆ. ಕೃಷಿ ಪತ್ತು ಕ್ಷೇತ್ರದಲ್ಲಿ ದೀರ್ಘಾವಧಿ ಸಾಲ ಕ್ಷೇತ್ರ ಬಹು ಪಾಲು ಇಲ್ಲದಾಗಿದೆ. ಅಲ್ಪಾವಧಿ ಕೃಷಿ ಸಾಲ ಕ್ಷೇತ್ರದಲ್ಲಿ ಇದರ ಪಾಲು ಶೇಕಡ 20 ಮಾತ್ರ. ಉತ್ಪಾದನಾ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳು ಅತ್ಯಂತ ಪ್ರಬಲವಾಗಿದ್ದು, ಈಗ ಬಹುತೇಕ ನಶಿಸಿದೆ. ರೈತರ ಸಹಕಾರ ವಲಯವು ಹೊಸ ಆಯಾಮವನ್ನು ಕಂಡುಕೊಳ್ಳದಿದ್ದಲ್ಲಿ ಖಾಸಗಿ ವಲಯದಿಂದ ರೈತರು ಶೋಷಣೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕೇವಲ ಸರ್ಕಾರದ ಅನುದಾನ ಸಬ್ಸಿಡಿಯನ್ನು ಅವಲಂಬಿಸಿ ಕೃಷಿ ಸಾಧ್ಯವೇ? ಕೃಷಿ ಕ್ಷೇತ್ರದ ಕೊಡುಗೆ ಒಟ್ಟಾರೆ ಭಾರತದ ಜಿ.ಡಿ.ಪಿ.ಗೆ ಕೇವಲ ಶೇಕಡ 14. ಇದಕ್ಕಾಗಿ ಎಷ್ಟರ ಮಟ್ಟಿಗೆ ಸಹಾಯ ನೀಡಬಹುದು ಎಂಬ ಧೋರಣೆಗಳು ಆತಂಕಕಾರಿಯಾಗಿದೆ. ಶೇಕಡ 14 ಆದರೂ ಇಡೀ ದೇಶದ ಆಹಾರ, ಪ್ರಮುಖವಾದ ಅಗತ್ಯತೆ ಪೂರೈಕೆ ಇದರಿಂದಲೇ ಸಾಧ್ಯವಾಗುತ್ತಿಲ್ಲವೇ? ಸಹಕಾರ ಕ್ಷೇತ್ರ ಉತ್ಪಾದನೆ ಮತ್ತು ಮಾರಾಟದಲ್ಲಿ ಅತಿ ಹೆಚ್ಚು ಸಹಕಾರಿ ಎಂಬುದನ್ನೇ ಮರೆತಂತಿದೆ. ಇಂದಿನ ಅಗತ್ಯತೆ ಬದ್ಧತೆಯುಳ್ಳ ದಕ್ಷ, ದೂರದೃಷ್ಟಿಯುಳ್ಳ ನಾಯಕತ್ವ ಕೇವಲ ಸರ್ಕಾರವನ್ನೇ ಹೊಣೆ ಮಾಡುವ ಬದಲಿಗೆ ಸಹಕಾರ ಕ್ಷೇತ್ರ ಬೆಳೆಸಿದಲ್ಲಿ ನವನಾವಿನ್ಯತೆ, ನವೀನ ತಾಂತ್ರಿಕತೆ ಮತ್ತು ಮಾಹಿತಿ ತಂತ್ರಜ್ಞಾನ ಅಳವಡಿಸಿಕೊಳ್ಳಬಲ್ಲ ಸಹಕಾರ ಸಂಘಗಳನ್ನು ಸಂಘಟಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಸಂಘಟನಾಕಾರರ ಅವಶ್ಯಕತೆ ಇದೆ. ಕೃಷಿಯೇತರ ಸಹಕಾರ ಪತ್ತಿನ ಕ್ಷೇತ್ರ ಉತ್ತಮ ಕಾರ್ಯ ನಡೆಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅನೇಕ ಸಹಕಾರ ಸಂಘಗಳು/ಬ್ಯಾಂಕ್‌ಗಳು ಆಧುನಿಕ ತಂತ್ರಾಂಶಗಳನ್ನು ಅಳವಡಿಸಿಕೊಂಡಿರುವುದು ಸಂತಸದ ಸಂಗತಿಯಾಗಿದೆ. ನಗರ ಪ್ರದೇಶದಲ್ಲಿ ಸಾಗಾಣಿಕೆಯಲ್ಲಿ ತಂತ್ರಾಂಶ ಆಧಾರಿತ 'ಆಪ್'ಗಳ ಅಳವಡಿಕೆ (ಓಲಾ/ಊಬರ್) ಬಹಳಷ್ಟು ಪ್ರಭಾವಿಯಾಗಿದೆ. ಯುವಜನತೆಗೆ ಇದರ ಅವಲಂಬನೆ ಅನಿವಾರ್ಯವಾಗಿದೆ. ವಾಹನ ಮಾಲೀಕರ ಚಾಲಕರಿಗೆ ಇದರಲ್ಲಿ ಎಷ್ಟು ಪಾಲು ಸಿಗಬಹುದಿತ್ತೋ ಅಷ್ಟುಪಾಲು ಸಿಗುತ್ತಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ಗ್ರಾಹಕರು ಹೆಚ್ಚಿನ ಹಣ ವ್ಯಯ ಮಾಡಬೇಕಾಗಿದೆ. ಅವರೇ ಸಂಘಟಿತರಾಗಿ 'ಪ್ಲಾಟ್‌ಫಾರಂ' ತಾವೇ ಹೊಂದಿ ಸಹಕಾರ ಸಂಘದಡಿಯಲ್ಲಿ ನಡೆಸಬಹುದಾಗಿದೆ. ಇದರಿಂದ ಗ್ರಾಹಕರಿಗೂ ವೆಚ್ಚ ಕಡಿಮೆ ಮಾಡಬಹುದು ಮತ್ತು ಅವರು ಲಾಭವನ್ನು ಪಡೆಯಬಹುದಾಗಿದೆ. ಈ ರೀತಿಯಲ್ಲಿ ಶತಮಾನದ ನವೀನ ಅವಶ್ಯಕತೆಗಳ ಪೂರೈಕೆಗಾಗಿ ನವೀನ ಆಲೋಚನೆಗಳ ರೀತಿ ಸಹಕಾರ ಸಂಘಗಳ ರಚನೆ ಅವಶ್ಯಕತೆ ಇದೆ. ಯುವಕರು ಹೆಚ್ಚಿನ ರೀತಿಯಲ್ಲಿ ಪಾಲ್ಗೊಳ್ಳುವುದರಿಂದ ಹೊಸ ಆಲೋಚನೆಗಳು ಮೂಡಲು ಸಾಧ್ಯ.

ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA)ಯು ಇದನ್ನು ಮನಗಂಡು ಈ ಕೆಳಕಂಡಂತೆ ಕೆಲವು ಅಂಶಗಳನ್ನು ಮುಂದಿಟ್ಟಿದೆ. ಅವು ಬಿಕ್ಕಟ್ಟಿನಿಂದ ಬೆಳವಣಿಗೆಯೆಡೆಗೆ ಆಗಬೇಕಾದ ಕಾರ್ಯಗಳ ಬಗ್ಗೆ ಇತ್ತೀಚೆಗಿನ ಬೆಳವಣಿಗೆಗಳ ಬಗ್ಗೆ ಪರಾಮರ್ಶೆ, ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಆಲೋಚನೆ.

1. ಕೃಷಿ ಮತ್ತು ಬ್ಯಾಂಕಿಂಗ್ ಪ್ರಮುಖ ವಲಯಗಳಾಗಿದ್ದು ಇವುಗಳಲ್ಲಿ ಸಹಕಾರ ಮೌಲ್ಯಗಳನ್ನು ಹದಗೊಳಿಸುವುದು.
2. ಭವಿಷ್ಯದಲ್ಲಿ ಸಹಕಾರ ಸಂಘಗಳ ಅಸ್ತಿತ್ವಕ್ಕಾಗಿ ಅನುಸರಿಸಬೇಕಾದ ತಂತ್ರಗಾರಿಕೆ (ಆಗಿರುವ ತಪ್ಪುಗಳನ್ನು ಪುನರಾವರ್ತಿಸದೆ ಇರುವುದು) ರೂಪಿಸಿವುದು.

**ಇವುಗಳ ಬಗ್ಗೆ ಅಧ್ಯಯನ ನಡೆಸಿ 21ನೇ ಶತಮಾನದಲ್ಲಿ ಸಹಕಾರದ ಬೆಳವಣಿಗೆಗೆ ಅಗತ್ಯ ಅಂಶಗಳನ್ನು ಈ ಕೆಳಕಂಡಂತೆ ಗುರುತಿಸಿರುತ್ತದೆ.**

- ಸಾಮಾನ್ಯ ಸಿರಿವಂತಿಕೆಯ ಸೃಷ್ಟಿಗೆ ಅಗತ್ಯ ಆರ್ಥಿಕ ಸಮರ್ಥತೆಯನ್ನು ಹೆಚ್ಚಿಸುವುದು. (ಆರ್ಥಿಕ ಲಾಭ ಮಾತ್ರ ಅಲ್ಲ)
- ಆಸ್ತಿಗಳು, ಉಳಿತಾಯ, ಸಹಕಾರದಲ್ಲಿ ಹೂಡಿಕೆಯ ಹೆಚ್ಚಳ (ಬಂಡವಾಳ/ಜವಾಬ್ದಾರಿ ಅನುಪಾತ)
- ವಸ್ತು ಮತ್ತು ಸೇವೆಗಳಲ್ಲಿ ನೂತನ ಪ್ರಯೋಗಗಳು/ನಾವೀನ್ಯತೆ ಮತ್ತು ವೈವಿಧ್ಯೀಕರಣ
- ಒಟ್ಟಾರೆ ಮಾರುಕಟ್ಟೆಯಲ್ಲಿ ನಮ್ಮ ಪಾಲು (ಕೇವಲ ಗಳಿಸಿದ ಸಂಖ್ಯೆಯಲ್ಲ)
- ಸುತ್ತಲ ಸಮೂಹಕ್ಕೆ ವ್ಯವಹಾರದಿಂದ ಆಗುವ ಪ್ರಯೋಜನ
- ಒಟ್ಟಾರೆ ಜನ ಸಂಖ್ಯೆಯಲ್ಲಿ ಸಹಕಾರದಲ್ಲಿ ಭಾಗಿಯಾಗಿರುವ ಸದಸ್ಯರು (ಶೇಕಡ, ಅನುಪಾತ)
- ಉದ್ಯೋಗ ಸೃಷ್ಟಿ, ಅವಧಿ ಮತ್ತು ಗುಣಮಟ್ಟ
- ಸಮಾನತೆ, ಲಾಭ ಮತ್ತು ವೇತನ ಪಾವತಿ ಅನುಪಾತ, ಸದಸ್ಯರಿಗೆ ಲಾಭದ ಹಂಚಿಕೆ, ಲಿಂಗ ಭೇದದ ಬಗ್ಗೆ ಜಾಗೃತಿ
- ಪ್ರಜಾಸತ್ತಾತ್ಮಕ ನಿಯಂತ್ರಣ, ಭಾಗೀದಾರರ ಭಾಗವಹಿಸುವಿಕೆ, ನಿರ್ಧಾರ ಕೈಗೊಳ್ಳುವಲ್ಲಿ ಅವರ ಪಾತ್ರ.
- ಮಾನವ ಸಂಪನ್ಮೂಲದ ಅಭಿವೃದ್ಧಿ, ಸೃಷ್ಟಿ–ಔದ್ಯೋಗಿಕ ಸಂಸ್ಥೆಯಲ್ಲಿ ಮತ್ತು ಸುತ್ತಲಿನ ಸಮೂಹ ಪರಿಸರದಲ್ಲಿ.
- ಭಾಗೀದಾರರ ಸಾಮಾಜಿಕ ರಕ್ಷಣಾ ಅಂಶಗಳ ಮೇಲೆ ಪರಿಣಾಮ. ಆರೋಗ್ಯ, ಶಿಕ್ಷಣ, ವಸತಿ, ಪಿಂಚಣಿ, ಮಕ್ಕಳ, ಹಿರಿಯ ನಾಗರೀಕರ ಅವಶ್ಯಕತೆಗಳ ಪೂರೈಕೆ
- ಸೇವೆಗಳನ್ನು ಒದಗಿಸುವಲ್ಲಿ ಅವಧಿ, ಭೌಗೋಳಿಕ ವಿಸ್ತೀರ್ಣ, ಗುಣಮಟ್ಟ ಇವುಗಳನ್ನೂ ಗಣನೆಗೆ ತೆಗೆದುಕೊಳ್ಳುವುದು.
- ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ ದೂರವನ್ನು ಕಾಪಾಡುವ ಸಾಮರ್ಥ್ಯವನ್ನು ಗಳಿಸುವುದು. ದೂರಗಾಮಿಯಾಗಿ ಸ್ಥಳೀಯರ ಸ್ಥಳೀಯ ಅವಶ್ಯಕತೆ ಮತ್ತು ನಿರೀಕ್ಷೆಗಳನ್ನು ಪೂರೈಸುವುದು.
- ಸ್ಥಳೀಯವಾಗಿ, ಪ್ರಾಂತೀಯವಾಗಿ, ರಾಷ್ಟ್ರ ಮಟ್ಟದಲ್ಲಿ ಪ್ರಾದೇಶಿಕವಾಗಿ ಮತ್ತು ವಿಶ್ವ ಮಟ್ಟದಲ್ಲಿ ಸಂಯೋಜಿತ ಸಮಾಜೋ–ಆರ್ಥಿಕ ವ್ಯವಸ್ಥೆ ಅಭಿವೃದ್ಧಿಯ ಸಾಮರ್ಥ್ಯವನ್ನು ಗಳಿಸುವುದು (ಸ್ಥಳೀಯವಾಗಿ ಚಿಂತಿಸಿ, ವಿಶ್ವ ಮಟ್ಟದಲ್ಲಿ ಆಚರಿಸಿ)
- ಸುತ್ತಲ ಸಮೂಹದ ಮೇಲೆ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಸಕಾರಾತ್ಮಕ ಪರಿಣಾಮ ಬೀರುವಂತೆ ಕಾರ್ಯ

ನಿರ್ವಹಿಸುವುದು.

- ಮೌಲ್ಯ ಸರಪಣಿ, ಒಗ್ಗಟ್ಟಿನ ಸರಪಣಿಗಳನ್ನು ನ್ಯಾಯಯುತ ವ್ಯವಹಾರಗಳಿಗಾಗಿ, ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಗಾಗಿ ನಿರ್ಮಾಣ ಮಾಡುವುದು.
- ಪರಿಸರ ಸಮರ್ಥತೆ, ಪರಿಸರದ ಮೇಲಾಗುವ ದುಷ್ಪರಿಣಾಮಗಳ ತಡೆಗಟ್ಟುವಿಕೆ, ಭೂ ಭೌಗೋಳಿಕ, ಭೌತಿಕ ಮತ್ತು ಜೀವ ಜಗತ್ತು ಮಾನವನನ್ನು ಒಳಗೊಂಡಂತೆ ಆಗುವ ಪರಿಣಾಮಗಳ ಬಗ್ಗೆ ಎಚ್ಚರಿಕೆ ಕ್ರಮಗಳು ಉದಾ:– ಮಣ್ಣಿನ ಫಲವತ್ತತೆ, ಸಾವಯವ ಕೃಷಿ ಇವುಗಳ ಬಗ್ಗೆ ಆಲೋಚನೆ.
- ಅನೌಪಚಾರಿಕ ವಲಯದಿಂದ ಔಪಚಾರಿಕ ವಲಯಕ್ಕೆ ಪರಿವರ್ತನೆ, ನ್ಯಾಯಯುತ ಆರ್ಥಿಕತೆಗೆ ಬಲವರ್ಧನೆ ಉದಾ:– ಕೂಲಿ ಕಾರ್ಮಿಕರು, ವಲಸೆಗಾರರು, ನ್ಯಾಯ ಒದಗಿಸುವುದು.

21ನೇ ಶತಮಾನದಲ್ಲಿಯೂ ವಿಶ್ವ ಶಾಂತಿಯಿಂದ ನೆಲಸಬೇಕೆಂದರೆ ಆರ್ಥಿಕ ಅಸಮಾನತೆಯ ಅಂತರ ಕುಗ್ಗಲೇಬೇಕು. ಸಮಾನತೆಯ ಸಮಾಜದ ದೃಷ್ಟಿಗೆ ಎಲ್ಲರನ್ನೂ ಒಳಗೊಂಡ ಆರ್ಥಿಕ ಬೆಳವಣಿಗೆ ಅತ್ಯಗತ್ಯ. ಈ ಸಾಧ್ಯತೆಗೆ ಅತ್ಯಂತ ಸಶಕ್ತ ಮತ್ತು ಸರಿಹೊಂದುವ ವಲಯ ಎಂದರೆ ಸಹಕಾರ ವಲಯ. ದಿಟ ರೂಪದ 'ಸಹಕಾರ ಚಳುವಳಿ' ಆದುದರಿಂದ ಸಹಕಾರ ಸಂಘಗಳು ತಮ್ಮ 'ಅಸ್ಮಿತೆ' ಗಳಿಸುವಲ್ಲಿ ಸಕಾರಾತ್ಮಕ 'ಪ್ರತಿಮೆ' ನಿರ್ಮಾಣವಾದಲ್ಲಿ ಮಾತ್ರ 21ನೇ ಶತಮಾನದಲ್ಲಿ ಸಹಕಾರ ಚಳುವಳಿಯು ಮುಂಚೂಣಿಯಲ್ಲಿರಲು ಸಾಧ್ಯ.

**ಬಿಳಲಲ್ಲಿ ಬೇರಲ್ಲ, ಮುಂಡ ಕಾಂಡಗಳಲ್ಲ ।**

**ತಳಿರಲ್ಲ, ಮಲರಲ್ಲ, ಕಾಯಿ ಹಣ್ಣಲ್ಲ ॥**

**ಎಲೆ ನೀನು ವಿಶ್ವ ವೃಕ್ಷದೊಳ್ ಎಲೆಯೊಲೊಂದು ನೀಂ ।**

**ತಿಳಿದವನು ನೆರವಾಗು– ಮಂಕುತಿಮ್ಮ ॥**

(ಆಧಾರ:– ಎನ್.ಸಿ.ಡಿ.ಸಿ. ತರಬೇತಿ ಕೇಂದ್ರ (ಅನಾಕ್) ಅಧ್ಯಯನ ಸಾಮಗ್ರಿ (ICA) ಅಂ.ವೈ.ಸಂ. The Global Co-operative Identity ಕಿರುಹೊತ್ತಿಗೆ Co-operative growth for the 21st century-ICA) - CICOPA

**************************************************************************************

# 3. 'ಆತ್ಮ ನಿರ್ಭರ'ಕ್ಕೆ – ಸಹಕಾರ ಕ್ಷೇತ್ರವೇ ಸೂಕ್ತ

ನಮ್ಮ ರಾಷ್ಟ್ರದ ಮಾನ್ಯ ಪ್ರಧಾನಿಗಳು ಭಾರತದ ಆರ್ಥಿಕ ಪ್ರಗತಿಗೆ 'ಆತ್ಮ ನಿರ್ಭರ'ತೆಯೇ ಸೂಕ್ತ ಎಂದು ಕರೆಕೊಟ್ಟಿದ್ದಾರೆ. 'ಆತ್ಮ ನಿರ್ಭರ' ಎಂದರೆ ಸ್ವಾವಲಂಬನೆ. ನಾವು ನಮ್ಮ ಜೀವನ ನಡೆಸಲು, ನಮ್ಮ ಆರ್ಥಿಕ ಪ್ರಗತಿಗೆ ಇತರರನ್ನು ಅವಲಂಭಿಸಬಾರದು ಎಂದು ಕರೆಕೊಟ್ಟಿರುತ್ತಾರೆ. ಸ್ವಾವಲಂಬನೆ ಸಾಧನೆಗೆ ವಿವಿಧ ಸಂಪನ್ಮೂಲಗಳ ಅಗತ್ಯತೆ ಇರುತ್ತದೆ. ಅದರಲ್ಲಿ ಹಣಕಾಸು ಪ್ರಮುಖ ಸಂಪನ್ಮೂಲ. ಜೊತೆಗೆ ಯಾವ ವೃತ್ತಿಯನ್ನು ಸ್ವಾವಲಂಭನೆಗಾಗಿ ಆರಿಸಿಕೊಳ್ಳುತ್ತೇವೆಯೋ ಆ ವಿಷಯದಲ್ಲಿ ವೃತ್ತಿಪರತೆ ಅಂದರೆ ಜ್ಞಾನ, ನೈಪುಣ್ಯತೆ ಅಲ್ಲದೆ ಅದಕ್ಕೆ ಸರಿಹೊಂದುವ ಮನೋಚಿಂತನೆ ನಿಲುವು ಅತಿ ಮುಖ್ಯವಾಗುತ್ತದೆ. ಈ ಬಂಡವಾಳ ಶಾಹಿ ಪ್ರಪಂಚದಲ್ಲಿ ಬಂಡವಾಳ, ಆರ್ಥಿಕ ಬಂಡವಾಳವಿದ್ದಲ್ಲಿ ಮತ್ತೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಣಗೊಳಿಸಬಹುದು ಎಂಬ ಈ ದಿನಗಳಲ್ಲಿ ವ್ಯಕ್ತಿಯು ಸ್ವಾವಲಂಭಿಯಾಗಿ ಬೆಳೆಯಲು ಅವಕಾಶಗಳಾದರೂ ಇದೆಯೇ ಎಂಬುದೇ ಮೂಲಭೂತ ಪ್ರಶ್ನೆಯಾಗಿ ಕಾಡುವುದು ಸಹಜವಾಗಿದೆ. ಇತ್ತೀಚಿಗಿನ ಆರ್ಥಿಕ

ಬೆಳವಣಿಗೆಗಳು ಅದರಿಂದ ಸಮಾಜದ ಮೇಲೆ ಆಗಿರುವ ಪರಿಣಾಮಗಳು ಇದನ್ನು ಪುಷ್ಟೀಕರಿಸುತ್ತವೆ.

ಭಾರತ ಸ್ವಾತಂತ್ರ್ಯಾನಂತರ ಆರಿಸಿಕೊಂಡದ್ದು 'ಮಿಶ್ರ ಆರ್ಥಿಕ ನೀತಿ'. ಖಾಸಗಿ ಮತ್ತು ಸಾರ್ವಜನಿಕ, ಬೃಹತ್ ಉದ್ದಿಮೆಗಳಲ್ಲಿ ಸಾರ್ವಜನಿಕದ್ದೇ ಮೇಲುಗೈ. ಕಾಲಾ ನಂತರ ಸಾರ್ವಜನಿಕ ವಲಯ ಕುಂಟಿತಗೊಂಡು ಖಾಸಗಿ ವಲಯವೇ ಮೇಲುಗೈ ಸಾಧಿಸುತ್ತಿರುವುದನ್ನು ನಾವು ನೋಡುತ್ತಿಲ್ಲವೇ? ಇದರ ಪರಿಣಾಮ ಸಂವಿಧಾನದ ಆಶಯವಾದ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ಕನಸನ್ನು ಕಡೆಗಣಿಸಲಾಗುತ್ತಿದೆ ಎಂದರೆ ತಪ್ಪಾಗಲಾರದು. ರಾಷ್ಟ್ರದ ಒಟ್ಟು ಸಂಪತ್ತಿನ ಶೇಕಡ 58 ಭಾಗ ರಾಷ್ಟ್ರದ ಕೇವಲ ಶೇಕಡ 1 ಭಾಗ ಜನರಲ್ಲಿ ಕೇಂದ್ರೀಕೃತಗೊಂಡಿದೆ ಎಂದು 2017ರಲ್ಲಿ ಹೇಳಲಾಗುತ್ತಿತ್ತು. ಈಗ ಇದು ಶೇಕಡ 73 ಭಾಗಕ್ಕೆ ಏರಿಕೆಯಾಗಿದೆ ಎಂದು ಅಂಕಿ ಅಂಶಗಳು ಸೂಚಿಸುತ್ತಿವೆ. ಅಂದರೆ ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ. ಇದರ ಪರಿಣಾಮ ಸಾಂಸ್ಕೃತಿಕ ಮತ್ತು ಸಾಮಾಜಿಕ ವಲಯದ ಮೇಲೆ ಆಗದಿರದು. ಇನ್ನು ಸಾಮಾಜಿಕ ನ್ಯಾಯ ಸಂವಿಧಾನದ ಕಲ್ಯಾಣ ರಾಜ್ಯ ಸ್ಥಾಪನೆ ಆಶಯ ದೂರವೇ ಉಳಿಯಿತು. ಇದಕ್ಕೆ ಉತ್ತರ ಸ್ವಾವಲಂಬನೆಯ ಸಾಧನೆ, ಒಬ್ಬರಿಂದ ಸಾಧ್ಯವಾಗದ್ದನ್ನು ಪ್ರಜಾಪ್ರಭುತ್ವ ತಳಹದಿಯಲ್ಲಿ ಹಲವರು ಸೇರಿ ಬಂಡವಾಳ ಮತ್ತು ಇತರೆ ಸಂಪನ್ಮೂಲಗಳನ್ನು ಒಟ್ಟುಗೂಡಿಸಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಗತಿ ಸಾಧಿಸುವುದೇ 'ಸಹಕಾರ' ಅಲ್ಲವೇ?

ಸ್ವಾತಂತ್ರ್ಯಾ ನಂತರ ರಾಷ್ಟ್ರದಲ್ಲಿನ ಮೊದಲ ಹಸಿರು ಕ್ರಾಂತಿಗೆ ಸಹಕಾರ ಚಳುವಳಿಯ ಕೊಡುಗೆ ಅನನ್ಯ. ಅದರಂತೆ ಸರ್ಕಾರವು ಬೆಂಬಲವಾಗಿ ನಿಂತು ಸಹಕಾರ ಕ್ಷೇತ್ರ ಬೆಳೆಯಲು ಅನುವು ಮಾಡಿಕೊಡಲಾಯಿತು. ಕೃಷಿ, ತೋಟಗಾರಿಕೆ, ಕೃಷಿ ಅವಲಂಬಿತ ಪಶು ಸಂಗೋಪನೆ ಅದರಲ್ಲಿಯೂ ಹೈನುಗಾರಿಕೆ ಬೆಳವಣಿಗೆಗೆ ಸಹಕಾರಿಯಾಯಿತು. ಉತ್ಪಾದನೆ ಕ್ಷೇತ್ರ ಹಾಗೂ ಮಾರುಕಟ್ಟೆ, ಹಿಂಬದಿ ಮತ್ತು ಮುಂಬದಿಯ ಸರಪಳಿ (forward and backward linkages) ಕ್ರಿಯೆಗೆ ಸಹಾಯವಾಗಿ ಒಟ್ಟಾರೆ ರಾಷ್ಟ್ರದ ಉತ್ಪಾದನೆ (ಜಿಡಿಪಿ) ಕೃಷಿ ಕ್ಷೇತ್ರದ ಕೊಡುಗೆ ಪ್ರಮುಖವಾಗಿತ್ತು. ಆಹಾರಕ್ಕಾಗಿ ಇತರೆ ದಾನಿ ರಾಷ್ಟ್ರ ಅವಲಂಭನೆ ತಪ್ಪಿತು. 'ಸ್ವಾವಲಂಬನೆ' (ಆತ್ಮ ನಿರ್ಭರ) ಸಾಧಿಸಿ ಹಲವು ಸಂದರ್ಭಗಳಲ್ಲಿ ರಫ್ತು ಮಾಡಲು ಸಾಧ್ಯವಾಯಿತು. ರಾಷ್ಟ್ರದ ಒಟ್ಟಾರೆ ಆರ್ಥಿಕತೆ ಬೆಳೆಯುತ್ತ (ಉದಾರೀಕರಣ ಖಾಸಗೀಕರಣ ಮತ್ತು ಜಾಗತೀಕರಣ ಫಲವಾಗಿ) ಕೃಷಿ ಕ್ಷೇತ್ರದ ಒಟ್ಟಾರೆ ಕೊಡುಗೆ ಅಧಿಕಗೊಂಡಿದ್ದರೂ ಶೇಕಡವಾರು ಪಾಲು ಪೂರ್ಣ ಕುಸಿತ ಕಂಡಿದೆ (ಶೇಕಡ 14). ಶೇಕಡ 60 ಭಾಗ ಜನಸಂಖ್ಯೆ ಇನ್ನೂ ಗ್ರಾಮೀಣ ಭಾಗದಲ್ಲಿ ನೆಲಸಿದೆ. ಶೇಕಡ 87ಕ್ಕೂ ಹೆಚ್ಚಿನ ರೈತ ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳು. ಈ ರೈತ ಕುಟುಂಬಗಳು ಮತ್ತು ಜನತೆ ಕೃಷಿ ಮತ್ತು ಕೃಷಿ ಅವಲಂಭಿತ ವೃತ್ತಿಯನ್ನೇ ಅವಲಂಭಿಸಿದೆ ಎಂಬುದು ಕಟುವಾಸ್ತವ. ಹೀಗಿದ್ದಾಗ್ಯೂ ಈ ಕ್ಷೇತ್ರವು ಒಟ್ಟಾರೆ ರಾಷ್ಟ್ರ ಉತ್ಪನ್ನದಲ್ಲಿ ತನ್ನ ಪಾಲನ್ನು ಹೇಗೆ ವೃದ್ಧಿಗೊಳಿಸಬೇಕೆಂಬುದೇ ನಮ್ಮ ಮುಂದಿರುವ ಪ್ರಶ್ನೆ. ಇದಕ್ಕೆ ಉತ್ತರವಾಗಿ ಎರಡನೇ 'ಹಸಿರುಕ್ರಾಂತಿ' ನಮ್ಮ ಮುಂದೆ ಇದೆ. ಸುಧಾರಿತ, ತಕ್ಕುನಾದ ತಾಂತ್ರಿಕತೆ (appropriate technology) ಅಳವಡಿಸಿದ ಕೃಷಿ ಪದ್ಧತಿಗಳ ಪಾಲನೆ, ಸುಧಾರಿತ ಸೂಕ್ಷ್ಮ ನೀರಾವರಿ ಪದ್ಧತಿಗಳ ಅಳವಡಿಕೆ. ಹಸಿರು ಮನೆಗಳ ನಿರ್ಮಾಣ, ಅಂಗಾಂಶ ಕೃಷಿ, ಜಲಕೃಷಿ, ಹೀಗೆ ವೈಜ್ಞಾನಿಕ ಮತ್ತು ತಾಂತ್ರಿಕ ಅವಿಷ್ಕಾರಗಳಿಂದ ತಕ್ಕ ಅನುಪಾತದ ಸಂಪನ್ಮೂಲಗಳ ನ್ಯಾಯಯುತ ಬಳಕೆಯಿಂದ ಅತಿ ಹೆಚ್ಚು ಉತ್ಪನ್ನ ಪಡೆಯುವ ಸಾಧ್ಯತೆಗಳು ಹೆಚ್ಚಳಗೊಂಡಿವೆ. ಸಮಸ್ಯೆ ಇರುವುದೇ ಮಾರುಕಟ್ಟೆಯದೇ? ಸಂಗ್ರಹಣೆ, ದಾಸ್ತಾನು, ಮೌಲ್ಯವರ್ಧನೆ, ಸಾಗಾಣಿಕೆ, ಸಗಟು ಮಾರಾಟ, ಚಿಲ್ಲರೆ ಮಾರಾಟ ಪ್ರಕ್ರಿಯೆಗಳು ರೈತರಿಗೆ ನ್ಯಾಯಬೆಲೆ ಒದಗಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆ. ಕೈಗಾರಿಕಾ ಕ್ಷೇತ್ರದಲ್ಲಿ ತಾವು ತಯಾರಿಸುವ ಉತ್ಪನ್ನಕ್ಕೆ ತಾವೇ ದರ ನಿಗದಿಪಡಿಸುತ್ತಾರೆ. ಆದರೆ ರೈತರ ಉತ್ಪನ್ನಕ್ಕೆ ತಾವೇ ದರ ನಿಗದಿಪಡಿಸಲಾಗುವ ಪರಿಸ್ಥಿತಿ ಇದೆಯೇ? 'ಬೇಡಿಕೆ ಸರಬರಾಜ'ನ್ನು ಅವಲಂಭಿಸಿದೆ ಮತ್ತು ಮಧ್ಯವರ್ತಿಗಳನ್ನು ಅವಲಂಬಿಸಿದೆ. ರೈತರು ತಮ್ಮ ಉತ್ಪನ್ನಕ್ಕೆ ತಾವೇ ದರ ನಿಗದಿಪಡಿಸುವ ಶಕ್ತಿ ಬಂದಿರುವುದನ್ನು

ಪ್ರತ್ಯಕ್ಷವಾಗಿ ನಾವು ಹೈನುಗಾರಿಕೆ ಕ್ಷೇತ್ರದಲ್ಲಿ ಕಾಣುತ್ತಲಿದ್ದೇವೆ. ಇದು ಸಾಧ್ಯವಾಗಿರುವುದು ಮೂರು ಹಂತದ ಸಹಕಾರ ಶೃಂಗ ವ್ಯವಸ್ಥೆಯಲ್ಲಿ (ಅಮೂಲ್, ನಂದಿನಿ). ಕೃಷಿ ಉತ್ಪನ್ನಗಳ ಕ್ಷೇತ್ರದಲ್ಲಿಯೂ ಮೊದಲ ಹಸಿರುಕ್ರಾಂತಿಯ ಸಂದರ್ಭದಲ್ಲಿ ಮೂರು, ನಾಲ್ಕು ಹಂತದ ಶೃಂಗ ವ್ಯವಸ್ಥೆ ರೂಪಿತವಾದರೂ ಸರ್ಕಾರದ ಮೇಲಿನ ಅವಲಂಬನೆ ಅತಿ ಹೆಚ್ಚಾಗಿದ್ದ ಪರಿಣಾಮ, ಸರ್ಕಾರ ತನ್ನ ಯೋಜನೆಗಳನ್ನು ಅಂತ್ಯಗೊಳಿಸುತ್ತಿದ್ದಂತೆ ಈ ಶೃಂಗ ವ್ಯವಸ್ಥೆಯೂ ಪೂರ್ಣ ಕುಸಿದು ಬೀಳಲು ಕಾರಣವಾಯಿತು. ಈ ವ್ಯವಸ್ಥೆ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಲಿಲ್ಲ. ಎರಡನೇ ಹಸಿರು ಕ್ರಾಂತಿಗೆ ನಾಂದಿ ಹಾಡುತ್ತಿರುವ ಈ ಸಂದರ್ಭದಲ್ಲಿ ಅದನ್ನು ಪುನಶ್ಚೇತನಗೊಳಿಸುವುದು ರೈತರ ಹಿತದೃಷ್ಟಿಯಿಂದ ಅನಿವಾರ್ಯ ಮತ್ತು ಅವಶ್ಯ. ಇದರಿಂದಲೇ ರೈತರು ತಮ್ಮ ಹಿತವನ್ನು ತಾವೇ ಕಾಯ್ದುಕೊಂಡು 'ಸ್ವಾವಲಂಬಿಗಳು' (ಆತ್ಮ ನಿರ್ಭರ) ಆಗಲು ಸಾಧ್ಯ.

ಗ್ರಾಮೀಣ ಮಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS) ತಾಲ್ಲೂಕು ಮಟ್ಟದ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಸಂಘಗಳು (TAPCMS) ಮತ್ತು ರಾಜ್ಯ ಮಾರಾಟ ಮಹಾಮಂಡಳ ಮತ್ತು ರಾಷ್ಟ್ರ ಮಟ್ಟದ 'ನ್ಯಾಫೆಡ್' ಸ್ಥಾಪಿಸಲಾಗಿದೆ. ಮಾಧ್ಯಮಿಕ ಸಹಕಾರ ಸಂಘಗಳಾದ ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ (ಮತ್ತು ಪರಿಷ್ಕರಣ) ಸಹಕಾರ ಸಂಘಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 'ಎ' ದರ್ಜೆ ಸದಸ್ಯತ್ವ ಹೊಂದಿದ್ದು ಆಡಳಿತ ಮಂಡಳಿ ಸದಸ್ಯತ್ವದಲ್ಲಿ ಪ್ರಮುಖ ಸಂಖ್ಯೆ ಹೊಂದಿದೆ. ರಾಜ್ಯ ಮಾರಾಟ ಮಹಾಮಂಡಳದಲ್ಲಿ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘಗಳದ್ದೇ ಪ್ರಮುಖ ಪಾತ್ರ. ತಾಲ್ಲೂಕು ವ್ಯವಸಾಯ ಉತ್ಪಾದನಾ ಸಹಕಾರ ಸಂಘಗಳು ರಾಜ್ಯದಲ್ಲಿ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸರಪಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದುಂಟು. ಆದರೆ ಹಾಲಿ ಪರಿಸ್ಥಿತಿಯನ್ನು ಅವಲೋಕಿಸಿದರೆ ವಾಣಿಜ್ಯ ಉತ್ಪನ್ನ ಹೊರತುಪಡಿಸಿ (ಅಡಕೆ, ಕೊಬ್ಬರಿ, ಇತರೆ) ಕೃಷಿ ಉತ್ಪನ್ನಗಳ ಮಾರಾಟ ಉತ್ತೇಜನಕಾರಿಯಾಗಿಲ್ಲ. ಈ ಸಂಸ್ಥೆಗಳು ಈ ಹಿಂದೆ (ಭತ್ತ, ರಾಗಿ, ಹತ್ತಿ ಹೀಗೆ ಅನೇಕ ಕೃಷಿ ಉತ್ಪನ್ನ) ಸಂಸ್ಕರಣೆ ನಿರ್ವಹಿಸುತ್ತಿದ್ದುದರಿಂದ ಸರ್ಕಾರ ಬೆಂಬಲಿತವಾಗಿ ಉತ್ಕೃಷ್ಟ ಪ್ರಾಂಗಣ (ಖಾಲಿ ನಿವೇಶನ) ಗೋದಾಮುಗಳು, ಪರಿಷ್ಕರಣಾ ಘಟಕಗಳನ್ನು ಹೊಂದಿವೆ. (ಕೆಲವೆಡೆ ಸಮುದಾಯ ಭವನಗಳಾಗಿ ಪರಿವರ್ತಿತವಾಗಿವೆ). ಈ ಅತ್ಯಮೂಲ್ಯ ಆಸ್ತಿಗಳ ನಿರ್ವಹಣೆಯೇ ಕಷ್ಟ ಸಾಧ್ಯವಾಗಿದೆ. ಸಾಗಣೆಗಾಗಿ ಹಲವು ಸಂಘಗಳು ಸಾಗಾಣೆ ವಾಹನಗಳನ್ನು ಹೊಂದಿವೆ.

ಯುವಜನತೆ ನಗರಗಳನ್ನು ಬಿಟ್ಟು ಗ್ರಾಮೀಣ ಪ್ರದೇಶದ ಕಡೆಗೆ (ಕೋವಿಡ್–19 ಪರಿಣಾಮ) ಚಲನೆ ಆರಂಭವಾಗಿದೆ. ಅವರುಗಳೂ, ಗ್ರಾಮಗಳಲ್ಲಿಯೇ ತಮ್ಮ ನೆಲೆ ಕಂಡುಕೊಳ್ಳಬೇಕಾದ 'ಸ್ವಾವಲಂಬನೆ' ಸಾಧಿಸಬೇಕಾದ ಅನಿವಾರ್ಯತೆ ಮೂಡಿದೆ. 'ನಬಾರ್ಡ್'ನ್ನೂ ಒಳಗೊಂಡು ಅನೇಕ ಸಂಸ್ಥೆಗಳು 'ರೈತ ಉತ್ಪಾದನಾ ಕಂಪನಿ' (FPC/FPO) ಗಳ ಸ್ಥಾಪನೆಗೆ ಉತ್ತೇಜನ ನೀಡುತ್ತಿವೆ ಸಹಕಾರದ ಪರಿಕಲ್ಪನೆ ಮರೆಯಾಗುತ್ತಿದೆಯೇ? ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ಕರ್ತವ್ಯಗಳನ್ನು ನಡೆಸಲಾರವೇ. ತಮ್ಮ ಪ್ರದೇಶದ ಕೃಷಿ ಉತ್ಪನ್ನಗಳಿಗೆ ತಮ್ಮ ಸದಸ್ಯರಿಗೆ, ತಾಲ್ಲೂಕು ಮಟ್ಟದ ತಮ್ಮ ಸಹಕಾರ ಸಂಘವಾದ ತಾಲ್ಲೂಕು ವ್ಯವಸಾಯ ಉತ್ಪಾದಕರ ಸಹಕಾರ ಸಂಘದ, ಸಂಘದಲ್ಲಿನ, ಅತ್ಯಮೂಲ್ಯ ಲಭ್ಯ ಪರಿಕರ (Infrastructure) ಮೂಲಕ ಆಧುನಿಕ ಮಾಹಿತಿ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮಧ್ಯಮವರ್ತಿಗಳನ್ನು ಅವಲಂಭಿಸಿದಂತೆ ಮಾರುಕಟ್ಟೆ ಅನುಕೂಲತೆ ಕಲ್ಪಿಸಿಕೊಡಲು ಸಾಧ್ಯವಿಲ್ಲವೇ. ಇದಕ್ಕೆ ಬೆಂಬಲವಾಗಿ ರಾಜ್ಯ ಮಾರಾಟ ಮಹಾ ಮಂಡಳವು ಮುರಿದ ಕೊಂಡಿಗಳನ್ನು ಸರಿಪಡಿಸಿ ಸರಪಳಿ ಕ್ರಿಯೆಯನ್ನು ಪುನರ್ ರೂಪಿಸಲು ಸಾಧ್ಯವಾಗದೇ? ಈ ದಿಸೆಯಲ್ಲಿ ಸಹಕಾರಿಗಳು ಆಲೋಚಿಸಿ, ಒಬ್ಬರು ಮಾಡಲಾಗದ್ದನ್ನು ಎಲ್ಲರೂ ಸೇರಿ, ಕೂಡಿ ಮಾಡಿದ್ದೇ ಆದಲ್ಲಿ ಗ್ರಾಮೀಣ ರೈತರು, ಕೃಷಿ ಅವಲಂಬಿತರು 'ಸ್ವಾವಲಂಬಿತ' (ಆತ್ಮ ನಿರ್ಭರ) ರಾಗಲು ಸಹಕಾರ ಮಾರ್ಗದಿಂದ ಸಾಧ್ಯ ಅಲ್ಲವೇ?

**************************************************************************************************

# 4. ಸಮೃದ್ಧಿ ಸಾಧನೆಗೆ ಸಹಕಾರ ವಾಹಕ ಎದುರಿಸಬೇಕಾದ ಸವಾಲುಗಳು – ಪರಿಹಾರಗಳ ಪಕ್ಷಿನೋಟ

ಸಮೃದ್ಧಿಯೇ ಸಹಕಾರದ ಗುರಿ ಮತ್ತು ಧ್ಯೇಯ, 'ಸಹಕಾರ' ಎಂದರೆ ಯಾವುದನ್ನು ನಾವು ಒಬ್ಬರು ಮಾಡಲಾಗುವುದಿಲ್ಲವೋ ಅದನ್ನು ಎಲ್ಲರೂ ಸೇರಿ ಮಾಡುವುದು. 'ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ' ಎಂಬುದು ಧ್ಯೇಯ ವಾಕ್ಯದ ಆಶಯ. 'ಸಮದ್ಧಿ' ಎಂದರೆ ಜೀವನ ಮಟ್ಟದ ಸುಧಾರಣೆ, ಭಾರತದಂತಹ ರಾಷ್ಟ್ರದಲ್ಲಿ ಅನೇಕ ಮಂದಿಗೆ ಅನ್ನ ಆಹಾರ, ಸಮತೋಲನ ಆಹಾರ, ನೀರು, ಶುದ್ಧಗಾಳಿ ನೆರಳು ಈಗಿನ ಸೇರ್ಪಡೆ 'ವಿದ್ಯುಚ್ಛಕ್ತಿ' ಗಳ ಲಭ್ಯತೆ. 'ಸರ್ವರಿಗೂ ಸಮ ಪಾಲು ಸರ್ವರಿಗೂ ಸಮ ಬಾಳು' ಎಂಬ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಭಾರತ ಸರ್ಕಾರ 'ಸಹಕಾರದ ಮೂಲಕ ಸಮೃದ್ಧಿ' ಎಂದು ಘೋಷಿಸಿರುವುದು. ಭಾರತ ಸರ್ಕಾರದಲ್ಲಿ 'ಸಹಕಾರ'ಕ್ಕೆ ಪ್ರತ್ಯೇಕ ಸಚಿವಾಲಯ ಸೃಷ್ಟಿಯಾಗಿರುವುದು ಶ್ಲಾಘನೀಯ.

'ಸಮೃದ್ಧಿ'ಗೆ ಸಹಕಾರವೇ ಸರಿಯಾದ ಮಾರ್ಗ, ಇದನ್ನು ಕೈಗಾರಿಕಾ ಕ್ರಾಂತ್ರಿಯ ಉಪಫಲವಾಗಿ ಹುಟ್ಟಿಕೊಂಡ, 'ಸಹಕಾರ ಚಳುವಳಿ (ರಾಕ್ ಡೇಲ್ ಅಗ್ರಗಾಮಿಗಳು) ಹಾಗೆಯೇ, ಕೃಷಿಕರು ಹುಟ್ಟುಹಾಕಿದ 'ರೈಫಿಸನ್' ಸಹಕಾರ ಸಂಘಗಳು ಪಟ್ಟಣ. ಆರೆ ಪಟ್ಟಣ ಪ್ರದೇಶಗಳಲ್ಲಿ ಸಣ್ಣ ಕಸುಬುದಾರರು, ವ್ಯಾಪರಸ್ಥರು ಹುಟ್ಟುಹಾಕಿದ 'ಶೂಜ' ಮಾದರಿ ಸಹಕಾರ ಸಂಘಗಳು ತೋರಿಸಿ ಕೊಟ್ಟಿವೆಯಲ್ಲದೇ 'ಸಹಕಾರ ಚಳುವಳಿ'ಗೆ ಕಾರಣವಾಯಿತು ಎಂಬುದು ಐತಿಹಾಸಿಕ ಸತ್ಯ.

ವಿಶ್ವದಲ್ಲಿ ಸಹಕಾರ ಚಳುವಳಿ ಆರಂಭಗೊಂಡು ಒಂದೂವರೆ ಶತಮಾನ ಮೀರಿದೆ. ಭಾರತದಲ್ಲಿ ಶತಮಾನ ಮೀರಿ ಎರಡು ದಶಕಗಳು ಕಳೆದಿವೆ. ಅದರಂತೆ ಸಹಕಾರ 'ಸಮೃದ್ಧಿ' ಯ ಆರ್ಥಿಕತೆಯ ಬೆಳವಣಿಗೆಯ ಸಾಮಾಜಿಕ ನ್ಯಾಯ ಒದಗಿಸುವ ದಿಶೆಯಲ್ಲಿ ಅದರ ಕೊಡುಗೆ ಅಪಾರ. ಒಟ್ಟಾರೆ ವಿಶ್ವದ ಹಾಗೂ ಭಾರತದ ಆರ್ಥಿಕ ಬೆಳವಣಿಗೆಯ ದಿಕ್ಕು ಬದಲಾಗುತ್ತಿರುವ ಪರ್ವವನ್ನು ನಾವು ಈಗ ಎದುರುಸುತ್ತಿದ್ದೇವೆ.

ಬಂಡವಾಳ ಶಾಹಿಗಳ ಬೆಳವಣಿಗೆ ಎಲ್ಲ ವಲಯಗಳಲ್ಲಿ ಬಂಡವಾಳದ ಹೂಡಿಕೆ, ಸರ್ಕಾರದ ಸಾರ್ವಜನಿಕ ವಲಯದ ಆಸ್ತಿಗಳ ನಗದೀಕರಣ, ಬಂಡವಾಳದ ಹಿಂತೆಗೆತ ಇವೆಲ್ಲವೂ ಸ್ಪರ್ಧೆಯನ್ನು ಒಡ್ಡುತ್ತಿವೆ. ಈ ಸಂದಿಗ್ಧ ಸಮಯದಲ್ಲಿ ಸಹಕಾರ ಸಂಘಗಳು ಎದುರಿಸುತ್ತಿರುವ ಸವಾಲುಗಳು ಅದನ್ನು ಎದುರಿಸುವ ಬಗೆ, ಕಂಡುಕೊಳ್ಳಬೇಕಾದ ಮಾರ್ಗೋಪಾಯಗಳ ಬಗ್ಗೆ ಚಿಂತನೆ ಇಂದಿನ ಅಗತ್ಯತೆ.

ಯುರೋಪ್ ಖಂಡದಾದ್ಯಂತ ಕೃಷಿ ಪತ್ತಿನ ಸಹಕಾರಿ, ಗ್ರಾಹಕರ, ವಿಮಾ ವಲಯಗಳು ಅತ್ಯಂತ ಆಧುನಿಕತೆಗೆ ಒಗ್ಗಿಕೊಂಡು ಪೈಪೋಟಿ ನೀಡಿ ಒಟ್ಟಾರೆ ಆರ್ಥಿಕತೆಯ ಪ್ರಬಲಯುತ ಭಾಗವಾಗಿ ಕಾರ್ಯನಿರ್ವಹಿಸುತ್ತಿವೆ. ಹಾಗೆಯೆ ಜಪಾನ್, ಚೈನಾ. ಇತರೆ ವಿಷ್ಯಾ ರಾಷ್ಟ್ರಗಳಲ್ಲಿ ಕೃಷಿ ಪತ್ತು ಉತ್ಪನ್ನ ಮಾರಾಟ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತದಲ್ಲಿ ಸಮೃದ್ಧಿಗೆ ನೆಲೆಯಾಗಿದ್ದ, ನೆಲೆಯಾಗಬೇಕಾದ ಸಹಕಾರದ ಬೆಳವಣಿಗೆ ಸಂತೃಪ್ತಿ ತಂದಿದೆಯೇ ಎಂಬುದೇ ಯಕ್ಷ ಪ್ರಶ್ನೆ. ಎ.ಡಿ. ಗೊರವಾಲ ಸಮಿತಿಯ ವರದಿ (1954) 'ಭಾರತದಲ್ಲಿ ಸಹಕಾರ ಯಶಸ್ವಿಯಾಗಿಲ್ಲ ಆದರೆ ಯಶಸ್ವಿಯಾಗಲೇಬೇಕು' ಎಂದು ಹೇಳಿತ್ತೋ ಅದೇ ಪರಿಸ್ಥಿತಿ ಮರುಕಳಿಸುತ್ತಿದೆಯೇ ಎಂಬ ಪ್ರಶ್ನೆ ಈ ದಿನಗಳಲ್ಲಿ ಮೂಡುವುದು ಸಹಜ. ಕಾರಣ ಒಟ್ಟಾರೆ ಆರ್ಥಿಕತೆಯಲ್ಲಿ ನಮ್ಮ ಪಾಲು ಬರುಬರುತ್ತಾ ಕಡಿಮೆಯಾಗುತ್ತಿದೆ. ಕೃಷಿ ಪತ್ತು ವಲಯದಲ್ಲಿ 60ರ ದಶಕದಲ್ಲಿ ಶೇ 100 ಇದ್ದದ್ದು ರಾಷ್ಟ್ರಮಟ್ಟದಲ್ಲಿ ಶೇ 14–16 ಇಳಿದಿರುವುದು. ಕೃಷಿ ಉತ್ಪನ್ನ ತೋಟಗಾರಿಕೆ ಉತ್ಪನ್ನ ಕ್ಷೇತ್ರಗಳಲ್ಲಿ ಗಣನೀಯ ಇಳಿಕೆ, (ಶೇ.33 ರಿಂದ 22) ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳ ಖಾಸಗೀಕರಣ, ಹತ್ತಿಗಿರಣಿಗಳ ಸ್ಥಗಿತಗೊಳ್ಳುತ್ತಿರುವುದು, ಗ್ರಾಹಕರ ಸಹಕಾರ ಕ್ಷೇತ್ರ ಶೂನ್ಯಸ್ಥಿತಿ ತಲುಪುತ್ತಿರುವುದು, ಕೈಮಗ್ಗ,

ಪವರ್ ಲೂಮ್ ವಲಯ ಕೇವಲ ಸರ್ಕಾರದ ಅವಲಂಭನ ಮೇಲೆ ನಿಂತಿರುವುದು, ಗೃಹ ನಿರ್ಮಾಣ ವಲಯ ಆತಂಕದ ಸ್ಥಿತಿಯನ್ನು ಎದುರಿಸುತ್ತಿರುವುದು ಆಶದಾಯಕ ಬೆಳವಣಿಗೆಯಲ್ಲ. ಅಲ್ಪಾವಧಿ ಸಾಲ ಕೃಷಿ ಪತ್ತಿನ ವಲಯದಲ್ಲಿ ಶೇ 20ರ ಪಾಲು ಹೊಂದಿರುವುದು, ಶ್ವೇತ ಕ್ರಾಂತಿಗೆ ಕಾರಣವಾಗಿರುವ 'ನಂದಿನಿ' ಕರ್ನಾಟಕದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ 'ಅಮುಲ್' ಸಹಕಾರದ ಪ್ರಭಾವಳಿಯನ್ನು ಹಿಗ್ಗಿಸಿರುವುದು ಹೆಮ್ಮೆಯ ಸಂಗತಿಯಾಗಿದ್ದು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಕಾರಣವಾಗಿ 'ಸಮೃದ್ಧಿ'ಯ ಸಂಕೇತವಾಗಿವೆ. ಅದರಂತೆ ಕೃಷಿಯೇತರ ಪತ್ತು ಕ್ಷೇತ್ರವು ಎಲೆ ಮರೆ ಕಾಯಿಯಂತೆ ಸೇವೆ ಸಲ್ಲಿಸುತ್ತಿದೆ.

**ಸಹಕಾರ ವಲಯದ ಮುಂದಿರುವ ಸವಾಲುಗಳು:**

**ಬಂಡವಾಳ:** ಸಹಕಾರ ಸಂಘದ ಪರಿಕಲ್ಪನೆಯೇ ತನ್ನೊಬ್ಬನಲ್ಲಿ ಆಗದ ಕೆಲಸವನ್ನು ಸಂಘಟಿತ ಯತ್ನದ ಮೂಲಕ ಸಫಲಗೊಳಿಸುವುದು. ಬಂಡವಾಳದ ಕ್ರೋಢೀಕರಣದಲ್ಲೂ ಈ ಸಂಘಟಿತ ಯತ್ನಅತಿ ಅವಶ್ಯಕ. ಷೇರು ಬಂಡವಾಳ ವಲ್ಲದೇ ಹೆಚ್ಚುವರಿ ಷೇರು ಬಂಡವಾಳ ಸಂಗ್ರಹಣೆ, ಲಾಭಗಳಿಸಿದ್ದನ್ನು ಸಂಪೂರ್ಣ ಹಂಚಿಕೆ ಮಾಡದೇ ಮೀಸಲು (ಆಪದ್ಧನ ನಿಧಿ) ಸಂಗ್ರಹಣೆ, ಕಾಯ್ದೆಯಲ್ಲಿ ಶೇ. 25ಕ್ಕಿಂತ ಕಡಿಮೆ ಇಲ್ಲದಂತೆ ಮೀಸಲು ನಿಧಿ ತೆಗೆದಿರಿಸುವುದು ಕಾಯ್ದೆಯಾತ್ಮಕ ಅವಶ್ಯಕತೆ ಆದರೆ ಸಂಘ ಸಶಕ್ತತೆ ಹೊಂದಲು ವೆಚ್ಚ ರಹಿತ ಬಂಡವಾಳ ಹೆಚ್ಚಿಸಲು ಶೇ. 35 ರಿಂದ 30 ರವರೆಗೂ ತೆಗೆದಿರಿಸಲು ಅಭ್ಯಂತರವಿಲ್ಲ. ಆದರೆ ಸರ್ವಸದಸ್ಯರ ಸಭೆ (ಮಹಾಸಭೆ) ಅನುಮೋದಿಸಬೇಕು ಈ ದಿಸೆಯಲ್ಲಿವಿಷಯ ಮಂಡಿಸಲುಆಡಳಿತ ಮಂಡಳಿಆಲೋಚಿಸ ಬೇಕು. ಠೇವಣಿಗಳ ಸಂಗ್ರಹಣೆ. ಇದೂ ಕೂಡ ಒಂದು ಸವಾಲು, ಅದರಲ್ಲಿ ಯಾ ಗ್ರಾಮಂತರ ಪ್ರದೇಶದಲ್ಲಿ, ಸದಸ್ಯರು ಸಾಲ (ಪತ್ತು) ಪಡೆಯಲು ಸಹಕಾರ ಸಂಘಕ್ಕೆ ಠೇವಣಿ ಇಡುವುದಕ್ಕೆ ವಾಣಿಜ್ಯ ಬ್ಯಾಂಕ್ ಎಂಬಂತಾಗಿದೆ. ಠೇವಣಿ ಇರಿಸಿದಲ್ಲಿ ಮಾತ್ರಸಾಲ ನೀಡುವುದನ್ನು ಹೆಚ್ಚಳ ಮಾಡಲು ಸಾಧ್ಯ ಎಂಬ ಕಟು ವಾಸ್ತವದ ಅರಿವು ಮೂಡಬೇಕಾಗಿದೆ.

ಸಣ್ಣ, ಸಣ್ಣ ಸಹಕಾರ ಸಂಘಗಳು ಬಂಡವಾಳ ಕೊರತೆ ಎದುರಿಸುತ್ತವೆ ಎಂದಾಗಿಯೇ ಸಹಕಾರ ಒಕ್ಕೂಟ ವ್ಯವಸ್ಥೆಯ ನಿರ್ಮಾಣಕ್ಕೆ ಕಾರಣವಾಗಿರುತ್ತದೆ. ಈ ಒಕ್ಕೂಟ ವ್ಯವಸ್ಥೆಯಲ್ಲಿ 'ಸಹಕಾರ ಸಂಘಗಳ ನಡುವೆ ಸಹಕಾರ' ಎಂಬ ತತ್ವ ಮುಖ್ಯ ಪಾತ್ರ ನಿರ್ವಹಣೆ ಮಾಡುತ್ತದೆ. ಈ ತತ್ವದಲ್ಲಿ ಲಂಭಾಕೃತಿಯ (Vertical Relationship) ಸಂಬಂಧ ಸಹಕಾರ ಸಂಬಂಧ ಅತಿ ಮುಖ್ಯ. ಈ ಸಾವಯವ ಸಂಬಂಧ ಕೃಷಿ ಪತ್ತು, ಹೈನುಗಾರಿಕೆ, ಎಣ್ಣೆ ಬೆಳೆಗಾರರ, ಶಿಕ್ಷಣ, ವಲಯಗಳಲ್ಲಿ ಕಂಡುಬರುತ್ತವೆ ವಿನಃ ಇತರೆ ವಲಯಗಳಲ್ಲಿ ಈ ಸುಸಂಬಂಧಗಳು ಕಳಚಿಕೊಂಡು ಕೇವಲ ರಚನಾ ಸ್ವರೂಪಕ್ಕಾಗಿ ಮಾತ್ರ ಒಕ್ಕೂಟ ವ್ಯವಸ್ಥೆ ಇರುವುದನ್ನು ಕಾಣುತ್ತಿದ್ದೇವೆ.

ಸಹಕಾರ ಸಂಘಗಳಲ್ಲಿ ಕಾಯ್ದೆಯಾತ್ಮಕವಾಗಿ ಕೆಲವೊಂದಷ್ಟು ನಿರ್ಬಂಧಗಳಿಂದ, ಸಹಕಾರ ಸಂಘಗಳ ಹೆಚ್ಚುವರಿ ನಿಧಿಗಳನ್ನು ಸಹಕಾರ ಸಂಸ್ಥೆಗಳು/ ಬ್ಯಾಂಕಿನಲ್ಲಿ ತೊಡಗಿಸಲಾಗುತ್ತಿತ್ತು. ಸಹಕಾರದ ಬಂಡವಾಳ ಸಹಕಾರ ವಲಯದ ಬೆಳವಣಿಗೆಗೆ ಪೂರಕವಾಗಿತ್ತು. ಈ ನೀತಿಯಲ್ಲಿ ಉದಾರೀಕರಣ ನೀತಿಯಿಂದಾಗಿ ಹೆಚ್ಚುವರಿ ನಿಧಿಗಳನ್ನು ವಾಣಿಜ್ಯ/ಖಾಸಗಿ ಬ್ಯಾಂಕ್ ಗಳಲ್ಲಿ ತೊಡಗಿಸಿರುವುದು ಲಭ್ಯ ಬಂಡವಾಳವನ್ನು ಕಡಿಮೆಗೊಳಿಸಿದೆ. 'ಸಹಕಾರ ಸಂಘಗಳ ನಡುವೆ ಸಹಕಾರ ತತ್ವ' ಹಿಂದೆ ಅಡಗಿದ್ದ ಉದ್ದೇಶ ಸಫಲವಾಗುತ್ತಿಲ್ಲ. ಬಂಡವಾಳವನ್ನು ಸಹಕಾರ ವಲಯದಲ್ಲಿ ಉಳಿಸಿಕೊಳ್ಳುವುದು ಮತ್ತು ಬಂಡವಾಳ ವೃದ್ಧಿ ಒಂದು ಸವಾಲೇ ಆಗಿದೆ.

**ಸ್ಪರ್ಧೆ :** ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪರಿಸರದಲ್ಲಿ ಸ್ಪರ್ದೆ ಅನಿವಾರ್ಯ, ಸ್ಪರ್ಧಾಯುಗವಾಗಿ ಈ ದಿನಗಳು ರೂಪುಗೊಂಡಿವೆ. ಸಹಕಾರ ಸಂಘಗಳು ಆರ್ಥಿಕ ಸಂಸ್ಥೆಗಳಾಗಿದ್ದು ಸರ್ಕಾರದ ಪೋಷಣೆ, ಸವಲತ್ತುಗಳು ಇಲ್ಲವಾಗಿದೆ. ಯಾವುದೇ ಸಂಸ್ಥೆ ತನ್ನ ಉಳಿವಿಗೆ ಲಾಭಗಳಿಸುವುದು ಅನಿವಾರ್ಯ ಲಾಭಗಳಿಸದಿದಲ್ಲಿ ಬಂಡವಾಳ

ಕರಗುತ್ತದೆ. ಸೇವೆ ನೀಡಲು ಸಂಸ್ಥೆ ನ್ಯಾಯಯುತವಾದ ಲಾಭಗಳಿಸಲೇಬೇಕು. ಮಾರುಕಟ್ಟೆಯಲ್ಲಿ ಉಳಿಯ ಬೇಕೆಂದರೆ, ಸದಸ್ಯರಿಗೆ ಸೇವೆ, ಸೌಲಭ್ಯ, ಅನುಕೂಲತೆಗಳನ್ನು ಒದಗಿಸಬೇಕೆಂದಲ್ಲಿ ಆಧುನಿಕ ಉತ್ತಮ ಆಡಳಿತ, ನೀತಿ ನಿರ್ಧಾರಗಳಲ್ಲಿ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ, ನಿರ್ಧಾರ ತಿರ್ಮಾನಗಳಲ್ಲಿ ಭಾಗಿತ್ವ, ಆಗು ಹೋಗುಗಳ ಬಗ್ಗೆ ದೂರದರ್ಶಿತ್ವ, ಆಡಳಿತ ಮಂಡಳಿ ಸಿಬ್ಬಂದಿಯ ಉತ್ತರದಾಯಿತ್ವ ಅಥವಾ ಹೊಣೆಗಾರಿಕೆ ಬಹು ಮುಖ್ಯ ಪಾತ್ರ ನಿರ್ವಹಿಸುತ್ತದೆ. ಸದಸ್ಯರು ಸಂಘದ ಚಟುವಟಿಯಲ್ಲಿ ಅವರ ಭಾಗವಹಿಸುವಿಕೆ, ವ್ಯವಸ್ಥಾಪನೆಯಲ್ಲಿ ಸಕ್ರಿಯ ಭಾಗವಹಿಸುವಿಕೆ (ಸಾಮಾನ್ಯ ನಿಕಾಯ ಸಭೆ ಚುನಾವಣೆಯಲ್ಲಿ) ಮತ್ತು ತಮ್ಮ ಜವಾಬ್ದಾರಿ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ಪಾತ್ರ ಅರಿತು ನಡೆಯುವುದು ಇಂದಿನ ಅಗತ್ಯವಾಗಿದೆ.

**ಆಧುನಿಕ ತಂತ್ರಜ್ಞಾನದ ಅಳವಡಿಕೆ:** ಎಲ್ಲ ವಲಯಗಳಲ್ಲೂ ಮಾಹಿತಿ ತಂತ್ರಜ್ಞಾನ ವಲಯದ ಬಳಕೆ ಅನಿವಾರ್ಯವಾಗಿದೆ. ಇದು ಮಾಹಿತಿ ತಂತ್ರಜ್ಞಾನದ ಯುಗವಾಗಿದೆ. ಪ್ರತಿ ವ್ಯವಹಾರವೂ ಡಿಜಲೀಕರಣಗೊಂಡು, ಪ್ರತಿ ಮಾಹಿತಿಯೂ ದತ್ತಾಂಶ ಕೇಂದ್ರಕೃತ, ಡಿಜಿಟಲ್ ವೇದಿಕೆ (ಪ್ಲಾಟ್‌ಫಾರಂ) ಆಧಾರಿತವಾಗಿ ರೂಪುಗೊಂಡಿದೆ. ಬ್ಯಾಂಕಿಂಗ್ ವಲಯದಲ್ಲಿ ಕ್ರಾಂತಿಕಾರಿ ಬೆಳವಣಿಗೆಯಿಂದಾಗಿ ಗ್ರಾಹಕ-ಸಂಸ್ಥೆ ಒಂದನ್ನೊಂದು ನೋಡದೆ ಡಿಜಿಟಲ್ ಮಾಹಿತಿಯಿಂದಲೇ ಸಂಬಂಧ ಕಲ್ಪಿಸುವ ವ್ಯವಹಾರ ನಡೆಸುವುದು ಸುಲಭ ಸಾಧ್ಯವಾಗಿದೆ. ಗ್ರಾಹಕರ ಕ್ಷೇತ್ರದಲ್ಲಿ ವಿದ್ಯುನ್ಮಾನ ಮಾರುಕಟ್ಟೆ ನಾಗಲೋಟದಲ್ಲಿ ಏರುಗತಿಯಲ್ಲಿದೆ. ಕನಿಷ್ಠ ವೆಚ್ಚದಲ್ಲಿ ಮನೆ ಬಾಗಿಲಿಗೆ, ವಸ್ತು, ಊಟ, ಸೇವೆ ಈ ರೀತಿಯ ಸೌಲಭ್ಯಗಳು ಸಹಕಾರಿ ವಲಯದಿಂದ ನೀಡುವಂತಾಗಬೇಕು.

'ನಂದಿನಿ' ಉತ್ಪನ್ನಗಳು, ದ್ರವ್ಯ ಹಾಲು, ಈ ಮಾಧ್ಯಮಗಳ ಮೂಲಕ ಲಭ್ಯವಾಗುತ್ತಿರುವುದು. ಬೆಂಗಳೂರಿನಲ್ಲಿ 'ಹಾಪ್ ಕಾಮ್ಸ್' ಹಣ್ಣು ತರಕಾರಿ ಗಳನ್ನು 'ಆನ್‌ಲೈನ್' ನಲ್ಲಿ ದೊರೆಯುವಂತೆ ಮಾಡಿರುವುದು. ಗ್ರಾಮಗಳು ಉತ್ಪನ್ನ ಕೇಂದ್ರಗಳಾಗಿ, ನಗರಗಳು ಬಳಕೆ ಕೆಂದ್ರಗಳಾಗಿ ಸಾಂದ್ರಿಕರಣ ಹೊಂದುತ್ತಿವೆ. ವ್ಯವಸಾಯ ಉತ್ಪನ್ನ ಸಹಕಾರ ಸಂಘಗಳು, ತೋಟಗಾರಿಕಾ ಉತ್ಪನ್ನ ಸಹಕಾರ ಸಂಘಗಳ ಆಧುನೀಕರಣಗೊಳ್ಳುವ ಅನೇಕ ಬದಲಾವಣೆಗಳೊಡನೆ ಮರುರೂಪುಗೊಳ್ಳುವ ಅವಶ್ಯಕತೆ ಇದೆ. ಇದರಲ್ಲಿ 'ಅಮುಲ್' ಮಾದರಿಯ ಯಶೋಗಾಥೆ ನಮ್ಮ ಮುಂದೆ ಇದೆ. ಕರ್ನಾಟಕದಲ್ಲಿ 'ನಂದಿನಿ'ಬ್ರಾಂಡ್ ಆಗಿ ರೂಪುಗೊಂಡಿದೆ. 'ಸಫಲ್' ಎಣ್ಣೆ ಬೀಜ ಉತ್ಪಾದನೆ ಸಂಸ್ಕರಣೆ ಕ್ಷೇತ್ರದಲ್ಲಿ ಛಾಪು ಮೂಡಿಸಿದೆ. ವಾಣಿಜ್ಯ ಉತ್ಪನ್ನವಾದ ಅಡಕೆ ಮಾರುಕಟ್ಟೆ ಸಹಕಾರ ಸಂಘಗಳು 'ಕ್ಯಾಂಪ್ಕೋ' ಮಾಮ್ಕೋಸ್, ತುಮ್ಕೋಸ್, ಟಿ.ಸಿ.ಎಸ್. ಆಪ್‌ಸ್ಕೋಸ್‌ಗಳ ಯಶಸ್ಸು ಮಾದರಿಯಾಗಬೇಕು. ಇತರೆ ಉತ್ಪನ್ನಗಳಿಗೂ ಈ ವ್ಯವಸ್ಥೆ ರೂಪುಗೊಳ್ಳಬೇಕು.

**ಋಣಾತ್ಮಕ ಮಾಧ್ಯಮ ವರದಿಗಳು:** ಇತ್ತೀಚೆಗೆ ಮಾಧ್ಯಮಗಳು ಸಹಕಾರ ವಿಷಯದಲ್ಲಿ ಆಸಕ್ತಿ ತೋರಿಸುತ್ತಿರುವುದು ಶ್ಲಾಘನೀಯ ವಿಚಾರ. ಅದರಲ್ಲೂ ಕೋವಿಡ್- 19 ರ ಸಮಯದಲ್ಲಿ ಸಹಕಾರ ಚಳುವಳಿಯು ಸಾಮಾಜಿಕ ಕಳಕಳಿ (ಸಹಕಾರ ತತ್ವ) ಯೊಂದಿಗೆ ವರ್ತಿಸಿದ ರೀತಿ, ಜನ ಸಮೂಹಕ್ಕೆ ಪ್ರತಿ ಸ್ಪಂದಿಸಿದ ರೀತಿಯನ್ನು ಶ್ಲಾಘಿಸಿ ವಾರ್ತಾ ಪತ್ರಿಕೆಗಳಲ್ಲಿ ವರದಿಗಳು, ಲೇಖನಗಳು, ಸಂಪಾದಕೀಯಗಳು ಪ್ರಕಟ ಗೊಂಡವು. ಆದರೆ ಇತ್ತೀಚೆಗೆ ಕೆಲವು ಸಹಕಾರ ಬ್ಯಾಂಕ್, ಪತ್ತಿನ ಸಹಕಾರ ಸಂಘಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ಆದ ಅನಾಹುತದ ನೆಪದಲ್ಲಿ ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಮುಖಪುಟ ಲೇಖನ, ಸಂಪಾದಕಿಯ ಸಾರ್ವಜನಿಕ ಅಭಿಪ್ರಾಯಗಳು ಕೇವಲ ಋಣಾತ್ಮಕವಾಗಿ ಪ್ರಕಟವಾಗಿರುವುದನ್ನು ಎದುರಿಸುವುದು ನಿಜವಾದ ಸವಾಲೇ ಆಗಿದೆ. ಇದು 'ಬ್ರಾಂಡ್' ಬಿಲ್ಡಿಂಗ್ 'ಪ್ರತಿಮಾ' ನಿರ್ಮಾಣ 'ಇಮೇಜ್' ಬಿಲ್ಡಿಂಗ್‌ಗೆ ಆಘಾತ ಒಡ್ಡುತ್ತವೆ. ದೂರದರ್ಶನ, ವಾರ್ತಾ ಪತ್ರಿಕೆಗಳಿಗೆ ಗಟ್ಟಿ ಧ್ವನಿಯಲ್ಲಿ ಶೃಂಗ ಸಹಕಾರ ಸಂಸ್ಥೆಗಳು ಗುಣಾತ್ಮಕ ವಿಷಯಗಳ, ಪರಿಣಾಮಗಳ, ಫಲಿತಾಂಶಗಳ ಬಗ್ಗೆ ಪ್ರತ್ಯುತ್ತರಿಸುವ ಅವಶ್ಯಕತೆ ಕಂಡುಬರುತ್ತದೆ. ಗುಣಾತ್ಮಕ ವಿಷಯಗಳ ಬಗ್ಗೆ ಹೆಚ್ಚು ಪ್ರಚಾರ ಸಿಗದೆ ಇರುವುದು ಪ್ರತಿಮಾ ನಿರ್ಮಾಣಕ್ಕೆ ತೊಂದರೆಯಾಗಿ ಸಹಕಾರ ಚಳುವಳಿಯ ಬೆಳವಣಿಗೆಗೆ

ಧಕ್ಕೆಯಾಗುತ್ತಿದೆ.

**ನಾಯಕತ್ವ:** ಸಹಕಾರ ಚಳುವಳಿಯಲ್ಲಿ ನಾಯಕತ್ವ ಬಹಳ ಮುಖ್ಯ. ಇದರ ಕೊರತೆಯೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಇವು ಪ್ರಜಾಸತ್ತಾತ್ಮಕ ಸಂಸ್ಥೆಗಳು. ಸದಸ್ಯರು ನಾಯಕರನ್ನು ಆರಿಸಬೇಕು.ಯುವ ಜನತೆ ಹೆಚ್ಚು ಭಾಗವಹಿಸ ಬೇಕು. ಸಹಕಾರ ಮೌಲ್ಯ, ತತ್ವಗಳಲ್ಲಿ ಬದ್ಧತೆ ಮೂಡಿಸಿಕೊಳ್ಳಬೇಕು. ವಿದ್ಯಾರ್ಥಿ ದಿಸೆಯಿಂದಲೇ ಪ್ರೇರೇಪಣೆ ಅಗತ್ಯ. ಅದಕ್ಕಾಗಿ ಸಹಕಾರ ವಿಷಯವನ್ನು ಅಧ್ಯಯನ ವಿಷಯವಾಗಿ ಸೇರಿಸುವುದು ಒಂದು ಉತ್ತಮ ಉಪಕ್ರಮವಾಗುತ್ತದೆ. ಸಹಕಾರ ಸಂಘದಿಂದ ವಿದ್ಯಾರ್ಥಿಗಳ ಎಲ್ಲ ಅವಶ್ಯಕತೆಗಳು, ಪುಸ್ತಕ, ಸ್ಟೇಷನರಿ, ಕಂಪ್ಯೂಟರ್ ಕಿಯೋಸ್ಕ್, ವಾಚನಾಲಯ, ಕ್ಯಾಂಟಿನ್ ನಿರ್ವಹಣೆ, ಖರೀದಿ, ಮಾರಾಟ ಲೆಕ್ಕ ನಿರ್ವಹಣೆಯಿಂದ ಆರ್ಥಿಕ ಸಾಕ್ಷರಾಗುವುದಲ್ಲದೇ ವ್ಯವಸ್ಥಾಪನೆಯ ಪ್ರಥಮ ಪಾಠ ದೊರೆಯುತ್ತದೆ. ಅಲ್ಲದೇ ನಾಯಕತ್ವ ಗುಣಗಳು ರೂಪುಗೊಳ್ಳುತ್ತವೆ. ಅದರಿಂದ ಸಹಕಾರ ಚಳುವಳಿಗೆ ನಾಯಕತ್ವ ಗುಣಗಳುಳ್ಳ ನಾಯಕರು ಸಹಕಾರದಲ್ಲಿ ಬದ್ಧತೆ ಉಳ್ಳ ನಾಯಕರು ಸಮೂಹದಿಂದ ಸೃಷ್ಟಿಸಲು ಸಾಧ್ಯವಾಗುತ್ತದೆ.

ಈ ಸವಾಲುಗಳೊಡನೆ ಆಧುನಿಕತೆಯೊಂದಿಗೆ ನೂತನ ಉದ್ಯೋಗ ಸೃಷ್ಟಿಗಳಿಂದ ನೂತನ ಜನ ಸಮೂಹ ಸೃಷ್ಟಿಯಾಗುತ್ತದೆ. ಈ ಜನತೆಯ ಆಸೆ. ಆಕಾಂಕ್ಷೆ, ಅವಶ್ಯಕತೆಗಳ ಪೂರೈಕೆಗಾಗಿ ವಿನೂತನ ಚಿಂತನೆ, ವಿನೂತನ ಸಹಕಾರ ಸಂಘಗಳ ರಚನೆಗೆ ಆದ್ಯತೆ ನೀಡಬೇಕಾಗಿದೆ. ಸಾಂಪ್ರದಾಯಿಕ ಸಹಕಾರ ಸಂಘಗಳಲ್ಲದೆ, ನಗರಗಳಲ್ಲಿ 'ಪ್ಲಾಟ್‌ಫಾರ್ಮ್' ಆಧಾರಿತ ಸೇವೆಯಲ್ಲಿ ತೊಡಗಿರುವವರ, ವಿದ್ಯುನ್ಮಾನ ವಾಣಿಜ್ಯದಲ್ಲಿ ತೊಡಗಿಸಿಕೊಂಡಿರುವ ವಿತರಣಾ ಚಾಲಕರು, ಗ್ರಾಮಕ್ಕೆ ಹಿಂದಿರುಗಿ ನವೋಧ್ಯಮಿಗಳಾಗಿ ರೂಪುಗಳ್ಳುತ್ತಿರುವವರ ಹೀಗೆ ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಉದ್ಭವಿಸುತ್ತಿರುವ ಅಸಂಘಟಿತ ವಲಯದ ಒಳಿತಿಗಾಗಿ ಸಹಕಾರ ಸಂಘಗಳುಗಳು ಸ್ಥಾಪನೆ ಸಹಕಾರ ಚಳುವಳಿಯನ್ನು ಮತ್ತೊಂದು ಏರು ಹಂತಕ್ಕೆ ಕೊಂಡಯ್ಯುವ ಸಾಧ್ಯತೆಗಳಿವೆ. ಬಡವ ಬಲ್ಲಿದನ ಅಂತರ ಹೆಚ್ಚುತ್ತಿರುವ ಈ ದಿನಗಳಲ್ಲಿ ಭಾರತ ಐದು ಟ್ರಿಲಿಯನ್ ಆರ್ಥಿಕತೆ ಮುಟ್ಟುವ ಗುರಿಯೊಂದಿಗೆ ಸಾಮಾಜಿಕ ನ್ಯಾಯ ಒದಗಿಸುವ ಅವಶ್ಯಕತೆ ಇದೆ.

ಇವುಗಳನ್ನು ಸೇರ್ಪಡಿಸಲು ಸಹಕಾರ ಚಳುವಳಿ ಅತ್ಯಂತ ಸೂಕ್ತ ಮಾರ್ಗ, ಸವಾಲುಗಳನ್ನು ಎದುರಿಸಿ **ಸಹಕಾರದ ಮೂಲಕ ಸಮೃದ್ಧಿ** ಸಾಧಿಸುವುದು ಸಾಧ್ಯ ಎಂಬುದನ್ನು ಭಾರತ ವಿಶ್ವಕ್ಕೆ ಮಾದರಿಯಾಗಿ ತೋರಿಸುವುದು. ಸುಸ್ಥಿರ ಅಭಿವೃದ್ಧಿಗೆ ವಿಶ್ವ ಸಂಸ್ಥೆ ಗುರಿಪಡಿಸಿರುವ ಸೂಚಿಗಳಿಗೆ ಭಾರತ ಸ್ಪಂದಿಸಿ ವಿಶ್ವಕ್ಕೆ ಮಾದರಿಯಾಗುವುದರಲ್ಲಿ ಇದು ಒಂದು ವಿಶ್ವನೀಯ ಹೆಜ್ಜೆ ಎಂಬುದು ಸಹಕಾರಿಗಳಿಗೆ ಹೆಮ್ಮೆಯ ವಿಷಯವಾಗಿವೆ.

**"ಚಲನೆಯೇ ಚೇತನದ ಚಿಹ್ನೆ, ನಿರಂತರವಾಗಿ ಎಚ್ಚೆತ್ತಿರುವುದೇ ನಿಜವಾದ ಎಚ್ಚರಿಕೆಯ ಕುರುಹು, ಬುದ್ಧಿ ಸದಾ ನೂತನ ವಿಚಾರಗಳಲ್ಲಿ ತೊಡಗುತ್ತಿರುವುದೇ ಆತ್ಮ ಪ್ರಗತಿಯ ಸೋಪಾನ" – ಕುವೆಂಪು.**

******************************************************************************************************

# 5. ನವ ಭಾರತ ನಿರ್ಮಾಣದಲ್ಲಿ ಸಹಕಾರ ಆಂದೋಲನ ಸ್ವರೂಪ – ಒಂದು ಚಿಂತನೆ

ದೇಶದಾದ್ಯಂತ ರಾಷ್ಟ್ರೀಯ ಸಹಕಾರ ಯೂನಿಯನ್ ಮಾರ್ಗದರ್ಶನದಲ್ಲಿ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸಲಾಗಿತ್ತು. ಸ್ವಾತಂತ್ರ್ಯ ನಂತರ ಸರ್ಕಾರ 'ಸಹಕಾರ ಆಂದೋಲನ'ಕ್ಕೆ ಕೊಟ್ಟ ಬೆಂಬಲ ಅದ್ವಿತೀಯ. ಹಾಗೆಯೇ, ಸಹಕಾರ ಆಂದೋಲನವೂ ಸರ್ಕಾರಕ್ಕೆ, ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ವಹಿಸಿದ ಪಾತ್ರ ಮರೆಯುವಂತಿಲ್ಲ. ತೊಂಭತ್ತರ ದಶಕದ ನಂತರ ಆದ ಆರ್ಥಿಕ ಬದಲಾವಣೆಯಿಂದ ಸಹಕಾರ ಅಂದೋಲನದ ಮೇಲೆ ಆಗಿರುವ ಪರಿಣಾಮಗಳನ್ನು

ವಿಶ್ಲೇಷಿಸುವುದು ಸಹಕಾರ ಆಂದೋಲನದಲ್ಲಿ ತೊಡಗಿಸಿಕೊಂಡಿರುವವರು ತಮ್ಮ ಆತ್ಮ ವಿಶ್ಲೇಷಣೆ ಮಾಡಿಕೊಳ್ಳಲು ಇದು ಸಕಾಲ, ಬದಲಾದ ಆರ್ಥಿಕ ಚಿಂತನೆಯ ಫಲವಾಗಿ ಇದುವರೆವಿಗಿನ ಸ್ವಾತಂತ್ರ್ಯ ನಂತರದ ಭಾರತದಲ್ಲಿ ಆಂದೋಲನದ ಸ್ವರೂಪವನ್ನು ಈಗಿನ ನವಭಾರತದಲ್ಲಿ ಹೇಗೆ ಬದಲಾಯಿಸಿಕೊಂಡು ಸಹಕಾರದ ಅಸ್ತಿತ್ವ ಮತ್ತು ಆರ್ಥಿಕ, ಸಾಮಾಜಿಕ ನ್ಯಾಯ ಒದಗಿಸಿಕೊಡುವ ಶಕ್ತಿಯಾಗಿ ಹೊರ ಹೊಮ್ಮಬೇಕಾಗಿದೆ. ಖಾಸಗಿ ಬಂಡವಾಳಶಾಹಿ ಒಡ್ಡುತ್ತಿರುವ ಸವಾಲನ್ನು ಎದುರಿಸಬೇಕಾಗಿದೆ ಎಂಬುದರ ಬಗ್ಗೆ ಚಿಂತನ– ಮಂಥನ ನಡೆಸಬೇಕಾಗಿರುವುದು ಈ ದಿನದ ಆವಶ್ಯಕತೆಯಾಗಿದೆ.

ಸಹಕಾರ ವಲಯದ ಸ್ವಾಟ್ (SWOT) ವಿಶ್ಲೇಷಣೆ ಸಾಮಾನ್ಯ ಮಟ್ಟದಲ್ಲಿ ಮತ್ತು ಸಹಕಾರ ಸಂಘಗಳ ಸ್ವಾಟ್ ವಿಶ್ಲೇಷಣೆ ಸಂಸ್ಥೆ ಮಟ್ಟದಲ್ಲಿ ಮಾಡಿಕೊಂಡಾಗ ಬದಲಾಗುತ್ತಿರುವ ಆರ್ಥಿಕ ಸಾಮಾಜಿಕ ಪರಿಸರದಲ್ಲಿ ಮುಂದೇನು? ಎಂಬುದಕ್ಕೆ ಉತ್ತರ ಹುಡುಕುವುದಕ್ಕೆ ಅನುಕೂಲವಾಗುತ್ತದೆ ಎಂದು ಭಾವಿಸಲಾಗಿದೆ.

### ಸಾಮರ್ಥ್ಯ (Strength)

• ಭಾರತ ದೇಶದಂತಹ ಬಹು ಜನಸಂಖ್ಯೆಯುಳ್ಳ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ 1950–51ರಲ್ಲಿ 1.80 ಲಕ್ಷ ಸಂಘಗಳಿದ್ದು, 137 ಲಕ್ಷ ಸದಸ್ಯತ್ವವಿದ್ದು, ದುಡಿಯುವ ಬಂಡವಾಳ ರೂ. 276 ಕೋಟಿ, 1960–61ಕ್ಕೆ 3.20 ಲಕ್ಷ ಸಹಕಾರ ಸಂಘಗಳಿದ್ದು, 644 ಲಕ್ಷ ಸದಸ್ಯರಿದ್ದು, ದುಡಿಯುವ ಬಂಡವಾಳ ರೂ. 6809 ಕೋಟಿ, 2009–10ಕ್ಕೆ 6.10 ಲಕ್ಷ ಸಹಕಾರ ಸಂಘಗಳಿದ್ದು, 2493 ಲಕ್ಷ ಸದಸ್ಯರಿದ್ದು, ದುಡಿಯುವ ಬಂಡವಾಳ ರೂ. 1107403 ಕೋಟಿ, ಹಾಲಿ 10 ಲಕ್ಷ ಸಹಕಾರ ಸಂಘಗಳು 30 ಕೋಟಿ ಮೀರಿ ಸದಸ್ಯತ್ವ ಹೊಂದಿದ್ದು, 30 ಲಕ್ಷ ಕೋಟಿ ಮೀರಿ ದುಡಿಯುವ ಬಂಡವಾಳವಿದೆ ಎಂಬುದೊಂದು ಅಂದಾಜು.

• ಭಾರತ ಕೃಷಿ ಪ್ರಧಾನ ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ಶೇಕಡ 60ಕ್ಕೂ ಹೆಚ್ಚು ಜನರು ಕೃಷಿ ಮತ್ತು ಕೃಷಿ ಅವಲಂಬಿತ ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾರೆ. ಗ್ರಾಮೀಣ, ಅರೆ ನಗರ ಮತ್ತು ನಗರ ಪ್ರದೇಶಗಳ ಆಹಾರ ಪೂರೈಕೆ ಇದರಿಂದ ಆಗುತ್ತಿದೆ. ಕೃಷಿ ತೋಟಗಾರಿಕೆ, ಹೈನುಗಾರಿಕೆ, ಕುರಿ, ಕೋಳಿ, ಹಂದಿ, ಮೊಲ, ಜೇನು ಸಾಕಾಣಿಕೆಯನ್ನು ಒಳಗೊಂಡಿರುತ್ತದೆ. (ದೇಶದಲ್ಲಿನ ಹೈನು ಪಶು ಸಂಖ್ಯೆ 2.5 ಕೋಟಿ. ಜರ್ಸಿ, ಹೆಚ್‌ಎಫ್, ಇತರೆ ದೇಶೀಯ ತಳಿ 4.85 ಕೋಟಿ)

• ಮೇಲಿನ ವೃತ್ತಿಯಲ್ಲಿ ಮಹಿಳೆಯರು ತೊಡಗಿಸಿಕೊಂಡಿರುವ ಪಾಲು ಅಧಿಕವಾಗಿರುತ್ತದೆ. ಒಂದು ಅಂದಾಜಿನಂತೆ ಆಹಾರ ಉತ್ಪಾದನೆಯಲ್ಲಿ ಮಹಿಳೆಯರ ಪಾಲು ಶೇಕದ 60 ರಿಂದ 80, ಹಾಲು ಉತ್ಪಾದನೆಯಲ್ಲಿ ಅವರ ಪಾಲು ಶೇಕಡ 90. ಕೃಷಿ ಮತ್ತು ಪಶು ಸಂಗೋಪನೆಯಲ್ಲಿ ಅವರ ಶ್ರಮ ಗುರುತಿಸಬೇಕಾಗಿದೆ. ಕೃಷಿ ಭೂಮಿ ವಿಘಟನೆಗೊಂಡು ಸಣ್ಣ ರೈತರ ಸಂಖ್ಯೆ ಹೆಚ್ಚಳವಾಗಿದೆ. ಮಹಿಳೆಯರಿಗೂ ಭೂ ಒಡೆತನ ದೊರೆಯುತ್ತಿದೆ.

• ಕೃಷಿಯಲ್ಲಿ ಮತ್ತು ಕೃಷಿ ಪೂರಕ ಚಟುವಟಿಕೆಗಳಲ್ಲಿ ತಾಂತ್ರಿಕತೆ, ನವೀನ ಮತ್ತು ಮಧ್ಯಂತರ (ತಕ್ಕನಾದ) ತಾಂತ್ರಿಕತೆಯ ಲಭ್ಯತೆ.

• ಮಾಹಿತಿ ತಂತ್ರಜ್ಞಾನದಿಂದ ಜ್ಞಾನ, ನೈಪುಣ್ಯದ ಸುಲಭ ಲಭ್ಯತೆ, ಹೆಚ್ಚು ವೃತ್ತಿಪರತೆಯಿಂದ ಕಾರ್ಯನಿರ್ವಹಿಸಲು ವಿಫುಲ ಅವಕಾಶ.

• ಗೃಹ ಕೈಗಾರಿಕೆಗಳು ವಂಶವಾಹಿನಿಯಾಗಿ ಮತ್ತು ನೈಪುಣ್ಯತೆ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರದ ಯೋಜನೆಗಳು ಮತ್ತು ತರಬೇತಿ ಕೇಂದ್ರಗಳಿಂದ ಜನತೆಗೆ ನೈಪುಣ್ಯ (ನಿಪುಣತೆ) ಬೆಳೆಸಿಕೊಳ್ಳಲು ಇರುವ ಅವಕಾಶಗಳು,

ನಮ್ಮ ರಾಷ್ಟ್ರ ಉಷ್ಣ ವಲಯದಲ್ಲಿದ್ದು, ಕೃಷಿ ಮತ್ತು ಕೃಷಿಪೂರಕ ಅವಲಂಭಿತ ಚಟುವಟಿಕೆಗಳಿಗೆ ಅತ್ಯಂತ ಪ್ರಶಸ್ತವಾಗಿದ್ದು, ಪರಣಾಮಕಾರಿ ಉತ್ಪಾದನೆಗೆ ತಕ್ಕುದಾಗಿದೆ. ಈ ನಮ್ಮ ಸಂಪನ್ಮೂಲಗಳು ನಮ್ಮ ಸಾಮಾರ್ಥ್ಯ ಗಳಾಗಿವೆ. ಈ ಸಾಮರ್ಥ್ಯಗಳನ್ನು ನಾವು ಸಹಕಾರ ರಂಗದೊಳಗೆ ಒಳಗೊಳ್ಳಬೇಕಾಗಿದೆ. ಸಾಮರ್ಥ್ಯಗಳನ್ನು ಬಳಸಿ ಬೆಳೆಸಬೇಕಾಗಿದೆ.

**ದೌರ್ಬಲ್ಯಗಳು :**

• ಸಮಾಜದಲ್ಲಿನ ಅಸಮಾನತೆ, ಭಿನ್ನತೆ, ಧರ್ಮ, ಜಾತಿ, ಆರ್ಥಿಕ ಮತ್ತು ಸಾಮಾಜಿಕ ಅಸಮತೋಲನ.

• ಸಮರ್ಥ ನಾಯಕತ್ವದ ಕೊರತೆ. ನಾಯಕರು ಹೊರ ಹೊಮ್ಮಬೇಕು. ಸಮಾಜದಿಂದಲೇ ದಕ್ಷ, ಪ್ರಾಮಾಣಿಕ, ದೂರ ದೃಷ್ಟಿವುಳ್ಳ, ಸರ್ವರ ಪ್ರಗತಿ ಬಯಸುವ, ಕನಸು ಕಾಣಬಲ್ಲ, ಸಂಘಟನಾ ಚತುರತೆವುಳ್ಳ, ಭಿನ್ನವಾಗಿ ಚಿಂತಿಸಬಲ್ಲ ನಾಯಕತ್ವದ ತುರ್ತು ಅಗತ್ಯತೆ ಇದೆ. ನಾಯಕತ್ವವಿಲ್ಲದೆ ಸಂಘ ಶಕ್ತಿಗೆ ಬಲ ಬರುವುದಿಲ್ಲ.

• ಬಂಡವಾಳ: ನಾನೇನು ಮಾಡಲಿ ಬಡವನಯ್ಯಾ? ಎಂಬ ಚಿಂತೆಯಾಗಿದೆ. ಪರಿಹಾರ ಇದರಲ್ಲೇ ಅಂದರೆ ಸಹಕಾರದಲ್ಲಿಯೇ ಅಡಗಿದೆ. 'ಹನಿ ಹನಿ ಗೂಡಿದರೆ ಹಳ್ಳ, ತೆನೆತೆನೆಗೂಡಿದರೆ ಬಳ್ಳ' ಇದೇ ಸಹಕಾರದ ಬುನಾದಿ, ಗ್ರಾಮೀಣ ಭಾರತದಲ್ಲಿ ಬಂಡವಾಳವಿದೆ. ಆದರೆ ಕ್ರೋಢೀಕರಣದಲ್ಲಿ ವಿಫಲರಾಗುತ್ತಿದ್ದೇವೆ.

• ಯುವಜನರ ಸಂಖ್ಯೆ ವಿಪುಲವಾಗಿದೆ. ಸಂಘಟಕರಾಗಲು ಸಾಧ್ಯವಾಗುತ್ತಿಲ್ಲ. ಅನಕ್ಷರತೆ ಸಾಕಷ್ಟು ಕಡಿಮೆಯಾಗಿದೆ. ಶಿಕ್ಷಣ ಮಟ್ಟ ಏರಿದೆ. ಸಹಕಾರ ಸಂಘಗಳಲ್ಲಿ ಭಾಗಿತ್ವ ಇಲ್ಲ.

• ಸರ್ಕಾರದ ಯೋಜನೆಗಳನ್ನೇ ಅವಲಂಭಿತರಾಗಿ ಸಹಕಾರ ಚಳುವಳಿಯನ್ನು ಮುನ್ನಡೆಸಿದ್ದು ಸರ್ಕಾರದ ಯೋಜನೆಗಳು ಅಂತ್ಯಗೊಂಡಂತೆ ಸಹಕಾರ ಸಂಘಗಳು ಅವಸಾನಗೊಂಡಿವೆ. ಸರ್ಕಾರದ ಪರವಾಗಿ ಧಾನ್ಯ ಖರೀದಿ ಪಡಿತರ ವಿತರಣೆ, ಸಮವಸ್ತ್ರ ವಿತರಣೆ, ಪೌಷ್ಠಿಕ ಆಹಾರ ಸರಬರಾಜು, ಧಾನ್ಯ ಮೌಲ್ಯವರ್ಧನೆ, ಖರೀದಿ ಮಾರಾಟ, ಗೊಬ್ಬರ ವಿತರಣೆ, 'ಸರ್ಕಾರದ ಕಾರ್ಯಕ್ರಮವಾಗಿ ಕೃಷಿ ಉಪಕರಣಗಳ, ಕೃಷಿ ಸಂಸ್ಕರಣ ಉಪಕರಣ, ಬಿತ್ತನೆ ಬೀಜ. ಔಷಧಿ ವಿತರಣೆ, ಈ ಸರ್ಕಾರದ ಕಾರ್ಯಕ್ರಮಗಳಲ್ಲಿ ಸಹಕಾರ ಸಂಘಗಳಿಗೆ ಆದ್ಯತೆ ನೀಡುತ್ತಿದ್ದಾಗ ಮಾತ್ರ ನಿರ್ವಹಣೆ ಮಾಡಿ, ಸ್ವತಂತ್ರ ನಿರ್ವಹಣೆಯಲ್ಲಿ ವಿಫಲರಾಗಿರುವುದು.

• ಆಧುನಿಕ ತಂತ್ರಜ್ಞಾನದಲ್ಲಿ ವಿಫಲರಾಗಿರುವುದು. ಉದಾಹರಣೆಗೆ ಕಂಪ್ಯೂಟರೀಕರಣ. ಮಾಹಿತಿ ತಂತ್ರಜ್ಞಾನದ ಲಾಭ ಪಡೆಯದೆ ಇರುವುದು

• ರಾಜಕೀಯ : ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿರುವುದರಿಂದ ಚುನಾವಣೆ ಅನಿವಾರ್ಯ. ಚುನಾವಣೆಗಳು ಕಾಯ್ದೆ ಬದ್ಧವಾಗಿ ಪಕ್ಷ ರಾಜಕೀಯದಿಂದ ಹೊರಗಿದೆ. ಆದರೆ, ಪರೋಕ್ಷವಾಗಿ ರಾಜಕೀಯ ಪಕ್ಷಗಳು ಒಳನುಸುಳುತ್ತಿರುವುದು ಹಾನಿಕರವಾಗಿದೆ. ಚುನಾವಣೆ ನಂತರ ರಾಜಕೀಯ ಸಂಸ್ಥೆಯ ಒಳಗೆ ಇರಬಾರದೆಂದರೂ ಸಾಧ್ಯವಾಗದೇ ಇರುವುದು ಸಹಕಾರ ಮೌಲ್ಯವಾದ 'ಒಗ್ಗಟ್ಟು'ನ್ನು ವಿಫಲಗೊಳಿಸುತ್ತಿದೆ. ನಮ್ಮ ಮೇಲಿನ ದೌರ್ಬಲ್ಯಗಳನ್ನು ಹೋಗಲಾಡಿಸಲು ತ್ಯಜಿಸಲು ಸಹಕಾರಿಗಳಾದ ನಾವು ಪ್ರಾಮಾಣಿಕ ಪ್ರಯತ್ನ ಮಾಡಲೇಬೇಕು. ದೌರ್ಬಲ್ಯಗಳನ್ನು ಹೋಗಲಾಡಿಸಿ ಇವುಗಳನ್ನು ಸಾಮರ್ಥ್ಯಗಳನ್ನಾಗಿ ಪರಿವರ್ತಿಸುವುದು ಮೂಲಭೂತ ಕರ್ತವ್ಯವೆಂದೇ ಭಾವಿಸಬೇಕಿದೆ.

**ಅವಕಾಶಗಳು :**

ಪ್ರಸ್ತುತ ಭಾರತದ ಸಿರಿತನ ಮೂರು ಟ್ರಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ. ಇದು 2022ರ ವೇಳೆಗೆ ಐದು ಟ್ರಿಲಿಯನ್ ಡಾಲರ್ ಆಗುವುದಾಗಿ ಅಂದಾಜಿಸಲಾಗಿದೆ. ಇದು ಪೂರ್ಣ ಬಂಡವಾಳ ಶಾಹಿಗಳದೇ ಆಗಿರುತ್ತದೆ.

ಇದರಲ್ಲಿ ಸಹಕಾರದ ಪಾಲೇನು? ಎಂಬುದೇ ಯಕ್ಷ ಪ್ರಶ್ನೆ, ಸಹಕಾರ ಈ ಆರ್ಥಿಕ ಬೆಳವಣಿಗೆಯಲ್ಲಿ ಪಾಲ್ಗೊಳ್ಳಲು ಅವಕಾಶಗಳಾದರೂ ಏನು?

• ಗ್ರಾಮೀಣ ಪ್ರದೇಶದಲ್ಲಿ ಕೃಷಿ ಉತ್ಪಾದನೆ ಮತ್ತು ಮಾರುಕಟ್ಟೆಯದೇ ಸಮಸ್ಯೆ, ಭೂಮಿ ವಿಘಟನೆಗೊಂಡು ಸಣ್ಣ ರೈತರ ಸಂಖ್ಯೆ ಹೆಚ್ಚುತ್ತಿದೆ. ಕಡಿಮೆ ಪ್ರದೇಶದಲ್ಲಿ ಹೆಚ್ಚಿನ ಉತ್ಪಾದನೆಗೆ ಅತಿ ಹೆಚ್ಚಿನ ವೆಚ್ಚ, ತಂತ್ರಜ್ಞಾನ ಅಳವಡಿಕೆ. ನೀರಾವರಿ ಸೌಲಭ್ಯ ಬಳಕೆ ಎಲ್ಲವೂ ಸಮಸ್ಯೆಯೆ. ಇದಕ್ಕೆ ಪರಿಹಾರ ಸಮೂಹ ಅಥವಾ ಜಂಟಿ ಕೃಷಿ ಸಹಕಾರ ಸಂಘ ಸ್ಥಾಪಿಸುವುದು. ಸಂಪನ್ಮೂಲಗಳ ನ್ಯಾಯಯುತ ಬಳಕೆ ಮತ್ತು ಹೆಚ್ಚಿನ ಇಳುವರಿ ಪಡೆಯಲು ಮತ್ತು ಮಾರಾಟ ಮಾಡಲು ತಮ್ಮದೇ ಕೊಯ್ಲು ನಂತರದ ಅವಶ್ಯ ಸೌಕರ್ಯಗಳನ್ನು ಹೊಂದುವುದರಿಂದ ನ್ಯಾಯಯುತ ಬೆಲೆಗೆ ಮಾರಾಟ ಮಾಡಬಹುದಾಗಿದೆ.

• ಗ್ರಾಮ ಮತ್ತು ನಗರದ ಜೀವನ ಶೈಲಿ ಮತ್ತು ಮಟ್ಟದಲ್ಲಿ ಅಂತರ ಕಡಿಮೆಯಾಗುತ್ತಿದೆ. ಖರೀದಿ ಶಕ್ತಿಯು ಅಧಿಕಗೊಂಡಿದೆ. ಗ್ರಾಮದ ಮೂಲಭೂತ ಸೌಕರ್ಯಗಳಲ್ಲಿಯೂ ಅಭೂತ ಪೂರ್ವ ಉತ್ತಮ ಬದಲಾವಣೆಗಳಾಗಿವೆ. ಇದರ ಪರಿಣಾಮ ಅನೇಕ ನೂತನ ಅವಕಾಶಗಳು ಹೊರಹೊಮ್ಮುತ್ತಿವೆ. ಗ್ರಾಹಕರ ವಲಯ ಮಾಹಿತಿ ತಂತ್ರಜ್ಞಾನ ವಲಯ ಸಾಗಾಣೆ ಸಂಗ್ರಹಣೆ ಪರಿಷ್ಕರಣೆ ಉತ್ಪಾದನಾ ಮೌಲ್ಯವರ್ಧನೆಗೆ ಸಾಕಷ್ಟು ಅವಕಾಶಗಳಿವೆ/ ಸಹಕಾರ ವಲಯದಲ್ಲಿ ಈ ಚಟುವಟಿಕಗಳನ್ನು ಕೈಗೊಳ್ಳಬಹುದಾಗಿದೆ.

- ಗ್ರಾಹಕ ಆಧುನಿಕ ಮಾರುಕಟ್ಟೆ ತಾಂತ್ರಿಕತೆ ಬದಲಾಗಿದೆ. ತಂತ್ರಜ್ಞಾನ ಸಹಾಯಕ್ಕೆ ಬಂದಿದೆ. ಎಲ್ಲವೂ ಆನ್‌ಲೈನ್ (Online) ನಲ್ಲಿ ಲಭ್ಯ ಉತ್ಪನ್ನಗಳ ಮಾರುಕಟ್ಟೆಗೆ 'ಆಪ್'ಗಳ ಬಳಕೆ.
- ಗ್ರಾಹಕ ಸಹಕಾರ ಸಂಘಗಳಲ್ಲಿ ಕಂಪ್ಯೂಟರಿಕರಣ ಆಧುನಿಕ ಸಾಪ್ಟ್‌ವೇರ್‌ಗಳ ಬಳಕೆ.
- ಪತ್ತು ಸಹಕಾರ ಸಂಘಗಳಲ್ಲಿ, ಬ್ಯಾಂಕುಗಳಲ್ಲಿ ಆಧುನಿಕ ಸಾಪ್ಟ್‌ವೇರ್ ಬಳಕೆ.
- ನಗರ ಪ್ರದೇಶಗಳಲ್ಲಿ ಯುವಕರು ಸಹಕಾರ ಸಂಘಗಳಲ್ಲಿ (ಪತ್ತು, ಬಳಕೆ, ವಸತಿ, ಆಪಾರ್ಟ್ ಮೆಂಟ್) ತೊಡಗಿಸಿಕೊಳ್ಳವುದು.
- ಸಾವಯವ ಕೃಷಿ, ಸಾವಯವ ಕೃಷಿ ಉತ್ಪನ್ನಗಳ ಮಾರಾಟ, ಸಾವಯವ ಹೈನುಗಾರಿಕೆ, ಸಿರಿಧಾನ್ಯಗಳ ಉತ್ಪನ್ನ ಮಾರುಕಟ್ಟೆ, ಮೌಲ್ಯವರ್ಧಿಕರಣ.
- 'ಆಪ್' ಆಧಾರಿತ 'ಪ್ಲಾಟ್ ಫಾರ್‌ಂ' ಆಧಾರಿತ ಸೇವೆಗಳು ನಗರದಲ್ಲಿ ಪ್ರಯಾಣಿಸಲು ಸಾಗಾಣೆ ಮಾಡಲು.
- ಪ್ರವಾಸೋದ್ಯಮ.
- ವಿಮೆ.
- ಕುರಿ ಮತ್ತು ಕುರಿ ಉತ್ಪನ್ನ ಸಹಕಾರ ಸಂಘವು ಮಾಂಸವನ್ನು ಬೆಂಗಳೂರಿನಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿದೆ. (ಪತ್ರಿಕಾ ವರದಿ 16–10–2009) ಇದು ಆಶಾದಾಯಕ ಬೆಳವಣಿಗೆಯಾಗಿದೆ. ಅವಕಾಶಗಳನ್ನು ತಬ್ಬಿಕೊಳ್ಳಬೇಕಾಗಿದೆ/ಬಾಚಿಕೊಳ್ಳಬೇಕಾಗಿದೆ. 'grab the opportunity'ಗೆ ಒಂದು ಉದಾಹರಣೆ.

**ಸವಾಲುಗಳು :**

1. ಬಹು ರಾಷ್ಟ್ರೀಯ ಕಂಪನಿಗಳು ಎಲ್ಲ ಕ್ಷೇತ್ರಗಳಲ್ಲಿಯೂ ಪ್ರವೇಶಿಸುತ್ತಿದ್ದಾರೆ. ವಿದೇಶಿ ಬಂಡವಾಳ ಹೂಡಿಕೆ ಅಧಿಕಗೊಳ್ಳುತ್ತಿದೆ. ಸಹಕಾರ ಸಂಘಗಳು ಬಂಡವಾಳವಿಲ್ಲದ ಬಡಾಯಿಗಳಾಗುತ್ತಿವೆ. ಸಹಕಾರ ಸಂಘಗಳು ಬಂಡವಾಳ

ಕ್ರೋಢೀಕರಣ, ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಹೆಚ್ಚು ಗಮನ ಕೊಡಬೇಕಾಗಿದೆ.

2. ಸರ್ಕಾರದ ನೀತಿಗಳು ಬದಲಾಗುತ್ತಿವೆ. ಸರ್ಕಾರ ಸಹಕಾರ ಸಂಘಗಳಿಗೆ ನೀಡುತ್ತಿದ್ದ ಸವಲತ್ತುಗಳು ಈಗ ಲಭ್ಯವಿಲ್ಲ. ಅವು ಸ್ಪರ್ಧಾತ್ಮಕವಾಗಿ ಭಾಗವಹಿಸುವ ಅವಶ್ಯಕತೆ ಬಗ್ಗೆ ತಿಳಿಸುತ್ತಿದೆ. ತೆರಿಗೆ ಪಾವತಿ ಮತ್ತಿತರ ಸವಲತ್ತುಗಳಲ್ಲಿ ಯಾವುದೇ ರಿಯಾಯಿತಿ ಇಲ್ಲ.

3. ಅನೇಕ ಚಿಲ್ಲರೆ ಮಾರಾಟ ಕಂಪನಿಗಳು ಕೃಷಿಕರೊಡನೆ 'ಒಪ್ಪಂದ ಕೃಷಿ' ಮಾಡುತ್ತಿರುತ್ತಾರೆ. (ಕೃಷಿಕರೇ ಸಹಕಾರ ಸಂಘ ರಚಿಸಿಕೊಂಡಲ್ಲಿ ಹೆಚ್ಚಿನ ಚೌಕಾಸಿ ಮಾಡಲು ಸಶಕ್ತವಾಗುತ್ತದೆ)

4. ಉತ್ಪಾದನಾ ಕಂಪನಿಗಳನ್ನು ಸ್ಥಾಪಿಸಲು ಸರ್ಕಾರ, ಸಹಕಾರ ಸಂಸ್ಥೆಗಳಿಗೆ ಹೆಚ್ಚು ಉತ್ತೇಜನ ದೊರೆಯುತ್ತಿದೆ.

5. ಸರ್ಕಾರೇತರ ಸಂಸ್ಥೆಗಳಿಗೆ, ಬ್ಯಾಂಕಿಂಗೇತರ ಆರ್ಥಿಕ ಕಂಪನಿಗಳಿಗೆ ಕಿರು ಹಣಕಾಸಿನ ವ್ಯವಹಾರಕ್ಕೆ ಅನುಮತಿಸಿದ್ದು, ಸವಾಲಾಗಿ ಪರಿಣಮಿಸಿದೆ.

ಒಟ್ಟಾರೆ ಆರ್ಥಿಕತೆಯಲ್ಲಿ 'ಸಹಕಾರ'ದ ಪಾಲು ಗೌಣವಾಗುತ್ತಿದೆ. ನವ ಭಾರತದಲ್ಲಿ ಸಹಕಾರ ಸಂಘಗಳು ಸ್ಪರ್ಧಾತ್ಮಕವಾಗಿ, ಗುಣಾತ್ಮಕವಾಗಿ ಕಾರ್ಯನಿರ್ವಹಿಸಿದಲ್ಲಿ ಎಲ್ಲ ವಿಷಯಗಳಲ್ಲಿಯೂ ನಾವಿನ್ಯತೆ, ಹೊಸತನವನ್ನು ಆಳವಡಿಸಿಕೊಳ್ಳದೇ ಇದ್ದಲ್ಲಿ ಅಸ್ತಿತ್ವದ ಪ್ರಶ್ನೆ ಎದುರಾಗುತ್ತದೆ. ನೂತನ ಅವಶ್ಯಕತೆಗಳನುಸಾರ ಉದ್ದೇಶಗಳಲ್ಲಿ, ವ್ಯವಹಾರ ರೀತಿಯಲ್ಲಿ ಬದಲಾವಣೆ ತರಬೇಕಾಗಿದೆ. ಯುವಕರು ಅಬಲ ವರ್ಗದವರನ್ನು ತೊಡಗಿಸಿಕೊಳ್ಳಬೇಕಾಗಿದೆ. ಸಹಕಾರ ಆಂದೋಲನ ಮತ್ತಷ್ಟು ಶಕ್ತಿಯುತವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ. ಇಲ್ಲದಿದ್ದಲ್ಲಿ ಆರ್ಥಿಕ, ಸಾಮಾಜಿಕ ಅಸಮಾನತೆಯ ಘೋರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಕೇವಲ ಘೋಷ ವಾಕ್ಯವಾಗದೇ ಅನುಷ್ಠಾನಗೊಳಿಸಬೇಕು ಎಂದಾದರೆ ಸಹಕಾರ ಸಂಘಗಳು ಗುಣಾತ್ಮಕವಾಗಿ ಕಾರ್ಯನಿರ್ವಹಿಸಿ ಒಟ್ಟಾರೆ ಆರ್ಥಿಕತೆಯ ಪ್ರಮುಖ ಅಂಗವಾಗಲೇಬೇಕು.

***************************************************************************************************

# 6. ಸಂಕ್ರಮಣ ಕಾಲದಲ್ಲಿ 'ಸಹಕಾರ' ಎತ್ತ ಸಾಗಿದೆ? ಒಂದು ಚಿಂಥನ – ಮಂಥನ

21ನೇ ಶತಮಾನದ ಕಾಲಘಟ್ಟದಲ್ಲಿ 19ನೇ ಶತಮಾನದಲ್ಲಿ ಆರಂಭಗೊಂಡ 'ಸಹಕಾರ' ಚಳುವಳಿ ಐರೋಪ್ಯ ರಾಷ್ಟ್ರಗಳಲ್ಲಿ ಮತ್ತು ಇತರೆ ರಾಷ್ಟ್ರಗಳಲ್ಲಿ 'ಖಾಸಗಿ ವಲಯ' ಸ್ಪರ್ಧೆ ಒಡ್ಡಿದಾಗ್ಯೂ ಈ ವಲಯವೂ ತನ್ನ ಅಸ್ತಿತ್ವವನ್ನು ಉಳಿಸಿ ಕೊಂಡು ಬೆಳೆಯುತ್ತಿರುವುದನ್ನು ಕಾಣುತ್ತ ಇದ್ದೇವೆ. ಆದರೆ, ಭಾರತದಲ್ಲಿ 'ಸಹಕಾರ' ಆರಂಭವಾದದ್ದು 'ಕಾಯ್ದೆ' ರೂಪಿಸುವ ಮುಖಾಂತರ ಮತ್ತು ಸರ್ಕಾರದ ಬೆಂಬಲದಿಂದ ಎಂದರೆ ತಪ್ಪಾಗುವುದಿಲ್ಲ.

ಭಾರತ ಸ್ವಾತಂತ್ರ್ಯ ನಂತರ 'ಮಿಶ್ರ ಆರ್ಥಿಕ' ನೀತಿ ಅನುಸರಿಸಿತು. ಆರ್ಥಿಕ ಬೆಳವಣಿಗೆಗೆ 'ಸಹಕಾರ ವಲಯ' ಪ್ರಜಾಸತ್ತಾತ್ಮಕವಾದುದರಿಂದ ಈ ವಲಯದ ಮೂಲಕ ಅಭಿವೃದ್ಧಿ ಅಸಮತೋಲನ ಸಮಾಜ ನಿರ್ಮಾಣಕ್ಕೆ ಸಹಕಾರಿ ಎಂದು ಸರ್ಕಾರವೂ ಒಂದು ಭಾಗೀಧಾರ ನಾಗಿ 'ಸಹಕಾರ'ಕ್ಕೆ ಪ್ರೊತ್ಸಾಹ ನೀಡಿ ಬೆಳವಣಿಗೆಗೆ ಪೂರಕವಾಗಿ ವರ್ತಿಸಿತು. ಆದರೆ ಈಗಿನ ಕಾಲಘಟ್ಟದಲ್ಲಿ ಖಾಸಗಿ ವಲಯ ಉಚ್ಛಾಯ ಮಟ್ಟದಲ್ಲಿರುವಲ್ಲಿ 'ಸಹಕಾರ'ದ ಔಚಿತ್ಯ, ಅಗತ್ಯತೆ, ಪ್ರಸ್ತುತತೆ ಪ್ರಶ್ನಾರ್ಹವಾಗಿ, ಅನುಮಾನ ಮೂಡುತ್ತಿರುವುದು ಭಾರತದಲ್ಲಿ ಅತ್ಯಂತ ಪ್ರಮುಖ ಅಂಶ ಎಂದೆನಿಸುತ್ತದೆ.

ಭಾರತದ ಶೇ. 01ರ ಜನಸಂಖ್ಯೆಯಲ್ಲಿ ಭಾರತದ ಶೇ. 40ರ ಸಂಪತ್ತು ಶೇಖರಗೊಂಡಿದೆ. 85 ಕೋಟಿ ಜನಸಂಖ್ಯೆಗೆ 'ಆಹಾರ ಭದ್ರತೆ' ಅಂಗವಾಗಿ ಉಚಿತ ಆಹಾರ ವಿತರಣೆಗೆ ಭಾರತ ಸರ್ಕಾರ ಕ್ರಮ ಕೈಗೊಳ್ಳಲಿದೆ. ಎಂಬ ವಾರ್ತೆಗಳು ಮನ ಕಲುಕುತ್ತವೆ. 'ಸಹಕಾರಿ'ಗಳಿಗೆ ತಮ್ಮ ಆತ್ಮಾವಲೋಕನಕ್ಕೆ ಎಡೆ ಮಾಡಿಕೊಡುವುದಲ್ಲವೇ? 90ರ ದಶಕದಿಂದ ಭಾರತ 'ಉದಾರೀಕರಣ, ಖಾಸಗೀಕರಣ, ಜಾಗತೀಕರಣ' ನೀತಿ ಅನುಸರಿಸಿದ್ದರಿಂದ ಜಾಗತಿಕ ಮಟ್ಟದಲ್ಲಿ ಭಾರತ ಆರನೇ ಅತಿ ಹೆಚ್ಚಿನ 'ಆರ್ಥಿಕತೆ' ರಾಷ್ಟ್ರವಾಗಿ ಹೊರ ಹೊಮ್ಮುತ್ತಿದೆ. 3 ಟ್ರಿಲಿಯನ್ ಡಾಲರ್ ಆರ್ಥಿಕತೆ ಇಂದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗುತ್ತಿದ್ದೇವೆ. ಇವು ಹೆಮ್ಮೆಯ ವಿಷಯವೇ ಸರಿ ಆದರೆ ಅಸಮತೋಲನ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತಿದೆಯಲ್ಲವೇ? ಇದಕ್ಕೆ ಪರಿಹಾರ 'ಸಹಕಾರ ಆಂದೋಲನ' 'ಚಳುವಳಿ'ಯಲ್ಲಿ ಇದೆಯಲ್ಲವೇ?

ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಬೆಳವಣಿಗೆ ಇದರಿಂದ ಸ್ವಾವಲಂಬನೆ ಬದುಕು ಸಾಧ್ಯ ಅಲ್ಲವೇ? ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಆದರೆ, ವಾಸ್ತವದಲ್ಲಿ ಜರುಗುತ್ತಿರುವ ಬೆಳವಣಿಗೆಗಳು ಇದಕ್ಕೆ ಪೂರಕವಾಗಿ ಇವೆಯೇ? ಎಂಬ ವಿಶ್ಲೇಷಣೆ ಇಂದಿನ ಅಗತ್ಯತೆ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಪ್ರಯೋಜಿತ 'ಆಂದೋಲನ'ವಾಗಿ, ನಗರ, ಪಟ್ಟಣ ಪ್ರದೇಶಗಳಲ್ಲಿ ಜನರ (ಸದಸ್ಯರ) ಸ್ವಯಂಪ್ರೇರಿತ ಚಳುವಳಿಯಾಗಿ ರೂಪುಗೊಂಡಿತು. ಅಂದಿನ ಮೌಲ್ಯ ಆಧರಿತ, ಬದ್ಧತೆ ಉಳ್ಳ, ಪ್ರಾಮಾಣಿಕ ನಾಯಕತ್ವವೂ ಪ್ರಮುಖ ಕಾರಣವಾಗಿತ್ತು ಎಂಬ ಅಂಶವು ಅತಿ ಮಹತ್ವದ್ದು. ಇದರಿಂದಾಗಿ ಗ್ರಾಮಾಂತರ ಆರ್ಥಿಕ ಬೆಳವಣಿಗೆಯ ಆಯಾಮಗಳಿಗೆ ಸರ್ಕಾರವು 'ಸಹಕಾರ'ವನ್ನು ಅವಲಂಬಿಸಿತು. ಅದರಂತೆ 'ಯಶಸ್ಸ'ನ್ನು ಗಳಿಸಿತು. ನೂತನ ವೈಜ್ಞಾನಿಕ, ತಾಂತ್ರಿಕ ಆವಿಷ್ಕಾರಗಳನ್ನು ರೈತಾಪಿ ಜನರನ್ನೊಳಗೊಂಡಂತೆ ಗ್ರಾಮೀಣ ಜನತೆ ಅಳವಡಿಸಿಕೊಂಡು 'ಹಸಿರು ಕ್ರಾಂತಿ' 'ಶ್ವೇತ ಕ್ರಾಂತಿ' 'ನೀಲಿ ಕ್ರಾಂತಿ' 'ಹಳದಿ ಕ್ರಾಂತಿ'ಗೆ ಕಾರಣವಾದ್ದಲ್ಲಿ, 'ಗ್ರಾಹಕ ಚಳುವಳಿ' 'ಕೈಗಾರಿಕೆ ಬೆಳವಣಿಗೆ' 'ಗುಡಿ ಕೈಗಾರಿಕೆ ಬೆಳವಣಿಗೆ' 'ಕೃಷಿ ಆಧಾರಿತ ಕೈಗಾರಿಕೆ ಬೆಳವಣಿಗೆ' ಯಲ್ಲಿ 'ಸಹಕಾರ ಆಂದೋಲನ' ಪ್ರಮುಖ ಪಾತ್ರ ನಿರ್ವಹಿಸಿದೆ ಎಂದರೆ ತಪ್ಪಾಗಲಾರದು. ಆದರೆ, ಈಗಿನ ಪರಿಸ್ಥಿತಿ ಏನು? ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರದ ಪಾತ್ರ, ಪಾಲು ಎಷ್ಟಿದೆ? ಎಂಬುದರ ಪರಿಶೀಲನೆ ವಿಶ್ಲೇಷಣೆ ಅತ್ಯಗತ್ಯ.

**ಅಲ್ಪಾವಧಿ ಕೃಷಿ ಸಾಲ ವಲಯ:** ರಾಷ್ಟ್ರಾದ್ಯಂತ ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 'ಬೆಳೆಸಾಲ' ದುಡಿಯುವ ಬಂಡವಾಳ ಸಾಲ ಒದಗಿಸುತ್ತಿರುವ ವಲಯ, ರಾಷ್ಟ್ರಾದ್ಯಂತ 63000ದಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 18 ಕೋಟಿ ಸದಸ್ಯತ್ವ ಹೊಂದಿದೆ. ಇದರದೇ ಆದ ಜಿಲ್ಲೆಗೆ ಒಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್, ಮೂರು ಹಂತದ ವ್ಯವಸ್ಥೆ ನಿರ್ಮಾಣವಾಗಿದೆ. ಇತ್ತೀಚೆಗೆ ಕೇರಳ ಮತ್ತು ಛತ್ತಿಸಘಡ ರಾಜ್ಯಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ರಾಜ್ಯ ಸಹಕಾರ ಬ್ಯಾಂಕ್‌ಗಳೊಡನೆ ವಿಲೀನಗೊಳಿಸಲಾಗಿ ಎರಡು ಹಂತದ ವ್ಯವಸ್ಥೆ ನಿರ್ಮಾಣವಾಗಿದೆ.

ಈ ಬಗ್ಗೆ ಇತರೆ ರಾಜ್ಯಗಳಲ್ಲಿ ಕ್ರಮ ವಹಿಸುವ ಮುನ್ನ ಸಾಧಕ ಭಾಧಕಗಳ ಬಗ್ಗೆ ಕೇಂದ್ರ ಸರ್ಕಾರ 'ಅಧ್ಯಯನ ಸಮಿತಿ' ಯನ್ನು ರಚಿಸಿದೆ. ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಎರಡು ಹಂತದ ವ್ಯವಸ್ಥೆ ಇರುತ್ತದೆ. 60ರ ದಶಕದಲ್ಲಿ ಈ ವಲಯ ಏಕ ಸ್ವಾಮ್ಯತೆ ಹೊಂದಿದ್ದು ಬ್ಯಾಂಕ್‌ಗಳ ರಾಷ್ಟ್ರೀಕರಣ, ಗ್ರಾಮೀಣ ಬ್ಯಾಂಕ್‌ಗಳ ಆರಂಭ, ಭಾರತೀಯ ರಿಸರ್ವ್ ಬ್ಯಾಂಕ್‌ನ 'ಆದ್ಯತಾ ವಲಯ' ಸಾಲ ನೀತಿಯಿಂದಾಗಿ ವಿತರಿಸುತ್ತಿರುವ ಸಾಲದಲ್ಲಿ ಹೆಚ್ಚಳವಾಗುತ್ತಿದ್ದರೂ ಸಹಕಾರದ ಪಾಲು ಶೇ.20 ರಷ್ಟು ಮಾತ್ರ ಇರುತ್ತದೆ. ಆದರೂ ಶೇ. 80ಕ್ಕೂ ಮೀರಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲ ವಿತರಿಸುತ್ತಿದೆ. ಕರ್ನಾಟಕವೂ ಒಳಗೊಂಡಂತೆ ಅನೇಕ ರಾಜ್ಯಗಳಲ್ಲಿ 'ಶೂನ್ಯ' ಬಡ್ಡಿ ದರ ಅಥವ ರಿಯಾಯ್ತಿ ದರದಲ್ಲಿ ಸಾಲ ವಿತರಿಸಲಾಗುತ್ತಿದೆ. ರಾಜ್ಯ ಸರ್ಕಾರಗಳು ಬಡ್ಡಿ, ಉಳಿಕೆ ಬಡ್ಡಿ ಹಣವನ್ನು ರೈತರ ಪರವಾಗಿ ಭರಿಸುತ್ತಿವೆ. ಕೇಂದ್ರ ಸರ್ಕಾರ ಪ್ರಾಥಮಿಕ ಕೃಷಿ ಪತ್ತಿನ

ಸಹಕಾರ ಸಂಘಗಳ ಸಂಖ್ಯೆಯನ್ನು ಮೂರು ಲಕ್ಷಕ್ಕೆ ಏರಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದೆ. ಈ ಸಂಘಗಳನ್ನು 'ಬಹು ಸೇವಾ ಕೇಂದ್ರ' ಗಳಾಗಿ ಪರಿವರ್ತಿಸುವುದಕ್ಕೆ ಯೋಜನೆ ಅನುಷ್ಠಾನ (ನಬಾರ್ಡ್ ಮೂಲಕ) ಗೊಳಿಸಲಾಗುತ್ತಿದೆ.

ಇದಕ್ಕಾಗಿ ಕೇಂದ್ರ ಸರ್ಕಾರದ 'ಒಂದು ಲಕ್ಷ ಕೋಟಿ'ಯ ರೈತರ ಮೂಲಭೂತ ಸೌಕರ್ಯ ನಿಧಿಯನ್ನು ಬಳಸಲಾಗುತ್ತಿದೆ. ಸಾಂಸ್ಥಿಕ ಸುಧಾರಣೆ ಅಂಗವಾಗಿ ಕಂಪ್ಯೂಟರೀಕರಣ, ಸಾಮಾನ್ಯ ಲೆಕ್ಕ ಪದ್ಧತಿ ಅನುಷ್ಠಾನ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಕೋರ್ ಬ್ಯಾಂಕಿಂಗ್‌ನೊಡನೆ ಸಂಯೋಜನೆ, ಮೈಕ್ರೊ ಎ.ಟಿ.ಎಂ.ಗಳ ಸ್ಥಾಪನೆ.

**ಹೈನುಗಾರಿಕೆ ವಲಯ:** ಭಾರತ ಈಗ ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪನ್ನ ಮಾಡುವ ರಾಷ್ಟ್ರವಾಗಿ ರೂಪುಗೊಂಡಿದೆ. ಸ್ವಾತಂತ್ರ್ಯ ಬಂದ ಹೊಸ್ತಿಲಲ್ಲಿ ಒಬ್ಬ ಭಾರತೀಯ ಪ್ರಜೆಗೆ ಲಭ್ಯ ಹಾಲಿನ ಪ್ರಮಾಣ 110 ಮಿಲಿ. ಈಗ ಅದು 400 ಮಿಲಿ. ತಲುಪಿದೆ. ಇದರ ಶ್ರೇಯ ಭಾರತೀಯ ರೈತ ಕುಟುಂಬಗಳಿಗೆ ಅದರಲ್ಲೂ ರೈತ ಮಹಿಳೆಯರಿಗೆ ಸೇರುತ್ತದೆ. ಹಾಲಿನ ಉತ್ಪಾದನೆ, ಶೇಖರಣೆ, ಸಂಸ್ಕರಣೆ, ಮಾರಾಟ ಇದರಲ್ಲಿ ಯಶಸ್ಸು ಸಾಧನೆಗೆ ಕಾರಣ 'ಅಮುಲ್ ಮಾದರಿ' ಗ್ರಾಮೀಣ ಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳು, ಜಿಲ್ಲಾ ಒಕ್ಕೂಟಗಳು ಮತ್ತು ರಾಜ್ಯ ಸಹಕಾರ ಮಹಾಮಂಡಳ.ಈ ಶೃಂಗ ವ್ಯವಸ್ಥೆಯಲ್ಲಿನ ಯಶಸ್ಸಿಗೆ ಕಾರಣ, ಅತ್ಯುತ್ತಮ ನಾಯಕತ್ವ, ಬದ್ಧತೆ, ಪ್ರಾಮಾಣಿಕತೆ, ಪ್ರತಿ ಹಂತದಲ್ಲಿ ತನ್ನ ಕೆಲಸ ಕಾರ್ಯಗಳ ಬಗ್ಗೆ ವಿಂಗಡನೆ ಮತ್ತು ಸಾವಯವ ಸಂಬಂಧಗಳ ಗೌರವಿಸುವಿಕೆ ಮತ್ತು ಆಚರಣೆ. ಗುಜರಾತ್ ರಾಜ್ಯದಲ್ಲಿನ ಹಾಲಿನ ಯಥೇಚ್ಚ ಉತ್ಪಾದನೆನಾಡಿನ 'ಉಕ್ಕಿನ ಮನುಷ್ಯ' ಎಂದೇ ಖ್ಯಾತಿ ಹೊಂದಿದ ಡಾ। ಸರ್ದಾರ್ ವಲ್ಲಭಭಾಯಿ ಪಟೇಲರ ದೂರ ದೃಷ್ಟಿಯ ಫಲ, ಸಹಕಾರದ ಮೇಲಿನ ನಂಬಿಕೆ. ತ್ರಿಭುವನ್ ದಾಸ್ ಪಟೇಲರ ನಾಯಕತ್ವ, ವರ್ಗೀಸ್ ಕುರಿಯನ್ ರವರ ಬದ್ಧ ಶ್ರಮ, ತನ್ಮಯತೆ, ಬುದ್ಧಿವಂತಿಕೆ 'ಅಮುಲ್' ಯಶಸ್ಸಿಗೆ ಕಾರಣವಾಯಿತು. ಅಂದಿನ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ದೂರ ದೃಷ್ಟಿಯ ಫಲ ರಾಷ್ಟ್ರಾದ್ಯಂತ 'ಸಹಕಾರಿ' ಮಾದರಿಯಲ್ಲಿ ಹೈನುಗಾರಿಕೆ ಅಭಿವೃದ್ಧಿ ಹೊಂದಲು ಕಾರಣವಾಯಿತು. ಇದರಲ್ಲಿ ವರ್ಗೀಸ್ ಕುರಿಯನ್ ರವರ ಅದ್ವಿತೀಯ ನಾಯಕತ್ವ, ರಾಷ್ಟೀಯ ಹೈನು ಅಭಿವೃದ್ಧಿ ಮಂಡಳಿ ಮೂಲಕ ಕೈಗೊಂಡ ಹೈನು ಅಭಿವೃದ್ಧಿ ಯೋಜನೆಯಿಂದ ಇದು ಕಾರ್ಯ ಸಾಧ್ಯವಾಯಿತು. ಆದುದರಿಂದಲೇ ಅವರನ್ನು ಶ್ವೇತ ಕ್ರಾಂತಿಯ ಪಿತಾಮಹ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಅದರ ಯಶಸ್ವಿ ಅನುಷ್ಠಾನದಿಂದ, 'ನಂದಿನಿ' ಒಂದು ಬ್ರಾಂಡ್ ಆಗುವುದಕ್ಕೆ ಕಾರಣವಾಗಿದೆ. ರಾಷ್ಟ್ರದಾದ್ಯಂತ ಹೆಗ್ಗಳಿಕೆಗೆ ಪಾತ್ರವಾಗಿರುವ 'ಅಮುಲ್' ಮತ್ತು ಕರ್ನಾಟಕದ 'ನಂದಿನಿ' ಹೊರತುಪಡಿಸಿದರೆ ಇತರೆ ರಾಜ್ಯಗಳಲ್ಲಿ 'ಸಹಕಾರ ಮಾದರಿ' ಯಶಸ್ಸು ಕಂಡದ್ದು ಈಗ ಕುಸಿತ ಕಂಡಿದೆ. ಒಟ್ಟಾರೆ ಮಾರುಕಟ್ಟೆಯಲ್ಲಿ ಸಹಕಾರದ ಪಾಲು ಶೇ. 20. ಖಾಸಗಿ ವಲಯ ಸ್ಪರ್ಧೆ ಒಡ್ಡುವುದು ಅಷ್ಟೇ ಅಲ್ಲ, ವ್ಯವಸ್ಥೆಯನ್ನು ಹಾಳುಗೆಡುವಲು ಪ್ರಯತ್ನಿಸುತ್ತಿದೆ.

ಕರ್ನಾಟಕದಲ್ಲಿ ಪ್ರತಿ ಲೀಟರು ಹಾಲಿಗೆ ರೈತರಿಗೆ ರೂ 5/– ಪ್ರೋತ್ಸಾಹ ಧನ ಸರ್ಕಾರ ರೈತರಿಗೆ ನೀಡುತ್ತ ಇದೆ. ಶಾಲಾ ಮಕ್ಕಳಿಗೆ 'ಕ್ಷೀರ ಭಾಗ್ಯ' ಯೋಜನೆ ಅನುಷ್ಠಾನ ಗೊಳಿಸುತ್ತಿದ್ದು ಅಗತ್ಯ ಹಾಲಿನ ಪುಡಿಯನ್ನು ಕೆ.ಎಂ.ಎಫ್ (ಹಾಲು ಮಹಾಮಂಡಳಿ) ಇಂದ ಖರೀದಿಸುತ್ತಿದೆ. ಈ ಯೋಜನೆಗಳು ಕರ್ನಾಟಕದ 'ನಂದಿನಿ' ಯನ್ನು ಬಲಪಡಿಸಿದೆ. 'ಅಮುಲ್' ಮತ್ತು 'ನಂದಿನಿ' ವಿಲೀನದ ಬಗ್ಗೆ ವಿಷಯಗಳು ಮುನ್ನೆಲೆಗೆ ಬಂದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

**ದೀರ್ಘಾವಧಿ ಸಾಲ ಕ್ಷೇತ್ರ:** ಎರಡು ಹಂತದ ವ್ಯವಸ್ಥೆ ಇದಾಗಿದ್ದು ಹಲವು ರಾಜ್ಯಗಳಲ್ಲಿ ಅಸ್ತಿತ್ವ ಇಲ್ಲದಾಗಿದೆ. ಅಲ್ಪಾವಧಿ ಕ್ಷೇತ್ರದೊಡನೆ ವಿಲೀನಗೊಂಡಿದೆ. ಕೇವಲ 18 ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದರೂ ನಬಾರ್ಡ್ ಪ್ರವರ್ಧನ ಸೌಲಭ್ಯದೊಡನೆ ಅತಿ ಕಡಿಮೆ ಮಟ್ಟದಲ್ಲಿ ಸಾಲ ವಿತರಣೆಯಾಗುತ್ತಿದೆ. ಪ್ರಾಥಮಿಕ ಹಂತದಲ್ಲಿ ವೈವಿಧ್ಯಮಯ ಸಾಲ ವಿತರಿಸುವ ಮೂಲಕ ಕೆಲವು ಸಂಸ್ಥೆಗಳು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ.

**ಸಹಕಾರ ಸಕ್ಕರೆ ಕಾರ್ಖಾನೆಗಳು:** ಕರ್ನಾಟಕದಲ್ಲಿ ಕೇವಲ 2–3 ಸಹಕಾರ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಇತರೆ ಖಾಸಗಿಕರಣಗೊಂಡಿವೆ. ಇದೇ ಸ್ಥಿತಿ ಇತರೆ ರಾಜ್ಯಗಳಲ್ಲಿಯೂ ಇದ್ದು, ಕೇವಲ ಗುಜರಾತ್ ರಾಜ್ಯದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ನೇಕಾರರ ಸಹಕಾರ ಸಂಘಗಳು:** ತಮಿಳುನಾಡು, ಆಂಧ್ರಪ್ರದೇಶ (ಅವಿಭಾಜ್ಯ) ಹೊರತುಪಡಿಸಿ ಯಶಸ್ವಿಯಾಗಿ ಕಾರ್ಯನಿರ್ವಹಸುತ್ತಿಲ್ಲ.

**ಮೀನುಗಾರಿಕೆ ಕ್ಷೇತ್ರ:** ಒಳನಾಡು ಮತ್ತು ಕರಾವಳಿ ಭಾಗದಲ್ಲಿ ಈ ಸಹಕಾರ ಸಂಘಗಳು ಮತ್ತು ಇದರ ಒಕ್ಕೂಟಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಬೆಂಬಲ, ಯೋಜನೆಗಳ ಅನುಷ್ಠಾನ ಮತ್ತು ನೀತಿ ಇವುಗಳಿಗೆ ಪೂರವಾಗಿವೆ.

ಗ್ರಾಹಕರ, ಕೈಗಾರಿಕೆ, ಗೃಹಕೈಗಾರಿಕೆ, ಗೃಹ ನಿರ್ಮಾಣ, ವಲಯಗಳು ಪೂರ್ಣ ಇಲ್ಲವಾಗುತ್ತಿವೆ. ಕೃಷಿ ಮಾರುಕಟ್ಟೆ ವಲಯದಲ್ಲಿ ತಾಲ್ಲೂಕು ಸಂಸ್ಥೆಗಳು ಕೆಲವು ಮಾತ್ರ ಮಾರುಕಟ್ಟೆ ಚಟುವಟಿಕೆ ನಡೆಸುತ್ತವೆ.

ರಾಜ್ಯ ಮಹಾ ಮಂಡಳಗಳು ಕೆಲವು ರಾಜ್ಯಗಳಲ್ಲಿ ಮಾರುಕಟ್ಟೆ, ರಸಗೊಬ್ಬರ ಮಾರಾಟದಲ್ಲಿ ತೊಡಗಿಸಿಕೊಂಡಿವೆ. ರಾಷ್ಟ್ರ ಮಟ್ಟದಲ್ಲಿ 'ನ್ಯಾಫೆಡ್' ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಪರವಾಗಿ ಕನಿಷ್ಟ ಬೆಂಬಲ ಯೋಜನೆ ಖರೀದಿ, ಆಮದು ಮತ್ತು ರಫ್ತು ವಹಿವಾಟು ನಡೆಸುತ್ತಿದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ರಾಜ್ಯ ಮಟ್ಟದಲ್ಲಿ ಸಾವಯವ ಉತ್ಪನ್ನ ಮಾರಾಟ ಮಾಡುವ ಮತ್ತು ಆಮದು ರಫ್ತು ಉದ್ದೇಶವುಳ್ಳ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಉದ್ದೇಶಿಸಿರುವುದಾಗಿ ತಿಳಿಸಿದೆ.

**ಕೃಷಿಯೇತರ ಪತ್ತು ವಲಯ:** ಪಟ್ಟಣ ಸಹಕಾರ ಬ್ಯಾಂಕ್‌ಗಳು ಅತ್ಯುತ್ತಮವಾಗಿ ಇತರೆ ವಲಯಗಳಿಗೆ ಸ್ಪರ್ಧಾತ್ಮಕವಾಗಿ ಎಲ್ಲ ಸೇವೆಗಳನ್ನು ಒದಗಿಸುವ ಮುಖಾಂತರ ತಮ್ಮ ಛಾಪು ಮೂಡಿಸಿವೆ.

ಅದರಲ್ಲಿಯೂ ಗುಜರಾತ್, ಮಹಾರಾಷ್ಟ್ರ, ಕರ್ನಾಟಕದಲ್ಲಿ ಮಂಚೂಣಿಯಲ್ಲಿವೆ. ಪಂಜಾಬ್ ಅಂಡ್ ಮಹಾರಾಷ್ಟ್ರ ಕೋ–ಆಪರೇಟಿವ್ ಬ್ಯಾಂಕ್, ಬೆಂಗಳೂರಿನ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿನ 'ಹಗರಣ'ಗಳು ನಾಗರೀಕರನ್ನು ಬೆಚ್ಚಿ ಬೀಳಿಸಿವೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಆಗಿ ಆರ್.ಬಿ.ಐ. ಹೆಚ್ಚಿನ ನಿಯಂತ್ರಣ ಹೊಂದುವದಕ್ಕೆ ಕಾರಣವಾಗಿದೆ.

ಅನೇಕ ನೌಕರರ ಪತ್ತಿನ ಸಹಕಾರಿ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಿವೆ. ಹಾಗೆಯೇ, ಇತರೆ ಪತ್ತಿನ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಿವೆ. ಕರ್ನಾಟಕದಲ್ಲಿ ಸೌಹಾರ್ದ ಕಾಯ್ದೆ ಜಾರಿಗೆ ಬಂದು ಅದರಂತೆ ಅದು ಕೂಡ ಒಂದು 'ಆಂದೋಲನ'ದ ಸ್ವರೂಪವನ್ನು ಪಡೆದಿದೆ. 5000ಕ್ಕೂ ಮೀರಿ ಸಹಕಾರ ಸಂಘಗಳಾಗಿದ್ದು ಬಹುತೇಕ ಪತ್ತಿನ ಸಹಕಾರ ಸಂಘಗಳೇ ಆಗಿವೆ. ಅವರದೇ ಮಹಾ ಮಂಡಳವಾದ 'ಸಂಯುಕ್ತ ಸಹಕಾರಿ' ಶಾಸನಬದ್ಧ ಅಧಿಕಾರದೊಡನೆ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದೆ.

'ಸಣ್ಣದು ಸುಂದರ' ಎಂಬ ಪರಿಕಲ್ಪನೆಯಲ್ಲಿ ಆರಂಭಗೊಂಡ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಸೇವೆ, ಸೌಲಭ್ಯ ಒದಗಿಸಲು ತಮ್ಮ ಸಂಪನ್ಮೂಲಗಳನ್ನು ವೃದ್ಧಿಗೊಳಿಸಲು ಅನುವಾಗಲು ತಮ್ಮದೇ ಆದ 'ಸಹಕಾರ ಒಕ್ಕೂಟ ವ್ಯವಸ್ಥೆ' ನಿರ್ಮಾಣಗೊಂಡಿದೆ. ಕೆಲವೇ ವಲಯಗಳಲ್ಲಿ ಈ ಒಕ್ಕೂಟ ವ್ಯವಸ್ಥೆ ಉದ್ದೇಶಗಳನ್ನು ಪೂರೈಸಿ ಯಶಸ್ಸಿ ಕಾರ್ಯಾಚರಣೆ ನಡೆಸಿವೆ. ಉದಾ: ಅಲ್ಪಾವಧಿ ಕೃಷಿ ಪತ್ತು ಹೈನುಗಾರಿಕೆ. ಇತರೆ ವಲಯಗಳಲ್ಲಿ ಉನ್ನತ ಹಂತಕ್ಕೆ ಪ್ರತಿನಿಧಿಸಲು ಮಾತ್ರ

ಕೆಳಹಂತದ ವ್ಯವಸ್ಥೆ ಇದ್ದು ಕಾರ್ಯಾಚರಣೆ ಸಂಬಂಧಗಳು ಸ್ಥಗಿತಗೊಂಡಿವೆ. ಕೆಲವು ವಲಯಗಳಲ್ಲಿ ಮೇಲ್‌ಸ್ಥರದ ಸಂಸ್ಥೆಗಳು ಇಲ್ಲವಾಗಿದೆ. ಈ ಹಂತದಲ್ಲಿ ಬದಲಾಗುತ್ತಿರುವ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಸನ್ನಿವೇಶಗಳಲ್ಲಿ ಅವಶ್ಯಕತೆಗಳನುಸಾರ 'ಸಹಕಾರ ಚಳುವಳಿ' ಯದಿಕ್ಕು ದೆಸೆಎತ್ತಕಡೆ ಸಾಗುತ್ತಿದೆ, ಸಾಗಬೇಕಿದೆ ಈ ಸಂಕ್ರಮಣದ ಕಾಲ ಘಟ್ಟದಲ್ಲಿ 'ಸಹಕಾರ ಚಳುವಳಿ'ಯ ನಾಯಕತ್ವ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯನಮ್ಮ ರಾಷ್ಟ್ರದಲ್ಲಿ 'ನಾಯಕತ್ವ' ಚಾರಿತ್ರಾತ್ಮಕವಾಗಿ ಸರ್ಕಾರದಲ್ಲಿಯೇ ಇದೆಯೆ  ರಾಜಕೀಯ ತಳುಕು ಹಾಕಿಕೊಂಡೆ ಮುಂದುವರಿದಿದೆಯೇ? ಎಂಬಮೂಲ ಭೂತ ಪ್ರಶ್ನೆಗಳುಕಾಡುತ್ತವೆ.

ಈ ಮೇಲಿನ ಹಿನ್ನೆಲೆಯಲ್ಲಿ ನೋಡಿದಾಗ 90ರ ದಶಕದಿಂದೀಚೆಗೆ ಅನೇಕ ಬದಲಾವಣೆಗಳನ್ನು ಕಾಣುತ್ತಲಿದ್ದೇವೆ. ಸಂವಿಧಾನದಲ್ಲಿ ಏಳನೇ ಷೆಡ್ಯೂಲ್‌ನಲ್ಲಿ ನಮೂದನೆ 32 ರಲ್ಲಿ ರಾಜ್ಯ ವಿಷಯವಾಗಿರುತ್ತದೆ.

ಏಳನೇ ಷೆಡ್ಯೂಲ್‌ನ ನಮೂದನೆ 44 ರಲ್ಲಿ ಒಕ್ಕೂಟದ ವಿಷಯವಾಗಿ ಪರಿಗಣಿಸಿದೆ. ಇದರಿಂದ ಆಯಾ ರಾಜ್ಯಗಳು ತಮ್ಮದೇ ಆದಸಹಕಾರ ಕಾಯ್ದೆ, ಕಾನೂನು ಹೊಂದಿವೆ. ಕೇಂದ್ರ (ಒಕ್ಕೂಟ) ಸರ್ಕಾರ ಬಹುರಾಜ್ಯ ಸಹಕಾರ ಕಾಯ್ದೆ ಕಾನೂನು ಹೊಂದಿದೆ. ಒಟ್ಟಾರೆ ಭಾರತದ ಆರ್ಥಿಕ ಬೆಳವಣಿಗೆಯ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ. 'ಸಹಕಾರ'ವೂ ಒಟ್ಟಾರೆ ಆರ್ಥಿಕತೆಯ ಭಾಗವಾಗಿರುತ್ತದೆ. ಈ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಅನೇಕ ಉಪಕ್ರಮಗಳನ್ನು ಕಾಲ ಕಾಲಕ್ಕೆ ತೆಗೆದುಕೊಳ್ಳುತ್ತಾ ಬರುತ್ತಿದೆ. 1954 ರಲ್ಲಿ ಮಾದರಿ ಕಾಯ್ದೆ ರಚನೆ, ಅಳವಡಿಸಿಕೊಳ್ಳಲು ರಾಜ್ಯಗಳಿಗೆ ಸೂಚನೆ, ಎ.ಡಿ. ಗೊರ್ವಲಾ ಸಮಿತಿ ಶಿಫಾರಸ್ಸುಗಳ ಅನುಷ್ಠಾನದಿಂದ ಇತರೆ ಅನೇಕ ಸಮಿತಿಗಳ ರಚನೆ ಅನುಷ್ಠಾನ, ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರಕ್ಕೆ ಬೆಂಬಲ, ನಬಾರ್ಡ್, ಎನ್‌ಸಿಡಿಸಿ ಸ್ಥಾಪನೆ, ಅವುಗಳ ಮೂಲಕ ಯೋಜನೆಗಳ ಅನುಷ್ಠಾನ. 90ರ ದಶಕದಿಂದ ಈಚೆಗೆ ಸಹಕಾರವು ಸರ್ಕಾರದ ಬೆಂಬಲವಿಲ್ಲದೆ ಸ್ವಾವಲಂಬನೆ ಸಾಧಿಸಬೇಕೆಂಬ ದೋರಣೆ ತಾಳಲಾಯಿತು. ರಾಜ್ಯ ಸರ್ಕಾರಗಳು ಸಹಕಾರ ಸಂಘಗಳ ಮೇಲಿನತಮ್ಮ ಹಿಡಿತ ನಿಯಂತ್ರಣ ಸಡಿಲಗೊಳಿಸುವಂತೆ ಕೇಂದ್ರದಿಂದ ನಿರ್ದೇಶಿಸಲಾಯಿತು. ಇದರ ಪಾಲನೆ ಆಗಲಿಲ್ಲ. ಆಗ ಪರ್ಯಾಯ ಕಾಯ್ದೆ ಜಾರಿತರುವಂತೆ ಸಹಕಾರ ಸಂಘಗಳಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ಇರುವಂತಹ (ಅರ್ಧನಾರೀಶ್ವರನ್ ಸಮಿತಿ) ಮಾದರಿ ಕಾಯ್ದೆರಚಿಸಿ ರಾಜ್ಯಗಳಿಗೆ ನಿರ್ದೇಶಿಸಲಾಯಿತು. ಆಂಧ್ರ ಪ್ರದೇಶ (ಅವಿಭಾಜ್ಯ) ಆದರ್ಶ ಸಹಕಾರ ಕಾಯ್ದೆಜಾರಿಗೆ ತಂದ ಮೊದಲ ರಾಜ್ಯವಾಯಿತು. ಕರ್ನಾಟಕದಲ್ಲಿ ತಡವಾಗಿ1997ರಲ್ಲಿ, ಸೌಹಾರ್ದಸಹಕಾರ ಕಾಯ್ದೆ ಜಾರಿಗೆ ಬಂತು. ನಿಯಮ 2004 ರಲ್ಲಿ ರಚನೆಯಾಯಿತು. ಕೇವಲ 08 ರಾಜ್ಯಗಳಲ್ಲಿ ಮಾತ್ರ ಇದನ್ನು ಜಾರಿಗೆ ತರಲಾಯಿತು. ಮುಂದೆ97ನೇ ಸಂವಿಧಾನ ತಿದ್ದುಪಡಿ 13 ಜನವರಿ 2012 ರಿಂದ ಜಾರಿಗೆ ಬಂದುಅದರಂತೆ ಒಂದು ವರ್ಷದ ಒಳಗೆರಾಜ್ಯ ಸರ್ಕಾರಗಳುತಮ್ಮ ಕಾಯ್ದೆ ತಿದ್ದುಪಡಿ ಮಾಡುವಂತೆ ಸೂಚಿಸಲಾಗಿತ್ತು. ಇದುವೇ ಕರ್ನಾಟಕದಲ್ಲಿ ಕಾಯ್ದೆ 1959 ಕ್ಕೆ ಸಮಗ್ರ ತಿದ್ದುಪಡಿಗೆ ಕಾರಣವಾಯಿತು. 97ನೇ ಸಂವಿಧಾನ ತಿದ್ದುಪಡಿಯ ಪ್ರಮುಖ ಅಂಶಗಳೆಂದರೆ 'ಅನುಚ್ಛೇದ 19' ರಲ್ಲಿ ಸಹಕಾರ ಸಂಘ ಸ್ಥಾಪನೆ ಭಾರತೀಯ ಪ್ರಜೆಯ ಮೂಲಭೂತ ಹಕ್ಕಾಗಿ ಪರಿಗಣನೆಗೆ ತೆಗೆದುಕೊಂಡಿರುವದು. ಅನುಚ್ಛೇದ 43B ಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ಕಾಯ್ದೆಯಲ್ಲಿ ಪಾಲಿಸಬೇಕಾದ ನೀತಿಯನ್ನು ತಿಳಿಸಿರುವುದು, ಕಾಯ್ದೆಯು ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆಯನ್ನು ಪ್ರೋತ್ಸಾಹಿಸುವುದು ಎಂದಿದೆ. ಈ ಅಂಶಗಳಿಗೆ ಪೂರಕವಾಗಿ 243 ZH ನಿಂದ243 ZT ವರೆಗೆ ಕಾಯ್ದೆಯಲ್ಲಿ ಅಳವಡಿಸಬೇಕಾದ ಅಂಶಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಈ ತಿದ್ದುಪಡಿ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಲಯವು 23ರ ಜುಲೈ 2021 ರಂದು ರಾಜ್ಯಗಳಿಗೆಅನುಚ್ಛೇದ 19 ಮತ್ತು 43B ಅನ್ವಯವಾಗುತ್ತದೆ ಆದರೆ 243 ZH ನಿಂದ ZT ವರೆಗಿನ ತಿದ್ದುಪಡಿಗಳು ಅನ್ವಯವಾಗುವುದಿಲ್ಲ ಎಂಬ ತೀರ್ಪು ನೀಡಿದೆ. ಆದರೆ ಬಹುರಾಜ್ಯ ಕಾಯ್ದೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ

ಅನ್ಯಯವಾಗುತ್ತದೆ ಎಂದು ತೀರ್ಪು ನೀಡಿದೆ.

ಕೇಂದ್ರ ಸರಕಾರದಲ್ಲಿ ಇದುವರೆವಿಗೂ 'ಸಹಕಾರ' ವಿಭಾಗ ಕೃಷಿ ಇಲಾಖೆಯಿಂದ ನಿರ್ವಹಿಸುತ್ತಿತ್ತು. ಈಗ ಪ್ರತ್ಯೇಕ ಸಚಿವಾಲಯ ರಚಿಸಿದ್ದು ಪ್ರತ್ಯೇಕ ಸಚಿವರು ನೇಮಕ ಗೊಂಡಿರುತ್ತಾರೆ. ಬಹುರಾಜ್ಯ ಕಾಯ್ದೆಯಲ್ಲಿ ಸುಮಾರು 1500 ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಲಾಗಿದೆ. ಇತ್ತೀಚೆಗೆ ಇದರ ಕಾಯ್ದೆಯನ್ನು ತಿದ್ದುಪಡಿಗೆ ಒಳಪಡಿಸಲಾಗಿದೆ. ಬಹಳ ಅಂಶಗಳು ಸರ್ಕಾರದ ನಿಯಂತ್ರಣ ಹೆಚ್ಚಳಗೊಳಿಸಿರುವಂತೆ ಗೋಚರವಾಗುತ್ತಿದೆ. ಈ ತಿದ್ದುಪಡಿಗಳ ಪರಿಶೀಲನೆಗೆ ಲೋಕಸಭಾ ಉಪಸಮಿತಿಗೆ ಒಪ್ಪಿಸಲಾಗಿದೆ. ಆದುದರಿಂದ ಇನ್ನೂ ಜಾರಿಗೆ ಬಂದಿರುವುದಿಲ್ಲ.

ಈ ಬೆಳವಣಿಗೆಗಳನ್ನು ಗಮನಿಸಿದಲ್ಲಿ ಭಾರತದಲ್ಲಿ ಸಹಕಾರ ಚಳುವಳಿ ಇನ್ನೂ ಜನರ ಚಳುವಳಿಯಾಗಿಲ್ಲವೇ ಎಂಬ ಅನುಮಾನಗಳು ಉಂಟಾಗುತ್ತದೆ. ನೂತನ ಆರ್ಥಿಕ ಪರಿಸರದಲ್ಲಿ ಸಹಕಾರ ವಲಯಕ್ಕೆ ಸವಾಲು ನೂರಾರು. ಅದರಲ್ಲಿ ಪ್ರಮುಖ ಸವಾಲು 'ನಾಯಕತ್ವ'. ಸಹಕಾರ ಸಂಘ ಒಂದು ಸಂಘಟನೆ. ಸಂಘಟನೆಯ ಉದ್ದೇಶಗಳ ಅರಿವು, ಅನುಸರಿಸಬೇಕಾದ ದಾರಿ ಬಗ್ಗೆ ಸ್ಪಷ್ಟ ನಿಲುವು ಹೊಂದಿರಬೇಕು.

ನೂತನ ಆರ್ಥಿಕತೆಯಲ್ಲಿ ಅಸಂಘಟಿತ ವಲಯ, ಕಾರ್ಮಿಕರು, ಕೂಲಿಗಳು, ವಸ್ತು ಸಾಗಣಿದಾರರು, ಮನೆಗಳಿಗೆ ಆಹಾರ, ವಸ್ತು ತಲುಪಿಸುತ್ತಿರುವ ಯುವಕರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಗೃಹ ಕೃತ್ಯ ನಿರ್ವಹಣೆಮಾಡುವವರು, 'ಮೇಲಿನಿಂದ ಕೆಳಗೆ ಆರ್ಥಿಕ ಹರಿವು' (trickle down economy) ನಮ್ಮದಾಗುತ್ತಿರುವುದರಿಂದ ಬಡ, ಅತಿ ಬಡವ ಸಮಾಜ ನಿರ್ಮಾಣವಾಗುತ್ತಿದೆ. ಈ ಅಸಂಘಟಿತ ವಲಯದ ಆಶಾಕಿರಣವೆಂದರೆ 'ಸಹಕಾರ ಚಳುವಳಿ'. ಇಲ್ಲಿನ ಬಹುದೊಡ್ಡ ಕೊರತೆ ನಾಯಕತ್ವ. ಇಂದಿನ ಅವಶ್ಯಕತೆ ಸಹಕಾರ ಚಳುವಳಿ ಜನರ ಚಳುವಳಿಯಾಗುವ ಅವಶ್ಯಕತೆ. ಸರ್ಕಾರ 'ಕೃಪಾ ಪೋಷಿತ' ದಿನಗಳು ದೂರವಾಗಿವೆ. 'ಉಳಿಯಿರಿ ಅಥವ ಅಳಿಯಿರಿ' (either flourish or perish) ಎಂಬಂತಹ ದಿನಮಾನಗಳಲ್ಲಿ ನಾವು ಇದ್ದೇವೆ. ಈ ದಿನಗಳ ಚಟುವಟಿಕೆಗಳ, ಅವಶ್ಯಕತೆಗಳನುಸಾರ, ವಿನೂತನ ಉದ್ದೇಶಗಳುಳ್ಳ, ಸಹಕಾರ ಸಂಘಗಳ ರಚನೆಗೆ ವಿಪುಲ ಅವಕಾಶಗಳಿವೆ. ಉತ್ಪಾದನೆ, ಸೇವಾ, ಮಾರುಕಟ್ಟೆ ವಲಯಗಳಲ್ಲಿ ಸಹಕಾರದ ಮೂಲಕ ಸ್ವಾವಲಂಭನೆ ಸಾಧ್ಯ. ಸರ್ಕಾರದ ಯಾವುದೇ ಉಪಕ್ರಮಗಳು ಜನರ ತೊಡಗಿಸುವಿಕೆ ಇಲ್ಲದೇ ಯಶಸ್ವಿಯಾಗುವುದಲ್ಲ ಎಂಬುವುದು ಅನುಭವ ವೇದ್ಯ.

**"ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳುವಳಿಗಳನ್ನು ಜೀವಂತವಾಗಿ ಇಟ್ಟಿರುವುದು ಅತ್ಯಗತ್ಯ"**

**– ಕುವೆಂಪು**

*******************************************************************************************

# 7 ಸರ್ವರನ್ನೊಳಗೊಂಡ ನ್ಯಾಯ ಸಮ್ಮತ ಬೆಳವಣಿಗೆ – ಸಹಕಾರದ ಪಾತ್ರ

ಸಾರ್ವಜನಿಕ, ಖಾಸಗಿ, ಸಹಕಾರ ಎಲ್ಲಾ ವಲಯಗಳು ಪೂರಕವಾಗಿ ಮತ್ತು ಹಲವೆಡೆ ಸ್ಪರ್ಧಾತ್ಮಕವಾಗಿ ತಮ್ಮ ಕರ್ತವ್ಯಗಳನ್ನು ಗರಿಷ್ಠ ಮಟ್ಟದಲ್ಲಿ ಸಾಧನೆ ಮಾಡಿದಾಗ ಮಾತ್ರ ರಾಷ್ಟ್ರ ನಿರ್ಮಾಣ ಕಾರ್ಯ ಯಶಸ್ವಿಯಾಗುತ್ತದೆ. ಉಳ್ಳವರ ಮತ್ತು ಇಲ್ಲದವರ ಅಂತರ ಕಡಿಮೆ ಮಾಡಲು ಸಾಧ್ಯವಾಗುತ್ತದೆ.

'ಸಹಕಾರ'ದ ಹುಟ್ಟು ಮತ್ತು ಬೆಳವಣಿಗೆಯ ಮೂಲ ಉದ್ದೇಶವೇ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು'. ಈ ಉದ್ದೇಶ ಸಫಲವಾಗಿದೆಯೇ? ಎಂದು ಆತ್ಮಾವಲೋಕನ ಮಾಡಿಕೊಂಡಾಗ ಕಂಡು ಬರುವ ಉತ್ತರ ಅರ್ಧಸತ್ಯ

ಮಾತ್ರ. ಈ ದಿಶೆಯಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾಗ್ಯೂ ಇನ್ನೂ ಸಾಧನೆ ಮಾಡಬೇಕಾದ್ದು ಬಹಳಷ್ಟು ಇದೆ ಎಂಬುದರಲ್ಲಿ ಎರಡು ಮಾತಿಲ್ಲ.

**"ಇವನಾರವ, ಇವನಾರವ, ಇವನಾರವನೆಂದಿಸದಿರಯ್ಯಾ ಇವ ನಮ್ಮವ ಇವನಮ್ಮವನೆಂದೆನಿಸಯ್ಯಾ"**

ಎಂಬ ಬಸವಣ್ಣನವರ ಸದಾಶಯ ಕೂಡ ಇದೇ ಆಗಿದೆ. ಸಹಕಾರ ಸಂಘದ ಧ್ಯೆಯೋದ್ದೇಶಗಳ ಗುರಿ ತಲುಪಲು ಸದಸ್ಯರ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗಬೇಕಾದರೆ ಎಲ್ಲಾ ಸದಸ್ಯರು ಸಂಘದ ಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಅದೇ ರೀತಿಯಲ್ಲಿ ಒಂದು ರಾಷ್ಟ್ರದ ಬೆಳವಣಿಗೆಯಲ್ಲಿ ಕೂಡ ರಾಷ್ಟ್ರದ ಎಲ್ಲ ವರ್ಗದ ಜನರೂ ಪಾಲ್ಗೊಂಡಾಗ ಮಾತ್ರ ಪ್ರಗತಿ ಸಾಧ್ಯ ಭಾರತ ಸ್ವಾತಂತ್ರ ಹೊಂದಿ ಅರವತ್ತು ವರ್ಷಗಳು ಮೀರಿದ್ದು ಸ್ವಾತಂತ್ರ್ಯ ನಂತರದ ಭಾರತದ ಬೆಳವಣಿಗೆಯನ್ನು ಅವಲೋಕಿಸಿದಾಗ ಅದರಲ್ಲೂ ಖಾಸಗೀಕರಣ, ಉದಾರೀಕರಣ ಬೆಳೆದಿದೆ.

ಜಾಗತೀಕರಣದ ಪರಿಸರದಲ್ಲಿ ಮತ್ತು ನಗರ ಭಾರತದ ದೃವೀಕರಣವನ್ನು ಕಾಣುತ್ತಲಿದ್ದೇವೆ. ನಗರ ಭಾರತದೆಡೆಗೆ ಗ್ರಾಮೀಣ ಭಾರತದ ಜನಸಂಖ್ಯೆಯ ವಲಸೆ ಜಾಸ್ತಿಯಾಗುತ್ತಿದೆ. ಗ್ರಾಮೀಣ ಭಾರತದೆಡೆಗೆ ಒಲವು ಕಡಿಮೆಯಾಗುತ್ತಿದೆ. ಪರಿಸ್ಥಿತಿ ಹೀಗಿದ್ದಾಗ್ಯೂ ಈ ಕೆಳಕಂಡ ಕೆಲವು ಅಂಕಿ ಅಂಶಗಳನ್ನು 'ಬೆಳವಣಿಗೆ'ಯಲ್ಲಿ ಆಗಬಹುದಾದ ಆಘಾತಗಳನ್ನು, ಅನಾಹುತಗಳನ್ನು, ತಪ್ಪುಗಳನ್ನು ಸರಿಪಡಿಸಲು ದಾರಿ ದೀಪವಾಗುತ್ತದೆ.

ವಿಶ್ವಜನಸಂಖ್ಯೆ ಶೇ 12 ಭಾರತದ ಗ್ರಾಮೀಣ ಜನಸಂಖ್ಯೆಯಾಗಿರುತ್ತದೆ. 800 ಮಿಲಿಯನ್. ಈ ಜನಸಂಖ್ಯೆಯು ಕೃಷಿ, ಕೃಷಿ ಪೂರಕ ಮತ್ತು ಕೃಷಿ ಆಧಾರಿತ ಆರ್ಥಿಕ ಅವಲಂಬಿಯಾಗಿರುತ್ತದೆ. ಇದರಲ್ಲಿ ಮೂರನೇ ಒಂದು ಭಾಗಕ್ಕೂ ಮೀರಿ ಬಡತನ ರೇಖೆಗಿಂತ ಕಡಿಮೆ ಆದಾಯ ಉಳ್ಳವರಾಗಿದ್ದಾರೆ.

- ಭಾರತದ ಆರ್ಥಿಕ ಬೆಳವಣಿಗೆಯ ದರ 2005–06, 2007–08 ರಲ್ಲಿ ಕ್ರಮವಾಗಿ ಶೇ. 5.8 ಮತ್ತು 9.00, 2008–09 ಶೇ 6.7 ಮುಂದಕ್ಕೆ 9–10, 10–11 ರಲ್ಲಿ ಕ್ರಮವಾಗಿ 8.00 ಮತ್ತು 8.5 ಆದದ್ದು ಸಮಾಧಾನ ತಂದಿದೆ.
- 1990–91 ರಲ್ಲಿ ಒಟ್ಟಾರೆ ಜಿ.ಡಿ.ಪಿ ಕೃಷಿಯ ಪಾಲು ಶೇ. 30 ಇದ್ದದ್ದು 2011–12 ಕ್ಕೆ ಕೇವಲ 14.5 ಇಳಿದಿರುವುದು ಕಳವಳಕಾರಿಯಾಗಿದೆ.
- 89.3 ದಶಲಕ್ಷ (ಮಿಲಿಯನ್) ಗ್ರಾಮೀಣ ಕುಟುಂಬಗಳಲ್ಲಿ 45.9 ದಶಲಕ್ಷ (ಮಿಲಿಯನ್) ಕುಟುಂಬಗಳಿಗೆ ಸಾಂಸ್ಥಿಕ ವಾಗಿ ಹಣಕಾಸಿನ ಸೌಲಭ್ಯ ದೊರೆಯುತ್ತಿಲ್ಲ.
- ಭಾರತದ ಒಟ್ಟಾರೆ ರೈತ ಕುಟುಂಬಗಳಲ್ಲಿ ಶೇ. 27 ಮಾತ್ರ ಸಾಂಸ್ಥಿಕವಾಗಿ ಸಾಲ ಪಡೆಯಲು ಸಾಧ್ಯವಾಗಿದೆ. ಅಂದರೆ ಶೇ.73 ರೈತ ಕುಟುಂಬಗಳು ಸಾಂಸ್ಥಿಕ ಮೂಲಗಳಿಂದ ಸಾಲ ಪಡೆಯಲಾಗಿಲ್ಲ.
- ಒಟ್ಟು ರೈತ ಕುಟುಂಬಗಳಲ್ಲಿ ಶೇ. 66 ಭಾಗ ಸಣ್ಣ ಮತ್ತು ಅತಿ ಸಣ್ಣ ರೈತರಾಗಿರುತ್ತಾರೆ. ಇವರಲ್ಲಿ ಶೆ. 45 ಭಾಗ ಮಾತ್ರ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಮೂಲಗಳಿಂದ ಸಾಲ ಸೌಲಭ್ಯ ಪಡೆಯುತ್ತಿದ್ದಾರೆ.

ಭಾರತದ ಸಂವಿಧಾನ ಭಾರತದ ಪ್ರತಿಯೊಬ್ಬ ಪ್ರಜೆಯು ಸ್ವತಂತ್ರವಾಗಿ ಬದುಕಲು ಅವಕಾಶ ಮಾಡಿಕೊಟ್ಟಿದೆ. ಭಾರತ ರಾಷ್ಟ್ರವು ಶೋಷಣೆ ಮುಕ್ತ ಸಮಾಜ ಮತ್ತು ಆರ್ಥಿಕ ಸಬಲತೆಯ ಧ್ಯೆಯ ಹೊಂದಿರುತ್ತದೆ. ಆದರೆ ಈ ಮೇಲಿನ ಅಂಕಿ ಅಂಶಗಳು ಕಳವಳಕಾರಿಯಾಗಿವೆ. ಸರ್ವರನ್ನೂ ವಿಶ್ಲೇಷಿಸುವುದು ಒಳಗೊಂಡಂತೆ ಬೆಳವಣಿಗೆಯಾಗ ಬೇಕಾಗಿದ್ದಲ್ಲಿ ಬಡವ–ಬಲ್ಲಿದ, ಉಳ್ಳವರು–ಇಲ್ಲದವರು, ಗ್ರಾಮೀಣ– ನಗರ ಅಂತರ ಕಡಿಮೆಗೊಳಿಸುವಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳಾವುವು ಎಂಬುದನ್ನು ವಿಶ್ಲೇಷಿಸಬೇಕಾಗಿದೆ.

ಸಾರ್ವಜನಿಕ, ಖಾಸಗಿ, ಸಹಕಾರ ಎಲ್ಲಾ ವಲಯಗಳು ಪೂರಕವಾಗಿ ಮತ್ತು ಹಲವೆಡೆ ಸ್ಪರ್ಧಾತ್ಮಕವಾಗಿ ತಮ್ಮ ಕರ್ತವ್ಯಗಳನ್ನು ಗರಿಷ್ಠ ಮಟ್ಟದಲ್ಲಿ ಸಾಧನೆ ಮಾಡಿದಾಗ ಮಾತ್ರ ರಾಷ್ಟ್ರ ನಿರ್ಮಾಣ ಕಾರ್ಯ ಯಶಸ್ವಿಯಾಗುತ್ತದೆ. ಉಳ್ಳವರ ಮತ್ತು ಇಲ್ಲದವರ ಅಂತರ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಪ್ರಸಕ್ತ ಭೌಗೋಳಿಕ ಪರಿಸರದಲ್ಲಿ ಯಾವುದೇ ರಾಷ್ಟ್ರ ಒಬ್ಬಂಟಿಯಾಗಿ, ದ್ವೀಪವಾಗಿ ನಿಲ್ಲಲಾಗುವುದಿಲ್ಲ. ವೈಜ್ಞಾನಿಕ ಆವಿಷ್ಕಾರಗಳು ತಾಂತ್ರಿಕ ಬೆಳವಣಿಗೆಗಳು ಸಂವಹನ, ಪ್ರಯಾಣ, ಸಾಗಣೆ, ಮಾಹಿತಿ ತಂತ್ರಜ್ಞಾನ, ಅಗತ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಡೀ ಪ್ರಪಂಚವನ್ನೇ ಒಂದು ಗ್ರಾಮವಾಗಿಸಿದೆ. ಇದಕ್ಕೆ ಭಾರತವೂ ಹೊರತಾಗಿಲ್ಲ. ಹೀಗಿರುವಾಗ ಭಾರತದಲ್ಲಿ ಅಸಮಾನತೆಯ ಹೋಗಲಾಡಿಸುವಿಕೆ ಹಾಗೂ ಒಟ್ಟಾರೆ ಪ್ರಗತಿಯಾಗಿಲ್ಲವೆ? ಈ ದಿಶೆಯಲ್ಲಿ ಭಾರತ ಅತ್ಯಂತ ಶ್ಲಾಘನೀಯ ಕಾರ್ಯಮಾಡಿದ್ದರೂ, ಮಹಾತ್ಮಗಾಂಧಿಯವರ 'ಪ್ರತಿಯೊಬ್ಬರ ಕಣ್ಣೀರ'ನ್ನು ಒರೆಸುವ ಕಾರ್ಯ ಇನ್ನೂ ಬಾಕಿಯಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಈಗಾಗಲೇ ಆಗಿರುವ ಕಾರ್ಯಗಳ ಬಗೆಯ ಹೆಮ್ಮೆಯ ಜೊತೆಗೆ ಮುಂದೆ ಮಾಡಬೇಕಾಗಿರುವ ಕರ್ತವ್ಯಗಳನ್ನು ಅರಿಯಬೇಕಾಗಿದೆ.

**ಕೃಷಿ ವಲಯ :** ಭಾರತದ ಬೆನ್ನೆಲುಬು ರೈತ. 'ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆಯೇ ಮೇಲು' ಎಂಬ ಸರ್ವಜ್ಞನ ವಚನ ನಮ್ಮ ದೇಶದಲ್ಲಿ ರೈತನಿಗಿರುವ ಪ್ರಾಮುಖ್ಯತೆ ಕೃಷಿ ಆಧಾರಿತ ಭಾರತದ ಚಿತ್ರಣವನ್ನು ತೋರಿಸುತ್ತದೆ. ಭಾರತದ ಕೃಷಿಯು ಮುಂಗಾರು–ಹಿಂಗಾರು ಮಳೆ ಅವಲಂಭಿಸಿದ್ದು, ಅದರಂತೆಯೇ ಆರ್ಥಿಕ ಪರಿಸ್ಥಿತಿಯ ಬದಲಾವಣೆಯು ಆಗುತ್ತಿತ್ತು. ಸ್ವಾತಂತ್ರ್ಯ ನಂತರ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಬಹಳಷ್ಟು ಬದಲಾವಣೆಗಳನ್ನು ಕಂಡಿದ್ದೇವೆ. ಅದರಂತೆ 'ಹಸಿರುಕ್ರಾಂತಿ'ಯ ಫಲವಾಗಿ ಆಹಾರ ಸ್ವಾವಲಂಭನೆಯನ್ನು ಸಾಧಿಸಲು ಸಾಧ್ಯವಾಯಿತು. ಆದರೂ ಕೂಡ ಇದರ ಫಲವನ್ನು ಎಲ್ಲರೂ ಪಡೆಯಲಾಗಲಿಲ್ಲ ಎಂಬ ಕೊರಗು ಇದ್ದೇ ಇದೆ. ಬಡವರು ಮತ್ತಷ್ಟು ಬಡವರಾದರು ಬಲ್ಲಿದರು ಮತ್ತಷ್ಟು ಬಲ್ಲಿದರಾದರು.

ಇದಕ್ಕೆ ಅನೇಕ ಕಾರಣಗಳನ್ನು ಗುರುತಿಸಬಹುದಾದರೂ ಈ ಮಾತಿನಲ್ಲಿ ಸತ್ಯಾಂಶವಿದೆ ಎಂಬುದನ್ನು ಅಲ್ಲಗಳೆಯಲಾಗದು. ಸ್ವಾತಂತ್ರ್ಯ ಬಂದ ಹೊಸತರದಲ್ಲಿ ಕೇವಲ 50 ದಶಲಕ್ಷಟನ್ ಉತ್ಪನ್ನ ಆಹಾರಧಾನ್ಯ 2010–11 ರಲ್ಲಿ 245 ದಶಲಕ್ಷ ಟನ್ ಉತ್ಪಾದನೆ ಯಾಗಿರುವುದು. ಪ್ರತಿ ಕೃಷಿ ಕಾರ್ಮಿಕನ ಉತ್ಪಾದನೆ ಶೇ. 75 ಹೆಚ್ಚಳವಾಗಿರುತ್ತದೆ. ಇಷ್ಟಾದರೂ ಕೂಡ ವಿಶ್ವದಲ್ಲೇ ಪ್ರತಿ ಹೆಕ್ಟೇರಿಗೆ ಉತ್ಪಾದನೆ ಅತಿ ಕಡಿಮೆ ಎಂದರೆ ಭಾರತವಾಗಿರುತ್ತದೆ. ಚೀನಾ ದೇಶವು ಪ್ರತಿ ಹೆಕ್ಟೇರಿಗೆ ಭತ್ತವನ್ನು ನಮಗಿಂತ ಮೂರು ಪಟ್ಟು ಗೋದಿಯನ್ನು ಎರಡು ಪಟ್ಟು ಹೆಚ್ಚಳವಾಗಿ ಉತ್ಪತ್ತಿ ಮಾಡುತ್ತದೆ. ಇದಕ್ಕೆ ಅತ್ಯಂತ ಸರಳ ಕಾರಣಗಳಿವೆ ಜಮೀನಿನ ವಿಂಗಡಣೆ, ಜನಸಂಖ್ಯೆ ಅಧಿಕವಾಗುತ್ತಾ ಭೂ ಒಡೆತನ ಒಡೆದು ಸಣ್ಣ ಸಣ್ಣ ಹಿಡುವಳಿದಾರರ ಸಂಖ್ಯೆ ಏರುತ್ತಾ ಇರುವುದು, ಉತ್ಪನ್ನಕ್ಕೆ ತಕ್ಕುದಾದ ಬೆಲೆ ದೊರೆಯದೇ ಇರುವುದು ಮಾರುಕಟ್ಟೆಯ ವರ್ತನೆ ರೈತ ಸ್ನೇಹಿಯಾಗಿಲ್ಲದೇ ಇರುವುದು. ಸರಳ ಕೃಷಿ ತಂತ್ರಜ್ಞಾನ ಅಳವಡಿಸಲು ಆಗದೇ ಇರುವುದು ಕೃಷಿಗೆ ಅಗತ್ಯತೆಗಳ ಕೊರತೆ, ರಸಗೊಬ್ಬರಗಳ ಅವೈಜ್ಞಾನಿಕ ಬಳಕೆ ಹೀಗೆ ಉತ್ಪನ್ನಗಳ ಇಳುವರಿಗೆ ಅಡಚಣೆ ಒಂದೆಡೆ ಆದರೆ ಕೊಯ್ದು ನಂತರದ ನಿರ್ವಹಣೆಯಲ್ಲಿ ಆಡಚಣೆಗಳು ಮೌಲ್ಯವರ್ಧನೆ, ಸಂಗ್ರಹಣೆ–ಸಾಗಣೆಯಲ್ಲಿ ಆಗುವ ನಷ್ಟಗಳು. ಕೃಷಿ ಉತ್ಪನ್ನ ಇಳುವರಿ ಹೆಚ್ಚಳಗೊಳಿಸಲು ಅಗತ್ಯ ಕ್ರಮಗಳಲ್ಲದೇ ಉತ್ಪನ್ನಗಳ ವಿತರಿಸಲು ಮತ್ತು ಸರ್ವರಿಗೂ ತಲುಪಿಸುವುದು ಅತಿ ಸವಾಲಿನ ಕೆಲಸವೇ ಆಗಿದ್ದು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪಂಚವಾರ್ಷಿಕ ಯೋಜನೆಗಳನ್ವಯ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಿ ಆಗಿರುವ ಯಶಸ್ಸಿಗೆ ಕಾರಣವಾಗಿರುತ್ತದೆ. ಇದರಲ್ಲಿ ಸಹಕಾರಿ ರಂಗದ ಪಾತ್ರ ಕೂಡ ಕಡಿಮೆ ಏನಲ್ಲ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, ತಾಲ್ಲೂಕು ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರ ಸಂಘಗಳು ಮತ್ತು ಇದರ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಶೃಂಗ ಸಂಸ್ಥೆಗಳು ನಿರ್ವಹಿಸಿದ ಪಾತ್ರವನ್ನು ಅಲ್ಲಗಳೆಯಲಾಗುವುದಿಲ್ಲ.

ಬದಲಾಗುತ್ತಿರುವ ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿಸರದಲ್ಲಿ ಭಾರತದ ಎಲ್ಲ ಜನರಿಗೂ, ಸಾಕಷ್ಟು ಮತ್ತು ಸಮತೋಲನ ಆಹಾರ ದೊರೆಯುವಂತೆ ನೋಡಿಕೊಂಡು 'ಆಹಾರ ಭದ್ರತೆ' ಸಾಧಿಸುವುದು ಸರ್ಕಾರದ ಸಂವಿಧಾನ ಬದ್ಧ ಕರ್ತವ್ಯವಾಗಿರುತ್ತದೆ. ಆದ್ದರಿಂದ, ಈಗಿನ ಅಗತ್ಯತೆ 'ಎರಡನೇ ಹಸಿರು ಕ್ರಾಂತಿಗೆ' ನಾಂದಿ ಹಾಡಬೇಕಾಗಿರುವುದು. ಇಳುವರಿಗೆ ಹಾನಿಯಾಗದಂತೆ ಅಥವಾ ಇಳುವರಿ ಹೆಚ್ಚಳಗೊಳಿಸಲು ಅಗತ್ಯ ಮಣ್ಣಿನ ಫಲವತ್ತತ್ತೆ ವೃದ್ಧಿಸಲು ಕ್ರಮಗಳು ಸ್ಥಿರ ಅಭಿವೃದ್ಧಿ ಸಾಧಿಸಲು ರಸಾಯನಿಕ ಗೊಬ್ಬರಗಳೊಡನೆ ಸಾಯವಗೊಬ್ಬರಗಳ ಹದ ಮಿಶ್ರಿತ ಬಳಕೆ, ಭೂ ಹಿಡುವಳಿಕೆಗೆ ಹೊಂದುವಂತಹ ಮಧ್ಯಂತರ ಕೃಷಿ ತಂತ್ರಜ್ಞಾನದ ಬಳಕೆ, ಮಿಶ್ರತಳಿ ಬೀಜಗಳಲ್ಲದೆ, ಬದಲಾವಣೆಗೊಳಪಟ್ಟ ಅನುವಂಶೀಯ ಗುಣಗಳುಳ್ಳ ಕೃಷಿ ಮತ್ತು ಕೃಷಿ ಪೂರಕ ಅವಲಂಭಿತ ಕ್ಷೇತ್ರಗಳನ್ನು ಆದ್ಯತಾವಲಯವನ್ನಾಗಿ ಪರಿಗಣಿಸಲಾಗಿರುವುದು ಈಗ ಚರಿತ್ರೆ, ಸಹಕಾರವಲಯ ನೂರು ವರ್ಷಗಳಿಂದ ಅಸ್ತಿತ್ವದಲ್ಲಿದ್ದು 1960ರ ದಶಕದಲ್ಲಿ ಬಂಡವಾಳದ ಶೇ. 60 ಭಾಗ ತನ್ನದಾಗಿಸಿಕೊಂಡಿದ್ದು ಹಾಲಿ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ತನ್ನ ಪಾಲು ಶೇ. 15 ಕ್ಕೆ ಇಳಿಕೆಯಾಗಿರುತ್ತದೆ. ಆದರೂ ಸಂಖ್ಯಾಧಾರಿತವಾಗಿ ಶೇ. 55ಕ್ಕೂ ಮೀರಿ ಪೂರೈಕೆ ಮಾಡಲಾಗುತ್ತಿದೆ. ಸಣ್ಣ, ಅತಿ ಸಣ್ಣ ರೈತರಿಗೆ ಸಾಲ ಒದಗಿಸುತ್ತಿರುವುದು ಸಹಕಾರ ವಲಯ.

ಭಾರತದಲ್ಲಿ ಒಂದು ಲಕ್ಷ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿದ್ದು, ಮೂವತ್ತು ಕೋಟಿಗೂ ಮೀರಿ ಸದಸ್ಯತ್ವ ಹೊಂದಿದ್ದು, ಇವುಗಳು ಪುನಶ್ಚೇತನ ಗೊಂಡಲ್ಲಿ ಸದಸ್ಯರ ಅಗತ್ಯತೆಗಳನ್ನು ಪೂರೈಸಲು ಯಶಸ್ವಿಯಾದಲ್ಲಿ, ಬೆಳವಣಿಗೆಯಲ್ಲಿ ಅದ್ಭುತ ಪಾತ್ರ ನಿರ್ವಹಿಸಬಹುದಾಗಿದೆ ಎಂಬುದನ್ನು ಮನಗೊಂಡು ಭಾರತದ ಸಹಕಾರ ಪತ್ತು ವ್ಯವಸ್ಥೆಯ ಪುನಶ್ಚತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. (ವೈದ್ಯನಾಥನ್ ವರದಿ) ಕಾಯ್ದೆಯಾತ್ಮಕ, ಆಡಳಿತಾತ್ಮಕ ಮತ್ತು ಆರ್ಥಿಕ ಎಲ್ಲ ಅಂಶಗಳುಳ್ಳ ಯೋಜನೆಯಾಗಿದ್ದು ನಮ್ಮ ರಾಜ್ಯವು ಇದರ ಅನುಷ್ಠಾನದಲ್ಲಿ ತೊಡಗಿದ್ದು ಅಂತಿಮ ಹಂತದಲ್ಲಿದೆ. ವಿಶೇಷ ಲೆಕ್ಕ ಪರಿಶೋಧನೆ ಆಧಾರದಲ್ಲಿ ಭಾರತ ಸರ್ಕಾರ, ರಾಜ್ಯ ಸರ್ಕಾರ ಆರ್ಥಿಕ ಬಂಡವಾಳ ಒದಗಿಸಿಕೊಟ್ಟಿದೆ. ಕಾಯ್ದೆಗಳಲ್ಲಿ ಅಗತ್ಯ ತಿದ್ದುಪಡಿ ಮಾಡಲಾಗಿದೆ. ಸರ್ಕಾರದ ಹಸ್ತಕ್ಷೇಪ ಕಡಿಮೆಗೊಳಿಸಿ ಸಹಕಾರ ಸಂಘಗಳು ಸದಸ್ಯ ನಿರ್ದೇಶಿತ ಸ್ವತಂತ್ರ ಸಂಸ್ಥೆಗಳಾಗಿ ರೂಪುಗೊಳ್ಳುವಲ್ಲಿ ಸಹಕಾರಿಯಾಗಿದೆ. ಆಡಳಿತ ಮಂಡಳಿ ಸದಸ್ಯರ ಸಿಬ್ಬಂದಿಯ ಕಾರ್ಯಕ್ಷಮತೆ ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳು ನಡೆದಿರುತ್ತವೆ. ವ್ಯಾಪಾರ ಅಭಿವೃದ್ಧಿ ಮತ್ತು ಉತ್ತಮ ಆಡಳಿತ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗಿರುತ್ತದೆ. ಈ ಬಲವರ್ಧನೆ ಕಾರ್ಯಕ್ರಮಗಳಿಂದಾಗಿ ಸಹಕಾರ ಸಂಘಗಳು ತಮ್ಮ ಸ್ವಂತ ಬಂಡವಾಳ ವೃದ್ಧಿಗೊಂಡು, ತನ್ನದೇ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಇನ್ನೂ ಸಹಕಾರ ಸಂಘದ ಸೇವೆಗಳಿಂದ ವಂಚಿತರಾದವರಿಗೆ ಸೇವೆ ಒದಗಿಸುವ ಸದಾಶಯವನ್ನು ಹೊಂದಿರುತ್ತದೆ. ಸಹಕಾರ ಸಂಘಗಳಲ್ಲಿ ಸಹಕಾರ ತತ್ವಗಳ ದಿಟ್ಟ ಅನುಷ್ಠಾನದಿಂದ ತನ್ನ ಸಾಮರ್ಥ್ಯಗಳ ಸದ್ಬಳಕೆ ಬಲಹೀನತೆ ಹೋಗಲಾಡಿಸುವಿಕೆ. ಅವಕಾಶಗಳ ಉಪಯೋಗಿಸಿಕೊಂಡು ಸವಾಲುಗಳನ್ನು ಎದುರಿಸಿದಾಗ ಎಲ್ಲರನ್ನು ಒಳಗೊಂಡಂತೆ ಅಭಿವೃದ್ಧಿ ಸಾಧ್ಯ.

**ಭಾರತ ಸರ್ಕಾರದ ಆರ್ಥಿಕ ಸೇರ್ಪಡೆ ಕಾರ್ಯಕ್ರಮ :**

ರಾಷ್ಟ್ರದ ಮಾನವ ಸಂಪನ್ಮೂಲ ಅಭಿವೃದ್ಧಿಯಾಗದೇ ಯಾವುದೇ ಅಭಿವೃದ್ಧಿ ಕಾರ್ಯಕ್ರಮ, ಯೋಜನೆ "ಹೊಳೆಯಲ್ಲಿ ಹುಳಿ ಹಿಂಡಿದಂತೆ" ಆಗುತ್ತದೆ. ಆದುದರಿಂದ ಸರ್ವರಿಗೂ ಮೂಲಭೂತ ಅವಶ್ಯ ಆಹಾರ, ನೆರಳು, ಬಟ್ಟೆ ಒದಗಿಸುವ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಕೇವಲ ಇಷ್ಟೇ ಅಲ್ಲದೆ ಗ್ರಾಮ ನೈರ್ಮಲ್ಯ, ಕುಡಿಯುವ ನೀರು, ಸಮತೋಲನ ಆಹಾರ, ವಿದ್ಯುಚ್ಛಕ್ತಿ, ಶೌಚಾಲಯ ವಾಸ ಮಾಡಲು ಅಗತ್ಯ ಸ್ಥಳವಿರುವ ವಸತಿ ಮತ್ತು ಅಗತ್ಯ ವಿರುವಷ್ಟು ಬಟ್ಟೆ ಒದಗಿಸಲು ಒತ್ತು ನೀಡಲಾಗುತ್ತಿದೆ. ಆರೋಗ್ಯ ಮತ್ತು ಸಾಮಾಜಿಕ ಅನಿಷ್ಟಗಳ ಹೋಗಲಾಡಿಸುವಿಕೆ. ಲಿಂಗತಾರತಮ್ಯ ಹೋಗಲಾಡಿಸುವಿಕೆ ಕಡ್ಡಾಯ ಶಿಕ್ಷಣವಂತೂ ಕಾಯ್ದೆ ರೂಪದಲ್ಲಿ ಹೊರಹೊಮ್ಮಿದೆ. ಈ ಎಲ್ಲ ಕಾರ್ಯಕ್ರಮಗಳೂ ಸಮಾಜದ

ಸ್ವಾಸ್ಥ್ಯ ನಿರ್ಮಾಣ ಮಾಡಲು ಸಹಕಾರಿಯಾಗಿವೆ. ಇಷ್ಟಾದರೂ (ಹಿಂದೆ ನೀಡಲಾದ) ಅಂಕಿ ಅಂಶಗಳ ಅಧ್ಯಯನದಿಂದ ಭಾರತದ ಬಹುತೇಕ ಜನಸಂಖ್ಯೆ ಇನ್ನೂ ಆರ್ಥಿಕವಾಗಿ ಹಿಂದುಳಿದಿರುವದೇ ಅಲ್ಲದೇ ಆರ್ಥಿಕ ಜ್ಞಾನವಿಲ್ಲದೆ, ಆರ್ಥಿಕವಾಗಿ ಮುಖ್ಯ ವಾಹಿನಿಯಿಂದ ಹೊರಗೊಳಿದಿರುತ್ತಾರೆ ಎಂಬುದು ಕಂಡುಬರುತ್ತದೆ. ಈ ಒಂದು ಜನ ಸಮೂಹವನ್ನು ಆರ್ಥಿಕ ಸಾಕ್ಷರನ್ನಾಗಿ ಮಾಡುವುದು ಮತ್ತು ಅವರಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ನೀಡುವುದು. ಇದರಿಂದಾಗಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಅವರನ್ನು ಪಾಲುದಾರರನ್ನಾಗಿ ಮಾಡುವುದು. ಸರ್ವರನ್ನು ಒಳಗೊಂಡಂತೆ ಅಭಿವೃದ್ಧಿ ಇದರಿಂದ ಸಾಧ್ಯವಾಗುತ್ತದೆ. ಆರಂಭಿಕವಾಗಿ ಪ್ರತಿ ಕುಟುಂಬವೂ ಕನಿಷ್ಠ ಒಂದು ಬ್ಯಾಂಕಿನಲ್ಲಿ ಖಾತೆ ಹೊಂದಿರಬೇಕು ಎಂಬ ಉದ್ದೇಶಹೊಂದಿ ಅಡಚಣೆ ರಹಿತ ಖಾತೆ ಅಥವ 'ಶೂನ್ಯ ಶಿಲ್ಕು' ಖಾತೆ ತೆರೆಯಲು ಉತ್ತೇಜನ ನೀಡಲಾಯಿತು. ಕೇವಲ ಇಷ್ಟೇ ಆದರೆ ಸಾಲದು ಎಂದು ಹಾಲಿ ಬ್ಯಾಂಕಿಂಗ್ ಸಹಾಯಕ ಬ್ಯಾಂಕಿಂಗ್ ಕರೆಸ್ಪಾಂಡೆಂಟ್‌ಗಳನ್ನು ನಿಯಮಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿರುತ್ತದೆ. ಸಹಕಾರ ಸಂಘಗಳನ್ನು ಈ ಉದ್ದೇಶಕ್ಕಾಗಿ ನೇಮಿಸಿಕೊಳ್ಳಬಹುದಾಗಿದೆ. ಜಿಲ್ಲೆಗೆ ಒಂದು ಬ್ಯಾಂಕ್‌ನ್ನು ಈ ಉದ್ದೇಶಕ್ಕಾಗಿ ಬೀಜಗಳ ಬಳಕೆ, ಪರಿಸರ ಸ್ನೇಹಿ ಜೈವ ವೈಜ್ಞಾನಿಕ ಪರೋಪಜೀವಿ ಮತ್ತು ಭಕ್ಷ್ಯ ಜೀವಿಗಳ ಹತೋಟಿ, ಅಗತ್ಯ ಪೂರ್ಣ ಬಂಡವಾಳ ಹೂಡುವಿಕೆ ಅಗತ್ಯ ಮಾರುಕಟ್ಟೆಯ ಅವಿಷ್ಕಾರ. ಈ ಎಲ್ಲ ಸರಪಳಿ ಕ್ರಿಯೆಗಳು ಸಕಾರಾತ್ಮಕವಾಗಿ ವರ್ತಿಸಿದಲ್ಲಿ ಕೃಷಿ ಅವಲಂಭಿತ ಗ್ರಾಮದ ಎಲ್ಲ ವರ್ಗದ ಜನರನ್ನೂ ಸಂತುಷ್ಟ ಗೊಳಿಸಬಹುದಾಗಿದೆ. ಬೆಳವಣಿಗೆಯಲ್ಲಿ ಎಲ್ಲರನ್ನು ಪಾತ್ರದಾರರನ್ನಾಗಿ ಮಾಡಬಹುದಾಗಿದೆ. ಎಲ್ಲರ 'ಖರೀದಿ ಶಕ್ತಿ' ಯನ್ನು ಹೆಚ್ಚಳಗೊಳಿಸಲು ಸಾಧ್ಯವಾಗುತ್ತದೆ.

ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಲು ಭಾರತ ಸರ್ಕಾರ ಖಾಸಗಿ ವಲಯದಲ್ಲಿ ಬಂಡವಾಳ ಹೂಡಲು, ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು ಉತ್ತೇಜನ ನೀಡುತ್ತಿದೆ. ಅನೇಕ ಬಹುರಾಷ್ಟ್ರೀಯ ಕಂಪನಿಗಳು ಹೂಡಿಕೆ ಮಾಡಲು ಹಾತೊರೆಯುತ್ತಿವೆ. ಈಗಾಗಲೇ ಅನೇಕ ಖಾಸಗಿ ಕಂಪನಿಗಳು, ಚಿಲ್ಲರೆ ಮತ್ತು ಸಗಟು ಮಾರಾಟ ವಲಯದಲ್ಲಿ ಬಂಡವಾಳ ಹೂಡಿ ಕಾರ್ಯಪ್ರವೃತ್ತವಾಗಿವೆ. ಅಲ್ಲದೆ, ಮಾರುಕಟ್ಟೆಗೆ ತಕ್ಕುದಾದ ಗುಣಮಟ್ಟ ಆಧಾರಿತ ಉತ್ಪನ್ನಗಳ ಉತ್ಪನಕ್ಕಾಗಿ ಗ್ರಾಮೀಣ ರೈತ ಸಮೂಹವನ್ನು ಸಂಪರ್ಕಿಸಲಾರಂಭಿಸಿವೆ. ಇದೇ ರೀತಿಯಲ್ಲಿ ಕೃಷಿ ಪೂರಕ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಾಣೆ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುತ್ತಾರೆ.

ಖಾಸಗಿ ವಲಯವು ಮೇಲ್ನೋಟಕ್ಕೆ ರೈತರ ಸದಾಶಯಗಳನ್ನು ಈಡೇರಿಸುವಂತೆ ಕಾಣಬರುತ್ತಿದ್ದರೂ ಅದರ ಉದ್ದೇಶ 'ಲಾಭ' ಒಂದೇ ಎಂಬುದನ್ನು ನಾವು ಮರೆಯಬಾರದು. ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ, ಸಾಮಾಜಿಕ ಜವಾಬ್ದಾರಿಯಾಗಿ ಕಂಪನಿಗಳು ಅನೇಕ ಸಾಮಾಜಿಕ ಒಳಿತಿನ ಕಾರ್ಯಕ್ರಮ ಗಳನ್ನು ಹಾಕಿಕೊಳ್ಳುತ್ತಿದ್ದರೂ ಇದು ಅವರ ಲಾಭದ ಅತ್ಯಲ್ಪ ಭಾಗ ಮಾತ್ರ, ಲಾಭ ಹಿಂದಕ್ಕೆ ಹರಿದು ಬರುವ ಸಾಧ್ಯತೆಗಳಿಲ್ಲ ಅದು ಅವರ ಉದ್ದೇಶವೂ ಅಲ್ಲ. ಇದಕ್ಕೆ ಸವಾಲು ಒಡ್ಡುವ, ಮಧ್ಯಮವರ್ತಿಗಳನ್ನು ಇಲ್ಲದಂತೆ ಮಾಡುವ, ತನ್ನ ಶಕ್ತಿಯನ್ನು ಯುಕ್ತಗೊಳಿಸಿ ಉತ್ಪನ್ನಕ್ಕೆ ತಕ್ಕ ಪ್ರತಿಫಲ ಪಡೆಯುವ ಶಕ್ತಿ ಪಡೆಯಲು ಇರುವ ಮಾರ್ಗ ವೆಂದರೆ 'ಸಹಕಾರ' ಮಾರ್ಗ ಒಂದೇ ಎಂಬುದನ್ನು ಮರೆಯಬಾರದು.

ಭೂ ಒಡೆತನ ಕಿರಿದಾಗುತ್ತಿರುವುದನ್ನು ಒಂದು ಗೂಡಿಸಲು ಅಗತ್ಯ ಮೂಲಭೂತ ಅವಶ್ಯಕತೆಯಾದ ನೀರು, ಗೊಬ್ಬರ, ಔಷದ, ಬೀಜ, ಕೃಷಿ ಉಪಕರಣಗಳು ಸಮರ್ಪಕ ಮತ್ತು ಪೂರ್ಣ ಬಳಕೆ ಯಾಗಬೇಕಾಗಿದ್ದಲ್ಲಿ ಎಲ್ಲ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಸಹಕಾರ ಸಂಘಗಳ ಮೂಲಕ ನಿರ್ವಹಣೆ ಮಾಡುವುದೇ ಅತ್ಯಂತ ಸೂಕ್ತ ಮಾರ್ಗವಾಗುತ್ತದೆ. ಅಲ್ಲದೆ, ಉತ್ಪನ್ನಗಳ ಮಾರಾಟದಲ್ಲಿ ತನ್ನಿಂದಲೇ ನೇರ ಮಾರಾಟವಾಗಬಹುದು ಅಥವಾ ಗ್ರಾಹಕ ಸಹಕಾರ ವ್ಯವಸ್ಥೆಯಿಂದ ಮಾರಾಟ ಮಾಡಲು ವಿಪುಲವಾದ ಅವಕಾಶಗಳಿವೆ.

ಬೆಳೆಯುತ್ತಿರುವ ಗ್ರಾಹಕ ಮಾರುಕಟ್ಟೆಯ ಫಲ ರೈತರಿಗೂ ದೊರೆಯಬೇಕಾದರೆ ತಮ್ಮ ಸಹಕಾರ ಸಂಘವು

ಖಾಸಗಿ ಕಂಪನಿಗಳೊಡನೆ ವ್ಯವಹರಿಸಿ ಪೂರ್ಣ ಲಾಭವನ್ನು ತನ್ನ ಸದಸ್ಯರಿಗೆ ಒದಗಿಸಬಹುದಾಗಿದೆ. ಭಾರತ ಮತ್ತು ರಾಜ್ಯ ಸರ್ಕಾರಗಳ ಅನೇಕ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ಭಾರತದಲ್ಲಿ ಸಾಕಷ್ಟು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿದ್ದು, ನಗರ ಪ್ರದೇಶಕ್ಕೆ ಪಟ್ಟಣಗಳ, ಮಾರುಕಟ್ಟೆಗಳ ಸಂಪರ್ಕ ಸುಲಭವಾಗಿರುತ್ತದೆ. ಮಾಹಿತಿ ತಂತ್ರಜ್ಞಾನದ ಕ್ರಾಂತಿಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಲಭ್ಯ ವಿಪುಲವಾದ ಅವಕಾಶಗಳನ್ನು ಸಹಕಾರ ಸಂಘಗಳು ಉಪಯೋಗಿಸುವ ಅವಶ್ಯಕತೆ ಇದೆ. ಇದರಿಂದ ಎಲ್ಲರನ್ನೂ ಒಳಗೊಂಡಂತೆ ಬೆಳವಣಿಗೆ ತರಲು ಸಾಧ್ಯವಾಗುತ್ತದೆ. ಸಹಕಾರ ಸಂಘಗಳಲ್ಲಿ ಸಹಕಾರ ತತ್ವವಾಗಿ ಸಾಮಾಜಿಕ ಕಳಕಳಿಯನ್ನು ಹೊಂದಿರುವುದು ಇದಕ್ಕೆ ಮತ್ತಷ್ಟು ಇಂಬುಗೊಡುತ್ತದೆ.

ಕೃಷಿ, ಕೃಷಿ ಪೂರಕ ಮತ್ತು ಕೃಷಿ ಅವಲಂಭಿತ ಉದ್ದಿಮೆಗಳಲ್ಲಿ ಲಭ್ಯ ಸಂಪನ್ಮೂಲ ಗಳನ್ನು ಮಾನವ ಸಂಪನ್ಮೂಲವನ್ನು ಒಳಗೊಂಡಂತೆ ಸದ್ಬಳಕೆ ಮಾಡಿದಲ್ಲಿ ಬೆಳವಣಿಗೆಗೆ ಸಾಧ್ಯವಾಗುತ್ತದೆ. ಈ ಸಂಪನ್ಮೂಲಗಳಲ್ಲಿ ಆರ್ಥಿಕ ಬಂಡವಾಳ ಅತಿಮುಖ್ಯ ಪಾತ್ರ ನಿರ್ವಹಿಸುತ್ತದೆ. ಅದು ಇಲ್ಲದಿದ್ದ ಪಕ್ಷದಲ್ಲಿ ಅದು ಕೇವಲ 'ಬಂಡವಾಳವಿಲ್ಲದೆ ಬಡಾಯಿ' ಆಗಿಬಿಡುತ್ತದೆ. ಆದುದರಿಂದಲೇ ಬ್ಯಾಂಕಿಂಗ್ ವಲಯ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

**ಬ್ಯಾಂಕಿಂಗ್ ವಲಯ – ಸಹಕಾರ ವಲಯ :**

ಭಾರತ ಕೃಷಿ ಅವಲಂಭಿತ ಆರ್ಥಿಕ ರಾಷ್ಟ್ರವಾಗಿದ್ದರೂ 1962 ರಲ್ಲಿ ಮಾತ್ರ ಕೃಷಿ ಕ್ಷೇತ್ರವನ್ನು ಬಂಡವಾಳ ಹೂಡಿಕೆ ವಲಯವಾಗಿ ಭಾರತೀಯ ರಿಸರ್ವ ಬ್ಯಾಂಕ್ ಗುರುತಿಸಿದ್ದು, ತದನಂತರದಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮತ್ತು ಉದ್ದೇಶಕ್ಕಾಗಿ ಗೊತ್ತು ಮಾಡಿದ್ದು, ಆ ಬ್ಯಾಂಕುಗಳು ಜಿಲ್ಲಾ ಮತ್ತು ತಾಲ್ಲೂಕು ಸಲಹಾ ಕೇಂದ್ರಗಳನ್ನು ತೆರೆದು ಸಂಪನ್ಮೂಲ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕಂಪ್ಯೂಟರ್ ತಂತ್ರಜ್ಞಾನದ ನೆರವಿನಿಂದ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಜಾರಿ ಇರುವಲ್ಲಿ ಇದು ಸಾಧ್ಯವಾಗಿದೆ. ಬ್ಯಾಂಕಿಂಗ್ ಫೆಸಿಲಿಟೇಟರ್/ಕರಸ್ಪಾಂಟೆಂಟ್ ಕೈನಲ್ಲಿ ಇರಿಸಿಕೊಳ್ಳಬಹುದಾದ ಸಾಧನದಿಂದ ಹಣ ಇಡುವ, ಹಣ ತೆಗೆಯುವ ಮತ್ತು ಸಣ್ಣ ಪ್ರಮಾಣದ ಸಾಲ ನೀಡುವ ಸಾಲ ಮರುಪಾವತಿ ಜಮಾ ಮಾಡುವ ಕಾರ್ಯ ಸಾಧ್ಯವಾಗಿದೆ. ಇದರಿಂದ ಬ್ಯಾಂಕಿಂಗ್ ಸೌಲಭ್ಯ ಹೊಂದಿರದೇ ಇರುವ ಜನಸ್ತೋಮವನ್ನು ಬ್ಯಾಂಕಿಂಗ್ ಪರಿಧಿಗೆ ತರಬಹುದಾಗಿದೆ. ಸಹಕಾರ ಬ್ಯಾಂಕ್‌ಗಳು ಈ ಸೇವೆಯಲ್ಲಿ ತೊಡಗಿಸಿಕೊಳ್ಳಬಹುದಾಗಿದ್ದು, ಜನರಿಗೆ ಹತ್ತಿರವಾಗಿದ್ದು ಜನರಿಂದಲೇ ನಡೆಸಲ್ಪಟ್ಟ ಸಂಸ್ಥೆಗಳಾಗಿದ್ದು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸ ಬಹುದಾಗಿದೆ. ತಾಂತ್ರಿಕವಾಗಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಿಕೊಂಡಲ್ಲಿ ಮಾತ್ರ ಸಾಧ್ಯವಾಗುತ್ತದೆ.

**ಸ್ವ ಸಹಾಯಕ ಸಂಘಗಳು–ಜಂಟಿ ಬಾಧ್ಯತಾ ಗುಂಪುಗಳು :**

ಸ್ವ ಸಹಾಯ ಗುಂಪುಗಳ ರಚನೆಯಿಂದ ಈ ಗುಂಪುಗಳು ಉಳಿತಾಯ ಮಾಡಿ ತಮ್ಮ ಸದಸ್ಯರಲ್ಲಿ ಆಂತರಿಕವಾಗಿ ಸಾಲ ನೀಡಿ ತಮ್ಮ ನಿಧಿ ವೃದ್ಧಿಗೊಳಿಸಿ ಬ್ಯಾಂಕುಗಳಿಂದ ಸಾಲ ಪಡೆದು ಆಂತರಿಕ ಸಾಲವನ್ನು ಮತಷ್ಟು ವೃದ್ಧಿಸಿಕೊಳ್ಳಲು ಅವಕಾಶಗಳಿವೆ. ಇದರಿಂದ ಆರ್ಥಿಕ ಸಾಕ್ಷರತೆ ಸಾಧ್ಯವಾಗಿರುವುದಲ್ಲದೆ ಇತರರನ್ನು ಆರ್ಥಿಕ ಸಾಕ್ಷರರನ್ನಾಗಿ ಮಾಡಲು ಮಾಧ್ಯಮವಾಗಿವೆ.

ಜಂಟಿ ಬಾಧ್ಯತಾ ಗುಂಪುಗಳು 4–10 ಸದಸ್ಯರನ್ನು ಹೊಂದಿ ಚಟುವಟಿಕೆ ಆಧಾರಿತವಾಗಿ ಜಂಟಿಯಾಗು ಸಾಲ ಮರುಪಾವತಿಯ ಬಾಧ್ಯತಾ ಪತ್ರ ನೀಡಿ ಸಾಲವನ್ನು ಪಡೆಯಬಹುದಾಗಿದೆ. ಸ್ವ ಸಹಾಯ ಸಂಘಗಳು ಜಂಟಿ ಬಾಧ್ಯತಾಗುಂಪುಗಳು ಸರ್ವರನ್ನು ಒಳಗೊಂಡಂತೆ ಅಭಿವೃದ್ಧಿಗೆ ಸಹಕಾರಿಯಾಗಿರುತ್ತವೆ. 'ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೇ ತನ್ನೆಲ್ಲ ಬಳಗವನು? ಕೋಳಿಯೊಂದು ಗುಟುಕ ಕಂಡರೆ ಕರೆಯದೇ ತನ್ನ ಕುಲವೆಲ್ಲವನು?' ಎಂಬ ಬಸವಣ್ಣವರ ವಚನದಂತೆ ಇಡೀ ಸಮೂಹವನ್ನು ಒಳಗೊಂಡಂತೆ ಒಂದು ಚಳುವಳಿ ರೂಪದಲ್ಲಿ ಹೊರಹೊಮ್ಮಿದಾಗ

ಸಾಮಾಜಿಕ ನ್ಯಾಯವನ್ನುಳ್ಳ

"ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೇ?

ಈ ಲೋಕದೊಳಗೇ ಮತ್ತು ಅನಂತಲೋಕ ಶಿವಲೋಕ ಶಿವಾಚಾರವಯ್ಯಾ ಭಕ್ತನಿದ್ದ ಠಾವೇ ದೇವಲೋಕ ಭಕ್ತನಂಗಣವೇ ವಾರಣಾಸಿ ಕಾಯಕವೇ ಕೈಲಾಸ! ಇದು ಸತ್ಯ ಕೂಡಲ ಸಂಗಮ ದೇವಾ."

"ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು. ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದರೂ ಕಾರ್ಯಕದೊಳಗು ಆಯ್ದಕ್ಕಿ ಮಾರಯ್ಯ.

ಈ ವಚನಗಳಲ್ಲಿ ಕಾಯಕದ ಮಹತ್ವನ್ನು ಕಾಣಿಬಹುದಾಗಿದೆ. ಪ್ರತಿಯೊಬ್ಬ ಪ್ರಜೆಯೂ ಕಾರ್ಯನಿರತನ್ನಿದಾಗ ಪ್ರತಿಕೈಗೂ ಕೆಲಸ ಸಿಕ್ಕಾಗ ಉತ್ಪಾದನ ಶಕ್ತಿ ಅಧಿಕಗೊಳ್ಳುತ್ತದೆ ಅಭಿವೃದ್ಧಿ ಹಾದಿ ಸುಗಮಗೊಳ್ಳತ್ತದೆ.

ಮನೆ ನೋಡಾ ಬಡವರು, ಮನನೋಡಾ ಸಂಪನ್ನರು ಧನ ನೋಡಾ ಬಡವರು, ಘನ ಮನ ಸಂಪನ್ನರು ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು ಅರಿಗುಮಪಮಿಸಬಾರದು.

(ಯಾರಿಗೂ ಹೋಲಿಸುವಂತಿಲ್ಲ)

ಇಂತಹವರನ್ನು ಗುರುತಿಸುವುದು ಸಹಕಾರ ಸಂಘಗಳ / ಬ್ಯಾಂಕ್‌ಗಳ / ಸರ್ಕಾರೇತರ ಸಂಸ್ಥೆಗಳ ಗುರುತರ ಜವಾಬ್ದಾರಿಯಾಗಿದೆ. ಈ ಸಂಸ್ಥೆಗಳು ವಿಫಲವಾದಲ್ಲಿ ಖಾಸಗಿ ಸಂಸ್ಥೆಗಳು ಆಕ್ರಮಿಸುವ ಮತ್ತು ಕಾರ್ಯಕ್ರಮದಲ್ಲಿ ತೊಡಕುಗಳನ್ನು ಎದುರಿಸುವುದರಲ್ಲಿ ಸಂಶಯವಿಲ್ಲ. ಎಂ.ಎಫ್.ಐ.ಗಳ ಅನುಭವ ನಮ್ಮ ಕಣ್ಣಮುಂದೆ ಇದೆ. ಆದುದರಿಂದ ಈ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುವ ಸಂಸ್ಥೆ ಮತ್ತು ಅದರಲ್ಲಿನ ಕಾರ್ಯಕರ್ತರಿಗೆ,

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು । ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೇ ॥ ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಎಂಬ ಡಿ.ವಿ.ಜಿ.ಯವರ ಕಗ್ಗವು ದಾರಿದೀಪವಾಗಿದೆ.**

****************************************************************************************************

# 8. ಸಹಕಾರ ಸಂಘಗಳ ಮೂಲಕ ಆರ್ಥಿಕ ಸೇರ್ಪಡೆ, ಯುವಕರು, ಮಹಿಳೆಯರು ಮತ್ತು ದುರ್ಬಲ ವರ್ಗಗಳ ಬಲಪಡಿಸುವಿಕೆ

ಶೇಕಡ 51.4 ರೈತ ಕುಟುಂಬಗಳು ಬ್ಯಾಂಕ್‌ಗಳಿಂದಲಾಗಲಿ ಸಹಕಾರಿ ಸಂಘಗಳಿಂದಾಗಲಿ ಅಸಾಂಸ್ಥಿಕ ಮೂಲಗಳಿಂದಾಗಲಿ ಆರ್ಥಿಕತೆಗೆ ಒಳಪಟ್ಟಿರುವುದಿಲ್ಲ ಎಂಬುದು ಅಘಾತವನ್ನು ಉಂಟುಮಾಡುತ್ತದೆ.

ಆರ್ಥಿಕ ಸೇರ್ಪಡೆ ಬಲಪಡಿಸುವಿಕೆ ತಾಂತ್ರಿಕತೆಯ ಅಳವಡಿಕೆ ಈ ಮೂರು ಅಂಗಗಳು ಇಂದಿನ ದಿನಗಳಲ್ಲಿ ಅವಿಭಾಜ್ಯ ಎಂದು ಪರಿಗಣಿಸುವುದು ಅನಿವಾರ್ಯ. ಈ ಸತ್ಯವನ್ನು ಸಹಕಾರಿಗಳಾದ ನಾವು ಅರಿತುಕೊಳ್ಳಬೇಕಾಗಿದೆ. ಆರ್ಥಿಕ ಸೇರ್ಪಡೆ ಎಂದರೇನು? ಸರಳವಾಗಿ ಹೇಳಬೇಕೆಂದರೆ ಯಾರು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ರಕ್ಷಿಸಲು ಮತ್ತು ಅವಶ್ಯಕತೆ ಇದ್ದಾಗ ಪಡೆಯಲು ಸಾಂಸ್ಥಿಕ ಮೂಲಗಳನ್ನು ಹೊಂದಲು ಅನುಕೂಲತೆ ಹೊಂದಿರುತ್ತಾರೆ ಅವರು ಆರ್ಥಿಕ ಸೇರ್ಪಡೆಯಾಗಿರುತ್ತಾರೆ (Financially Included)ಯಾರು ಈ ಅವಶ್ಯಕತೆಗಳಿಗೆ ಇನ್ನೂ ಅಸಂಪ್ರದಾಯಿಕ, ಸಾಂಸ್ಥಿಕ

ಮೂಲವಲ್ಲದ ಮೂಲವನ್ನು ಅವಲಂಭಿಸಿರುತ್ತಾರೆಯೋ ಅಥವಾ ವಂಚಿತರಾಗಿರುತ್ತಾರೆಯೋ ಅವರು (Financially Excluded). ಯಾರು ಆರ್ಥಿಕ ಸೇರ್ಪಡೆಯಿಂದ ಹೊರತಾಗಿರುತ್ತಾರೋ ಅವರನ್ನು ಆರ್ಥಿಕ ಸೇರ್ಪಡೆಗೊಳಿಸುವುದೇ ಭಾರತದ ಆರ್ಥಿಕ ಸೇರ್ಪಡೆ ಕಾರ್ಯವಾಗಿದೆ.

ಭಾರತದಲ್ಲಿ 147.90 ದಶಲಕ್ಷ ಗ್ರಾಮೀಣ ಕುಟುಂಬಗಳಿವೆ. ಅದರಲ್ಲಿ 89.35 ದಶಲಕ್ಷ ಕುಟುಂಬಗಳು (60.4%) ರೈತ ಕುಟುಂಬಗಳು ಇವುಗಳಲ್ಲಿ ಶೇಕಡ 48.6 ಕುಟುಂಬಗಳು ಮಾತ್ರ ಸಂಸ್ಥೆಗಳ ಮೂಲಕ ಆರ್ಥಿಕ ಸೌಲಭ್ಯ ಪಡೆಯುತ್ತಿವೆ (ಬ್ಯಾಂಕ್, ಸಹಕಾರ ಸಂಘಗಳು 26.9%) ಅಥವಾ ಇತರೆ ಮೂಲಗಳನ್ನು (ಕೃಷಿ/ಇತರೆ ಲೇವಾದೇವಿದಾರರು, ವ್ಯಾಪಾರಸ್ಥರು, ನೆಂಟರು, ಸ್ನೇಹಿತರು, ವೈದ್ಯರು, ನ್ಯಾಯವಾದಿಗಳು, ಇತರರು 22%) ಅವಲಂಭಿಸಿರುತ್ತಾರೆ. ಉಳಿಕೆ ರೈತ ಕುಟುಂಬಗಳು ಶೇಕಡ 51.4 ರೈತ ಕುಟುಂಬಗಳು ಬ್ಯಾಂಕ್‌ಗಳಿಂದಲಾಗಲಿ ಸಹಕಾರಿ ಸಂಘಗಳಿಂದಾಗಲಿ ಅಸಾಂಸ್ಥಿಕ ಮೂಲಗಳಿಂದಾಗಲಿ ಆರ್ಥಿಕತೆಗೆ ಒಳಪಟ್ಟಿರುವುದಿಲ್ಲ ಎಂಬುದು ಆಘಾತವನ್ನು ಉಂಟುಮಾಡುತ್ತದೆ. ರಾಷ್ಟ್ರೀಯ ಸರಾಸರಿ 48.6%ಕ್ಕೆ ಹೋಲಿಕೆ ಮಾಡಿದಾಗ ಪ್ರಾದೇಶಿಕವಾಗಿ ಅಜಗಜಾಂತರ ವ್ಯತ್ಯಾಸವನ್ನು ಕಾಣುತ್ತೇವೆ. ದಕ್ಷಿಣ 72.7% ಪಶ್ಚಿಮ ಮತ್ತು ಕೇಂದ್ರ 41.7% ಉತ್ತರ 51.4% ಪೂರ್ವ 39.9% ನೈರುತ್ಯ 19.7%. ಸಾಂಸ್ಥಿಕ ಆರ್ಥಿಕ ಮೂಲ ಅವಲಂಭಿಸದ ಕುಟುಂಬಗಳು ಅಥವಾ ಯಾವುದೇ ಮೂಲ ಅವಲಂಭಿಸದ ಕುಟುಂಬಗಳು ಕೃಷಿಯಲ್ಲಿ ಹೂಡಿಕೆ ಬಂಡವಾಳವಿರಲಿ ದುಡಿಯುವ ಬಂಡವಾಳದ ಕೊರತೆ ಎದುರಿಸುತ್ತಿರುತ್ತಾರೆ ಮತ್ತು ಶೋಷಣೆಗೆ ಒಳಗಾಗಿರುತ್ತಾರೆ. ಅಲ್ಲದೆ ದೇಶದ ಕೃಷಿ ಉತ್ಪನ್ನ ಮತ್ತು ಅದರಿಂದ ಒಟ್ಟಾರೆ ಉತ್ಪನ್ನದ (ಜಿ.ಡಿ.ಪಿ) ಮೇಲೆ ಆಗುತ್ತಿರುವ ದುಷ್ಪರಿಣಾಮದ ಅಗಾದತೆಯನ್ನು ಊಹಿಸಬಹುದಾಗಿರುತ್ತದೆ. ಜನಸಂಖ್ಯೆ ಆಧಾರಿತವಾಗಿ ಶೇಕಡ 70 ಜನಸಂಖ್ಯೆ ಇನ್ನೂ ಕೂಡ ಆರ್ಥಿಕವಾಗಿ ಸಂಸ್ಥೆಗಳ ಮೂಲ ಅವಲಂಭಿಸಿರುವುದಿಲ್ಲ.

ರಿಸರ್ವ್ ಬ್ಯಾಂಕಿನ ಮಾಜಿ ಅಧ್ಯಕ್ಷರು, ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರರು ಆಗಿದ್ದ ಡಾ॥ ರಂಗರಾಜನ್‌ರವರ ಸಮಿತಿ 2007 ಈ ರೀತಿ ವ್ಯಾಖ್ಯಾನಿಸಿದೆ. 'ವೆಚ್ಚವನ್ನು ಭರಿಸಬಹುದಾದ ದರಗಳಲ್ಲಿ ವಂಚಿತರಾದ ಸಮುದಾಯಗಳಿಗೆ, ದುರ್ಬಲ ವರ್ಗದವರಿಗೆ ಸಕಾಲದಲ್ಲಿ ಅವಶ್ಯಕತೆಯಷ್ಟು ಸಾಲ (ಪತ್ತು) ಮತ್ತು ಆರ್ಥಿಕ ಸೇವೆಗಳು ದೊರೆಯುವಂತೆ ದೃಢಪಡಿಸಿಕೊಳ್ಳುವ ಕ್ರಿಯೆಗೆ 'ಆರ್ಥಿಕ ಸೇರ್ಪಡೆ" ಎಂದು ಕರೆಯಲಾಗಿದೆ.

ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಅನುಷ್ಠಾನಕ್ಕೆ ಭಾರತ ಸರ್ಕಾರ, ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇದರಲ್ಲಿ ಆರಂಭಿಕ ಕಾರ್ಯಕ್ರಮವೆಂದರೆ 'ಶೂನ್ಯ' ಶಿಲ್ಕು ಖಾತೆ ತೆರೆಯಲು ಅನುಮತಿಸಿ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸಿ ಕೆಲವು ಜಿಲ್ಲೆಗಳನ್ನು ಸಂಪೂರ್ಣ ಆರ್ಥಿಕ ಸೇರ್ಪಡೆ ಜಿಲ್ಲೆಗಳಾಗಿ ಘೋಷಿಸಲಾಯಿತು. ಇದರಂತೆ ಬ್ಯಾಂಕ್‌ಗಳು ಸರಳ ಕೆ.ವೈ.ಸಿ. ಮಾನದಂಡಗಳನ್ನು ಅನುಸರಿಸಲು ತಿಳಿಸಲಾಯಿತು. ಅಂದರೆ ಖಾತೆ ತೆರೆಯಲು 'ನಿಮ್ಮ ಗ್ರಾಹಕರನ್ನು ತಿಳಿಯರಿ' (ಕೆ.ವೈ.ಸಿ) ಮಾನದಂಡಗಳಲ್ಲಿ ವ್ಯಕ್ತಿಯನ್ನು, ಅವರ ವಿಳಾಸ ಗುರುತಿಸಲು ಸರಳೋಪಾಯಗಳಾದ 'ಮತದಾನದ ಗುರುತು ಚೀಟಿ' ಈ ರೀತಿಯ ಮಾನದಂಡದ ಜೊತೆಗೆ ಮತ್ತೊಬ್ಬರು ಪರಿಚಯಿಸುವ ಅನಗತ್ಯತೆ. ಖಾತೆಯಲ್ಲಿ ಶಿಲ್ಕು ಇಲ್ಲದೆ ಶೂನ್ಯ ಖಾತೆ ತೆರೆಯಲು ಅಂದರೆ ಸಾಂಕೇತಿಕವಾಗಿ ರೂ. ಐದು ಅಥವಾ ಹತ್ತುಗಳು ಮಾತ್ರ ಇದ್ದರೆ ಸಾಕು. ಬ್ಯಾಂಕಿನಲ್ಲಿ ಹಣ ಕೂಡಿ ಇಡುವ ಅಭ್ಯಾಸವಾದ ನಂತರ ರೂ. 50,000/– ಶಿಲ್ಕು ಆದಲ್ಲಿ ಅದನ್ನು ಉಳಿತಾಯ ಖಾತೆ ಎಂದು ಪರಿಗಣಿಸಲು ಮತ್ತು ರೂ. 50,000/–ಗಳ ಸಾಲದ ಮಿತಿ ಒದಗಿಸಲು ಅವಕಾಶ ನೀಡಲಾಗಿತ್ತು. ಯೋಜನೆಯಲ್ಲಿ ನಿರೀಕ್ಷಿತ ಫಲಿತಾಂಶಗಳು ದೊರೆಯಲಿಲ್ಲ. ಇದರೊಡನೆ ವಿದ್ಯುನ್ಮಾದ ಬ್ಯಾಂಕಿಂಗ್‌ನಲ್ಲಿ, ತಾಂತ್ರಿಕತೆಯಿಂದ ಕ್ರಾಂತಿಯಂತೆ ಬದಲಾವಣೆಗಳು ಆದವು. ಇದರಲ್ಲಿ ಮಹತ್ತರ ಕ್ರಾಂತಿ ಎಂದರೆ ಕೋರ್ ಬ್ಯಾಂಕಿಂಗ್ ವ್ಯವಸ್ಥೆ (CBS) ಜಾರಿಯಲ್ಲಿ ಬಂದದ್ದು. (CORE) 2 (Centralized Online Real Exchange)

ಕೇಂದ್ರೀಯ ವ್ಯವಸ್ಥೆಯಡಿಯಲ್ಲಿ ತತ್ ಕ್ಷಣದಲ್ಲಿ ಹಣ ವಿನಿಮಯ ಕೇಂದ್ರೀಯ ದತ್ತಾಂಶ ಕೇಂದ್ರದಿಂದ ಮಾಹಿತಿ (ಹಣ) ಅಂತರ್ಜಾಲ (Internet) ಮೂಲಕ ತತ್‌ಕ್ಷಣದಲ್ಲಿ ವಿನಿಮಯವಾಗುವುದರಿಂದ ಇದರ ಅನುಕೂಲತೆಯನ್ನು ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ತೆರೆಯಿತು.

ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ತರಲಾಯಿತು. ಈ ಕಾರ್ಯಕ್ರಮ ಯಶಸ್ವಿ ಆಗಬೇಕಿದಲ್ಲಿ ಆರ್ಥಿಕ ಸೇರ್ಪಡೆಗೆ ಒಳಗಾಗದ ಜನ ಸಮೂಹ ಇರುವ ದೇಶದ ಮೂಲೆ ಮೂಲೆಯ ಗ್ರಾಮಾಂತರ ಪ್ರದೇಶಗಳಿಗೆ ಬ್ಯಾಂಕಿಂಗ್ ಅನುಕೂಲತೆಗಳು ದೊರೆಯುವಂತಾಗಬೇಕು. ಇದಕ್ಕೆ ನೆರವಿಗೆ ಬಂದಿರುವುದು ನೂತನ ತಾಂತ್ರಿಕತೆಯ ಅಳವಡಿಕೆ.

ಆರಂಭದಲ್ಲಿ ವಾಣಿಜ್ಯ ಬ್ಯಾಂಕ್‌ಗಳು ತದನಂತರ ಗ್ರಾಮೀಣ ಬ್ಯಾಂಕ್‌ಗಳು ಮತ್ತು ತದನಂತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಟ್ಟ ಕಡೆಯ ಮನುಷ್ಯನನ್ನು ಮುಟ್ಟುವ ಸಾಧ್ಯತೆ ಇರುವುದು ಸಹಕಾರ ಕ್ಷೇತ್ರ ಎಂದು ಕಂಡುಕೊಂಡು ಸಹಕಾರ ಬ್ಯಾಂಕ್‌ಗಳನ್ನು ಸೇರ್ಪಡೆಗೊಳಿಸಲಾಯಿತು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಯಾಂತ್ರಿಕತೆ ಅಳವಡಿಕೆಯಲ್ಲಿ ಮಂದಗತಿಯಾದದ್ದೂ ಕಾರಣ ಎಂದು ಒಪ್ಪಲೇಬೇಕು. ಇದೀಗ ಗ್ರಾಮಾಂತರ ಪ್ರದೇಶದಲ್ಲಿನ ಅಂಚೆ ಕಛೇರಿಗಳನ್ನೂ 'ಪಾವತಿ ಬ್ಯಾಂಕ್'ಗಳಾಗಿ ಪರಿವರ್ತಿಸಿರುವುದನ್ನು ಗಮನಿಸಬೇಕು. ನಿಜವಾದ ಅರ್ಥದಲ್ಲಿ ಆರ್ಥಿಕ ಸೇರ್ಪಡೆ ಕಾರ್ಯಕ್ರಮ, ಚಿಂತನೆ ಆರಂಭಗೊಂಡಿರುವುದೇ 'ಸಹಕಾರ ಚಳುವಳಿ'ಯಿಂದ, ಚಳುವಳಿಯ ಆರಂಭವೇ ಆರ್ಥಿಕ ಸೇರ್ಪಡೆಯ ಕಾರ್ಯಕ್ರಮದ ದ್ಯೋತಕ. ಸಹಕಾರ ಸಂಘಗಳ ಉಪನಿಯಮಗಳಲ್ಲಿ ಸದಸ್ಯರಿಗೆ 'ಡ್ರಿಫ್ಟ್' ಬಲವಂತದ ಸಣ್ಣ ಉಳಿತಾಯಕ್ಕೆ ಒತ್ತು, ಅವಶ್ಯವಿದ್ದವರಿಗೆ ಸಾಲ, ಸರಳ ಬಡ್ಡಿದರದಲ್ಲಿ ಮರುಪಾವತಿ. ಈ ಆರ್ಥಿಕ ಶಿಸ್ತು ಮತ್ತು ಸರ್ವರನ್ನೂ ಒಳಗೊಳ್ಳುವಿಕೆ ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಗುರಿ. ತನ್ಮೂಲಕ ಹರಿದು ಹಂಚಿಹೋಗಿರುವ ಸಂಪನ್ಮೂಲಗಳು ರಾಷ್ಟ್ರದ ಪ್ರಮುಖವಾಹಿನಿಗೆ ಸೇರ್ಪಡೆಗೊಳ್ಳುವ ಮೂಲಕ ಅಭಿವೃದ್ಧಿಗೆ ಅವಕಾಶ ನೀಡುವುದು. ಹೊರಗುಳಿಯಲು ಆರ್ಥಿಕ ಸೇರ್ಪಡೆಯಿಂದ ಕಾರಣಗಳೇನು? ಕಾರಣಗಳನ್ನು ಗುರುತಿಸಿ ಅವುಗಳನ್ನು ಹೋಗಲಾಡಿಸಿದಲ್ಲಿ ಎಲ್ಲರನ್ನೂ ಇಲ್ಲಿ ಒಳಗೊಂಡಂತೆ ಅಭಿವೃದ್ಧಿಗೆ ಕಾರಣವಾಗುತ್ತದೆ. ಮನಗಂಡು ನೂತನ ಆರ್ಥಿಕ ಸೇರ್ಪಡೆ ಕಾರ್ಯಕ್ರಮ ರೂಪಿಸಲಾಗಿದೆ ಮತ್ತು ಈ ಕಾರ್ಯಕ್ರಮ 'ಪ್ರಧಾನ ಮಂತ್ರಿಗಳ ಜನಧನ ಯೋಜನೆ'ಯಾಗಿ ಮಾರ್ಪಾಡುಗೊಂಡಿದೆ.

ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಜಿಲ್ಲೆಯ ಅಗ್ರ ಬ್ಯಾಂಕ್‌ಗಳು 'ಆರ್ಥಿಕ ಸಾಕ್ಷರತೆ' ಕೇಂದ್ರಗಳನ್ನು ತೆರೆದು ಅದರ ಮೂಲಕ ಮೊಟ್ಟ ಮೊದಲಿಗೆ ಜನರನ್ನು 'ಆರ್ಥಿಕ ಸಾಕ್ಷರ'ರನ್ನಾಗಿ ಮಾಡುವುದು. ಈ ಕೇಂದ್ರಗಳಲ್ಲಿ ಜನರಲ್ಲಿ ಜಾಗೃತಗೊಳಿಸಲು ಅವಶ್ಯ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ವಿವಿಧ ಶ್ರವ್ಯ, ದೃಶ್ಯ ಮಾಧ್ಯಮಗಳ ಸದ್ವಿನಿಯೋಗ. ಸಮೂಹಗಳನ್ನು ಒಳಗೊಂಡಂತೆ ವಿವಿಧ ಗ್ರಾಮೀಣ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಆರ್ಥಿಕ ಯೋಜನಾತ್ಮಕ ಬಳಕೆ, ವಿನಿಯೋಗ, ಆರ್ಥಿಕ ಅಶಿಸ್ತಿಗೆ ಕಾರಣವಾದ ಸಾಮಾಜಿಕ ಪಿಡುಗುಗಳನ್ನು ಬಿಡಿಸುವುದು ಕುಟುಂಬ, ಅದರಲ್ಲಿಯೂ ಮಹಿಳಾ ಕೇಂದ್ರೀಕೃತವಾಗಿ ಸರಳ ಆರ್ಥಿಕ ನಿರ್ವಹಣೆಯ ಶಿಸ್ತನ್ನು ತರುವುದು, ಪುಸ್ತಕಗಳು, ಕಿರುಹೊತ್ತಿಗೆಗಳು, ಪೋಸ್ಟರ್‌ಗಳು, ಬೀದಿನಾಟಕಗಳು, ಲಾವಣಿಗಳು, ಜಾಹಿರಾತು ಹೀಗೆ ಹತ್ತು ಹಲವು ರೀತಿಗಳನ್ನು ಉಪಯೋಗಿಸಿ ಕೊಳ್ಳಲಾಗುತ್ತಿದೆ. ಶಾಲೆ, ಕಾಲೇಜುಗಳಲ್ಲಿ ಯುವಜನರಲ್ಲಿ ಜಾಗೃತಿ ಉಂಟು ಮಾಡಲಾಗುತ್ತಿದೆ.

ಕುಟುಂಬ ನಿರ್ವಹಣೆಯಲ್ಲಿ ಗಳಿಸುವ ಸೀಮಿತ ಆದಾಯವನ್ನು ಆಧ್ಯತೆಮೇರೆಗೆ ಖರ್ಚುಮಾಡುವ ವಿಧಾನಗಳೂ ಮೊದಲನೆಯದಾಗಿ ಆಹಾರ, ಅದರಲ್ಲಿಯೂ ಪೌಷ್ಠಿಕ, ಸಮತೋಲನ ಆಹಾರ ಹಸಿವೆಯಿಂದ ದೂರವಾಗುವುದು ಆಹಾರ ಸಂರಕ್ಷಣೆಗೆ ಆಧ್ಯತೆ. ನ್ಯೂನ್ಯಪೋಷಣೆ ಹೋಗಲಾಡಿಸುವಿಕೆ. ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ದೇವದಾಸಿ ಪದ್ಧತಿ ಮುಂತಾದವುಗಳಿಂದ ಬಿಡುಗಡೆ, ಸಾಕ್ಷರತೆಗೆ ಆಧ್ಯತೆ. ಹೆಣ್ಣುಮಕ್ಕಳ ಶಿಕ್ಷಣ, ಆರೋಗ್ಯಕ್ಕೆ ಗಮನ, ಬಸರಿ ಬಾಣಂತಿಯರ

ಆರೈಕೆ, ತಾಯಿ ಮಗುವಿನ ಆರೋಗ್ಯ ನಿರ್ವಹಣೆಗೆ ಆಧ್ಯತೆ, ಕುಡಿತ, ಧೂಮಪಾನ, ತಂಬಾಕು ಸೇವನೆ ದುಶ್ಚಟಗಳಿಂದ ಬಿಡುಗಡೆ. ಶ್ರಮ ಜೀವನಕ್ಕೆ ಆಧ್ಯತೆ, ವಯಸ್ಕ ಶಿಕ್ಷಣ, ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ, ಆರೋಗ್ಯ ನಿರ್ವಹಣೆಗೆ ಪ್ರಾಮುಖ್ಯತೆ, ಒಟ್ಟಾರೆ ಕುಟುಂಬದ ಆದಾಯದಲ್ಲಿ ಸಂಸಾರ ನಿರ್ವಹಿಸಿ ಉಳಿತಾಯ ಮಾರ್ಗದರ್ಶನವನ್ನು ಅಚ್ಚುಕಟ್ಟಾಗಿ ಉಳಿತಾಯದ ಹಣವನ್ನು ಲಭ್ಯವಿರುವ ಕಿರು ಸ್ಥಳದಲ್ಲಿ ಅಲ್ಲಿ (ಸಾಸಿವೆ ಡಬ್ಬಿ, ಮರದ ತೊಲೆಯಡಿಯಲ್ಲಿ) ಇಟ್ಟು ಬಡ್ಡಿ ವ್ಯವಹಾರ, ಬೇರೆಯವರಿಗೆ ರಕ್ಷಣೆಗಾಗಿ ನೀಡಿ ಹಣ ಕಳೆದುಕೊಳ್ಳುವುದು ಈ ರೂಢಿಗಳನ್ನು ತಪ್ಪಿಸುವುದು.

ಉಳಿತಾಯವನ್ನು ಬ್ಯಾಂಕಿನ 'ಉಳಿತಾಯ ಖಾತೆ' ಯಲ್ಲಿರಿಸುವುದು ಕುಟುಂಬದ ಆದಾಯ ವೆಚ್ಚಗಳ ಬಜೆಟ್ ತಯಾರಿಕೆ ಅದರಂತೆ ಕುಟುಂಬ ನಿರ್ವಹಣೆ ಮಾಡುವುದು. ಇವುಗಳ ಬಗ್ಗೆ ಜಾಗೃತಿ ಮೂಡಿಸುವುದು 'ಆರ್ಥಿಕ ಸಾಕ್ಷರತಾ ಕೇಂದ್ರದ' ಕರ್ತವ್ಯವಾಗಿರುತ್ತದೆ. ಎಲ್ಲ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು 'ಆರ್ಥಿಕ ಸಾಕ್ಷರತಾ ಕೇಂದ್ರ'ಗಳನ್ನು ತೆರೆದಿವೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. 'ನೂತನ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿನ ಉದ್ದೇಶ ಕುಟುಂಬ ಕೇಂದ್ರೀಕೃತವಾಗಿ ಅದರಲ್ಲಿಯೂ ಮಹಿಳೆಯರಿಗೆ ಆಧ್ಯತೆ ನೀಡಿ ಆರ್ಥಿಕ ಒಳಗೊಳ್ಳುವಿಕೆಗೆ ಸಾಧ್ಯಗೊಳಿಸುವುದು. ಇದಕ್ಕಾಗಿ ಆಧ್ಯತಾ ಅನುಸಾರ ಆರ್ಥಿಕ ಸಾಕ್ಷರರನ್ನಾಗಿ ಮಾಡುವ ಜೊತೆಗೆ (1) ಉಳಿತಾಯ (2) ಸಾಲ (3) ಪಾವತಿಗಳು (4) ವಿಮೆ (5) ಪಿಂಚಣಿ ಸೌಲಭ್ಯಗಳು. ಇವುಗಳನ್ನು ಒದಗಿಸುವುದು.

**1. ಉಳಿತಾಯ :** ಕುಟುಂಬದಲ್ಲಿ ಕನಿಷ್ಠ ಎರಡು ಖಾತೆಗಳನ್ನು ತೆರೆಯುವುದು ಒಂದು ಕಡ್ಡಾಯವಾಗಿ ಮಹಿಳೆಯರದು ಆಗಿರತಕ್ಕದ್ದು. ಈ ಖಾತೆಯು 'ಶೂನ್ಯ' ಶಿಲ್ಕು ಖಾತೆ ಆಗಿರುತ್ತದೆ. (Zero Balance Account 'ತೊಡಕು ರಹಿತ' ಖಾತೆ (No Frill Account) ಈಗ ಇದನ್ನು (BSDA) ಮೂಲ ಉಳಿತಾಯ ಠೇವಣಿ . (Basic Savings Deposit Account) 2 ಕರೆಯಲಾಗುತ್ತಿದೆ. ಈ ಖಾತೆ ತೆರೆಯಲು ತಮ್ಮ ಗ್ರಾಹಕರ ಬಗ್ಗೆ ತಿಳಿಯಲು (ಕೆ.ವೈ.ಸಿ) ಸರಳ ಗುರುತಿಸುವಿಕೆ ವಿಧಾನಗಳನ್ನು ಅಳವಡಿಸಿಕೊಳುವುದು ಯಾವುದೇ ಪರಿಚಯಿಸುವವರು ಅನಗತ್ಯ. (ಮತದಾರ ಗುರುತು ಚೀಟಿ) ಈಗ 'ಆಧಾರ್' ಕಾರ್ಡ್' ಇದ್ದಲ್ಲಿ ಅಥವಾ ಸಂಖ್ಯೆ ಇದ್ದಲ್ಲಿ ಸಾಕಾಗುತ್ತದೆ. ಯಂತ್ರಾಧಾರಿತವಾಗಿ 'ಹೆಬ್ಬೆಟ್ಟಿನ ಗುರುತು' ಮಾತ್ರ ಸಾಕಾಗಿದೆ. ಯಂತ್ರದ ಮೇಲೆ ಹೆಬ್ಬೆಟ್ಟಿನ ಗುರುತು ಮೂಡಿಸಿದರೆ 'ಆಧಾರ್'ನಲ್ಲಿನ ಎಲ್ಲ ವಿವರಗಳು ಲಭ್ಯವಾಗುತ್ತದೆ. ಇದರಿಂದ ತತ್‌ಕ್ಷಣವೇ ಖಾತೆ ತೆರೆಯಲು ಸಾಧ್ಯವಾಗಿದೆ.

**2. ಸಾಲ (ಪತ್ತು) :** ಉಳಿತಾಯ ಖಾತೆ ತೆರೆದು ವ್ಯವಹಾರಗಳು ಉತ್ತಮವಾಗಿದ್ದಲ್ಲಿ (ಠೇವಣಿಸುವ, ಹಿಂಪಡೆಯುವುದು) ಅವರಿಗೆ ಒಂದು ಲಕ್ಷದವರೆವಿಗೂ ಯಾವುದೇ ಖಾತ್ರಿ ಇಲ್ಲದೇ ಸಾಲ ನೀಡಬಹುದಾಗಿದೆ. ಸಾಮಾನ್ಯ ಕ್ರೆಡಿಟ್ ಕಾರ್ಡ್, (ಜಿ.ಸಿ.ಸಿ) ಇದನ್ನು ಈಗ ಖಾತೆ ನಿರ್ವಹಿಸಲು 'ರೂಪ' (RuPay) ಕಾರ್ಡ್ ಮೂಲಕ ನೀಡಬಹುದಾಗಿದೆ. ಈ 'ಕ್ರೆಡಿಟ್' ಅಥವಾ 'ಡೆಬಿಟ್' ಕಾರ್ಡ್‌ನ್ನು ದೇಶದ ಯಾವುದೇ ಎ.ಟಿ.ಎಂ (ಆಟೋಮ್ಯಾಟಿಕ್ ಟೆಲ್ಲರ್ ಮೆಷಿನ್) ಕೌಂಟರ್‌ನಲ್ಲಿ ಉಪಯೋಗಿಸಿ ಹಣ ಡ್ರಾ ಮಾಡಬಹುದಾಗಿದೆ. ಇತ್ತೀಚೆಗಿನ 'ನಬಾರ್ಡ್' ನಿರ್ದೇಶನದಂತೆ ಕೆ.ಸಿ.ಸಿ ಸಾಲವನ್ನು 'ರೂಪ' ಕಾರ್ಡ್ ಮೂಲಕವೇ ವಿತರಿಸಬೇಕಾಗಿದೆ.

**3. ಪಾವತಿ (Remittance)** ವಾಹಿನಿಯಲ್ಲಿ ಹಣವನ್ನು ಸರಳವಾಗಿ, ಸುಲಭವಾಗಿ ಯಾವ ಖಾತೆಯಿಂದಾದರು ಎಲ್ಲಿಂದ ಎಲ್ಲಿಗಾದರೂ ವರ್ಗಾವಣೆ ಮಾಡಬಹುದಾಗಿದೆ. ಒಟ್ಟಾರೆ ಒಮ್ಮೆಲೆ ಪಾವತಿ ಬಾಕಿ (ಶಿಲ್ಕು)ಗಳ ಬಗ್ಗೆ ನಿರ್ಧಾರ (RTGS - Real Time Gross Settlement) ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ ವ್ಯವಸ್ಥೆ (NEFT - National Electronic Fund Transfer Mechanism) ಶಿಲ್ಕುಗಳು ಆಗಿಂದ್ದಾಗ್ಗೆ ಅಂತಿಮಗೊಳ್ಳುತ್ತದೆ. ಈ ಸಾಧ್ಯತೆಗಳಾಗಿರುವುದು 'ಕೋರ್ ಬ್ಯಾಂಕಿಂಗ್' ವ್ಯವಸ್ಥೆಯಿಂದಾಗಿ. ಈ ವರ್ಗಾವಣೆಗಳ ನಿರ್ವಹಣೆಯನ್ನು ಭಾರತದ ರಾಷ್ಟ್ರೀಯ ಪಾವತಿ ನಿಗಮ (NPCI National Payment Corporation of India) ನಿರ್ವಹಣೆ ನಡೆಸುತ್ತಿದೆ.

ರಿಸರ್ವ್ ಬ್ಯಾಂಕಿನ ಮತ್ತು ಇತರೆ ಬ್ಯಾಂಕ್‌ಗಳ ಸಹಯೋಗದಿಂದ ಈ ಉದ್ದೇಶಕ್ಕಾಗಿ ಸ್ಥಾಪಿಸಿರುವ ಸಂಸ್ಥೆ, ಸರ್ಕಾರದ ಯಾವುದೇ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಪಾವತಿಸುವ, ಪಾವತಿಸಬೇಕಾದ ಹಣವನ್ನು ನೇರವಾಗಿ ಅವರ ಉಳಿತಾಯ ಖಾತೆಗೆ ಜಮಾ ಮಾಡಬಹುದಾಗಿದೆ. (DBT - Direct Benefit Transfer) ಉದಾ: ಅನಿಲ ಸಬ್ಸಿಡಿ, ಪಿಂಚಣಿ ಸೌಲಭ್ಯಗಳು 'ನರೇಗ' ಪಾವತಿಗಳು.

3. **ವಿಮೆ :** ಆಧುನಿಕ ನಾಗರೀಕ ಸಮಾಜದ ಅವಶ್ಯಕತೆ ವಿಮೆ, ಭಾರತದ ಸಮಾಜದ ಸ್ಥಿತಿಗಳು ಬದಲಾವಣೆಗೊಳ್ಳುತ್ತಿವೆ. ಹಿರಿಯ ನಾಗರೀಕರ, ಅಬಲರ ಜವಾಬ್ದಾರಿಯನ್ನು ಕುಟುಂಬ ನಿರ್ವಹಿಸುತ್ತಿತ್ತು ಕಾಲಕ್ರಮೇಣ ಆದರೆ ಜವಾಬ್ದಾರಿ ಸಮುದಾಯದಿಂದ ಸರ್ಕಾರದೆಡೆಗೆ ತಿರುಗುತ್ತಿದೆ. ಆದುದರಿಂದ ಅನಾರೋಗ್ಯ ಅಪಘಾತದಿಂದ ಸಾವಿನವರೆಗೆ ವಿಮೆ ಅತಿಮುಖ್ಯ ಪಾತ್ರವಿಮೆಯ ಖಾಸಗೀಕರಣಗೊಂಡು ಅನೇಕ ಉತ್ತ ಒದಗಿಸುತ್ತಿವೆ. ಅಲ್ಲದೆ ಸರ್ಕಾರ ವೈಯಕ್ತಿಕ ಅಪಘಾತ (PAIS), ಬೆಳೆ ವಿಮೆ, ವಾತಾವರಣ ಅವಲಂಭಿತ ಬೆಳೆ ವಿಮೆ ಹೀಗೆ. ಹತ್ತು ಹಲವು ವಿಮಾಯೋಜನೆಗಳು ರೈತರಿಗೆ, ಕೃಷಿ ಕಾರ್ಮಿಕರಿಗೆ, ಕಾರ್ಮಿಕರಿಗೆ ಲಭ್ಯವಿದೆ. ಈ ಲಭ್ಯ ಯೋಜನೆಗಳಿಗೆ ಒಳಪಡಿಸುವ ಕ್ರಮಗಳಿಗೆ ಒಳಗೊಳ್ಳಿಸಬೇಕಾದ್ದು ಬ್ಯಾಂಕಿಂಗ್ ಕ್ಷೇತ್ರದ ಕರ್ತವ್ಯ ಎಂದು ಪರಿಭಾವಿಸಿದೆ. ಠೇವಣಿ ಆಧಾರಿತ. ಸಾಲ ಜೋಡಿತ ವಿಮಾಯೋಜನೆಗಳು ಲಭ್ಯವಿದೆ. ಈ ಸೌಲಭ್ಯಗಳನ್ನು ಒದಗಿಸುವುದು ಬ್ಯಾಂಕಿನಲ್ಲಿನ ಉಳಿತಾಯ ಖಾತೆ ಮೂಲಕವೇ ಆಗಿದೆ.

**5. ಪಿಂಚಣಿ :** ಸಮಾಜದ ಅಬಲರ, ಅಂಗವಿಕಲರ, ವೃದ್ಯಾಪ್ಯದಲ್ಲಿರುವವರ, ವಿಧವೆಯರ ಕಲ್ಯಾಣಕ್ಕಾಗಿ ಸರ್ಕಾರ ಅನೇಕ ಪಿಂಚಣಿ ಯೋಜನೆಗಳನ್ನು ಜಾರಿಗೆ ತಂದಿದೆ. ಇದರಿಂದಾಗಿ ಅವರ ಜೀವನ ನಿರ್ವಹಣೆಗೆ ಸಹಕಾರಿಯಾಗಿದೆ. ಇದರ ಪಾವತಿಯನ್ನೂ ಅವರು ಹೊಂದಿದ ಉಳಿತಾಯ ಖಾತೆ ಮೂಲಕವೇ ಪಾವತಿಸಬೇಕು. ಈ ಯೋಜನೆ ಅನುಷ್ಠಾನದಲ್ಲಿಯೂ ಮದ್ಯಮವರ್ತಿಗಳ ಪಾಲಾಗುವುದನ್ನು ತಪ್ಪಿಸಬೇಕಾಗಿದೆ. ನೇರ ಫಲಾನುಭವಿಗೆ ತಲುಪಿಸುವ ವ್ಯವಸ್ಥೆಗೆ ನಾಂದಿ. ತನ್ನ ಉಳಿತಾಯ ಖಾತೆಯನ್ನು ಬ್ಯಾಂಕಿನಲ್ಲಿ ತಾನು ಹೊಂದುವುದಾಗಿದೆ. " CRISP Credit . Remittance 2 Insurance 2 Pension ಪಿಂಚಣಿ ಅನುಷ್ಠಾನಗೊಳ್ಳಬೇಕಾದ್ದು ಆರ್ಥಿಕ ಸೇರ್ಪಡೆ, ಆರ್ಥಿಕ ಒಳಗೊಳ್ಳುವಿಕೆಯ ಗುರಿ.

ಈ ಯೋಜನೆಯ ಅನುಷ್ಠಾನ ಬ್ಯಾಂಕ್‌ಗಳು (ರಿಸರ್ವ್ ಬ್ಯಾಂಕಿನ (ಲೈಸೆನ್ಸ್) ಪರವಾನಗಿ ಪಡೆದ) ಹೊಂದಿದ ಖಾತೆಯ ಮೂಲಕವೇ ಅನುಷ್ಠಾನಗೊಳ್ಳಬೇಕು ಎಂಬುದು ಭಾರತ ಸರ್ಕಾರ ರಿಸರ್ವ್ ಬ್ಯಾಂಕ್‌ನ ನಿಲುವು. ಇದಕ್ಕೆ ಸಹಾಯಕ್ಕೆ ಒದಗಿ ಬಂದಿರುವುದು ತಂತ್ರಜ್ಞಾನ ಮತ್ತು ರಿಸರ್ವ್ ಬ್ಯಾಂಕ್ ಬ್ಯಾಂಕಿಂಗ್ ಸಹಾಯಕರು (Banking Facilitators) ಬ್ಯಾಂಕಿಂಗ್ ಬಾಗಿದಾರರು / ಏಜೆಂಟರು (Banking Correspondent) ಗಳ ನೇಮಕಾತಿಗೆ ಅನುಮತಿಸಿರುವುದು. ಬ್ಯಾಂಕಿಂಗ್ ಸಹಾಯಕರು/ಸಲಹೆಗಾರರು ಪ್ರೇರೇಪಿಸಿ ನೇಮಕಾತಿಗೆ ಸಹಾಯಕರು/ ಜನರಿಗೆ ಗೆ ಗೆಳೆಯ. ತತ್ವಜ್ಞಾನಿ, ಮಾರ್ಗದರ್ಶಿಯಾಗಿ ಕರ್ತವ್ಯನಿರ್ವಹಿಸುತ್ತಾರೆ. ಬ್ಯಾಂಕಿಂಗ್ ಬಾಗ್ಮಿದಾರರು ನೇರವಾಗಿ ಬ್ಯಾಂಕಿಂಗ್ ಕೆಲಸ ನಿರ್ವಹಿಸುತ್ತಾರೆ. ಇದರಿಂದಾಗಿ ಬ್ಯಾಂಕ್ಗಳು ಶಾಖೆಗಳನ್ನು ತೆರೆಯುವ ಅವಶ್ಯಕತೆ ಇರುವುದಿಲ್ಲ ಶಾಖೆಯ ವ್ಯಾಪ್ತಿಗೆ ಗ್ರಾಮೀಣ ಪ್ರದೇಶದಲ್ಲಿ 'ಯಂತ್ರ ಸಾಧನ' (Hand Holding Machine) ಮೂಲಕ ಕಾರ್ಯನಿರ್ವಹಿಸುತ್ತಾರೆ, ಸಾಧನಗಳಲ್ಲಿ ಆಧುನಿಕತೆ ಬಂದಿದೆ. ಆರಂಭದಲ್ಲಿ ಹರಿಸಬಹುದಾದ ಕಾರ್ಡುಗಳಿದ್ದು (Swiping Cards) ಈಗ ಹೆಬ್ಬೆಟ್ಟಿನ ಗುರುತು (Biometric) ಸಾಧನವಾಗಿದ್ದು ಕರ್ತವ್ಯ ಕಾರ್ಯಾಚರಣೆ ಸುಲಭವಾಗಿದೆ. ಈ ಯಂತ್ರದ ಮುಖೇನೆ ಹಣ ಸಂದಾಯ, ಹಣಪಾವತಿ, ಸಾಲ ವಿತರಣೆ, ಸಾಲ ವಸೂಲಾತಿ ಎಲ್ಲವೂ ಸಾಧ್ಯವಾಗಿದೆ. 'ಶಾಖೆ ಇಲ್ಲದ ಶಾಖೆ' (Branch Less Banking) ಅತಿ ಸೂಕ್ಷ್ಮ ಶಾಖೆ ಬಂದಿವೆ (Ultra Small Branches). ಇಟ್ಟಿಗೆ ಗಾರೆ (Brick and Marter) ಶಾಖೆ ಇಲ್ಲದಂತಾಗಿದೆ. ಇದು ಜನರ ಮನೆ ಬಾಗಿಲಿನಲ್ಲಿ ಸೇವೆ ಸಲ್ಲಿಸಲು ಅನುಕೂಲಕರವಾಗಿದೆ.

ಈ ಸಾಧನ ವಿದ್ಯುನ್ಮಾನ ತಂತ್ರಜ್ಞಾನದಿಂದ ಮಾಹಿತಿಯನ್ನು ಕೇಂದ್ರೀಯ ದತ್ತಾಂಶ ಕೇಂದ್ರಕ್ಕೆ ದಾಖಲಿಸಿ ಶಾಖೆಯಲ್ಲಿನ

ತಂತ್ರಾಂಶದಲ್ಲಿಯೂ ದಾಖಲಿಸಿ ಪ್ರತಿಧ್ವನಿಸುತ್ತದೆ. ಆದುದರಿಂದ ಸೋರಿಕೆಯಾಗಲಿ / ನಕಲಿ ವ್ಯವಹಾರಗಳಾಗಲಿ ಸಾಧ್ಯವಿರುವುದಿಲ್ಲ, 'ಮೊಬೈಲ್' ದೂರವಾಣಿಗೂ ಮಾಹಿತಿ ರವಾನೆ ಸೌಲಭ್ಯ ಇದೆ. ಇದರಿಂದ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಇದರ ಮುಂದುವರಿದ ಭಾಗವೇ ಪ್ರಧಾನ ಮಂತ್ರಿಗಳ 'ಜನ್ ದನ್' ಯೋಜನೆ.

ಸಹಕಾರ ಸಂಘಗಳನ್ನು ಬ್ಯಾಂಕಿಂಗ್ ಸಹಾಯಕರಾಗಿ ಬ್ಯಾಂಕಿಂಗ್ ಬಾಗ್ನಿದಾರರು (ಏಜೆಂಟರು) ಆಗಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗಿದಾರರಾಗ ಬಹುದಾಗಿದೆ. ಜಿಲ್ಲಾ ಕೇಂದ್ರ ಬ್ಯಾಂಕ್‌ಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಿಕೊಂಡಿರುವುದರಿಂದ ಇದರ ಮೂಲಕ ಸದಸ್ಯ ಸಹಕಾರ ಸಂಘಗಳು ಅದರಲ್ಲಿಯೂ ಪ್ರಾ.ಕೃ.ಪ.ಸ.ಸಂಘಗಳು ಪಾಲ್ಗೊಳ್ಳಲು ಸಾಧ್ಯವಿದೆ. ಪ್ರಾ. ಕೃ.ಪ.ಸ.ಸಂಘಗಳು ಕಂಪ್ಯೂಟರೀಕರಣ ಆಗುವುದಲ್ಲದೆ ಜಿ.ಕೇ.ಸ. ಬ್ಯಾಂಕ್‌ಗಳ ಶಾಖೆಗಳಿಗೆ ತಂತ್ರಾಂಶ ಹೊಂದಾಣಿಕೆ ಮಾಡಿಕೊಂಡು ತನ್ನ ಸದಸ್ಯರೆಲ್ಲರ ಖಾತೆಗಳನ್ನು ನಿರ್ವಹಿಸಲು ಸಾಧ್ಯತೆಗಳನ್ನು ಅವಿಷ್ಕಾರಗೊಳಿಸುವುದು ಈ ದಿನದ ಅವಶ್ಯಕತೆ. (ದ.ಕ.ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಯಶಸ್ವಿಯಾಗಿ ನಿರ್ವಹಿಸುತ್ತಿದೆ) ಇದರಿಂದಾಗಿ ಕೆ.ಸಿ.ಸಿ. ಸಾಲ 'ರೂಪ' ಕಾರ್ಡ್ ಮೂಲಕ ವಿತರಣೆ ಸಾಧ್ಯವಾಗುತ್ತದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಖಾತೆದಾರರ ಸಂಖ್ಯೆ ಹೆಚ್ಚಳಗೊಳಿಸಲು ತನ್ಮೂಲಕ ತನ್ನ ವ್ಯಾಪ್ತಿಯ ಆರ್ಥಿಕ ಸೇರ್ಪಡೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ.

ಆರ್ಥಿಕ ಸಾಕ್ಷರತೆ ಮತ್ತು ಆರ್ಥಿಕ ಸೇರ್ಪಡೆ ಕಾರ್ಯಕ್ರಮಗಳಿಗೆ 'ನಬಾರ್ಡ' ಬೆನ್ನೆಲುಬಾಗಿ ನಿಂತಿದೆ. ಆರ್ಥಿಕ ಸೇರ್ಪಡೆ ತಾಂತ್ರಿಕ ನಿಧಿ, ಆರ್ಥಿಕ ಸೇರ್ಪಡೆ ನಿಧಿಯಿಂದ ಸಹಕಾರಿ ಸಂಘ, ಸಹಕಾರಿ ಬ್ಯಾಂಕ್‌ಗಳಿಗೆ ಆರ್ಥಿಕ ಸಹಾಯ ಸಾಮರ್ಥ್ಯವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹಾಲಿ ಎರಡೂ ನಿಧಿಗಳನ್ನು ಒಟ್ಟುಗೂಡಿಸಿ. 'ಆರ್ಥಿಕ ಸೇರ್ಪಡೆ' ನಿಧಿಯಾಗಿ ಪರಿವರ್ತಿಸಿದೆ.

ಸ್ವಸಹಾಯ ಗುಂಪುರಚನೆ ಮತ್ತು ಅದು ಚಳುವಳಿ ತಳೆದಿರುವುದು ಮಹಿಳಾ ಸಬಲೀಕರಣಕ್ಕೆ ಕಾರಣವಾಗಿರುವುದು ಸರ್ವವಿಧಿತೆ. ಇದರಲ್ಲಿ ಸಹಕಾರ ಸಂಘಗಳೂ ತೊಡಗಿಸಿಕೊಂಡು ದಾಖಲೆಯನ್ನೇ ನಿರ್ಮಿಸಿದೆ. ಸ್ವಸಹಾಯ ಗುಂಪುಗಳು ಬ್ಯಾಂಕಿನ ಉಳಿತಾಯ, ಸಾಲ ಪಡೆಯುವಿಕೆ, ಸಾಲ ನೀಡಿಕೆಯಿಂದ ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಗೆ ಕಾರಣಿಭೂತವಾಗಿದೆ. ಇದರಿಂದ ಈ ಚಳುವಳಿಯು ಆರ್ಥಿಕ ಸೇರ್ಪಡೆಯನ್ನು ಮುನ್ನೆಲೆಗೆ ತಂದಿದೆ. ಈಗಿನ ಸವಾಲು ಸಹಕಾರ ಸಂಘಗಳು ತಂತ್ರಜ್ಞಾನದ ಹಿನ್ನಡೆ, ಸವಲತ್ತು ಒದಗಿಸುವಲ್ಲಿ ಮಂದಗತಿ ಇದರಿಂದಾಗಿ ತೀವ್ರಸ್ಪರ್ಧೆಯನ್ನು 'ಸೂಕ್ಷ್ಮ ಆರ್ಥಿಕ' ಕಂಪನಿಗಳಿಂದ ಎದುರಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಈ ದಿಸೆಯಲ್ಲಿ ಅವಶ್ಯ ಚಿಕಿತ್ಸಾ ಕ್ರಮಗಳನ್ನು ಸಹಕಾರ ವಲಯ ಕೈಗೊಳ್ಳಬೇಕಾಗಿದೆ. ಅದರಂತೆ ಜಂಟಿ ಭಾಧ್ಯತಾ ಗುಂಪುಗಳು, ಚಟುವಟಿಕೆ ಆಧಾರಿತವಾಗಿ ರಚನೆಯಾಗಿದ್ದು ಯುವಜನರ ಸಬಲತೆಗೆ ಕಾರಣವಾಗಿದೆ.

'ರೈತ ಕೂಟ'ಗಳು, 'ರೈತಮಿತ್ರ' ಗುಂಪುಗಳು ಆರ್ಥಿಕ ಸೇರ್ಪಡೆ ಕಾರ್ಯಕ್ರಮಗಳಿಗೆ ಸಹಕಾರಿಯಾಗಿವೆ. ಸಹಕಾರಿ ಸಂಘಗಳು ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಬೇಕಾಗಿದೆ. ಆಧುನಿಕ ತಂತ್ರಜ್ಞಾನದ ನೆರವಿನಿಂದ ಶೋಷಿತ ದುರ್ಬಲರ ಆರ್ಥಿಕ ಒಳಗೊಳ್ಳುವಿಕೆಗೆ, ಅವರನ್ನೂ ಅವರ ಸಂಪನ್ಮೂಲಗಳನ್ನು ರಾಷ್ಟ್ರದ ಪ್ರಗತಿಯ ಪ್ರಮುಖವಾಹಿನಿಗೆ ತರಬೇಕಾಗಿರುವುದು ಸಹಕಾರಿಗಳಾದ ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

(ಲೇಖಕರು ಮಂಡ್ಯ ಜಿಲ್ಲೆಯಲ್ಲಿ 'ಆರ್ಥಿಕ ಸಾಕ್ಷರತೆ' ಕಾರ್ಯಕ್ರಮದಲ್ಲಿ ನೇರ ಭಾಗಿಯಾಗಿದ್ದು ಕ.ರಾ.ಸ. ಅಪೆಕ್ಸ್ ಬ್ಯಾಂಕ್, 'ನಬಾರ್ಡ್'ನಿಂದ ಸಂಪನ್ಮೂಲ ವ್ಯಕ್ತಿಯಾಗಿ ಗುರುತಿಸಿ ಅದರಂತೆ ರಾಜ್ಯಾದ್ಯಂತ, ಜಿ.ಕೇ.ಸ. ಬ್ಯಾಂಕ್ ಮತ್ತು ಪ್ರಾ. ಕೃ.ಪ.ಸ. ಸಂಘಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅನುಭವವಿದೆ)

****************************************************************************************************

# 9. ಯುವ ಜನತೆ ಮತ್ತು ಸಹಕಾರ

ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಪ್ರಗತಿಗೆ 'ಸಹಕಾರ' ವೇ ಸೂಕ್ತ ಮಾರ್ಗ. ಅದಕ್ಕಾಗಿಯೇ ಮಹಾತ್ಮಾ ಗಾಂಧಿಯವರು ಆರ್ಥಿಕ ಪ್ರಗತಿಗೆ 'ಸಹಕಾರ'ವೇ ಹೆಬ್ಬಾಗಿಲು ಎಂದು ತಿಳಿಸಿದ ಉಕ್ತಿ ಎಲ್ಲರೂ ಅರಿತ ವಿಷಯವಾಗಿದೆ. 'ಸಣ್ಣದುಸುಂದರ' ಎಂಬ ಗಾಂಧೀಜಿಯವರ ಆರ್ಥಿಕ ಪರಿಕಲ್ಪನೆಗೆ ಆರ್ಥಿಕ ಚಿಂತನೆ ತುಂಬಿ ಬಹುಸಂಖ್ಯಾತ ಜನತೆಯು ಕೈಗೆ ಕೆಲಸ ಕೊಡಲು ಸಣ್ಣ ಸಣ್ಣ ಘಟಕಗಳಿಗೆ ಪ್ರಾಮುಖ್ಯತೆ ನೀಡಬೇಕು ಎಂಬುದು ಜರ್ಮನಿಯ ಆರ್ಥಿಕ ತಜ್ಞಷೂಮೇಕರ್‌ನ ವಾದ.

ಆದರೆ ಜಗತ್ತು ಈಗ ಬಂಡವಾಳ ಶಾಹಿ ಮತ್ತು ಖಾಸಗಿಕರಣದತ್ತ ಸಾಗುತ್ತಿದ್ದು ಆರ್ಥಿಕ ಪ್ರಗತಿಯನ್ನು ಕೇವಲ ಬಂಡವಾಳ ಕ್ರೂಡೀಕರಣದಿಂದ ಅಳೆಯಲಾಗುತ್ತಿದ್ದು ಸಾಮಾಜಿಕ ನ್ಯಾಯವೆಂಬುದು ಒಂದು 'ವಿಡಂಬನೆ'ಯಾಗಿ ತೋರುತ್ತಿರುವದು ವಿಪರ್ಯಾಸವೇ ಸರಿ. ಸಹಕಾರ ರಂಗದಲ್ಲಿ ಸಣ್ಣ ಸಣ್ಣ ಘಟಕಗಳಾಗಿ ಕಾರ್ಯನಿರ್ವಹಿಸಿದಲ್ಲಿ ತನ್ನ ಸದಸ್ಯರಿಗೆ ಅಗತ್ಯತೆಗಳನ್ನ ಪೂರೈಸಲು ಸಾಧ್ಯವಾಗುವುದಿಲ್ಲ. ಬಂಡವಾಳ ಕ್ರೌಡೀಕರಣ ಸಾಧ್ಯವಾಗುವುದಿಲ್ಲ. ಕಾರ್ಯಾಚರಣೆಯು ವಿಸ್ತಾರ ಕಡಿಮೆಯಾಗುತ್ತದೆ ಎಂಬ ಕಾರಣಕ್ಕಾಗಿಯೇ ಸಹಕಾರ ಒಕ್ಕೂಟ ವ್ಯವಸ್ಥೆಯನ್ನು ನಿರ್ಮಾಣ ಮಾಡಲಾಗಿದೆ.

ಇದು ಖಾಸಗಿ ಬಂಡವಾಳ ಶಾಹಿಗೆ ಸ್ಪರ್ಧೆ ಒಡ್ಡಬಲ್ಲದು. ಇದರಿಂದ ಉದ್ಯೋಗಗಳ ನಿರ್ಮಾಣ, ಬಂಡವಾಳ ಕ್ರೌಡೀಕರಣ, ಲಾಭದ ನ್ಯಾಯಯುತ ಹಂಚಿಕೆ, ಅಸಮಾನತೆಯ ನಿರ್ಮೂಲನೆ, 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಸಾಧ್ಯ. ಇದು ಸಹಕಾರಿಗಳ ಆಶಯ.

ಈ ಹಿನ್ನೆಲೆಯಲ್ಲಿ ಪರಿಶೀಲಿಸುವುದೇ ಆದರೆ ಭಾರತದಲ್ಲಿ ಈ ಆಶಯ ಈಡೇರಿಸಲಾಗುತ್ತಿದೆಯೇ ಎಂಬದನ್ನು ಸಂಶಯದಿಂದಲೇ ನೋಡಬೇಕಾಗಿರುವ್ಯದು ಖೇದಕರ ಸಂಗತಿಯಾಗಿದೆ. ಅಲ್ಪಾವಧಿ ಕೃಷಿ ಸಾಲ ಬ್ಯಾಂಕಿಂಗ್ ವಲಯ, ಕೆಲವು ರಾಜ್ಯಗಳಲ್ಲಿ ಹಾಲು ಉತ್ಪಾದನ ಕ್ಷೇತ್ರ, ಕೆಲವು ರಾಜ್ಯಗಳಲ್ಲಿ ಮೀನುಗಾರಿಕೆ ಕ್ಷೇತ್ರ, ಕೆಲವು ರಾಜ್ಯಗಳಲ್ಲಿ ನೇಕಾರಿಕೆ ಕ್ಷೇತ್ರ, ಕೆಲವು ರಾಜ್ಯಗಳಲ್ಲಿ ಆಹಾರ ಧಾನ್ಯ ಮಾರುಕಟ್ಟೆ ಕ್ಷೇತ್ರ, ಕೆಲವು ರಾಜ್ಯಗಳಲ್ಲಿ ಪಟ್ಟಣ ಬ್ಯಾಂಕ್, ಕೃಷಿಯೇತರ ಪತ್ತು ಮಾತ್ರ ಅಸ್ತಿತ್ವದಲ್ಲಿದ್ದು ಈ ವಲಯದ ಖಾಸಗಿ ಮತ್ತು ಸಾರ್ವಜನಿಕ ವಲಯದ ತೀವ್ರ ತರದ ಸ್ಪರ್ಧೆ ಎದುರಿಸುತ್ತಿದ್ದು ಮಾರುಕಟ್ಟೆಯಲ್ಲಿ ತನ್ನ ಪಾಲುಕ್ಷೀಣಿಸುತ್ತಿರುವುದನ್ನು ಕಾಣತ್ತಿದ್ದೇವೆ. ಗ್ರಾಹಕ ವಲಯ, ಕೃಷಿ ಉತ್ಪನ್ನ ಮಾರುಕಟ್ಟೆ ವಲಯ, ವಸತಿ ವಲಯ, ಸಕ್ಕರೆ ಉತ್ಪಾದನೆ ವಲಯ ಹೀಗೆ ಅನೇಕ ವಲಯಗಳು ಕಣ್ಮರೆಯಾಗುತ್ತಿರುವುದನ್ನು ಅಲ್ಲಗಳೆಯಲಾಗದು.

ಇದಕ್ಕೆ ನಾವು ಅನೇಕ ಕಾರಣಗಳನ್ನು ಹುಡುಕಬಹುದಾದರೂ ಪ್ರಮುಖ ಕಾರಣ ಯುವ ಜನತೆ ಸಹಕಾರದ ಅಭಿಲಾಷೆಯನ್ನು ಅರಿಯದೇ ಇರುವುದು, ಕಾರ್ಯಾಚರಣಿ ಬಗ್ಗೆ ಅಪನಂಬಿಕೆಗಳು, ಅವರ ಮುಂದೆ ಸರಿಯಾದ 'ಮಾದರಿ'ಗಳು ಇಲ್ಲದೇ ಇರುವುದು, ಸಹಕಾರ ಸಂಸ್ಥೆಗಳನ್ನ ಒಳಗೊಂಡಂತೆ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿನ ಆಗುಹೋಗುಗಳು ಅಪಮೌಲ್ಯಗಳು ಈ 'ಮಾಹಿತಿ ಯುಗ' ದಲ್ಲಿ ಅತಿಪ್ರಚಾರ ಪಡೆಯುತ್ತಿರುವುದು ಕಾರಣವಾಗಿದೆ. ಆದರೆ ಮಧ್ಯಮ, ಕೆಳ ಮಧ್ಯ ಮ, ಬಡವ, ಅಸಂಘಟಿತ ವಲಯದ ಆರ್ಥಿಕ ಬೆಳವಣಿಗೆಗೆ 'ಸಹಕಾರ' ಹೊರತುಪಡಿಸಿ ಉಳಿಕೆ ಕ್ಷೇತ್ರದಿಂದ ಸಾಧ್ಯವಿಲ್ಲ ಎಂಬ ಅರಿವು ಮೂಡಿಸುವುದು ಈ ದಿನಮಾನದ ಅನಿವಾರ್ಯ ಅವಶ್ಯಕತೆಯಾಗಿದೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. 55ರಷ್ಟು ಮಂದಿ 20 ರಿಂದ 59ವಯೋಮಾನದವರಾಗಿರುತ್ತಾರೆ. ಇವರು ದುಡಿಯುವ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಕರ್ನಾಟಕದಲ್ಲಿ 35 ವರ್ಷ ಒಳಗಿನ 1.88 ಕೋಟಿ ಯುವಕ ಯುವತಿಯರು ಕುಶಲ ತರಬೇತಿ ಪಡೆಯುವ ಅವಶ್ಯಕತೆ ಇದೆ ಎಂದು ಅಧ್ಯಯನ ವರದಿಯೊಂದು ತಿಳಿಸುತ್ತದೆ. ಇದರಿಂದ ಯುವಶಕ್ತಿಯ

ಚಿತ್ರಣವೊಂದು ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಈ ಸನ್ನಿವೇಶದಲ್ಲಿ ಸಹಕಾರ ಪರಿಸರ ಪ್ರಜ್ಞೆಯನ್ನು ಯವಜನತೆಯಲ್ಲಿ ಮಾಡಿಸುವುದು ಸವಾಲೇ ಸರಿ. ಆದುದರಿಂದ ಸಹಕಾರ ವಲಯ ಪ್ರಗತಿ ಬಯಸುವವರು ಈ ಕೆಳಕಂಡ ಉತ್ತಮಗಳನ್ನು ಸವಾಲಾಗಿ ಪರಿಗಣಿಸಿ ಕಾರ್ಯಗತಗೊಳಿಸುವುದು ಅತಿ ಪ್ರಮುಖವಾಗಿರುತ್ತದೆ.

1. ಶಿಕ್ಷಣದಲ್ಲಿ 'ಸಹಕಾರ'ವನ್ನು ಅಳವಡಿಸುವುದು. ಪ್ರೌಢ ಶಿಕ್ಷಣದಲ್ಲಿ ಸಹಕಾರದ ಔಚಿತ್ಯ, ಕಾರ್ಯಚರಣೆ ಬಗ್ಗೆ ಪರಿಚಯ, ಸ್ಥಳೀಯ ಸಹಕಾರ ಸಂಘಗಳಿಗೆ ಮಕ್ಕಳ ಭೇಟಿ, ಉಪಯೋಗಗಳ ಬಗ್ಗೆ ಮಾಹಿತಿ.
2. ಪದವಿ ಪೂರ್ವ ಶಿಕ್ಷಣದಲ್ಲಿ ಅರ್ಥಶಾಸ್ತ್ರ, ವಾಣಿಜ್ಯ, ರಾಜಕೀಯ ಶಾಸ್ತ್ರ, ಸಮಾಜ ವಿಜ್ಞಾನ 'ವಿಸ್ತ್ರತ ಅಧ್ಯಯನಕ್ಕೆ ಅವಕಾಶ.
3. ಪದವಿ ಶಿಕ್ಷಣದಲ್ಲಿ ಪ್ರತ್ಯೇಕ ಸಹಕಾರ ವಿಷಯ, ಅರ್ಥಶಾಸ್ತ್ರ, ವಾಣಿಜ್ಯ, ರಾಜಕೀಯ, ಸಮಾಜ ವಿಜ್ಞಾನ ವಿಷಯಗಳಲ್ಲಿ ಅಳವಡಿಸುವುದು.
4. ವೃತ್ತಿಪರ ತರಗತಿಗಳಾದ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಇಂಜಿನಿಯರಿಂಗ್ ಪದವಿಗಳಲ್ಲಿ ಸಹಕಾರ ಹೇಗೆ ಔದ್ಯೋಗಿಕ ಕ್ಷೇತ್ರ ಎಂಬುದನ್ನು ಪರಿಚಯಿಸುವುದು. ಅಲ್ಲದೇ, ಪ್ರತಿಷ್ಠಿತ ಸಹಕಾರ ಸಂಸ್ಥೆಗಳೊಡನೆ ಸಹಯೋಗ ಹೊಂದುವುದು.
5. ಸರ್ಕಾರದಶಿಕ್ಷಣ ನೀತಿ, ಮತ್ತು ಸಹಕಾರ ನೀತಿಯಲ್ಲಿಈ ಅಂಶಗಳನ್ನುಅಳವಡಿಸಿಕೊಳ್ಳುವುದು.
6. ಸಹಕಾರ ಇಲಾಖೆ, ಸಹಕಾರಸಂಘಗಳ ನಿಬಂಧಕರು ನಿಯಂತ್ರಕ ಮಾತ್ರವಲ್ಲದೇ, ಅಭಿವೃದ್ಧಿ ಪರ, ಸಹಕಾರ ಸ್ನೇಹಿಯಾಗಿ ವರ್ತಿಸುವುದು. ಗೆಳೆಯ, ತತ್ವಜ್ಞಾನಿ, ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದು.
7. ಸಾಮಾಜಿಕ, ಆರ್ಥಿಕ, ನಾಗರಿಕ, ತಾಂತ್ರಿಕ ಪರಿಸರದಲ್ಲಿ ಕ್ರಾಂತಿಕಾರಿಕ ಬದಲಾವಣೆಗಳಿಗೆ ತಕ್ಕಂತೆ ವಿಭಿನ್ನ ಅವಶ್ಯಕತೆಗಳ ಪೂರೈಕೆಗಾಗಿ ನವನವೀನ ಚಿಂತನೆಗಳುಳ್ಳ 'ಪೆಟ್ಟಿಗೆ ಹ್ರೆರಗಿನ ಚಿಂತನೆ' (out of box) ಯುಳ್ಳಕಾರ್ಯಚರಣೆಗಳ ಅಳವಡಿಕೆ, ವಿನೂತನ ಉದ್ದೇಶಿತ, ವಿನೂತನ ಸದಸ್ಯತ್ವ ಉಳ್ಳ ಸಹಕಾರ ಸಂಘಗಳ ಸ್ಥಾಪನೆ. ಅದಕ್ಕೆ ಉತ್ತೇಜನ.
8. ಸಹಕಾರ ವಲಯದ ಉಪಯುಕ್ತತೆ, ಆಗಿರುವ ಸಾಧನೆಗಳು, ಇತರೆ ರಾಜ್ಯ, ರಾಷ್ಟ್ರಗಳ ಸಹಕಾರದ ಪರಿಚಯ, ಮಾಹಿತಿ, ಪ್ರಚಾರ, ಒದಗಿಸುವುದು.
9. ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿ ಸಹಕಾರ ಸಂಘಗಳನ್ನು ಆರಂಭಿಸಿ ಪ್ರಾಯೋಗಿಕವಾಗಿ ಅವರಿಂದಲೇ ಪ್ರತ್ಯಕ್ಷ ಅನುಭವ ಪಡೆಯುವಂತೆ ಮಾಡುವುದು. ನಾಯಕತ್ವಗುಣಗಳನ್ನು ಬೆಳೆಸಿಕೊಳ್ಳಲು, ವ್ಯವಹಾರಿಕ ಗುಣಗಳು, ಆಡಳಿತಾತ್ಮಕ ಗುಣಗಳನ್ನು ಬೆಳೆಸಿಕೊಳ್ಳಲು ಇದು ಸಹಕಾರಿಯಾಗಲಿದೆ.
10. ಯುವ ಜನತೆಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ಮತ್ತು ವಿನೂತನ ಸಹಕಾರ ಸಂಘಗಳ ಸ್ಥಾಪನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಉತ್ತೇಜನನೀಡುವುದು.

ಈ ಉಪಕ್ರಮಗಳಿಂದ ಪೀಳಿಗೆಯಿಂದ ಪೀಳಿಗೆಗೆ ಸಹಕಾರ ಮುಂದುವರಿಯಬಹುದು. ವಿನೂತನ ಸಹಕಾರ ಪ್ರಯೋಗಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ದಿಟವಾದ 'ಸಹಕಾರ ಚಳುವಳಿ'ಕಾರ್ಯಸಾಧ್ಯ. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು "ಹಾಗೆಯೇ" ಇಂದಿನ ಯುವ ಜನತೆಯೇ ಮುಂದಿನ ಸಹಕಾರಿ" ಗಳು ಎಂಬುದು ಅತಿಶಯೋಕ್ತಿಯಲ್ಲ.

ಪರಮ ಪದದಲಿ ನೋಡು: ಬೇರುಗಳ್ ವ್ಯೋಮದಲಿ ।

ಧರೆಗಿಳಿದ ಕೊಂಬು ರೆಂಬೆಗಳು, ಬಿಳುಲುಗಳು ॥

ಚಿರಂಜೀವಿ ವೃಕ್ಷವಿದು ವಿಶ್ವ ಜೀವೋ ಅಶ್ವತ್ಥ ॥॥

ಪರಕಿಸಿದರ್ಥವನು ಮಂಕುತಿಮ್ಮ. – ಡಿ.ವಿ.ಜಿ.ಸ

ಸಹಕಾರವು ಒಂದು ಅಶ್ವತ್ಥ ಮರ ವಿದ್ದಂತೆ, ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ!

*****************************************************************************************

# 10. ಮಹಿಳಾ ಸಬಲತೆ – ಸಹಕಾರವೇ ಸೂಕ್ತ

'ಸಹಕಾರ' ಎಂದರೆ 'ಒಬ್ಬರು ಎಲ್ಲರಿಗಾಗಿ ಎಲ್ಲರೂ ಒಬ್ಬರಿಗಾಗಿ' ಎಂಬುದು ಒಪ್ಪಿಕೊಂಡ ಸೂತ್ರ. ಸಹಕಾರ ಸಂಘ ಎಂದರೆ 'ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮ ಸಾಮಾನ್ಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳ, ಆಕಾಂಕ್ಷೆಗಳ ಪೂರೈಕೆಗಾಗಿ ರಚಿಸಿಕೊಂಡ ಸಮೂಹ ಒಡೆತನವುಳ್ಳ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಒಳಗೊಂಡ ಸ್ವಾಯತ್ತ ಔದ್ಯೋಗಿಕ ಸಂಸ್ಥೆ'.

ಸಬಲತೆ ಅಥವ ಸಶಕ್ತತೆ (empowerment) ಎಂದರೇನು? ಮಾನವನು (ಮಹಿಳೆಯರು) ತನ್ನ ಅಸ್ತಿತ್ವ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಅವಶ್ಯ ಜೀವನದ ವಿವಿಧ ಆಯಾಮಗಳಾದ ಸಾಮಾಜಿಕ, ರಾಜಕೀಯ, ಆರ್ಥಿಕ, ಮನೋವೈಜ್ಞಾನಿಕ, ಧಾರ್ಮಿಕ, ಆಧ್ಯಾತ್ಮಿಕಗಳಲ್ಲಿ ನ್ಯಾಯಯುತ ಮತ್ತು ನೈತಿಕ ಶಕ್ತಿ (ಬಲ) ವನ್ನು ಹೊಂದುವುದು.

ಈ ಸಬಲತೆ ಹೊಂದಲು ತುಳಿತಕ್ಕೊಳಗಾದ ಅಥವ ಶೋಷಣೆಗೊಳಗಾದ ಸಮುದಾಯ (ಮಹಿಳೆಯರು) ಅವರ ಜೀವನದ ಮೇಲೆ ಅವರೇ ನಿಯಂತ್ರಣ ಸಾಧಿಸಲು, ಹಕ್ಕು ಹೊಂದುವಂತಾಗುವುದು ಬಹು ಆಯಾಮದ ಸಾಮಾಜಿಕ ಪ್ರಕ್ರಿಯೆ. ಈ ಪ್ರಕ್ರಿಯೆಗೆ ಅತ್ಯಂತ ಅವಶ್ಯಕತೆ 'ಆರ್ಥಿಕ ಗಳಿಕೆ' ಇದರಿಂದ 'ಆರ್ಥಿಕ ಸ್ವಾತಂತ್ರ್ಯ' ಸಾಧ್ಯ. ಇದರೊಡನೆ ತಾನು ಅವಶ್ಯ ಜ್ಞಾನ, ನೈಪುಣ್ಯತೆ ಮತ್ತು ಸಕಾರಾತ್ಮಕ ಮನೋಚಿಂತನೆ ಹೊಂದಿದಲ್ಲಿ 'ಸಬಲತೆ' ಸಾಧ್ಯ. ಇದಕ್ಕೆ ಸೂಕ್ತ ಮಾರ್ಗ 'ಸಹಕಾರ'. ಸಹಕಾರ ಸಂಘದ ವ್ಯಾಖ್ಯಾನದಲ್ಲಿಯೇ ಇದು ಅಡಕಗೊಂಡಿದೆ. ಆರ್ಥಿಕ, ತನ್ಮೂಲಕ ಸಾಮಾಜಿಕ ಮತ್ತು ಹೊಂದಿಕೊಂಡಂತೆ ಇತರೆ ಆಯಾಮಗಳ ಸಕಾರಾತ್ಮಕ ಬದಲಾವಣೆಗೆ ಸೂಕ್ತ ಮಾರ್ಗ 'ಸಹಕಾರ ಸಂಘ'ಗಳು ಎಂದರೆ ತಪ್ಪಿಲ್ಲ. ಭಾರತದ ಸಂವಿಧಾನದ ಆಶಯವೂ ಇದೇ ಆಗಿದೆ. ಆರ್ಥಿಕ, ಸಾಮಾಜಿಕ ನ್ಯಾಯ ಒದಗಿಸುವುದು, ಸಮಾನ ಸ್ಥಾನ ಮತ್ತು ಅವಕಾಶ ದೊರೆಯುವಂತೆ ಮಾಡುವುದು ಪ್ರತಿ ವ್ಯಕ್ತಿಯ ಘನತೆಯನ್ನು ಎತ್ತಿಹಿಡಿರುವುದೇ ಆಗಿದೆ.

ಈ ಸದಾಶಯಗಳನ್ನು ಈಡೇರಿಸಲು ಮಹಿಳಾ ಸಹಕಾರ ಸಂಘಗಳಿಂದ ಮಾತ್ರ ಸಾಧ್ಯ. ಈ ದಿಶೆಯಲ್ಲಿ ನಮ್ಮ ಇಂದಿನ ಈ ಸಹಕಾರ ಸಂಘಗಳ ಸಾಧನೆ ಮತ್ತು ಮುಂದೆ ಇರುವ ಸವಾಲುಗಳು, ಅನುಸರಿಸಬೇಕಾದ ಮಾರ್ಗದ ಬಗ್ಗೆ ಪರಾಮರ್ಶೆ ಈ ದಿನದ ಅವಶ್ಯಕತೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಆರ್ಥಿಕ ಪರಿಸರ ನಿರ್ಮಾಣದಿಂದ ಆದ ಕ್ರಾಂತಿಕಾರಕ ಬದಲಾವಣೆಯಲ್ಲಿ ಎದುರಿಸಬೇಕಾದ ಸವಾಲು ಮತ್ತು ಜಟಿಲವಾಗಿರುವುದು ಅನುಭವ ವೇಧ್ಯವಾಗಿದೆ.

ವಿವಿಧ ರೀತಿಯ ಮಹಿಳಾ ಸಹಕಾರ ಸಂಘಗಳ ಕಾರ್ಯಾಚರಣೆಯನ್ನು ಗಮನಿಸುತ್ತಾ ಬಂದಿರುತ್ತೇವೆ. ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು, ಪತ್ತಿನ ಸಹಕಾರ ಸಂಘಗಳು, ಸಹಕಾರ ಬ್ಯಾಂಕುಗಳು, ಉತ್ಪಾದನೆ ಮತ್ತು

ಮಾರುಕಟ್ಟೆ ಸಹಕಾರ ಸಂಘಗಳು, ಮೀನುಗಾರಿಕೆ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಪ್ರಮುಖ ಪಾತ್ರ ನಿರ್ವಹಿಸಿಕೊಂಡು ಬಂದಿವೆ.

ಮಹಿಳಾ ವಿವಿದೋದ್ಧೇಶ ಸಹಕಾರ ಸಂಘಗಳು ಉಪನಿಯಮಗಳ ರೀತ್ಯ ಅನೇಕ ಉದ್ಧೇಶಗಳನ್ನು ಹೊಂದಿದ್ದರೂ ಉತ್ಪಾದನೆ ಮಾರಾಟ ಮತ್ತು ವ್ಯವಹಾರವನ್ನು ಮಾಡುವುದನ್ನು ಕಾಣುತ್ತಲ್ಲಿದ್ದೇವೆ. ಅದರಲ್ಲಿಯೂ ಸರ್ಕಾರದ ಕಾರ್ಯಕ್ರಮವಾದ ಪೌಷ್ಠಿಕ ಆಹಾರ ವಿತರಣೆ, ಪಡಿತರ ವಿತರಣೆ, ಈ ಕಾರ್ಯಕ್ರಮಗಳನ್ನೇ ಅವಲಂಭಿತವಾಗಿದ್ದರಿಂದ ಮತ್ತು ಸರ್ಕಾರದ ನೀತಿಯ ಬದಲಾವಣೆಯಿಂದ ಈ ಕಾರ್ಯಕ್ರಮಗಳಲ್ಲಿ ಸ್ಪರ್ಧಾತ್ಮಕವಾಗಿ ಚಟುವಟಿಕಯಲ್ಲಿ ಭಾಗಿಯಾಗಲು ಸಾಧ್ಯವಾಗದೇ ಇರುವುದರಿಂದ ತನ್ನ ಕಾರ್ಯಚಟುವಟಿಕೆಯಲ್ಲಿ ಸ್ಥಗಿತಗೊಂಡಿವೆ. ಗ್ರಾಹಕ ವಸ್ತು ವಹಿವಾಟು ಈ ದಿನಮಾನಗಳಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಕಾರಕ ಬದಲಾವಣೆ ಮತ್ತು ಅದರ ಅಳವಡಿಕೆಯಿಂದ ಆಧುನಿಕ ಗ್ರಾಹಕರ ಸೇವೆಗೆ ನಮ್ಮ ಸಹಕಾರ ಸಂಘಗಳು ಒಗ್ಗಿಕೊಳ್ಳದೆ, ಚಟುವಟಿಕೆ ನಡೆಸಲಾರದೆ ಸ್ಥಗಿತಗೊಂಡಿವೆ. ಬೆರಳ ತುದಿಯಲ್ಲಿ ಚರ ದೂರವಾಣಿಯಲ್ಲಿ (mobile) ಮನೆಗೆ ನ್ಯಾಯಯುತ ಬೆಲೆಗೆ ಸಾಮಗ್ರಿ ಮನೆ ಬಾಗಿಲಿಗೆ ತಲುಪುವಂತಾಗಿದೆ ಅದೂ ಮಿಂಚಿನ ವೇಗದಲ್ಲಿ. ವಸ್ತುಗಳ ಆಯ್ಕೆಯು ಚರ ದೂರವಾಣಿಯಲ್ಲಿ ಅಂತರ್ಜಾಲದ ಮೂಲಕ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿಯೂ ಮೆದುತಂತ್ರಜ್ಞಾನ (software) ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ ಎಂಬುದು ಅನುಭವ ವೇದ್ಯ. 'ಬಿಲ್ಲಿಂಗ್' ನಿಂದ ಹಿಡಿದು ಸರಬರಾಜುದಾರನ (vendor) ವರೆಗೆ ಇದರ ತಂತ್ರಜ್ಞಾನ ಸಹಕಾರಿಯಾಗಿದೆ. ಒಂದು ವಸ್ತು ಬಿಕರಿಯಾಗಿದೆ ಎಂದಾಕ್ಷಣ ಅಲ್ಪಸಮಯದಲ್ಲಿ (ಕೆಲವೇ ನಿಮಿಷಗಳಲ್ಲಿ) ಆಸ್ಥಾನವನ್ನು ಬದಲಿ ವಸ್ತು ಆಕ್ರಮಿಸಿಕೊಂಡು, ದಾಸ್ತಾನು (ಗೋದಾಮಿನಲ್ಲಿ) ಕಳೆದು ಸರಬರಾಜುದಾರನಿಗೆ ಮಾಹಿತಿ ತಲುಪಿ ಸರಬರಾಜುದಾರ ಸರಬರಾಜು ಮಾಡಿ ಆತನಿಗೂ ಖರೀದಿ ಹಣ ಕ್ಷಣಮಾತ್ರದಲ್ಲಿ ತಲುಪುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ಈ ಕ್ರಾಂತಿಕಾರಕ ಬದಲಾವಣೆಯನ್ನು ಉಪಯೋಗಿಸಿಕೊಳ್ಳಲು, ತೆರೆದಿರುವ ಅವಕಾಶಗಳನ್ನು ಬಾಚಿ ತಬ್ಬಿಕೊಳ್ಳಲು ಸಹಕಾರ ಸಂಘಗಳು ಸಜ್ಜುಗೊಂಡಿವೆಯೇ ಎಂಬುದು ಯಕ್ಷಪ್ರಶ್ನೆ ಎಂದೇ ಹೇಳಬೇಕು.

ಉತ್ಪಾದನೆ ಮಾಡಿದ ವಸ್ತುಗಳ ಮಾರುಕಟ್ಟೆಗೆ ಮಾಹಿತಿ ತಂತ್ರಜ್ಞಾನ, ಅಂತರ್ಜಾಲ ಅವಲಂಭಿತ ಮಾರುಕಟ್ಟೆ ಒದಗಿಸುವ ಕಂಪನಿಗಳ ಜೊತೆ ಒಡಂಬಡಿಕೆ ಮಾಡಿಕೊಂಡು ನಮ್ಮ ಉತ್ಪಾದಿತ ವಸ್ತುಗಳನ್ನು ಮಾರಾಟ ಮಾಡುವುದು. ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಆಧುನಿಕ ಲಭ್ಯ ಸಕಲ ಸೌಲಭ ಪರಿಕರಗಳನ್ನು ಉಪಯೋಗಿಸಿ ಮೆದುತಂತ್ರಜ್ಞಾನವನ್ನು ಅಳವಡಿಸಿಕೊಂಡು ಆಧುನಿಕ ಮಳಿಗೆಗಳನ್ನು ನಿರ್ಮಿಸಿ ನಿರ್ವಹಿಸುವುದು. ಮೊದಲನೆಯದು ಸುಲಭ ಸಾಧ್ಯ. ಎರಡನೆಯದು ಸಾಧ್ಯವಲ್ಲದ್ದು ಎಂಬುವಲ್ಲಿ ಆರ್ಥಿಕ ಬಂಡವಾಳ ಮತ್ತು ಆಧುನಿಕ ಮಾರಾಟ ಸೌಲಭ್ಯಗಳ ಬೇಡಿಕೆ ಪೂರೈಸಬೇಕಾಗುತ್ತದೆ. 'ಕೊಳ್ಳು ಬಾಕು ಸಂಸ್ಕೃತಿಯ' ಆರ್ಥಿಕ ಲಾಭ ಸೌಲಭ್ಯ ವಂಚಿತರಿಗೂ ತಲುಪುವಂತಾಗಲು ಸಹಕಾರ ಸಂಘಗಳು ಈ ಅವಶ್ಯಕತೆಗಳ ಪೂರೈಕೆಗಾಗಿ ಮಾರ್ಗಗಳನ್ನು ಕಂಡುಹಿಡಿಯಬೇಕಾದ್ದು ಈ ದಿನಗಳ ಅವಶ್ಯಕತೆಯಾಗಿದೆ. ಸಾವಯವ ಉತ್ಪನ್ನಗಳು ಸಿರಿದಾನ್ಯಗಳು, ಕರಕುಶಲವಸ್ತುಗಳು, ಕೈಮಗ್ಗ ಉತ್ಪನ್ನಗಳು, ಪ್ರಾಕೃತಿಕ ನಾರಿನ ಉತ್ಪನ್ನಗಳು ಇತ್ತೀಚಿನ ದಿನಗಳಲ್ಲಿ ಬೇಡಿಕೆ ಪಡೆಯುತ್ತಿವೆ. ಇದರ ಲಾಭವನ್ನು ನಮ್ಮ ಸಹಕಾರ ಸಂಘಗಳು ಪಡೆಯಬೇಕಾಗಿದೆ.

ಮಹಿಳಾ ಪತ್ತು ಸಹಕಾರ ಸಂಘಗಳು ಮತ್ತು ಮಹಿಳಾ ಸಹಕಾರ ಬ್ಯಾಂಕುಗಳು ಸದಸ್ಯರ ಆರ್ಥಿಕ ಸಬಲತೆಗೆ ಕಾರಣವಾಗಿರುತ್ತದೆ. ಯಾವುದೇ ವ್ಯವಹಾರಕ್ಕೆ, ಉತ್ಪಾದನೆಗೆ, ಆಸ್ತಿ ಅರ್ಜನೆಗೆ ಅಗತ್ಯ ದುಡಿಯುವ ಬಂಡವಾಳ ಮತ್ತು ಹೂಡಿಕೆ ಬಂಡವಾಳವನ್ನು ಒದಗಿಸುತ್ತಿವೆ. ಸಾಲಕ್ಕೆ ಅಗತ್ಯ ಭದ್ರತೆ ಖಾತ್ರಿ ಸಾಲಗಾರ ಸದಸ್ಯ ಒದಗಿಸುವುದು, ಪ್ರಮುಖ

ಅಂಶವಾಗಿರುತ್ತದೆ. ಖಾತ್ರಿ ಭದ್ರತೆ ಇಲ್ಲದೆ ಸಾಲ ಪಡೆಯಲು ಅಥವಾ ಸಾಲ ಒದಗಿಸಲು ಸಾಧ್ಯವಿಲ್ಲವೇ? ಈ ಹಿಂದೆ ಇತರರ ಖಾತ್ರಿ ಪಡೆದು ಸಾಲ ಒದಗಿಸುವುದು ಮತ್ತು ಅವರು ಸಕಾಲದಲ್ಲಿ ಸಾಲ ಮರುಪಾವತಿಸುವುದು ನಡೆಯುತ್ತಿತ್ತು. ಆದರೆ ಅನೇಕ ಸದಸ್ಯ ಸಾಲಗಾರರು ಮರುಪಾವತಿಸಲು ವಿಫಲರಾದ್ದರಿಂದ, ವಿಫಲರಾದ ಸಂದರ್ಭದಲ್ಲಿ ವಸೂಲಿಗೆ ಯಾವುದೇ ತರಹ ಇಲ್ಲವಾದ್ದರಿಂದ ಈ ಪದ್ಧತಿಯನ್ನು ಕೈ ಬಿಡುವುದೇ ಸೂಕ್ತ ಎಂಬ ಅಭಿಪ್ರಾಯ ಮೂಡಿದೆ. ಯಾರು ಆರ್ಥಿಕವಾಗಿ ಅಬಲರಾಗಿದ್ದಾರೆಯೋ ಅವರಿಗೆ ಸಾಲ ಒದಗಿಸಿ ಸಬಲರನ್ನಾಗಿ ಮಾಡಬೇಕೆಂಬ ಸದುದ್ದೇಶ ಹೊಂದಿದ್ದರೂ ಸಾಲ ಮರುಪಾವತಿ ಶಿಸ್ತು ಇಲ್ಲದಾಗಿರುವುದು ಸಾಲ ವಸುಲಾತಿ ಪರಿಸರ ಕಲುಷಿತಗೊಂಡಿರುವುದು ಈ ರೀತಿಯ ಸಾಲ ಒದಗಿಸುವ ಬಗ್ಗೆ ಮರುಚಿಂತನೆ ಮಾಡುವಂತಾಗಿದೆ. ಈ ದಿಶೆಯಲ್ಲಿ ಒಬ್ಬರಿಗೆ ವೈಯುಕ್ತಿಕ ಸಾಲ ನೀಡುವುದರ ಬದಲಿಗೆ 'ಗುಂಪು'ಗೆ ಸಾಲ ನೀಡುವುದರಿಂದ ಗುಂಪಿನ ಸದಸ್ಯರು ಒಬ್ಬರು ಮತ್ತೊಬ್ಬರಿಗೆ ಜವಾಬ್ದಾರಿಯಾಗುವುದರಿಂದ ಸಾಲ ಮರುಪಾವತಿ ಸಾಧ್ಯವಾಗುತ್ತದೆ ಎಂಬುದು ಅನುಭವ ವೇದ್ಯ. ಈ ದಿಶೆಯಲ್ಲಿ ಸ್ವ–ಸಹಾಯ ಗುಂಪುಗಳು, ಜಂಟಿ ಬಾಧ್ಯತಾ ಗುಂಪುಗಳ ಕಾರ್ಯಾಚರಣೆ ಸಹಕಾರಿಯಾಗಬಲ್ಲವು, ಮಹಿಳಾ ಸಬಲತೆಗೆ ಕಾರಣವಾಗಿವೆ.

ಸ್ವ–ಸಹಾಯ ಗುಂಪುಗಳ ಯಶಸ್ವಿ ಕಾರ್ಯಾಚರಣೆ ಬಗ್ಗೆ ಸಾಲ ಒದಗಿಸುವ ಸಹಕಾರ ಸಂಘ/ಬ್ಯಾಂಕ್ ನಿರಂತರ ಸಂಪರ್ಕ, ಮೇಲ್ವಿಚಾರಣೆ ಇರಿಸಿಕೊಂಡಲ್ಲಿ ಸಹಕಾರ ಸಂಘಕ್ಕೆ ವ್ಯವಹಾರಿಕ ಅವಕಾಶ ಮತ್ತು ಸದಸ್ಯರ ಆರ್ಥಿಕ ಸಬಲತೆಗೆ ಪೂರಕವಾಗುತ್ತದೆ. ಈ ಗುಂಪುಗಳ ಯಶಸ್ವಿ ಕಾರ್ಯಾಚರಣೆಗೆ ಕೆಲವು ಮೂಲಭೂತ ತತ್ವಗಳ ಪಾಲನೆ ಬಗ್ಗೆ ಸಾಲ ಒದಗಿಸುವ ಸಂಸ್ಥೆ ಗಮನ ಹರಿಸಬೇಕಾಗುತ್ತದೆ. ಅವು:

1. ಗುಂಪಿನ ಸದಸ್ಯರು ಒಂದು ಪ್ರದೇಶದ ನಿವಾಸಿಯಾಗಿರಬೇಕು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಸಮಾನರಾಗಿರಬೇಕು. ಮೇಲಾಗಿ ಸಮಾನ ಮನಸ್ಕರಾಗಿರಬೇಕು. ಸಮಾನತೆ ಮತ್ತು ಏಕರೂಪತೆ ಸದಸ್ಯರಲ್ಲಿರಬೇಕು.
2. ಮೊದಲು ಉಳಿತಾಯ ತದನಂತರ ಸಾಲ.
3. ಸಭೆಗಳನ್ನು ಕಾಲಕಾಲಕ್ಕೆ ನಿರಂತರವಾಗಿ ನಡೆಸಬೇಕು/ನಡೆಸುತ್ತಿರಬೇಕು.
4. ಅವಶ್ಯ ದಾಖಲಾತಿಗಳು, ನಡವಳಿಕೆ ಪುಸ್ತಕ, ನಗದು ಪುಸ್ತಕ, ಲೆಡ್ಜರ್‌ಗಳ ನಿಖರ ನಿರ್ವಹಣೆ
5. ಸದಸ್ಯತ್ವ, ಸಭೆ ನಡವಳಿಕೆಗಳಲ್ಲಿ ನಿರ್ಧಿಷ್ಠ ಮಾನದಂಡಗಳನ್ನು ಪಾಲಿಸಬೇಕು.
6. ಗುಂಪಿನ ನಾಯಕತ್ವ, ಪ್ರತಿನಿಧಿಗಳು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಿರಬೇಕು. ಯಾವ ಸದಸ್ಯರೂ ಅವಕಾಶ ವಂಚಿತರಾಗಬಾರದು.
7. ನಡವಳಿಕೆಗಳಲ್ಲಿ ಪಾರದರ್ಶಕತೆ, ನಿರ್ಧಾರ ಕೈಗೊಳ್ಳುವಲ್ಲಿ ಎಲ್ಲ ಸದಸ್ಯರ ಪಾಲ್ಗೊಳ್ಳುವಿಕೆ ಬಹು ಮುಖ್ಯ.
8. ಸಾಲದ ಅವಶ್ಯಕತೆ, ಮೊತ್ತ, ಬಡ್ಡಿ, ಮರುಪಾವತಿ ಕಂತು ಇವುಗಳ ಬಗ್ಗೆ ಗುಂಪೇ ನಿರ್ಧಾರ ತೆಗೆದುಕೊಳ್ಳುವುದು.
9. ಗುಂಪು ಸಾಲ ಸದುಪಯೋಗ, ಸಾಲ ಮರುಪಾವತಿಗೆ ಒತ್ತಾಯ ನಿರ್ವಹಿಸುತ್ತದೆ.
10. ಗುಂಪಿನ ಸದಸ್ಯರ ಆಂತರ ಬಾಂಧವ್ಯ, ಗುಂಪಿನ ವ್ಯವಹಾರ ಕ್ರಿಯೆ ಸಾಲ ಮರುಪಾವತಿಗೆ ಸಹಕಾರಿಯಾಗುತ್ತದೆ.
11. ಗುಂಪು ಕೇವಲ ಸಾಲ ಪ್ರಕ್ರಿಯೆಯಲ್ಲಿ ಅಲ್ಲದೆ ತನ್ನ ಸುತ್ತಲಿನ ಪರಿಸರದ ಆರ್ಥಿಕ, ಸಾಮಾಜಿಕ ನಾಗರೀಕ ಅವಶ್ಯಕತೆಗಳ, ಸಾಂಸ್ಕೃತಿಕ ಕ್ರಿಯೆಗಳಲ್ಲಿ ಭಾಗ ವಹಿಸುತ್ತದೆ. 'ತಿರುಗುವ ಬುಗುರಿ' (spinoff) ಯಂತೆ ವರ್ತಿಸುತ್ತದೆ.

12. ಗುಂಪಿನ ಸದಸ್ಯ ಸಂಖ್ಯೆ 15–20 ಮಾತ್ರ ಇರಬೇಕಾಗುತ್ತದೆ.

ಜಂಟಿ ಬಾಧ್ಯತಾ ಗುಂಪಿನಲ್ಲಿ ಕೇವಲ 4–5 ಸದಸ್ಯರಿದ್ದು ಚಟುವಟಿಕೆ ಆಧಾರಿತವಾಗಿದ್ದು, ಮೊದಲು ಸಾಲ ತದನಂತರ ಉಳಿತಾಯದ ಗುರಿ ಹೊಂದಿರುತ್ತದೆ. ಇತರೆ ಎಲ್ಲ ಗುಣಲಕ್ಷಣಗಳು ಮತ್ತು ತತ್ವಗಳನ್ನು ಸ್ವಸಹಾಯ ಗುಂಪಿನಂತೆಯೇ ಪಾಲಿಸಬೇಕು.

ಮಹಿಳಾ ಮೀನುಗಾರಿಕೆ ಸಹಕಾರ ಸಂಘಗಳು ಕರಾವಳಿ ತೀರದಲ್ಲಿ ಸಮುದ್ರ ಮೀನುಗಾರಿಕೆಯಲ್ಲಿ ತೊಡಗಿದ್ದು, ಅಲ್ಲಿನ ಮಹಿಳೆಯರು ಮೀನು ವ್ಯಾಪಾರ, ಅವರಿಗೆ ಅವಶ್ಯ ಬಂಡವಾಳ, ಪಡಿತರ ವಿತರಣಾ ವ್ಯವಸ್ಥೆ, ಸೀಮೆಎಣ್ಣೆ ಮಾರಾಟ, ಉಪ್ಪು ಮಾರಾಟ ಮುಂತಾದ ಚಟವಟಿಕೆಗಳಲ್ಲಿ ಪಾಲ್ಗೊಂಡು ಮಹಿಳೆಯರ ಅಭ್ಯುದಯಕ್ಕೆ ಕಾರಣವಾಗಿವೆ. ಒಳನಾಡಿನಲ್ಲಿ ಸಣ್ಣಕೆರೆ, ನೀರಾವರಿ ಪ್ರದೇಶವನ್ನು ಗುತ್ತಿಗೆ ಪಡೆದು ಮೀನು ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿದ್ದು, ಮೀನು ಉತ್ಪಾದನೆ ಮತ್ತು ಮಾರಾಟದಿಂದ ಮಹಿಳೆಯರಿಗೆ ಆದಾಯ ತಂದು ಕೊಡುವಲ್ಲಿ ಯಶಸ್ವಿಯಾಗಿವೆ.

ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳು 'ಅಮೂಲ್' ಮಾದರಿ ಸಹಕಾರ ಸಂಘಗಳಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಸಹಕಾರ ಮಹಾಮಂಡಲಿ (ಕೆಎಂಎಫ್) ತನ್ನ ಸದಸ್ಯ ಒಕ್ಕೂಟಗಳ ಮೂಲಕ ಅನೇಕ ಸದಸ್ಯ ಶಿಕ್ಷಣ ಮತ್ತು ಹೈನುಗಾರಿಕೆ ಪ್ರೋತ್ಸಾಹಕ ಯೋಜನೆಗಳನ್ನು ಹಮ್ಮಿಕೊಂಡು ಮಹಿಳಾ ಸಶಕ್ತತೆಗೆ ಕಾರಣೀಭೂತವಾಗಿದೆ. ಉತ್ಪಾದಿತ ಹಾಲಿಗೆ ನಿಗಧಿತ ನ್ಯಾಯಯುತ ಬೆಲೆ ಮಾರುಕಟ್ಟೆ ದೊರೆತಿರುವುದರಿಂದ ಗ್ರಾಮೀಣ ಮಹಿಳೆಯರು ಹೈನುಗಾರಿಕೆ ಅವಲಂಭಿತರಾಗಲು ಸಾಧ್ಯವಾಗಿದೆ.

ಅಲ್ಲದೆ ಅನೇಕ ಮಹಿಳಾ ಸಹಕಾರ ಸಂಘಗಳು ಗೃಹ ಉದ್ಯೋಗ ಅವಲಂಭಿತ ಆಹಾರ ಉತ್ಪಾದನೆಗಳ ತಯಾರಿಕೆ, ಕೃಷಿ ಉತ್ಪನ್ನಗಳ, ತೋಟಗಾರಿಕೆ ಉತ್ಪನ್ನಗಳ, ಜೇನು, ಮತ್ತಿತರೆ ಉತ್ಪನ್ನಗಳ ಮೌಲ್ಯವರ್ಧನೆ (value addition) ಸಂಸ್ಕರಣೆ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸಿದ್ಧವಸ್ತುಗಳ ಉತ್ಪಾದನೆ ಮಾರುಕಟ್ಟೆ ಮಾಡುತ್ತಿವೆ. ಇದರಿಂದ ಮಹಿಳೆಯರ ಆದಾಯ ಮತ್ತು ಮಹಿಳೆಯರಿಗೆ ಔದ್ಯೋಗಿಕ ಅವಕಾಶಗಳು ದೊರೆತಿವೆ.

ನೂತನ ಜೀವನ ವಿಧಾನಗಳ ಈ ದಿನಮಾನಗಳಲ್ಲಿ ಆಧುನಿಕತೆ ಕಡೆಗೆ ಗಮನಹರಿಸಿ ಯುವಜನತೆಯನ್ನು ತೊಡಗಿಸಿಕೊಳ್ಳವುದು ಅತ್ಯಂತ ಅವಶ್ಯವಾಗಿದ್ದು, ಮಹಿಳಾ ಸಶಕ್ತತೆಗೆ ಮಹಿಳಾ ಸಹಕಾರ ಚಳುವಳಿಯು ಮಹಿಳೆಯರ ಆರ್ಥಿಕ ಒಳಗೊಳ್ಳುವಿಕೆ ತನ್ಮೂಲಕ ಆರ್ಥಿಕ ಸ್ವಾತಂತ್ರ್ಯಕ್ಕೆ ಕಾರಣರಾಗಲು ಸಾಧ್ಯ. ಸಾಹಿತಿ ಗೀತಾ ನಾಗಭೂಷಣರವರು ನುಡಿದಿರುವಂತೆ (ವಾಸ್ತವ–ಕಾದಂಬರಿ) 'ಬೆವರು ಸುರಿಸಿ ಬದುಕ ಕಟ್ಟಿಕೊಳ್ಳುವ, ರಟ್ಟೆ ಮುರಿದು ಹೊಟ್ಟೆಗುಣ್ಣುವ' ಮಹಿಳೆಯರು ಸಶಕ್ತರಾಗಲು ಸಾಧ್ಯ.

ಭೂಮಿಗೆ ಬಿದ್ದ ಬೀಜ

ಎದೆಗೆ ಬಿದ್ದ ಅಕ್ಷರ

ಇಂದಲ್ಲ ನಾಳೆ ಫಲವ ಕೊಡುವುದು

– ದೇವನೂರು ಮಹದೇವ

*******************************************************************************************

# 11. ಸಾರ್ವಜನಿಕ –ಖಾಸಗಿ–ಸಹಕಾರಿ– ಸಹ ಭಾಗಿತ್ವವನ್ನುಬಲಪಡಿಸುವುದು

ಸಹಕಾರ ಸಂಘಗಳು ಸದಸ್ಯರ ಮಾಲಿಕತ್ವವನ್ನು ಹೊಂದಿರುತ್ತವೆ. ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದು, ವ್ಯವಹಾರಿಕ ಔದ್ಯೋಗಿಕ ಸಂಸ್ಥೆಗಳಾಗಿದ್ದು, ಪ್ರಥಮ ಆದ್ಯತೆ ಸದಸ್ಯರ ಆಶಯ, ಆಕಾಂಕ್ಷೆ, ನಿರೀಕ್ಷೆ, ಅವಶ್ಯಕತೆಗಳನ್ನು ಪೂರೈಸುವುದಾಗಿರುತ್ತದೆ. ಆಡಳಿತ ಮಂಡಳಿಯು ಸದಸ್ಯರಿಗೆ ಹೊಣೆಗಾರರು. ಆದುದರಿಂದ ಆಡಳಿತ ಮಂಡಳಿ ಸಹಕಾರ ಸಂಘವನ್ನು ಒಂದು ಯಶಸ್ವಿ ಔದ್ಯೋಗಿಕ ಸಂಸ್ಥೆಯಾಗಿ ನಡೆಸಬೇಕಾದುದು ಇಂದಿನ ಅವಶ್ಯಕತೆ. 21ನೇ ಶತಮಾನದ ಮೂರನೇ ದಶಕದಲ್ಲಿ ಭಾರತವು ವಿಶ್ವದ ಅತಿ ವೇಗ ಆರ್ಥಿಕ ಬೆಳವಣಿಗೆಯ ರಾಷ್ಟ್ರ ಎಂದೆನಿಕೊಂಡಿದೆ. ಮೂರು ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತದಾಪುಗಾಲು ಇಡುತ್ತಿರುವ ಈ ಸಮಯದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯ ಜವಾಬ್ದಾರಿಯೂ ನಮ್ಮ ಮೇಲಿದೆ. ಈ ಸಾಧನೆಯಲ್ಲಿ 'ಸಹಕಾರ'ದ ಪಾಲನ್ನು ಅಧಿಕಗೊಳಿಸುವುದು ತನ್ಮೂಲಕ ಆರ್ಥಿಕ ಅಭಿವೃದ್ಧಿಯೊಡನೆ ಸಾಮಾಜಿಕ ನ್ಯಾಯವನ್ನು ಒದಗಿಸುವ ಜವಾಬ್ದಾರಿ' ಸಹಕಾರ ಆಂದೋಲನ'ದ್ದಾಗಿದೆ.

**ಇಂಟ್ರೋ**

ಭಾರತದಲ್ಲಿ ಉದಾರೀಕರಣದ ಆರ್ಥಿಕ ನೀತಿಯ ಪಾಲನೆಯಿಂದ ಆರ್ಥಿಕತೆಯ ಬೆಳವಣಿಗೆಯಾಗುತ್ತಿದೆ. ಈಗಿನ ಬೆಳವಣಿಗೆ ಧರದಲ್ಲಿ ಇದೇ ರೀತಿಯಲ್ಲಿಯೇ ಮುಂದುವರಿಕೆಯಾದಲ್ಲಿ ಭಾರತವು ವಿಶ್ವದಲ್ಲಿಯೇ 2050ಕ್ಕೆ ಅತ್ಯಂತ ಅಸಮತೋಲನ ದೇಶವಾಗುತ್ತದೆ (ಕಳೆದ ಐದು ವರ್ಷಗಳಲ್ಲಿ ಭಾರತದ ಅತ್ಯಂತ ಸಿರಿವಂತ ಶೇ.01 ಜನತೆಯ ಶ್ರೀಮಂತಿಕೆಯು ಶೇ. 40 ಇದ್ದದ್ದು ಶೇ. 60ಕ್ಕೆ ಏರಿಕೆಯಾಗಿದೆ. ಭಾರತದ ಶೇ. 10 ಶ್ರೀಮಂತರು ಉಳಿಕೆ ಶೇ. 90 ಜನರ ಶ್ರೀಮಂತಿಕೆಯ ನಾಲ್ಕು ಪಟ್ಟು ಶ್ರೀಮಂತಿಕೆಯನ್ನು ಹೊಂದಿರುತ್ತಾರೆ) ಎಂದು ಅಂದಾಜಿಸಲಾಗಿದೆ. ಇದರಿಂದ ಸಾಮಾಜಿಕ ಮತ್ತು ರಾಜಕೀಯ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗುತ್ತದೆ. ಇದನ್ನು ತಡೆಗಟ್ಟುವುದು ಎಲ್ಲರ ಕರ್ತವ್ಯವಾಗಿರುತ್ತದೆ ಮತ್ತು 'ಸಹಕಾರ ಆಂದೋಲನ' ಈ ದಿಸೆಯಲ್ಲಿ ಪ್ರಮುಖ ಸಾಧನವಾಗಬಲ್ಲದು.

ಭಾರತದಲ್ಲಿ ಸಹಕಾರ ಆಂದೋಲನ ಸರ್ಕಾರದ ಶ್ರೀರಕ್ಷೆಯಲ್ಲಿಯೇ ಬೆಳೆದುಬಂದಿದೆ. 'ಹಸಿರುಕ್ರಾಂತಿ' 'ಶ್ವೇತಕ್ರಾಂತಿ' 'ನೀಲಿ ಕ್ರಾಂತಿ' 'ಹಳದಿ ಕ್ರಾಂತಿ' ಗೆ 'ಸಹಕಾರ' ವಾಹಕವಾಗಿತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. 90ರ ದಶಕದಿಂದ ಈಚೆಗೆ ಸರ್ಕಾರ ಪಂಚವಾರ್ಷಿಕ ಯೋಜನೆಗಳಲ್ಲಿ ನೀಡುತ್ತಿದ್ದ ಆರ್ಥಿಕ ನೆರವುಗಳನ್ನು ನಿಲ್ಲಿಸಿದೆ. 'ಸಹಕಾರ ಸಂಸ್ಥೆ'ಗಳು ಸ್ಪರ್ಧಾತ್ಮಕ ಯುಗದಲ್ಲಿ ಸ್ವಾವಲಂಬನೆಯಿಂದ ನಡೆಯಬೇಕು ಎಂಬುದು ಆಶಯ. ಸ್ಪರ್ಧೆಯಲ್ಲಿ 'ಮಾಡು ಅಥವಾ ಮಡಿ' 'ಸಮೃದ್ಧ ಹೊಂದು ಅಥವಾ ನಶಿಸು' (DO or Die, Flourishor Perish) ವಾತಾವರಣ ನಿರ್ಮಾಣವಾಗಿದೆ.

ಉದಾಹರಣೆಗೆ ಕರ್ನಾಟಕದಲ್ಲಿ 46000 ಸಹಕಾರ ಸಂಘಗಳಿದ್ದು ಒಟ್ಟು 2,43,95000 ಸದಸ್ಯರಿದ್ದಾರೆ. ರೂ. 6300 ಕೋಟಿ ಷೇರು ಬಂಡವಾಳವಿದೆ. ಅದರಲ್ಲಿ ಲಾಭದಲ್ಲಿರುವುದು 26040 ಸಹಕಾರ ಸಂಘಗಳು.

ಇದರಲ್ಲಿಯೂ ಗೋಚರವಾಗುವ ವಲಯಗಳೆಂದರೆ ಅಲ್ಪಾವಧಿ ಕೃಷಿಪತ್ತು ಮತ್ತು ಹಾಲು ಉತ್ಪಾದಕ ವಲಯಗಳು. ಈ ವಲಯಗಳು ಪರೋಕ್ಷವಾಗಿ ಸರ್ಕಾರದ ವಿವಿಧ ಯೋಜನೆಗಳನು ್ನಅವಲಂಭಿಸಿವೆ.

ಮೀನುಗಾರಿಕೆ ವಲಯ ಸರ್ಕಾರದ ನೀತಿಯನ್ನು ಅವಲಂಭಿಸಿದೆ. ಕೃಷಿಯೇತರ ಪತ್ತು ವಲಯ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಕೆಲವು ಹಗರಣಗಳು ಇಡೀ ಕ್ಷೇತ್ರಕ್ಕೆ ಕಳಂಕ ತರುತ್ತಿದೆ. ಇತರೆ ಕೃಷಿ, ತೋಟಗಾರಿಕೆ, ಕೃಷಿ

ಪೂರಕ, ಪಶು ಸಂಗೋಪನ ವಲಯಗಳು ಬಹು ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಲಾಗದು. ನೇಕಾರಿಕೆ, ಕೈಗಾರಿಕೆ, ಗುಡಿ ಕೈಗಾರಿಕೆ, ಸಕ್ಕರೆ ವಲಯಗಳು ನೇಪಥ್ಯಕ್ಕೆ ಸೇರಿವೆ ಎಂದರೆ ತಪ್ಪಾಗಲಾರದು. ಈ ಪರಿಸರದಲ್ಲಿ ಸಹಕಾರ ಸಂಘಗಳು ತಮ್ಮ ವ್ಯಾಪಾರ, ವ್ಯವಹಾರಗಳನ್ನು ಹಿಗ್ಗಿಸಿಕೊಂಡು ಸದಸ್ಯರ ಆಶೋತ್ತರಗಳನ್ನು ಈಡೇರಿಸುವ ಬಗೆ ಹೇಗೆ?ಎಂಬ ಚಿಂತನೆ ಮಾಡುವುದು ಸಹಜ. ಪುನಃ ನಾವು ಎ.ಡಿ. ಗೊರವಾಲರವರು 1950ರ ದಶಕದಲ್ಲಿ ತಿಳಿಸಿದಂತೆ 'ಸಹಕಾರ ಸಂಘಗಳು ವಿಫಲವಾಗಿವೆ, ಆದರೆ ಯಶಸ್ವಿಯಾಗಲೇಬೇಕು' ಎಂಬ ಕಾಲಘಟ್ಟಕ್ಕೆ ತಲುಪಿದ್ದೇವೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕೆ ಪರಿಹಾರವಾಗಿ ಸರ್ಕಾರಗಳು ಹೇಗೆ 'ಖಾಸಗಿ ಸಹಭಾಗಿತ್ವದಲ್ಲಿ' ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುತ್ತಿದೆಯೋ ಹಾಗೆ ಉದಾ; ರಸ್ತೆ, ಕೆರೆ, ವಿಮಾನ ನಿಲ್ದಾಣ, ರೈಲು, ಸಾರಿಗೆ ಸಹಕಾರ ಸಂಘಗಳು ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಯೋಗದೊಂದಿಗೆ ಯಶಸ್ವಿ ಕಾರ್ಯಾಚರಣೆ ನಡೆಸಿ ಸದಸ್ಯರಿಗೆ ಸೇವೆ, ಸವಲತ್ತುಗಳನ್ನು ಒದಗಿಸಬಹುದಾಗಿದೆಯಲ್ಲವೇ? ಇದರ ಬಗ್ಗೆ ಸಹಕಾರಿಗಳು ಚಿಂಥನ – ಮಂಥನ ನಡೆಸಿ ಕಾರ್ಯೋನ್ಮುಖವಾಗುವುದು ಈ ದಿನದ ಅವಶ್ಯಕತೆಯಲ್ಲವೇ?

ಈ ಚಿಂತನೆಗಳನ್ವಯ ಕ.ರಾ.ಸ.ಸಂ.ಕಾಯ್ದೆ 1959 ರಲ್ಲಿ 2003–04ರಲ್ಲಿ ಆದತಿ ದ್ದುಪಡಿಯಂತೆ ಕಲಂ 26A, ಸಹಕಾರ ಸಂಘಗಳು ವ್ಯವಹಾರಿಕೆ ಪಾಲುದಾರಿಕೆ ಮಾಡಿಕೊಳ್ಳಲು, ಕಲಂ 26B ಇತರೆ ಸಂಸ್ಥೆಗಳೊಡನೆ ಸಹೋಧ್ಯಮ ಕೈಗೊಳ್ಳಲು ಅವಕಾಶಕಲ್ಪಿಸಲಾಗಿದೆ.

**ಅಲ್ಪಾವಧಿ ಕೃಷಿ ರಚನೆ:** ಪ್ರಾ.ಕೃ.ಪ.ಸ.ಸಂಘಗಳು; ಇತ್ತೀಚೆಗಿ ನಸರ್ಕಾರದ ನೀತಿಯಂತೆ, ಗ್ರಾಮೀಣ ಜನತೆಯ ಕಟ್ಟಕಡೆಯ ವ್ಯಕ್ತಿಯನ್ನು ಮುಟ್ಟಬಲ್ಲ ಸಾಂಸ್ಥಿಕ ವ್ಯವಸ್ಥೆ ಎಂದರೆ ಈ ಸಹಕಾರ ಸಂಘಗಳು. ಇದರ ಬಲವರ್ಧನೆಯಿಂದ ಇದನ್ನು ಸಾಧಿಸಬಹುದಾಗಿದೆ. ಆದುದರಿಂದ ಕೇಂದ್ರದಲ್ಲಿ ಪ್ರತ್ಯೇಕವಾಗಿ ಸಹಕಾರ ಸಚಿವಾಲಯ ಸ್ಥಾಪನೆಯಾದಾಗಿನಿಂದ ಇದಕ್ಕೆ ಪ್ರಾಮುಖ್ಯತೆ ದೊರೆತಿದೆ. ಕೇಂದ್ರದಲ್ಲಿ ರೂ.1 ಲಕ್ಷ ಕೋಟಿಯ ಕೃಷಿ ಪರಿಕರ ಅಭಿವೃದ್ಧಿ ನಿಧಿ ಸೃಷ್ಟಿಯಾಗಿದೆ. (ಇದರಲ್ಲಿ ಶೇ.15 ಮಾತ್ರ ಉಪಯೋಗಿಸಲಾಗಿದೆ ಎಂದು ಒಂದು ವರದಿ ತಿಳಿಸುತ್ತದೆ) 'ಸಹಕಾರ ಸಂಘಗಳು' ವಿವಿದೋದ್ದೇಶ ಸೇವಾ ಕೇಂದ್ರಗಳಾಗಿ (Multi Service Centers - MSC's) ಕಾರ್ಯನಿರ್ವಹಿಸಬೇಕು.

ಅದಕ್ಕೆ ಅಗತ್ಯ ಪರಿಕರಗಳ (ಗೋದಾಮು, ಶೈತ್ಯಾಗಾರ, ಸಂಸ್ಕರಣ ಘಟಕ, ಯಂತ್ರೋಪಕರಣ, ಸಾಗಾಣಿ) ನಿರ್ಮಾಣಕ್ಕೆ ಅಗತ್ಯವಾದ ಹೂಡಿಕೆಮೆದು ಸಾಲ ಒದಗಿಸುವುದು (ಕರ್ನಾಟಕದಲ್ಲಿ 198 ಸ.ಸಂ.ಗಳು ಈ ಸೌಲಭ್ಯ ಪಡೆದಿವೆ ಎಂಬ ಮಾಹಿತಿ ಇದೆ) ಆಗಿದೆ. ತದ ನಂತರದಲ್ಲಿ ಕೇಂದ್ರ ಸರ್ಕಾರ ಮಾದರಿ ಉಪನಿಯಮ (ಬೈಲಾ) ತಯಾರಿಸಿ ರಾಜ್ಯಗಳಿಗೆ ಅಳವಡಿಸಿಕೊಳ್ಳುವಂತೆ ತಿಳಿಸಿದೆ. ಅದರಲ್ಲಿನ 'ಕೃಷಿ' ವ್ಯಾಖ್ಯಾನದಂತೆ ಕೃಷಿ ಅಲ್ಲದೆ ಇತರೆ ಕೃಷಿ ಪೂರಕ, ಪಶು ಸಂಗೋಪನೆ, ಮೀನುಗಾರಿಕೆ, ನೇಕಾರಿಕೆ, ಹೀಗೆ ಹಲವು ಗ್ರಾಮೀಣ ಚಟುವಟಿಕೆಗಳನ್ನು ಇದರ ವ್ಯಾಪ್ತಿಗೆ ತರಲಾಗಿದೆ. ಅಲ್ಲದೆ 'ರೈತ' ವ್ಯಾಖ್ಯಾನದೊಳಗೆ ಈ ವೃತ್ತಿಗಳನ್ನು ಕೈಗೊಳ್ಳುವ ಎಲ್ಲರನ್ನೂ ತರಲಾಗಿದೆ. ಅಲ್ಲದೆ ಇತರೆ ಖಾಸಗಿ, ಸಾರ್ವಜನಿಕ ಸಂಸ್ಥೆಗಳೊಡನೆ ಸಹೋಧ್ಯಮ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಸಹಕಾರ ಸಂಘಗಳು ಯಾವುದೇ ಚಟುವಟಿಕೆಗಳಿಗೆ ಸೀಮಿತಗೊಳಿಸದೆ ಗ್ರಾಮೀಣ ಜನತೆಗೆ ಅಗತ್ಯ ಸೇವೆ, ಸೌಕರ್ಯಗಳು, ಪರಿಕರಗಳ ಮೂಲಕ ಗ್ರಾಮೀಣ ಪ್ರದೇಶದಎಲ್ಲ ಚಟುವಟಿಕೆಗಳಿಗೆ ಉತ್ತೇಜನ ಮತ್ತು ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿ ನ್ಯಾಯಯುತ (remunerativeprice)ಬೆಲೆ ದೊರಕಿಸಿ ಕೊಡಲು ಸಾಧ್ಯವಾಗುತ್ತದೆ.

ಸಹಕಾರ ಸಂಘದಲ್ಲಿ ಚಟುವಟಿಕೆ ಕೈಗೊಳ್ಳಲು ಬಂಡವಾಳ ಕೊರತೆ, ಸ್ಥಿರ ಆಸ್ತಿಯ (ನಿವೇಶನ, ಪರಿಕರ, ಯಂತ್ರೋಪಕರಣ)ಮತ್ತು ಸಂಸ್ಕರಣ ಘಟಕಗಳು ಲಭ್ಯವಿದ್ದಲ್ಲಿ ಖಾಸಗಿ, ಬಹುರಾಷ್ಟ್ರೀಯ ಚಿಲ್ಲರೆ ಮಾರಾಟ ಕಂಪನಿಗಳೊಡನೆ ಒಡಂಬಡಿಕೆ ಮಾಡಿಕೊಂಡು ವ್ಯವಹಾರ ನಡೆಸುವುದರಿಂದ ಸಹಕಾರ ಸಂಘದ ಉದ್ದೇಶವನ್ನು ಈಡೇರಿಸಿ

ಕೊಳ್ಳಬಹುದಾಗಿದೆ. ಆದರೆ ಈ ಚಟುವಟಿಕೆ ಮತ್ತು ಒಡಂಬಡಿಕೆಗಳು ಆರ್ಥಿಕವಾಗಿ ಕಾರ್ಯ ಸಾಧವಾಗಬೇಕು. ಸಂಘಕ್ಕೆ ಹೂಡಿಕೆಗೆ ತಕ್ಕ ಲಾಭತರುವಂತಿರಬೇಕು. ಯಾವುದೇ ಕಾರಣದಿಂದ ಈ ಒಡಂಬಡಿಕೆ, ಒಪ್ಪಂದ, ಕರಾರು, ಚಟುವಟಿಕೆಗಳು ಸಹಕಾರದ ಮೂಲತತ್ವ, ಸಹಕಾರದ ಮೂಲಭೂತ ಗುಣಗಳಿಗೆ ಧಕ್ಕೆ ತರುವಂತೆ ಇರಬಾರದು. ಠೇವಣಿದಾರರಿಗೆ, ಆರ್ಥಿಕ ನೆರವು ನೀಡುವ ಬ್ಯಾಂಕಿನ ಹಿತಾಸಕ್ತಿಗೆ ವಿರುದ್ಧವಾಗಿರಬಾರದು ಮತು ಹಿತಾಸಕ್ತಿಗೆ ಪೂರಕವಾಗಿರುವಂತೆ ಎಚ್ಚರ ವಹಿಸತಕ್ಕದ್ದು, ಈ ದಿಸೆಯಲ್ಲಿ ಆಲೋಚಿಸಿ ಈ ಸಹಕಾರ ಸಂಘಗಳಿಗೆ' ಮಾದರಿ ಉಪನಿಯಮ' ಗಳ ರೀತಿ'ವಿವಿದೋದ್ದೇಶ ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘ'ಎಂದು ಹೆಸರಿಸಲಾಗಿದೆ.

**ಹಾಲು ಉತ್ಪಾದನೆ (ಹೈನುಗಾರಿಕೆ):** ವಲಯ; ಕರ್ನಾಟಕದಲ್ಲಿ ಮೂರು ಹಂತದ 'ಅಮುಲ್' ಮಾದರಿ ವ್ಯವಸ್ಥೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದು ಕರ್ನಾಟಕದ ಹೆಗ್ಗಳಿಕೆ.

'ನಂದಿನಿ' ಎಂಬಂದು ಒಂದು 'ಬ್ರಾಂಡ್' ಆಗಿ ತನ್ನದೇ ಅಸ್ಮಿತೆಯನ್ನು ಗಳಿಸಿದೆ. ವ್ಯವಹಾರ ಗಾತ್ರದಲ್ಲಿಯೂ ಸಹಕಾರ ವ್ಯವಸ್ಥೆಯಲ್ಲಿ 'ಅಮುಲ್ ' ಗುಜರಾತ್ ಹಾಲು ಉತ್ಪಾದಕ ಮಹಾ ಮಂಡಳಿಯ ನಂತರದ ಸ್ಥಾನವನ್ನು ಪಡೆದಿದೆ. ಈ ಮೂರು ಹಂತದ ವ್ಯವಸ್ಥೆಯಲ್ಲಿ ಇದರ ತಳಹದಿ (ಬುನಾದಿ) ಎಂದರೆ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು. ಈ ಸಂಘಗಳ ಬಹುಮುಖ ಕರ್ತವ್ಯವೆಂದರೆ ರೈತರಿಗೆ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟದಿಂದ ಒದಗಿಸುವ ಸಕಲ ಸೌಕರ್ಯ, ಸವಲತ್ತುಗಳನ್ನು ರೈತರಿಗೆ ತಲುಪಿಸುವುದು ಮತ್ತು ಹಾಲು ಉತ್ಪಾದನೆಯನ್ನು ಅಧಿಕಗೊಳಿಸಿ, ಶುದ್ಧ ಗುಣಾತ್ಮಕ ಹಾಲನ್ನು ಸಂಗ್ರಹಿಸಿಒ ಕ್ಕೂಟಕ್ಕೆ ಸರಬರಾಜು ಮಾಡುವುದಾಗಿದೆ. ಈ ಕರ್ತವ್ಯದಲ್ಲಿ ಕಿಂಚಿತ್ತು ಲೋಪಬರುವಂತಿಲ್ಲ. ಬಂದರೆ ಇಡೀ ವ್ಯವಸ್ಥೆಯೇ ಕುಸಿದು ಬಿದ್ದಂತಾಗುತ್ತದೆ. ನೆರೆಯ ರಾಜ್ಯಗಳಲ್ಲಿ ಈಗಾಗಲೆ ಈ ಅವಸ್ಥೆಯನ್ನು ಕಾಣುತ್ತಲಿದ್ದೇವೆ. ಖಾಸಗಿ ವಲಯ ಈ ವ್ಯವಸ್ಥೆಯನ್ನು ಹಾಳುಗೆಡಹಲು ಹೊಂಚುಹಾಕುತ್ತಿದೆ. ಆದುದರಿಂದ ಈ ಹಂತದಲ್ಲಿ ಖಾಸಗಿಯೊಡನೆ ಯಾವುದೇ ರೀತಿಯ ಒಡಂಬಡಿಕೆ ಸ್ವಾಗತಾರ್ಹವಲ್ಲ. ಆದರೆ ಒಕ್ಕೂಟದ ಹಂತದಲ್ಲಿ ಸಂಸ್ಕರಣೆ, ಮಾರುಕಟ್ಟೆ, ಸಾಗಾಣಿಕೆ ಚಟುವಟಿಕೆಗಳಿಗೆ ಖಾಸಗಿ ಅಥವಾ ಇತರೆ ಸಹಕಾರ ಅಥವಾ ಸಾರ್ವಜನಿಕ ವಲಯಗಳೊಡನೆ ಸಹೋದ್ಯಮ, ಪಾಲುದಾರಿಕೆ, ಒಡಂಬಡಿಕೆಗಳು ಸ್ವಾಗತಾರ್ಹ. ಈ ವ್ಯವಸ್ಥೆ ಇಲ್ಲದಲ್ಲಿ ಗ್ರಾಹಕರನ್ನು ಸೆಳೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ರಾಜ್ಯ ಮಹಾಮಂಡಳ (ಕೆ.ಎಂ.ಎಫ್) ಅಂತರ ಒಕ್ಕೂಟಗಳ ಸಮನ್ವಯ, ಅಂತರ ರಾಜ್ಯ ಮಾರಾಟ, ರಫ್ತು ಜವಾಬ್ದಾರಿಗಳನ್ನು ಹೊಂದಿದ್ದು ಈ ಕರ್ತವ್ಯಗಳ ಸಾಧನೆಗೆ ಖಾಸಗಿ, ಸಾರ್ವಜನಿಕ ವಲಯಗಳೊಡನೆ ಸಹಬಾಗಿತ್ವ ಹೊಂದುವ ಅವಶ್ಯಕತೆ ಇದೆ. ಇತ್ತೀಚೆಗಿನ ವರದಿಯಂತೆಕೆ. ಎಂ.ಎಫ್. ಸೌರಶಕ್ತಿ ತಯಾರಿಕೆಗೆ ಖಾಸಗಿ ಕಂಪನಿಯೊಡನೆ ಸಹಭಾಗಿತ್ವ ವಹಿಸಲಿದೆ ಎಂಬುದಾಗಿದೆ. ಈ ರೀತಿಯ'ಹಸಿರು' ಉಪಕ್ರಮಗಳು ಸ್ವಾಗತಾರ್ಹ.

ಮೇಲಿನ ಕಂಡಿಕೆಯಲ್ಲಿ ವಿವರಿಸಿರುವಂತೆ ಎಚ್ಚರಿಕೆ ಕ್ರಮಗಳನ್ನು ಪಾಲಿಸುವುದು ಸಹಕಾರ ಚಳುವಳಿ ದೃಷ್ಟಿಯಿಂದ ಒಳ್ಳೆಯದು. ಬೆಂಗಳೂರು ಹಾಲು ಒಕ್ಕೂಟವು 'ಅಮುಲ್'ಗೆ ಚೀಸ್ ಉತ್ಪನ್ನವನ್ನು ತಯಾರಿಸಿ ಕೊಡುತ್ತಿದೆ. ಇದು ಸಹಭಾಗಿತ್ವಕ್ಕೆ ಅತ್ಯುನ್ನುತ ಉದಾಹರಣೆಯಾಗಿದೆ.

**ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘಗಳು:** ತಾಲ್ಲೂಕಿಗೆ ಒಂದರಂತೆ (ಕೊಡಗು ಒಂದು ಅಪವಾದ ಪ್ರತಿ ನಾಡಿಗೆ ಒಂದು ಮಾರುಕಟ್ಟೆ ಸಹಕಾರ ಸಂಘವಿದೆ) ಈ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದು 'ಹಸಿರುಕ್ರಾಂತಿ'ಗೆ ತಮ್ಮದೇ ಆದ ಕೊಡುಗೆ ನೀಡಿರುತ್ತವೆ. ಆದರೆ ಈಗ ಬಹುತೇಕ ತಮ್ಮ ಎಲ್ಲ ಚಟುವಟಿಕೆ ಕಳೆದುಕೊಂಡು ನಿಷ್ಕ್ರಿಯ ಗೊಳುತ್ತಿವೆ. ತಮ್ಮದೇ ಆದ ನಿವೇಶನ, ಗೋದಾಮುಗಳನ್ನು ಹೊಂದಿವೆ. ಇದರ ಸದ್ಭಳಕೆ ಬಹಳ ಮುಖ್ಯವಾಗಿದೆ. ಇವುಗಳನ್ನು ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣಿ, ಮಾರಾಟ, ಸಾಗಣಿಗೆ ಖಾಸಗಿ/ಸಹಕಾರ/ಸಾರ್ವಜನಿಕ ಸಂಸ್ಥೆಗಳ, ಸದಸ್ಯ ಪ್ರಾಕೃ.ಪ.ಸ.ಸಂ. ರೈತ ಉತ್ಪಾದನೆ ಸಂಸ್ಥೆಗಳೊಡನೆ ಒಡಂಬಡಿಕೆ ಮಾಡಿಕೊಂಡು ಚಟುವಟಿಕೆ ಕೈಗೊಳ್ಳಬಹುದು. ಅನೇಕ ಬಹುರಾಷ್ಟ್ರೀಯ ಕಂಪನಿ

(ಉದಾ: ವಾಲ್ ಮಾರ್ಟ್) ಖಾಸಗಿ ಕಂಪನಿಗಳು (ಉದಾ: ರಿ ಲೈನ್ಸ್) ಚಿಲ್ಲರೆ ಮಾರಾಟದಲ್ಲಿ ತೊಡಗಿಸಿಕೊಂಡಿವೆ. ಇವುಗಳೊಡನೆ ವ್ಯವಹರಿಸಿ ಒಡಂಬಡಿಕೆ ಮಾಡಿಕೊಂಡು ಸರಬರಾಜು ಉಪಕ್ರಮಗಳಲ್ಲಿ ತೊಡಗಿಸಿಕೊಳ್ಳಲು ವಿಪುಲ ಅವಕಾಶಗಳಿವೆ. ರೈತ ಉತ್ಪಾದಕ ಕಂಪನಿಗಳು, ಖಾಸಗಿಯವರು ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ವಿಶಾಲವಾದ ಗೋದಾಮುಗಳು, ಪ್ರಾಂಗಣಗಳು ಈ ಸಂಘಗಳು ಹೊಂದಿದ್ದು ಸೌರಶಕ್ತಿ ಉತ್ಪಾದನೆ ಘಟಕಗಳಸ್ಥಾಪನೆ ಬಗ್ಗೆ ಆಲೋಚಿಸಬಹುದಾಗಿದೆ.

**ವಾಣಿಜ್ಯ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘಗಳು:** ಅಡಿಕೆ, ಕೋಕೋ, ರಬ್ಬರ್, ಕಾಫಿ, ಏಲಕ್ಕಿ, ಮೆಣಸು, ಮುಂತಾದ ಉತ್ಪನ್ನಗಳ ಮಾರುಕಟ್ಟೆ ಹೇರಳವಾಗಿದ್ದು, ಆಧುನಿಕ ಸಂಸ್ಕರಣೆ ಸಂಗ್ರಹಣೆ, ಮಾರಾಟಕ್ಕೆ ಈ ಸಹಕಾರ ಸಂಘಗಳು ಯೋಚಿಸಿ, ಯೋಜಿಸಬಹುದಾಗಿದೆ. ಇದಕ್ಕೆ ಖಾಸಗಿ ವಲಯದಲ್ಲಿ ಹೇರಳ ಅವಕಾಶಗಳಿವೆ. 'ಕ್ಯಾಂಪ್ಕೊ' ತನ್ನ ಚಾಕಲೇಟ್ ಘಟಕದಲ್ಲಿ 'ನೆಸ್ಲೆ'ಗೆ ಚಾಕಲೇಟ್ ತಯಾರಿಸಿ ಕೊಡುತ್ತಿರುವುದು ಸಹಜವಾಗಿ ತತ್ವ ಸಾಧನೆಗೆ ಉತ್ತಮ ಉದಾಹರಣೆಯಾಗಿದೆ.

ಕೃಷಿಯೇತರ ಪತ್ತಿನ ಸಹಕಾರ ಸಂಘಗಳು/ಪಟ್ಟಣ ಸಹಕಾರ ಬ್ಯಾಂಕುಗಳು : ಈ ಸಂಸ್ಥೆಗಳು ಪಾರಂಪರಿಕ ಬ್ಯಾಂಕಿಂಗ್ ಚಟುವಟಿಕೆ ಹೊರತುಪಡಿಸಿ ವಿಮೆ, ಆರ್ಥಿಕಯೋಜನೆ, ಹೂಡಿಕೆಗಳ ಸಲಹೆ, ಮತ್ತು ಇತರೆ ಆರ್ಥಿಕ ಸೇವೆ ಮತ್ತು ಉತ್ಪನ್ನಗಳನ್ನು ಸದಸ್ಯರ ಬದಲಾಗುತ್ತಿರುವ ಅವಶ್ಯಕತೆಗಳನ್ನು ಅನುಸರಿಸಿಅವರಂತೆ ಪೂರೈಕೆ ಮಾಡಲು ಇತರೆ ಸಂಸ್ಥೆ / ಬ್ಯಾಂಕ್‌ಗಳ ಮೊರೆ ಹೋಗುವುದು ಸಹಕಾರ ಸಂಸ್ಥೆಗಳಿಗೆ ಅನಿವಾರ್ಯವಾಗಿದೆ. ಇದರಲ್ಲಿ ಆಧುನಿಕ ಮಾಹಿತಿ ತಂತ್ರಜ್ಞಾನದ ಉಪಯುಕ್ತತೆ ಅನಿವಾರ್ಯವಾಗಿದೆ. ಆಧುನಿಕ ಗೊಳ್ಳದಿದ್ದಲ್ಲಿ ಅಸ್ತಿತ್ವವೇ ಇಲ್ಲದಂತಾಗುತ್ತದೆ. ಇ– ಸ್ಟಾಂಪ್ ವಿತರಣೆ ವ್ಯವಸ್ಥೆ, ಇತರೆ ನಗದು ವರ್ಗಾವಣೆ (ನೆಫ್ಟ್, ಆರ್.ಟಿ.ಜಿ.ಎಸ್, ನೆಟ್ ಬ್ಯಾಂಕಿಂಗ್) ವ್ಯವಸ್ಥೆಗಳನ್ನು ಇತರೆ ಬ್ಯಾಂಕ್/ ಸಂಸ್ಥೆಗಳ ಸಹಯೋಗದಲ್ಲಿ ಈ ವಲಯದಲ್ಲಿ ಕೈಗೊಂಡಿರುವುದು ಉತ್ತಮ ಉದಾಹರಣೆಯಾಗಿದೆ.

ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಉಳಿಯಬೇಕಾದಲ್ಲಿ, ಅಗತ್ಯ ಬಂಡವಾಳ ಕ್ರೋಡಿಕರಣ, ಅದರ ಸದ್ಬಳಕೆ ಅವರಿಂದ ಸದಸ್ಯರಿಗೆ ಸೇವೆ ಸೌಲಭ್ಯಗಳನ್ನು ಒದಗಿಸಬೇಕಾದಲ್ಲಿ ಸಹಕಾರ ಸಂಘಗಳು ಇತರೆ ವಲಯ/ ಸಂಸ್ಥೆಗಳೊಡನೆ ಕೈಜೋಡಿಸಲೇಬೇಕಾಗುತ್ತದೆ. ಎರಡೂ ಸಂಸ್ಥೆಗಳಲ್ಲಿ ಕೊಡು–ಕೊಳ್ಳುವ (win-win situation) ರಾಜಿ, ಸಂಧಾನ ಒಡಂಬಡಿಕೆ, ಒಪ್ಪಂದಗಳನ್ನುಮಾಡಿ ಕೊಳ್ಳಬೇಕಾಗುತ್ತದೆ.

ಆದರೆ ಯಾವುದೇ ಕಾರಣದಿಂದ ಸ್ವಹಿತಾ ಸಕ್ತಿ, ಅಪ್ರಮಾಣಿಕತೆ ಸೋಂಕು ಬಾರದು. ಅನೇಕ ವೇಳೆಯಲ್ಲಿ ಸಂಘರ್ಷಗಳಲ್ಲಿ ಒಳಗೊಂಡು ಶಾಶ್ವತವಾಗಿ ತನ್ನ ಸ್ಥಿರ ಆಸ್ತಿ ಕಳೆದುಕೊಂಡ ಉದಾಹರಣೆಗಳು ನಮ್ಮ ಮುಂದಿವೆ. ಆದುದರಿಂದ ಅತಿ ಎಚ್ಚರಿಕೆಯಿಂದ ಕಾಯ್ದೆಯಾತ್ಮಕವಾಗಿ, ಲಾಭದಾಯಕವಾಗಿ, ದೂರಾ ಲೋಚನೆಯಿಂದ ನಿರ್ಧಾರಗಳನ್ನು ಕೈಗೊಂಡು ತಮ್ಮ ಸಹಕಾರ ಸಂಘತನ್ಮೂಲಕ ಅದರ ಸದಸ್ಯರ ಹಿತಾಸಕ್ತಿಯಂತೆ ವರ್ತಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ದಿನಗಳ ತುರ್ತು ಅವಶ್ಯಕತೆ.

ಎಲ್ಲರಿಗಮಾಗಿತಾನ್, ಎಲ್ಲರುಂತನಗಾಗಿ।

ನಿಲ್ಲುವೇ ಕಾತ್ಮತೆಯ ಬಾಳ್ಗೆಯಿಂ ಕಲಿಯಲ್ ॥

ಸಲ್ಲುವು ಪಕರಣಗಳು ಮನೆ ರಾಜ್ಯ ಸಂಸಾರ ।

– ವಲ್ಲ ಗಳೆಯದಿರವನು – ಮಂಕುತಿಮ್ಮ ॥ –ಡಿ.ವಿ.ಜಿ.

*****************************************************************************************

# 12. ಭಾರತದ ಆರ್ಥಿಕತೆಗೆ ತಿರುವು ಸಹಕಾರ ಆಗಬಲ್ಲದೇ – ಒಂದು ಚಿಂತನೆ

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಆರ್ಥಿಕ ಸಂಕಷ್ಟ ದಾಸ್ಯ ಸಂಕೋಲೆ ಇದ್ದು ಇದರ ನಡುವೆ ಆರ್ಥಿಕ ಬಳುವಳಿಯಾಗಿ ಹುಟ್ಟಿಕೊಂಡ ಚಳುವಳಿ 'ಸಹಕಾರ ಚಳುವಳಿ'. ಇದಕ್ಕೆ ಬೆಂಬಲವಾಗಿ ನಿಂತದ್ದು ಅಂದಿನ ಸರ್ಕಾರ. ಇಪ್ಪತ್ತನೇ ಶತಮಾನದ ಆರಂಭಿಕ ದಶಕಗಳಲ್ಲಿ ಅಂದಿನ 'ಭಾರತ ಸರ್ಕಾರ'ವೇ ಇದಕ್ಕೆ ಪ್ರೇರೇಪಣೆ. ತದನಂತರದಲ್ಲಿ 'ಸಹಕಾರ' ವಿಷಯವನ್ನು 'ಪ್ರಾಂತ್ಯ'ಗಳಿಗೆ ವರ್ಗಾಯಿಸಲಾಯಿತಾದ್ದರಿಂದ ಆ ಸರ್ಕಾರಗಳಿಂದಲೂ 'ಸಹಕಾರ'ಕ್ಕೆ ಪಾಲನೆ ಪೋಷಣೆ ದೊರೆಯಿತು. ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ 'ರಾಜ್ಯ' ಪಟ್ಟಿಗೆ ಈ ವಿಷಯ ಸೇರ್ಪಡೆಯಾಯಿತಾದರೂ ಕೇಂದ್ರ ಸರ್ಕಾರ 'ಮಾದರಿ ಕಾಯ್ದೆ' ರಚನೆ ಮಾಡಿ ರಾಜ್ಯ ಸರ್ಕಾರಗಳಿಗೆ ಮಾರ್ಗದರ್ಶನ ನೀಡಿದ್ದರಿಂದ ಎಲ್ಲ ರಾಜ್ಯಗಳ ಸಹಕಾರ ಕಾಯ್ದೆಗಳಲ್ಲಿ ಸಾಮ್ಯತೆ ಕಾಣುತ್ತಲಿದೆ. ಇದಕ್ಕೆ ಕಾರಣ 'ಆರ್ಥಿಕತೆ'ಯ ಜವಾಬ್ದಾರಿ ಭಾರತ ಸರ್ಕಾರದ್ದು. ಭಾರತ ಅನುಸರಿಸಿದ್ದು 'ಮಿಶ್ರ ಆರ್ಥಿಕ ನೀತಿ'. ಎಲ್ಲ ವಲಯಗಳಿಗೂ ಸರ್ಕಾರ ಒತ್ತಾಸೆಯಾಗಿ ನಿಂತರೂ, ಕೃಷಿ ಪ್ರಧಾನವಾದ ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳ ಮುಖಾಂತರ ಕೃಷಿ ಅಭಿವೃದ್ಧಿಗೆ ಅವಲಂಬಿಸಿದ್ದು 'ಸಹಕಾರ ಚಳುವಳಿ'ಯನ್ನು ಎಂದರೆ ತಪ್ಪಾಗಲಾರದು. 'ಕೃಷಿ ಅಭಿವೃದ್ಧಿ ಮತ್ತು ಸಹಕಾರ', 'ಕೃಷಿ ಉತ್ಪನ್ನ', ಉತ್ಪನ್ನ ಸಂಸ್ಕರಣೆ, ಮಾರಾಟ, ದಾಸ್ತಾನು, ಸಾಗಾಣೆ ಮತ್ತು ಸಹಕಾರ ಅವಿಭಾಜ್ಯ ಅಂಗಗಳಾಗಿ ಕರ್ತವ್ಯ ನಿರ್ವಹಿಸಿದ್ದು ಭಾರತದ 'ಹಸಿರು ಕ್ರಾಂತಿ'ಗೆ ಕಾರಣವಾಯಿತು. ರೈತರ ಅಭ್ಯುದಯಕ್ಕೆ ಕಾರಣವಾಯಿತು. ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧ್ಯವಾಯಿತು. ಸಹಕಾರ ಕೃಷಿ ಸಾಲ ವಲಯದಲ್ಲಿ ಏಕಸ್ವಾಮ್ಯತ್ವವನ್ನು ಹೊಂದಿತ್ತು. ಆದರೆ ಬ್ಯಾಂಕಿಂಗ್ ವಲಯದಲ್ಲಿ ಆದ ಬದಲಾವಣೆ (ರಾಷ್ಟ್ರೀಕರಣ) 'ಆದ್ಯತಾ ವಲಯ' ಸಾಲ ನೀಡಿಕೆ ನೀತಿಯಿಂದ ಕೃಷಿ ವಲಯಕ್ಕೆ ಹೆಚ್ಚಿನ ಬಂಡವಾಳ ಹರಿವು ಆಯಿತಾದರೂ ಸಹಕಾರದ ಪಾಲು ಕಡಿಮೆ ಆಯಿತು. 1990ರ ದಶಕದಲ್ಲಿ ಭಾರತದ ಆರ್ಥಿಕ ನೀತಿಯಲ್ಲಿ 'ಉದಾರೀಕರಣ, ಖಾಸಗೀಕರಣ, ಜಾಗತೀಕರಣ'ದ ಪ್ರಭಾವದಿಂದ ಆದ ಬದಲಾವಣೆಯ ಪರಿಣಾಮ 'ಸಹಕಾರದ ಮೇಲೆ ಬೀರಿತು. 'ಸಹಕಾರ'ಕ್ಕೆ ಸರ್ಕಾರದ ಪಾಲನೆ ಪೋಷಣೆ ಇಲ್ಲವಾಯಿತು. ಸರ್ಕಾರದ ನೀತಿಯಂತೆ 'ಸಹಕಾರ'ವು ತನ್ನ ಆದ್ಯತೆಯನ್ನು ಕಳೆದು ಕೊಂಡಿತು. ಸ್ಪರ್ಧೆ ಯಲ್ಲಿ ಭಾಗವಹಿಸುವುದು ಅನಿವಾರ್ಯ ವಾಯಿತು. ಖಾಸಗಿ ವಲಯದ ನಾಗಾಲೋಟದ ಬೆಳವಣಿಗೆಯ ಮುಂದೆ ಸಹಕಾರದ ಬೆಳವಣಿಗೆ ಗಣನೀಯವಾಗಿ ಕಂಡುಬರದೇ ಇರುವ ಕಟು ವಾಸ್ತವ್ಯವನ್ನು ಒಪ್ಪಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಚಿಂತಿಸಬೇಕಾದ ವಿಷಯವಾಗಿರುತ್ತದೆ.

2020ರ ದಶಕದ ಪರ್ವ 'ಖಾಸಗಿವಲಯ'ದ ಪರ್ವ ವಾಗಿ ಕಂಡುಬರುತ್ತಿದೆ. ಪ್ರತಿ ಆರ್ಥಿಕತೆಯ ಸಂಕಷ್ಟಕ್ಕೂ ಖಾಸಗೀಕರಣವ ಮೂಡುವುದು ಸಹಜ. ಭಾರತದ ಆರ್ಥಿಕತೆ 'ಮೂರು ಟ್ರಿಲಿಯನ್ ಡಾಲರ್' ಹಂತ ದಲ್ಲಿದ್ದು 'ಐದು ಟ್ರಿಲಿಯನ್ ಡಾಲರ್' ಆರ್ಥಿಕತೆ ಮುಟ್ಟುವ ಆಶಯವನ್ನು ಹೊಂದಿದೆ. ಆದರೆ ಇಲ್ಲಿ ಮೂಡುವ ಪ್ರಶ್ನೆ ಈ ಆರ್ಥಿಕತೆ ಯಾರ ಹಿಡಿತದಲ್ಲಿದೆ ಮತ್ತು ಯಾರ ಹಿಡಿತದಲ್ಲಿರುತ್ತದೆ? ಆರ್ಥಿಕತೆಯ ಬಂಡವಾಳ ಕೇವಲ ಕೆಲವೇ ಮಂದಿಯ ಹಿಡಿತದಲ್ಲಿ ಇದ್ದಲ್ಲಿ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಜನಸಾಮಾನ್ಯರಿಗೆ ನಿಲುಕುವುದೆಂತು?

2020ರ ಆರಂಭದಿಂದ ವಿಶ್ವ ಕಂಡ ಪಿಡುಗು 'ಕೋವಿಡ್–19' ಸಾಂಕ್ರಾಮಿಕ ರೋಗ. ಇದು ಭಾರತವನ್ನು ತಲ್ಲಣಗೊಳಿಸಿದೆ. ಮೊದಲನೆಯ ಅಲೆಯ 'ಹೊಡೆತ'ವನ್ನು ತಡೆದು ಕೊಳ್ಳುವಷ್ಟರಲ್ಲಿ ಎರಡನೆಯ ಅಲೆ ಅಪ್ಪಳಿಸಿದೆ. ಮೂರನೆ ಅಲೆಯ ಭೀತಿಯೂ ಇದೆ. ಇದರ ಪರಿಣಾಮ ಆರ್ಥಿಕ ಮತ್ತು ಸಾಮಾಜಿಕ ತಲ್ಲಣವನ್ನೇ ಉಂಟು ಮಾಡಿದೆ.

ಹಿಂದಿನ ಆರ್ಥಿಕ ಬೆಳವಣಿಗೆಯ ಪರಿಣಾಮವಾಗಿ ಉಂಟಾದ ನಗರೀಕರಣ, ನಗರೀಕರಣದಲ್ಲಿ ಭಾಗೀದಾರರಾದ

ಅಸಂಘಟಿತ ಕಾರ್ಮಿಕ ವಲಯ, ಸಾಂಕ್ರಾಮಿಕ ಕಾರಣ, ಸಾಂಕ್ರಾಮಿಕ ತಡೆಗಟ್ಟಲು ತೆಗೆದುಕೊಂಡ ಪರಿಣಾಮ ಇವರು ನಗರ ಬಿಟ್ಟು ಹಿಂತಿರುಗಿ ತಮ್ಮ ನೆಲೆ ಕಂಡುಕೊಳ್ಳಲು ತಮ್ಮ ಸ್ವಂತ ಊರು ಹಳ್ಳಿಗಳತ್ತ ಪಯಣ, ಮರು ವಲಸೆ. ಇವರ ಬವಣೆ ಹೇಳತೀರಲಾಗದು. ಪಟ್ಟಣಗಳಲ್ಲೂ ಜೀವನ ಕಟ್ಟಿಕೊಳ್ಳಲಾಗದು ಅತ್ತ ಹಳ್ಳಿಯಲ್ಲೂ ಆಗದು ಎಂಬ ಪರಿಸ್ಥಿತಿ.

ಭಾರತದ ರೈತರಲ್ಲಿ ಶೇ. 86ಕ್ಕೂ ಅಧಿಕ ಮಂದಿ ಸಣ್ಣ ಮತ್ತು ಅತಿ ಸಣ್ಣ ರೈತರು. ಅದಕ್ಕೆ ಪೂರಕವಾಗಿ ಕೃಷಿ ಕೂಲಿ ಕಾರ್ಮಿಕರು. ಇವರ ಜೀವನ ಹಳ್ಳಿಗಳಲ್ಲಿನ ಕೃಷಿ, ಕೃಷಿ ಉತ್ಪನ್ನ ಕೃಷಿ ಪೂರಕ ಕಸುಬು, ಪಶು ಸಂಗೋಪನ ಇವುಗಳನ್ನು ಅವಲಂಬಿಸಿದೆ. ಈ ಉತ್ಪನ್ನಗಳಿಗೆ ಪಟ್ಟಣಗಳೇ ಪ್ರಮುಖ ಮಾರುಕಟ್ಟೆಗಳಾಗಿ ಪರಿಣಮಿಸಿದೆ. ಗ್ರಾಮೀಣ ಮತ್ತು ನಗರದ ಆರ್ಥಿಕ ಸಂಪರ್ಕ ಸೇತು ನಿರ್ಮಾಣವಾಗಿ ಮಧ್ಯವರ್ತಿಗಳಿಂದ ಶೋಷಣೆ ತಪ್ಪಬೇಕು. ಉತ್ಪಾದಕ ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಸಾಧ್ಯವಾಗಬೇಕಾಗಿರುವುದು ಇಂದಿನ ಅವಶ್ಯಕತೆ.

ಆದರೆ ಭಾರತದಲ್ಲಿ ಆಗುತ್ತಿರುವ ಬೆಳವಣಿಗೆ ಆದರೂ ಏನು? ಕೆಲವು ಅಂಕಿ ಅಂಶಗಳು ದಿಟವಾಗಿಯೂ ಆಘಾತ ಕಾರಿ. ಬಂಡವಾಳ ಶಾಹಿಗಳ ಸಂಪತ್ತು ದಿನೇ ದಿನೇ ವೃದ್ಧಿಯಾಗುತ್ತಿದೆ. ಬಡತನ ಮತ್ತು ಬಡವರ ಸಂಖ್ಯೆ ಏರುತ್ತಿದ್ದು ಪ್ರತಿ ದಿನದ ಆದಾಯ ರೂ. ಎರಡಕ್ಕಿಂತ ಕಡಿಮೆ ಇರುವ ಸಂಖ್ಯೆ ನಲವತ್ತು ಕೋಟಿಗೂ ಮೀರಿದ್ದು ಈ ವರ್ಷದಲ್ಲಿ ಎಪ್ಪತ್ತೈದು ದಶಲಕ್ಷದಷ್ಟು ಏರಿಕೆಯಾಗಿದೆ ಎಂದು ವಿಶ್ವ ಬ್ಯಾಂಕ್ನ ವರದಿಯೊಂದರಿಂದ ತಿಳಿದುಬರುತ್ತದೆ. ಇದು ವಿಶ್ವದ ಬಡತನದ ಶೇ. 60 ಭಾಗವಾಗುತ್ತದೆ. ವಿಶ್ವದ ಹಸಿವೆಯ ಸೂಚ್ಯಂಕದಲ್ಲಿ ಭಾರತ 107 ರಾಷ್ಟ್ರಗಳಲ್ಲಿ 94ನೇ ಸ್ಥಾನದಲ್ಲಿದೆ. ಸಂತೋಷದ ಸೂಚ್ಯಂಕದಲ್ಲಿ 153 ರಾಷ್ಟ್ರಗಳಲ್ಲಿ 144ನೇ ಸ್ಥಾನದಲ್ಲಿದೆ. ಖಾಸಗಿ ವಲಯಕ್ಕೆ 'ಸುಲಭ ವ್ಯವಹಾರ ನಡೆಸುವ ಪರಿಸರ' ನಿರ್ಮಾಣದ ಬಗ್ಗೆ ಸರ್ಕಾರಗಳು ಯೋಚಿಸುತ್ತಿರುವುದು ಉತ್ತಮವೇ. ಆದರೂ 'ಜನಸಾಮಾನ್ಯರ ಬದುಕ'ನ್ನು ಹಸನು ಮಾಡುವುದರ ಬಗ್ಗೆಯೂ ಆಲೋಚಿಸಬೇಕಲ್ಲವೇ? ಅಗಾದ ಆರ್ಥಿಕ ಸಂಪತ್ತು ಕೆಲವರದೇ ಆಸ್ತಿಯಾದಲ್ಲಿ ಅದರ ಫಲ ಬಡಜನತೆಗೆ ನಿಲುಕುವುದೆಂತು? ಶೋಷಣೆಯೇ ಮೂಲಮಂತ್ರವಾಗಿಲ್ಲವೇ? ಸಂಪತ್ತು ಮೇಲಿನಿಂದ ಕೆಳಗೆ ಹರಿಯುವುದು ಕೇವಲ ಗಗನ ಕುಸುಮವಲ್ಲವೇ?

ಇದಕ್ಕೆ ಪರಿಹಾರವೇನು? 'ಸ್ವಯಂ ಸಹಾಯ ಮತ್ತು ಪರಸ್ಪರ ಸಹಾಯ'ವೇ ಪರಿಹಾರ. ಇದುವೇ 'ಸಹಕಾರ'. ಇದಕ್ಕೆ ಸಂಘಟಿತ ಸಹಕಾರ ಅಗತ್ಯ. ಸ್ವಾವಲಂಬನೆ ಧ್ಯೇಯವಾಗಬೇಕು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿದ್ದ ಪರಿಸ್ಥಿತಿ ಈಗ ಇಲ್ಲ. ನವಭಾರತ ನಿರ್ಮಾಣವಾಗಿದೆ. ಭಾರತ ಪ್ರಕಾಶಿಸುತ್ತಿದೆ. ಶಿಕ್ಷಣ, ಆರೋಗ್ಯ, ವಸತಿ ಮೂಲಭೂತ ಸೌಕರ್ಯಗಳಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದೇವೆ. ಆದರೆ ಬಡ ಮತ್ತು ಕೆಳಮಧ್ಯಮ ವರ್ಗಕ್ಕೆ ಈ ಸವಲತ್ತುಗಳು ತಲುಪಿವೆಯೇ ಎಂಬುವುದನ್ನು ಆತ್ಮ ವಿಶ್ಲೇಷಣೆ ಮಾಡಿಕೊಳ್ಳಬೇಕಿದೆ. ಇದಕ್ಕೆ ಇರುವ ಮಾರ್ಗವೇ ಸಂಘಟಿತ ಮಾರ್ಗ. ಇದಕ್ಕೆ ತಳಹದಿಯಾಗಬೇಕಾಗಿರುವುದು ಜರ್ಮನ್ ಆರ್ಥಿಕ ತಜ್ಞ ಹೂಮೇಕರ್ನ 'ಸಣ್ಣದು ಸುಂದರ' ಎಂಬ ಪರಿಕಲ್ಪನೆ ಮತ್ತು ಮಾದರಿ. 'ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು' ಎಂಬ ಮಹಾತ್ಮ ಗಾಂಧಿಯವರ ಉಕ್ತಿಯನ್ನು ಮರೆತಿದ್ದೇವೆಯೇ? ಈ ಬಗ್ಗೆ ಮರು ಚಿಂತನೆಗೆ ಇದು ಸಕಾಲ.

ಸ್ವಾತಂತ್ರ್ಯ ನಂತರ ಆರಂಭಗೊಂಡ 'ಸಮೂಹ ಬೇಸಾಯ ಸಹಕಾರ ಸಂಘಗಳು' ಜಂಟಿ ಬೇಸಾಯ ಸಹಕಾರ ಸಂಘಗಳು ಏನಾದವು? ಏಕೆ ವಿಫಲವಾದವು. ಕೃಷಿ ಉತ್ಪನ್ನ ಸಹಕಾರ ಸಂಘಗಳ ಪಾಡೇನು? ಅತ್ಯಂತ ಯಶಸ್ವಿಯಾಗಿ ನಡೆದ ಈ ಸಂಘಗಳು ಸ್ಥಗಿತಗೊಂಡಿರಲು ಕಾರಣಗಳೇನು? ಬಹುತೇಕ ಸಹಕಾರ ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಳ್ಳಲು. ಖಾಸಗಿಯವರ ಪಾಲಾಗಲು, ಸಮಾಪನಾವಸ್ಥೆ ಮುಟ್ಟಲು ಕಾರಣಗಳೇನು? ಎಂಬ ಪ್ರಶ್ನೆಗಳು ಮೂಡುತ್ತವೆ.

ಇದಕ್ಕೆ ತದ್ವಿರುದ್ಧವಾಗಿ ಹೈನುಗಾರಿಕೆ ಕ್ಷೇತ್ರದಲ್ಲಿ ಸಹಕಾರ ವಲಯದ ಮಾದರಿಯಾಗಿ 'ಅಮೂಲ್'. ಅದರಂತೆ

ರಾಷ್ಟ್ರಾದ್ಯಂತ 'ಅಮೂಲ್ ಮಾದರಿ' ಸಹಕಾರ ಶೃಂಗ ಮಾದರಿ ಹಲವೆಡೆ ಯಶಸ್ವಿಯಾಗಿ ನಡೆದು ಕೆಲವೆಡೆ ಅವನತಿಗೆ ಸಾಗಿವೆ. ಇದಕ್ಕೆ ಹೊರತಾಗಿರುವುದು ಕರ್ನಾಟಕದ 'ನಂದಿನಿ' (ಕೆ.ಎಂ.ಎಫ್.) ಸಹಕಾರ ಒಕ್ಕೂಟ ವ್ಯವಸ್ಥೆ ಭದ್ರ ಬುನಾದಿ ಯೊಂದಿಗೆ ನೆಲೆಗೊಂಡಿರುವುದು ಸಂತಸದ ಸಂಗತಿ. ಸರ್ಕಾರವೂ ಸೂಕ್ತ ಬೆಂಬಲ ನೀಡಿರುವುದನ್ನು ಮರೆಯ ಲಾಗುವುದಿಲ್ಲ. ತೋಟಗಾರಿಕೆ ಕ್ಷೇತ್ರದಲ್ಲಿ ನಾವೇಕೆ ಈ ಸಾಧನೆ ಮಾಡಲಾಗಿಲ್ಲ ಎಂಬುವುದನ್ನು ಪರಿಶೀಲಿಸಬೇಕು. "ಅಡಿಕೆ' ಮಾರುಕಟ್ಟೆ ಕ್ಷೇತ್ರದಲ್ಲಿ 'ಸಹಕಾರ' ಯಶಸ್ವಿಯಾದಷ್ಟು ಇತರೆ ವಾಣಿಜ್ಯ ಉತ್ಪನ್ನಗಳಲ್ಲಿ ಯಶಸ್ವಿಯಾಗಿಲ್ಲ. ಕೆಲವು ಯಶಸ್ವಿಯಾಗಿದ್ದವು. ಈಗ ವಿಫಲಗೊಂಡಿವೆ. (ಉದಾ: ಕಾಫಿ) ಗ್ರಾಹಕರ ಸಹಕಾರ ಕ್ಷೇತ್ರ ಮರೆತೇ ಹೋದಂತಾಗಿದೆ. ಆದರೆ ಅಲ್ಲಲ್ಲಿ 'ಬೆಳ್ಳಿ ಚುಕ್ಕೆ' ಗಳು ಕಾಣಿಸುತ್ತಿರುವುದು ಆಶಾದಾಯಕ. ಅಲ್ಪಾವಧಿ ಕೃಷಿ ಪತ್ತು, ಕೃಷಿಯೇತರ ಪತ್ತಿನ ವಲಯ, (ಸೌಹಾರ್ದಸಹಕಾರಿಯೂ ಒಳಗೊಂಡು) ಅಲ್ಲಲ್ಲಿ ಕಪ್ಪುಚುಕ್ಕೆ ಹೊರತುಪಡಿಸಿ ಪಟ್ಟಣ ಸಹಕಾರ ಬ್ಯಾಂಕ್ ವಲಯ, ಇಫ್ಕೋ, ಕ್ರಿಭ್ಕೋ, ನಾಫೆಡ್, ಮೀನುಗಾರಿಕೆ ಸಹಕಾರ ಸಂಘಗಳು, ವಿಶಿಷ್ಟ ಸಹಕಾರ ಸಂಘಗಳಾದ ಜೇನು ಉತ್ಪಾದಕರ, ಉಪ್ಪು ತಯಾರಕರ ಸಹಕಾರ ಸಂಘಗಳು, ಸಹಕಾರ ಆಸ್ಪತ್ರೆಗಳು, ಶಿಕ್ಷಣ ಸಹಕಾರ ಸಂಘಗಳು ಉದಾಹರಣೆಗಾಗಿ ಕಂಡು ಬರುತ್ತಿವೆ.

ಗ್ರಾಮಾಂತರ ಪ್ರದೇಶಕ್ಕೆ ಹಿಂದಿರುಗಿರುವ ಯುವಜನತೆ ಸ್ಥಳೀಯ ಸಂಪನ್ಮೂಲ ಆಧಾರಿತವಾಗಿ ಸಹಕಾರ ವಲಯದಲ್ಲಿ ನವೋದ್ಯಮಗಳನ್ನು ಆರಂಭಿಸಲು ವಿಪುಲ ಅವಕಾಶಗಳಿವೆ. ಉದಾ: ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಟೊಮಾಟೋ, ಮಾವು, ದ್ರಾಕ್ಷಿ, ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ, ಕಾಫಿ, ಕೊಡಗು ಜಿಲ್ಲೆಯಲ್ಲಿ ಕಾಫಿ, ಕರಿಮೆಣಸು, ಏಲಕ್ಕಿ, ಕಿತ್ತಳೆ, ಸಾಗಾಣೆ ಮತ್ತು ಪ್ರವಾಸೋದ್ಯಮ. ಸಹಕಾರ ವಲಯದಲ್ಲಿ ನವೀನ ಚಿಂತನೆ ಹೊಸತು ಮಾಡುವ ಹಂಬಲದ ಅವಶ್ಯಕತೆ ಇದೆ. ಮಾಹಿತಿ ತಂತ್ರಜ್ಞಾನ– ಇಂಟರ್ನೆಟ್, ಡಿಜಿಟಲ್ ವೇದಿಕೆಗಳನ್ನು ಸಹಕಾರ ಸಂಘಗಳಲ್ಲಿ ಅಳವಡಿಸಿ ಅದರ ಸದುಪಯೋಗ ಪಡೆಯಬೇಕು. ಆನ್ಲೈನ್ ಮಾರ್ಕೆಟಿಂಗ್

ಮಾಡುವ ಅವಶ್ಯಕತೆ ಇದೆ. ಇದರಿಂದ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಪ್ರಗತಿಗೆ ಕಾರಣವಾಗುತ್ತದೆ. ಗ್ರಾಮಗಳಿಗೆ ಮರುವಲಸೆಯಾಗಿರುವ ಯುವಜನತೆಗೆ ನಾಯಕರಾಗಲು ಈ ವಲಯ ಅವಕಾಶವನ್ನು ಸೃಷ್ಟಿಸುತ್ತದೆ. ಈ ಸಹಕಾರ ಸಂಘಗಳು ಪಟ್ಟಣ ಪ್ರದೇಶದಲ್ಲಿನ ಚಿಲ್ಲರೆ ಮಾರಾಟ, ಗ್ರಾಹಕ ವ್ಯವಸ್ಥೆಯೊಡನೆ ಒಡಂಬಡಿಕೆ, ಚೌಕಾಶಿ ಮಾಡಲು ಮಾರುಕಟ್ಟೆ ವ್ಯವಸ್ಥೆ ಮಾಡಲು ಸಶಕ್ತವಾಗಿರುತ್ತವೆ. ಹೀಗಾಗಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡಲು ಸಾಧ್ಯ ಮಧ್ಯಮವರ್ತಿಗಳ ನಿರ್ಮೂಲನೆ ಸಾಧ್ಯ.

ಗ್ರಾಮೀಣ ಪ್ರದೇಶದಲ್ಲಿ ಜಂಟಿ ಬೇಸಾಯ ಸಹಕಾರ ಸಂಘ ಸ್ಥಾಪನೆ ಮೂಲಕ ಸಂಪನ್ಮೂಲಗಳ ಕ್ರೋಢೀಕರಣ. ಅದರ ಸದುಪಯೋಗ, ಸದ್ವಿನಿಯೋಗ, ಸೋರಿಕೆ, ಪೋಲಾಗುವುದು, ವೆಚ್ಚಗಳ ನಿಯಂತ್ರಣ ಸಾಧ್ಯ. ಇದು ಮಾರಾಟಕ್ಕೂ ಅನುಕೂಲ ಇದರ ಮೂಲಕ ಕಿರು ನೀರಾವರಿ, ಏತ ನೀರಾವರಿ, ಸಸ್ಯೊ ಬೇಸಾಯ, ಯಂತ್ರೋಪಕರಣಗಳ ನ್ಯಾಯಯುತ ಉಪಯೋಗ ಸಾಧ್ಯ. ಅತ್ಯುತ್ತಮ ಉದಾಹರಣೆ ಪಿರಿಯಾಪಟ್ಟಣ ತಾಲೂಕಿನಲ್ಲಿನ ಕೊಪ್ಪ ಟಿಬೇಟಿಯನ್ ನಿರಾಶ್ರಿತರ ಸಹಕಾರ ಸಂಘ, ಚೀನಾ, ಟಿಬೆಟ್, ಜಪಾನ್ನಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

ನಗರ ಪ್ರದೇಶಗಳಲ್ಲಿ ಅಸಂಘಟಿತ ಕಾರ್ಮಿಕರು, ಪುನರ್ ವಲಸೆಬರುವ ಕಾರ್ಮಿಕರು ಮಧ್ಯವರ್ತಿಗಳ ಅವಲಂಬಿತ ರಾಗಿರುತ್ತಾರೆ. ಅವರು ಶೋಷಣೆಗೆ ಒಳಗಾಗುತ್ತಿದ್ದಾರೆ. ಇದಕ್ಕೆ ಪರಿಹಾರ 'ಕಾರ್ಮಿಕ ಒಪ್ಪಂದ/ಗುತ್ತಿಗೆ ಸಹಕಾರ ಸಂಘಗಳನ್ನು ಆರಂಭಿಸುವುದು. ಈ ಹಿಂದೆ ಹಲವೆಡೆ ಮಂಡಿಗಳಲ್ಲಿ, ಗಣಿಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳಿವೆ. ಕೇರಳದ ಉರುಲಂಗಲ್ ಲೇಬರ್ ಕಾಂಟ್ರಾಕ್ಟ್ ಕೋ–ಆಪರೇಟಿವ್ ಸೊಸೈಟಿ. ಇದರಿಂದ ಕಾರ್ಮಿಕರು ಕಾರ್ಮಿಕ ಕಾಯ್ದೆಯಲ್ಲಿನ ರಕ್ಷಣೆಗಳಿಂದ ವಂಚಿತರಾಗುವುದನ್ನು ತಡೆಯಬಹುದು. ಉತ್ತಮ ಸೇವೆ ಸೌಕರ್ಯಗಳನ್ನು ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆಹಾರ, ಆರೋಗ್ಯ, ವಸತಿ, ಶಿಕ್ಷಣ, ಪಿಂಚಣಿ, ವಿಮೆ ಹೀಗೆ ಹತ್ತು ಹಲವು

ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಪಡೆಯಲು ಸಹಕಾರಿಯಾಗುತ್ತದೆ. ಸಂಕಷ್ಟ ಕಾಲಗಳನ್ನು ಎದುರಿಸಲು ಸಶಕ್ತರಾಗಿರಲು ಸಾಧ್ಯವಾಗುತ್ತದೆ.

ನಗರ ಪ್ರದೇಶಗಳಲ್ಲಿ 'ಡಿಜಿಟಲ್ ವೇದಿಕೆ' ಪ್ರಯಾಣ ಒದಗಿಸುವ ವೇದಿಕೆಗಳು, ಪ್ರಯಾಣ ಸೌಕರ್ಯ ಒದಗಿಸುವ ಕಂಪೆನಿಗಳು, (ಉದಾ: ಉಬರ್, ಓಲಾ) ಒಂದು ಕಡೆ ಚಾಲಕರು (ಬಹಳಷ್ಟು ಚಾಲಕರು ನಗರಕ್ಕೆ ವಲಸೆ ಬಂದಿರುವವರು) ಮತ್ತು ಪ್ರಯಾಣಿಕರು, ವಾಹನ ಮಾಲೀಕರು (ಬಹುತೇಕ ಅವರೇ ಚಾಲಕರು) ಗಳನ್ನು ಶೋಷಣೆ ಮಾಡುತ್ತಿವೆ. ವಾಹನ ಚಾಲಕರು, ಮಾಲೀಕರು ತಮ್ಮದೇ ಸಹಕಾರ ಸಂಘ ಸ್ಥಾಪಿಸಿ ಡಿಜಿಟಲ್ ವೇದಿಕೆ' ಹೊಂದಿದರೆ ಅವರಿಗೆ ಸ್ಪರ್ಧೆ ಒಡ್ಡುವುದಲ್ಲದೆ ಶೋಷಣೆಯಿಂದ ತಪ್ಪಿಸಿಕೊಂಡು ಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯಲು ಸಾಧ್ಯ. ಅಲ್ಲದೇ ಸಹಕಾರ ಸಂಘದ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ.

ನಗರಗಳಲ್ಲಿ ನೈರ್ಮಲ್ಯ ನಿರ್ವಹಣೆ, ಪರಿಸರ ಅಭಿವೃದ್ಧಿ ಉದ್ದೇಶಿತ ಸಹಕಾರ ಸಂಘಗಳನ್ನು ಆರಂಭಿಸಿ ನಗರಪಾಲಿಕೆ ನಿರ್ವಹಿಸುವ ಕೆಲಸಗಳನ್ನು ನಾಗರಿಕರೆ ನಿರ್ವಹಣೆ ಮಾಡಬಹುದಾಗಿದೆ. ಅಮೆರಿಕಾದಲ್ಲಿ ಈ ರೀತಿಯ ಸಹಕಾರಿ ಸಂಘಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದು ವರದಿಯಾಗಿದೆ.

ಯುವಜನತೆ ಸಹಕಾರ ತತ್ವಗಳಲ್ಲಿ ವಲಯದ ಅನುಕೂಲತೆಗಳ ಬಗ್ಗೆ ಒಲವು ಮೂಡುವಂತೆ ಮಾಡುವುದು ಈಗಿನ ಅಗತ್ಯತೆ. ಮಾಧ್ಯಮಗಳಲ್ಲಿನ ಅಪಪ್ರಚಾರ, ನಕಾರಾತ್ಮಕ ಅಂಶಗಳ ಅತಿರಂಜಿತ ವರ್ಣನೆ ಮಾರಕವಾಗಿ ಪರಿಣಮಿಸುತ್ತಿದೆ. ಸಹಕಾರ ಚಳುವಳಿಯು ಈ ಸವಾಲನ್ನು ಹೇಗೆ ಎದುರಿಸುತ್ತದೆ ಎಂಬುದು ಯಕ್ಷ ಪ್ರಶ್ನೆ.

'ಕೆಳಹಂತದಿಂದ' ಉತ್ತುಂಗಕ್ಕೆ ಆಗಬೇಕಾದ ಆರ್ಥಿಕ ಬೆಳವಣಿಗೆಯೇ (Economic growth from the bottom of the Pyramid) ಭಾರತದ ಆರ್ಥಿಕತೆಯ ಪ್ರಗತಿಗೆ, ಸಮಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ ಎಂಬುದು ಕಟು ವಾಸ್ತವ. ಇದಕ್ಕೆ 'ಸಹಕಾರ' ವಲಯದ ಶೃಂಗ ವ್ಯವಸ್ಥೆ (Co-operative Federalism ) ಯೇ ತಕ್ಕ ಮಾದರಿ. ಸರ್ಕಾರವೂ ತನ್ನ ನೀತಿಯನ್ನು ಪುನರ್ ರೂಪಿಸಲು ಕಾಲ ಸಮೀಪಿಸಿದೆ. ಸರ್ಕಾರವೂ ಸಹಕಾರಕ್ಕೆ ಪ್ರೋತ್ಸಾಹ, ಪ್ರೇರೇಪಣೆ, ಪಾಲನೆ–ಪೋಷಣೆ ಮಾಡುವ ಅಗತ್ಯತೆ ಇದೆ. ಸಹಕಾರ ಸಂಘಗಳ ನಿಬಂಧಕರು ನಿಯಂತ್ರಕರಲ್ಲದೆ ಗೆಳೆಯ, ಮಾರ್ಗದರ್ಶನ ಸಹಕಾರ ವಲಯದ ಸ್ನೇಹಿಯಾಗಿ ವರ್ತಿಸುವಂತೆ ಆಶಿಸಿದೆ. ವಿಶ್ವಸಂಸ್ಥೆಯು 2030ಕ್ಕೆ ಸುಸ್ಥಿರ ಬೆಳವಣಿಗೆಯ ಗುರಿಗಳನ್ನು ನಿಗದಿಪಡಿಸಿದೆ. ಆಹಾರ ಸ್ವಾವಲಂಬನೆ, ಆಹಾರ ಭದ್ರತೆ, ಪರಿಸರ ರಕ್ಷಣೆಗೆ ಸಹಕಾರವೇ ಸರಿಯಾದ ಮಾರ್ಗವೆಂದು ಅನೇಕ ರಾಷ್ಟ್ರಗಳು ಕಂಡುಕೊಂಡಿವೆ. ಭಾರತವೂ ಕೂಡ ಇದೇ ಮಾರ್ಗ ಅನುಸರಿಸುತ್ತದೆ ಎಂದು ಆಶಿಸಲಾಗಿದೆ. ಸಂಕಷ್ಟ ಕಾಲದಲ್ಲಿಯೇ 'ಸಹಕಾರ' ಅರಳಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಅದುದರಿಂದ ಈಗಿನ ಸಂಕಷ್ಟ ಕಾಲದಲ್ಲಿಯೂ 'ಸಹಕಾರ' ಪರಿಹಾರ ನೀಡಬಲ್ಲದು. 'ಸಹಕಾರ' ಮರಳಿ ಅರಳಿತೇ? ಈ ದಿಸೆಯಲ್ಲಿ ಆಲೋಚನೆ ಇಂದಿನ ಅಗತ್ಯತೆ.

*****************************************************************************************

## 13. ಸಹಕಾರ ಸಂಘ ಸ್ಥಾಪನೆ : ಅಸಂಘಟಿತ ಕಾರ್ಮಿಕರಿಗೆ ಆಸರೆ –

ಭಾರತದಲ್ಲಿ ಸುಮಾರು 475 ದಶಲಕ್ಷ ಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇದು ಒಟ್ಟು ಕಾರ್ಮಿಕರ ಶೇ. 91 ಭಾಗವಾಗುತ್ತದೆ. ಎಂದು ಒಂದು ಅಧ್ಯಯನ ವರದಿ ತಿಳಿಸುತ್ತದೆ. ಅಲ್ಲದೇ ವೇತನದಾರರು ಗಳಲ್ಲಿ ಶೇ. 52 ಜನರು ಯಾವುದೇ ಸಾಮಾಜಿಕ ಭದ್ರತೆ ಇಲ್ಲದೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಮತ್ತೊಂದು ವರದಿ ತಿಳಿಸುತ್ತದೆ. ಇಂತಹ ಕಾರ್ಮಿಕ ವಲಯ ರಾಷ್ಟ್ರದ ಆರ್ಥಿಕ ಶಕ್ತಿ ಯಾಗಿರುವುದಲ್ಲದೇ ಆರ್ಥಿಕ ಬೆಳವಣಿಗೆಗೆ ಕಾರಣವಾಗಿರುತ್ತದೆ. ಅನೇಕ ಸರ್ಕಾರದ ಸವಲತ್ತುಗಳನ್ನು ಅವರಿಗೆ ನೇರವಾಗಿ ತಲುಪಿಸುವುದು ಕಷ್ಟಸಾಧ್ಯವಾಗಿರುತ್ತದೆ. ಈ ಪರಿಸ್ಥಿತಿಯಲ್ಲಿ

ಪರಿಹಾರವೆಂದರೆ ಅವರದೇ ಆದ ಸಹಕಾರ ಸಂಘಗಳನ್ನು ರಚಿಸಿಕೊಂಡು ಪರಿಹಾರ ಕಂಡುಕೊಳ್ಳುವುದಾಗಿದೆ.

ಈ ಹಿಂದೆ 'ಕಾರ್ಮಿಕ ಒಪ್ಪಂದ ಸಹಕಾರ ಸಂಘಗಳು' (Labour contract co-operative societies) ಮಂಡಿಗಳಲ್ಲಿ, ಕಾರ್ಖಾನೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವು. ಕನಿಷ್ಟ ವೇತನ ಸೌಲಭ್ಯ, ಕೆಲಸ ದೊರೆಸಿಕೊಳ್ಳುವ ಕೆಲಸಗಳನ್ನು ನಿರ್ವಹಿಸುತ್ತಿದ್ದವು. ಕ್ರಮೇಣ ಅವು ಇಲ್ಲವಾಗಿವೆ. ಆಧುನಿಕ ಭಾರತದಲ್ಲಿ ನಗರೀಕರಣ ಹೆಚ್ಚಾದಂತೆ ಅಸಂಘಟಿತ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ಗ್ರಾಮೀಣ ಜನತೆ ಪಟ್ಟಣಗಳಿಗೆ ವಲಸೆ ಬರುತ್ತಿದೆ. ಕಾರ್ಮಿಕರು ವಿವಿಧ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಉದಾ: ಕಟ್ಟಡ ನಿರ್ಮಾಣ ವಲಯ, ಹೋಟೆಲ್ ಗಳು, ವಿವಿಧ ಸಣ್ಣ ಸಣ್ಣ ಮಧ್ಯಮ ಕಾರ್ಖಾನೆಗಳು, ಸೇವಾ ವಲಯಗಳಲ್ಲಿ ವಾಹನ ಚಾಲಕರು, ವಸ್ತು, ಆಹಾರ, ಮನೆ ಬಾಗಿಲಿಗೆ ತಲುಪಿಸುವುದು. (ಸ್ವಿಗ್ಗಿ, ಜೊಮಾಟೋ, ಪೋರ್ಟರ್, ಉಬರ್, ಓಲೋ, ಅಮೇಜಾನ್, ಫ್ಲಿಪ್‌ಕಾರ್ಟ್......... delivery boys, shipping agents) ಮನೆಗೆಲಸ, ಅಡಿಗೆ, ನಿರತ ಮಹಿಳಾ ಕಾರ್ಮಿಕರು, ಈ ದಿಶೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಂತ್ರಿಯಾಗಿದ್ದು ಅನೇಕ 'ಆಪ್'ಗಳು ಲಭ್ಯವಿದ್ದು ಮನೆ ಬಾಗಿಲಲ್ಲೆ ಸೇವೆ ಲಭ್ಯವಾಗುವಂತೆ ಮಾಡಿದೆ. ಆದರೆ ಇದು ಅಸಂಘಟಿತ ಕಾರ್ಮಿಕರ ನೆಲೆಯಾಗಿದೆ. ಅನೇಕ ವೇಳೆ ಗ್ರಾಹಕರನ್ನು ಸೇವೆ ನೀಡುತ್ತಿರುವವರನ್ನು ಶೋಷಣೆ ಮಾಡಲಾಗುತ್ತಿದೆ. ಇದರ ಹೋಗಲಾಡಿಕೆಗೆ ಇರುವ ಮಾರ್ಗ 'ಸಹಕಾರ' ಮಾರ್ಗ. ಆದರೆ ಈ ವಲಯದಲ್ಲಿ ಸಂಘಟನೆ ಅತ್ಯಂತ ಕಷ್ಟಕರವಾಗಿರುತ್ತದೆ. ಧೀಮಂತ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ಇದನ್ನು ಮೀರಿ ಸಂಘಟನಾ ಚತುರತೆಯಿಂದ ತಮ್ಮದೇ 'ಸಹಕಾರ ಸಂಘಗಳ' ಸ್ಥಾಪನೆಯಿಂದ ಹಾಲಿ ಕಾರ್ಯಾಚರಣೆಯಲ್ಲಿ 'ಚೌಕಾಶಿ' ಶಕ್ತಿ ಹೆಚ್ಚಿಸಿ ಕೊಳ್ಳಬಹುದಲ್ಲದೇ ಆರ್ಥಿಕ, ಪರಿಕರ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಅಲ್ಲದೇ ಮುಂದೆ ಭವಿಷ್ಯದಲ್ಲಿ ಅಗತ್ಯ ಸಾಮಾಜಿಕ ಭದ್ರತೆಯನನ್ನು ಪಡೆಯಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಸಹಕಾರ ಸಂಘವು ಒಂದು ಕಾರ್ಯವ್ಯಾಪ್ತಿಯನ್ನು ನಿಗದಿ ಪಡಿಸಿಕೊಂಡು (ಉದಾ: ಬೆಂಗಳೂರು ನಗರ) ಸದಸ್ಯತ್ವದ ಅರ್ಹತೆ, ಮಾನದಂಡಗಳನ್ನು ನಿಗದಿಪಡಿಸಿ ಉದ್ದೇಶಗಳನ್ನು ಸ್ಪಷ್ಟಪಡಿಸಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಕೊಳ್ಳಬಹುದಾಗಿದೆ. ಸಂಘಟಿತ ಪ್ರಯತ್ನದಿಂದ 'ಸ್ವಸಹಾಯ ಪರಸ್ಪರ ಸಹಾಯ, ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ ಎಂಬ ತತ್ವವನ್ನು ಅರಿಯ ಬೇಕಾಗಿದೆ. ಷೇರು ಬಂಡವಾಳ ಸಂಗ್ರಹಣೆ, ತಮ್ಮ ಉಳಿತಾಯವನ್ನು (ಪಿಗ್ಮಿ, ರಿಕರಿಂಗ್ ಠೇವಣಿ) ಸಣ್ಣ ಅಗತ್ಯತೆಗೆ ಸಣ್ಣ ಸಾಲಗಳು. ತಾವು ಸಲ್ಲಿಸುತ್ತಿರುವ ಸೇವಾ ಸಂಸ್ಥೆ ಯಿಂದ ತಾವು ಪಡೆಯ ಬೇಕಾದ ಮೊತ್ತವನ್ನು ಸಹಕಾರ ಸಂಘದ ಮೂಲಕ ಪಡೆಯುವುದು. ಅಲ್ಪ ಮೊತ್ತವನ್ನು ಸಹಕಾರ ಸಂಘದ ವ್ಯವಸ್ಥಾಪನೆಯ ಸೇವಾ ಶುಲ್ಕವಾಗಿ ಪಾವತಿಸುವುದು. ಸಂಘವೇ ಅಗತ್ಯ 'ಸಾಫ್ಟ್‌ವೇರ್ ಪ್ಲಾಟ್‌ಫಾರಂ' ನಿರ್ಮಿಸುವುದು, ನಿರ್ವಹಣೆ ಮಾಡುವುದು. ಸದಸ್ಯರಿಗೆ ವಾಹನ ಕೊಳ್ಳಲು, ದುರಸ್ತಿಗೆ, ಸಾಲದ ವ್ಯವಸ್ಥೆ ಮಾಡುವುದು, ಸಾಲ ನೀಡುವುದು. ಆರ್ಥಿಕ ಭದ್ರತೆಗಾಗಿ ವಾಹನ, ಜೀವ, ವೈದ್ಯಕೀಯ ವಿಮೆ ಸೌಲಭ್ಯಗಳನ್ನು ಒದಗಿಸುವುದು. ಗುಂಪು ವಿಮೆ, 'ಯಶಸ್ವಿನಿ' ಸಹಕಾರ ವೈದ್ಯಕೀಯ ವಿಮಾ ಯೋಜನೆಯ ಅನುಷ್ಠಾನ. ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗೆ, ಭವಿಷ್ಯದ ಒಳಿತಿಗಾಗಿ ಭವಿಷ್ಯ ನಿಧಿ, ಪಿಂಚಣಿ ಸೌಲಭ್ಯಗಳು, ಮರಣ ನಿಧಿ, ಮಕ್ಕಳ ಓದಿಗೆ, ಸದಸ್ಯರೇ ಬಿಡುವಿನ ಸಮಯದಲ್ಲಿ ವಿದ್ಯಾರ್ಜನೆಗಾಗಿ ವಿದ್ಯಾರ್ಥಿ ವೇತನ, ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಸದಸ್ಯರ ಅಗತ್ಯತೆಗಳಿಗನುಸಾರ ಹಾಕಿ ಕೊಳ್ಳಬಹುದಾಗಿದೆ. ಸಂಘಟಿತ ಪ್ರಯತ್ನದಿಂದ ಸಾಧ್ಯವಾಗದಂತಹ ಯಾವುದೇ ಕಾರ್ಯವಿಲ್ಲ. ಈ ಅಸಂಘಟಿತ ಕಾರ್ಮಿಕರ ಸಂಘಟನೆಗೆ ನಾಯಕತ್ವ ಗುರುತಿಸುವ, ಅವರಿಗೆ ಸಾಮಾಜಿಕ ಮತ್ತು ಆರ್ಥಿಕ ಸಬಲತೆಯ ಸಾಧ್ಯತೆ ಬಗ್ಗೆ ತಿಳುವಳಿಕೆ, ಶಿಕ್ಷಣ, ನೀಡಬೇಕಾಗಿರುವುದು ಈ ದಿನದ ಅವಶ್ಯಕತೆ. ಇದರ ಬಗ್ಗೆ 'ಸಹಕಾರಿ'ಗಳು ಆದ್ಯತೆಯಾಗಿ ಪರಿಗಣಿಸಿ ಮಾರ್ಗದರ್ಶನ ನೀಡಬೇಕಾಗಿದೆ.

**ಅಗೆದು ಗೊಬ್ಬರ ವಿಕ್ಕಿ ನೀರೆರೆದು ತೋಟಿಗನು ।**

**ಜಗಿವ ಮುಳ್ಳಿರಿತಗಳ ಸೈರಿಸಿ ಗುಲಾಬಿ II**

**ನಗುವುದೊಂದರೆ ನಿಮಿಷ; ನಗಲು ಬಾಳ್ಮುಗಿಯುವುದು ।**

**ಮುಗುಳು ದುಡಿತಕೆ ತಣಿಸು ಮಂಕುತಿಮ್ಮ – ಡಿವಿಜಿ**

********************************************************************************************

# 14. ಹಸಿವು ಮುಕ್ತ ಭಾರತ – ಸಹಕಾರ ಚಳವಳಿಯ ಪಾತ್ರ

ಭಾರತದ ಸಾಂವಿಧಾನದ ಆಶಯ, 'ಸರ್ವರಿಗೂ ಸಮಪಾಲು ಸಮಬಾಳು'. ಈ ಆಶಯ ಈಡೇರಿಸುವುದು ಭಾರತದ ಪ್ರತಿ ಪ್ರಜೆಯ ಕರ್ತವ್ಯ ಕೂಡ. ಈ ದಿಸೆಯಲ್ಲಿ, 'ಸಹಕಾರ ಚಳುವಳಿ' ಸಾಕಷ್ಟು ಕೊಡುಗೆಯನ್ನು ನೀಡಿದೆ. ಸ್ವಾತಂತ್ರ್ಯನಂತರ ಭಾರತದ ಸಾಧನೆ ಅತ್ಯಮೂಲ್ಯ. ಆದರೂ ಆಗಿನ 40 ಕೋಟಿ ಜನಸಂಖ್ಯೆ ಈಗ 140 ಕೋಟಿ ಮೀರಿದೆ. ಚೀನಾ ಜನಸಂಖ್ಯೆ ಮೀರಿರುವುದು ದಾಖಲೆಯಾಗಿದೆ.

121 ರಾಷ್ಟ್ರಗಳಲ್ಲಿ 'ಹಸಿವು ಸೂಚ್ಯಾಂಕ'ದಲ್ಲಿ ಭಾರತ 107 ನೇ ಸ್ಥಾನದಲ್ಲಿರುವುದು ಕಳವಳಕಾರಿ. ಭಾರತದಲ್ಲಿ "ಬಡತನ ರೇಖೆ"ಗಿಂತ ಕೆಳಗೆ ಇರುವ ಜನಂಖ್ಯೆ ಶೇ. 10–22. ಎಂದರೆ ಎಷ್ಟೇ ಭಾರತ ಈ ದಿಸೆಯಲ್ಲಿ ಸಾಧನೆ ಮಾಡಿದೆಯಾದರೂ ಮಾಡಬೇಕಾದ್ದು ಇನ್ನೂ ಇದೆ ಎಂದು ಎತ್ತಿ ತೋರಿಸುತ್ತದೆ.

ಈ ಹಿನ್ನೆಲೆಯಲ್ಲಿ "ಆಹಾರ ಬಿಕ್ಕಟ್ಟಿನ ಮೇಲಿನ ವಿಶ್ವ ವರದಿ" (Global Report on Food Crisis - GRFC) 2022ರಲ್ಲಿ ವಿಶ್ವದಲ್ಲಿ 691 ರಿಂದ 783 ದಶಲಕ್ಷ ಜನರು ಹಸಿವಿನಿಂದ ಬಳಲುತ್ತಿದ್ದಾರೆ ಎಂದು ತಿಳಿಸಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ವಿಶ್ವ ಸಂಸ್ಥೆಯ 2030ರ 'ಸುಸ್ಥಿರ ಬೆಳವಣಿಗೆಯ ಗುರಿ' ಸಂಖ್ಯೆ 02 'ಶೂನ್ಯ ಹಸಿವು' (Zero Hunger) ಆಗಿರುತ್ತದೆ. ಇದನ್ನು ಸಾಧಿಸಲು ವಿಶ್ವದಾದ್ಯಂತ ಪ್ರಯತ್ನಿಸಲಾಗುತ್ತಿದೆ. ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (ICA - Internatonal Cooperative Alliance) ಈ ವರ್ಷದ ಅಂತರಾಷ್ಟ್ರೀಯ ಸಹಕಾರ ದಿನಾಚರಣೆ ಅಂಗವಾಗಿ ತನ್ನ ಘೋಷ ವಾಕ್ಯವನ್ನು 'ಸುಸ್ಥಿರ ಅಭಿವೃದ್ಧಿ' ಎಂದು ಘೋಷಿಸಿದೆ. ಸಹಕಾರ ಚಳುವಳಿಯು ಇದರ ಭಾಗೀದಾರರಾಗಿ ಕರ್ತವ್ಯ ನಿರ್ವಹಿಸುವ ಅವಶ್ಯಕತೆಯನ್ನು ಇದು ತಿಳಿ ಹೇಳುತ್ತದೆ. 'ಶೂನ್ಯ ಹಸಿವು' ಸಾಧನೆಗೆ 'ಆಹಾರ ಭದ್ರತೆ'ಯನ್ನು (Food Security) ಸಾಧಿಸುವುದು ಇದರ ಮೂಲಭೂತ ಅವಶ್ಯಕತೆ. ಹಾಗಿದ್ದಲ್ಲಿ 'ಆಹಾರ ಭದ್ರತೆ' ಎಂದರೇನು? 1996ರ ವಿಶ್ವ ಆಹಾರ ಸಮ್ಮೇಳನವು 'ಆಹಾರ ಭದ್ರತೆ'ಯನ್ನು ಈ ಮುಂದಿನ ರೀತಿ ವ್ಯಾಖ್ಯಾನಿಸಿದೆ. "ಎಲ್ಲ ಸಮಯದಲ್ಲಿಯೂ ಎಲ್ಲರಿಗೂ ಆರೋಗ್ಯಕರ ಮತ್ತು ಚಟುವಟಿಕೆಯುಕ್ತ ಜೀವನಕ್ಕಾಗಿ ಎಲ್ಲರ ಅವಶ್ಯಕತೆ ಪೂರೈಸುವ ಮತ್ತು ಅವರ ಆಧ್ಯತೆಯ ಆಹಾರ ಅವರ ಭೌತಿಕ ಮತ್ತು ಆರ್ಥಿಕತೆಯೊಳಗೆ ಲಭ್ಯವಾಗುವಂತೆ (ನಿಲುಕುವಂತೆ) ಮಾಡುವುದು".

ಈ ವ್ಯಾಖ್ಯಾನದಂತೆ ಮಾನವನ ಹಸಿವು ನೀಗಲು ಬೇಕಾದ ಪಿಷ್ಠ (Carbohydrates) ಜೊತೆಗೆ ಸಸಾರಜನಕ (ಪ್ರೋಟೀನ್ -protien) ಜಿಡ್ಡು(ಕೊಬ್ಬು–fat) ಅಂಶವನ್ನು ಆಹಾರ ಒಳಗೊಂಡಿರ ಬೇಕು. ಹೀಗಾಗಿ ಇದು ಸಮತೋಲನ ಆಹಾರ ವಾಗಿರಬೇಕು. ಅಷ್ಟೇ ಅಲ್ಲದೆ ತೆಗೆದುಕೊಳ್ಳಬೇಕಾದ ಆಹಾರ ಪಚನವಾಗಿ ದೇಹಕ್ಕೆ ಸೇರುವಂತಾಗಬೇಕು. ಇದಕ್ಕೆ ಜೀವಸತ್ವ (vitamins) ಮತ್ತು ಖನಿಜಾಂಶಗಳು (Minerals) ಅವಶ್ಯಕತೆ ಇದ್ದು ಇದರ ಪೂರೈಕೆ ಕೂಡ ಬಹು ಮುಖ್ಯವಾದ ಅಂಶ. ಹೀಗಾಗಿ ಕೇವಲ ಆಹಾರವಲ್ಲದೆ 'ಸಮತೋಲನ ಪೌಷ್ಟಿಕ ಆಹಾರ 'ಒದಗಿಸುವುದು' ಆಹಾರ ಭದ್ರತೆ'ಯ ಪ್ರಮುಖ ಅಂಶವಾಗುತ್ತದೆ.

ತಜ್ಞರು 'ಆಹಾರ ಭದ್ರತೆ'ಯ ಕಾರ್ಯಕ್ರಮ ಯಶಸ್ವಿಯಾಗಲು ಈ ಕೆಳಕಂಡ ಪ್ರಮುಖ ಅಂಶಗಳು ಪ್ರಮುಖ ಪಾತ್ರ

ವಹಿಸುತ್ತವೆ ಎಂದು ವಿವರಿಸುತ್ತಾರೆ.

1. ಆಹಾರ ಲಭ್ಯತೆ (Availablity); ರಾಷ್ಟ್ರದ ಆಹಾರ ಉತ್ಪಾದನೆ ಮತ್ತು ನಿವ್ವಳ ಆಮದು ನಿರ್ಧರಿಸುತ್ತದೆ.

2. ಆಹಾರ ನಿಲುಕುವಿಕೆ (Access); ಕುಟುಂಬದ ಅಥವ ವ್ಯಕ್ತಿಗಳ ಖರೀದಿ ಶಕ್ತಿ ಅತಿ ಮುಖ್ಯ. ಸರ್ಕಾರದ ಪಡಿತರ ವಿತರಣೆ ಕಾರ್ಯಕ್ರಮದ ಯಶಸ್ಸಿ ನಿರ್ವಹಣೆ.

3. ದೇಹವು ಸ್ವೀಕರಿಸುವ/ಪಚನಗೊಳಿಸಿಕೊಂಡು ಹೀರಿಕೊಳ್ಳುವ ಸಾಮರ್ಥ್ಯ (Utilisation/Absorption); ಮಾನವ ಬೆಳೆದ ಪರಿಸ್ಥಿತಿ, ಪರಿಸರ, ಗರ್ಭಿಣಿ ಹಾರೈಕೆ, ಬಾಣಂತಿ ಹಾರೈಕೆ, ಜನನ, ಮಗುವಿನ ಮುಂದಿನ ಬೆಳವಣಿಗೆ ಈ ಎಲ್ಲವನ್ನು ಅವಲಂಭಿಸಿರುತ್ತದೆ.

4. ಸ್ಥಿರತೆ (Stability); ರಾಷ್ಟ್ರದ ಆಹಾರ ಉತ್ಪಾದನೆ, ನಿರಂತರತೆ ಮತ್ತು ಹೆಚ್ಚುವರಿ ದಾಸ್ತಾನು ಸಂಗ್ರಹಣೆ, ಅದಕ್ಕೆ ಸೂಕ್ತ ಮೂಲಭೂತ ಸೌಕರ್ಯಗಳು,

ಈ ಮೇಲಿನ ನಾಲ್ಕು ಅಂಶಗಳಲ್ಲಿ ಸಹಕಾರ ಚಳುವಳಿ ಹೇಗೆ ಇದುವರೆವಿಗೆ ತೊಡಗಿಸಿಕೊಂಡಿದೆ. ಇನ್ನು ಮುಂದೆ ಹೇಗೆ ತೊಡಗಿಸಿಕೊಳ್ಳಬೇಕು. ಇದರಿಂದ ಹೇಗೆ ಹಸಿವು ಮುಕ್ತ ಭಾರತವನ್ನು ನಿರ್ಮಾಣ ಮಾಡಬಲ್ಲೆವು? ಇದರಿಂದ ಸುಸ್ಥಿರ ಅಭಿವೃದ್ಧಿ ಸಾಧಿಸಬಲ್ಲೆವು ಎಂಬ ವಿಶ್ಲೇಷಣೆ ಅಗತ್ಯ ಆಹಾರ ಲಭ್ಯತೆ; ಭಾರತದ ಸ್ವಾತಂತ್ರ್ಯ ನಂತರ ಆದ ವೈಜ್ಞಾನಿಕ ತಾಂತ್ರಿಕ ಬೆಳವಣಿಗೆ ಅದಕ್ಕೆ ಸರ್ಕಾರ ಅನುಷ್ಠಾನ ಗೊಳಿಸಲು ತೆಗೆದುಕೊಂಡ ಕ್ರಮಗಳು. ಭಾರತದ ರೈತರು ಅಳವಡಿಸಿಕೊಂಡ

ಕ್ರಿಯೆಯಿಂದಾಗಿ "ಹಸಿರು ಕ್ರಾಂತಿ"ಗೆ ಕಾರಣವಾಯಿತು. ಇದರಿಂದ ಆಹಾರ ಉತ್ಪಾದನ ಧರ ಜನಂಖ್ಯೆ ಬೆಳವಣಿಗೆಗಿಂತ ಏರುಮುಖವಾಗಿದ್ದರಿಂದ "ಹಸಿವು" ನೀಗಿಸಲು ಸಾಧ್ಯವಾಯಿತು. ಇದಕ್ಕೆ ವಾಹಕವಾಗಿ ಕಾರ್ಯನಿರ್ವಹಿಸಿದ್ದು ಸಹಕಾರ ಚಳುವಳಿ ಎಂದರೆ ಅತಿಶಯೋಕ್ತಿಯಲ್ಲ. ಈಗಿನ ಅವಶ್ಯಕತೆ ಎರಡನೇ ಹಸಿರು ಕ್ರಾಂತಿ ಇದಕ್ಕೆ ಸಹಕಾರ ಚಳುವಳಿ ಹೇಗೆ ಬೆಂಬಲಿಸುತ್ತಿದೆ ಎಂಬದು ಅತಿ ಮುಖ್ಯ. ಸರ್ಕಾರದ ಆರ್ಥಿಕ ನೀತಿ ಬದಲಾವಣೆಯಾದಂತೆ 'ಸಹಕಾರ' ಸರ್ಕಾರದ ಆರ್ಥಿಕ ನೆರವು ಇಲ್ಲದೆ ಬೆಳೆಯಲು ವಿಫಲವಾಗಿದೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಆಹಾರ ಉತ್ಪಾದನೆಗೆ ಅವಶ್ಯ ದುಡಿಯುವ ಬಂಡವಾಳ ಒದಗಿಸುವ 'ಅಲ್ಪಾವಧಿ ಕೃಷಿ ಸಾಲ' ವಿತರಣೆಯು ಗಣನೀಯ ಸಾಧನೆ ಮಾಡಿದ್ದರೂ ಸಹಕಾರದ ಪಾಲು ಶೇ. 20 ಮಾತ್ರವಾಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅದರಲ್ಲಿಯೂ ಸಣ್ಣ, ಅತಿ ಸಣ್ಣ ರೈತರ ಶೇ. 80ಕ್ಕೂ ಹೆಚ್ಚಿನ ರೈತರ ಅವಶ್ಯಕತೆ ಪೂರೈಸುತ್ತಿರುವ ಈ ವಲಯ ಅವಶ್ಯಕತೆಯಷ್ಟು ಸಕಾಲದಲ್ಲಿ ಸಾಲ ಒದಗಿಸಲು ಯಶಸ್ವಿಯಾಗಬೇಕಾಗಿದೆ. ಪ್ರಾ.ಕೃ.ಪ.ಸ.ಸಂ. ಹೆಚ್ಚಳ ಮತ್ತು ಅವುಗಳು ವಿವಿದೋದ್ದೇಶ ಸಹಕಾರ ಸಂಘಗಳಾಗಿ ಮಾರ್ಪಾಡಾಗಬೇಕು ಎಂಬ ಸರ್ಕಾರದ ಆಶಯ ಈ ದಿಶೆಯಲ್ಲಿ ಧನಾತ್ಮಕ ಅಂಶವಾಗಿದ್ದು ಈ ಸಂಘಗಳು ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದಾಗ ಕಾರ್ಯಸಾಧನೆ ಕಷ್ಟಕರವೇನಲ್ಲ. ಕೃಷಿ ಮೂಲಭೂತ ಅವಶ್ಯಕತೆಗಳನ್ನು ರೈತರಿಗೆ ಒದಗಿಸುವುದಲ್ಲದೆ, ಮಾರುಕಟ್ಟೆ, ಮೌಲ್ಯವರ್ಧಿತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಬೇಕಿದೆ. ನಬಾರ್ಡ್/ಎನ್.ಸಿ.ಡಿ.ಸಿ. ಕಡಿಮೆ ಬಡ್ಡಿ ದರದಲ್ಲಿ ಒದಗಿಸುತ್ತಿರುವ ಸಾಲ ಪಡೆದು ಅನುಷ್ಠಾನ ಗೊಳಿಸಬೇಕಿದೆ. ಸಹಕಾರ ಸಂಘಗಳು, 'ರೈತ ಉತ್ಪಾದನ ಸಂಸ್ಥೆ' ಗಳಾಗಿ ಕಾರ್ಯನಿರ್ವಹಿಸುವ ಅವಶ್ಯಕತೆ ಇರುತ್ತದೆ. ತರಕಾರಿ, ಹಣ್ಣು, ತೋಟಗಾರಿಕಾ ಉತ್ಪನ್ನ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ. ಈ ಶೃಂಗ ವ್ಯವಸ್ಥೆಯನ್ನು ಬಲಪಡಿಸುವ ಅವಶ್ಯಕತೆ ಇದೆ. ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವ ಜವಾಬ್ದಾರಿ ಸಹಕಾರಿಗಳ ಆದ್ಯತೆಯಾಗಬೇಕಾಗಿದೆ. ಈ ಶೃಂಗ ವ್ಯವಸ್ಥೆ ಸಂಪೂರ್ಣ

ವಿಫಲರಾಗಿರುವುದನ್ನು ಕಾಣುತ್ತ ಇದ್ದೇವೆ. ಈ ಉಪಕ್ರಮಗಳಿಂದ ಆಹಾರ ಲಭ್ಯತೆಗೆ ಸಹಕಾರದ ಕೊಡುಗೆ ಹೆಚ್ಚಲು ಕಾರಣವಾಗುತ್ತದೆ. ಈ ದಿಸೆಯಲ್ಲಿ ಹಾಲು ಉತ್ಪಾದನೆ ಕ್ಷೇತ್ರದಲ್ಲಿ ಆಗಿರುವ 'ಸಹಕಾರ' ವಲಯದ ಸಾಧನೆ ಶ್ಲಾಘನೀಯ. 'ಶ್ವೇತ ಕ್ರಾಂತಿಗೆ' ಕಾರಣವಾಗಿದೆ. 'ಎಣ್ಣೆ ಬೀಜ' ವಲಯ ವಿಕಸನಗೊಳ್ಳಲು ಅಪಾರ ಅವಕಾಶಗಳಿವೆ. ಕರಾವಳಿ/ಒಳನಾಡು ಮೀನುಗಾರಿಕೆ ವಲಯದ ಸಾಧನೆ ಉತ್ತಮವಾಗಿದೆ.

**ಆಹಾರ ನಿಲುಕುವಿಕೆ;** (Access): ಪಡಿತರ ವಿತರಣೆ, ಸಹಕಾರ ಜಾಲ, ತಾ.ವ್ಯ.ಉ.ಸ. ಸಂಘಗಳು, ಪ್ರಾ.ಕೃ.ಪ.ಸ. ಸಂಘಗಳು, ಗ್ರಾಹಕ ಸಹಕಾರ ಸಂಘಗಳು ಈ ಕಾರ್ಯಕ್ರಮದಲ್ಲಿ ಬಹುತೇಕ ತೊಡಗಿಸಿಕೊಂಡಿವೆ. ಸರ್ಕಾರಕ್ಕೆ ಈ ಜಾಲ ಯಶಸ್ವಿಯಾಗಿ ನಿರ್ವಹಿಸುವ ಜಾಲವಾಗಿದೆ. ಖರೀದಿ ಶಕ್ತಿ ಹೆಚ್ಚಿಸಲು ಸಹಕಾರ ವಲಯ ಒದಗಿಸುತ್ತಿರುವ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ. ಪತ್ತಿನ ಸಹಕಾರ ಸಂಘಗಳು, ಬ್ಯಾಂಕ್ ಗಳು, ಕೈಗಾರಿಕಾ, ಗುಡಿ ಕೈಗಾರಿಕೆ, ನೇಕಾರಿಕೆ ಮತ್ತೆ ಇನ್ನಿತರ ಉತ್ಪನ್ನ ಸಹಕಾರ ಸಂಘಗಳ ಕಾರ್ಯ ಶ್ಲಾಘನೀಯ. ಮತ್ತು ಹೆಚ್ಚಿನ ವಿಕಸನಕ್ಕೆ ಸಾಕಷ್ಟು ಅವಕಾಶಗಳಿವೆ. ಸಹಕಾರ ಸಂಘಗಳು ಸ್ವ ಸಹಾಯ ಗುಂಪು/ ಜಂಟಿ ಭಾಧ್ಯತಾ ಗುಂಪುಗಳ ಮೂಲಕ ಒದಗಿಸುತ್ತಿರುವ ಸಾಲ ಮತ್ತು ಇತರೆ ಸೌಕರ್ಯಗಳು ಶ್ಲಾಘನೀಯ. ದೇಹವು ಸ್ವೀಕರಿಸುವ/ ಹೀರಿಕೊಳ್ಳುವ/ **ಪಚನಗೊಳ್ಳುವ ಸಾಮಾರ್ಥ್ಯ;** (Utilisation/Absorption/Assimilation): ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ದಿಸೆಯಲ್ಲಿ ಶ್ರಮಿಸುತ್ತದೆ. ಸಹಕಾರ ವಲಯವೂ ತನ್ನ ಸಹಕಾರ ತತ್ವವಾದ 'ಸಾಮಾಜಿಕ ಕಳಕಳಿ' ಅಂಗವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿ ಕೊಂಡು ನಿರ್ವಹಿಸುತ್ತಿವೆ. ತಮ್ಮ ಲಾಭಾಂಶ ದಲ್ಲಿ ಇದಕ್ಕಾಗಿ ಕೆಲವು ಅಂಶ ವನ್ನು ಇದಕ್ಕಾಗಿ ತೆಗೆದಿರಿಸಿ ತನ್ನ ಕಾರ್ಯ ವ್ಯಾಪ್ತಿಯ ಈ ಸಮುದಾಯಕ್ಕೆ ತಲುಪಿಸಿದಲ್ಲಿ ಹೆಚ್ಚಿನ ಸಾಧನೆಗೈಬಹುದು.

**ಸ್ಥಿರತೆ;** (Stability): ಭಾರತದಲ್ಲಿ ಉತ್ಪಾದನೆಯಲ್ಲಿ ಸ್ಥಿರತೆ ಸಾಧಿಸುವಲ್ಲಿ ರೈತರು ಯಶಸ್ವಿಯಾಗಿರುತ್ತಾರೆ. ಉತ್ಪಾದನೆಯಲ್ಲಿ ಮುಂಗಾರು ಹಿಂಗಾರು ಅವಲಂಭಿತದಲ್ಲದೆ, ನೀರಾವರಿ ಸೌಲಭ್ಯಗಳಿಂದ ಸ್ಥಿರತೆ ಸಾಧಿಸಲು ಸಾಧ್ಯವಾಗಿರುವುದಲ್ಲದೇ, ನಗರೀಕರಣ, ಕೈಗಾರಿಕಾ ಕರಣ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಒತ್ತಡ ಇದ್ದರೂ ಲಭ್ಯ ಕೃಷಿ ಭೂಮಿಯಲ್ಲಿ ಉತ್ಪಾದನೆಯ ಸ್ಥಿರತೆ ಸಾಧಿಸಿರುವುದು ಭಾರತದ ಹೆಗ್ಗಳಿಕೆ. ವಿಶ್ವದ ಇತರೆ ರಾಷ್ಟ್ರಗಳಲ್ಲಿ ಆಹಾರ ಕೊರತೆಯಾದಾಗ ಕೊಡುಗೆ, ರಫ್ತು ಮಾಡುತ್ತಿರುವುದು ಭಾರತಕ್ಕೆ ಹೆಮ್ಮೆಯ ವಿಷಯ. ಈ ಸಾಧ್ಯತೆ ಯಾಗಿರುವುದರಲ್ಲಿ ಸಹಕಾರ ವಲಯದ ರಸಗೊಬ್ಬರ ಉತ್ಪಾದನೆ – ಇಫ್ಕೋ, ಕ್ರಿಬ್ಕೋ, ಸಾಧನೆ ಅದ್ವಿತಿಯ. ರಾಜ್ಯ ಮಟ್ಟದ ಸಹಕಾರ ಮಾರುಕಟ್ಟೆ ಮಂಡಳಿಗಳ "ರಾಷ್ಟ್ರ ಮಟ್ಟದ ಸಂಸ್ಥೆಗಳ" ಕೊಡುಗೆ ಸ್ವಾಗತಾರ್ಹ. ಈ ಮೇಲೆ ವಿಶ್ಲೇಷಿಸಿರುವಂತೆ ಆಹಾರ ಉತ್ಪಾದನೆಯ ಎರಡನೇ 'ಹಸಿರು ಕ್ರಾಂತಿ' ಕಾಲಘಟ್ಟದಲ್ಲಿ ಭಾರತದ ಸಹಕಾರ ಸಂಘಗಳು ಸಕಾರಾತ್ಮಕವಾಗಿ ಕಾರ್ಯನಿರ್ವಹಿಸುವ ಅವಶ್ಯಕತೆ ಇದೆ.

ಈ ಮೇಲಿನ ನಾಲ್ಕು ಅಂಶಗಳ ಬಗ್ಗೆ ಸಹಕಾರ ವಲಯ ಅನುಷ್ಠಾನಿಕ ಕಾರ್ಯಕ್ರಮಗಳನ್ನು ವ್ಯವಸ್ಥಿತ ರೀತಿಯಲ್ಲಿ ಹಮ್ಮಿಕೊಂಡು ಕಾರ್ಯವೆಸಗಿದಲ್ಲಿ ಹಸಿವು ಮುಕ್ತ ಭಾರತ ನಿರ್ಮಾಣದಲ್ಲಿ ಸಹಕಾರದ ಕೊಡುಗೆ ಅಪರಿಮಿತ ಆಗುವಲ್ಲಿ ಸಂದೇಹವಿಲ್ಲ.

ಅನ್ನ ದೇವರಿಗಿಂತ । ಇನ್ನು ದೇವರು ಇಲ್ಲ

ಅನ್ನಕ್ಕೆ ಮೇಲು ಹಿರಿದಿಲ್ಲ – ಲೋಕಕ್ಕೆ ಅನ್ನವೇ ಪ್ರಾಣ ಸವಜ್ಞ,

ಅನ್ನ ದೇವರ ಮುಂದೆ । ಇನ್ನು ದೇವರು ಉಂಟೆ

ಅನ್ನವಿರುವ ತನಕ ಪ್ರಾಣವು – ಜಗದೊಳ ಅನ್ನವೇ ದೈವ ಸರ್ವಜ್ಞ

ಅನ್ನವ ನೀಡದೆ । ಸನ್ನೆಯ ನೋಡದೆ

ಮನ್ನಣೆಯ ಮೊದಲ ನರಿಯದೆ – ಇಹ ನೃಪನು

ಕುನ್ನಿಗಿಂ ಕಷ್ಟ ಸರ್ವಜ್ಞ

**********************************************************************************************

# 15. ಆಹಾರ ಭದ್ರತೆ – ಸಹಕಾರ ಚಳುವಳಿ, ಒಂದು ವಿಶ್ಲೇಷಣೆ

ಆಹಾರ ಭದ್ರತೆ ಸಂರಕ್ಷಣೆ ಎಂದರೆ ಎಲ್ಲ ಸಮಯದಲ್ಲಿಯೂ ಎಲ್ಲರಿಗೂ ಆರೋಗ್ಯಕರ ಮತ್ತು ಚಟುವಟಿಕೆ ಯುಕ್ತ ಜೀವನಕ್ಕಾಗಿ ಎಲ್ಲರಿಗೂ ಅವರ ಅವಶ್ಯಕತೆ ಪೂರೈಸುವ ಮತ್ತು ಅವರ ಆಧ್ಯತೆಯ ಆಹಾರ ಅವರ ಭೌತಿಕ ಮತ್ತು ಆರ್ಥಿಕತೆಯೊಳಗೆ ಲಭ್ಯವಾಗುವಂತೆ ಮಾಡುವುದು. ಇದನ್ನು ಕಾರ್ಯಗತ ಮಾಡಲು ಭಾರತವು "ಆಹಾರ ಭದ್ರತೆ ಕಾಯ್ದೆ 2013" ನ್ನು ಜಾರಿಗೆ ತಂದಿದೆ. ಇದರಂತೆ ಗ್ರಾಮೀಣ ಜನತೆಯ ಶೇ. 75 ಭಾಗ ಮತ್ತು ಪಟ್ಟಣ ಪ್ರದೇಶದ ಶೇ. 50 ಜನತೆಗೆ ಸಮತೋಲನ ಪೌಷ್ಠಿಕ ಆಹಾರ ದೊರೆಯುವಂತೆ ಮಾಡುವುದಾಗಿದೆ. ಭಾರತ ಸರ್ಕಾರವು ಈ ದಿಸೆಯಲ್ಲಿ 81.35 ಕೋಟಿ ಫಲಾನುಭವಿಗಳಿಗೆ ಆಹಾರ ತಲುಪಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಗುರಿ ಸಾಧನೆಗೆ ಆಹಾರ ಭದ್ರತೆ ಸಾಧಿಸಲು 1) ಆಹಾರ ಲಭ್ಯತೆ 2) ನಿಲುಕುವಿಕೆ 3) ಉಪಯುಕ್ತತೆ/ಜೀರ್ಣಿಸಿ, ಅರಗಿಸಿಕೊಳ್ಳುವ ಶಕ್ತಿ 4) ಆಹಾರ ಲಭ್ಯತೆಯ ಸ್ಥಿರತೆ ಅವಶ್ಯ ಅಂಶಗಳು ಎಂದು ತಜ್ಞರು ಗುರುತಿಸಿರುತ್ತಾರೆ. ಆಹಾರ ಲಭ್ಯತೆ ಸ್ಥಿರತೆ ಸಾಧಿಸಲು ಸಹಕಾರ ಚಳುವಳಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ನ ಕೊಡುಗೆಯನ್ನು ನೀಡಬಹುದು ಮತ್ತು ನೀಡಿದೆ ಎಂಬ ವಿಶ್ಲೇಷಣೆ ಮಾಡಲು ಯತ್ನಿಸಲಾಗಿದೆ.

ಆಹಾರ ಲಭ್ಯತೆ ಆಹಾರ ಉತ್ಪಾದನೆಯನ್ನು ಅವಲಂಭಿಸಿರುತ್ತದೆ. ಲಭ್ಯತೆಗಾಗಿ ಆಹಾರ ಆಮುದು ಮಾಡಿಕೊಳ್ಳುವುದು ಪರಿಹಾರವಾಗುವುದಿಲ್ಲ. ಕೇವಲ ತಾತ್ಕಾಲಿಕ ಕ್ರಮ ವಾಗುತ್ತದೆ. ಈ ಕ್ರಮ ರಾಷ್ಟ್ರದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದುದರಿಂದ ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾಯತ್ತತೆ ಸಾಧಿಸಲೇಬೇಕು. ಈಗಾಗಲೇ ಸ್ವಾಯತ್ತತೆ ಸಾಧಿಸಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಇದಕ್ಕೆ ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಯ ಮುಖಾಂತರ ಕೈಗೊಂಡ ಆರ್ಥಿಕ, ವೈಜ್ಞಾನಿಕ ತಾಂತ್ರಿಕ ಕಾರ್ಯಕ್ರಮಗಳೇ ಆಗಿವೆ. ಇದನ್ನು ಅರ್ಥ ಮಾಡಿಕೊಂಡು, ಅಳವಡಿಸಿಕೊಂಡು ಅನುಷ್ಠಾನ ಗೊಳಿಸಿದ ರೈತಾಪಿ ವರ್ಗದ ಸಾಧನೆ ಮಹತ್ತರವಾದುದು. ಇದು 'ಹಸಿರು ಕ್ರಾಂತಿ'ಗೆ ಕಾರಣವಾಯಿತು. ಅಧಿಕ ಇಳುವರಿ ತಳಿಗಳು, ಆಧುನಿಕ ವೈಜ್ಞಾನಿಕ ತಾಂತ್ರಿಕತೆ ಅಳವಡಿಕೆ, ಇದಕ್ಕೆ ಕಾರಣ 'ಹಸಿರು ಕ್ರಾಂತಿ'ಗೆ ಕಾರಣವಾಯಿತು. ಇದನ್ನು ಅರಿಯಲು ಈ ಕೆಳಗಿನ ಅಂಕಿ ಅಂಶಗಳು ಸಹಾಯಕಾರಿ.

| ವರ್ಷ | ಆಹಾರ ಉತ್ಪಾದನೆ (ಮೆಟ್ರಿಕ್‌ಟನ್ ದಶಲಕ್ಷಗಳಲ್ಲಿ) |
|---|---|
| 1950–51 | 51.00 |
| 2000–2001 | 196.81 |
| 2006–2007 | 216 .13 |
| 2010–2011 | 241.50 |

| | |
|---|---|
| 2011–2012 | 257.00 |
| 2021–2022 | 315.61 |
| 2022–23 | 330.53 |

ಭೂಮಿ, ನೀರು ಮತ್ತು ಜೀವ ವೈವಿಧ್ಯತೆ ಕೃಷಿಗೆ ಅಗತ್ಯ ಪ್ರಾಕೃತಿಕ ಮೂಲ ಸಂಪನ್ಮೂಲಗಳು. ಕೃಷಿಯಲ್ಲಿ ಇವುಗಳ ಆಲೋಚನ ಯುಕ್ತ ಬಳಕೆ ಅಧಿಕ ಇಳುವರಿಯನ್ನು ನೀಡಬಲ್ಲವು. ಇದರಿಂದ ಆಹಾರ ಉತ್ಪಾದನೆ ಹೆಚ್ಚಳವಾಗಿ ಆಹಾರ ಭದ್ರತೆ ಸಾಧ್ಯವಾಗುತ್ತದೆ. ಭಾರತದಲ್ಲಿ ಕೃಷಿ ಭೂಮಿಯ ಎಕರೆವಾರು ಉತ್ಪಾದನಾ ಪೂರ್ಣ ಸಾಮಾರ್ಥ್ಯದಷ್ಟು (Potentially) ಉತ್ಪಾದನೆ ಯಾಗುತ್ತಿಲ್ಲ. ಉತ್ಪಾದನೆಗೂ ಸಾಮರ್ಥ್ಯಕ್ಕೂ ಅಂತರವಿದೆ. ಆದುದರಿಂದ ಉತ್ಪಾದನೆ ಹೆಚ್ಚಿಸಲು ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಮಗಳು ಅಗತ್ಯ. ಅದಕ್ಕಾಗಿ ಕ್ರಿಯಾ ಯೋಜನೆ ರೂಪಿಸುವ ಅಗತ್ಯತೆ ಇದೆ. ಇದರಲ್ಲಿ ಸಹಕಾರ ಸಂಘಗಳು–ಒಟ್ಟಾರೆಯಾಗಿ ಸಹಕಾರ ಚಳುವಳಿ ಸಕ್ರಿಯವಾಗಿ ಪಾಲ್ಗೊಂಡು ಭಾಗೀದಾರರಾದಲ್ಲಿ ಎರಡನೇ 'ಹಸಿರು ಕ್ರಾಂತಿ'ಯಲ್ಲಿ ಮೊದಲನೆಯ 'ಹಸಿರು ಕ್ರಾಂತಿ'ಯಲ್ಲಿ ಪಾಲ್ಗೊಂಡಂತೆ ಪಾಲ್ಗೊಳ್ಳುತ್ತದೆ ಎಂಬುದು ಸದಾಶಯ.

ಭೂಮಿ; ಕೃಷಿ ಭೂಮಿಯ ವಿಸ್ತರಣೆ ಸಾಧ್ಯತೆಗಳಿಲ್ಲ. ಮಿಗಿಲಾಗಿ ಕೈಗಾರೀಕರಣ, ನಗರೀಕರಣ, ಕೃಷಿ ಭೂಮಿ ಕ್ಷೀಣತೆಗೆ ಕಾರಣವಾಗುತ್ತಿದೆ. ಇದನ್ನು ಭಾರತದಲ್ಲಿ ಮಾನವ ಕೃಷಿ ಭೂಮಿ ಅನುಪಾತ ಈ ಕೆಳಕಂಡಂತೆ ಕಡಿಮೆ ಯಾಗುತ್ತಿರುವುದನ್ನು ಗಮನಿಸಬೇಕು.

| ವರ್ಷ | ಕೃಷಿ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| 1951–52 | 0.34 |
| 1961–62 | 0.32 |
| 1971–72 | 0.28 |
| 1981–82 | 0.24 |
| 1991–92 | 0.20 |
| 2001–02 | 0. 16 |
| 2004–05 | 0.16 |
| 2007–08 | 0.15 |
| 2010–11 | 0.14 |

ಈ ಅಂಕಿ ಅಂಶಗಳಿಂದ ಅತಿ ಕಡಿಮೆ ಲಭ್ಯ ಕೃಷಿ ಭೂಮಿಯಲ್ಲಿ ಅತಿ ಹೆಚ್ಚಿನ ಉತ್ಪಾದನೆ ಮಾಡುವ ಅವಶ್ಯಕತೆ ಕಂಡುಬರುತ್ತದೆ. ಇದರೊಡನೆ ಬದಲಾಗುತ್ತಿರುವ ವಾತಾವರಣ, ಮುಂಗಾರು – ಹಿಂಗಾರು ಗಳ ಅನಿಶ್ಚಿತತೆ, ಪ್ರವಾಹ, ಬರಗಾಲ ಪರಿಸ್ಥಿತಿಗಳು ಕೃಷಿ ಉತ್ಪಾದನೆ ಮೇಲೆ ಪ್ರಭಾವ ಬೀರುತ್ತಿದೆ. ಕೃಷಿ ಕುಟುಂಬಗಳಲ್ಲಿ ಭೂಮಿ ಒಡೆತನ ಭಾಗಗಳಾಗುತ್ತಿದ್ದು ಪ್ರತಿ ರೈತರಿಗೆ ಲಭ್ಯ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಇದರಿಂದ ಪೀಳಿಗೆಯಿಂದ ಪೀಳಿಗೆಗೆ ಕೃಷಿ ಆಸಕ್ತಿ ಕಡಿಮೆಯಾಗುತ್ತದೆ. ಲಭ್ಯ ಕೃಷಿ ಭೂಮಿಯಲ್ಲಿ ಆಧುನಿಕ ಬೇಸಾಯ ಪದ್ಧತಿ, ನ್ಯಾಯಯುತ ರಸಗೊಬ್ಬರ (ಯೂರಿಯಾ,

ಎನ್:ಪಿ:ಕೆ ಮಿಶ್ರಣ, ಖನಿಜ ಮಿಶ್ರಣ) ಬಳಕೆ ಮಾಡುವ ಅವಶ್ಯಕತೆ ಇದೆ.

ಮಣ್ಣು: ಭೂಮಿಯ ಮೇಲ್ಪದರ ಮಣ್ಣು. ಕೃಷಿಗೆ ಅತ್ಯಂತ ಅಗತ್ಯ. ಮಣ್ಣು ಅಗತ್ಯ ಭೌತಿಕ, ರಸಾಯನಿಕ ಜೈವಿಕ ಗುಣಗಳನ್ನು ಹೊಂದಿರಬೇಕು. ಅಂತಹ ಮಣ್ಣು ಮಾತ್ರ ಭಾರತದ 140 ಕೋಟಿ ಜನಸಂಖ್ಯೆಗೆ ಆಹಾರ ಒದಗಿಸಬಲ್ಲದು. ಇದರ ಜೀವ ಅಡಗಿರುವುದು ಅದರಲ್ಲಿನ ಸಾವಯವ ಅಂಶದಲ್ಲಿ ಎಂದರೆ ತಪ್ಪಾಗಲಾರದು. ಅಣು ಜೀವಿಗಳು (ಬ್ಯಾಕ್ಟೀರಿಯಾ) ಬೂಸ್ಟ್ (Fungal) ಮತ್ತಿನ್ನಿತರೆ ಜೀವಿಗಳು (ಎರೆಹುಳು) ಮಣ್ಣಿನ ಕಣಗಳಿಗೆ ಭೌತಿಕ ಮತ್ತು ರಸಾಯನಿಕ ಕ್ರಿಯೆಗೆ ಅನುವು ಮಾಡಿಕೊಡುತ್ತವೆ. ಸಾವಯವ ಪದಾರ್ಥಗಳು ಮಣ್ಣಿನ ಕಣಗಳನ್ನು ಬೆಸೆಯುವುದಲ್ಲದೇ ರಸಾಯನಿಕ ಪದಾರ್ಥಗಳನ್ನು ಸಸ್ಯದ ಬೇರುಗಳು ಹೀರಿಕೊಳ್ಳಲು ಸಹಾಯ ಮಾಡುತ್ತವೆ. (chelating agents) ಮಣ್ಣಿನಲ್ಲಿ ನೀರು ಮತ್ತು ಗಾಳಿಯನ್ನು ಚಲನ ಯುಕ್ತವಾಗಿ ಮಾಡುತ್ತದೆ. ಎರೆಹುಳು ಮಣ್ಣಿನ ಸಾವಯವ ಅಂಶ ಹೆಚ್ಚಿಸುವುದಲ್ಲಿದೇ ಮೇಲೆ ಕೆಳಗೆ ತಿರುಗುವಂತೆ ಮಾಡುತ್ತದೆ. ಮಣ್ಣಿನ ಲ್ಲಿನ ಗಾಳಿ, ತೇವಾಂಶ ಹೆಚ್ಚಳಗೊಳ್ಳುತ್ತದೆ. (farmers friend, Nature's plough) ರೈತಮಿತ್ರ, ಪ್ರಾಕೃತಿಕ ನೇಗಿಲು ಎಂದು ಎರೆಹುಳು ವನ್ನು ಪರಿಗಣಿಸಲಾಗಿದೆ. ಮಣ್ಣಿನ ಗುಣ, ಹಸಿರು ಕವಚ, ಉಷ್ಣಾಂಶ, ತೇವಾಂಶ, ಮಣ್ಣಿನ ಫಲವತ್ತತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಣ್ಣಿನ ಫಲವತ್ತತೆ ಕಾಪಾಡಲು ಹಸಿರೆಲೆಗೊಬ್ಬರ, ಸಗಣಿ ಗೊಬ್ಬರ, ಎರೆ ಹುಳು ಗೊಬ್ಬರ ಮುಂತಾದ ಸಾವಯವ ಗೊಬ್ಬರದ ಪೂರೈಕೆ ಅಗತ್ಯ. ಬೆಳೆಗಳಿಗೆ ಅಗತ್ಯತೆಗಿಂತ ಹೆಚ್ಚಿನ ರಸಗೊಬ್ಬರದ ಉಪಯೋಗ ಮತ್ತು ಅತಿಯಾದ ನೀರಾವರಿಯಿಂದ ಮಣ್ಣು ಚೌಳು (ಕ್ಷಾರೀಯ–alkaline) ಆಗುತ್ತಿದ್ದು ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ಈ ದಿಸೆಯಲ್ಲಿ ಇತ್ತೀಚೆಗಿನ ಅವಿಷ್ಕಾರಗಳಾದ ಹರಳುರೂಪದ ಜೀವು ಮಿಶ್ರಿತ ಯೂರಿಯಾ, ದ್ರವ ರೂಪದ ಸಿಂಪಡನೆ ಯುಕ್ತ ಯೂರಿಯಾ ಬಹು ಉಪಯೋಗಿ. ರಸಾಯನಿಕ ಗೊಬ್ಬರಗಳ ಮತ್ತು ಸಾವಯವ ಗೊಬ್ಬರಗಳ ಹಿತ ಮಿಶ್ರಣದಿಂದ ಫಲವತ್ತತೆ ಕಾಪಾಡಲು ಸಾಧ್ಯ. ಇದರೊಡನೆ ನೀರಾವರಿ ಸೌಲಭ್ಯವಿದ್ದಲ್ಲಿ ವಿವೇಚನಯುತ (ಅಗತ್ಯತೆಗೆ ತಕ್ಕಂತೆ) ನೀರಿನ ಬಳಕೆಯಿಂದ ಹೆಚ್ಚಿನ ಇಳುವರಿ ಸಾಧ್ಯ.

**ಮಣ್ಣು ಪರೀಕ್ಷೆ:** ಮಣ್ಣಿನ ಪರೀಕ್ಷೆ ಬಹಳ ಮುಖ್ಯವಾದ ಅಂಶ. ಇದರಿಂದ ಸರಬರಾಜು ಮಾಡಬೇಕಾದ ಗೊಬ್ಬರ, ಖನಿಜಾಂಶಗಳ ನಿಖರ ಲೆಕ್ಕ ಸಿಗುತ್ತದೆ. ಅದರಂತೆ ರಸಗೊಬ್ಬರ ಪ್ರಮಾಣ ನಿರ್ಧರಿಸಿ ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಮಣ್ಣಿನಲ್ಲಿನ ಇಂಗಾಲ: ಸಾರಜನಕ (Carbon : Nitrogen) ಅನುಪಾತ 8:1 ರಿಂದ 15:1 ರವರ ನಡುವಿಗೆ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಮಣ್ಣಿಗೆ ಪೌಷ್ಟಿಕಾಂಶವನ್ನು ಸಮತೋಲನವಾಗಿ ಮತ್ತು ಅಗತ್ಯತೆಗೆ ತಕ್ಕಂತೆ ಒದಗಸಬಹುದು.

**ಸಹಕಾರದ ಪ್ರಾಮುಖ್ಯತೆ:** ಈ ಮೇಲಿನ ರೂಢಿಗಳನ್ನು (ಕೊಯ್ಲು ಪೂರ್ವ) ಮತ್ತು ಕೊಯ್ಲು ಸಮಯ ಮತ್ತು ಕೊಯ್ಲು ನಂತರದ ವೈಜ್ಞಾನಿಕ ಮತ್ತು ತಾಂತ್ರಿಕ ಕೂಡಿ ಪದ್ಧತಿಗಳನ್ನು ರೈತಾಪಿ ವರ್ಗ ಅಳವಡಿಸಿಕೊಳ್ಳಬೇಕಾಗಿದೆ. ಆದರೆ ಭೂಮಿಯ ಒಡೆತನ ಕುಗ್ಗುವಿಕೆ, ಅದರ ಮೇಲಿನ ಹೂಡಿಕೆ (ದುಡಿಯುವ ಬಂಡವಾಳ – ಅಲ್ಪಾವಧಿ ಬೆಳೆ ಸಾಲ, ಹೂಡಿಕೆ ಸಾಲ–ಮಧ್ಯಮಾವಧಿ, ದೀರ್ಘಾವಧಿ ಸಾಲ) ಅಗತ್ಯತೆಯಷ್ಟು ಮಾಡಲಾಗದೇ ಅಷ್ಟೇ ವಿಸ್ತೀರ್ಣದಲ್ಲಿ ಗರಿಷ್ಠ ಇಳುವರಿ ಪಡೆಯ ಬಹುದಾದಷ್ಟು ಪಡೆಯಲು ಆಗುತ್ತಿಲ್ಲ. ಇದಕ್ಕೆ ಪರಿಹಾರ 'ಸಹಕಾರ ಮಾರ್ಗ' ದಲ್ಲಿ ಅಡಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ದಿಸೆಯಲ್ಲಿ ತನ್ನ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ಹೆಚ್ಚಿನ ಹೂಡಿಕೆಗೆ ಅವಕಾಶ ಮಾಡಿಕೊಡಬೇಕಾಗಿದೆ.

ಕೃಷಿಕರು ತಮ್ಮ ಭೂಮಿಯನ್ನು ಒಗ್ಗೂಡಿಸಿ ಕೃಷಿ ಕೈಗೊಂಡಾಗ ಉತ್ತಮ ಕೂಡಿಗಳನ್ನು ಪಾಲಿಸಲು ಸಾಧ್ಯವಾಗುತ್ತದೆ. ಹೀಗಾಗಿ ಇಂದಿನ ಅವಶ್ಯಕತೆ ಜಂಟಿ ಬೇಸಾಯ ಸಹಕಾರ ಸಂಘ ಸಮೂಹ ಬೇಸಾಯ ಸಹಕಾರ ಸಂಘಗಳ

ಸ್ಥಾಪನೆ. ಕೃಷಿಕರು ಒಗ್ಗಟ್ಟಿನಿಂದ ಕೈಜೋಡಿಸಿದರೆ, ಯುವ ಜನತೆ 'ಸಹಕಾರ'ದ ಉಪಯುಕ್ತತೆ ಅರಿತು ನಾಯಕತ್ವ ನೀಡುವುದರೊಂದಿಗೆ ಇದು ಸಾಧ್ಯವಾಗುತ್ತದೆ. ಭೂಮಿ ಒಗ್ಗೂಡಿಸಿ ಸಾಮೂಹಿಕವಾಗಿ ಸಂಪನ್ಮೂಲಗಳ ಸದ್ಬಳಕೆ ಇಂದ ಅಧಿಕ ಇಳುವರಿ ಪಡೆದು ಆಹಾರ ಭದ್ರತೆ ಸಾಧಿಸಲು ಸಾಧ್ಯವಾಗುತ್ತದೆ. ರೈತರಿಗೆ ಅತಿ ನೇರ ಸಂಪರ್ಕ ಹೊಂದಿರುವ ಪ್ರಾ.ಕೃ. ಪ.ಸ.ಸಂಘಗಳು ರೈತರಿಗೆ ಅಗತ್ಯ ಮಾಹಿತಿ, ತಂತ್ರಜ್ಞಾನ, ಮಣ್ಣಿನ ಪರೀಕ್ಷೆ ಸೌಲಭ್ಯಗಳನ್ನು ಒದಗಿಸಲು 'ರೈತ ಸೇವಾ ಕೇಂದ್ರ 'ಗಳಾಗಿ ಕರ್ತವ್ಯ ನಿರ್ವಹಿಸಬೇಕು. ಈಗಾಗಲೆ ಕೆಲವು ಸಂಘಗಳು ಈ ರೀತಿ ಕರ್ತವ್ಯ ನಿರ್ವಹಿಸುತ್ತಿವೆ. ಕೃಷಿ, ತೋಟಗಾರಿಕೆ ಇಲಾಖೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಇರಿಸಿಕೊಂಡಾಗ ರೈತರಿಗೆ ಈ ಅನುಕೂಲಒದಗಿಸಲು ಸಾಧ್ಯವಾಗುತ್ತದೆ. ಅಲ್ಲದೆ ಅಗತ್ಯ ಪರಿಕರಗಳನ್ನು ಸಂಘದಿಂದ ರೈತರಿಗೆ ಒದಗಿಸಬಹುದು. 'ಬಹು ಸೇವಾ ಕೇಂದ್ರ' 'ವಿವಿದೊದ್ದೇಶ ಗ್ರಾಮೀಣ ಸಹಕಾರ ಸಂಘ'ಗಳಾಗಿ ಕೇಂದ್ರ ಸರ್ಕಾರದ ಆಶಯದಂತೆ ಕರ್ತವ್ಯ ನಿರ್ವಹಿಸಿದಂತಾಗುತ್ತದೆ. ಆಹಾರ ಉತ್ಪಾದನೆ ಹೆಚ್ಚಳಗೊಳಿಸುವಲ್ಲಿ 'ಸಹಕಾರ ವಲಯ' ತನ್ನ ಕೊಡುಗೆ ನೀಡಿದಂತಾಗುತ್ತದೆ.

**ನೀರು:** ಕೃಷಿಗೆ ಅತಿ ಅಗತ್ಯ ಸಂಪನ್ಮೂಲ ನೀರು. ನೀರಿನ ಲಭ್ಯತೆ ಕಡಿಮೆಯಾಗುತ್ತಿರುವುದು ಆತಂಕದ ಸ್ಥಿತಿಗೆ ಕಾರಣವಾಗುತ್ತಿದೆ. ಪ್ರತಿ ನೀರಿನ ಹನಿಯ ಸದ್ಬಳಕೆ ಈ ದಿನದ ಅವಶ್ಯಕತೆ. ಮುಂಗಾರು–ಹಿಂಗಾರು ಅನಿಶ್ಚಿತತೆ ಖಾಯಂ ನೀರಾವರಿ ಸೌಲಭ್ಯಗಳಾದ ಜಲಾಶಯ, ಅಂತರ್ಜಲವನ್ನು ಹೆಚ್ಚು ಅವಲಂಭಿಸುವಂತೆ ಮಾಡಿದೆ. ಪ್ರಾಚೀನ ಕೃಷಿ ರೂಢಿ ಪದ್ಧತಿಗಳು, ಋತು ಆಧಾರಿತ ಒಣ ಭೂಮಿ ಕೃಷಿ ಕನಸಾಗಿದೆಯೋ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಪರಿಸ್ಥಿತಿಯಲ್ಲಿ ಭೂಮಿಯಲ್ಲಿನ ನೀರು, ಆವಿ ಮತ್ತು ಬಾಷ್ಪ ವಿಸರ್ಜನೆ ಯಿಂದ ನಷ್ಟವಾಗುವುದನ್ನು ತಪ್ಪಿಸಲು, ಸಸ್ಯಗಳು ತನ್ನ ಬೇರಿನ ವ್ಯವಸ್ಥೆಯಿಂದ ಪೂರ್ಣ ಪಡೆಯಲು ಅನೇಕ ಆಧುನಿಕ ಕೃಷಿ ತಂತ್ರಜ್ಞಾನಗಳು ಸಹಾಯಕ್ಕೆ ಬಂದಿವೆ. ಈ ಪರಿಕರ (ಪ್ಲಾಸ್ಟಿಕ್ ಹೊದಿಕೆ, ಹಸಿರು ಮನೆ) ಗಳನ್ನು ಸಹಕಾರ ಸಂಘಗಳು ಒದಗಿಸಬೇಕು.

**ಮಳೆ ನೀರು ಕೊಯ್ಲು:** ಇಳಿಜಾರು ಕೃಷಿ ಭೂಮಿಗಳಲ್ಲಿ ಮಳೆಯಿಂದ ಬಿದ್ದ ನೀರನ್ನು ಇಂಗು ಗುಂಡಿಗಳ ಮೂಲಕ ಸಂಗ್ರಹ ಮಾಡಿ ಉಪಯೋಗಿಸಿಕೊಳ್ಳಬಹುದು. ಕಟ್ಟಡಗಳ ಮೇಲ್ಚಾವಣಿ, ಹಸಿರು ಮನೆ ಮೇಲೆ ಬಿದ್ದ ಮಳೆ ನೀರು ಸಂಗ್ರಹಣೆಗೆ ವ್ಯವಸ್ಥೆ ರೂಪಿಸಿಕೊಳ್ಳಬೇಕು. ಕೊಳವೆ ಬಾವಿಗಳಿಗೆ ಅಂತರ್ಜಲ ಮರು ಪೂರಣ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ಅಂತರ್ಜಲ ಮಟ್ಟ ಏರಿಸಲು ಸಾಧ್ಯವಾಗುತ್ತದೆ. ಪ್ರಾ.ಕೃ.ಪ.ಸ. ಸಂಘಗಳು ರೈತರಿಗೆ ಕೃಷಿ, ತೋಟಗಾರಿಕೆ, ಗಣಿ ಭೂ ವಿಜ್ಞಾನ (ಅಂತರ್ಜಲ) ಇಲಾಖೆಗಳ ಸಹಯೋಗದೊಂದಿಗೆ ರೈತರಿಗೆ ಮಾಹಿತಿ, ತಂತ್ರಜ್ಞಾನ ಒದಗಿಸಲು ಸಹಕಾರ ತತ್ವ 'ಸಾಮಾಜಿಕ ಕಳಕಳಿ' ಅಂಗವಾಗಿ ಆರ್ಥಿಕ ನೆರವನ್ನೂ ಒದಗಿಸಬಹುದಾಗಿದೆ. ಜಲಾನಯ ಆಶ್ರಿತ **ನೀರಾವರಿ:** ಜಲಾಶಯ ಆರ್ಶಿತ ಜಲಾನಯನ ಪ್ರದೇಶಗಳಲ್ಲಿ (Command Area Development Agency-CADA) ನೀರಾವರಿ ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಹಕಾರ ಸಂಘಗಳಿಗೆ ಶಾಸನಬದ್ಧ ನೀರಾವರಿ ನಿರ್ವಹಣೆಯ ಜವಾಬ್ದಾರಿಯನ್ನು ಪೂರ್ಣ ಪ್ರಮಾಣದಲ್ಲಿ ವಹಿಸಲಾಗಿಲ್ಲ. ಈ ಪ್ರಜಾಸತ್ತಾತ್ಮಕ ನೀರಾವರಿ ಯ ಸದ್ಬಳಕೆ ಬಗ್ಗೆ ಪೂರ್ಣ ಜ್ಞಾನ ಹೊಂದಿ ಪೂರ್ಣ ನಿರ್ವಹಣೆಯನ್ನು ಅವುಗಳೇ ವಹಿಸಿಕೊಂಡಲ್ಲಿ ನೀರು ಪೋಲಾಗದಂತೆ, ಅತಿ ನೀರಾವರಿಯಿಂದ ಮಣ್ಣಿನ ಸವಕಳಿ, ಮಣ್ಣಿನ ಅನಾರೋಗ್ಯ ಪರಿಸ್ಥಿತಿ ನಿರ್ಮಾಣವಾಗ ದಂತೆ ನಿರ್ವಹಿಸಬಹುದಾಗಿದೆ. ಹಾಲಿ ಸರ್ಕಾರದ ಅನುದಾನವನ್ನು ಅವಲಂಭಿಸಿ ನಿರ್ವಹಿಸುವಂತಾಗಿದೆ. ಅವುಗಳದೇ ಆದ ಸಂಪನ್ಮೂಲಕ್ಕೆ ಅವಕಾಶವಿರುವುದಿಲ್ಲ.

ಸರ್ಕಾರದ ಸೆಸ್ ನಲ್ಲಿ ಇದಕ್ಕೆ ಭಾಗ ವಿರುವುದಿಲ್ಲ. ನೀರಾವರಿ ಕಾಯ್ದೆಯಲ್ಲಿ ಅವಕಾಶವಿದ್ದರೂ ಅವುಗಳ ಶೃಂಗ ವ್ಯವಸ್ಥೆ ನಿರ್ಮಾಣವಾಗಿಲ್ಲ. ಈ ಲೋಪದೋಷಗಳ ನಿವಾರಣೆಯಿಂದ ಈ ಸಹಕಾರ ಸಂಘಗಳು ಸಶಕ್ತತೆಯಿಂದ ಕಾರ್ಯ ನಿರ್ವಹಿಸಿ ಆಹಾರದ ಉತ್ಪಾದನೆ ಇಳುವರಿ ಹೆಚ್ಚಿಸುವಲ್ಲಿ ತನ್ನದೇ ಕೊಡುಗೆ ನೀಡಬಲ್ಲದು. ಕಿರು ನೀರಾವರಿ ಸೌಲಭ್ಯಗಳಿಗೂ ಈ ಹಿಂದೆ ನೀರಾವರಿ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿತ್ತು. ಕಾರ್ಯನಿರ್ವಹಿಸದೆ ಸಮಾಪನೆ ಮಾಡಿ

ರದ್ದುಗೊಳಿಸಲಾಯಿತು. ಸಹಕಾರ ಸಂಘಗಳ ಸ್ಥಾಪನೆ ಬಗ್ಗೆ ಸ್ಥಳೀಯ ಯುವ ಮುಖಂಡರು ನಾಯಕತ್ವ ವಹಿಸಿಕೊಂಡು ಚಾಲನೆ ನೀಡಿದರೆ ಸಹಕಾರ ಚಳುವಳಿ ಯಶಸ್ವಿಯಾಗಿ ಮುನ್ನಡೆದು ಆಹಾರ ಭದ್ರತೆಗೆ ತನ್ನದೇ ಕೊಡುಗೆ ನೀಡಬಲ್ಲದು.

**ಸೂಕ್ಷ್ಮ ನೀರಾವರಿ:** (Micro-irrigation): ಹನಿ ನಿರಾವರಿ, ಸಿಂಪಡನೆ ನೀರಾವರಿಗಳು ಅತ್ಯಂತ ಉಪಯುಕ್ತವಾದ ಸಾಧನಗಳಾಗಿವೆ. ನೀರಿನ ಸದ್ಬಳಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ. ಸಸ್ಯಕ್ಕೆ ಅಗತ್ಯತೆಯ ನೀರನ್ನು ಅಲ್ಪ ಪ್ರಮಾಣದಲ್ಲಿ ಒದಗಿಸಿ ಅದು ಪೂರ್ಣಪ್ರಮಾಣದಲ್ಲಿ ನಿರಂತರವಾಗಿ ಸಸ್ಯಕ್ಕೆ ಒದಗಿಸುವ ಅನು ಕೂಲ ಇದರಲ್ಲಿದೆ. ಇದರಿಂದ ಅಂತರ್ಜಲ ಆಧಾರಿತವಾಗಿರುವುದರಿಂದ ಅಂತರ್ಜಲ ನ್ಯಾಯಯುತ ಉಪಯೋಗ ಪಡೆದಂತಾಗುತ್ತದೆ. ಪ್ರಾ. ಕೃ.ಪ.ಸ.ಸಂಘಗಳು ಈ ಪರಿಕರಗಳ ಸರಬರಾಜು ಕೃಷಿ, ತೋಟಗಾರಿಕೆ ಇಲಾಖೆಗಳೊಂದಿಗೆ, ಸಹಯೋಗದೊಂದಿಗೆ ಈ ರೂಢಿ ಪದ್ಧತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಜಾರಿಗೆ ತರಬೇಕು. ಈ ಪದ್ಧತಿ ಅಳವಡಿಕೆ, ಪರಿಕರಗಳಿಗೆ ಮಧ್ಯಮಾವಧಿ ಸಾಲಗಳನ್ನು ಒದಗಿಸಬೇಕು (ಹೂಡಿಕೆ ಸಾಲ). ಸರ್ಕಾರದ ಸಬ್ಸಿಡಿ ಯೋಜನೆಗಳ ಸದ್ಬಳಕೆಯಾಗಬೇಕು. ಇದು ಕೂಡ ಸಾಕಷ್ಟು ಆಹಾರ ಉತ್ಪಾದನೆ ಹೆಚ್ಚಳದಲ್ಲಿ ತನ್ನದೇ ಕೊಡುಗೆ ನೀಡಬಲ್ಲದು. **ವಿಧ್ಯುಚಕ್ತಿ ಸರಬರಾಜು:** ವಿದ್ಯುಚ್ಛಕ್ತಿ ಇಲ್ಲದೇ ನೀರಿನ ಸರಬರಾಜು ಮಾಡಲಾಗುವುದಿಲ್ಲ. ಅಗತ್ಯ ಶಕ್ತಿಯುತ ನಿರಂತರ ವಿದ್ಯುಚ್ಛಕ್ತಿ ಸರಬರಾಜು ಕೃಷಿಗೆ ಅತ್ಯಂತ ಅವಶ್ಯಕ. ಇದಕ್ಕೆ ಸರ್ಕಾರವನ್ನೇ ಅವಲಂಭಿ ಸಬೇಕಾಗಿದೆ. ಆದರೆ 'ಸಹಕಾರ'ವೂ ಇದನ್ನು ನಿರ್ವಹಿಸಬಲ್ಲದು ಎಂಬುದಕ್ಕೆ 'ಹುಕ್ಕೇರಿ ತಾಲ್ಲೂಕು ವಿದ್ಯುಚ್ಛಕ್ತಿ ಸರಬರಾಜು ಸಹಕಾರ ಸಂಘ'ದ ಕಾರ್ಯಾಚರಣೆ ಉದಾಹರಣೆಯಾಗಿದೆ. ಸಹಕಾರ ಸಂಘಗಳು, ಅದರಲ್ಲಿನ ಸಹಕಾರ ನಾಯಕತ್ವ ಈ ದಿಸೆಯಲ್ಲಿ ಕಾರ್ಯನಿರ್ವಹಿಸಿದಾಗ ತಮ್ಮ ಅಗತ್ಯತೆಯನ್ನು ತಾವೇ ನಿರ್ವಹಿಸಿ ರಾಷ್ಟ್ರ ನಿರ್ಮಾಣದಲ್ಲಿ 'ಆಹಾರ ಭದ್ರತೆ' ಸಾಧಿಸುವಲ್ಲಿ ಸಾಧ್ಯವಾಗುತ್ತದೆ.

**ಜೀವ ವೈವಿಧ್ಯತೆ:** ಮಲೆನಾಡು ನಿತ್ಯ ಹರಿದ್ವರ್ಣ ಅರಣ್ಯದಿಂದ ಆವರಿಸಿದೆ. ಬಯಲು ಪ್ರದೇಶಗಳಲ್ಲಿ ನೆಡು ತೋಪು, ಗೋಮಾಳ, ಬೀಡು ಭೂಮಿ ಹೀಗೆ ಜೈವ ವಿವಿಧ್ಯತೆಯ ಪ್ರದೇಶಗಳು ಪಶು ಪಕ್ಷಿಗಳಿಗೆ ಆಶ್ರಯ ನೀಡುವುದಲ್ಲದೆ ಮುಂಗಾರು– ಹಿಂಗಾರು ಸಕಾಲದಲ್ಲಿ ಮಳೆ ತರುವ ಆಶ್ರಯ ತಾಣಗಳಾಗಿದ್ದವು. ಜನಸಂಖ್ಯೆ ಸ್ಪೋಟ, ಮಾನವನ ಅಗತ್ಯತೆಗೆ ತಕ್ಕಂತೆ ಅಥವಾ ಅವನ ಅತಿ ಆಶಯದಿಂದ ಇದು ಪೂರ್ಣ ನಾಶಗೊಂಡಿದೆ. ನಾಶಗೊಳ್ಳುತ್ತಿದೆ. ಇದನ್ನು ಕಾಪಾಡದಿರುವುದರಿಂದ ಸಹಜ ಕೃಷಿಗೆ ಧಕ್ಕೆ ಬಂದಿದೆ. ಇದರ ಪುನರ ನಿರ್ಮಾಣ ಈ ದಿನದ ಅವಶ್ಯಕತೆ. ಈ ದಿಸೆಯಲ್ಲಿ ಸಹಕಾರ ಸಂಘಗಳು ಆಲೋಚಿಸಿ ಕ್ರಮ ಕೈಗೊಳ್ಳಬೇಕು. ತಮ್ಮ ಖಾಲಿ ನಿವೇಶನ, ಮತ್ತು ಎಲ್ಲ ಸಾಧ್ಯವೋ ಅಲ್ಲಿ ಸ್ಥಳೀಯ ವಾಯುಗುಣಕ್ಕೆ ತಕ್ಕ ಮರ ಬೆಳೆಸುವ ಕಾರ್ಯಕ್ರಮವನ್ನು ತ್ವರಿತವಾಗಿ ಹಾಕಿಕೊಳ್ಳಬೇಕು. ಎನ್‌ಡಿಡಿಬಿ ಆಶ್ರಯದಲ್ಲಿ ದಶಕಗಳ ಹಿಂದೆ 'ಮರ ಬೆಳಸುವವರ ಸಹಕಾರ ಸಂಘಗಳು ಮತ್ತು ಅದರ ಮಹಾಮಂಡಳ' ವನ್ನು ಸ್ಥಾಪಿಸಲಾಗಿತ್ತು. (ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ) ಮಹಾಮಂಡಳ ಸಮಾಪನೆಯಾಗಿದೆ ಎಂದು ತಿಳಿದು ಬಂತು. ಪ್ರಾಥಮಿಕ ಸಂಘಗಳ ಉಸ್ತುವಾರಿಗೆ 'ಟ್ರಸ್ಟ್' ರಚಿಸಲಾಗಿದೆ ಎಂಬ ಮಾಹಿತಿ ಇದೆ. ಇದರ ಬಗ್ಗೆ ಅಧ್ಯಯನ ಕೈಗೊಂಡು ಈ ಪ್ರಯತ್ನಗಳಿಗೆ ಪುನಶ್ಚೇತನ ನೀಡಬಹುದೇ? ನೀಡಿದಲ್ಲಿ ಜೈವವೈವಿಧ್ಯತೆ ಹವಾಮಾನ ವೈಪರೀತ್ಯತೆಗಳನ್ನು ಕಡಿಮೆ ಮಾಡುವುದಲ್ಲದೇ ಮಣ್ಣಿನ ಸವಕಳಿ, ಫಲವತ್ತತೆ, ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುತ್ತದೆ. ಅಂತರ್ಜಲ ಮಟ್ಟವನ್ನು ಏರಿಸುತ್ತದೆ. ಇದರಿಂದ, ಆಹಾರ ಭದ್ರತೆ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಭಾರತವು ಹಸಿವು ಸೂಚ್ಯಾಂಕದಲ್ಲಿ ಅತಿ ಕೆಳಗಿರುವುದನ್ನು ಉನ್ನತ ಸ್ಥಾನಕ್ಕೆ ಕೊಂಡಯ್ದು, ವಿಶ್ವಕ್ಕೆ ನಾಯಕ ಎನಿಸಿಕೊಳ್ಳುತ್ತಿರುವ, ಐದನೇ ಆರ್ಥಿಕ ಶಕ್ತಿಯಿಂದ ಮೂರನೇ ಸ್ಥಾನ ಗಳಿಸಲು ಯತ್ನಿಸುತ್ತಿರುವ ಈ ಸಂದರ್ಭದಲ್ಲಿ, ಭಾರತವು ಈ ವಿಷಯದಲ್ಲಿ ನಾಚಿಸುವ ಸಂದರ್ಭ ಮೂಡದಂತೆ ನೋಡಿಕೊಳ್ಳುವುದು ಭಾರತದ ಪ್ರತಿ ಪ್ರಜೆಯ ಕರ್ತವ್ಯವಾಗಿರುತ್ತದೆ. ಸಹಕಾರ ಚಳುವಳಿಯ ಜವಾಬ್ದಾರಿ ಕೂಡ ಆಗಿರುತ್ತದೆ.

ರಾಗಿ ಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ ।

ಕಾಗೆ ಕದ್ದುಣುವ ಭಕ್ಷವು ಕಂಡು ಕುರುಬೆ? "॥

ನೀಗುವುದು ಹಸಿವನ್ ಉಣಿ ಸೆಂತಪ್ಪುದಾದೊಡಂ ।

ಬಾಗಿಸದಿ ರಾತ್ಮನು – ಮಂಕುತಿಮ್ಮ ॥

****************************************************************************************************

# 16. ಸಹಕಾರ ಚಳುವಳಿಯ ಅವಶ್ಯಕತೆ : ಅತ್ಯುತ್ತಮ ವ್ಯವಸ್ಥಾಪನಾ ರೂಢಿಗಳು ಮತ್ತು ವೃತಿಪರತೆ

ಚುನಾಯಿತ ಆಡಳಿತ ಮಂಡಳಿ ಸಹಕಾರ ಸಂಘದ ವ್ಯವಸ್ಥಾಪನೆಯ ಜವಾಬ್ದಾರಿಯ ನೊಗ ಹೊತ್ತವರು. ಅವರ ನಡವಳಿಕೆ ಸಂಘದ ಪ್ರಗತಿಗೆ ಯಶಸ್ಸಿಗೆ ಕಾರಣವಾಗುತ್ತದೆ. ಅವರು ತೆಗೆದುಕೊಳ್ಳುವ ನಿರ್ಧಾರಗಳು ಸಂಘದ ಕಾರ್ಯಾಚರಣೆಯ ಮೇಲ ಸಕಾರಾತ್ಮಕ ಅಥವಾ ನಕಾರಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ.

ಭಾರತದ ಆರ್ಥಿಕತೆ ಕ್ಷಿಪ್ರಗತಿಯಲ್ಲಿ ಬದಲಾವಣೆಯಾಗುತ್ತಿದೆ. ಒಂದು ಸಮೀಕ್ಷೆಯ ಪ್ರಕಾರ 2000ದ ಇಸವಿಯಲ್ಲಿ ಭಾರತದ ಶೇಕಡಾ 01ರಷ್ಟು ಜನರಲ್ಲಿದ್ದ ಸಂಪತ್ತಿನ ಪ್ರಮಾಣ ಶೇಕಡಾ 26 ಜನಸಂಖ್ಯೆ ಹೊಂದಿದ್ದ ಪ್ರಮಾಣದಷ್ಟಿತ್ತು. 2017ಕ್ಕೆ ಈ ಪ್ರಮಾಣ ಶೇಕಡಾ 58.4 ಜನ ಸಂಖ್ಯೆ ಹೊಂದಿರುವ ಪ್ರಮಾಣ ದಷ್ಟಾಗಿದೆ. ಭಾರತದ ನೂರು ಮಂದಿ ಹೊಂದಿರುವ ಸಂಪತ್ತು ಶೇಕಡ 69.70 ಜನಸಂಖ್ಯೆ ಹೊಂದಿರುವ ಸಿರಿ ಸಂಪತ್ತಿಗೆ ಸರಿಸಮನಾಗಿದೆ. ನಮ್ಮ ಜನಸಂಖ್ಯೆಯ ತಳಭಾಗದ ಶೇಕಡ 10 ಬಡತನರೇಖೆಗಿಂತ ಕಡಿಮೆ ಇರುವ ನಿರ್ಗತಿಕ ಸಮಾಜ, ಖಾಸಗೀಕರಣ, ಉದಾರೀಕರಣದ ಪರಿಣಾಮ ಸಿರಿಸಂಪತ್ತು ಸಿರಿವಂತರಿಗೆ ಹರಿಯುತ್ತಿರುವುದು ನಿಚ್ಚಳವಾಗಿ ಕಂಡುಬರುತ್ತಿದೆ. ಭಾರತದ ಸಂವಿಧಾನದ ಆಶಯ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಈಡೇರಿಸುವುದಾದರೂ ಹೇಗೆ? ನಮ್ಮ ಸಹಕಾರಿ ಚಳವಳಿ ಮಾತ್ರ ಇದಕ್ಕೆ ಉತ್ತರವಾಗಬಲ್ಲದಲ್ಲವೇ?

ಒಟ್ಟಾರೆ ಆರ್ಥಿಕತೆಯಲ್ಲಿ ನಮ್ಮ ಸಹಕಾರ ರಂಗದ ಪಾಲು ಎಷ್ಟಿದೆ? ನಾವು ಏನನ್ನು ಎಷ್ಟನ್ನು ಸಾಧಿಸಬೇಕಾಗಿದೆಯೋ ಅಷ್ಟನ್ನು ಸಾಧಿಸಿದ್ದೇವೆಯೇ? ಆರ್ಥಿಕ, ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಿರುವುದು ಸಹಕಾರ ಚಳವಳಿಯಿಂದ ಮಾತ್ರ ಅಲ್ಲವೇ? ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯಗಳ ನಡುವೆ ಸುವರ್ಣಮಾರ್ಗ ಸಹಕಾರ ಮಾರ್ಗ ಅಲ್ಲವೇ? ರಸಗೊಬ್ಬರ ಉತ್ಪಾದನೆ ಮತ್ತು ವಿತರಣಾ ವಲಯದಲ್ಲಿ ಒಟ್ಟಾರೆ ಶೇಕಡಾ 80ರಷ್ಟಿರುವುದು ಸಮಾಧಾನಕರ ವಿಷಯವಾದರೆ, ಇತರೆ ವಲಯಗಳಲ್ಲಿ ಶೇಕಡಾ 20ರ ಆಚೆ ಈಚೆ ಇರುವುದು ಕೆಳಮಧ್ಯಮಸ್ತರದ ಜನತೆಗೆ ಇನ್ನೂ ಈ ಕ್ಷೇತ್ರದ ಬಗ್ಗೆ ಅರಿವು ಮೂಡದೇ ಇರುವುದು, ಅನೇಕ ವಲಯಗಳಲ್ಲಿ ಖಾಸಗಿ ವಲಯದ ಪೈಪೋಟಿ ಎದುರಿಸಲು ಸಾಧ್ಯವಾಗದೇ ಇರುವುದು ಖೇದಕರ ಸಂಗತಿಯಾಗಿದೆ. ಸಹಕಾರಿಗಳು ಆತ್ಮವಿಶ್ಲೇಷಣೆ ಮಾಡಿಕೊಳ್ಳುವುದಕ್ಕೆ ಇದು ಸಕಾಲ.

ಸಹಕಾರ ರಂಗ ಸಾಕಷ್ಟು ಏರುಗತಿಯಲ್ಲಿ ಸಾಧನೆಮಾಡಿದ್ದರೂ ಪ್ರಗತಿ ಪಾಲಿನಲ್ಲಿ ನಮ್ಮ ಪಾಲು ಹೆಚ್ಚಳಗೊಳ್ಳಲು ಮತ್ತು ಅದರಿಂದ ಆರ್ಥಿಕ, ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗಲು ಈ ಸ್ಪರ್ಧಾತ್ಮಕ ಯುಗದಲ್ಲಿ ನಾವು ಯಶಸ್ವಿಯಾಗಲು ಸಾಧ್ಯವಾಗದೇ ಇರುವುದನ್ನು ಒಪ್ಪಲೇಬೇಕಾಗಿದೆ. 97ನೇ ಸಂವಿಧಾನ ತಿದ್ದುಪಡಿಯ ಆಶಯವು ಸಹಕಾರ ಚಳವಳಿಗೆ ಇಂಬುಗೊಡುವುದೇ ಆಗಿದೆ. ಅದರಂತೆ ರಾಜ್ಯ ಸಹಕಾರ ಕಾಯ್ದೆ ಕಾನೂನುಗಳು ಕೂಡ ತಿದ್ದುಪಡಿಯಾಗಿವೆ. ಈ ಪರಿಸರದಲ್ಲಿ ಪ್ರಜಾಸತ್ತಾತ್ಮಕ ಹತೋಟಿಯಿಂದ ಕಾರ್ಯವೆಸಗಬೇಕಾದ ಸಹಕಾರ ಸಂಸ್ಥೆಗಳಲ್ಲಿ ನಾಯಕತ್ವದ ಪಾತ್ರ

ಬಹುಮುಖ್ಯವಾಗುತ್ತದೆ. ನಾಯಕತ್ವವನ್ನು ಕುರಿತಂತೆ ಈ ದಿನಗಳ ಅನೇಕ ಸವಾಲುಗಳನ್ನು ಎದುರಿಸಬೇಕಾದ ಪರಿಸರದಲ್ಲಿ ನಾವಿದ್ದೇವೆ. ಈ ಸವಾಲುಗಳನ್ನು ಎದುರಿಸಿ ಸದಸ್ಯರ ಹಿತ ಕಾಯುವ, ಅವರ ಆಸೆ, ಆಕಾಂಕ್ಷೆ ಅವಶ್ಯಕತೆಗಳನ್ನು ಈಡೇರಿಸುವ ಬದ್ಧತೆ ಉಳ್ಳ ನಾಯಕತ್ವ ಇಂದು ಅಗತ್ಯವಿದೆ. ಸ್ವಹಿತಾಸಕ್ತಿ ರಹಿತ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಇಲ್ಲದಂತೆ ಪ್ರಾಮಾಣಿಕ ಯುವ ನಾಯಕತ್ವ ಮಾತ್ರ ಸಹಕಾರ ಚಳವಳಿ ಮೂಲಕ ಆರ್ಥಿಕ, ಸಾಮಾಜಿಕ ನ್ಯಾಯ ಒದಗಿಸಬಲ್ಲದು. ಈ ನಾಯಕತ್ವವು ವೃತ್ತಿಪರ ಮತ್ತು ಅತ್ಯುತ್ತಮ ವ್ಯವಸ್ಥಾಪನಾ ಸೂತ್ರಗಳನ್ನು ಅಳವಡಿಸಿಕೊಂಡು ಕ್ಷೇತ್ರವನ್ನು ಮುನ್ನಡೆಸಿದಾಗ ಮಾತ್ರ ಸಾಧ್ಯವಾಗುತ್ತದೆ.

ವೃತ್ತಿಪರತೆ ಎಂದರೇನು? ಯಾರು ವೃತ್ತಿಪರರು? ಎಂಬ ಪ್ರಶ್ನೆಗಳು ಉದ್ಭವವಾಗುವುದು ಸಹಜ. ವೃತ್ತಿಪರತೆ ಎಂದರೆ ನಮ್ಮ ಸಹಕಾರ ಸಂಘ ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟ ಅರಿವು ನಮ್ಮ ಸಂಘದ ಉಪನಿಯಮಗಳನ್ನು ನಾವು ತಿಳಿದಿದ್ದೇವೆಯೇ? ಉಪನಿಯಮಗಳಲ್ಲಿ ಸ್ಪಷ್ಟಪಡಿಸಿದ ಉದ್ದೇಶಗಳ ಸಾಧನೆಗೆ ನಾವು ಅನುಸರಿಸುತ್ತಿರುವ ಮಾರ್ಗ ಸರಿಯಾಗಿದೆಯೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ. ಇಲ್ಲಿನ ಅವಶ್ಯಕತೆ, ಸಂಘ ಸ್ಥಾಪಿತವಾದ ಉದ್ದೇಶದ ಬಗ್ಗೆ ಎಷ್ಟರ ಮಟ್ಟಿನ ಜ್ಞಾನ ನಮಗಿದೆ? ಆ ಜ್ಞಾನವನ್ನು ನಾವು ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದೇವೆ? ಎಂಬ ಪ್ರಶ್ನೆಗಳು ನಾವು ಎಷ್ಟು ವೃತ್ತಿಪರರು ಎಂಬುದನ್ನು ತಿಳಿಸುತ್ತದೆ. ವೃತ್ತಿಪರತೆ ಸಂಘವನ್ನು ನಡೆಸುತ್ತಿರುವ ಭಾಗೀದಾರರದ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಎಲ್ಲರೂ ಮೈಗೂಡಿಸಿಕೊಂಡಾಗ ಮಾತ್ರ ಯಶಸ್ವಿಯಾಗಿ ಸಹಕಾರ ಸಂಘ ನಡೆಸಬಹುದು.

ಸಹಕಾರ ಸಂಘದ ಸದಸ್ಯರು ಪ್ರಮುಖ ಭಾಗೀದಾರರು. ಸಹಕಾರ ಸಂಘದ ವೈಶಿಷ್ಟ್ಯ, ಅವರೇ ಸಂಸ್ಥೆಯ ಯಜಮಾನರು ಮತ್ತು ಅವರೇ ಗ್ರಾಹಕರು. ಅಥವಾ ಅವರೇ ಫಲಾನುಭವಿಗಳು ಈ ಸಹಕಾರ ಸಂಘ 'ನಮ್ಮದು' ಎಂಬ ಭಾವನೆ ಅಂತರ್ಗತವಾಗಬೇಕು. ಇಲ್ಲಿ 'ಸ್ವಯಂ' ಸದಸ್ಯತ್ವ ತತ್ವ ಬಹುಮುಖ್ಯ ಸಂಘದ ಸೇವ ಸೌಲಭ್ಯಗಳನ್ನು ನಮ್ಮ ಸಂಘದಿಂದಲೇ ಪಡೆಯುತ್ತೇನೆ ಎಂಬ ಉತ್ಕಟ ಹಂಬಲವಿರಬೇಕು. ಸಂಘದಲ್ಲಿನ ಅವರ ಹೆಚ್ಚಿನ ಪಾಲ್ಗೊಳ್ಳುವಿಕೆಯಿಂದ ಮಾತ್ರ ಸಂಘದ ವ್ಯವಹಾರ ಹೆಚ್ಚಳವಾಗುತ್ತದೆ ಎಂಬ ಪರಿಜ್ಞಾನ ಅತ್ಯಂತ ಪ್ರಮುಖವಾಗುತ್ತದೆ. ಸದಸ್ಯರ ಪಾತ್ರ ಅಷ್ಟಕ್ಕೆ ಸೀಮಿತವಾಗದೇ ಸಂಘದ ವೃತ್ತಿಗೆ ಸಂಬಂಧಿಸಿದ 'ವಸ್ತು' ಬಗ್ಗೆ ಸಂಪೂರ್ಣ ಗ್ರಹಿಕೆ ಇರಬೇಕಾಗುತ್ತದೆ.

**ಉದಾಹರಣೆಗೆ :** ಸಹಕಾರ ಸಕ್ಕರೆ ಕಾರ್ಖಾನೆಯ ಸದಸ್ಯ ತಾನು ಯಾವ ವಿಧದ ಕಬ್ಬು ಬೆಳೆಯಬೇಕು? ಅದಕ್ಕೆ ಬೆಳೆಯುವಾಗ ಯಾವ ಕೃಷಿ ಪದ್ಧತಿ ಅನುಸರಿಸಬೇಕು (ಗೊಬ್ಬರ, ಔಷಧೋಪಚಾರ, ನೀರು) ಎಲ್ಲದರ ಜ್ಞಾನದ ಜೊತೆಗೆ ಪಾಲನೆಯ ಕೌಶಲವಿರತಕ್ಕದ್ದು, ಕಠಾವಿನ ಸಮಯ ಸರಬರಾಜು ಇನ್ನಿತರೆ ಸಂಬಂಧಿಸಿದ ಅಂಶಗಳು. ಹೈನುಗಾರಿಕೆಗೆ ಸಂಬಂಧಿಸಿದಂತೆ ಹಸು, ಎಮ್ಮೆ ಪಾಲನೆ ಪೋಷಣೆ ವೈದ್ಯಕೀಯ ಸೌಲಭ್ಯಗಳು, ಪತ್ತಿನ ಸಹಕಾರ ಸಂಘದಲ್ಲಿ ತನ್ನ ಠೇವಣಾತಿಗಳ ಬಗ್ಗೆ, ವೆಚ್ಚಗಳ ಬಗ್ಗೆ, ಗಳಿಕೆಗಳ ಬಗ್ಗೆ ಅರಿವಿದ್ದಾಗ ಮತ್ತು ಸಂಸ್ಥೆಯು ಸದಸ್ಯ, ಶಿಕ್ಷಣ, ತರಬೇತಿ, ಪ್ರಚಾರ ವಿಸ್ತರಣಾ ಕಾರ್ಯಗಳನ್ನು ಕೈಗೊಂಡಾಗ ಸದಸ್ಯರು ವೃತ್ತಿಪರತೆಯನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಸದಸ್ಯರು ವೃತ್ತಿಪರರಾದಲ್ಲಿ ಸಂಘದ ಸಂಪನ್ಮೂಲ ಸಂಗ್ರಹಣೆಯಲ್ಲಿ ನ್ಯಾಯಯುತ ವೆಚ್ಚ ಸಹಿತ ಸಂಪನ್ಮೂಲ ರೂಢಿಗೊಳಿಸಿಕೊಳ್ಳಲು ಯಶಸ್ವಿಯಾಗುತ್ತದೆ. ಸಂಘವು ನ್ಯಾಯಯುತ ವೆಚ್ಚ ಸಂಪನ್ಮೂಲ ಸಂಗ್ರಹಣೆಯಲ್ಲಿ ಯಶಸ್ವಿಯಾದಲ್ಲಿ ಮುಂದಿನ ಜವಾಬ್ದಾರಿ ಸದಸ್ಯರು ಸಂಘದ ವ್ಯವಸ್ಥಾಪನೆಗಾಗಿ ತಾವು ಚುನಾಯಿಸಿ ಕಳುಹಿಸಿರುವ ಆಡಳಿತ ಮಂಡಳಿಯದ್ದಾಗುತ್ತದೆ. ಸದಸ್ಯರು ಆಡಳಿತ ಮಂಡಳಿ ಸದಸ್ಯರ (ನಿರ್ದೇಶಕರ) ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಉತ್ತಮ ನಾಯಕರನ್ನು ಆರಿಸುವುದು ತಮ್ಮ ಜವಾಬ್ದಾರಿಯಾಗುತ್ತದೆ.

ಚುನಾಯಿತ ಆಡಳಿತ ಮಂಡಳಿ ಸಹಕಾರ ಸಂಘದ ವ್ಯವಸ್ಥಾಪನೆಯ ಜವಾಬ್ದಾರಿಯ ನೊಗ ಹೊತ್ತವರು.

ಅವರ ನಡವಳಿಕೆ ಸಂಘದ ಪ್ರಗತಿಗೆ ಯಶಸ್ಸಿಗೆ ಕಾರಣವಾಗುತ್ತದೆ. ಅವರು ತೆಗೆದುಕೊಳ್ಳುವ ನಿರ್ಧಾರಗಳು ಸಂಘದ ಕಾರ್ಯಾಚರಣೆಯ ಮೇಲೆ ಸಕಾರಾತ್ಮಕ ಅಥವಾ ನಕಾರಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ. ನಿರ್ದೇಶಕರು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಆಡಳಿತ ಮಂಡಳಿ ತಾವು ಏನು ಮಾಡಬೇಕು, ಏನು ಮಾಡಬಾರದು ಎಂಬುದರ ಬಗ್ಗೆ ಸ್ಪಷ್ಟ ಅರಿವನ್ನು ಹೊಂದಿರಬೇಕು. ನಿರ್ದೇಶಕರಾಗಿ ಸಂಘದ ವ್ಯವಸ್ಥಾಪನೆಯಲ್ಲಿ ತಮ್ಮ ಪಾತ್ರವೇನು ಎಂಬುದರ ಬಗ್ಗೆ ತಿಳಿದಿರಬೇಕು. ಆಡಳಿತ ಮಂಡಳಿ ಕರ್ತವ್ಯಗಳನ್ನು ಈ ಕೆಳಕಂಡಂತೆ ಅಧ್ಯಯನ ಉದ್ದೇಶದಿಂದ ವಿಂಗಡಿಸಬಹುದಾಗಿದೆ.

1. ವ್ಯವಸ್ಥಾಪನೆ ಮತ್ತು ಆಡಳಿತಾತ್ಮಕ ಕರ್ತವ್ಯಗಳು.

2. ಸಂಪನ್ಮೂಲಗಳ ಕ್ರೋಢೀಕರಣ (ಉತ್ಪಾದನಾ ಸಹಕಾರ ಸಂಘಗಳಲ್ಲಿ ಕಚ್ಚಾವಸ್ತುಗಳ ಸಂಗ್ರಹಣೆ ಸಂಸ್ಕರಣೆ) ಹೂಡಿಕೆ ಸಾಲ ನೀಡಿಕೆ ಸಂಘದ ಚಟುವಟಿಕೆಗನುಸಾರ ವಿವಿಧ ಪ್ರಕ್ರಿಯೆಗಳು

3. ಮೇಲ್ವಿಚಾರಣೆ, ಕಾರ್ಯಾಚರಣೆ, ಲಾಭದಾಯಕವಾಗಿ ನಡೆಯುತ್ತಿದೆಯೇ? ಇಲ್ಲದಿದ್ದಲ್ಲಿ ಅಗತ್ಯ ಚಿಕಿತ್ಸಾ ಕ್ರಮಗಳು.

4. ಅಭಿವೃದ್ಧಿ ಮತ್ತು ಪ್ರಗತಿ (ಬೆಳವಣಿಗೆ) ಸುಧಾರಣೆ ಕ್ರಮಗಳು. ಈ ಜವಾಬ್ದಾರಿಗಳನ್ನು ಹೊತ್ತ ಆಡಳಿತ ಮಂಡಳಿ ಸದಸ್ಯರ ಹಿತಾಸಕ್ತಿ ಕಾಪಾಡಲು ಕೆಲವೊಂದು ಶಿಸ್ತು, ನಿಯಮಗಳನ್ನು ಅಳವಡಿಸಿಕೊಳ್ಳಬೇಕಾಗಿರುವುದು ಈ ದಿನದ ಅವಶ್ಯಕತೆಯಾಗಿ ಸಹಕಾರ ಸಂಘಗಳಲ್ಲಿ ಕಂಡುಬರುತ್ತಿದೆ.

1. ನಿರ್ದೇಶಕರು ತಪ್ಪದೆ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸುವುದು.

2. ಭಾಗವಹಿಸುವ ಮುನ್ನ ಪೂರ್ವ ತಯಾರಿ ಬಹುಮುಖ್ಯ ಅಂಶ ವಿಷಯ, ಟಿಪ್ಪಣಿ ಮತ್ತು ಸ್ಪಷ್ಟಿಕರಣಗಳನ್ನು ಸಭೆಯ ಪೂರ್ವದಲ್ಲಿಯೇ ಮುಖ್ಯ ಕಾರ್ಯನಿರ್ವಾಹಕರಿಂದ ಪಡೆಯುವುದು.

3. ಸಂಘದ ಕಾರ್ಯಾಚರಣೆ ಬಗ್ಗೆ ತಾಂತ್ರಿಕ ಅಂಶಗಳ ಬಗ್ಗೆ. ಸ್ಪಷ್ಟ ನಿಖರವಾದ ವೈಜ್ಞಾನಿಕ ಅಂಶಗಳನ್ನು ಸಂಬಂಧಿಸಿದ ವ್ಯಕ್ತಿಗಳಿಂದ ಮಾಹಿತಿಯನ್ನು ಪೂರ್ವಭಾವಿಯಾಗಿ ಅರಿಯುವುದು.

4. ಸಂಘದ ಧ್ಯೆಯೋದ್ದೇಶಗಳ ಬಗ್ಗೆ ಸ್ಪಷ್ಟ ಅರಿವು, ಉಪನಿಯಮಕಾಯ್ದೆ, ಕಾನೂನುಗಳ ಬಗ್ಗೆ ಅರಿವು

5. ಹೊಸ ಚಿಂತನೆಗಳನ್ನು ಇತ್ತೀಚಿನ ಬೆಳವಣಿಗೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ತೆರೆದ ಮನಸ್ಸು

6. ಒಂದು ತಂಡವಾಗಿ ಕಾರ್ಯವೆಸಗುವ ಹುಮ್ಮಸ್ಸು

7. ಸದಸ್ಯರ ಬಗ್ಗೆ ಕಾಳಜಿ, ಅವರ ಹಿತಾಸಕ್ತಿ ಕಾಪಾಡುವ ಬದ್ಧತೆ. ಆಡಳಿತ ಮಂಡಳಿ ಸದಸ್ಯರು ತ್ಯಜಿಸಬೇಕಾಗಿರುವುದು ಅಥವಾ ಮಾಡಬಾರದಾಗಿರುವುದು.

1. ಸಂಘದ ದೈನಂದಿನ ಕೆಲಸಗಳಲ್ಲಿ ತನ್ನ ಮೂಗು ತೂರಿಸದೇ ಇರುವುದು.

2. ತಮ್ಮ ವೈಯುಕ್ತಿಕ ನಿರ್ದೇಶನಗಳು ಸಿಬ್ಬಂದಿಗಳಿಗೆ ನೇರವಾಗಿ ನೀಡುವುದು.

3. ತಮ್ಮ ಸ್ವಹಿತಾಸಕ್ತಿಯನ್ನು ಮುನ್ನೆಲೆಗೆ ತರುವುದು.

4. ಹಿತಾಸಕ್ತಿಗೆ ತಕ್ಕಂತೆ ಶಿಫಾರಸ್ಸು ಮಾಡುವುದು,

5. ತಮ್ಮ ಸ್ವಂತ ಉದ್ದೇಶಗಳ ಈಡೇರಿಕೆಗಾಗಿ ಸಂಘದ ಸವಲತ್ತುಗಳನ್ನು ಉಪಯೋಗಿಸಿ ಕೊಳ್ಳುವುದು

ಈ ಶಿಸ್ತಿನ ನಿಯಮಗಳನ್ನು ನಡವಳಿಕೆಗಳನ್ನು ರೂಢಿಸಿಕೊಂಡಲ್ಲಿ ಸಂಘದ ಸುಗಮ ಕಾರ್ಯಾಚರಣೆಗೆ

ಸಹಕಾರಿಯಾಗುತ್ತದೆ. ಆಡಳಿತ ಮಂಡಳಿಯು ಸಕಾಲಕ್ಕೆ ಸೇರಿ ಎಲ್ಲರೂ ಭಾಗವಹಿಸಿ ತನ್ನ ತೀರ್ಮಾನಗಳು ಸಂಘದ ಉದ್ದೇಶಗಳ ಪೂರೈಕೆಗೆ ಪೂರಕವಾಗಿ, ಅನುಷ್ಠಾನಗೊಳಿಸಬಲ್ಲ ಕಾಯ್ದೆ, ಕಾನೂನುಗಳಿಗೆ ಒಳಪಟ್ಟು, ಮೇಲಾಗಿ ಸಹಕಾರ ತತ್ವ ಮೌಲ್ಯಗಳಿಗನುಸಾರವಾಗಿ ಇರತಕ್ಕದ್ದು. ತೀರ್ಮಾನಗಳು ಈ ರೀತಿ ಇರಬೇಕಾದಲ್ಲಿ ಆಡಳಿತ ಮಂಡಳಿಯು ಪ್ರಚಲಿತದಲ್ಲಿರುವ ಅತ್ಯುತ್ತಮ ಆಡಳಿತ ಸೂತ್ರಗಳನ್ನು ಅನುಸರಿಸತಕ್ಕದ್ದು. ಇವುಗಳನ್ನು ಉತ್ತಮ ವ್ಯವಸ್ಥಾಪನೆಯ ಆಧಾರ ಸ್ತಂಭಗಳೆಂದು ಪರಿಗಣಿಸಲಾಗಿದೆ. ಅವುಗಳು.

1. ಪಾರದರ್ಶಕತೆ
2. ಪಾಲ್ಗೊಳ್ಳುವಿಕೆ
3. ಮುಂದಾಲೋಚನೆ (ದೂರಾಲೋಚಿಸಿ)
4. ಉತ್ತರದಾಯಿತ್ವ

ತಮ್ಮ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಇರತಕ್ಕದ್ದು. ತಮ್ಮ ನಡವಳಿಕೆಗಳು ತೆರದ ಪುಟದಂತೆ ಸದಸ್ಯರೆಲ್ಲರಿಗೂ ಸಾರ್ವಜನಿಕರಿಗೂ ತಿಳಿಯುವಂತಿರಬೇಕು. ತೀರ್ಮಾನ ತೆಗೆದುಕೊಳ್ಳುವ ಮುನ್ನ ಎಲ್ಲರನ್ನೂ (ಭಾಗೀದಾರರೆಲ್ಲರೂ) ಒಳಗೊಂಡಂತಿರಬೇಕು. ಸಲಹೆ ಸೂಚನೆಗಳಿಗೆ ತೆರೆದ ಮನಸ್ಸು, ಹೃದಯವಂತಿಕೆ ಇರಬೇಕು. ಸಲಹೆಗಳು ಅತ್ಯಂತ ಕೆಳಸ್ತರದ ನೌಕರನಿಂದ, ಒಬ್ಬ ಸಾಮಾನ್ಯ ಸದಸ್ಯನಿಂದ ಬರಬಹುದು. ಆಡಳಿತ ಮಂಡಳಿ ಸದಸ್ಯರಿಂದ ಇತ್ತೀಚಿನ ಕಾಯ್ದೆ ತಿದ್ದುಪಡಿ, ಸಂವಿಧಾನ ತಿದ್ದುಪಡಿಯಿಂದ ವೃತ್ತಿಪರ ನಿರ್ದೇಶಕರು, ಕಾರ್ಯಾನುಗುಣ ನಿರ್ದೇಶಕರನ್ನು ಆಡಳಿತ ಮಂಡಳಿಗೆ ಸಹಮತದಿಂದ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಸಂಘದ ಉದ್ದೇಶಗಳಿಗನುಗುಣವಾಗಿ ಆ ಕ್ಷೇತ್ರದ ಪರಿಣಿತರನ್ನು ನಿಯಮಿಸಿಕೊಂಡು ಅವರಿಂದ ಸಲಹೆ, ಸೂಚನೆಗಳನ್ನು, ಮಾಹಿತಿಗಳನ್ನು ಪಡೆಯುವುದು. ಯಾವುದೇ ನಿರ್ಧಾರ ತೀರ್ಮಾನ ತೆಗೆದುಕೊಳ್ಳುವ ಮುನ್ನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮ ತೀರ್ಮಾನ ತೆಗೆದುಕೊಂಡಲ್ಲಿ ಅದು ಅತ್ಯುತ್ತಮ ತೀರ್ಮಾನವಾಗಬಲ್ಲದು.

ಈ ತೀರ್ಮಾನ ತೆಗೆದುಕೊಳ್ಳುವ ಮುನ್ನ ಮುಂದಾಲೋಚನೆ ಅತಿ ಅಗತ್ಯ ತೀರ್ಮಾನದ ಅನುಷ್ಠಾನದಿಂದ ಆಗಬಹುದಾದ ಪರಿಣಾಮಗಳ ಬಗ್ಗೆ ಚಿಂತನೆ, ವಿವೇಚನೆ ಅತಿ ಅಗತ್ಯ ಸಕಾರಾತ್ಮಕ, ಲಾಭದಾಯಕವಾಗಿ ಸಂಘದ ಸದಸ್ಯರ ಹಿತ ಕಾಪಾಡುವಂತೆ ತೀರ್ಮಾನ ತೆಗೆದುಕೊಳ್ಳತಕ್ಕದ್ದು. ಆಡಳಿತ ಮಂಡಳಿ ಸದಸ್ಯರು (ನಿರ್ದೇಶಕರು) ತಾವು ಸದಸ್ಯರಿಗೆ ಆರಿಸಿ ಕಳುಹಿಸಿದ ಸದಸ್ಯರಿಗೆ ತಾವು ಹೊಣೆಗಾರರು, ಜವಾಬ್ದಾರರು ಅವರ ಹಿತಾ ಕಾಯುವುದು ತಮ್ಮ ಪ್ರಥಮ ಆದ್ಯತೆ ಎಂಬ ಅರಿವು ಸದಾ ಕಾಡುತ್ತಿರಬೇಕು. ಅದರಂತೆ ಪದಾಧಿಕಾರಿಗಳು (ಅಧ್ಯಕ್ಷರು, ಉಪಾಧ್ಯಕ್ಷರು) ತಾವು ಆಡಳಿತ ಮಂಡಳಿಗೆ ಜವಾಬ್ದಾರರು ಎಂಬ ತಿಳುವಳಿಕೆ ಹೊಂದಿರತಕ್ಕದ್ದು, ಮುಖ್ಯ ಕಾರ್ಯನಿರ್ವಾಹಕರನ್ನೂ ಒಳಗೊಂಡಂತೆ, ಅವರ ಮೇಲ್ವಿಚಾರಣೆ, ನಿಯಂತ್ರಣದಲ್ಲಿರುವ ಸಿಬ್ಬಂದಿ ವರ್ಗದವರು ಅಧ್ಯಕ್ಷರು, ಆಡಳಿತ ಮಂಡಳಿ ಮಿಗಿಲಾಗಿ ಸದಸ್ಯರುಗಳಿಗೆ ಜವಾಬ್ದಾರರಾಗಿದ್ದೇವೆ ಎಂಬ ತಿಳುವಳಿಕೆ ಹೊಂದಿರತಕ್ಕದ್ದು. ಅವರು ಮತ್ತು ಅವರ ಭಾಗಿತ್ವವಿಲ್ಲದಿದ್ದಲ್ಲಿ ತಮಗೆ ನೌಕರಿ ಇರುತ್ತಿರಲಿಲ್ಲವೆಂಬ ಭಾವನೆಯನ್ನು ಹೊಂದಿರತಕ್ಕದ್ದು. ಆಗ ಮಾತ್ರ ಸಹಕಾರ ಸಂಘ ಯಶಸ್ವಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ.

ಪ್ರಥಮತಃ ಸಂಘದ ಸದಸ್ಯರು ಸಂಘದ ಸೇವೆ ಸೌಲಭ್ಯಗಳನ್ನು ಪಡೆಯುವುದರಲ್ಲಿ ಮುಂದಾಗಿ ಸರ್ವ ಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘದಲ್ಲಿ ಸಕ್ರಿಯ ಸದಸ್ಯರು ಹೆಚ್ಚಳಗೊಳ್ಳುವುದು ಇಂದಿನ ಅವಶ್ಯಕತೆ. ಆಡಳಿತ ಮಂಡಳಿಯು ಪ್ರಜ್ಞಾವಂತರಾಗಿ ಅತ್ಯುತ್ತಮ ವ್ಯವಸ್ಥಾಪನೆಗೆ ಅವಶ್ಯ ಪರಿಸರ ನಿರ್ಮಾಣ ಮಾಡಿ ಸಂಘದ ಏಳಿಗೆಗೆ

ಶ್ರಮಿಸತಕ್ಕದ್ದು. ಸಿಬ್ಬಂದಿ ವರ್ಗ ತಮ್ಮ ಇತಿಮಿತಿಗಳನ್ನು ಅರಿತು ಸಂಘದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳತಕ್ಕದ್ದು. ಒಟ್ಟಾರೆಯಾಗಿ ಈ ಎಲ್ಲ ಭಾಗೀದಾರರು ಜ್ಞಾನ, ಕೌಶಲ್ಯಗಳನ್ನು ಹೊಂದಿ ಮಿಗಿಲಾಗಿ ತಮ್ಮ ಮನೋಚಿಂತನೆಗಳನ್ನು ಸಹಕಾರ ಸಂಘದ ಅಭಿವೃದ್ಧಿ ಪಥದೊಡನೆ ಕೊಂಡೊಯ್ಯುವ ಭಾವನೆಗಳನ್ನು ಹೊಂದಬೇಕು. ಆಗ ಮಾತ್ರ ಸಹಕಾರ ಕ್ಷೇತ್ರವು ತನ್ನ ಗಣನೀಯ ಕೊಡುಗೆಯನ್ನು ಭಾರತದ ಆರ್ಥಿಕತೆಗಾಗಿ ಕೊಡಬಹುದು. ಉಳ್ಳವರು ಮತ್ತು ಬಡವರ ಅಂತರವನ್ನು ಕುಗ್ಗಿಸಬಹುದು. ಭಾರತದ ಎಲ್ಲಾ ಪ್ರಜೆಗಳಿಗೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕಬಲ್ಲದು. ನಾವು ಸಹಕಾರಿಗಳು ಒಪ್ಪಿಕೊಂಡಿರುವ ಸಹಕಾರಿ ಮೌಲ್ಯಗಳಾದ ಸ್ವಸಹಾಯ, ಪರಸ್ಪರ ಸಹಾಯ, ಸ್ವಯಂ ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ಬಂಡವಾಳ ಮತ್ತು ಒಗ್ಗಟ್ಟು ಹೊಂದಿದ್ದಲ್ಲಿ ಯಾವುದೇ ಇತರೆ ಶಕ್ತಿಗಳು ವಿರುದ್ಧಬರಲಾಗದು ಮತ್ತು ಎಲ್ಲಾ ಸವಾಲುಗಳನ್ನು ಎದುರಿಸಿ ಚಳವಳಿ ಬಲಯುತವಾಗಬಲ್ಲದು.

**ನಿಮ್ಮ ಕನಸುಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಿ ಕನಸುಗಳು ಸತ್ತುಹೋದಲ್ಲಿ ಬದುಕು ರೆಕ್ಕೆಮುರಿದ ಹಕ್ಕಿಯಂತಾಗುತ್ತದೆ. ಆಮೇಲೆ ಹಕ್ಕಿ ಹಾರಲಾಗುವುದಿಲ್ಲ. – ಲ್ಯಾಂಗ್ಸ್ಟನ್ ಡ್ಯೂಸ್ (ಚಿಂತಕ)**

*************************************************************************************************

# 17. ಸಹಕಾರ ಚಳುವಳಿ – ಮಾಹಿತಿ ತಂತ್ರಜ್ಞಾನ ಅಳವಡಿಕೆ ಅನಿವಾರ್ಯ

ವಿಶ್ವದ ಚರಿತ್ರೆಯ ನಾಗರಿಕತೆಯ ಬೆಳವಣಿಗೆಯಲ್ಲಿ ನಾವು ಶಿಲಾಯುಗ, ಕಂಚುಯುಗ, ಕಬ್ಬಿಣಯುಗ ಎಂಬ ಹಂತಗಳನ್ನು ಗುರುತಿಸುತ್ತೇವೆ. ಈಗಿನ ಯುಗ ಜ್ಞಾನದ ಯುಗ, ವೇಗದ ಯುಗ, ಮತ್ತು ಮಾಹಿತಿ ತಂತ್ರಜ್ಞಾನದ ಯುಗ. ಮಾಹಿತಿ ತಂತ್ರಜ್ಞಾನ ಅಳವಡಿಕೆ ಇಲ್ಲದೇ ಇದ್ದಲ್ಲಿ ಆ ಕ್ಷೇತ್ರ ಅಥವಾ ವಲಯದ ಅಸ್ಥಿತ್ವವೇ ಇಲ್ಲದ ಕಾಲಘಟ್ಟದಲ್ಲಿ ನಾವಿದ್ದೇವೆ. ಇದಕ್ಕೆ 'ಸಹಕಾರ ಚಳುವಳಿ'ಯೂ ಹೊರತಾಗಿಲ್ಲ. ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಬೆಳವಣಿಗೆಗೆ ಕಾರಣವಾದ ಈ ಚಳುವಳಿ ಅಸ್ತಿತ್ವ ಕಳೆದು ಕೊಂಡಲ್ಲಿ ಅಪಮಾನತೆಯ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಸಮಾನತೆಯ ಸಮಾಜ ನಿರ್ಮಾಣವೇ 'ಪ್ರಜಾಪ್ರಭುತ್ವ' ರಾಷ್ಟ್ರದ' ಸಂವಿಧಾನ'ದ ಧ್ಯೇಯವಾಗಿರುತ್ತದೆ. ಈ ದಿಸೆಯಲ್ಲಿ ಸಹಕಾರ ಚಳುವಳಿಯು ಎಷ್ಟರ ಮಟ್ಟಿಗೆ ಮಾಹಿತಿ ತಂತ್ರಜ್ಞಾನಕ್ಕೆ ಪ್ರಾಧಾನ್ಯತೆ ನೀಡಿದೆ. ಅದನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಅದರ ಪ್ರಯೋಜನ ಪಡೆದು ಚಳುವಳಿಯ ಬೆಳವಣಿಗೆಗೆ ಕಾರಣವಾಗಿರುತ್ತದೆ ಎಂಬುದರ ಪರಮಾರ್ಶೆ ಇಂದಿನ ಅತ್ಯಂತ ಅಗತ್ಯತೆ.

ಇದು ಸ್ಪರ್ಧಾತ್ಮಕ ಯುಗಕೂಡ ಆಗಿರುತ್ತದೆ. ಸ್ಪರ್ಧೆಯಲ್ಲಿ ಯಶಸ್ವಿಯಾದವರು ಮಾತ್ರ ಉಳಿಯುತ್ತಾರೆ. ಇತರರು ಅಳಿಯುತ್ತಾರೆ. ಸ್ಪರ್ಧೆಯಲ್ಲಿ ಗೆಲ್ಲುವವರು ಇಂದಿನ ಅವಶ್ಯಕತೆಯಾದ ಮಾಹಿತಿ ತಂತ್ರಜ್ಞಾನದ ಅವಶ್ಯಕತೆ ಅದರ ಉಪಯುಕ್ತತೆ ಅರಿತವಾಗಿರುತ್ತಾರೆ. ಆದುದರಿಂದ ಅದನ್ನು ಅಳವಡಿಸಿಕೊಂಡು ತಮ್ಮ ವ್ಯವಹಾರವನ್ನು ನಡೆಸುತ್ತಿರುತ್ತಾರೆ. ಆದ್ದರಿಂದ, ಅವರು ಯಶಸ್ಸುಗಳಿಸಲು ಸಾಧ್ಯವಾಗುತ್ತದೆ. ಈ ದಿನಮಾನಗಳಲ್ಲಿ ಕೃತಕ ಬುದ್ಧಿಮತ್ತೆ (Artificial Intelligence-AI) ಉಪಯೋಗಿಸಿಕೊಂಡು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಜಾಹಿರಾತು ಮತ್ತು ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ಗ್ರಾಹಕರನ್ನು ಆಕರ್ಷಿಸಲಾಗುತ್ತಿದೆ ಮತ್ತು ನೂತನ ಮಾರುಕಟ್ಟೆಯನ್ನು ಈ 'ಕೊಳ್ಳು ಬಾಕು' ಸಂಸ್ಕೃತಿಯಲ್ಲಿ ಹುಟ್ಟು ಹಾಕಲಾಗುತ್ತಿದೆ. ಈ ಸ್ಪರ್ಧಾ ಯುಗದಲ್ಲಿ ಸಹಕಾರ ಚಳುವಳಿಯು ಈ 'ಅನುಕೂಲತೆ' 'ಕುಶಲತೆ'ಯನ್ನು ಉಪಯೋಗಿಸಿಕೊಳ್ಳದಿದ್ದಲ್ಲಿ 'ಸಹಕಾರ ಚಳುವಳಿ' ಹಿಂದೆ ಉಳಿಯುತ್ತದೆ. ಇದರಿಂದ ಆಗುವ ನಷ್ಟ ಸಮಾಜಕ್ಕೆ ಭರಿಸಲು ಇತರರಿಂದ ಸಾಧ್ಯವಿಲ್ಲ.

**ಪತ್ತು ಮತ್ತು ಬ್ಯಾಂಕಿಂಗ್ ವಲಯ:** ಭಾರತದಲ್ಲಿ 'ಪತ್ತು' ಮತ್ತು 'ಸಹಕಾರ' ಒಂದೇ ನಾಣ್ಯದ ಎರಡು ಮುಖಗಳು ಎಂಬಂತೆ ಸಹಕಾರ ಚಳುವಳಿ ಬೆಳೆದು ಬಂದಿರುವುದನ್ನು ನಾವು ಕಂಡಿರುತ್ತೇವೆ. 1960–70ರ ದಶಕದ ವರೆಗೆ ಈ ವಲಯ ಬಹಳಷ್ಟು 'ಸಹಕಾರ' ಏಕ ಸ್ವಾಮ್ಯತೆಯನ್ನು ಪಡೆದಿತ್ತು ಎಂದರೆ ತಪ್ಪಾಗಲಾರದು. ಆದರೆ ಈ ವಲಯದಲ್ಲಿ ನಮ್ಮ ಪಾಲು ಎಷ್ಟಿದೆ? ನಗಣ್ಯವೇ ಎಂಬ ಹಂತಕ್ಕೆ ತಲುಪಿದ್ದೇವೆ. (ಶೇ. 44 1990–91, ಶೇ. 16 2020–21) ಮೊತ್ತದಲ್ಲಿ ಏಕೆಯಾಗಿದ್ದರೂ, ಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ ವಾಣಿಜ್ಯ, ಖಾಸಗಿ, ಗ್ರಾಮೀಣ ಬ್ಯಾಂಕ್‌ಗಳ ಪಾಲು ಹೆಚ್ಚಿಗೆಯಾಗುತ್ತಿದ್ದು 'ಸಹಕಾರ ವಲಯ' ಸ್ಪರ್ಧೆಯಲ್ಲಿ ಹಿಂದಿದೆ ಎಂಬುದು ಕಟು ವಾಸ್ತವ. ಇದಕ್ಕೆ ಹಲವಾರು ಕಾರಣಗಳಿದ್ದರೂ ಅದರಲ್ಲಿ 'ಮಾಹಿತಿ ತಂತ್ರಜ್ಞಾನ'ದ ಅಳವಡಿಕೆ, 'ಕಂಪ್ಯೂಟರೀಕರಣ' 'ಗಣಕಯಂತ್ರ' ಅಳವಡಿಕೆಯಲ್ಲಿ ಹಿಂಜರಿಕೆಯೂ ಒಂದು ಕಾರಣವಾಗಿದೆ. 'ಬ್ಯಾಂಕಿಂಗ್' ಎಂದರೆ ಸಾಲ (ಪತ್ತು) ನೀಡುವ ಮತ್ತು ಹೂಡಿಕೆ ಉದ್ದೇಶಕ್ಕಾಗಿ 'ಸಾರ್ವಜನಿಕರಿಂದ ಠೇವಣಿ ಸಂಗ್ರಹಣೆ', ಬೇಡಿಕೆಯಂತೆ ಹಣ ಹಿಂತಿರುಗಿ ಪಡೆಯುವ ಮತ್ತು ಚೆಕ್, ಡಿ.ಡಿ. ಅಥವಾ ಇತರೆ ಉಪಕರಣ (Instrument) ಮೂಲಕ ಅಥವಾ ಇನ್ನಾವುದೇ ತರಹೆಯಲ್ಲಿ ಹಣ ಹಿಂದಿರುಗಿಸಲು ಅಥವ ವರ್ಗಾಯಿಸಲು ಸಾಧ್ಯವಾಗುವುದು. ಆದರೆ, ಸಹಕಾರ ಸಂಘಗಳಲ್ಲಿ ಈ ವ್ಯವಹಾರವು 'ಸದಸ್ಯ' ರೊಡನೆ ಮಾತ್ರ ಸಾಧ್ಯ. ಈ ಚಟುವಟಿಕೆಯಲ್ಲಿ ವ್ಯವಸ್ಥಾಪನೆ, ಲೆಕ್ಕ ನಿರ್ವಹಣೆ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಸಾಲವಸೂಲಿ ಎಲ್ಲ ಕಾರ್ಯಗಳಲ್ಲಿಯೂ ಮಾಹಿತಿ ತಂತ್ರಜ್ಞಾನ ಅವಿಭಾಜ್ಯ ಅಂಗವಾಗಿರುತ್ತದೆ. ಆರಂಭದಲ್ಲಿ ಘಟಕವಾರು ಕಂಪ್ಯೂಟರೀಕರಣ ಈಗ 'ಕೋರ್ ಬ್ಯಾಂಕಿಂಗ್,' ಹಂತ ತಲುಪಿ ಒಬ್ಬಗ್ರಾಹಕ 'ಎಲ್ಲಿಯಾದರೂ, ಯಾವಾಗಲಾದರೂ' ಬ್ಯಾಂಕಿಂಗ್ ವ್ಯವಹಾರ ನಡೆಸಲು ಸಶಕ್ತತೆಯನ್ನು ಪಡೆದಿರುತ್ತಾನೆ. ತನ್ನ ಮೊಬೈಲ್ (ಚರ ದೂರವಾಣಿ ಸಾಧನ) ನಲ್ಲಿ ತನ್ನ ಖಾತೆ ವೀಕ್ಷಿಸುವ, ಹಣ ವರ್ಗಾಯಿಸುವ, ಹಣ ಜಮಾ ಮಾಡುವ, ನಗದು ಎ.ಟಿ.ಎಂ. ನಿಂದ ಪಡೆಯುವ ಸಾಲಕ್ಕೆ ಅರ್ಜಿ ಸಲ್ಲಿಸಲು, ಸಾಲ ಪಡೆದು ಹಣ ಡ್ರಾ ಮಾಡಲು ಸಾಧ್ಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ಷಣ ಮಾತ್ರದಲ್ಲಿ ಹಣ ವರ್ಗಾವಣೆ ಸಾಧ್ಯವಾಗಿದೆ. ಆದ್ದರಿಂದ ಖರೀದಿ ಶಕ್ತಿ ಹೆಚ್ಚುತ್ತಿದೆ. 'ಡಿಜಿಟಲ್' ವ್ಯವಹಾರಗಳಿಗೆ ಉತ್ತೇಜನ ನೀಡಲಾಗುತ್ತಿದೆ. ನಗದು ವ್ಯವಹಾರಗಳ ಮೇಲೆ 'ವೆಚ್ಚ' ವಿಧಿಸಲಾಗುತ್ತಿದೆ. ಆಟೋ ಚಾಲಕರು, ಸಣ್ಣ, ಸಣ್ಣ ವ್ಯಾಪಾರಸ್ಥರು ಕೂಡ ಪೇ–ಟಿಎಂ. ಗೂಗಲ್–ಪೇ ಅವಲಂಭಿಸಿರುವುದನ್ನು ಕಾಣುತ್ತಲಿದ್ದೇವೆ. ಇದರಿಂದ ರಾಷ್ಟ್ರದ ಆರ್ಥಿಕತೆ ಬಲಗೊಳ್ಳುತ್ತಲಿದೆ. ಆರ್ಥಿಕ ಸೇರ್ಪಡೆಗೆ ಕಾರಣವಾಗಿರುತ್ತದೆ. ನಮ್ಮ ಸಹಕಾರ ಸಂಘಗಳು, ಸಹಕಾರ ಬ್ಯಾಂಕ್‌ಗಳು ಆಧುನಿಕವಾದ ಈ ಎಲ್ಲ ಸೌಲಭ್ಯ ಒಳಗೊಳ್ಳುವ ಮೃದು ತಂತ್ರಜ್ಞಾನ (Software) ಅಳವಡಿಸಿಕೊಳ್ಳಬೇಕು. ಕೋರ್ ಬ್ಯಾಂಕಿಂಗ್ (Centralised Online Real Time - CORE Banking) ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ತಮ್ಮದು ಸಣ್ಣ ವ್ಯವಹಾರವಾದಲ್ಲಿ ಇತರೆ ಬ್ಯಾಂಕ್‌ನ ಸಹಯೋಗದಿಂದ 'ಸ್ವಿಚ್'ನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಆರ್.ಟಿ.ಜಿ.ಎಸ್. (Real Time Gross Settlement) ನೆಫ್ಟ್ (National Electronic Fund Transfer) ಸಾಧ್ಯವಾಗುತ್ತದೆ. ತಮ್ಮ ಲೆಕ್ಕ ನಿರ್ವಹಣೆ ಸುಲಭ ಸಾಧ್ಯವಾಗುತ್ತದೆ. ಆರ್ಥಿಕ ಸ್ಥಿತಿ, ನಗದು ಒಳ ಮತ್ತು ಹೊರ ಹರಿವು, ನಿಧಿಗಳ ನಿರ್ವಹಣೆ, ಒಟ್ಟಾರೆ ಆಸ್ತಿಜವಾಬ್ದಾರಿ ನಿರ್ವಹಣೆ ಸುಲಭ ಸಾಧ್ಯವಾಗುವುದಲ್ಲದೇ ಲಾಭದಾಯಕ ನಿರ್ವಹಣೆ ಸಾಧ್ಯವಾಗುತ್ತದೆ. ಸಾಲ ವಸೂಲಾತಿಗೆ ಹೆಚ್ಚು ಗಮನ, ಎನ್.ಪಿ.ಎ. ನಿರ್ವಹಣೆ, ಸೋರಿಕೆಗಳ ತಡೆಗಟ್ಟುವಿಕೆ ಸುಲಭ ಸಾಧ್ಯವಾಗುತ್ತದೆ. ಠೇವಣಿದಾರರೊಂದಿಗೆ, ಸಾಲಗಾರರೊಂದಿಗೆ ಸುಸಂಪರ್ಕ ಹೊಂದಲು, ಅವರಿಗೆ ಸಕಾಲದಲ್ಲಿ ನೆನಪಿಸಲು (ಸಂದೇಶಗಳನ್ನು ರವಾನಿಸುವ ಮೂಲಕ) ಸಾಧ್ಯವಾಗಿಸಿದೆ. ತನ್ನ ಪ್ರಚಾರಕ್ಕೆ, ನೂತನ ಠೇವಣಿ ಉತ್ಪನ್ನ ಮತ್ತು ಸಾಲದ ಉತ್ಪನ್ನ (Products) ಸದಸ್ಯರಿಗೆ ಗ್ರಾಹಕರಿಗೆ ತಿಳಿಸಲು, ನೆನಪಿಸಲು ಸಾಧ್ಯವಾಗುತ್ತದೆ. ಜಾಹಿರಾತುಗೆ ಅತ್ಯಂತ ಅನುಕೂಲ ಕಲ್ಪಿಸುತ್ತದೆ. ಕೃತಕ ಬುದ್ಧಿಮತ್ತೆನ್ನು (AI) ಕೂಡ ಉಪಯೋಗಿಸಿಕೊಳ್ಳಬೇಕಿದೆ. ಈ ಎಲ್ಲ ಅನುಕೂಲತೆ ಒದಗಿಸಲು ಸಾಧ್ಯವಾಗಿರುವುದು 'ಇಂಟರ್ನೆಟ್' (ಅಂರ್ಜಾಲ) ವ್ಯವಸ್ಥೆಯಿಂದ. ಈ ಒಂದು ಸಂಪರ್ಕ ಸಾಧನ ಸಾಮಾಜಿಕ ಜಾಲ ತಾಣಗಳ ಮೂಲಕ ಕೂಡ ಸಂಪರ್ಕ ಮಾಹಿತಿ

ಒದಗಿಸುವ ಪ್ರಚಾರ ಸಾಧನವಾಗಿ ಬಳಸಬೇಕಾಗಿದೆ. ಹಾಗಿದ್ದಲ್ಲಿ ಮಾತ್ರ ಯುವ ಜನತೆಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಸಹಕಾರ ಸಂಘಗಳ ಸೇವೆ ಸೌಲಭ್ಯಗಳನ್ನು ಕೊಂಡಯ್ಯಬಹುದು. ಒಟ್ಟಾರೆ ಆರ್ಥಿಕತೆಯಲ್ಲಿ ತನ್ನ ಭಾಗವನ್ನು ಸಹಕಾರ ಚಳುವಳಿ ಹಿಗ್ಗಿಸಿಕೊಳ್ಳಲು ಸಾಧ್ಯವಾಗುತ್ತದೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು:** ಗ್ರಾಮೀಣ ಜನತೆಗೆ ಎಟುಕುವ, ಕೃಷಿ ಅಗತ್ಯತೆಗೆ ಅಗತ್ಯ ದುಡಿಯುವ ಬಂಡವಾಳ ಒದಗಿಸುವ, ಅದರಲ್ಲಿಯೂ ಸಣ್ಣ ಮತ್ತು ಅತಿ ಸಣ್ಣ ರೈತರ ಅಗತ್ಯತೆ ಪೂರೈಸುವ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಉಪಯೋಗಿಸುವಲ್ಲಿ ಹಿಂದೆ ಬೀಳುವಂತಿಲ್ಲ. ಈಗಾಗಲೇ ಕಡ್ಡಾಯವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿ.ಡಿ.ಎಸ್.) ಪಡಿತರ ವಿತರಣೆಗೆ, ಬೆಳೆಸಾಲ ವಿತರಣೆಯಲ್ಲಿ 'ಪ್ರೂಟ್ಸ್' ತಂತ್ರಾಂಶ ಬಳಕೆ ಮಾಡಬೇಕಾಗಿದೆ. ಲೆಕ್ಕಗಳನ್ನು 'ಸಾಮಾನ್ಯ ಲೆಕ್ಕ ಪದ್ಧತಿ' ಅನುಸರಿಸಬೇಕಾಗಿದೆ. ಇದಕ್ಕೆ ನಬಾರ್ಡ್ ತಂತ್ರಾಂಶ ರಚಿಸಿ ನೀಡಿದೆ. ಸಂಘಗಳಲ್ಲಿ ಜಿ.ಕೇ.ಸ. ಬ್ಯಾಂಕಿನ ಶಾಖೆಯೊಡನೆ ಜೋಡನೆಯಾಗಿ, 'ಮೈಕ್ರೊ ಎ.ಟಿ.ಎಂ.'ಗಳ ಸ್ಥಾಪನೆಯಾಗಿದೆ. ಎಲ್ಲ ಸಹಕಾರ ಸಂಘಗಳು ಈ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲೇಬೇಕಾಗಿದೆ. ಆಗ ಮಾತ್ರ ಅಲ್ಪಾವಧಿ ಕೃಷಿ ಪತ್ತಿನ ರಚನೆಯ ಬುನಾದಿಯಾದ ಈ ಸಂಘಗಳು ಉಳಿದು ಹೆಚ್ಚಿನ ಕೊಡುಗೆ ನೀಡಬಲ್ಲವು.

**ಉತ್ಪನ್ನ ಸಂಗ್ರಹಣೆ ಸಂಸ್ಕರಣೆ (ರೂಪಾಂತರ) ಮಾರಾಟ ಸಹಕಾರ ಸಂಘಗಳು:** ಧಾನ್ಯ, ಬೆಳೆಕಾಳು, ಎಣ್ಣೆ ಕಾಳು, ವಾಣಿಜ್ಯ ಬೆಳೆಗಳಾದ ಅಡಕೆ, ರಬ್ಬರ್ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳನ್ನು ಪಡೆಯಲು ಕಂಪ್ಯೂಟರೀಕರಣಗೊಳ್ಳಲೇಬೇಕು. ಮಾರುಕಟ್ಟೆ ಮಾಹಿತಿಗಳು ಅಂತರ್ಜಾಲದಿಂದ ಲಭ್ಯವಿದ್ದು ಉತ್ಪಾದಕರಿಗೆ ಉತ್ತಮ ನ್ಯಾಯಯುತ ದರ ದೊರೆಕಿಸಿಕೊಡಲು ಸಾಧ್ಯವಾಗುತ್ತದೆ. ಸಂಸ್ಕರಣೆ (ಮೌಲ್ಯವರ್ಧನೆ) ಮಾಡಿ ಮಾರಾಟ ಮಾಡುವಲ್ಲಿ ಇದು ಸಹಕಾರಿ. ಪ್ಯಾಕೇಜಿಂಗ್, ಸಂಗ್ರಹಣೆ, ಸಾಗಾಣೆ, ಚಿಲ್ಲರೆ ಮಾರಾಟ, ಚಿಲ್ಲರೆ ಮಾರಾಟ ಏಜೆನ್ಸಿಗಳೊಡನೆ ವ್ಯವಹಾರ ಎಲ್ಲಕ್ಕೂ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಅತಿ ಅವಶ್ಯ. ಆನ್‌ಲೈನ್ ಮಾರಾಟಕ್ಕೂ ವಿವಿಧ 'ಪ್ಲಾಟ್‌ಫಾರಂ'ಗಳನ್ನು (ಅಮೇಜಾನ್, ಫ್ಲಿಪ್‌ಕಾರ್ಟ್, ಬಿಗ್‌ಬಾಸ್ಕೆಟ್, ಇತರೆ) ಉಪಯೋಗಿಸಿಕೊಳ್ಳಲೇಬೇಕು. ಆಗ ಮಾತ್ರ ಈಗ ಖರೀದಿ ಶಕ್ತಿ ಉಳ್ಳ ಯುವ ಜನತೆಯನ್ನು ಮುಟ್ಟಬಹುದಾಗಿದೆ. ಆಗ ಮಾತ್ರ ಈ ಸಹಕಾರ ಕ್ಷೇತ್ರ ಉಳಿಯಬಹುದಾಗಿದೆ.

**ಹಾಲು ಉತ್ಪಾದನೆ ಸಹಕಾರ ವಲಯ:** 'ಅಮುಲ್' ಮತ್ತು 'ಅಮುಲ್ ಮಾದರಿ' 'ನಂದಿನಿ' ಯಶಸ್ಸಿನ ಹಿಂದಿನ ಗುಟ್ಟು, ಮಾರುಕಟ್ಟೆಯಲ್ಲಿ ಮೇಲೆ ತಿಳಿಸಿದ ಎಲ್ಲ ಮಾಹಿತಿ ತಂತ್ರಜ್ಞಾನದ ತಂತ್ರಗಾರಿಕೆಯ ಅಳವಡಿಕೆಯೇ ಆಗಿದೆ. ಬೆಂಗಳೂರಿನ 'ಹಾಪ್‌ಕಾಮ್ಸ್' ಆನ್‌ಲೈನ್ ಮಾರುಕಟ್ಟೆ ಆರಂಭಿಸಿರುವುದು ಶ್ಲಾಘನೀಯ. ಶಿರಸಿಯ 'ಕದಂಬ ಸೌಹಾರ್ದ' ಉತ್ಪನ್ನ ಮೆಣಸು, ಏಲಕ್ಕಿ, ಚಕ್ಕೆ, ಲವಂಗ, ಮುಂತಾದ ಸಾಂಬಾರು ಪದಾರ್ಥಗಳು ಆಕರ್ಷಣೀಯ ಪ್ಯಾಕೆಟ್‌ಗಳಲ್ಲಿ 'ಆನ್‌ಲೈನ್'ನಲ್ಲಿ ಲಭ್ಯವಿರುತ್ತದೆ. ಇದರಂತೆ ಇತರೆ ಸಹಕಾರ ಸಂಘಗಳು ಕೂಡ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಲ್ಲಿ ಸಹಕಾರದ ಪಾಲನ್ನು ವಿಸ್ತರಿಸಿ ತನ್ನ ಸದಸ್ಯರಿಗೆ ಸೇವೆ, ಸೌಲಭ್ಯ, ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ.

**ಗ್ರಾಹಕ ಸಹಕಾರ ಸಂಘಗಳು:** ಗ್ರಾಹಕ ಸಹಕಾರ ವಲಯವೇ ಗ್ರಾಹಕರಿಗೆ ತಾವೇ ತಮಗೆ ಬೇಕಾದ ವಸ್ತುಗಳನ್ನು ತಾವೇ ಆರಿಸಿ ಕೊಂಡುಕೊಳ್ಳುವ ಸೌಲಭ್ಯ ರೂಪಿಸಿದ್ದು, ಆದರೆ ಈಗ ಖಾಸಗಿ ಚಿಲ್ಲರೆ ಮಾರಾಟ ವಲಯದ ಸ್ಪರ್ಧೆ ಎದುರಿಸಲಾಗದೆ ಸಹಕಾರ ಗ್ರಾಹಕ ವಲಯ ಪೂರ್ಣ ಸ್ಥಗಿತಗೊಂಡಿರುವುದನ್ನು ಕಾಣುತ್ತಲಿದ್ದೇವೆ. ಆದರೆ ಯುರೋಪ್ ಖಂಡದಲ್ಲಿ ಈ ವಲಯ ಪ್ರಬುದ್ಧವಾಗಿ ಬೆಳೆದು ಈಗಲೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ನಮ್ಮ ರಾಷ್ಟ್ರದಲ್ಲಿ ಈ ರೀತಿ ಬೆಳವಣಿಗೆಯಾಗದಿರುವುದು ವಿಷಾದನೀಯ. ಯೂರೋಪ್ ಖಂಡದಲ್ಲಿ ಅತ್ಯಂತ ಆಧುನಿಕ ಮಾಹಿತಿ ತಂತ್ರಜ್ಞಾನದ ತಂತ್ರಾಂಶ ಅಳವಡಿಕೆ, ಬಂಡವಾಳದ ಕ್ರೋಡೀಕರಣವೇ ಯಶಸ್ಸಿಗೆ ಕಾರಣವಾಗಿರುತ್ತದೆ.

**ಮೀನುಗಾರಿಕೆ ಸಹಕಾರ ಸಂಘಗಳು:** ಕರಾವಳಿ ಪ್ರದೇಶದಲ್ಲಿ ಸಮುದ್ರ ಮೀನುಗಾರಿಕೆಯಲ್ಲಿ ಮೀನು ಲಭ್ಯವಿರುವ ಪ್ರದೇಶದ ಬಗ್ಗೆ ದೂರ ಸಂವೇದಿ ಉಪಕರಣಗಳಿಂದ ಮಾಹಿತಿ ದೊರೆಯುತ್ತಿದ್ದು ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತಿರುವವರಿಗೆ ಪ್ರದೇಶದ (ಅಕ್ಷಾಂಶ, ರೇಖಾಂಶ) ಮಾಹಿತಿಯನ್ನು ರವಾಗಿಸಲಾಗುತ್ತಿದೆ. ಇದರಿಂದ ಮೀನಿನ ಲಭ್ಯತೆಗೆ ಕಾರಣವಾಗುತ್ತಿದೆ. ಅಲ್ಲದೇ ಸಹಕಾರ ಸಂಘಗಳ ಕಾರ್ಯ ನಿರ್ವಹಣೆಯಲ್ಲಿ, ಕಂಪ್ಯೂಟರಿಕರಣ ಸಹಾಯಕ್ಕೆ ಬಂದಿರುತ್ತದೆ. ಮತ್ತೂ ಹೆಚ್ಚಿನ ವಿಸ್ತರಣೆ ಸಹಕಾರದ ಪಾಲನ್ನು ಹೆಚ್ಚಿಸಲು ಸಹಾಯವಾಗುತ್ತದೆ.

"ಬದಲಾವಣೆ ಜಗದ ನಿಯಮ". ಯಾವುದು ಸ್ಥಿರವೆಂದರೆ "ಬದಲಾವಣೆ"ಯೇ ಸ್ಥಿರ ಎಂಬ ಮಾತಿದೆ. ಬದಲಾವಣೆಗೆ ಹೊಂದಿಕೆಯಾಗದಿದ್ದಲ್ಲಿ ಅಸ್ತಿತ್ವವೇ ಇಲ್ಲವಾಗುತ್ತದೆ. 'ಅಪ್‌ಡೇಟ್' ಆಗದಿದ್ದಲ್ಲಿ 'ಔಟ್‌ಡೇಟ್' ಆಗುತ್ತೇವೆ ಎಂಬ ಮಾತು ದಿಟವಾಗುತ್ತದೆ. ಆದುದರಿಂದ ಸಹಕಾರ ಚಳುವಳಿಯ ಭವಿಷ್ಯದ ದೃಷ್ಟಿಯಿಂದ 'ಮಾಹಿತಿ ತಂತ್ರಜ್ಞಾನ'ದ ಬಹುಮುಖ ಬಳಕೆಯನ್ನು ಸಹಕಾರ ಸಂಘಗಳು ಮಾಡಲೇಬೇಕಾಗಿದೆ. ಅದರ ಸದ್ಬಳಕೆ ಅತಿ ಅಗತ್ಯ, ಅನಿವಾರ್ಯ ಎಂಬುದರಲ್ಲಿ ಎರಡು ಮಾತಿಲ್ಲ.

**********************************************************************************************

# 18. ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಸಹಕಾರವೇ ಮೂಲಮಂತ್ರ : ಒಂದು ಅವಲೋಕನ

**ಇವನಾರವ ಇವನಾರವ ಇವನಾರಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ –**

ಬಸವಣ್ಣ ಈ ಮೇಲಿನ ವಚನ ಸಹಕಾರದ ಮೂಲಮಂತ್ರ, ಧೈರ್ಯ, ಸಹಕಾರಿಗಳಲ್ಲಿ ಈ ಭಾವ ಮೂಡುವುದು ಇಂದಿನ ಅಗತ್ಯತೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ ಎಂಬ ಹೆಮ್ಮೆ ನಮ್ಮದು. ಸ್ವಾತಂತ್ರ್ಯ ನಂತರದ ಎಪ್ಪತ್ತು ವರ್ಷಗಳು ಕಳೆದ ಮೇಲೆ ಭಾರತದ ಅರ್ಥವ್ಯವಸ್ಥೆ ಮತ್ತು ಸಹಕಾರ ಚಳುವಳಿಯಲ್ಲಿ ಆಗಿರುವ ಮತ್ತು ಸರ್ವರನ್ನೂ ಒಳಗೊಂಡಂತೆ ಅಭಿವೃದ್ಧಿ (Inclusive growth)ಯ ಸದಾಶಯವನ್ನು ಹೊಂದಿರುವ ಸಹಕಾರ ಪಥ ಎತ್ತಸಾಗಿದೆ ಎಂಬುದರ ಪರಮಾರ್ಷೆ ಇಂದಿನ ಅಗತ್ಯತೆ.

1. ಭಾರತದ ಗ್ರಾಮೀಣ ಬದುಕಿನ ಸಿಂಹಾವಲೋಕನ ಮಾಡಿದಲ್ಲಿ ಇಡೀ ಗ್ರಾಮ ಸಮುದಾಯವೇ ಒಂದು ಸಹಕಾರದ ಬದುಕು. ಆದರೂ ಸಹಕಾರದ ಪರಿಕಲ್ಪನೆ ಸಾಂಸ್ಥಿಕ ಸ್ವರೂಪ ಪಡೆದದ್ದು ಸಹಕಾರ ಕಾಯ್ದೆಯ ಅನುಷ್ಠಾನದಿಂದ ಎಂದರೆ ತಪ್ಪಾಗಲಾರದು. ಇದರಿಂದಾಗಿ ಸಹಕಾರ ಮತ್ತು ಪತ್ತು ಅವಿಭಾಜ್ಯ ಅಂಗವೆಂದೇ ರೂಢಿಗೆ ಬಂದಿರುವುದು ಸರ್ವ ವಿಧಿತ. ಅದರಂತೆ ಕಾಯ್ದೆ ಅಂಶಗಳು ಮತ್ತು ಸರ್ಕಾರ ಅವಲಂಭಿತ ಸಹಕಾರ ಸಂಘಗಳು ರೂಪುಗೊಂಡಿರುವದನ್ನು ಕಂಡಿದ್ದೇವೆ. ಈ ದಶಕಗಳಲ್ಲಿ ಉಳಿತಾಯ ಅದರಲ್ಲಿಯೂ ಕಡ್ಡಾಯವಾಗಿ ತನ್ನ ಅಗತ್ಯ ಕನಿಷ್ಠ ಅಗತ್ಯಗಳಿಗೂ ಮೀರಿ ಉಳಿತಾಯ ಮಾಡಲು ಡ್ರಿಫ್ಟ್‌ಗೆ ಪ್ರೋತ್ಸಾಹ ನೀಡಲಾಯಿತು. ಪತ್ತು ಆರಂಭಿಕವಾಗಿ ದುಡಿಯುವ ಬಂಡವಾಳದ ಪೂರೈಕೆಗಾಗಿ ಇದ್ದರೂ ತದನಂತರ 'ಹೂಡಿಕೆ ಬಂಡವಾಳದ ಉದ್ದೇಶಗಳನ್ನು ಈಡೇರಿಸಿದೆ (ಅಲ್ಪಾವಧಿ ಬೆಳೆಸಾಲ, ದೀರ್ಘಾವದಿ ಸಾಲಗಳು) ಸರ್ವರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ನಾಂದಿ ಹಾಕಿದ್ದೇ ಸಹಕಾರಿ ಚಳುವಳಿ.

2. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಕೃಷಿಗೆ ಅಗತ್ಯ ಬಂಡವಾಳ ಹೂಡಿಕೆಗೆ ಮೂಲ ತನ್ನ, ತನ್ನ ಕುಟುಂಬದ, ಜಾನುವಾರುಗಳ ಶ್ರಮ, ಗೊಬ್ಬರ ಮತ್ತು ಸಂಗ್ರವಿರಿಸಿದ್ದ ಬೀಜ, ಇತರೆ ಅಥವಾ ಈ ಅಗತ್ಯತೆಗಳ ಪೂರೈಕೆಗೆ 'ಭೂತಯ್ಯಗಳನ್ನು

ಆಶ್ರಯಿಸುವುದೇ ಮೂಲ. ಇದರಿಂದ ಶೋಷಣೆ, ಶೋಷಣೆಯ ತಪ್ಪಿಸುವಿಕೆಗೆ ಒದಗಿಬಂದ ಮಾರ್ಗ ಸಹಕಾರಿ ಮಾರ್ಗ, ಏಕೈಕ ಸಾಂಸ್ಥಿಕ ಮೂಲ ಸಹಕಾರ ಸಂಘ. ಸ್ವಾತಂತ್ರ್ಯ ನಂತರ ನಡೆದ ಅಖಿಲ ಭಾರತ ಗ್ರಾಮೀಣ ಪತ್ತಿನ ಸಮೀಕ್ಷೆ ವರದಿ 'ಸಹಕಾರಿ ಸಂಘಗಳು ಸೋತಿವೆ ಆದರೆ ಅವು ಯಶಸ್ಸುಗಳಿಸಲೇಬೇಕು ಎಂದು ತಿಳಿಸಿದ್ದು ಈಗ ಇತಿಹಾಸ.

3. ಸ್ವಾತಂತ್ರ್ಯ ನಂತರ ಪಂಚ ವಾರ್ಷಿಕ ಮೂಲಕ ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಹರ್‌ಲಾಲ್ ನೆಹರೂ ಅವರ ನಂಬಿಕೆ ರೀತ್ಯ ಸಹಕಾರ ಸಂಘಗಳಿಗೆ ಎಲ್ಲರೀತಿಯ ಮುಂದೆ ಆದ 'ಹಸಿರು ಕ್ರಾಂತಿಗೆ ಒತ್ತಾಸೆಯನ್ನು ಒಲಿದು ಬಂದದ್ದು ಸಹಕಾರಿ ರಂಗ, ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳಿಗೆ ಅಗತ್ಯಗಳ ಪೂರೈಕೆ ಮತ್ತು ಕೃಷಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧೀಕರಣ ಮತ್ತು ಮಾರಾಟ ಸಾರ್ವಜನಿಕ ಮತ್ತು ಸಹಕಾರ ವಲಯಕ್ಕೆ ಹೆಚ್ಚಿನ ಬಲ ತುಂಬಿದ ದಿನಗಳು. ದೇಶದ ಬೆನ್ನೆಲುಬು 'ರೈತ ದೇಶದ ಆರ್ಥಿಕತೆಯ ಅವಲಂಬನೆ ಕೃಷಿಯ ಆಧಾರಿತ ಎಂಬಂತಹ ದಿನಗಳು ಕೃಷಿ ಕೃಷಿಪೂರಕ ಚಟುವಟಿಕೆಗಳೊಡನೆ ಸಾರ್ವಜನಿಕ ಉದ್ದಿಮೆಗಳಿಗೆ, ಬೃಹತ್ ಉದ್ಯಮಗಳಿಗೆ ಪ್ರೋತ್ಸಾಹ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ಕುಶಲಕರ್ಮಿ, ಗುಡಿ ಕೈಗಾರಿಕೆ ಖಾದಿ ಉದ್ಯಮಗಳಿಗೆ ಒತ್ತಾಸೆ. ಕೈಮಗ್ಗ, ಪವರ್ ಲೂಮ್ (ವಿದ್ಯುಚಕ್ತಿ ಚಾಲಿತ ಮಗ್ಗ)ಗಳಿಗೆ ಉತ್ತೇಜನ ಇದರಲ್ಲಿಯೂ ಸಹಕಾರ ಸಂಘಗಳ ಭಾಗಿತ್ವ. ಇವುಗಳಿಂದ ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಸಂಪತ್ತು ನಿರ್ಮಾಣ ಇದರಿಂದಾಗಿ ಆರ್ಥಿಕತೆಯಿಂದ ಹೊರಗುಳಿದ ಶೋಷಿತ, ಜನತೆಗೆ ಆರ್ಥಿಕ ಮೂಲದ ಲಭ್ಯತೆಗೆ ಕಾರಣವಾಗಿದ್ದನ್ನು ಮರೆಯಲಾಗದು. ಸಹಕಾರ ಚಳುವಳಿ ಸರ್ವರನ್ನು ಒಳಗೊಂಡ ಅಭಿವೃದ್ಧಿಗೆ ಕಾರಣವಾಗಿರುವುದನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳಬೇಕಾಗಿದೆ.

4. 1950 ರಿಂದ 1990 ರವರೆಗೂ ಭಾರತದ ಆರ್ಥಿಕ ನೀತಿ ಅಳವಡಿಸಿಕೊಂಡದ್ದು 'ಮಿಶ್ರ ಆರ್ಥಿಕ ನೀತಿ (Mixed Economy) 1990 ರಿಂದ ನೀತಿಯ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಕ್ಕೆ ಭಾರತ ತೆರೆದುಕೊಂಡದ್ದು ಈಗ ಇತಿಹಾಸ. ಇದರ ಪರಿಣಾಮ ಸಹಕಾರಿ ವಲಯದ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆಗಿರುವುದನ್ನು ಕಾಣುತ್ತಲಿದ್ದೇವೆ. ಕೃಷಿ ಪತ್ತು ಕ್ಷೇತ್ರದಲ್ಲಿ ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣ, ಆದ್ಯತಾವಲಯಗಳಿಗೆ ತಾವು ನೀಡಬೇಕಾದ ಸಾಲಗಳ ಬಗ್ಗೆ ಸರ್ಕಾರದ ನೀತಿ ಮತ್ತು ಅದರ ಪಾಲನೆ. ಗ್ರಾಮೀಣ ಬ್ಯಾಂಕ್‌ಗಳ ಸ್ಥಾಪನೆ ಇವುಗಳು ಒಡ್ಡಿರುವ ಸವಾಲುಗಳು ಇವುಗಳ ಅವಲೋಕನ ವಿಶ್ಲೇಷಣೆ ಸಹಕಾರ ಚಳುವಳಿ ಎದುರಿಸಬೇಕಾದ ಎದುರುಸುತ್ತಿರುವ ಸವಾಲುಗಳ ಬಗ್ಗೆ ಉತ್ತರ ಒದಗಿಸುತ್ತದೆ.

5. ಈ ದಶಕಗಳಲ್ಲಿ ಭೂ ಒಡೆತನ ಉಳ್ಳ ರೈತರಿಗೆ ಒದಗಿಬಂದ ಆಸರೆ ಭೂ ಅಡಮಾನ ಬ್ಯಾಂಕ್ ತದ ನಂತರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಇದರ ಶೃಂಗ ಸಂಘ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, ಭೂ ಸುಧಾರಣ ಕಾಯ್ದೆ ಕಾನೂನುಗಳು, ಸರ್ಕಾರದ ಬೆಂಬಲ ಪಡೆದು ಭೂ ಅಭಿವೃದ್ಧಿಗೆ ಕಾರಣವಾಯಿತು. ಭೂಮಿಯ ಅಡಮಾನು ಆಧಾರಿತ 'ಸಾಲ ಪತ್ರಗಳ ವಿತರಣೆ ನಿಬಂಧಕರು ಧರ್ಮದರ್ಶಿಗಳು, ಸರ್ಕಾರದ ಖಾತ್ರಿ, ಹೂಡಿಕೆ ಸಾಲ ಕ್ಷೇತ್ರದಿಂದ ರೈತ 'ಬಂಗಾರದ ಮನುಷ್ಯ ಆಗಲು ಸಾಧ್ಯವಾಯಿತು. ನಿಷ್ಠ ಭೂ ಒಡೆತನವುಳ್ಳ ಎಲ್ಲರನ್ನೂ 'ಒಳಗೊಳ್ಳಲು ಸಾಧ್ಯವಾಯಿತು. 80ರ ದಶಕದಿಂದ ಸಾಲ ಮರುಪಾವತಿ ಕುಂಟಿತ. ಸಾಲ ವಸೂಲಾತಿಯ ಕುಂಟಿತ ಕಾರಣಗಳು ಹಲವಾರು. ಅನಿವಾರ್ಯ ಪರಿಸ್ಥಿತಿಯಲ್ಲಿ ಸರ್ಕಾರದ ತನ್ನ ನೀತಿಯಲ್ಲಿ ಬದಲಾವಣೆಗೊಳಿಸಬೇಕಾದ ಪರಿಸ್ಥಿತಿಯ ಉದ್ಭವ, ಬಡ್ಡಿ ಮನ್ನಾ, ಸಾಲ ಮನ್ನಾ ಯೋಜನೆಗಳಿಗೆ ರಹ ದಾರಿಯಾಯಿತು. ಮರುಪಾವತಿ ಪರಿಸರ ಹಾಳಾಗಿ 'ಸಾಲ ವಸೂಲಾತಿ ಪರಿಸರ ವ್ಯವಸ್ಥೆಯ ಅವನತಿಗೆ ಕಾರಣವಾಯಿತು. 'ದುಡಿಯುವ ಬಂಡವಾಳ ಅಥವಾ ಅಲ್ಪಾವಧಿ ಕೃಷಿ ಸಾಲ ಕ್ಷೇತ್ರ ಅಥವಾ 'ಬೆಳೆ ಸಾಲ ಕೆ.ಸಿ.ಸಿ.ಸಾಲ (ಕಿಸಾನ್ ಕ್ರೆಡಿಟ್ ಕಾರ್ಡ್) ಮತ್ತು ಮುಂದುವರೆದು ಹಾಲಿ ಸಾಲ ರೂಪೇ ಕಾರ್ಡ್ ಮೂಲಕ ಸಾಲ ವಿತರಣೆ ಮಟ್ಟ ಮುಟ್ಟಲಾಗಿದೆ. ಒಟ್ಟಾರೆ 60ರ

ದಶಕದಲ್ಲಿ ಸಾಂಸ್ಥಿಕ ಸ್ವರೂಪದ ಏಕೈಕ ಮೂಲವಾದದ್ದು. ‘ಸೇವಾ ಸಹಕಾರ ಸಂಘ ‘ವ್ಯವಸಾಯ ಸೇವಾ ಸಹಕಾರ ಸಂಘ ರೈತರ ಸೇವಾ ಸಹಕಾರ ಸಂಘ ಕೇವಲ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅವಲಂಭಿತವಲ್ಲದೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದಲೂ ಸಾಲ ಪಡೆಯುವ ಸಾಧ್ಯತೆ ಈ ಎಲ್ಲ ಹಂತಗಳನ್ನು ದಾಟಿ, ಶೇ. 80 ಕ್ಕೂ ಮೀರಿ ಸಣ್ಣ ಮಧ್ಯಮ ರೈತರ ಸಾಲ ಅವಶ್ಯಕತೆಯನ್ನು ಪೂರೈಕೆ ಮಾಡಿದ್ದು ಈ ಕ್ಷೇತ್ರ ಭೂ ಒಡೆತನ ಇಲ್ಲದವರಿಗೂ ‘ಅಸಾಮಿ ಸಾಲ ‘ಪೂರಿಟಿ ಸಾಲ ಹೆಸರಿನಲ್ಲಿ ಆಧಾರ ರಹಿತ ಸಾಲ ಒದಗಿಸುವುದು ಈ ಕ್ಷೇತ್ರ. ಇಷ್ಟಾದರೂ ಈ ಕ್ಷೇತ್ರದ ಒಟ್ಟಾರೆ ಸಾಲಗಳಲ್ಲಿ ತನ್ನ ಪಾಲು ವರ್ಷಾವಾರು ಕುಂಟಿತಗೊಂಡು ಶೇ.80 ರಿಂದ ಶೇ 20ಕ್ಕೆ ಇಳಿದಿರುವುದನ್ನು ಕಾಣುತ್ತಲಿದ್ದೇವೆ. ಆದರೂ ಶೇ.80ಕ್ಕೂ ಮೀರಿ ಸಣ್ಣ ಅತಿಸಣ್ಣ ರೈತರಿಗೆ ಆಸರೆ ಈ ಶೃಂಗ ವ್ಯವಸ್ಥೆ, ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳು, ಜಿಲ್ಲಾಮಟ್ಟದಲ್ಲಿ  ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ‘ಉತ್ತುಂಗದಲ್ಲಿ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರಿ ಬ್ಯಾಂಕ್‌ಗಳು ಅಲ್ಪಾವದಿ ಸಾಲ ಅಲ್ಲದೇ ಕೃಷಿ ಉತ್ಪನ್ನಗಳ ಈಡಿನ ಸಾಲಗಳು, ಪತ್ತು ಮತ್ತು ಮಾರುಕಟ್ಟೆ ಜೋಡಣೆ, ರೈತರ ಅಗತ್ಯತೆಗಳ (ರಸಗೊಬ್ಬರ, ಬೀಜ, ಕ್ರಿಮಿನಾಶಕಗಳು) ಪೂರೈಕೆಗಳು, ಬಳಕೆ ವಸ್ತುಗಳ ಪೂರೈಕೆ, ನ್ಯಾಯಬೆಲೆ ಅಂಗಡಿ, ಕಮಿಷನ್ ವ್ಯವಹಾರಗಳು, ಬ್ಯಾಂಕಿಂಗ್ ಅನುಕೂಲತೆಗಳ ಒದಗಿಸುವಿಕೆ ಹೀಗೆ ಹತ್ತು ಹಲವು ನಿಧಿಯೇತರ ವ್ಯವಹಾರಗಳಿಂದ ‘ಸರ್ವರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಕಾರಣವಾಗಿರುವುದು ಈ ಕ್ಷೇತ್ರ. ಹಾಲಿ ರಾಜ್ಯದಲ್ಲಿ 25 ಲಕ್ಷಕ್ಕೂ ಹೆಚ್ಚಿನ ರೈತ ಕುಟುಂಬಗಳಿಗೆ ಸರ್ಕಾರದ ಬೆಂಬಲದಿಂದ ರೂ. 10,000 ಕೋಟಿಗೂ ಮೀರಿ ಸಾಲ ಬಡ್ಡಿ ರಹಿತ ಸಾಲ ವಿತರಣೆಗೆ ಸಾಧ್ಯವಾಗಿದೆ. ‘ಸಹಕಾರ ಯಶಸ್ವಿಯಾಗಿದೆ ಆದರೆ ಇನ್ನೂ ಆಗ ಬೇಕಾದ್ದು ಬಹಳಷ್ಟಿದೆ ಎಂದು ತೋರಿಸಿಕೊಟ್ಟದ್ದು ಈ ಕ್ಷೇತ್ರದ ಪುನಶ್ಚೇತನ ವರದಿ. (ಪ್ರೊ. ವೈದ್ಯನಾಥನ್ ವರದಿ) ಈ ಅನುಷ್ಠಾನದ ನಂತರದ ಪರಿಣಾಮಗಳ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಫಲಿತಾಂಶಗಳು ಹಲವೆಡೆ ಸಕಾರಾತ್ಮಕವಾಗಿದ್ದು ಕೆಲವೆಡೆ ಮಾತ್ರ ‘ನಕರಾತ್ಮಕ ಫಲಿತಾಂಶಗಳು ಕಂಡು ಬಂದಿರುತ್ತವೆ. ಸಹಕಾರ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿದ್ದನ್ನು ಅಲ್ಲಗಳೆಯಲಾಗುವುದಿಲ್ಲ.

6. ‘ಸ್ವ–ಸಾಹಯ ಗುಂಪುಗಳು ಚಳುವಳಿ 90ರ ದಶಕದಲ್ಲಿ ಆರಂಭವಾದ ‘ನಬಾರ್ಡನ ದೂರ ದೃಷ್ಟಿಯಿಂದ ಬಾಂಗ್ಲಾದೇಶದ ‘ಸಾಲ ಕೇಂದ್ರಿತ ಗುಂಪನ್ನು ಬದಲಾಯಿಸಿ ಉಳಿತಾಯ ಕೇಂದ್ರಿತ ಗುಂಪುಗಳ ರಚನೆ ನಿಧಿ ಆಧಾರಿತವಾಗಿ ಸಾಲವಿರತಣೆ ಅತ್ಯಂತ ಯಶಸ್ವಿಯಾದ ಚಳುವಳಿಯಾದದ್ದು ಅಭೂತ ಪೂರ್ವ. ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಕಾರಣವಾದ ಕ್ಷೇತ್ರ. ಮಹಿಳೆ ಒಬ್ಬಳು ಸಬಲಳಾದರೆ ಇಡೀ ಕುಟುಂಬವೇ ಸಬಲವಾದಂತೆ ಎಂಬುದನ್ನು ಸಾಬೀತು ಮಾಡಿದ್ದು ಈ ಚಳುವಳಿ. ಆರ್ಥಿಕ, ಸಮಾಜಿಕ, ಸಾಂಸ್ಕೃತಿಕ ಬದಲಾವಣೆಗೆ ಅದರಲ್ಲೂ ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿ ರಾಜಕೀಯ ಸಶಕ್ತತೆಯನ್ನು ಹೊಂದುವಂತೆ ಪರಿವರ್ತನೆಗೆ ಕಾರಣವಾಗಿದೆ. ಕರ್ನಾಟಕದ ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ರಾಷ್ಟ್ರದಲ್ಲಿ ಮಂಚೂಣಿಯಾಗಿದ್ದು ರಾಷ್ಟ್ರದಾದ್ಯಂತ ಬೀದರ್ ಮಾದರಿ ಎಂದು ಖ್ಯಾತಿ ಪಡೆಯಿತು ಸೌಹಾರ್ದ ತರಬೇತಿ ಕೇಂದ್ರ ಸ್ಥಾಪನೆ ಹೆಗ್ಗಳಿಕೆ ಪಡೆಯಿತು. ರಾಷ್ಟ್ರದಾದ್ಯಂತ ಈ ಚಳುವಳಿ ಸಹಕಾರ ತತ್ವಗಳನ್ನು ತತ್ವಶಃ ಪಾಲಿಸಿ ಯಶಸ್ವಿಯಾಗುವುದಕ್ಕೆ ಕಾರಣವಾಗಿದೆ.

‘ಜಂಟಿ ಬಾಧ್ಯತೆ ಗುಂಪು ಚಳುವಳಿ, ಚಟುವಟಿಕೆ ಆಧಾರಿತ, ಸಣ್ಣ ಗುಂಪುಗಳ ರಚನೆ, ಇದರಲ್ಲಿಯೂ ಉಳಿತಾಯ ಪ್ರೋತ್ಸಾಹ ನೀಡಿ ಸಹಕಾರ ರಂಗದಲ್ಲಿ ಅಗ್ರ ಗಣ್ಯವಾಗಿ ನಿಂತದ್ದು ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ‘ಮಂಡ್ಯ ಮಾದರಿ ಎಂದೇ ಹೆಸರುಗಳಿಸಿ ಹಾಲಿ ರಾಜ್ಯಾದಾದ್ಯಂತ ರಾಷ್ಟ್ರದಾದ್ಯಂತ ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಕಾರಣೀಭೂತವಾಗಿದೆ.

7. ಭಾರತದ ಆರ್ಥಿಕ ಸೇರ್ಪಡೆ ಕಾರ್ಯಕ್ರಮ ‘ಪ್ರಧಾನ ಮಂತ್ರಿಗಳ ಜನ್ ದನ್ ಯೋಜನೆಯ ಅನುಷ್ಠಾನದಲ್ಲಿಯೂ

ರಾಜ್ಯ ಸಹಕಾರಿ ಬ್ಯಾಂಕ್‌ನ್ನು ಒಳಗೊಂಡಂತೆ ಎಲ್ಲ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಪ್ರಾ. ಕೃ.ಪ.ಸ.ಸಂಘಗಳ ಎಲ್ಲ ಸದಸ್ಯರ ಉಳಿತಾಯ ಖಾತೆಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ತೆರೆದು, ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ತರಲಾಗುತ್ತಿದೆ. ಇದರಿಂದ ಹಣ ವರ್ಗಾವಣೆ, ಉಳಿತಾಯ, ವಿಮೆ, ಸಾಲ, ಪಿಂಚಣಿ ಮತ್ತು ಸರ್ಕಾರದ ಯಾವುದೇ ಯೋಜನೆಯಡಿ ಸರ್ಕಾರದ ಸವಲತ್ತುಗಳ ನೇರ ವರ್ಗಾವಣೆ ಸಾಧ್ಯವಾಗಿರುತ್ತದೆ. ಇದುವರೆವಿಗೂ ಅವಕಾಶ ವಂಚಿತರಿಗೆ ಅಭಿವೃದ್ಧಿಯ ಪ್ರಮುಖ ವಾಹಿನಿಯೊಳಗೆ ಒಳಗೊಳ್ಳುವಂತೆ ಮಾಡಲು ಸಾಧ್ಯವಾಗಿದೆ. ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಅಂಗವಾಗಿ 'ಆರ್ಥಿಕ ಸಾಕ್ಷರತೆ ಅರಿವು ಮೂಡಿಸಲು ಸಹಕಾರಿಯಾಗಿದೆ. ಈ ಕಾರ್ಯಕ್ರಮಗಳಿಗೆ ಭಾರತ ಸರ್ಕಾರ/ನಬಾರ್ಡ ಒತ್ತಾಸೆಯಾಗಿರುವುದು ಶ್ಲಾಂಘನೀಯ.

8. ಶ್ವೇತ ಕ್ರಾಂತಿಗೆ ಕಾರಣ ಅಮುಲ್ ಮಾದರಿ ಸಹಕಾರಿ ವ್ಯವಸ್ಥೆ ಕರ್ನಾಟಕದಲ್ಲಿ 14,000ಕ್ಕೂ ಮೀರಿ ಪ್ರಾಥಮಿಕ ಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳು ಹದಿಮೂರು ಒಕ್ಕೂಟಗಳು ಮತ್ತು ರಾಜ್ಯ ಸಹಕಾರಿ ಹಾಲು ಉತ್ಪಾದಕ ಮಹಾಮಂಡಳ ನಂದಿನಿ ಬ್ರಾಂಡ್‌ನ ಹೆಗ್ಗಳಿಕೆ. 30 ಲಕ್ಷ ಮೀರಿ ಸದಸ್ಯರು ಕೇವಲ. ಹಾಲು ಸಂಗ್ರಹಣೆ ಅಲ್ಲದೆ ಶುದ್ಧ ಮತ್ತು ಗರಿಷ್ಠ ಹಾಲು ಉತ್ಪಾದನೆಗೆ ಉತ್ತೇಜನ ಪಶು ಸಂಗೋಪನೆ ಮತ್ತು ಪರು ಪಾಲನೆಗೆ ಆಧ್ಯತೆ ಆನೇಕ ರೈತ ಕಲ್ಯಾಣ ಯೋಜನೆಗಳ ಅನುಷ್ಠಾನ ಸರ್ಕಾರದ ಪ್ರೋತ್ಸಾಹ ಧನ ವಿತರಣೆ. ಶಾಲಾ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆ ಅನುಷ್ಠಾನ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲು ಸಾಧನೆ, ಸಹಕಾರ ಸಂಘಗಳ ದಾನ ನಿಧಿ, ಅಭಿವೃದ್ಧಿ ನಿಧಿಯಿಂದ ಅನೇಕ ಸಾಮಾಜಿಕ ಅವಶ್ಯಕತೆಗಳ ಪೂರೈಕೆ. ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ. ಲಾಭದಲ್ಲಿ ಹಾಲು ಪೂರೈಕೆ ಮಾಡಿದ ಸದಸ್ಯರಿಗೆ ಅದರ ಅನುಪಾತದಲ್ಲಿ ಬೋನಸ್ ವಿತರಣೆ ಹೀಗೆ ಹತ್ತು ಹಲವು ರೀತಿಯಲ್ಲಿ ಸರ್ವರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಕಾರಣವಾಗಿದೆ 'ಅಮೂಲ್ ಮಾದರಿ ಸಹಕಾರಿ ಶೃಂಗ ವ್ಯವಸ್ಥೆ.

9. ನೀಲಿ ಕ್ರಾಂತಿಗೆ ಕಾರಣ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳು, ಸಮುದ್ರ ಮೀನುಗಾರಿಕೆ ಸಾಂಪ್ರದಾಯಿಕ ಹಾಗೂ ಆದುನಿಕ ಮೀನುಗಾರಿಕೆಯಲ್ಲಿ ತೊಡಗಿಕೊಂಡಿರುವ ಮೀನುಗಾರಿಕೆ ಕುಟುಂಬಗಳಿಗೆ ಆಸರೆಯಾಗಿರುವುದು. ಕರ್ನಾಟಕದ ಮೂರುನೂರು ಕಿ.ಮೀ. ಮೀರಿದ ಕರಾವಳಿಯುದ್ದಕ್ಕೂ ಹರಡಿರುವ ಮೀನುಗಾರಿಕಾ ಮತ್ತು ಮಹಿಳಾ ಮೀನುಗಾರಿಕಾ ಸಹಕಾರ ಸಂಘಗಳು ಮೀನುಗಾರಿಕೆ ಅಗತ್ಯ ಸೌಕರ್ಯಗಳ ಪೂರೈಕೆ, ಸಾಲ ನೀಡಿಕೆ, ಮತ್ತು ಮೀನು ಮಾರಾಟದಲ್ಲಿ ತೊಡಗಿಕೊಂಡಿವೆ. ಸರ್ಕಾ ಸರ್ಕಾರದ ಯೋಜನೆಗಳನ್ನೂ ಅನುಷ್ಠಾನ ಗೊಳಿಸುತ್ತಿವೆ. ಕರಾವಳಿ ಮೀನುಗಾರರ ಜೀವನದ ಅವಿಬಾಜ್ಯ ಅಂಗ ಈ ಸಹಕಾರ ಸಂಘಗಳು ಅಲ್ಲದೆ ಇದರ ಮಹಾಮಂಡಳಿಗಳು ಮೀನುಗಾರರ ಅತಿ ಅವಶ್ಯಕತೆಯಾದ ಶ್ವೇತ್ಯಾಗಾರ, ಸಾಗಾಣಿಕೆ ಮತ್ತು ಮಾರಾಟ ವ್ಯವಸ್ಥೆಗಳನ್ನು ಒದಗಿಸುತ್ತಿವೆ. ಒಳನಾಡು ಮೀನುಗಾರಿಕೆಯಲ್ಲಿ ಒಳನಾಡು ಮೀನು ಗಾರರು ಕೆರೆ, ಜಲಾಶಯಗಳಲ್ಲಿ ಮೀನು ಮರಿಗಳನ್ನು ಸಾಕಿ ಮೀನು ಉತ್ಪಾದನೆ ಮಾಡಿ ಮಾರಾಟದಲ್ಲಿ ತೊಡಗಿ ಕೊಂಡಿವೆ. ಮೀನು ಮಾರಾಟ, ಪರಿಕರಗಳ ಪೂರೈಕೆಯಲ್ಲಿ ಮಹಾಮಂಡಳವು ತೊಡಗಿಕೊಂಡಿದೆ. ಹೀಗೆ 'ನೀಲಿ ಕ್ರಾಂತಿಗೂ ಕಾರಣವಾಗಿ ಬಹುತೇಕ ಸ್ಥಿರ ಆಸ್ತಿಯ ಆಸರೆ ಇಲ್ಲದ ಬಡ ಮೀನುಗಾರರಿಗೂ ಆಸರೆಯಾಗಿ ಅವರನ್ನೂ 'ಒಳಗೊಳ್ಳುವಿಕೆಗೆ ಸಾಧ್ಯವಾಗಿರುವುದು ಈ ಕ್ಷೇತ್ರದ ಮಹತ್ವ.

10. 90ರ ದಶಕದ ಮತ್ತೊಂದು ಬೆಳವಣಿಗೆ ಮತ್ತು ಅವಕಾಶ ವಂಚಿತರಿಗೆ ತಮ್ಮ ಆರ್ಥಿಕ ಸುಧಾರಣೆಗೆ ತಾವೇ ಸ್ವಯಂ ಸಾಧನೆ ಸಾಧಿಸಲು ಸಾಧ್ಯವಾಗಿರುವ ಕ್ಷೇತ್ರ 'ಸೌಹಾರ್ದ ಸಹಕಾರಿ ವಲಯ ಕರ್ನಾಟಕ ರಾಜ್ಯ ಈ ರೀತಿಯ ಕಾಯ್ದೆ ಜಾರಿಯಲ್ಲಿರುವ ಕೇವಲ ಎಂಟು ರಾಜ್ಯಗಳಲ್ಲಿ ಒಂದಾಗಿದೆ. ಮೂರು ಸಾವಿರದ ಆರುನೂರು 'ಸಹಕಾರಿಗಳು 'ರಾಜ್ಯ ಸಂಯುಕ್ತ ಸಹಕಾರಿ ಹೊಂದಿದ್ದು ಸ್ವಯಂ ಜವಾಬ್ದಾರಿ ಸ್ವಾಯತ್ತತೆ ನಿಯಂತ್ರಣದ ಧ್ಯೆಯದಿಂದ ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಕ್ಷೇತ್ರವಾಗಿದೆ. 3500 ಸಹಕಾರಗಳು 30 ಲಕ್ಷ ಸದಸ್ಯತ್ವ 550 ಕೋಟಿ

ಷೇರು ಬಂಡವಾಳ, 11,000 ಕೋಟಿ ಠೇವಣಾತಿ 7,800 ಕೋಟಿ ಮೀರಿ ಸಾಲ ಹೊರಬಾರೆ, 190 ಕೋಟಿ ಮೀರಿ ಲಾಭ 50,000 ಜನರಿಗೆ ನೇರ ಉದ್ಯೋಗ, 18 ಪಟ್ಟಣ ಬ್ಯಾಂಕ್‌ಗಳು, 18 ರೀತಿಯ ಸಹಕಾರಿಗಳು ಕರ್ತವ್ಯ ನಿರ್ವಹಿಸುತ್ತಿವೆ. ಸರ್ವರನ್ನೂ ಒಳಗೊಳ್ಳುವಿಕೆಗೆ ಸಾಧ್ಯವಾಗಿರುವ ಕ್ಷೇತ್ರವಾಗಿ ಹೊರಹೊಮ್ಮಿದೆ.

11. ಮಾನವನ ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು, ಬಟ್ಟೆ, ನೆರಳು ಆಹಾರದ ಮತ್ತು ಇತರೆ ಅವಶ್ಯಕತೆಗಳ ಪೂರೈಕೆ ಈ ವರೆಗೆನ ಚರ್ಚಿಸಿದ ಎಲ್ಲಾ ಕ್ಷೇತ್ರಗಳ ಮೂಲ ಉದ್ದೇಶ ಕೃಷಿ ಕ್ಷೇತ್ರದಲ್ಲಿ ನೀರಿನ ಅವಶ್ಯಕತೆ ಸದ್ಬಳಕೆಗೆ ನೀರಾವರಿ ಸಹಕಾರ ಸಂಘಗಳು, ಮಧ್ಯಮಾವದಿ, ದೀರ್ಘಾವದಿ ಸಾಲ ಕ್ಷೇತ್ರದಿಂದ ತೆರೆದ ಬಾವಿ, ಕೊಳವೆ ಬಾವಿ, ಪೈಪ್ ಲೈನ್, ಹನಿ ನೀರಾವರಿ, ಸಿಂಪಡನೆ ನೀರಾವರಿ ಅಳವಡಿಸಲು ಬಂಡವಾಳ.

ಏತ ನೀರಾವರಿ, ಜಂಟಿ ನೀರಾವರಿ ಸಹಕಾರಿ ಸಂಘಗಳು, ಇತ್ತೀಚೆಗೆ ಅನೇಕ ಸಹಕಾರಿ ಸಂಘಗಳು ಶುದ್ಧ ನೀರು ಉತ್ಪಾದನೆ, ಶುದ್ಧ ನೀರಿನ ವಿತರಣೆ ಕಾರ್ಯ ಕೈಗೊಂಡಿವೆ. ವಸತಿ ಕ್ಷೇತ್ರದಲ್ಲಿ ನಿವೇಶನ ಹಂಚಿಕೆ, ಗೃಹ ನಿರ್ಮಾಣ ಸಾಲಗಳನ್ನು ಒದಗಿಸಿದ ಕೆಲಸಗಳನ್ನು ನಿರ್ವಹಿಸಿದೆ. ಹೀಗೆ ಮೂಲಭೂತ ಸೌಕರ್ಯಗಳ ಅವಶ್ಯಕತೆಗಳ ಪೂರೈಕೆಯೊಂದಿಗೆ ಸರ್ವರನ್ನೂ ಒಳಗೊಂಡ ಅಭಿವೃದ್ಧಿಗೆ ಕಾರಣವಾಗಿದೆ. ಮಾನವನ ಮತ್ತೊಂದು ಪ್ರಮುಖ ಅವಶ್ಯಕತೆ ಆರೋಗ್ಯ, ಆರೋಗ್ಯ ಕ್ಷೇತ್ರದಲ್ಲಿ ಸಹಕಾರಿ ಆಸ್ಪತ್ರೆಗಳು ಮತ್ತೊಂದು ಯಶಸ್ವಿಯೋಜನೆ ಯಶಸ್ವಿನಿ ಯೋಜನೆ ಹೈಟೆಕ್ ಆಸ್ಪತ್ರೆಗಳಲ್ಲಿ ಜನ ಸಾಮಾನ್ಯರಿಗೆ ಅಲ್ಪ ಮೊತ್ತದ ಪ್ರೀಮಿಯಂನಿಂದ ಶಸ್ತ್ರಚಿಕಿತ್ಸಾ ಸೌಲಭ್ಯ ದೊರೆಯಲು ಕಾರಣವಾಗಿರುವುದು ರಾಷ್ಟ್ರ ಅಂತರರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟ 'ಒಳಗೊಳ್ಳುವಿಕೆಗೆ ಕಾರಣವಾಗಿದೆ. ಬಡಜನತೆಗೆ ಸಂಜೀವಿನಿಯಾಗಿದೆ.

12. ಪ್ರಜಾ ಪ್ರಭುತ್ವದ ನಿಯಂತ್ರಣ ವ್ಯವಸ್ಥೆಯುಳ್ಳ ಅದರ ತಳಹದಿಯ ಮೇಲೆ ನಿಂತಿರುವ ಈ ಕ್ಷೇತ್ರ ಅತ್ಯುತ್ತಮ ನಾಯಕತ್ವ 'ಸರ್ವರಿಗೂ ಸಮಪಾಲು, ಸಮಾದಾನ ಎಂಬ ಧೈರ್ಯವನ್ನು ಹೊಂದಿರತಕ್ಕದ್ದು. ಈ ನಾಯಕತ್ವ ಸಹಕಾರ ಕ್ಷೇತ್ರದ ಸಾಮರ್ಥ್ಯವನ್ನು ಗ್ರಹಿಸಿ ಬೆಳೆಸುವಲ್ಲಿ ತನ್ನ ಪಾತ್ರ ದೌರ್ಬಲ್ಯಗಳನ್ನು ಹೋಗಲಾಡಿಸುವಲ್ಲಿ ತಾನು ಮಾಡಬೇಕಾದ ಕರ್ತವ್ಯಗಳು ಅವಕಾಶಗಳನ್ನು ಉಪಯೋಗಿಸುವ ಮಾರ್ಗಗಳು ಮತ್ತು ಸವಾಲುಗಳನ್ನು ಎದುರಿಸಬೇಕಾದ ಮಾರ್ಗೋಪಾಯಗಳನ್ನು ಹುಡುಕಿ ಸಮರ್ಥ ನಾಯಕತ್ವ ನೀಡುವುದು ಇಂದಿನ ಅವಶ್ಯಕತೆಯಾಗಿ ಕಂಡುಬರುತ್ತಿದೆ. ಇದರಿಂದ ಈ ಕ್ಷೇತ್ರ ಬಲಪಡಿಸಲು ಸಾಧ್ಯ ಖಾಸಗಿ ಕ್ಷೇತ್ರ ಒಡ್ಡುತ್ತಿರುವ ಸವಾಲುಗಳನ್ನು 'ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಅರಿತು, 'ಸಹಕಾರಿ ತತ್ವಗಳನ್ನು ಪಾಲಿಸಿ ಎಲ್ಲಾ ಸಹಕಾರಿ ಸಂಘಗಳು ಕಾರ್ಯನಿರ್ವಹಿಸಿದಲ್ಲಿ ಮಾತ್ರ ಈ ಕ್ಷೇತ್ರ ನಿಜವಾದ ಚಳುವಳಿಯಾಗಿ ಅಳಿಯದೆ ಉಳಿಯಲು ಬೆಳೆಯಲು ಸಾಧ್ಯವಾಗುತ್ತದೆ. ಸರ್ವರನ್ನೂ ಒಳಗೊಂಡಂತೆ ಅಭಿವೃದ್ಧಿಯಾಗಬೇಕಾದಲ್ಲಿ, ದೀನ ದಲಿತರಿಗೆ, ಅಭಿವೃದ್ಧಿ ಪಥದಿಂದ 'ಹೊರಗಿರುವವರಿಗೆ 'ಒಳಗೊಳ್ಳುವಿಕೆ ಸಾಧ್ಯವಾಗಿಸುವ ನ್ಯಾಯ ಒದಗಿಸುವ ಸಾಮರ್ಥ್ಯ ಉಳ್ಳ ಕ್ಷೇತ್ರ ಸಹಕಾರಿ ಚಳುವಳಿ ಮಾತ್ರ, ಇದೊಂದೇ ಏಕೈಕ ಮಾರ್ಗ.

**************************************************************************************************

# 19. ಸಂದಿಗ್ಧ ಪರಿಸ್ಥಿಗೆ ಪರಿಹಾರ – ಸಹಕಾರ

'ಸಂಕಟ ಬಂದಾಗ ವೆಂಕಟರಮಣ ಎಂಬ ಮಾತಿದೆ. ಹಾಗೆಯೇ, 'ಸಂಕಟ ಬಂದಾಗ ಸಹಕಾರ ಎಂಬ ಮಾತೂ ಕೂಡ ಅಷ್ಟೇ ಸತ್ಯ ಈಗ ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ತಮ್ಮ ಉತ್ಪನ್ನವನ್ನು ಎಲ್ಲಿ ಮತ್ತು ಹೇಗೆ ಮಾರಾಟ ಮಾಡುವುದು ಇದಕ್ಕೆ 'ಸಹಕಾರ ಮಾರ್ಗವೇ ಪರಿಹಾರ ಅಲ್ಲವೇ?

ಭಾರತದ ಸ್ವಾತಂತ್ರ್ಯ ನಂತರ 'ಹಸಿರು ಕ್ರಾಂತಿಗೆ ಇಂಬು ಕೊಟ್ಟದ್ದು ಸಹಕಾರ ವಲಯವನ್ನು ಎಂದರೆ ತಪ್ಪಾಗಲಾರದು. ಭೂ ಅಭಿವೃದ್ಧಿ ಇಂದ ಯೋಜನ ಬದ್ಧ ಸಾಲಗಳು ಹೂಡಿಕೆ ಸಾಲಗಳನ್ನು ಒದಗಿಸಿದ್ದು ದೀರ್ಘಾವಧಿ ಸಾಲ ಕ್ಷೇತ್ರ, ಭೂ

ಅಭಿವೃದ್ಧಿ ಬ್ಯಾಂಕ್ ಹಾಲಿ ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, 'ದುಡಿಯುವ ಬಂಡವಾಳ ಒದಗಿಸಿದ್ದು, ಅಲ್ಪಾವಧಿ ಕೃಷಿ ಸಾಲ ಕ್ಷೇತ್ರ, ಹಾಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು. ಉತ್ಪನ್ನಗಳಿಗೆ ಸಂಸ್ಕರಣೆ, ಮಾರುಕಟ್ಟೆ ಮಾಡಿದ್ದು, ಅವಶ್ಯ ಗೊಬ್ಬರ, ಬೀಜ ಒದಗಿಸಿದ್ದು ತಾಲ್ಲೂಕು ಕೃಷಿ ಮಾರಾಟ ಸಹಕಾರ ಸಂಘ, ಮಾರುಕಟ್ಟೆ ಮಹಾ ಮಂಡಳಗಳು. ಈ ಐತಿಹ್ಯವನ್ನು ಈ ಬಲವನ್ನು ಸಹಕಾರಿಗಳಾದ ನಾವು ಮರೆತಿದ್ದೇವೆಯೇ ಎಂಬ ಪ್ರಶ್ನೆ ಸಹಜವಾಗಿ ಮೂಡಿಬರುತ್ತದೆ. ಸಹಕಾರ ಕ್ಷೇತ್ರ, ಸರ್ಕಾರ ಅವಲಂಭಿಸಿದ್ದು, ಪಾಲಿಸಿದ್ದು, ಪೋಷಿಸಿದ್ದು. ಗುಜರಾತ್‌ನ ಕೇಡಾ ಜಿಲ್ಲೆಯಲ್ಲಿನ ಹಾಲು ಮಾರಾಟದಲ್ಲಿ ಖಾಸಗಿ 'ಪೋಲ್ಸನ್ ಕಂಪನಿ ಶೋಷಣೆ ನಡೆಸುತ್ತಿದೆ ಎಂದು ಅರಿತಾಗ 'ಪೊಲ್ಲಿಸತ್ ಕಿತ್ತೊಗೆಯಿರಿ ಎಂಬ ಚಳುವಳಿ ನಡೆದದ್ದು ಈಗ ಇತಿಹಾಸ, ಆಗ ರೈತರಿಗೆ ದೊರೆತ ನಾಯಕತ್ವ. ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಬಾಯ್ ಪಟೇಲರದು, ಮುರಾರ್ಜಿ ದೇಸಾಯಿ, ತ್ರಿಭುವನ್ ದಾಸ್ ಪಟೇಲರ ನಾಯಕತ್ವ 'ಅಮುಲ್ ಎಂಬ ಖ್ಯಾತಿಗೆ ಕಾರಣವಾಯಿತು. ರೈತರ ಬಾಳು ಹಸನಾಯಿತು. ಲಾಲ್ ಬಹದ್ದೂರ್ ಶಾಸ್ತ್ರಿ ದೂರ ದರ್ಶಿತ್ವದಿಂದ, ಡಾ। ವರ್ಗೀಸ್ ಕುರಿಯನ್‌ರ ಅವರ ಶ್ರಮ ಸಹಕಾರದಲ್ಲಿನ ಅವರ ಬದ್ಧತೆ ರಾಷ್ಟ್ರದಾದ್ಯಂತ 'ಅಮುಲ್ ಮಾದರಿಯನ್ನು ಪಸರಿಸಲು ಕಾರಣವಾಗಿ 'ಕ್ಷೀರ ಕ್ರಾಂತಿ (ಶ್ವೇತ ಕ್ರಾಂತಿ)ಗೆ ಕಾರಣವಾಯಿತು.

ಈ ರೀತಿಯ ಬೆಳವಣಿಗೆ ರೈತರ ಇತರ ಉತ್ಪನ್ನಗಳ ಮಾರಾಟ ಕ್ಷೇತ್ರದಲ್ಲಿ ಆಗಲಿಲ್ಲವೇಕೆ ಎಂಬುದು ಯಕ್ಷ ಪ್ರಶ್ನೆ. 'ಅಡಿಕೆ ಬೆಲೆಯಲ್ಲಿ ಕುಸಿತ ಉಂಟಾದಾಗ ವಾರಣಾಸಿ ಸುಬ್ರಾಯ ಭಟ್ಟರ ನೇತೃತ್ವದಲ್ಲಿ ಆರಂಭಗೊಂಡ ಕ್ಯಾಂಪ್ಕೋ ಅತ್ಯಂತ ಯಶಸ್ವಿಯಾಗಿ ಕಾರ್ಯಾಚರಣೆ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದೇ ಉತ್ಪನ್ನ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿರುವ ಮಾಮ್‌ಕೋಸ್, ಎಪ್ಪಾಕೋಸ್, ತುಮಕೋಸ್, ಟಿ.ಸಿ.ಎಸ್. ಸಹಕಾರ ಸಂಘಗಳ ಕಾರ್ಯಾಚರಣೆಯನ್ನೂ ಕಾಣುತ್ತಲಿದ್ದೇವೆ. 'ಹಾಲು ಅತ್ಯಂತ ಶೀಘ್ರವಾಗಿ ಹಾಳಾಗುವ ಪದಾರ್ಥ. 'ಅಡಿಕೆ ಸುದೀರ್ಘಕಾಲ ಕೆಡದಂತೆ ಇಡಬಹುದಾದ ಪದಾರ್ಥ, ಈ ಎರಡೂ ಉತ್ಪನ್ನಗಳಿಗೆ 'ಸಹಕಾರ ಮಾರುಕಟ್ಟೆ ಮಾರ್ಗೋಪಾಯವಾಗಿದೆ. ಆದರೆ, ಇತರೆ ಉತ್ಪನ್ನಗಳಿಗೆ ಮಾರ್ಗೋಪಾಯ ಏಕೆ ಆಗಿಲ್ಲ ಎಂಬ ಪ್ರಶ್ನೆ ಕಾಡುತ್ತದೆ. ಪ್ರಯತ್ನಗಳಾಗಿಲ್ಲವೇ ಅಥವಾ ಕೇವಲ ಸರ್ಕಾರದ ಕಾರ್ಯಕ್ರಮವಾಗಿ ಸ್ಥಗಿತಗೊಂಡು ನಿಂತು ಹೋದವೇ? ಈ ಪ್ರಶ್ನೆಗೆ ಹೌದು ಎಂತಲೇ ಉತ್ತರಿಸಬೇಕಾಗುತ್ತದೆ. ಸರ್ಕಾರದ ನೀತಿ ಬದಲಾಗುತ್ತಿದ್ದಂತಲೇ ಈ ಕಾರ್ಯವು ರೈತರಿಗೆ ಭತ್ತ ಉತ್ಪನ್ನದ ಮೇಲೆ ಲೆವಿ ಪದ್ಧತಿ ಇದ್ದಾಗ ಇದರ ಶೇಖರಣೆ ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಮೂಲಕ ಆಗುತ್ತಿತ್ತು. ಈ ಸಹಕಾರ ಸಂಘಗಳಲ್ಲಿ ಅವಶ್ಯ ಎಲ್ಲ ಮೂಲಭೂತ ಸೌಕರ್ಯಗಳಾದ ಒಣಗಿಸುವ ಪ್ರಾಂಗಣ ಅಕ್ಕಿ ಗಿರಣಿಗಳು ಗೋದಾಮುಗಳು, ಸಾಗಾಣಿಕೆ ಲಾರಿಗಳು. 'ಕುಚವ ಲಕ್ಕಿ ಘಟಕಗಳಿಗೆ ಅವಶ್ಯ ಬಾಯರ್‌ಗಳು ಇರುತ್ತಿದ್ದವು. ಪಡಿತರ ವಿತರಣೆಗೆ ಅಕ್ಕಿ ಇಲ್ಲಿಂದಲೇ ಸರಬರಾಜು ಆಗುತ್ತಿತ್ತು. (ಪಡಿತರ ಸಕ್ಕರೆಯೂ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಸರಬರಾಜು ಆಗುತ್ತಿತ್ತು) ಈ ಪದ್ಧತಿ ನಿಲ್ಲುತ್ತಿದಂತೆಯೇ ಈ ಘಟಕಗಳು ಸ್ಥಗಿತಗೊಂಡವು. ಸರ್ಕಾರ ಪಡಿತರ ವಿತರಣೆಗೆ ಸರ್ಕಾರದ ನಿಗಮಗಳನ್ನು ಸ್ಥಾಪಿಸಿತು. ಸಹಕಾರ ಆಹಾರ ಧಾನ್ಯ ಮಾರುಕಟ್ಟೆ ವಲಯ ಪೂರ್ಣ ಕುಸಿಯಿತು.

ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. 2018–19ರಲ್ಲಿ ಭಾರತ 283.37 ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾಧಿಸಿದೆ. ವಿಶ್ವದಲ್ಲಿಯೇ ಸಿರಿ ದಾನ್ಯಗಳ ಉತ್ಪಾದನೆಯಲ್ಲಿ ಮೊದಲನೆಯ, ಭತ್ತ ಮತ್ತು ಗೋಧಿಯ ಉತ್ಪಾದನೆಯಲ್ಲಿ ಎರಡನೇ ಸ್ಥಾನ ಪಡೆದಿದೆ. ತರಕಾರಿ ಮತ್ತು ಹಣ್ಣು 313.00 ದಶಲಕ್ಷ ಟನ್ ಉತ್ಪಾದಿಸಿ ಮುಂಚೂಣಿಯಲ್ಲಿದೆ. ಭಾರತದ ಗೋದಾಮುಗಳಲ್ಲಿ 2011 ರಿಂದ 2017ರವರೆಗೆ 62,000 ಟನ್ ಆಹಾರ ಧಾನ್ಯಗಳು ಹಾಳಾಗಿದೆ. 2016–17ರಲ್ಲಿ 8600 ಟನ್ ಆಹಾರ ಧಾನ್ಯಗಳು ಹಾಳಾಗಿದೆ. 2020ರ ವಿಶ್ವ ಹಸಿವು ಸೂಚ್ಯಾಂಕದಲ್ಲಿ 107 ರಾಷ್ಟ್ರಗಳಲ್ಲಿ 94ನೇ ಶ್ರೇಯಾಂಕ ಗಳಿಸಿದೆ.

ವಿಶ್ವಸಂಸ್ಥೆಯ ಕೃಷಿ ಮತ್ತು ಆಹಾರ ಸಂಸ್ಥೆಯ ವರದಿಯಂತೆ 194 ದಶಲಕ್ಷ ಜನ ಸಂಖ್ಯೆ ಹಸಿವಿನಿಂದ ಬಳಲುತ್ತಿದ್ದಾರೆ. ವಿಶ್ವದ ಪೋಷಕಾಂಶ ಕೊರತೆಯಿಂದ ನರಳುತ್ತಿರುವ ವಿಶ್ವ ಸಂಖ್ಯೆಯಲ್ಲಿ ಭಾರತದಲ್ಲಿ ಶೇ 23 ಸಂಖ್ಯೆ ಇದೆ. ಅಂದರೆ ಆಹಾರ ಹಂಚಿಕೆಯಲ್ಲಿ ಆಹಾರ ಭದ್ರತೆಯಲ್ಲಿ ಹೇಗೆ ನಾವು ವಿಫಲರಾಗಿರುತ್ತೇವೆ ಎಂಬುದನ್ನು ಇದು ಎತ್ತಿತೋರಿಸುತ್ತಿಲ್ಲವೇ?

ಇದಕ್ಕೆ ಉತ್ತರ ಸಹಕಾರ ಚಳುವಳಿಯಲ್ಲಿ ಇದೆ ಅಲ್ಲವೇ? ನಮ್ಮ ಸಹಕಾರಿಗಳು ಹಾಲಿ ಇರುವ ತಾಲ್ಲೂಕು ಕೃಷಿ ಉತ್ಪನ್ನ ಮತ್ತು ಸಂಸ್ಕರಣ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಸಂಕಲ್ಪವೆನ್ನೇಕೆ ಮಾಡುತ್ತಿಲ್ಲ ಅಥವಾ ನೂತನವಾಗಿ ಆಯಾ ಪ್ರದೇಶದ ಅಗತ್ಯತೆಗನುಸಾರ ನೂತನ ಸಹಕಾರ ಸಂಘಗಳನ್ನು ಸ್ಥಾಪಿಸಬಾರದೇಕೆ? ಸರ್ಕಾರವು ರೈತ ಉತ್ಪನ್ನ ಕಂಪನಿ/ಸಂಘಗಳ ಸ್ಥಾಪನೆಗೆ ಉತ್ತೇಜಿಸುತ್ತಿದೆ. ರೈತ ಉತ್ಪನ್ನ ಸಹಕಾರ ಸಂಘಗಳನ್ನು ಆಂದೋಲನ ರೂಪದಲ್ಲಿ ಸ್ಥಾಪಿಸಬಹುದಲ್ಲವೇ. ಸಹಕಾರದಲ್ಲಿ ಮಾತ್ರ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಒದಗಿಸಬಹುದಾಗಿದೆ. ಇಂದಿನ ಅಗತ್ಯ ಸೂಕ್ತ ನಾಯಕತ್ವ, ಸಹಕಾರಿ ನಾಯಕತ್ವ, ಸಹಕಾರಿ ಸಂಸ್ಥೆಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳು ಸದಸ್ಯರಿಂದ, ಸದಸ್ಯರಿಗಾಗಿ, ಸದಸ್ಯರ ಸಂಸ್ಥೆಗಳಾಗಿದ್ದು ತಕ್ಕ ನಾಯಕರಿಗಾಗಿ ಕ್ಷೇತ್ರ ಹಂಬಲಿಸುತ್ತಿದೆ.

ರೈತರ ಉತ್ಪನ್ನಗಳಿಗೆ ಅವರ ಶ್ರಮಕ್ಕೆ ಪ್ರತಿ ಫಲ ದೊರೆಯಬೇಕು. ನ್ಯಾಯಯುತ ಬೆಲೆ ದೊರೆಯಬೇಕು. ಗ್ರಾಹಕರಿಗೂ ನ್ಯಾಯಯುತ ಬೆಲೆ ದೊರೆಯಬೇಕು. ನಡುವೆ ಮಧ್ಯಮ ವರ್ತಿಗಳ ನಿರ್ಮೂಲನೆ, ಶೋಷಣೆ ತಪ್ಪಬೇಕೆಂದರೆ ರೈತರು ಸಂಘಟಿತರಾಗಿ ತಮ್ಮ ಸಹಕಾರ ವ್ಯವಸ್ಥೆಯನ್ನು ಬಲಪಡಿಸಿ. ಅದರ ಬಲವರ್ಧನೆಯಿಂದ ಮಾತ್ರ ಸಾಧ್ಯ ಹೊರೆತು ಇತರೆ ಯಾವುದೇ ಮಧ್ಯಮವರ್ತಿಗಳು ನ್ಯಾಯ ಒದಗಿಸಲಾರರು. ಆದುದ್ದರಿಂದ ಸಂಕಷ್ಟಕ್ಕೆ ಪರಿಹಾರ, ಉಳಿದಿರುವುದು ಒಂದೇ ಮಾರ್ಗ ಅದು ಸಹಕಾರ ಮಾರ್ಗ ಇದು ಚಳುವಳಿ, ಆಂದೋಲನದ ರೂಪು ಪಡೆಯುವುದು ಈ ದಿನದ ಅವಶ್ಯಕತೆ.

**"ಸಹಕಾರಂ ಗೆಲ್ಗೆ"**

****************************************************************************************************

# 20. ಕೋವಿಡ್ ಎರಡನೆಯ ಅಲೆಯ ನಿಯಂತ್ರಣಕ್ಕೆ ಸಹಕಾರ ಚಳವಳಿಯ ಕೊಡುಗೆ

ಕೋವಿಡ್–19 ಎರಡನೆಯ ಅಲೆ, ಸೃಷ್ಟಿಸಿರುವ ಅವಾಂತರಗಳು ತಲ್ಲಣಗಳು ವಿವರಿಸದಂತೆ, ಈ ಎರಡನೆಯ ಅಲೆಯು ಗ್ರಾಮೀಣ ಪ್ರದೇಶಗಳಿಗೂ ಹರಡಿರುವುದು ಎಲ್ಲರಲ್ಲಿ ಆತಂಕವನ್ನು ಸೃಷ್ಟಿಸಿದೆ. ಇದರ ದುಷ್ಪರಿಣಾಮ ಸಹಕಾರ ಚಳವಳಿಯ ಮೇಲೂ ಬೀರುತ್ತಲಿದೆ. ಈ ಅಲೆ ಕೊನೆಗೊಳ್ಳಲು ಇನ್ನೂ ಕನಿಷ್ಠ ಆರರಿಂದ ಎಂಟು ತಿಂಗಳುಗಳಾಗಲಿದೆ ಎಂದು ವಿಶ್ವಸಂಸ್ಥೆ ಮತ್ತು ಇತರೆ ತಜ್ಞರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿರುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಸಹಕಾರ ಚಳವಳಿಯು ತನ್ನ ಪ್ರಭಾವಳಿಯನ್ನು ಉಳಿಸಿಕೊಂಡಿರುವುದು ಶ್ಲಾಘನೀಯ, ಅದರಲ್ಲಿಯೂ ಅತಿ ಹೆಚ್ಚಿನ ಸದಸ್ಯತ್ವ ಉಳ್ಳ ಮತ್ತು ಅತಿ ಹೆಚ್ಚಿನ ಸಕ್ರಿಯ ಸದಸ್ಯತ್ವವುಳ್ಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, (ಐದೂವರೆ ಸಾವಿರ) ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು (ಇಪ್ಪತ್ತೇಳು ಸಾವಿರ) ಇವುಗಳ ಪಾತ್ರ ಅತಿ ಮುಖ್ಯವಾಗಿರುತ್ತದೆ.

ಅಲ್ಲದೇ, ಕರಾವಳಿಯಲ್ಲಿ ಮೀನುಗಾರಿಕೆ ಸಹಕಾರ ಸಂಘಗಳು, ಮಹಿಳಾ ಮೀನುಗಾರಿಕೆ ಸಹಕಾರ ಸಂಘಗಳು, ನೇಕಾರಿಕೆ, ಕುಂಬಾರಿಕೆ ಮತ್ತು ಇತರೆ ಉತ್ಪನ್ನ ಮತ್ತು ಮಾರಾಟದಲ್ಲಿ ತೊಡಗಿಸಿಕೊಂಡಿರುವ ಪ್ರಾಥಮಿಕ ಸಹಕಾರ ಸಂಘಗಳ ಪಾತ್ರ ಅತಿ ಮುಖ್ಯವಾಗಿರುತ್ತದೆ. ಈ ಸಹಕಾರ ಸಂಘಗಳು ಈ ಸಾಂಕಾಮಿಕವನ್ನು ನಿಯಂತ್ರಣ ಮತ್ತು

ಹೋಗಲಾಡಿಸುವುದರಲ್ಲಿ ಹೆಚ್ಚಿನ ಪಾತ್ರ ವಹಿಸುವುದು ಅನಿವಾರ್ಯವೂ, ಅವಶ್ಯವೂ ಆಗಿದೆ.

ಈ ಸಹಕಾರ ಸಂಘಗಳು ತುರ್ತಾಗಿ, ತ್ವರಿತವಾಗಿ ತಮ್ಮ ಆಡಳಿತ ಮಂಡಳಿ ಸಭೆ ಸೇರಿ (ಕೋವಿಡ್ ಮಾರ್ಗಸೂಚಿ ಪಾಲಿಸಿ) ತಮ್ಮ ಕಾರ್ಯವ್ಯಾಪ್ತಿಯಲ್ಲಿ ತಮ್ಮ ಸಹಕಾರ ಸಂಘವು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕಾರ್ಯಸಾಧುವಾಗಬಲ್ಲ ಕ್ರಿಯಾಯೋಜನೆಯನ್ನು ರೂಪಿಸಬೇಕಾಗಿದೆ. ಸಂಪನ್ಮೂಲಗಳ ಲಭ್ಯತೆ, ಕ್ರೋಢೀಕರಣ ಮತ್ತು ಅನುಷ್ಠಾನ, ಮೇಲ್ವಿಚಾರಣೆ ಅಂಶಗಳನ್ನು ಕ್ರಿಯಾಯೋಜನೆ ಹೊಂದಿರಬೇಕು ಎಂಬ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು ಈ ದಿನಮಾನಗಳ ಅವಶ್ಯಕತೆ.

**ಹಾಲು ಉತ್ಪಾದಕರ ಸಹಕಾರ ಸಂಘಗಳು**

ರಾಜ್ಯದಲ್ಲಿ ಅಂದಾಜು 17 ಸಾವಿರ ಪ್ರಾಥಮಿಕ ಹಾಲು ಉತ್ಪಾದಕ ಮತ್ತು ಹದಿನಾಲ್ಕು ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. ಮೂವತ್ತು ಲಕ್ಷಕ್ಕೂ ಹೆಚ್ಚು ಸದಸ್ಯರಿರುತ್ತಾರೆ. ಶೇಕಡ ಐವತ್ತು ಸಕ್ರಿಯ ಸದಸ್ಯರಿರುತ್ತಾರೆ. ಪ್ರಾಥಮಿಕ ಸಹಕಾರ ಸಂಘ ಗ್ರಾಮೀಣ ಮಟ್ಟದಲ್ಲಿದ್ದು ಅಲ್ಲಿನ ಹಿತಾಸಕ್ತಿಗೆ ಬಾಧ್ಯಸ್ಥವಾಗಿರುತ್ತದೆ. ಒಕ್ಕೂಟವು ಸೂಕ್ತ ಮಾರ್ಗದರ್ಶಿಯಾಗಿರುವುದಲ್ಲದೇ ಈ ಕ್ಷೇತ್ರದ ಸಾಮಾರ್ಥ್ಯವಾಗಿರುತ್ತದೆ. ಈ ಪಿಡುಗಿನ ಬಗ್ಗೆ ಸದಸ್ಯರಿಗೆ ಮಾಹಿತಿ, ಶಿಕ್ಷಣ, ವೈಜ್ಞಾನಿಕ ಪ್ರಜ್ಞೆ ಮಾಡಿಸುವ, ಅವಶ್ಯ ಸೇವೆ/ಸಹಾಯ ಒದಗಿಸುವ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಈ ಕೆಳಕಂಡ ಕ್ರಮಗಳ ಅವಶ್ಯಕತೆ ಇದೆ.

1. ಸದಸ್ಯರಿಗೆ ಕೋವಿಡ್ ತಡೆಗಟ್ಟುವಿಕೆಗೆ ಅವಶ್ಯ ನಿಯಮಗಳ ಪಾಲನೆ, ಕೈಗಳ ಸ್ವಚ್ಚತೆ, ಸ್ಯಾನಿಟೈಜರ್, ಸೋವು, ಬಳಕೆ, ಕಡ್ಡಾಯವಾಗಿ ಮೂಗನ್ನು ಆವರಿಸುವಂತೆ, ಕೆನ್ನೆಯನ್ನು ಮುಚ್ಚುವಂತೆ ಮುಖಗವಸು (ಮಾಸ್ಕ್) ಧರಿಸುವುದು, ಹಾಲು ಸರಬರಾಜು ಮಾಡುವಾಗ, ಪಶು ಆಹಾರ ಕೊಳ್ಳುವಾಗ ಒಬ್ಬರು ಮತ್ತು ಮತ್ತೊಬ್ಬರ ನಡುವೆ ಭೌದ್ಧಿಕ ಅಂತರ ಕಡ್ಡಾಯವಾಗಿ ಕಾಪಾಡುವುದು. ಅತಿ ಅವಶ್ಯ. ಇದರೊಡನೆ ಸಂಘದಲ್ಲಿನ ಸಿಬ್ಬಂದಿ ತಾವೂ ಇದನ್ನು ಅಳವಡಿಸಿಕೊಂಡು ಸದಸ್ಯರಿಗೂ ತಿಳಿ ಹೇಳಿದಾಗ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದರ ಬಗ್ಗೆ ಕರಪತ್ರಗಳನ್ನು ಮುದ್ರಿಸುವುದು. ಹಂಚುವುದು ಬ್ಯಾನರ್‌ಗಳನ್ನು, ಪೋಸ್ಟರ್‌ಗಳನ್ನು ಪ್ರಕಟಿಸುವುದು, ಅರಿವು ಮೂಡಿಸಲು ಸಹಕಾರಿಯಾಗುತ್ತದೆ. ಗ್ರಾಮ ಪಂಚಾಯ್ತಿ ಆರೋಗ್ಯ ಇಲಾಖೆಯ ಸಹಯೋಗ ಸಹಕಾರವೂ ಉಪಯುಕ್ತವಾಗುತ್ತದೆ.

2. ಸಂಘವು ಸ್ಥಳೀಯ ಹಾಲು ಮಾರಾಟವನ್ನು ಉತ್ತೇಜಿಸುವುದು, ಪ್ರೋತ್ಸಾಹಿಸುವುದು, ಇದರಿಂದ ಎರಡು ರೀತಿಯ ಅನುಕೂಲಗಳಿವೆ. ಒಕ್ಕೂಟಕ್ಕೆ ಆಗುತ್ತಿರುವ ಅಧಿಕ ಹಾಲು ಸರಬರಾಜು ಕಡಿತಗೊಳ್ಳುತ್ತದೆ. ಸ್ಥಳೀಯವಾಗಿ ಜನತೆಗೆ ಪೌಷ್ಠಕ ಆಹಾರ ದೊರಕುತ್ತದೆ. ಬಡ ಜನರ, ಮಕ್ಕಳ ಅಪೌಷ್ಠಕತೆ ನಿವಾರಣೆ ಸಲುವಾಗಿ ಉಚಿತ ಹಾಲು ಹಂಚಿಕೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಅವರಲ್ಲಿ ಹಾಲನ್ನು ಕಾಯಿಸಿ ಆರಿಸಿ ಹಾಲು ಸೇವಿಸುವ ಅಭ್ಯಾಸವನ್ನು ರೂಢಿಗೆ ತರಬೇಕು. ಈ ಕ್ರಮದಿಂದ ಪೌಷ್ಠಿಕತೆ ಹೆಚ್ಚುತ್ತದೆ. ರೋಗ ನಿರೋಧಕ ಶಕ್ತಿಯನ್ನು ಉಲ್ಬಣಗೊಳಿಸುತ್ತದೆ. ಪರೋಕ್ಷವಾಗಿ ಪಿಡುಗು ನಿಯಂತ್ರಣಕ್ಕೆ ಸಹಕಾರಿಯಾಗುತ್ತದೆ. ಈ ಕಾರ್ಯಕ್ರಮಕ್ಕೆ ಸಂಘವು ತನ್ನ ನಿಧಿಗಳ/ ದೇಣಿಗೆಯ ಸಂಪನ್ಮೂಲವನ್ನು ಸಂಗ್ರಹಿಸಬೇಕಾಗುತ್ತದೆ.

3. ಕೋವಿಡ್ ಸೋಂಕಿತರಿಗೆ ಅವಶ್ಯ ಸಾರಿಗೆ, ಸೌಕರ್ಯಗಳು

ಉದಾ:– ಔಷೋದೋಪಚಾರ, ಆಮ್ಲಜನಕ ಇನ್ನಿತರೆ ಅವಶ್ಯಕತೆಗಳ ಪೂರೈಕೆ, ಕುಟುಂಬ ನಿರ್ವಹಣೆಗೆ ಅವಶ್ಯ ಆಹಾರ

ಸರಬರಾಜು.

4. ಸದಸ್ಯರಿಗೆ, ಸದಸ್ಯ ಕುಟುಂಬದವರಿಗೆ, ಸಾರ್ವಜನಿಕರಿಗೆ ಮುಖಗವಸು (ಮಾಸ್ಕ್), ಸೋಪು, ಸ್ಯಾನಿಟೈಜರ್‌ಗಳ ವಿತರಣೆ.

ಈ ಕ್ರಮಗಳು ತಮ್ಮ ಸಂಸ್ಥೆಯ ಮೇಲೆ ಆಗಬಲ್ಲ ದೂರಗಾಮಿ ದುಷ್ಪರಿಣಾಮಗಳನ್ನು ತಡೆಯುವಲ್ಲಿ ಸಹಕಾರಿಯಾಗುತ್ತದೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು**

ರಾಜ್ಯದಲ್ಲಿ ಐದೂವರೆ ಸಾವಿರ ಪ್ರಾಥಮಿ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಐವತ್ತು ಲಕ್ಷಕ್ಕೂ ಮೀರಿ ಸದಸ್ಯತ್ವ ಹೊಂದಿವೆ. ಇವು ಅಲ್ಪಾವಧಿ, ಮಧ್ಯಮಾವಧಿ ಕೃಷಿ ಸಾಲ ವಿತರಣೆ, ವಸೂಲಾತಿಯಲ್ಲದೇ ಅನೇಕ ಇತರೆ ಕಾರ್ಯಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. ಠೇವಣಿ ಸಂಗ್ರಹಣೆ, ಕೃಷಿಯೇತರ ಸಾಲ ವಿತರಣೆ ಸ್ವಸಹಾಯ ಗುಂಪುಗಳು, ಜಂಟಿ ಬಾಧ್ಯತಾ ಗುಂಪುಗಳ ಸಾಲ ವಿತರಣೆ, ನಿರ್ವಹಣೆ, ಗೊಬ್ಬರ, ಕ್ರಿಮಿನಾಶಕ, ದಿನಬಳಕೆ ವಸ್ತುಗಳ, ಇತರೆ ವಸ್ತುಗಳ ಖರೀದಿ ಮತ್ತು ಮಾರಾಟದಲ್ಲಿ, ಸರ್ಕಾರದ ಪಡಿತರ ವಿತರಣೆ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿವೆ. ಹೀಗೆ ಹತ್ತಾರು ಚಟುವಟಿಕೆಗಳ ಮೂಲಕ ನಿರಂತರ ಸದಸ್ಯರ ಮತ್ತು ಸಾರ್ವಜನಿಕರ ಗ್ರಾಮೀಣ ಜನತೆಯ ಸಂಪರ್ಕದಲ್ಲಿವೆ. ಸಂಘದ ಸಿಬ್ಬಂದಿ ಸಂಪರ್ಕ ಸೇತುವಾಗಿದ್ದಾರೆ. ಹೀಗಾಗಿ ಸಂಘದ ಸಿಬ್ಬಂದಿ ತಾವು ಕೋವಿಡ್ ನಿಯಮಗಳನ್ನು ಪಾಲಿಸುವುದಲ್ಲದೇ, ಸದಸ್ಯರು, ಸಾರ್ವಜನಿಕರು ಅಥವಾ ಗ್ರಾಹಕರಲ್ಲಿ ಈ ಪ್ರಜ್ಞೆ ಮೂಡಿಸುವಲ್ಲಿ ಪ್ರಧಾನ ಪಾತ್ರವಹಿಸುವ ಅವಶ್ಯಕತೆ ಇದೆ.

**ಇತರೆ ಸಹಕಾರ ಸಂಘಗಳು**

ಇದೇ ರೀತಿಯಲ್ಲಿ ಕರಾವಳಿಯಲ್ಲಿನ ಮೀನುಗಾರಿಕೆ ಸಹಕಾರ ಸಂಘಗಳು, ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘಗಳು ಒಟ್ಟಾರೆಯಾಗಿ ಗ್ರಾಮೀಣ ಪ್ರದೇಶದ ಎಲ್ಲಾ ಸಹಕಾರ ಸಂಘಗಳು ಮೇಲಿನ ರೀತಿಯಲ್ಲಿ ಆಲೋಚಿಸುವ ಅಗತ್ಯತೆ ಇದೆ.

ಅತ್ಯಂತ ಕಳವಳಕಾರಿಯಾದ ವಿಷಯವೆಂದರೆ ಈ ಎರಡನೆ ಅಲೆಯಲ್ಲಿ ತೊಡಗಿಸಿಕೊಂಡಿರುವ ರೂಪಾಂತರಿ ವೈರಾಣು ಸರಿಯಾದ ಗಾಳಿ, ಬೆಳಕು ವ್ಯವಸ್ಥೆ ಇಲ್ಲದ ಸ್ಥಳಗಳಲ್ಲಿ ಗಾಳಿಯಲ್ಲಿ ಹತ್ತು ಮೀಟರ್‌ವರೆಗೂ ಹರಡಬಹುದೆಂಬ ಎಚ್ಚರಿಕೆಯನ್ನು ವಿಜ್ಞಾನಿಗಳು ನೀಡಿರುತ್ತಾರೆ. ಮುಂದಿನ ಮೂರನೇ ಅಲೆಯಲ್ಲಿ ಮಕ್ಕಳೂ ಭಾದಿತರಾಗುವ ಆತಂಕ ಎದುರಾಗಿದೆ. ಅದರಲ್ಲಿಯೂ ಅಪೌಷ್ಠಿಕತೆಯಿಂದ ಕೂಡಿದ ಮಕ್ಕಳಿಗೆ ಸೋಂಕು ತಗುಲುವ ಮತ್ತು ಹೆಚ್ಚು ಹಾನಿ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಆದುದರಿಂದ ಅಪೌಷ್ಠಿಕತೆಯ ನಿವಾರಣೆಯ ಜವಾಬ್ದಾರಿ ಸಹಕಾರ ಸಂಘಗಳು ಹೊರಬೇಕಾದ್ದು ಅತ್ಯವಶ್ಯ.

ಸಹಕಾರ ಸಂಘಗಳೂ "ಸಮೂದಾಯ"ದ ಅಂಗವಾಗಿರುತ್ತವೆ. "ಸಾಮಾಜಿಕ ಕಳಕಳಿ"ಯನ್ನು ಸಹಕಾರ ತತ್ವವಾಗಿ ನಾವು ಪರಿಗಣಿಸಿರುತ್ತೇವೆ. ಒಟ್ಟಾರೆ "ಸಹಕಾರ ಚಳವಳಿ"ಯೇ ಸಮರ್ಪಣಾ ಮನೋಭಾವದಿಂದ ಬದ್ಧತೆಯಿಂದ ಈ ಪಿಡುಗು ಹರಡುವುದನ್ನು ತಡೆಗಟ್ಟುವಲ್ಲಿ, ನಿವಾರಿಸುವಲ್ಲಿ ಅವಶ್ಯ ಕ್ರಮಗಳನ್ನು ತೆಗೆದುಕೊಂಡು ತೊಡಗಿಸಿಕೊಳ್ಳಬೇಕಾದದ್ದು ಅನಿವಾರ್ಯವೂ ಮತ್ತು ಚಳವಳಿ ದೃಷ್ಠಿಯಿಂದ ಅವಶ್ಯಕವೂ ಆಗಿದೆ.

**************************************************************************************************

# 21. ಸಹಕಾರ ಸಂಘಗಳು–ಕೊರೋನ ಪ್ರಸರಣ ತಡೆಗೆ 'ನಡವಳಿಕೆ ಬದಲಾವಣೆ ತರುವ ಬಗ್ಗೆ

ಕೊರೋನ ವೈರಾಣು ರೋಗ ನಿಯಂತ್ರಣ ನಿರ್ಮೂಲನೆಯಲ್ಲಿ ಎರಡು ಭಾಗಗಳಿವೆ. ಒಂದು ಪ್ರಸರಣ ತಡೆಗಟ್ಟುವಿಕೆ ಮತ್ತೊಂದು ವೈದ್ಯಕೀಯ. ವೈದ್ಯಕೀಯ ಕ್ಷೇತ್ರ ವೈಜ್ಞಾನಿಕವಾಗಿ ಸವಾಲು ಎಂದು ಸ್ವೀಕರಿಸಿ ಎದುರಿಸುತ್ತಿದೆ. ಆದರೆ, ಸಾಮಾಜಿಕ ಸಮೂಹ ಜೀವಿಗಳಾದ ನಾವು (ಸಹಕಾರ ಸಂಘ/ಸಹಕಾರಿ, ಸ್ವಸಹಾಯ ಗುಂಪು, ಜಂಟಿ ಭಾದ್ಯತಾ ಗುಂಪು, ಆಡಳಿತ ಮಂಡಳಿ, ಸಿಬ್ಬಂದಿ, ಸದಸ್ಯರು, ಗ್ರಾಹಕರು) ಇದರ ಪ್ರಸರಣ ತಡೆಗಟ್ಟುವುದರಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದೇವೆ ಎಂಬುದು ಅಧ್ಯಯನಾತ್ಮಕ ಅಂಶ.

ಈ ವಿಷಯದಲ್ಲಿ ಜನತೆಯ ಜ್ಞಾನ, ಮನೋಚಿಂತನೆ ಮತ್ತು ರೂಢಿಗಳು (Knowledge, Attitude, Practices) ಬಗ್ಗೆ ಜಾನ್ ಹಾಪ್‌ಕಿನ್ಸ್ ಕೇಂದ್ರದ–ಸಂವಹನ ಪೀಠ ಒಂದು ಅಧ್ಯಯನ ನಡೆಸಿದೆ. ಭಾರತದಲ್ಲಿ ಜುಲೈ 2020 ರಿಂದ ಮಾರ್ಚ್ 15, 2021 ರವರೆಗೆ ಮಾಸ್ಕ್–ಮುಖಗವಸು ಧರಿಸುವುದು ಶೇ.5ರಷ್ಟು ಕಡಿಮೆ ಆಯಿತು. ಮಾರ್ಚ್ 15ರ ನಂತರ ಹದಿನೈದು ದಿನಗಳಲ್ಲಿ ಶೇ.84 ಏರಿಕೆ ಕಂಡು ಬಂತು. ಪ್ರಾದೇಶಿಕವಾಗಿ ವಿವಿಧ ಪ್ರದೇಶಗಳಲ್ಲಿ ವಿವಿಧ ಅಂಕಿ ಅಂಶಗಳು ಗೋಚರಿಸಿವೆ. ಇದರಿಂದ ನಾವು ಅರಿಯಬೇಕಾದ ಅಂಶವೆಂದರೆ ಹಾಲಿ ಸೋಂಕಿನ ದರ ಕಡಿಮೆಯಾಗುತ್ತಿದೆ ಎಂದು ನಮ್ಮ 'ನಡವಳಿಕೆಯಲ್ಲಿ ಎಚ್ಚರ ತಪ್ಪಿದರೆ ಗಂಡಾಂತರ ತಪ್ಪಿದ್ದಲ್ಲ.

ಈ ಹಿನ್ನಲೆಯಲ್ಲಿ ನಡವಳಿಕೆಯಲ್ಲಿನ ಬದಲಾವಣೆ ದತ್ತಾಂಶಗಳು ಮತ್ತು ತಕ್ಕುದಾದ, ಸರಿಯಾದ ತಂತ್ರಗಾರಿಕೆಯ ಅಳವಡಿಕೆಯಿಂದ ಜನ ಸಮುದಾಯವನ್ನು ತಲುಪಿ ಅವರು ಅದನ್ನು ಪಾಲಿಸುವಂತೆ ಮಾಡುವುದು ಸಾಧ್ಯ. ಈ ಸಾಧ್ಯತೆಗಾಗಿ ಮುಂದಿನ ಗಂಡಾಂತರ ತಪ್ಪಿಸಲು ಈ ಕೆಳಕಂಡಂತೆ ಏಳು ಅಂಶಗಳನ್ನು ಪರಿಶೀಲಿಸುವ ಅಗತ್ಯತೆ ಇದೆ.

ಮೊದಲನೆಯದಾಗಿ ಮಾಸ್ಕ್ ಮುಖಗವಸು ಹೇಗೆ ರೋಗಾಣು – ವೈರಾಣು ಪ್ರಸರಣವನ್ನು ತಡೆಗಟ್ಟುತ್ತದೆ? ಅದನ್ನು ಯಾರು ಏಕೆ, ಹೇಗೆ ಧರಿಸಬೇಕು? ಈ ಮೂಲಭೂತ ಅಂಶಗಳ ಬಗ್ಗೆ ಅರಿವು ಮೂಡಿಸಬೇಕು. ಇದು ವೈಜ್ಞಾನಿಕ ಕ್ಲಿಷ್ಟಕರ ಅಂಶ. ಏಕೆಂದರೆ ವೈರಾಣು ಅತಿಸೂಕ್ಷ್ಮ ಪರಾವಲಂಬಿ ಜೀವಿಕಣ. ವಿದ್ಯುನ್ಮಾನ ಕ್ಯಾಮರಾದಿಂದ ಛಾಯಗ್ರಹಣ ಮಾಡಬಹುದೇ ಹೊರತು ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಲು ಆಗುವುದಿಲ್ಲ. ಕೊರೋನಾ ವೈರಾಣು 0.5 ಮೈಕ್ರಾನ್‌ಗಿಂತ ಕಡಿಮೆಗಾತ್ರ. (ಒಂದು ಮೀಟರಿನ ಒಂದು ದಶಲಕ್ಷದ ಒಂದು ಭಾಗ – ಒಂದು ಮೈಕ್ರಾನ್). ಹೊರಕವಚ ಪ್ರೋಟೀನ್ ಮತ್ತು ಒಳಗೆ ಸಂವಾಹಕ ಆರ್.ಎನ್.ಎ. (Messenger RNA). ರೋಗಿಯ ಎಂಜಲು, ಉಗುಲು, ಉಸಿರಿನಲ್ಲಿನ ದ್ರವ ಅಂಶದಲ್ಲಿದ್ದು ಹರಡುತ್ತದೆ. ಗಾಳಿಯಲ್ಲಿನ ತೇವಾಂಶದೊಡನೆ ಬೆರೆತು ಕೆಲಕಾಲ ಇರಬಲ್ಲದು. ಗಾಳಿ ಬೆಳಕು ಇಲ್ಲದ, ಮುಚ್ಚಿದ ಕೊಠಡಿ, ಆಸ್ಪತ್ರೆ ಒಳ ಆವರಣ ಹೆಚ್ಚುಕಾಲ ಸಕ್ರಿಯವಾಗಿರಲು ಸಾಧ್ಯ. ಮಾನವನ ಚರ್ಮ, ಮೂಗು, ಬಾಯಿ ಒಳಪ್ರದೇಶಗಳಲ್ಲಿ ಎಸಿಟು–2 (ACT-2) ಎಂಬ ಪ್ರೊಟೀನ್ ಅಂಶ ಇರುತ್ತದೆ. ವೈರಾಣುವಿನ ಹೊರಗವಚದಲ್ಲಿ ಪ್ರೋಟೀನ್ ಅಂಶವು ಈ ಎಸಿಟು ಪ್ರೋಟೀನ್‌ನ್ನು ಸುಲಭವಾಗಿ ಅಂಟಿಕೊಂಡು ದೇಹವನ್ನು ಪ್ರವೇಶಿಸುತ್ತದೆ. ಮಾನವನ ಜೀವಕೋಶ ಸೇರಿ ಅದು ಸಂಖ್ಯೆಯಲ್ಲಿ ವೃದ್ಧಿಗೊಳ್ಳುತ್ತದೆ. ಇದರಿಂದ ಸೋಂಕು ತಗುಲುದಂತೆ ಮಾಡಲು ಅಡ್ಡ ಪರದೆಯ ಅವಶ್ಯಕತೆ ಇದೆ. ಬಾಯಿ, ಮೂಗು, ಸುತ್ತಮುತ್ತಲಿನ ಚರ್ಮ ಭಾಗಗಳು ಸ್ಪರ್ಷ ಹೆಚ್ಚು ಸಾಧ್ಯತೆಗಳನ್ನು ಒಡ್ಡುತ್ತವೆ. ಎದುರಿನ ವ್ಯಕ್ತಿ ಮಾತನಾಡಿದಾಗ, ಸೀನಿದಾಗ, ಕೆಮ್ಮಿದಾಗ ಈ ಸೂಕ್ಷ್ಮ ಭಾಗಗಳು ನೇರವಾಗಿ ಎದುರಾಗುತ್ತದೆ. ರೂಢಿಗತವಾಗಿ ನಾವು ನಮ್ಮ ಅಂಗೈ ಬೆರಳುಗಳಲ್ಲಿ ಈ ಭಾಗಗಳನ್ನು ಮುಟ್ಟಿಕೊಳ್ಳುವ ಅಭ್ಯಾಸ ಹೊಂದಿರುತ್ತೇವೆ. ಮಾಸ್ಕ್ – ಮುಖಗವಸು ಧರಿಸುವುದರಿಂದ ವೈರಾಣು ಸ್ಪರ್ಷವನ್ನು ತಡೆಗಟ್ಟಬಹುದು. ಮುಖಗವಸನ್ನು ಬಾಯಿ, ಮೂಗು ಮತ್ತು ಸುತ್ತಲಿನ

ಭಾಗವನ್ನು ಪೂರ್ಣ ಮುಚ್ಚುವಂತೆ ಧರಿಸಬೇಕು ಮತ್ತು ಎಲ್ಲರೂ ಧರಿಸಬೇಕು. ಇದರಿಂದ

1) ನಮಗೆ ಸೋಂಕು ತಗುಲಿದ್ದರೆ ಇನ್ನೊಬ್ಬರಿಗೆ ಹರಡುವುದಿಲ್ಲ.
2) ಮತ್ತೊಬ್ಬರು ಧರಿಸದಿದ್ದಲ್ಲಿ ಅಥವಾ ಸರಿಯಾಗಿ ಧರಿಸದಿದ್ದಲ್ಲಿ ಅವರಿಂದ ಸಿಡಿದ, ಹರಡಿದ ವೈರಾಣು ನಮ್ಮ ಮುಖದ ಸೂಕ್ಷ್ಮ ಭಾಗಗಳನ್ನು ತಾಗುವುದಿಲ್ಲ.
3) ಮಾನದಂಡಯುತವಲ್ಲದ (ಎನ್–95) ಮುಖಗವಸು, ಬಟ್ಟೆ ಮುಖಗವಸುಗಳಲ್ಲಿ ಅದರಲ್ಲಿನ ರಂಧ್ರಗಳ ಮೂಲಕ ವೈರಾಣುಗಳು ತೂರಿ ಬರುವ ಸಾಧ್ಯತೆ ಹೆಚ್ಚಿರುತ್ತದೆ. ಬಟ್ಟೆ ಮುಖಗವಸುಗಳನ್ನು ಒಗೆದು (ಸೋಪಿನಲ್ಲಿ) ಚೆನ್ನಾಗಿ ಒಣಗಿಸಿ ಉಪಯೋಗಿಸಬೇಕು.
4) ಅನೇಕರಲ್ಲಿ ರೋಗ ಲಕ್ಷಣ ಚಿಹ್ನೆಗಳು (ಜ್ವರ, ಶೀತ, ಕೆಮ್ಮು) ಇಲ್ಲದೆಯೂ ಅಗೋಚರವಾಗಿ ವೈರಾಣುಗಳು ಇರುವ ಸಾಧ್ಯತೆ ಇದೆ (asmptoyotic patients) ಇವರ ಉಸಿರಾಟದಿಂದ ಸೋಂಕು ತಗಲುವ ಸಾಧ್ಯತೆ ಇದೆ.

ಒಂದು ವೈಜ್ಞಾನಿಕ ಅಧ್ಯಯನ ಪ್ರಕಾರ ಮುಖಗವಸು ಧರಿಸುವಿಕೆ ಶೇ. 90ಕ್ಕೂ ಮಿಗಿಲಾಗಿ ಸೋಂಕು ತಡೆಗಟ್ಟಬಲ್ಲದು. ಈ ಅಂಶಗಳನ್ನು ಜನ ಸಾಮಾನ್ಯರಿಗೆ ತಲುಪಿಸುವುದು, ಅರ್ಥೈಸುವುದು ಹೇಗೆ? ಶಂಖದಿಂದ ಬಂದರೆ ಮಾತ್ರ ತೀರ್ಥ ಎಂಬ ಮಾತೊಂದಿದೆ. ಆದುದರಿಂದ ವೈದ್ಯರು, ವಿಜ್ಞಾನ ಅಧ್ಯಾಪಕರು, ಆರೋಗ್ಯ ಕಾರ್ಯಕರ್ತರು ಇವರುಗಳಿಂದ ಅಧಿಕಾರಯುತವಾಗಿ ಮಾತನಾಡುವವರಿಂದ ಅವರಿಗೆ ತಿಳಿಸಿ ವೈಜ್ಞಾನಿಕ ಅರಿವು ಮೂಡಿಸಬೇಕಾಗಿದೆ.

ಎರಡನೆಯದು ಮನೆಯೊಳಗೆ ರೋಗಿಗಳಿದ್ದಲ್ಲಿ ಮನೆ ಒಳಗೂ ಮುಖಗವಸು ಧರಿಸಬೇಕು. ಯಾರೇ ಆದರೂ ಮನೆಯಿಂದ ಹೊರಬರುವ ಮೊದಲೇ ಸರಿಯಾದ ರೀತಿಯಲ್ಲಿ ಮುಖಗವಸು ಧರಿಸಿ ಹೊರಬೇಕು. ಸರಿಯಾದ ರೀತಿಯಲ್ಲಿ ಮುಖಗವಸು ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಮನಮುಟ್ಟುವಂತೆ ಹೇಳುವ ಸಾಧ್ಯತೆ ಇರುವುದು ಅವರ ನಾಯಕರು ಗಳಿಗೆ, ಅವರು ಹೇಳಿದರೆ ಮಾತ್ರ ನಂಬಿಕೆ ಬರುತ್ತದೆ. ಅವರ ವಿನಃ ಬೇರೆ ಯಾರೇ ಹೇಳಿದರೂ ನಂಬುವುದಿಲ್ಲ. ಅವರದೆ ಆದ ಭಾಷೆ, ಶೈಲಿ ಮತ್ತು ಮಟ್ಟದಲ್ಲಿ ನಾಯಕರು ಅರಿವು ಮೂಡಿಸಬಲ್ಲರು. ಅವರು ಮೊದಲು ಮಾದರಿಯಾಗಬೇಕಾಗುತ್ತದೆ. ಆಗ ಇತರರೂ ಅವರನ್ನು ಪಾಲಿಸುತ್ತಾರೆ. ಅವರು ಅಭಿಪ್ರಾಯ ಮೂಡಿಸುವವರಾಗಿರುತ್ತಾರೆ.

ಮೂರನೆಯದಾಗಿ ಮುಖಗವಸು ಧರಿಸಿ ಲಾಭ ಪಡೆದಿರುವ ಪ್ರಕರಣ, ಮಾಹಿತಿ, ಕಥೆಗಳಿದ್ದಲ್ಲಿ ಅದನ್ನು ತಿಳಿಸುವುದು. ಮುಖಗವಸು ಧರಿಸುವುದೂ ಒಂದು ಗೌರವಯುತ ಕಾರ್ಯ, ಸೌಂದರ್ಯಕ್ಕೂ ಮೆರಗು ನೀಡುತ್ತದೆ ಎಂಬ ವಾತಾವರಣ ನಿರ್ಮಾಣ ಮಾಡುವುದು.

ನಾಲ್ಕನೆಯದಾಗಿ, ಮುಖಗವಸು ಧರಿಸುವುದು ಸಮಾಜದಲ್ಲಿ ಒಂದು ಧನಾತ್ಮಕ ಪ್ರಕ್ರಿಯೆ ಎಂಬ ಅಭಿಪ್ರಾಯ ಮೂಡಿಸುವುದು. ಒಬ್ಬರು ಧರಿಸುತ್ತಿದ್ದರೆ ಮತ್ತೊಬ್ಬರು ನಾವು ಧರಿಸಬೇಕು ಎಂಬ ಅಂಶವನ್ನು ಅರಿಯುತ್ತಾರೆ. ಸಾಮಾನ್ಯ ಬದುಕಿನ ಸಹಜಕ್ರಿಯೆಯಾಗಿ ಪರಿವರ್ತಿತವಾಗಬೇಕು.

ಆರನೆಯದಾಗಿ ಕರುಣಾಮಯಿ ನಾಯಕತ್ವದ ಅಗತ್ಯತೆ. ಅನುಕಂಪದ ಅಗತ್ಯತೆ. ತಾನೂ ಕೂಡ ನೋವಿನ ಭಾಗವಾಗಿದ್ದೇನೆ ಎಂಬ ಅಂಶವನ್ನು ಕಾಯ, ವಾಚ, ಮನಸ ಆಚರಿಸಿ ತೋರಿಸಬೇಕಿದೆ.

ಏಳನೆಯದಾಗಿ ಜವಾಬ್ದಾರಿಯುತ ಮಾಧ್ಯಮ. ದೃಶ್ಯ ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮದ ಸಕಾರಾತ್ಮಕ ವರ್ತನೆ ಬಹುಮುಖ್ಯ. ಅಭಿಪ್ರಾಯ ಮೂಡಿಸುವಲ್ಲಿ ಸಕಾರಾತ್ಮಕ, ಧೈರ್ಯ ತುಂಬುವ, ವೈಜ್ಞಾನಿಕ ಮನೋಭಾವನೆ ಮೂಡಿಸಬಲ್ಲ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳು, ಸಹಕಾರಿ, ಸ್ವಸಹಾಯ ಗುಂಪು, ಜಂಟಿ ಬಾಧ್ಯತಾ ಗುಂಪುಗಳು ಕಾರ್ಯ ಪ್ರವೃತ್ತರಾಗುವ ಅವಶ್ಯಕತೆಯಿದೆ. ಮುಖಗವಸಿನೊಡನೆ, ಸಮೂಹ ಸೇರುವಾಗ ಬೌದ್ಧಿಕ ಅಂತರ ಕಾಪಾಡುವುದು, ಕೈಗಳನ್ನು ಆಗಿಂದಾಗ್ಗೆ ಸೋಪು, ಸ್ಯಾನಿಟೈಸರ್‌ನ ಬಳಕೆ ಅತ್ಯಂತ ಅವಶ್ಯ ರೂಢಿಗಳನ್ನಾಗಿ ಮಾಡಿಕೊಳ್ಳಬೇಕಿದೆ. ನಮ್ಮ ಆಡಳಿತ ಮಂಡಳಿ, ಪದಾಧಿಕಾರಿಗಳಾದ ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ಒಳಗೊಂಡಂತೆ ಸಿಬ್ಬಂದಿಯವರು ಗುಂಪುಗಳಲ್ಲಿ ಪ್ರತಿನಿಧಿಗಳು ಎಲ್ಲರೂ ಸಹಕಾರದಲ್ಲಿ ನಾಯಕರುಗಳೇ ಆಗಿರುತ್ತೇವೆ. ನಮ್ಮ ಸದಸ್ಯರ, ಸಿಬ್ಬಂದಿಯ ಮತ್ತು ಒಟ್ಟಾರೆ ಸಮುದಾಯದ ಆರೋಗ್ಯವನ್ನು ಕಾಪಾಡುವುದು ಎಲ್ಲರೂ ಲಸಿಕೆ ಪಡೆಯುವುದು ಕೋವಿಡ್ ನಿಯಂತ್ರಣ ನಮ್ಮ ಜವಾಬ್ದಾರಿಯಾಗಿರುತ್ತದೆ. ಎಲ್ಲ ಸಹಕಾರ ಸಂಘಗಳಲ್ಲಿ, ಸಹಕಾರಿ, ಸ್ವಸಹಾಯ ಗುಂಪು, ಜಂಟಿ ಬಾಧ್ಯತಾ ಗುಂಪುಗಳಲ್ಲಿ ಮೇಲಿನ ಎಲ್ಲ ಏಳು ಅಂಶಗಳನ್ನು ಪಾಲಿಸಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ಸಾಮರ್ಥ್ಯವಾದ ಹೆಚ್ಚು ಜನರ ತಲುಪುವಿಕೆ ಒಳಗೊಳ್ಳುವಿಕೆಗೆ, ಸಮೂಹ ಒಳಿತಿಗೆ ಸಹಕಾರ ಕಾರಣವಾಗಬಲ್ಲದು.

ಕೊರೋನಾ ಸಾಂಕ್ರಾಮಿಕ ಕಡಿಮೆಯಾಗಿದೆ ಎಂದು ಮೈಮರೆತಲ್ಲಿ ಮೇಲಿನ ಅಂಶಗಳಂತೆ ಅರಿವು ಮೂಡಿಸಿ ಸಾಂಕ್ರಾಮಿಕ ಪಿಡುಗನ್ನು ನಿಯಂತ್ರಣಕ್ಕೆ ತರದಿದ್ದಲ್ಲಿ ಮುಂಬರುವ ಹಬ್ಬ ಹರಿದಿನಗಳನ್ನಾಗಲಿ, 25ನೇ ಸೆಪ್ಟೆಂಬರ್ ಒಳಗೆ ನಡೆಸಲೇಬೇಕಾಗಿರುವ ವಾರ್ಷಿಕ ಮಹಾಸಭೆಗಳನ್ನಾಗಲಿ, ನವೆಂಬರ್ 14 ರಿಂದ ನಡೆಸಬೇಕಾದ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ, ಯಶಸ್ವಿಯಾಗಿ, ಅದ್ದೂರಿಯಾಗಿ ಆಚರಿಸಲು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಸಹಕಾರಿಗಳಾದ ನಾವು ಮರೆ ಮಾಡುವಂತಿಲ್ಲ.

**(ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದ ಶ್ರೀಮತಿ ಉತ್ತರ ಭರತ್‌ಕುಮಾರ್ ರವರ Behavioural change can reduce transmission ದಿ ಬಿಂದೂ 1ನೇ ಜೂನ್ 2021ರ ಆಧಾರಿತ)**

*****************************************************************************************************

## 22. ಸಹಕಾರ ಚಳುವಳಿಯ ಬೆಳವಣಿಗೆ ಹಾಗೂ ಸವಾಲುಗಳು : ಬೆಳವಣಿಗೆಯಲ್ಲಿ ಸಹಕಾರಿ ಕಾರ್ಯಕರ್ತರ ಪಾತ್ರ

ಭಾರತದಲ್ಲಿ ಸಹಕಾರ 'ಚಳುವಳಿ ಅಥವಾ 'ಆಂದೋಲನವೇ ಅಥವಾ ಕೇವಲ ವ್ಯವಸ್ಥೆಯೇ ಎಂಬ ಚಿಂತನೆ ಇಂದಿನ ಅವಶ್ಯಕತೆ. ಭಾರತದಲ್ಲಿ, ಐರೋಪ್ಯ ರಾಷ್ಟ್ರಗಳಲ್ಲಿ ಕಂಡುಬಂದ ಸಹಕಾರ 'ಚಳುವಳಿ ಆಧಾರದ ಮೇರೆಗೆ ರೂಪಿತವಾದ 'ಕಾಯ್ದೆ ಅನ್ವಯ ಹುಟ್ಟುವಳಿ ಆಯಿತು ಎನ್ನುವುದು ಐತಿಹಾಸಿಕ ಸತ್ಯ. ಇದರ ಪರಿಣಾಮ ಗ್ರಾಮಾಂತರ ಪ್ರದೇಶದಲ್ಲಿ 'ಸಹಕಾರವು ಅಂದೋಲನದ ರೂಪ ಪಡೆಯುವಲ್ಲಿ ಯಶಸ್ವಿ ಆಗಲಿಲ್ಲ, ಅಥವಾ ಎಷ್ಟು ನಿರೀಕ್ಷಣೆ ಇತ್ತೋ ಅಷ್ಟು ಆಗಲಿಲ್ಲ ಮತ್ತು 'ವ್ಯವಸ್ಥೆ ರೂಪದಲ್ಲಿಯೇ ಉಳಿಯಿತು ಎಂಬುದು ಒಪ್ಪಿಕೊಳ್ಳಬೇಕಾದ ಸತ್ಯ. ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಎಲ್ಲ ಸಹಕಾರದ ಪ್ರಯೋಜನವನ್ನು ಅರಿತುಕೊಂಡು ಅತ್ಯುತ್ತಮ ನಾಯಕತ್ವ ಒದಗಿಬಂತೋ ಅಲ್ಲಿ ವ್ಯವಸ್ಥೆ ಮೀರಿ ಆಂದೋಲನದ ರೂಪ ಪಡೆದಿದೆ. ಸಂಪನ್ಮೂಲಗಳ ಕ್ರೋಢೀಕರಣ, ಇದರ ಹೂಡಿಕೆ ಬಂಡವಾಳದ ವೃದ್ಧಿ ತನ್ಮೂಲಕ ಸಹಕಾರಿ ಸದಸ್ಯರ ಆಶಯಗಳ, ಅವಶ್ಯಕತೆಗಳ, ಆಶೋತ್ತರಗಳ ಈಡೇರಿಕೆ ಸಾಧ್ಯವಾಗಿದೆ. ಕರ್ನಾಟಕದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ (ಮಂಗಳೂರು, ಉಡುಪಿ) ಕೊಡಗು, ಬೆಳಗಾವಿ, ಬಿಜಾಪುರ ಬಾಗಲಕೋಟೆ ಕೆಲವು ಉದಾಹರಣೆಗಳು, ಇತರೆ ಜಿಲ್ಲೆಗಳಲ್ಲಿಯೂ ಅಲ್ಲಿ ಇಲ್ಲಿ ಉತ್ತಮ ಉದಾಹರಣೆಗಳಿವೆ. ಆದರೆ ಬಹುತೇಕ ಗ್ರಾಮೀಣ ಪ್ರದೇಶದಲ್ಲಿ 'ಸಹಕಾರ ಮತ್ತು 'ಪತ್ತು ಸಾಲ ಅವಿಭಾಜ್ಯ ಅಂಗಗಳಾಗಿ ಒಂದೇ ನಾಣ್ಯದ ಎರಡು ಮುಖಗಳಂತೆ ತಳುಕು ಹಾಕಿಕೊಂಡಿರುವುದನ್ನು ಕಾಣುತ್ತಲಿದ್ದೇವೆ. ಇದಕ್ಕೆ ಪೂರಕವಾಗಿ ಸಹಕಾರಿ ಕಾಯ್ದೆ, ಸರ್ಕಾರದ ನೀತಿನಿಯಮಗಳು ರೂಪುಗೊಂಡಿವೆ. ಅರೆಪಟ್ಟಣ,

ಪಟ್ಟಣ ಪ್ರದೇಶಗಳಲ್ಲಿಯೂ ಕಾಯ್ದೆಯಾತ್ಮಕವಾಗಿ ಸಹಕಾರಿ ಸಂಘಗಳು ಆರಂಭಗೊಂಡವಾದರೂ ಬೆಳವಣಿಗೆಯ ವ್ಯತ್ಯಾಸವನ್ನು ನಿಚ್ಚಳವಾಗಿ ಕಾಣಬಹುದಾಗಿದೆ. ಅದರಲ್ಲಿಯೂ ವ್ಯಾಪಾರಸ್ಥರು, ತಮ್ಮ ಸಂಪನ್ಮೂಲಗಳ ಕಾಯ್ದುಕೊಳ್ಳುವಿಕೆ ಮತ್ತು ಸಂಪನ್ಮೂಲಗಳಿಂದ ಸಮುದಾಯದ ಬೆಳವಣಿಗೆಗೆ ಕಾರಣವಾಗಬಹುದಾದ ಸಾಧ್ಯತೆಗಳು, ಪಟ್ಟಣ ಬ್ಯಾಂಕ್‌ಗಳು ಅತಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವುದನ್ನು ಕಾಣಬಹುದಾಗಿದೆ. ನಿಜವಾದ ರೂಪದಲ್ಲಿ ಸಹಕಾರಿ ಚಳುವಳಿ (ಆಂದೋಲನ) ರೂಪುಗೊಂಡಿರುವುದನ್ನು ಗುರುತಿಸಬಹುದಾಗಿದೆ.

ಸ್ವಾತಂತ್ರ್ಯ ಪೂರ್ವಭಾರತದಲ್ಲಿ 1904 ರಿಂದ 1914 ರವರೆಗೆ ಮೊದಲ ಘಟ್ಟದ ಸಹಕಾರದ ಬೆಳವಣಿಗೆಯನ್ನು ಕಾಣಬಹುದಾಗಿದೆ. 1904 ರ ಮೊದಲಿಗೆ ಅಲ್ಲೊಂದು ಇಲ್ಲೊಂದು ಸಹಕಾರ ಸಂಘಗಳು ಆರಂಭಗೊಂಡಿವೆ ಆದರೆ 'ಕಾಯ್ದೆ 'ಯಾತ್ಮಕವಾಗಿ ನೊಂದಣಿಯಾಗಿ ಸಹಕಾರ ಸಂಘಗಳು ಆರಂಭಗೊಂಡಿರುವುದು 1914 ರಿಂದ, ಆಗಿನ ಕಾಯ್ದೆ ಪ್ರಕಾರ ಸಹಕಾರ ಸಂಘಗಳು 'ಅನಿಮಿಯಿತ ಅವಕಾಶ ಹೊಂದಿದ್ದವು ಅಂದರೆ ಸದಸ್ಯರು (ಷೇರುದಾರರ) ಹೋಣೆಗಾರಿಕೆಯು ತನ್ನ ಷೇರು ಹಣಕ್ಕೆ ಮಾತ್ರ ಸೀಮಿತವಲ್ಲದೆ ಸಂಘದ ನಷ್ಟಗಳಿಗೂ ಹೊಣೆಕಾರರಾಗಿರುತ್ತಾರೆ. 1914ರ ತಿದ್ದುಪಡಿಯಂತೆ 'ನಿಯಮಿತಕ್ಕೆ ಅವಕಾಶ ಕಲ್ಪಿಸಲಾಯಿತು. ಸದಸ್ಯರು (ಷೇರುದಾರರು) ತಮ್ಮ ಹೊಣೆಕಾರಿಕೆಯನ್ನು ತಮ್ಮ ಷೇರುಮೊತ್ತಕ್ಕೆ ಮಾತ್ರ ಹೊಣೆಗಾರರು.

ನಷ್ಟಕ್ಕೆ ಬಾಧ್ಯಸ್ಥರಾಗುವುದಿಲ್ಲ. ಇದರಿಂದಾಗಿ ಸಹಕಾರ ಸಂಘಗಳ ಸ್ಥಾಪನೆಗೆ ಇಂಬುದೊರಕಿ ಅನೇಕ ಸಹಕಾರ ಸಂಘಗಳು ಅದರಲ್ಲಿಯೂ ಪ್ರಮೂಖವಾಗಿ 'ಪತ್ತು ಸಾಲಕ್ಷೇತ್ರದಲ್ಲಿ ಹೆಚ್ಚಿನ ಬೇಳವಣಿಗೆಯನ್ನು ಕಾಣುತ್ತೇವೆ (ಮ್ಯಾಕ್ಸ್‌ಗಲನ್ ಸಮಿತಿ ಶಿಪಾರಸ್ಸುಗಳು). ಭಾರತದ ಕೇಂದ್ರೀಯ ಕಾಯ್ದೆಯಾಗಿದ್ದು ಸಹಕಾರದ ಬೆಳವಣಿಗೆಗೆ ಸರ್ಕಾರ ಪೂರಕವಾಗಿ ವರ್ತಿಸುತ್ತಿತ್ತು. ಸರ್ಕಾರವೇ ಸಹಕಾರ ಸಂಘಗಳ ಮೂಲಕ (ರಕಾವಿ ಸಾಲಗಳು) ಸಾಲಗಳನ್ನು ರೈತರಿಗೆ ಒದಗಿಸುವ ಪ್ರಯತ್ನಗಳೂ ನಡೆದಿವೆ. ಕೆಲವಡೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಆರಂಭಗೊಂಡಿವೆ. (ಅಜಮೀರ ಜಿ.ಕೇ.ಸ.ಬ್ಯಾಂಕ್ 1914) 1935ರ ವೇಳೆಗೆ 'ಸಹಕಾರ ವಿಷಯವನ್ನು ಪ್ರಾಂತ್ಯಗಳಿಗೆ ವರ್ಗಾಯಿಸಲಾಗಿದೆ. ಪ್ರಾಂತೀಯ ಸರ್ಕಾರಗಳು 'ಸಹಕಾರಕ್ಕೆ ಬೆಂಬಲ ನೀಡುತ್ತಾ ಬಂದಿವೆ. ಕೆಲವು 'ಅಡಮಾನ್ ಬ್ಯಾಂಕ್‌ಗಳು ಈ ದಶಕಗಳಲ್ಲಿ ಆರಂಭಗೊಂಡಿವೆ.

ಸ್ವಾತಂತ್ರ್ಯನಂತರ 1950–1990ರವರೆಗೆ ಮತ್ತೊಂದು ಘಟ್ಟ ಎಂದು ಗುರುತಿಸಲಾಗಿದೆ. ಸರ್ಕಾರದ ಪೂರ್ಣಬೆಂಬಲ ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಯೊಡನೆ 'ಸಹಕಾರಕ್ಕೂ ಷೇರುಬಂಡವಾಳ, ಸಾಲ, ಸಬ್ಸಿಡಿ, ಕೊಡುಗೆ ಅನುದಾನ ರೂಪದಲ್ಲಿ ಪ್ರೋತ್ಸಾಹ ಗ್ರಾಮೀಣ ಪರಿಸರದಲ್ಲಿ ಕೃಷಿಯೊಡನೆ, ಕೃಷಿ ಪೂರಕ ಚಟುವಟಿಕೆಗಳೊಡನೆ ಕೃಷಿ ಹೂಡಿಕೆಗೆ ಅಗತ್ಯ ಹೂಡಿಕೆ ಬಂಡವಾಳ, ದುಡಿಯುವ ಬಂಡವಾಳ ಒದಗಿಸುವಿಕೆಗೆ ಅಗತ್ಯ ಸಹಕಾರ ವ್ಯವಸ್ಥೆ ಕೃಷಿ ಉತ್ಪನ್ನ ಮಾರುಕಟ್ಟೆ, ಮೂಲಭೂತ ಸೌಕರ್ಯ, ಪರಿಷ್ಕರಣೆ (ಮೌಲ್ಯವರ್ದನೆ) ಗೋದಾಮು, ಶೈತ್ಯಾಗಾರ, ಸಾಗಾಣೆ ಹೀಗೆ ಅಗತ್ಯ ಹಿಂಬದಿಯ ಸೌಕರ್ಯಗಳು ಮತ್ತು ಮುಂಬದಿಯ ಸೌಕರ್ಯಗಳು ಒಟ್ಟಾರೆ ಮಾರುಕಟ್ಟೆ ಸರಪಳಿಯ ಎಲ್ಲ ಸೌಕರ್ಯಗಳು ಸಹಕಾರ ವ್ಯವಸ್ಥೆಯ ಅಂಗವಾಗಿ ನಿರ್ಮಾಣವಾಗಿ ಸರ್ಕಾರದ ಬೆಂಬಲದಿಂದ ಕಾರ್ಯನಿರ್ವಹಿಸಿವೆ. 'ಹಸಿರು ಕ್ರಾಂತಿಗೆ ನಾಂದಿ ಹಾಡಿದೆ. ಇದರೊಡನೆ ರಾಜ್ಯ ಸರ್ಕಾರಗಳು 'ಕಾಯ್ದೆಯಿಂದ ತನ್ನ ನಿಯಂತ್ರಣ ಸಾಧಿಸಿದ್ದನ್ನು ಮರೆಯಲಾಗದು.

1990 ರಿಂದ 97ನೇಯ ಸಂವಿಧಾನ ತಿದ್ದುಪಡಿ 2011 ರವರೆಗೆ ಮತ್ತೊಂದು ಘಟ್ಟ ಎಂದು ಗುರುತಿಸಬಹುದಾಗಿದೆ. ಭಾರತದಲ್ಲಿ ಆರ್ಥಿಕ ಚಿಂತನೆಯಲ್ಲಿ ಬದಲಾವಣೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಪರಿಸರ ನಿರ್ಮಾಣ ಸಹಕಾರ ಸಂಘಗಳಿಗೆ ಯೋಜನಾಗಾತ್ರಗಳಲ್ಲಿ ಕಡಿತ ಸಹಕಾರ ಸಂಘಗಳು ಸ್ವತಂತ್ರ ಘಟಕಗಳು ಸಹಕಾರವಲಯ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಖಾಸಗಿ ಮತ್ತು ಸಾರ್ವಜನಿಕವಲಯದ ನಡುವಿನ 'ಸುವರ್ಣ ಮಾಧ್ಯಮವಾದರೂ ಸ್ಪರ್ಧಾತ್ಮಕ ಪ್ರಪಂಚದಲ್ಲಿ ತಾನೂ ಸ್ಪರ್ದಿ, ಸರ್ಕಾರವು ಸಹಕಾರ ತುರ್ತುನಿಗಾ ಘಟಕದಲ್ಲಿಟ್ಟು ಜೀವ ರಕ್ಷಣಾ ಔಷಧಿಗಳನ್ನು ಒದಗಿಸುವ

ಅಗತ್ಯವಿಲ್ಲ. ಮಾಡು ಅಥವಾ ಮಡಿ ನಿಲುವು ಸರ್ಕಾರದ್ದು, ಸಹಕಾರ ಸಂಘಗಳು ಸ್ವಾಯತ್ತ ಸಂಸ್ಥೆಗಳು, ಸದಸ್ಯರು ಅದರ ಯಜಮಾನರು, ಸದಸ್ಯರಿಂದ, ಸದಸ್ಯರ, ಸದಸ್ಯರಿಗಾಗಿ ರಚಿಸಿಕೊಂಡಿರುವ ಸಂಸ್ಥೆಗಳು ಸಹಕಾರ ಸಂಘಗಳು ಸದಸ್ಯ ಚಾಲಿತ ಸಹಕಾರ ಸಂಘಗಳಾಗಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಸದಸ್ಯರಿಂದ ಆಯ್ಕೆಯಾದ ಆಡಳಿತ ಮಂಡಳಿ ಪಧಾಧಿಕಾರಿಗಳು ಅತ್ಯುತ್ತಮ ಆಡಳಿತ ಸೂತ್ರಗಳನ್ನು ಅಳವಡಿಸಿಕೊಂಡು ಸದಸ್ಯರ ಹಿತವನ್ನು ಕಾಯುವುದಲ್ಲದೇ ಸದಸ್ಯರ ಅವಶ್ಯಕತೆ, ಆಶಯಗಳು, ಆಶೋತ್ತರಗಳನ್ನು ಈಡೇರಿಸುವಲ್ಲಿ ಕಾರ್ಯೋನ್ಮುಖರಾಗತಕ್ಕದ್ದು, 97ನೇ ಸಂವಿಧಾನದ ಆಶಯಗಳು:– 1. ಸ್ವಇಚ್ಛೆಯ ರಚನೆ. 2. ಸ್ವಾಯತ್ತ ಕಾರ್ಯಾಚರಣೆ, 3. ಪ್ರಜಾಸತ್ತಾತ್ಮಕ ನಿಯಂತ್ರಣ. 4. ವೃತ್ತಿಪರ ಆಡಳಿತ, ಇದಕ್ಕೆ ಪೂರಕವಾಗಿ ರಾಜ್ಯಗಳು ಸಹಕಾರ ಕಾಯ್ದೆ ರಚಿಸತಕ್ಕದ್ದು.

ರಾಜ್ಯ ಸರ್ಕಾರದ ಕಾಯ್ದೆಗಳನ್ನು ಪೂರಕವಾಗಿ ತಿದ್ದುಪಡಿಮಾಡಿವೆ. ಸಹಕಾರ ಸಂಘದ ಭಾಗೀದಾರರು, ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ಇವರೆಲ್ಲರೂ ಸಹಕಾರಿ ಕಾರ್ಯಕರ್ತರು, ಮುಂದಿನ ಸಹಕಾರ ಬೆಳವಣಿಗೆ 'ವ್ಯವಸ್ಥೆಯ ರೂಪದಿಂದ ರೂಪಾಂತರಗೊಂಡು 'ಚಳುವಳಿ ಅಥವಾ 'ಆಂದೋಲನವಾಗಿ ರೂಪತಾಳುವುದೇ ಕಾರ್ಯಕರ್ತರ ಎದುರಿಗೆ ಇರುವ ಸವಾಲು ಪರಿಸರ ಬದಲಾಗಿದೆ. ಸರ್ಕಾರದ 'ರಕ್ಷಣಾ ಕವಚ ಇನ್ನುಮುಂದೆ ಇಲ್ಲ, ಸ್ಪರ್ದಾತ್ಮಕ ಪ್ರಪಂಚದಲ್ಲಿ ತನ್ನ ಆಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗಿದೆ. ಇದು ತಂತ್ರಜ್ಞಾನದ ಯುಗ, ಮಾಹಿತಿ ತಂತ್ರಜ್ಞಾನದ ಯುಗ, ವೇಗದ ಯುಗ ಇದಕ್ಕೆ ತಕ್ಕಂತೆ ಸಹಕಾರ ಸಂಘ ನಡೆಸುವಲ್ಲಿ ಇವುಗಳನ್ನು ಆಳವಡಿಸಿಕೊಳ್ಳುವ ಅನಿವಾರ್ಯತೆ ಸಹಕಾರ ಸಂಘಗಳು ಸ್ವಾಯತ್ತತೆ ಸ್ವಾವಲಂಭನೆ ಸಾಧಿಸಬೇಕಾದರೆ ತನ್ನ ಸಂಪನ್ಮೂಲಗಳನ್ನು ತಾನು ಕ್ರೌಡೀಕರಿಸುವುದಲ್ಲದೇ ಸದಸ್ಯರೊಡನೆಯೇ ವ್ಯವಹಾರ ನಡೆಸಿ ಲಾಭದಾಯಕವಾಗಿ ನಡೆಸುವ ಅನಿವಾರ್ಯತೆಯೂ ಇದೆ ಎಂಬುದನ್ನು ಒಪ್ಪಲೇಬೇಕು.

ಈ ಪರಿಸರದಲ್ಲಿ ಕರ್ತವ್ಯನಿರ್ವಹಿಸಬೇಕಾದ ಬಾಗೀದಾರರಾದ ಕಾರ್ಯಕರ್ತರ ಕರ್ತವ್ಯ ಜವಬ್ದಾರಿಗಳನ್ನು ಅರಿಯಬೇಕಾಗಿರುವುದು ಮತ್ತು ಅದರಂತೆ ನಡೆದು ಕೊಳ್ಳಬೇಕಾಗಿರುವುದು ಇಂದಿನ ಅವಶ್ಯಕತೆ. ಸಹಕಾರ ಸಂಘದ ವೈಶಿಷ್ಟ್ಯ ಎಂದರೆ ಸದಸ್ಯರೇ ಅದರ ಯಜಮಾನರೂ ಹೌದು ಅದರ ಗ್ರಾಹಕರೂ ಹೌದು. ಸಹಕಾರ ಸಂಘ ಏಳಿಗೆ ಆಗಬೇಕು. ಯಶಸ್ವಿ ಆಗಬೇಕು ತನ್ಮೂಲಕ ಸಹಕಾರ ಚಳುವಳಿ ಯಶಸ್ವಿ ಆಗಬೇಕು ಎಂದಾಗ ಸದಸ್ಯರ ಪಾತ್ರ ಅತಿಮುಖ್ಯ ಜವಾಬ್ದಾರಿಯುತ 'ಆಡಳಿತ ಮಂಡಳಿ ಆಯ್ಕೆ ಮತ್ತು ಸಹಕಾರ ಸಂಘದ ಉದ್ದೇಶಗಳ ಈಡೇರಿಕೆ ದಿಸೆಯಲ್ಲಿ ತನ್ನ ಕರ್ತವ್ಯವನ್ನು ಅರಿತು ನಡೆದುಕೊಳ್ಳುವುದು. ಸಂವಿಧಾನದ ತಿದ್ದುಪಡಿಯಿಂದಾಗಿ ಸಹಕಾರ ಕಾಯ್ದೆಯಡಿಯಲ್ಲಿ ಅಳವಡಿಸಿಕೊಂಡಿರುವಂತೆ ಸದಸ್ಯ ಮತದಾನದ ಹಕ್ಕು ಪಡೆಯುವಂತಾಗಲೂ ಕಳೆದ ಐದು ವರ್ಷದ ಮಹಾಸಭೆಗಳಲ್ಲಿ ಕನಿಷ್ಠ ಮೂರು ಮಹಾಸಭೆಗಳಲ್ಲಿ ಭಾಗವಹಿಸಬೇಕು ಮತ್ತು ಉಪನಿಯಮಗಳಲ್ಲಿ ಆಳವಡಿಸಿಕೊಂಡಂತೆ ಕನಿಷ್ಠ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಂಡಿರಬೇಕು. ಆಡಳಿತಮಂಡಳಿಯು ಅತ್ಯುತ್ತಮ ಸೂತ್ರಗಳಾದ. ಕರ್ತವ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಆಡಳಿತದಲ್ಲಿ ಎಲ್ಲರ ಪಾಲ್ಗೊಳ್ಳಿವಿಕೆ. ನಿರ್ಣಯಗಳನ್ನು ತೆಗೆದುಕೊಳ್ಳವಲ್ಲಿ ಮುಂದಾಲೋಚನೆ ಸದಸ್ಯರಿಗೆ ತಾವು ಹೊಣೆಗಾರರು. ಉತ್ತರದಾಯಿತ್ವವನ್ನು ಹೊಂದಿದ್ದೇವೆ ಎಂಬ ಭಾವ. ಸಿಬ್ಬಂದಿಯ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ವ್ಯವಹಾರಿಕ ಜ್ಞಾನ, ದೃಷ್ಟಿ, ಸದಸ್ಯರ ಸೇವೆ ತಮ್ಮ ಗುರಿ ಎಂಬ ಅರಿವು, ಅದರಂತೆ ಅವರ ನಡವಳಿಕೆ ಅವಶ್ಯ. ಇದರಿಂದ ಅವರ ಅಭ್ಯುಧಯವು ಸಾಧ್ಯ.

ಈ ಎಲ್ಲ ಸವಾಲುಗಳನ್ನು ಎದುರಿಸಲು ಸಹಕಾರಿ ಕಾರ್ಯಕರ್ತರು ಸಜ್ಜಾಗುವುದು ಇಂದಿನ ಅವಶ್ಯಕತೆ. ಸಂಘದ ಆಡಳಿತ ಚುಕ್ಕಾಣಿ ಇರುವುದು ಆಡಳಿತ ಮಂಡಳಿಯಲ್ಲಿ ಆಡಳಿತ ಮಂಡಳಿಯ ಅವಧಿ ಐದು ವರ್ಷಗಳು, ದೈನಂದಿನ ವ್ಯವಹಾರದ ಉಸ್ತುವಾರಿ ಪಧಾಧಿಕಾರಿಗಳ ಕೈಗಳಲ್ಲಿದೆ. ಅವರ ಅವಧಿಯೂ ಐದು ವರ್ಷಗಳು ಆಡಳಿತ ಮಂಡಳಿ ಸದಸ್ಯರು (ನಿರ್ದೇಶಕರು) ಮತ್ತು ಪಧಾಧಿಕಾರಿಗಳು ನಾಯಕರು, ಸಹಕಾರ ಸಂಘ ಯಶಸ್ವಿ ಕಾರ್ಯಾಚರಣೆ ಇವರು ಕಾಲಕಾಲಕ್ಕೆ

ತೆಗೆದುಕೊಳ್ಳುವ ನಿರ್ಧಾರವನ್ನು ಅವಲಂಭಿಸಿರುತ್ತದೆ. ಈ ನಿರ್ಧಾರಗಳು ವೃತ್ತಿಪರತೆಯಿಂದ ಕೂಡಿರತಕ್ಕದ್ದು, ಇದರ ಕೊರತೆ ಇದ್ದಲ್ಲಿ ವೃತ್ತಿಪರ ನಿರ್ದೇಶಕರ ಸಹಾಯ ಪಡೆಯುವುದು ದೈನಂದಿನ ವ್ಯವಹಾರಗಳು ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ ವೃತ್ತಿಪರತೆಯಿಂದ ಮೈಗೂಡಿರತಕ್ಕದ್ದು, ಸಿಬ್ಬಂದಿಯೂ ವೃತ್ತಿಪರತೆಯ ಪ್ರಮುಖ ಅಂಶ ತಾವು ಸಂಘಟಿತರಾಗಿ ನಡೆಸುತ್ತಿರುವ ಸಹಕಾರ ಸಂಘದ ಧ್ಯೇಯೋದ್ದೇಶಗಳ ಸ್ಪಷ್ಟ ಅರಿವು ಸಹಕಾರ ತತ್ವಗಳನ್ನಾಧರಿಸಿ ಸಹಕಾರ ನಡೆಸುವ ಬದ್ದತೆ, ಲಾಭದಾಯಕವಾಗಿ ನಡೆಸಿಕೊಂಡು ಹೋಗುವ ಜಾಣೆ. ಈ ರೀತಿ ಸಹಕಾರ ಸಂಘ ನಡೆಸಲು, ಬೆಳೆಸಲು ತಮ್ಮಲ್ಲಿರುವ ಸಾಮರ್ಥ್ಯದ ಅರಿವು ಸಾಮರ್ಥ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ಚಿಂತನೆ. ತಮ್ಮ ದೌರ್ಬಲ್ಯಗಳಾವುವು? ಅವುಗಳನ್ನು ಪರಿಹರಿಸುವ ಬಗ್ಗೆ ವ್ಯವಹಾರಗಳನ್ನು ವೃದ್ಧಿಸುವಲ್ಲಿ, ಸದಸ್ಯರ ಅವಶ್ಯಕತೆ ಪೂರೈಸುವಲ್ಲಿ ಇರುವ ಅವಕಾಶಗಳಾವುವು? ಅವುಗಳನ್ನು ಬಳಸಿಕೊಳ್ಳುವ ಬಗೆ ಹೇಗೆ? ತಮ್ಮ ಮುಂದಿರುವ ಬೆದರಿಕೆಗಳಾವುವು? ಅವುಗಳನ್ನು ಎದರಿಸುವ ಬಗ್ಗೆ ನಡೆದುಕೊಳ್ಳಬೇಕಾದ ನಡೆಗಳಾವುವು? ಈ ರೀತಿಯ ಸಹಕಾರ ಸಂಘದ ವಿಶ್ಲೇಷಣೆ ನಡೆಸಿ ಅನುಸರಿಸಿ ಮಾರ್ಗೋಪಾಯಗಳ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳತಕ್ಕದ್ದು ಪ್ರತಿಯೊಂದು ವ್ಯವಹಾರದಲ್ಲಿ ಸ್ಪಷ್ಟ ಸಾಧನೆ ಮಾಡಬಲ್ಲ ಗುರಿಗಳನ್ನು ನಿಗದಿಪಡಿಸಿಕೊಂಡು ಗುರಿಮುಟ್ಟಲು ಅಗತ್ಯ ಸಾಧನೆ ಸೌಕರ್ಯಗಳನ್ನು ನಿರ್ಮಿಸಿಕೊಳ್ಳುವುದು ಇದರಿಂದ ಯೋಜನಾಬದ್ಧ ಬೆಳವಣಿಗೆ ಸಾಧ್ಯ.

ಹಾಲಿ ನಡೆಸುತ್ತಿರುವ ವ್ಯವಹಾರಗಳನ್ನೂ ಇನ್ನೂ ಹೆಚ್ಚಿನ ಕಾರ್ಯಕ್ಷಮತೆಯಿಂದ ನಡೆಸಲು ಇರುವ ಮಾರ್ಗೋಪಾಯಗಳನ್ನು ಹುಡುಕಿ ವ್ಯವಹಾರಗಳನ್ನು ಹಿಗ್ಗಿಸುವುದು ಲಾಭಗಳನ್ನು ಹೆಚ್ಚಿಸುವುದು. ಲಾಭದಿಂದ ವ್ಯವಹಾರ ನಡೆಸಿದಾಗಲೇ ಸೇವೆ ಒದಗಿಸಲು ಸಾಧ್ಯ. ಇದರೊಡನೆ ನೂತನ ವ್ಯವಹಾರಗಳ ಆವಿಷ್ಕಾರ ಬಹಳ ಮುಖ್ಯ ಕೇವಲ ಸಂಪ್ರಾದಾಯಿಕ ವ್ಯವಹಾರಗಳಿಂದ ಸಹಕಾರ ಸಂಘ ಮುನ್ನಡೆಸಲು ಸಾಧ್ಯವಾಗುವುದಿಲ್ಲ. 'ಬದಲಾವಣೆ ಜಗದ ನಿಯಮ ಎಂಬ ಮಾತಿದೆ. ಬದಲಾವಣೆಗೆ ಸೂಕ್ತ ಹೊಂದಾಣಿಕೆಗಳು ಅದಕ್ಕೆ ತಕ್ಕಂತೆ ವ್ಯವಹಾರಿಕ ಕೌಶಲ್ಯಗಳನ್ನು ರೂಡಿಸಿಕೊಳ್ಳಲೇಬೇಕು. ಏಕೆಂದರೆ ಇದು ಅಳಿವು ಉಳಿವಿನ ಪ್ರಶ್ನೆ, ಡಾರ್ವಿನ್‌ನ ತತ್ವ 'ಅಳಿವಿಗಾಗಿ ಹೋರಾಟ ಸಮರ್ಥರು ಮಾತ್ರ ಉಳಿಯುತ್ತಾರೆ ಎಂಬುದು ಇಲ್ಲಿಯೂ ಅನ್ವಯವಾಗುತ್ತದೆ. ಖಾಸಗೀಕರಣದ ಭರಾಟೆಯಲ್ಲಿ ಸಹಕಾರ ಕಾಯ್ದೆಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ಸಹಕಾರ ಸಂಘಗಳು ಪಾಲುದಾರಿಕೆ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬಹುದು. ಇತರೆ ಸಂಸ್ಥೆಗಳೊಡನೆ ಸಹಯೋಗದಿಂದ ಯೋಜನೆಗಳನ್ನು ಕೈಗೊಳ್ಳಬಹುದು. ಈ ಅವಕಾಶಗಳನ್ನು ಸಹಕಾರ ಸಂಘಗಳು ಯಾವ ರೀತಿಯಲ್ಲಿ ಉಪಯೋಗಿಸಿಕೊಂಡು ಸದಸ್ಯರ ಆವಶ್ಯಕತೆಗಳ ಆಕಾಂಕ್ಷೆಗಳ ಪೂರೈಕೆಗೆ ಶ್ರಮಿಸಬಹುದು ಎಂಬುದರ ಆಲೋಚಿಸಿ ಕ್ರಮ ಕೈಗೊಳ್ಳವುದು ಸಹಕಾರ ಕಾರ್ಯಕರ್ತರ ಇಂದಿನ ಅವಶ್ಯಕತೆ.

************************************************************************************************

## 23. ಭಾರತ ಸರ್ಕಾರದಲ್ಲಿ – ಸಹಕಾರ ಸಚಿವಾಲಯ ಸಾಧಕ ಬಾಧಕಗಳು

ಭಾರತ ಸರ್ಕಾರದಲ್ಲಿ ನೂತನವಾಗಿ ಸಹಕಾರ ಸಚಿವಾಲಯ ಸೃಷ್ಠಿಯಾಗಿದೆ. ಈ ಸಂದರ್ಭ ಭಾರತದಲ್ಲಿ ಸಹಕಾರ ಚಳುವಳಿ ಅದಕ್ಕೆ ಪೂರಕವಾಗಿ ಸಹಕಾರ ಕಾಯ್ದೆ ಬೆಳೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡುವುದು ಮತ್ತು ಸಚಿವಾಲಯ ಸೃಷ್ಠಿಯ ಸಾಧಕ ಬಾಧಕಗಳನ್ನು ವಿಶ್ಲೇಷಿಸುವುದು ಈ ದಿನದ ಅವಶ್ಯಕತೆ.

ಭಾರತದಲ್ಲಿ ಸಹಕಾರ ಚಳುವಳಿಯ ಉಗಮಕ್ಕೆ ಕಾರಣ ಭಾರತದ ಸಹಕಾರ ಪತ್ತು ಕಾಯ್ದೆ 1904. ಇದನ್ನು ಜಾರಿ ಮಾಡಿದ್ದು ಅಂದಿನ ಬ್ರಿಟಿಷ್ ಇಂಡಿಯಾ ಸರ್ಕಾರ. ತದನಂತರ ಮಾಂಟೆಗೋ ಚೆಲ್ಸಮ್‌ಫರ್ಡ್ ಸುಧಾರಣೆಗಳ

ಶಿಫಾರಸ್ಸಿನಂತೆ ಸಹಕಾರ ವಿಷಯವನ್ನು ಪ್ರಾಂತೀಯ ಸರ್ಕಾರಗಳಿಗೆ ವರ್ಗಾಯಿಸಲಾಯಿತು. ಆಗಿನ ಚಿಂತನೆ ಭಾರತದ ಕೃಷಿಕರ ಬವಣೆಗಳನ್ನು ತಪ್ಪಿಸಲು ಕಂಡುಕೊಂಡ ಮಾರ್ಗ ಸಹಕಾರ ಚಳುವಳಿ. ಅದರಂತೆ ಭಾರತ ಸರ್ಕಾರ ಸಹಕಾರ ಸಂಘಗಳ ಮೂಲಕ ಕೃಷಿಕರಿಗೆ ದುಡಿಯುವ ಬಂಡವಾಳ ಒದಗಿಸುತ್ತಿದ್ದ ಜವಾಬ್ದಾರಿಯನ್ನು ಪ್ರಾಂತೀಯ ಸರ್ಕಾರಗಳೇ ವರ್ಗಾಯಿಸಿತು. ಆ ಜವಾಬ್ದಾರಿ ಪ್ರಾಂತೀಯ ಸರ್ಕಾರಗಳ ಹೆಗಲೇರಿತು. ಭಾರತದ ಕಾಯ್ದೆ 1935 ರಲ್ಲಿಯೂ ಅದು ಮುಂದುವರೆದು ಸಹಕಾರದ ವಿಷಯ ಪ್ರಾಂತೀಯ ಸರ್ಕಾರದ್ದಾಯ್ತು.

ಇದರ ಮುಂದುವರಿಕೆ ಭಾಗವಾಗಿ ಸಹಕಾರದ ವಿಷಯ ಭಾರತದ ಸಂವಿಧಾನದ ಏಳನೇ ಷೆಡ್ಯೂಲ್‌ನಲ್ಲಿ ರಾಜ್ಯಪಟ್ಟಿಯಲ್ಲಿ 32ನೇ ವಿಷಯವಾಗಿ ಸೇರಿಕೆಯಾಯ್ತು. ಪ್ರಾಂತ್ಯ ಮೀರಿ ಕಾರ್ಯವ್ಯಾಪ್ತಿಯುಳ್ಳ ಸಹಕಾರ ಸಂಘಗಳ ಸ್ಥಾಪನೆ ಅಗತ್ಯ ಕಂಡು ಬಂದಿದ್ದರಿಂದ ಭಾರತ ಸರ್ಕಾರವು ಬಹು ಘಟಕ ಸಹಕಾರ ಕಾಯ್ದೆ 1942ನ್ನು ಜಾರಿ ಮಾಡಿತು. ತದ ನಂತರದಲ್ಲಿ ಲೋಕ ಸಭೆಯು ರಾಜ್ಯವ್ಯಾಪ್ತಿ ಮೀರಿ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಸ್ಥಾಪನೆಗಾಗಿ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 1984ನ್ನು ಜಾರಿಗೆ ತಂದಿತು. (ಭಾರತದ ಸಂವಿಧಾನ ಏಳನೇ ಷೆಡ್ಯೂಲ್, ಒಕ್ಕೂಟ ಪಟ್ಟಿಯ 44ನೇ ವಿಷಯ ಅನುಸರಿಸಿ). ಸಹಕಾರ ಮತ್ತು ಕೃಷಿ ಅವಿಭಾಜ್ಯ ಅಂಗಗಳೆಂದೇ ಪರಿಗಣಿಸಿ ಒಕ್ಕೂಟದ ಸರ್ಕಾರದ ಕೃಷಿ ಕಾರ್ಯದರ್ಶಿಗಳೇ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ಆಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಬಹುರಾಜ್ಯ ಸಹಕಾರ ಕಾಯ್ದೆ 2002 ರಲ್ಲಿ ಸಮಗ್ರ ತಿದ್ದುಪಡಿಯಾಗಿ ಅಸ್ತಿತ್ವದಲ್ಲಿರುತ್ತದೆ. ಈ ಕಾಯ್ದೆಯಡಿಯಲ್ಲಿ ಸುಮಾರು ಆರುನೂರು ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರದಲ್ಲಿ ಒಟ್ಟಾರೆ ಆರು ಲಕ್ಷಕ್ಕೂ ಮೀರಿ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.

ಈಗ ಭಾರತ ಸರ್ಕಾರವು ಸಹಕಾರ ಸಚಿವಾಲಯವನ್ನು ಕೃಷಿಯಿಂದ ಬೇರ್ಪಡಿಸಿ ಪ್ರತ್ಯೇಕ ಸಚಿವಾಲಯವಾಗಿ ಅದಕ್ಕೆ ಸಂಪುಟ ದರ್ಜೆ ಮತ್ತು ರಾಜ್ಯ ಸಹಕಾರ ಸಚಿವರನ್ನು ನೇಮಿಸಿರುತ್ತದೆ. ಈ ಸರ್ಕಾರದ ನಡೆಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಒಕ್ಕೂಟ ಸರ್ಕಾರದ ನಡೆ ರಾಜ್ಯ ವ್ಯಾಪ್ತಿ ವಿಷಯದಲ್ಲಿ ಅದರ ಹಸ್ತಕ್ಷೇಪ, ಸವಾರಿ ನಡೆಸಲಾಗುತ್ತದೆಯೆ ಎಂಬ ಆತಂಕ ಮನೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ಸಚಿವಾಲಯದ ಸೃಷ್ಠಿಯಿಂದ ಸಾಧಕ ಬಾಧಕಗಳನ್ನು ಪರಿಶೀಲಿಸಬೇಕಾಗಿದೆ.

ಭಾರತ ಸರ್ಕಾರವು ಭಾರತದ ಒಟ್ಟಾರೆ ಆರ್ಥಿಕತೆಯ ಮತ್ತು ಕೃಷಿ, ಕೃಷಿ ಪೂರಕ, ಕೃಷಿ ಅವಲಂಭಿತ ಆರ್ಥಿಕತೆಯ ಬೆಳವಣಿಗೆಯ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಭಾರತದ ಸ್ವಾತಂತ್ರ್ಯ ನಂತರ ಇದಕ್ಕೆ ಪೂರಕವಾಗಿ ಭಾರತ ಸರ್ಕಾರವು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ), ನಬಾರ್ಡ್, ಭಾರತೀಯ ರಿಸರ್ವ ಬ್ಯಾಂಕಿನಲ್ಲಿ ಕೃಷಿ ಅಬಿವೃದ್ಧಿ ವಿಭಾಗ ಸ್ಥಾಪಿಸಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ದೀರ್ಘಾವಧಿ, ಮಧ್ಯಮಾವಧಿ, ಅಲ್ಪಾವಧಿ ಕೃಷಿ ಸಾಲಗಳನ್ನು ಕೃಷಿಕರಿಗೆ ಒದಗಿಸಲು ಪುನರ್ಧನ ಸೌಲಭ್ಯ, ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ, ಷೇರು ಬಂಡವಾಳ, ಸಬ್ಸಿಡಿ, ಮೆಧು ಸಾಲ ಒದಗಿಸಿ ಪ್ರೋತ್ಸಾಹಿಸಿದೆ.

ತೊಂಭತ್ತರ ದಶಕದಿಂದ ಭಾರತದ ಆರ್ಥಿಕ ನೀತಿಯ ಬದಲಾವಣೆಯಿಂದ ಈ ರೀತಿಯ ಯೋಜನಾಬದ್ಧ ಸವಲತ್ತುಗಳ ಒದಗಿಸುವಿಕೆಯಲ್ಲಿ ಕಡಿತ ಮತ್ತು ವ್ಯತ್ಯಯಗಳನ್ನು ಕಾಣುತ್ತಲಿದ್ದೇವೆ. ಬೆಂಬಲವನ್ನು ನಿರೀಕ್ಷಿಸಲಾರದಂತಹ ಪರಿಸರ ನಿರ್ಮಾಣವಾಗಿದೆ. ಆದಾಯ ತೆರಿಗೆಯೂ ಸೇರಿದಂತೆ ಸಾರ್ವಜನಿಕರಿಗೆ ಅನ್ವಯವಾಗುವ ಕಾಯ್ದೆಗಳಲ್ಲಿ ಸಹಕಾರಕ್ಕೆ ಇದ್ದ ಸವಲತ್ತು (Privilages) ಗಳನ್ನು ತೆಗೆದು ಹಾಕಲಾಗಿದೆ.

ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳ ಪುನರ್‌ರಚನೆಯ ನಂತರ ಎಲ್ಲ ರಾಜ್ಯಗಳು ತಮ್ಮದೇ ಆದ

ರಾಜ್ಯ ಸಹಕಾರ ಕಾಯ್ದೆಗಳನ್ನು ಜಾರಿ ಮಾಡಿವೆ. ಆದರೂ ಈ ಕಾಯ್ದೆಗಳಲ್ಲಿ ಅತ್ಯಂತ ಹೆಚ್ಚಿನ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ಇದಕ್ಕೆ ಕಾರಣ ಅಂದಿನ ಭಾರತ ಸರ್ಕಾರ ಮಾದರಿ ಸಹಕಾರ ಕಾಯ್ದೆ ರಚನೆ ಮಾಡಿ ರಾಜ್ಯಗಳಿಗೆ ಅಳವಡಿಸಿಕೊಳ್ಳಲು ಕಳುಹಿಸಿದ್ದೇ ಕಾರಣ ಎಂದರೆ ತಪ್ಪಾಗಲಾರದು. ತದನಂತರದ ಬೆಳವಣಿಗೆಯಲ್ಲಿ ಆಯಾ ರಾಜ್ಯ ಕಾಯ್ದೆಗಳಲ್ಲಿ ತಿದ್ದುಪಡಿಯಾಗಿ ರಾಜ್ಯ ಸರ್ಕಾರಗಳು ಸಹಕಾರ ಸಂಘಗಳನ್ನು ಅತಿ ನಿಯಂತ್ರಣ ಮಾಡುತ್ತಿವೆ. ಸಹಕಾರದ ಮತ್ತು ತನ್ಮೂಲಕ ಆರ್ಥಿಕ ಬೆಳವಣಿಗೆಗೆ ಧಕ್ಕೆಯಾಗುತ್ತಿದೆ. ಅವುಗಳ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗೆ ಧಕ್ಕೆಯಾಗುತ್ತಿದೆ. ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅರ್ಥವಿಲ್ಲದಂತಾಗಿದೆ ಎಂದು ಭಾವಿಸಿದಾಗ ಭಾರತ ಸರ್ಕಾರ ಮೊದಲಿಗೆ ಈ ತರಹದ ಕಾಯ್ದೆಯಾತ್ಮಕ ಅಂಶಗಳನ್ನು ತೆಗೆಯಲು ನಿರ್ದೇಶನ ನೀಡಿತಾದರೂ ಯಾವುದೇ ರಾಜ್ಯ ಸರ್ಕಾರಗಳು ಇದಕ್ಕೆ ಮಾನ್ಯತೆ ನೀಡದೆ ಇದ್ದಾಗ ಪ್ರತ್ಯೇಕ ಪರ್ಯಾಯ ಕಾಯ್ದೆ ಜಾರಿಗೆ ತರುವಂತೆ ನಿರ್ದೇಶನ ನೀಡಿತು. ಅದರಂತೆ ಮೊದಲಿಗೆ ಆಂಧ್ರ (ಅವಿಭಾಜಿತ) ರಾಜ್ಯ ಆದರ್ಶ ಸಹಕಾರ ಕಾಯ್ದೆ ಜಾರಿಗೆ ತಂದಿತು. ತದನಂತರ ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಕಾಯ್ದೆ ಜಾರಿಗೆ ತರಲಾಯಿತು. ಈಗಲೂ ಕೇವಲ ಎಂಟು ರಾಜ್ಯಗಳಲ್ಲಿ ಮಾತ್ರ ಈ ರೀತಿಯ ಕಾಯ್ದೆ ಜಾರಿಯಲ್ಲಿದೆ. ತದನಂತರ 97ನೇ ಸಂವಿಧಾನ ತಿದ್ದುಪಡಿ 2011 ಜನವರಿಯಿಂದ ಜಾರಿಗೆ ತಂದದ್ದು ಈಗ ಇತಿಹಾಸ. ಭಾರತದ ಸಹಕಾರ ಚಳವಳಿಯಲ್ಲಿ ಒಂದು ಮೈಲಿಗಲ್ಲು ಎಂದೇ ಪರಿಗಣಿಸಲಾಗಿದೆ. ಸಹಕಾರ ಸಂಘದ ಸ್ಥಾಪನೆ ಒಬ್ಬ ಭಾರತೀಯ ಪ್ರಜೆಯ ಮೂಲಭೂತ ಹಕ್ಕಾಗಿ ಪರಿಗಣನೆಗೆ ಆಯ್ದು (ಅನುಚ್ಛೇದ 19), ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ ಪ್ರೋತ್ಸಾಹಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಲಾಗಿದೆ (ಅನುಚ್ಛೇದ 34ಬಿ). ಇದಕ್ಕೆ ಪೂರಕವಾಗಿ ಅನುಚ್ಛೇದ 243ಝಡ್ಐ ನಿಂದ ಝಡ್‌ಟಿ ವರೆಗೆ, ಆಡಳಿತ ಮಂಡಳಿ ಅವಧಿ, ವೃತ್ತಿಪರ ನಿರ್ದೇಶಕರ ನೇಮಕಾತಿಗೆ ಅವಕಾಶ, ಪ್ರತ್ಯೇಕ ಚುನಾವಣಾ ಪ್ರಾಧಿಕಾರರಚನೆ, ಸರ್ಕಾರದ ಸಹಾಯ ಇಲ್ಲದ ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ಧತಿಗೆ ನಿಷೇಧ ಇಂತಹ ಆಡಳಿತಾತ್ಮಕ ಅಂಶಗಳನ್ನು ವಿಸ್ತೃತವಾಗಿ ಒಳಗೊಂಡಿದೆ. ರಾಜ್ಯ ಸರ್ಕಾರಗಳಿಗೆ ಮತ್ತು ಬಹುರಾಜ್ಯ ಸಹಕಾರ ಕಾಯ್ದೆಗೂ ಇದು ಅನ್ವಯಿಸುತ್ತದೆ ಮತ್ತು ಅವಶ್ಯ ಕಾಯ್ದೆ ತಿದ್ದುಪಡಿಗೆ ಒಂದು ವರ್ಷದ ಅವಧಿಯನ್ನು ನಿಗದಿಪಡಿಸಲಾಗಿತ್ತು. ಸಹಕಾರ ಸಂಘಗಳಿಗೆ ಅನ್ವಯವಾಗುವಂತಿರುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಇತ್ತೀಚೆಗೆ ತಿದ್ದುಪಡಿಯಾಗಿದೆ. ಇದರಂತೆ ಪ್ರಾಥಮಿಕ (ಪಟ್ಟಣ) ಸಹಕಾರ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ರಾಜ್ಯ ಸಹಕಾರ ಬ್ಯಾಂಕ್‌ಗಳ ಆಡಳಿತ ನಿಯಂತ್ರಣವನ್ನು ಬಹುತೇಕ ಭಾರತೀಯ ರಿಸರ್ವ್ ಬ್ಯಾಂಕ್ ವಹಿಸಿಕೊಂಡಂತಾಗಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಸಚಿವಾಲಯದ ಒಂದು ಭಾಗವಾಗಿದ್ದ ಸಹಕಾರ ಪ್ರತ್ಯೇಕ ಸಚಿವಾಲಯ ವಾಗಿರುವುದರಿಂದ, ಆಗಬಹುದಾದ ಬದಲಾವಣೆಗಳು ಮತ್ತು ಭಾರತದ ಸಹಕಾರ ಚಳುವಳಿಯ ಮೇಲೆ ಆಗುವ ಪರಿಣಾಮಗಳೇನು ಎಂಬ ವಿಸ್ತೃತ ಚರ್ಚೆ ಅಗತ್ಯವಾಗಿ ಆಗಬೇಕಾಗಿದೆ.

ಭಾರತ ಸರ್ಕಾರದ ಸಹಕಾರ ಸಚಿವಾಲಯ ಕೇವಲ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ ವ್ಯಾಪ್ತಿಯಲ್ಲಿ ಬರುವ ಸಹಕಾರ ಸಂಘಗಳ ನೋಂದಣಿ, ನಿಯಂತ್ರಣ, ಬೆಳವಣಿಗೆ, ಅಭಿವೃದ್ಧಿ ಅಂಶಗಳಿಗೆ ಒತ್ತು ನೀಡುತ್ತದೆಯೇ? ಪ್ರತ್ಯೇಕ ಸಚಿವಾಲಯವಾದುದರಿಂದ ಪ್ರತ್ಯೇಕ ನಿಬಂಧಕರ ನೇಮಕಾತಿ ಅವಶ್ಯಕತೆ ಇದೆ. ಅದರಂತೆ ಈ ಸಹಕಾರ ಸಂಘಗಳು ಹೆಚ್ಚು ದಕ್ಷತೆಯಿಂದ, ಸದಸ್ಯರಿಗೆ ಹೊಣೆಗಾರರಿಗೆ ಅವರ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನು ಈಡೇರಿಸಲು ಸಹಕಾರಿಯಾಗುತ್ತದೆಯೇ? ಕೇಂದ್ರ ಸ್ಥಾನ ನವದೆಹಲಿ ಯಾಗಿರುವುದರಿಂದ ಸಂಘಗಳಲ್ಲಿನ ವಿವಾದಗಳ ಇತ್ಯರ್ಥ, ಸಿಬ್ಬಂದಿಯ, ಸದಸ್ಯರ ಕುಂದುಕೊರತೆಗಳ ನಿವಾರಣೆಗೆ ವಿಕೇಂದ್ರೀಕೃತ ವಿಸ್ತೃತ ವ್ಯವಸ್ಥೆ ನಿರ್ಮಾಣಕ್ಕೆ ಕಾರಣವಾಗುತ್ತದೆಯೇ? ಹತ್ತು ಹಲವಾರು ವಿನೂತನ, ಆಧುನಿಕ ಅವಶ್ಯಕತೆಗಳ ಪೂರೈಕೆ, ಯುವಜನರ, ಮಹಿಳೆಯರ ಸಬಲತೆಗೆ ಕಾರಣವಾಗಬಲ್ಲ

ಸಹಕಾರ ಸಂಘಗಳ ಸ್ಥಾಪನೆಗೆ ಬೆಂಬಲ, ಪ್ರೋತ್ಸಾಹ ದೊರೆಯುತ್ತದೆಯೇ? ಈ ದಿಸೆಯಲ್ಲಿ ರಾಷ್ಟ್ರಮಟ್ಟದ ಬೃಹತ್ ಸಹಕಾರ ಸಂಸ್ಥೆಗಳ ಸಭೆಯಲ್ಲಿ ಉತ್ತೇಜನಯುತ ಮಾತುಗಳನ್ನಾಡಿರುವುದು ಸಂತಸದ ಸಂಗತಿಯಾಗಿದೆ.

ಎನ್.ಸಿ.ಡಿ.ಸಿ. ನಬಾರ್ಡ್, ಶಿಕ್ಷಣ ತರಬೇತಿ ಜವಾಬ್ದಾರಿ ಹೊಂದಿರುವ ಎನ್.ಸಿ.ಸಿ.ಟಿ. ಸಂಸ್ಥೆಗಳಿಗೆ ಪ್ರತ್ಯೇಕ ಸಚಿವಾಲಯದಿಂದ ಹೆಚ್ಚು ಆರ್ಥಿಕ ನೆರವು ಪಡೆದು ಹೆಚ್ಚಿನ ಸಾಮರ್ಥ್ಯದೊಡನೆ ರಾಷ್ಟ್ರದಾದ್ಯಂತ ಸಹಕಾರ ಸಂಘಗಳ ಬಲವರ್ಧನೆಗೆ ಕಾರಣವಾಗಬಲ್ಲದು ಎಂದು ನಿರೀಕ್ಷಿಸಬಹುದೇ? ಸಚಿವಾಲಯವು ಈ ಅಂಶಗಳಿಗೆ ಸಂಬಂಧಿಸಿದಂತೆ ವೇಗವರ್ಧಕವಾಗಿ ಕಾರ್ಯನಿರ್ವಹಿಸಬಲ್ಲುದೇ? ರದ್ದಾಗಿರುವ ಸವಲತ್ತುಗಳನ್ನು ಪುನಃ ಒದಗಿಸಬಲ್ಲುದೇ?

ಒಕ್ಕೂಟ (ಕೇಂದ್ರ) ಸಹಕಾರ ಸಚಿವಾಲಯವು 97ನೇ ಸಂವಿಧಾನ ತಿದ್ದುಪಡಿ ಅಂಶಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಉಸ್ತುವಾರಿ, ಅನುಪಾಲನೆ ಮೇಲೆ ಕ್ರಮಗಳು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ, ಹಲವು ರಾಜ್ಯಗಳಲ್ಲಿ ಅತ್ಯುತ್ತಮವಾಗಿ ಮೂಡಿಬಂದಿರುವ ಸಹಕಾರ ಚಳುವಳಿ (ಉದಾ: ಕೇರಳ)ಯನ್ನು ಇತರೆ ಸಹಕಾರದಲ್ಲಿ ಹಿಂದಿರುವ ರಾಜ್ಯಗಳಿಗೆ, ಪರಿಚಯಿಸುವ, ಸ್ಥಾಪಿಸುವ ಉತ್ತೇಜಿಸುವ ಕ್ರಮಗಳನ್ನು ನಿರೀಕ್ಷಿಸಬಹುದೇ?

ಸಹಕಾರ ವಲಯವು ಆರ್ಥಿಕ, ಸಾಮಾಜಿಕ ನ್ಯಾಯದೊಡನೆ ರಾಜಕೀಯ ನಾಯಕತ್ವದ ಬೆಳವಣಿಗೆಗೆ ಕಾರಣವಾಗಿದೆ ಎಂಬುದು ಸತ್ಯಕ್ಕೆ ದೂರವಲ್ಲ. ಬಲಯುತ ಒಕ್ಕೂಟ (ಕೇಂದ್ರ) ಸರ್ಕಾರವು ರಾಜ್ಯದ ಸಹಕಾರ ವಿಷಯದಲ್ಲಿ ಹಸ್ತಕ್ಷೇಪ ಮಾಡದೆ, ಹಿತಾಸಕ್ತಿ ಸಂಘರ್ಷಕ್ಕಿಳಿಯದೇ ಸಹಕಾರ ಸಂಘಗಳ ಬೆಳವಣಿಗೆಗೆ, ಚಳುವಳಿಯ ಬಲವರ್ಧನೆಗೆ ಪೂರಕವಾದ ಆರ್ಥಿಕ ಮತ್ತು ಸಹಕಾರ ಚಳುವಳಿಗೆ ಇಂಬುಕೊಡುವಂತಹ ಸಹಕಾರ ನೀತಿಯನ್ನು ಜಾರಿಗೆ ತರುತ್ತದೆಯೇ? ರಾಜ್ಯ ಸರ್ಕಾರಗಳ ಸಹಕಾರ ನೀತಿ, ಯೋಜನೆಗಳಿಗೆ ನಿಲ್ಲುತ್ತದೆಯೇ? ಹಲವು ರಾಜ್ಯ ಸರ್ಕಾರಗಳ ಈ ಅನುಮಾನ, ಆತಂಕಗಳನ್ನು ನಿವಾರಿಸುವ ಅವಶ್ಯಕತೆ ಕಂಡುಬರುತ್ತಿದೆ.

ಒಕ್ಕೂಟ (ಕೇಂದ್ರ) ಸರ್ಕಾರ, ರಾಜ್ಯ ಸರ್ಕಾರಗಳ ಅಂತರ ಸುಸಂಬಂಧವನ್ನು ಉಳಿಸಿಕೊಂಡು ಸಹಕಾರ ಚಳುವಳಿಯನ್ನು ಬೆಳೆಸುವುದು, ಭಾರತದ ಆರ್ಥಿಕತೆಯ ಸಮತೋಲನದ ಬೆಳವಣಿಗೆ, ಬಡತನ ನಿರ್ಮೂಲನೆ, ಆಹಾರ ಭದ್ರತೆ, ಉಳ್ಳವರು ಇಲ್ಲದವರ ನಡುವಿನ ಅಂತರ, ಕಂದಕ ನಿರ್ಮೂಲನೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಸಂವಿಧಾನದ ಆಶಯದ ಪೂರೈಕೆಗೆ ಸಹಕಾರಿಯಾಗುತ್ತದೆ. ಈ ದಿಸೆಯಲ್ಲಿ ನೂತನ ಸಹಕಾರ ಸಚಿವಾಲಯ ಕಾರ್ಯ ನಿರ್ವಹಿಸಲಿ ಎಂಬುದು ಸಹಕಾರಿಗಳ ಆಶಯ.

**********************************************************************************************

# 24. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ : ಚರ್ಚಾ ಸ್ಪರ್ಧೆ ಮರೆಯಲಾಗದ ಅನುಭವ – ಒಂದು ಅವಲೋಕನ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ದಿನಾಂಕ : 24ನೇ ಫೆಬ್ರವರಿ 2024 ರಂದು ಬೆಂಗಳೂರು ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಅದರ ಅರ್ಥಶಾಸ್ತ್ರ ವಿಭಾಗದ ಸಭಾಂಗಣದಲ್ಲಿ ಏರ್ಪಡಿಸಿದ್ದ ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಚರ್ಚಾ ಸ್ಪರ್ಧೆ ಬಗ್ಗೆ ನನ್ನ ಅನುಭವವನ್ನು ದಾಖಲಿಸಲು ಇಚ್ಛಿಸುತ್ತೇನೆ.

ಪ್ರಥಮವಾಗಿ ನನ್ನನ್ನು ಗುರುತಿಸಿ ತೀರ್ಪುಗಾರರಲ್ಲಿ ಒಬ್ಬನಾಗಿ ಕಾರ್ಯವೆಸಗಲು ಅವಕಾಶ ನೀಡಿದ ಮಹಾಮಂಡಳಕ್ಕೆ ಆಭಾರಿಯಾಗಿರುತ್ತೇನೆ. ಈ ಕಾರ್ಯಕ್ರಮವು ಉದ್ಘಾಟನೆಯಿಂದ ಅಂತಿಮವಾಗಿ ಬಹುಮಾನ ವಿತರಣೆಯವರೆಗೂ

ಮಹಾಮಂಡಳ ಕಾರ್ಯನಿರ್ವಹಿಸಿದ ರೀತಿ, ಶೈಲಿ, ಅತಿಥಿಗಳನ್ನು, ಸ್ಪರ್ಧಾ ಅಭ್ಯರ್ಥಿಗಳನ್ನು ಉಪಚರಿಸಿದ ರೀತಿ ನೀತಿಗಳು, ಅಚ್ಚುಕಟ್ಟುತನ ಶ್ಲಾಘನೀಯ ಅಷ್ಟೇ ಅಲ್ಲ, ಅನುಕರಣೀಯ ಎಂದರೆ ತಪ್ಪಾಗಲಾರದು. ಇಡೀ ಸಿಬ್ಬಂದಿ ಒಂದು ತಂಡವಾಗಿ ಬೃಹತ್ ಮತ್ತು ಮಹತ್ತರವಾದ ಕಾರ್ಯಕ್ರಮ ನಡೆಸಿಕೊಟ್ಟದ್ದು ಅಭಿನಂದಾನರ್ಹ.

ಚರ್ಚಾ ಸ್ಪರ್ಧಿಗಳು ಜಿಲ್ಲೆಗಳಿಂದ ಆರಿಸಲ್ಪಟ್ಟು ಕಳುಹಿಸಿದ್ದು, ಇದಕ್ಕೆ ಕಾರಣೀಭೂತರಾದ ಜಿಲ್ಲಾ ಒಕ್ಕೂಟಗಳು ಮತ್ತು ಕಾಲೇಜು, ವಿಶ್ವವಿದ್ಯಾಲಯಗಳ ಕಾರ್ಯ ಶ್ಲಾಘನೀಯ.

ಮಹಾಮಂಡಳ ನೀಡಿದ್ದ ವಿಷಯಗಳು ಅತ್ಯಂತ ಪ್ರಸ್ತುತ ವಿಷಯಗಳಾಗಿದ್ದು ಚರ್ಚಾ ಸ್ಪರ್ಧಿಗಳು ಪರ ಮತ್ತು ವಿರೋಧವಾಗಿ ಮಂಡಿಸಿದ ಭಾಷೆ, ವಿಷಯ ಜ್ಞಾನ ಮತ್ತು ಮಂಡಿಸಿದ ಶೈಲಿ ಅದ್ಭುತ ಮತ್ತು ಅಚ್ಚರಿ ಮೂಡಿಸುವಂತಿದ್ದು ಯುವ ಜನರಲ್ಲಿ ಹುದುಗಿದ ಅಂತರ್ ಶಕ್ತಿಯನ್ನು ಅಭಿವ್ಯಕ್ತಿ ಪಡಿಸಿದರು. ಅಲ್ಲದೆ ಸಹಕಾರ ಚಳುವಳಿಯ ಏಳು ಬೀಳುಗಳು ಸಾಮರ್ಥ್ಯ, ದೌರ್ಬಲ್ಯ, ಮತ್ತು ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಸಮರ್ಥವಾಗಿ ಬೆಳಕು ಚೆಲ್ಲಲು ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಿತು. ವಿದಾರ್ಥಿಗಳಿಗೆ ದೊರೆತ ಐದು ನಿಮಿಷಗಳಲ್ಲಿ ಅವರು ವಿಷಯ ಮಂಡಿಸಿದ ಶೈಲಿ, ಆರಂಭ ಪರಿಚಯ, ವಿಷಯ, ವಸ್ತು ವಿನ್ಯಾಸ ಮತ್ತು ಮಾತಿನ ಅಂತ್ಯಗೊಳಿಸುವಿಕೆ ಮನಮೋಹಕವಾಗಿತ್ತು. ಅವರುಬಳಸಿದ ನುಡಿಗಟ್ಟು, ಒಗಟು, ವಚನಗಳು, ತ್ರಿಪದಿ, ಮಂಕುತಿಮ್ಮನ ಕಗ್ಗ, ಅರ್ಥ ಪೂರ್ಣವಾಗಿದ್ದು, ಸಮಯೋಚಿತವೂ ಆಗಿದ್ದವು. ಅವರುಗಳು ಒದಗಿಸಿದ ಅಂಕಿ–ಅಂಶಗಳು(ಕೆಲವು ಹೊರತುಪಡಿಸಿ)ಅವರ ವಿಷಯ ಸಾಬೀತು ಪಡಿಸಲು ಸಹಕಾರಿಯಾಗಿದ್ದುದ್ದು ಅದ್ಭುತವಾದ ಅಂಶ ಎಂದೇ ಪರಿಗಣಿಸಬೇಕು. ಯುವ ಜನರಿಗೆ, ಮಹಿಳೆಯರಿಗೆ, ಅಬಲರಿಗೆ ಸಹಕಾರ ಸಂಘಗಳು ಅವಕಾಶ ನೀಡಬೇಕು ಎಂಬುದು ಪದವಿಪೂರ್ವ ವಿದ್ಯಾರ್ಥಿಗಳ ವಿಷಯ, ಸಹಕಾರವು ಪಠ್ಯ ಪುಸ್ತಕದ ವಿಷಯಾಗಬೇಕು, ಸಹಕಾರ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬುದುಪದವಿ ವಿದ್ಯಾರ್ಥಿಗಳ ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘಗಳಿಂದ ಮಾತ್ರ ಸಾಧ್ಯ ಎಂಬುದು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ವಿಷಯವಾಗಿತ್ತು.

ಪರ ಮಾತಾಡುವ ವಿಧ್ಯಾರ್ಥಿಗಳು ಯಥೇಚ್ಛ ಮಾಹಿತಿ ಸಂಗ್ರಹಿಸಿ ಬಲವಾಗಿ ಪ್ರತಿಪಾಧಿಸಿದರು. ವಿರೋಧ ಮಾತನಾಡಿದ ವಿದ್ಯಾರ್ಥಿಗಳ ಕೆಲಸ ನಿಜವಾಗಿ ಕಷ್ಟಕರ ಎಂದೆನಿಸಿತು. ಆದರೂ, ಆವಿದ್ಯಾರ್ಥಿಗಳು ಸಾಕಷ್ಟು ಮಾಹಿತಿ ಸಂಗ್ರಹಿಸಿ ಅಂಕಿ ಅಂಶಗಳನ್ನು ಒಳಗೊಂಡಂತೆ ಪ್ರತಿಪಾದಿಸಿ ಸಹಕಾರಿಗಳು ಸಹಕಾರ ಸಂಘ ಗಳನ್ನು ಬೆಳೆಸುವಲ್ಲಿ ಒಟ್ಟಾರೆ ಸಹಕಾರ ಚಳುವಳಿಯನ್ನು ಬಲಪಡಿಸುವಲ್ಲಿ ತಾವು ಒರಗೆ ಹಚ್ಚ ಬೇಕಾದ ಅಂಶಗಳು, ಮುಂದಿರುವ ಸವಾಲುಗಳು, ತಮ್ಮ ಮುಂದಿನ ಹಾದಿ, ತಾವು ಕಂಡು ಕೊಳ್ಳಬೇಕಾದ ಮಾರ್ಗೋಪಾಯಗಳ ಬಗ್ಗೆ ಆಲೋಚಿಸಲು ಪ್ರೇರೇಪಿಸಿತು. ಈ ಕೆಲವು ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

**1) ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳು;** ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಒಬ್ಬ ಸದಸ್ಯ ಒಂದು ಮತ ಆಗಿದ್ದು ಚುನಾಯಿತ ಆಡಳಿತ ಮಂಡಳಿ ಜವಾಬ್ಧಾರಿಯುತವಾಗಿ ಕರ್ತವ್ಯ ನಿರ್ವಹಿಸುತ್ತದೆಯೇ? ಆಡಳಿತದಲ್ಲಿ, ವ್ಯವಸ್ಥಾಪನೆಯಲ್ಲಿ ಉತ್ತಮ ಆಡಳಿತ (Good Governance, corporate Governance) ಸೂತ್ರಗಳನ್ನು ಪಾಲಿಸುತ್ತಿದೆಯೇ? ನಿರ್ಧಾರಗಳಲ್ಲಿ ಪಾರದರ್ಶಕತೆ ನಿಷ್ಪಕ್ಷ ಪಾತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆಯೇ? ಅನೇಕ ದುರುಪಯೋಗ ಪ್ರಕರಣಗಳು, ಸದಸ್ಯರ ಠೇವಣಿದಾರರ ಹಿತಾಸಕ್ತಿ ಕಾಪಾಡುವಲ್ಲಿ ವಿಫಲವಾಗುತ್ತಿಲ್ಲವೇ? ಇವು ಇತರೆ ಸಹಕಾರ ಸಂಘಗಳ ಒಟ್ಟಾರೆ ಚಳುವಳಿಯ ಮೇಲೆ ನಕಾರಾತ್ಮಕ ಪರಿಣಾಮ ಬೀಳುತ್ತಿಲ್ಲವೇ? ಎಲ್ಲ ರೀತಿಯ ಆಡಳಿತಕ್ಕಿಂತ ಪ್ರಜಾ ಪ್ರಭುತ್ವ ಅತ್ಯಂತ ಉತ್ತಮವಾದರೂ ಅದರಲ್ಲಿನ ಸ್ವಹಿತಾಸಕ್ತಿ ಅಪ್ರಾಮಾಣಿಕತೆ ಭ್ರಷ್ಟಾಚಾರ ಸಹಕಾರ ಸಂಸ್ಥೆಗಳಲ್ಲೂ ಹಬ್ಬಿ ಪಿಡುಗು ಆಗುತ್ತಿದೆಯಲ್ಲವೇ? ಸಮಾನತೆ ಸಹಕಾರದ ಒಂದುಪ್ರಮುಖ ಮೌಲ್ಯ. ಆದರೆ ಅದನ್ನು ಸಹಕಾರ ಸಂಘಗಳಲ್ಲಿ ಎಷ್ಟರ ಮಟ್ಟಿಗೆ ಪಾಲಿಸಲಾಗುತ್ತಿದೆ?

**2) ಸಹಕಾರ ಸಂಘಗಳಲ್ಲಿ ಆಧುನೀಕರಣ;** ಭಾರತವೂ ಒಂದು ದ್ವೀಪವಾಗದೇ ವಿಶ್ವದ ಉದಾರೀಕರಣ, ಖಾಸಗಿಕರಣ, ಜಾಗತೀಕರಣದ ಆರ್ಥಿಕ ನೀತಿಯನ್ನು ಅನುಸರಿಸಿ ಅದರ ಭಾಗವಾಗಿ ನಾಗಾಲೋಟದಿಂದ ಸಾಗುತ್ತಿದೆ. ಮೂರು ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಆರ್ಥಿಕತೆಯತ್ತ ಸಾಗುತ್ತಿದೆ. ಈ ಸಾಧ್ಯತೆಯಾಗುತ್ತಿರುವುದು ರಾಷ್ಟ್ರದ ಎಲ್ಲ ಭಾಗೀದಾರರೂ ಆಧುನಿಕತೆಯನ್ನು ಅಳವಡಿಸಿಕೊಂಡಿರುವುದರಿಂದ ಎಂದರೆ ತಪ್ಪಾಗುವುದಿಲ್ಲ. ಮೂಲಭೂತ ಸೌಕರ್ಯಗಳು, ಯಾಂತ್ರಿಕತೆ, ಮಾಹಿತಿ ತಂತ್ರಜ್ಞಾನದ ಅಳವಡಿಕೆಯಿಂದ. ಆದರೆ ಸಹಕಾರ ಸಂಘಗಳು ಎಷ್ಟರ ಮಟ್ಟಿಗೆ ಈ ಸೌಕರ್ಯಗಳನ್ನು ಸೃಷ್ಟಿಸಿಕೊಂಡಿವೆ? ಇದರ ಕೊರತೆಯಿಂದಲೇ ಸ್ಪರ್ಧಾತ್ಮಕ ಆರ್ಥಿಕ ಪ್ರಪಂಚದಲ್ಲಿ ಅವು ಹಿಂದುಳಿದಿದೆಯಲ್ಲವೇ? ಈ ಪ್ರಶ್ನೆಗಳು ಮುಂದಿನ ಅಂಶವಾದ ಒಟ್ಟಾರೆ ಆರ್ಥಿಕತೆಯಲ್ಲಿ ಸಹಕಾರದ ಪಾಲು ಎಷ್ಟಿದೆ? ಎಂಬ ಅಂಶವನ್ನು ಹುಟ್ಟು ಹಾಕುತ್ತದೆ.

**3) ಒಟ್ಟಾರೆ ಆರ್ಥಿಕತೆಯಲ್ಲಿ ಸಹಕಾರದ ಪಾಲು;** ರಾಷ್ಟ್ರಾದ್ಯಂತ 8.5 ಲಕ್ಷ ಸಹಕಾರ ಸಂಘಗಳು 30 ಕೋಟಿಗೂ ಮೀರಿ ಸದಸ್ಯತ್ವವಿದೆ. ಇದರಲ್ಲಿ 1.77 ಲಕ್ಷ ಸಹಕಾರ ಸಂಘಗಳು ಪತ್ತಿನ ಸಹಕಾರ ಸಂಘಗಳು. ಉಳಿದವು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಉದಾ: ಮೀನುಗಾರಿಕೆ, ಹೈನುಗಾರಿಕೆ, ಉತ್ಪನ್ನ, ಸಂಸ್ಕರಣೆ, (ರೂಪಾಂತರ), ಗ್ರಾಹಕರ, ಕೈಗಾರಿಕೆ, ಮಾರುಕಟ್ಟೆ, ಪ್ರವಾಸ, ಆಸ್ಪತ್ರೆ, ಗೃಹ (ವಸತಿ)ಸಾಗಾಣಿ, ಕಾರ್ಮಿಕ, ಕೃಷಿ, ಸೇವೆ, ಪಶು ಸಂಗೋಪನೆ, ವಿವಿದೋದ್ದೇಶ, ಸಹಕಾರ ಸಂಘಗಳಿವೆ. 96000 ಪ್ರಾ.ಕೃ.ಪ.ಸ.ಸಂ.ಗಳಿದ್ದು ಶೇ. 91 ಗ್ರಾಮಗಳನ್ನು ಆವರಿಸಿವೆ. ಇವುಗಳಲ್ಲಿ 63000 ಸ.ಸಂ. ಸದೃಢವಾಗಿದ್ದು ಚಟುವಟಿಕೆಗಳನ್ನು ನಡೆಸುತ್ತಿವೆ. ಒಟ್ಟಾರೆ ಆರ್ಥಿಕತೆಯಲ್ಲಿ ಸಹಕಾರದ ಪಾಲು; ಕೃಷಿ ಸಾಲ ಶೇ.25, ರಸಗೊಬ್ಬರ ವಿತರಣೆ ಶೇ.35, ರಸಗೊಬ್ಬರ ಉತ್ಪಾದನೆ ಶೇ.25, ಸಕ್ಕರೆ ಉತ್ಪಾದನೆ ಶೇ.31, ಹಾಲು ಉತ್ಪಾದನೆ, ಸಂಗ್ರಹಣೆ, ಮಾರುಕಟ್ಟೆ ಶೇ.25, ಗೋದಿ ಸಂಗ್ರಹಣೆ ಶೇ.13, ಭತ್ತ ಸಂಗ್ರಹಣೆ ಶೇ.20, ಮೀನು ಉತ್ಪಾದನೆ ಶೇ. 21. ಇತರೆ ರಾಷ್ಟ್ರಗಳಲ್ಲಿನ ವಿಮಾ ವಲಯ, ನಾಗರೀಕ ಸೇವ ವಲಯ, ಅಸಂಘಟಿತ ಕಾರ್ಮಿಕರ ಸೇವಾ ವಲಯಗಳೆಡೆಗೆ ಗಮನ ಹರಿಸಬೇಕಿದೆ. ಈ ಅಂಕಿ ಅಂಶಗಳು ಒಟ್ಟಾರೆ ಆರ್ಥಿಕತೆಯಲ್ಲಿ ನಮ್ಮ ಪಾಲನ್ನು ಹಿಗ್ಗಿಸಿಕೊಳ್ಳದಿದ್ದಲ್ಲಿ ಮುಂದೊಮ್ಮೆ ನಶಿಸಿ ಹೋಗಬಹುದಲ್ಲವೇ? ಇದು ಅಸಮಾನತೆ ಅಜಾಗರೂಕತೆಗೆ ಕಾರಣವಾಗಬಲ್ಲದು ಅಲ್ಲವೇ? ಸರ್ವರಿಗೂ ಸಮಪಾಲು ಸಮಬಾಳು ಎಂಬ ಸಂವಿಧಾನದ ಆಶಯ ಈಡೇರಿಸಲು ಸಾಧ್ಯವೇ?

**4) ಸಹಕಾರದಿಂದ ಮಧ್ಯವರ್ತಿಗಳ ನಿರ್ಮೂಲನೆ;** ಉತ್ಪಾದನೆ ಮತ್ತು ಮಾರುಕಟ್ಟೆಯಲ್ಲಿನ ದರದ ಅಂತರ ಅಜಗಜಾಂತರವಾಗಿದೆ. ಅದರಲ್ಲಿಯೂ ರಾಷ್ಟ್ರದ ಬೆನ್ನೆಲುಬಾದ ರೈತ ಮತ್ತು ಕೃಷಿ ಆಧಾರಿತ ಉತ್ಪನ್ನಗಳಲ್ಲಿ ಇದು ನಿಚ್ಚಳವಾಗಿ ಕಂಡುಬರುತ್ತಿದೆ. ಇದಕ್ಕೆ ಪ್ರಮುಖ ಕಾರಣ ಮಧ್ಯಮ ವರ್ತಿಗಳಿಂದ ಲಾಭ ಗಳಿಸುವಿಕೆ, ವಿಫುಲ ಸಂಗ್ರಹಣೆ ಮುಂತಾದವುಗಳು, ಉತ್ಪಾದಕ ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಸೇತು ಆಗಿ ಸಹಕಾರ ಮಾತ್ರ ಕಾರ್ಯವೆಸಗಬಲ್ಲದು ಅಲ್ಲವೇ? ಈ ದಿಶೆಯಲ್ಲಿ ಕಾರ್ಯನಿರ್ವಹಿಸಬೇಕಿದ್ದ ರೈತ ಉತ್ಪನ್ನ ಸಂಸ್ಕರಣೆ ಮಾರುಕಟ್ಟೆ ಸಹಕಾರ ಸಂಘಗಳು (ಬಹುತೇಕ) ಕಾರ್ಯನಿರ್ವಹಿಸುತ್ತಿಲ್ಲವೇಕೆ? ಅಥವಾ ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲವೇಕೆ? ಬಹುತೇಕ ಖಾಸಗಿ ಅಥವಾ ಸರ್ಕಾರವನ್ನು ಅವಲಂಭಿಸಿರುವುದೇಕೆ? ಎಂಬ ಪ್ರಶ್ನೆಗಳು ಮೂಡುತ್ತವೆ. ರೈತ ಉತ್ಪಾದಕ ಸಂಸ್ಥೆಗಳು ಸಹಕಾರ ಕಾಯ್ದೆಯಡಿಯಲ್ಲಿ ನೊಂದಣಿಯಾಗುತ್ತಿಲ್ಲವೇಕೆ? ಎಂಬುದು ಪರೀಕ್ಷಾರ್ಹವಲ್ಲವೇ?

**5) ಸಹಕಾರ ಸಂಘಗಳಲ್ಲಿ ತಂತ್ರಜ್ಞಾನದ ಕೊರತೆ;** ಸ್ಪರ್ಧಾತ್ಮಕ ಪ್ರಪಂಚದಲ್ಲಿ ಆಧುನಿಕತೆ, ತಂತ್ರಜ್ಞಾನ, ಮಾರುಕಟ್ಟೆ ತಂತ್ರಜ್ಞಾನ, ಮಾರುಕಟ್ಟೆ ಮಾಡಲುಮಾಹಿತಿ ತಂತ್ರಜ್ಞಾನದ ಆಧುನಿಕ ವಿಧಿವಿಧಾನಗಳನ್ನು ಅಳವಡಿಸಲು ವಿಫಲವಾಗಿರುವುದು ಕಾರಣವಲ್ಲವೇ? ಖಾಸಗಿ ವಲಯವು (ಡಿಜಿಟಲ್) ಇಂಟರ್‌ನೆಟ್ ಆಧಾರಿತ, ಕೃತಕ ಬುದ್ಧಿಮತ್ತೆ ಆಧಾರಿತ ಸೌಲಭ್ಯ ಸೇವೆಗಳನ್ನು ಸ್ಪರ್ಧಾತ್ಮಕ, ಸುಲಭ ದರಗಳಲ್ಲಿ ಒದಗಿಸುತ್ತಿದ್ದು ಸಹಕಾರ ವಲಯ ಹಿಂದೆ ಬಿದ್ದಿಲ್ಲವೇ? ಸಹಕಾರ ಸಂಘಗಳು ಖರೀದಿ ಶಕ್ತಿವುಳ್ಳ ನಗರ, ಅರೆ ನಗರ ಪ್ರದೇಶಗಳ ಜನತೆಯನ್ನು ತಲುಪುವುದಾದರೂ ಹೇಗೆ? ಕಂಪ್ಯೂಟರೀಕರಣ ಅದರ

ಮೂಲಕ ಇಂಟರ್ ನೆಟ್ ಆಧಾರಿತವಾಗಿ ಸೇವೆ, ಸೌಕರ್ಯ, ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸಲು ಸಹಕಾರ ಸಂಘಗಳಿಗೆ ಸಾಧ್ಯವಿಲ್ಲವೇ? ಅದರಲ್ಲಿಯೂ ಮೌಲ್ಯ ವರ್ಧಿತ, ನೇರ ಬಳಸಲು ಯೋಗ್ಯ ಪದಾರ್ಥಗಳು, ಹಣ್ಣು, ತರಕಾರಿಗಳನ್ನು ಇತರೆ ಉತ್ಪನ್ನಗಳನ್ನು ತಲುಪಿಸಲು ಸಾಧ್ಯವಿಲ್ಲವೇ?

**6) ಸಹಕಾರ ಸಂಘಗಳಲ್ಲಿ ಬಂಡವಾಳದ ಕೊರತೆ;** ಯಾವುದೇ ವ್ಯವಹಾರ ಮಾಡಲುಬಂಡವಾಳ ಅತಿ ಮುಖ್ಯ ಸಂಪನ್ಮೂಲವಲ್ಲವೇ? ಬಂಡವಾಳ ಇಲ್ಲದಿದ್ದಲ್ಲಿ ಟಿ.ಪಿ.ಕೈಲಾಸಂ ರವರ ಬಂಡವಾಳವಿಲ್ಲದ ಬಡಾಯಿ ನಾಟಕದಂತೆ ಆಗುವುದಲ್ಲವೇ? ಸಹಕಾರ ಸಂಘಗಳಲ್ಲಿ ಸ್ವಂತ ಬಂಡವಾಳದ ಕೊರತೆ ಇದ್ದು ಬೇರೆಡೆಯಿಂದ ತಂದ ಸಾಲ ಅಥವಾ ಠೇವಣಿಗಳನ್ನು ಅವಲಂಭಿಸಿರುವುದು. ಹಲವು ವೇಳೆ ಸರ್ಕಾರದ ಕಾರ್ಯಕ್ರಮಗಳನ್ನು ಅವಲಂಭಿಸಿರುವುದೇ ತನ್ನ ವ್ಯವಹಾರ ವೃದ್ಧಿಸಲು ಆಗದೇ ಇರಲು ಕಾರಣವಲ್ಲವೇ? ಇದರಿಂದ ಸಹಕಾರ ಸಂಘದ ಫಲಾನುಭವಿಗಳಾಗಬೇಕಾದ ಅಬಲರು, ದುರ್ಬಲರು, ಮಹಿಳೆಯರು ವಂಚಿತರಾಗುತ್ತಿದ್ದಾರೆಯೇ? ಬಂಡವಾಳ ವೃದ್ಧಿಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸಹಕಾರ ಸಂಘಗಳು ನಿರ್ಲಕ್ಷಿಸಿದೆಯೇ?

**7) ಸಹಕಾರ ಸಂಘಗಳಿಗೆ ಪರ್ಯಾಯ ವ್ಯವಸ್ಥೆ;** ಆರ್ಥಿಕ, ಸಾಮಾಜಿಕ, ಅಸಮಾನತೆ ನಿವಾರಣೆಗೆ ಸಹಕಾರ ಸಂಘಗಳು ಮಾತ್ರ ಅಲ್ಲ, ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೇ? ಇವು ಗ್ರಾಮೀಣ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆಯಲ್ಲವೇ? ಗ್ರಾಮೀಣ ಉದ್ಯೋಗ ಖಾತ್ರಿ, ಫಲಾನುಭವಿಗಳಿಗೆ ನೇರ ಹಣಕಾಸಿನ ವರ್ಗಾವಣೆ, ಆಹಾರ ಸಂರಕ್ಷಣೆ, ಮಹಿಳೆ ಮತ್ತು ಮಕ್ಕಳ ಪೌಷ್ಠಿಕಾಂಶ ಅಂಶಗಳು, ಆರೋಗ್ಯ ಕಾರ್ಯಕ್ರಮಗಳು ಈ ಸಂಸ್ಥೆಗಳಿಂದ ಅನುಷ್ಠಾನ ವಾಗುತ್ತಿಲ್ಲವೇ? ಸಹಕಾರ ಸಂಘಗಳು ಇದರ ವಾಹಕಗಳಾಗಿ ಎಷ್ಟರ ಮಟ್ಟಿಗೆ ತೊಡಗಿಸಿಕೊಂಡಿವೆ? ಬಡತನ ನಿರ್ಮೂಲನೆ, ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಯಲ್ಲಿ ಸಹಕಾರ ಪಾಲು ಎಷ್ಟಿದೆ?

**8) ಶಿಕ್ಷಣದಲ್ಲಿ ಸಹಕಾರ ವಿಷಯ ಸೇರ್ಪಡೆ, ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ;** ಸಹಕಾರ ಶಿಕ್ಷಣದ ಭಾಗವಾಗಬೇಕೆ? ವಿಶ್ವವಿದ್ಯಾಲಯದ ಅವಶ್ಯಕತೆ ಇದೆಯೇ? ಶಿಕ್ಷಣ ಕ್ಷೇತ್ರವೇ ಸಮಂಜಸವಾಗಿ, ಸೂಕ್ತ ಪರಿಸರದಲ್ಲಿ ಕಾರ್ಯನಿರ್ವಹಿಸದೇ ಇರುವಾಗ ಸಹಕಾರವನ್ನು ಶಿಕ್ಷಣದ ಭಾಗವಾಗಿಸುವುದರಿಂದ ಅಥವಾ ವಿಶ್ವವಿದ್ಯಾಲಯ ಸ್ಥಾಪಿಸುವುದರಿಂದ ಅದು ಸಹಕಾರವನ್ನು ಬೆಳಸಬಲ್ಲುದೇ? ಸಹಕಾರವು ಪ್ರಾತ್ಯಕ್ಷಿಕವಾಗಿ ಕ್ಷೇತ್ರದಲ್ಲಿ ಬೆಳೆಯಬೇಕು. ಇದಕ್ಕೆ ಸೂಕ್ತ ಪರಿಸರ, ನಾಯಕತ್ವ ಅಗತ್ಯವಲ್ಲವೇ? ಇದು ವರೆವಿಗೂ ಈ ವ್ಯವಸ್ಥೆ ಇಲ್ಲದೇ ಯಶಸ್ವಿ ನಾಯಕರು ಸೃಷ್ಠಿಯಾಗಿಲ್ಲವೇ? ಯಶಸ್ವಿ ಸಹಕಾರ ಸಂಘಗಳು ಕಾರ್ಯನಿರ್ವಹಸುತ್ತಿಲ್ಲವೇ? ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕಿವೆ.

ಒಟ್ಟಿನಲ್ಲಿ ಸಹಕಾರ ವಲಯ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಹಕಾರಿಗಳು ಆಲೋಚಿಸಲು, ತಾವು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ಚರ್ಚಾ ಸ್ಪರ್ಧೆ ಸೂಕ್ತ ವೇದಿಕೆ ನಿರ್ಮಾಣ ಮಾಡಿಕೊಟ್ಟಿತು. ಯುವ ವಿದ್ಯಾರ್ಥಿಗಳಲ್ಲಿ ಸಶಕ್ತತೆಗೆ ಕಾರಣವಾಗಬಲ್ಲ, ಸಹಕಾರದ ವಿಷಯದಲ್ಲಿ ವಿದಾರ್ಥಿಗಳಲ್ಲಿ ಆಸಕ್ತಿ, ಕುತೂಹಲ, ಮೂಡಿಸುವಲ್ಲಿ ಚರ್ಚಾ ಸ್ಪರ್ಧೆ ಯಶಸ್ವಿಯಾಯಿತು. ಮಹಾಮಂಡಳ ಮತ್ತು ಅದರ ಪೂರ್ಣ ತಂಡಕ್ಕೆ ಆಧರಣೀಯ ಅಭಿನಂದನೆಗಳು.

**ನಿನ್ನಿಂದ ಸಾಧ್ಯವಾಗದ ಕೆಲಸಗಳನ್ನು ನಾನು ಮಾಡಬಹುದು. ನನ್ನಿಂದ ಸಾಧ್ಯವಾಗದ ಕೆಲಸಗಳನ್ನು ನೀನು ಮಾಡಬಹುದು. ಆದರೆ ನಾವಿಬ್ಬರೂ ಒಟ್ಟಿಗೆ ಸೇರಿದರೆ ಮಹತ್ತರವಾದ ಕೆಲಸಗಳನ್ನು ಮಾಡಬಹುದು. ಹಾಗಾಗಿ ನಾವೆಲ್ಲ ಜೊತೆಯಾಗಿ ಇರಬೇಕು**

**– ಮದರ್‌ತೆರೇಸಾ**

*****************************************************************************************

# 25. ಭಾರತದ ಆರ್ಥಿಕತೆಯಲ್ಲಿ ಸಹಕಾರದ ಪಾತ್ರ, ಪಾಲು – ಒಂದು ವಿಮರ್ಶೆ

ಭಾರತದ ಆರ್ಥಿಕತೆಯ ಬೆಳವಣಿಗೆ ಧರ ಇತರೆ ಆರ್ಥಿಕವಾಗಿ ಬಲಿಷ್ಟ ರಾಷ್ಟ್ರಗಳಿಗಿಂತ ಅಧಿಕವಾಗಿರುತ್ತದೆ. ವಿಶ್ವ ಆರ್ಥಿಕತೆಯಲ್ಲಿ ಐದನೇ ಸ್ಥಾನದಲ್ಲಿರುತ್ತವೆ. ಬೆಳವಣಿಗೆ ಧರ ಹೆಚ್ಚಿಗೆ ಇರುವುದರಿಂದ ಇಷ್ಟರಲ್ಲೇ ಮೂರನೇ ಸ್ಥಾನ ತಲುಪುತ್ತೇವೆ. ಮೂರು ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪುತ್ತೇವೆ ಎಂಬ ಆಶಯವನ್ನು ಹೊಂದಿರುತ್ತೇವೆ. ಭಾರತದ ಆರ್ಥಿಕ ಸಚಿವರು ಲೋಕ ಸಭೆಯಲ್ಲಿ ಇತ್ತೀಚೆಗೆ ನೀಡಿರುವ ಹೇಳಿಕೆ ಇದನ್ನು ಪುಷ್ಟೀಕರಿಸುತ್ತದೆ. ಕೆಲವು ಸಮೀಕ್ಷೆಗಳು ನಾವು ಈಗಾಗಲೇ ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪಿರುವವಾಗಿ ತಿಳಿಸುತ್ತಿವೆ. ಭಾರತದ ಆರ್ಥಿಕ ಸಚಿವರು ಇತ್ತೀಚೆಗೆ ಇದನ್ನು ತಿಳಿಯಪಡಿಸಿರುತ್ತಾರೆ. ಏನೇ ಆದರೂ ಇದರಲ್ಲಿ ಸಹಕಾರದ ಪಾತ್ರ ಏನು? ಸಹಕಾರದ ಪಾಲು ಎಷ್ಟಿದೆ? ಎಂದು ಆತ್ಮ ವಿಶ್ಲೇಷಣೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಸಹಕಾರಿಗಳ ದಾಗಿರುತ್ತದೆಯಲ್ಲವೇ?

ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸ್ತಿಲಿನಲ್ಲಿ ಭಾರತದ ಆರ್ಥಿಕತೆ ಕೇವಲ ರೂ 2.7 ಲಕ್ಷ ಕೋಟಿ ರೂಪಾಯಿ ಇದ್ದು ವಿಶ್ವದ ಆರ್ಥಿಕತೆಯ ಶೇಕಡಾ 03 ಪಾಲನ್ನು ಮಾತ್ರ ಹೊಂದಿತ್ತು. ಈಗ 3.73 ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪಿರುತ್ತೇವೆ (ರೂ. 298.4 ಟ್ರಿಲಿಯನ್ ರೂಪಾಯಿಗಳು). 1991 ರಲ್ಲಿ ಭಾರತದ ಪಾಲು ಶೇ.1.1 ಇದ್ದದ್ದು 2023ರಲ್ಲಿ ಶೇ 3.5 ಆಗಿರುತ್ತದೆ. ಭಾರತದ ಹಾಲಿ ಆರ್ಥಿಕತೆಯಲ್ಲಿ ಕೃಷಿ ಮತ್ತು ಕೃಷಿ ಪೂರಕ ವಲಯದ ಪಾಲು ಶೇ.20.19, ಕೈಗಾರಿಕೆ ವಲಯದ ಪಾಲು ಶೇ.25.92 ಸೇವಾ ವಲಯದ ಪಾಲು ಶೇ 53.89 ಆಗಿರುತ್ತದೆ. ಇದರಿಂದ ನಮ್ಮ ಸಹಕಾರ ವಲಯದ ಚಟುವಟಿಕೆಗಳು ಎಷ್ಟು ಪಾಲು ಹೊಂದಿದೆ ಎಂಬುದರ ಅಂದಾಜು ಅರಿಯ ಬೇಕಾಗಿದೆ. ನಿಖರವಾದ ಅಂಕಿ ಅಂಶಗಳ ದತ್ತಾಂಶ ದೊರೆಯುತ್ತಿಲ್ಲ. ಜಾಲತಾಣಗಳಲ್ಲಿ ಖಾಸಗಿ ವಲಯದ್ದೇ ಕಾರುಬಾರು. 90ರ ದಶಕದಿಂದ ಸಹಕಾರ ವಲಯ ಹೇಗೆ ಕೃಷವಾಯಿತು. ಖಾಸಗಿ ವಲಯ ಹೇಗೆ ಬೆಳೆಯುತ್ತಿದೆ. ಇದರ ಸ್ಪರ್ಧೆಯಲ್ಲಿ ಸಹಕಾರ ವಲಯ ಸೋತಿದೆಯೇ ಎಂಬುದನ್ನು ಗಮನಿಸಬಹುದು.

ಸೇವಾ ವಲಯದಲ್ಲಿ ಸಹಕಾರ ವಲಯದ ಅಸ್ತಿತ್ವದಲ್ಲಿಲ್ಲ, ಇದ್ದರೂ ಅತ್ಯಲ್ಪ ಎಂಬುದನ್ನು ಒಪ್ಪಲೇ ಬೇಕು. ವಿಮಾ ವಲಯದಲ್ಲಿ ಯುರೋಪ್ ಖಂಡದಲ್ಲಿ ಬಹಳಷ್ಟು ಪಾಲು ಸಹಕಾರ ವಲಯದಲ್ಲಿದೆ. ಭಾರತದಲ್ಲಿ ಇಫ್ಕೋ ಟೋಕಿಯೋ ಈ ವಲಯದಲ್ಲಿದ್ದರೂ ಒಟ್ಟು ಮಾರುಕಟ್ಟೆಯಲ್ಲಿ ಇದರ ಪಾಲು ಎಷ್ಟು ಎಂಬುದನ್ನು ಅಧ್ಯಯನದಿಂದ ತಿಳಿಯಬೇಕಿದೆ. ಕರ್ನಾಟಕದಲ್ಲಿ ರಾಜ್ಯ ಮಟ್ಟದ ಒಂದು ಸಂಸ್ಥೆಯನ್ನು ಸ್ಥಾಪಿಸಿ ದಶಕಗಳು ಕಳೆದರೂ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಪ್ರವಾಸಿ, ಆರೋಗ್ಯ, ವಲಯಗಳಲ್ಲಿ ಕೆಲವು ಸಹಕಾರ ಸಂಘಗಳು ಸ್ಥಾಪನೆಯಾಗಿದ್ದು ಕಾರ್ಯನಿರ್ವಹಿಸುತ್ತಿವೆ. ಒಟ್ಟಾರೆ ಮಾರುಕಟ್ಟೆಯಲ್ಲಿ ಇವುಗಳ ಕೊಡುಗೆ ಎಷ್ಟಿದೆ? ಅಧ್ಯಯನದಿಂದ ತಿಳಿಯಬೇಕಾಗಿದೆ. ಮೇಲ್ನೋಟಕ್ಕೆ ಇದು ಅತ್ಯಲ್ಪ ಎಂದು ಗೋಚರವಾಗುತ್ತದೆ. ಇತರೆ ಸೇವಾ ವಲಯ ಅದರಲ್ಲಿಯೂ ಸಾಫ್ಟವೇರ್ ವಲಯದಲ್ಲಿ ಸಹಕಾರ ಸಂಘಗಳು ಖಾಸಗಿಯನ್ನೇ ಅವಲಭಿಸಿರುತ್ತೇವೆ. ಈ ವಲಯದಲ್ಲಿ ಭಾರತವೇ ವಿಶ್ವದ ರಾಜಧಾನಿಯಾಗಿದ್ದು ಭಾರತೀಯರ ಅದರಲ್ಲಿಯೂ ಯುವ ಜನತೆಯ ಪಾಲು ಶ್ಲಾಘನೀಯ. ಇದರಿಂದಲೇ ರಾಷ್ಟ್ರದ ಆರ್ಥಿಕತೆಗೆ ಬಲ ಬಂದಿದೆ. ಕೆಲವು ಸಹಕಾರ ಬ್ಯಾಂಕ್‌ಗಳು ತಮ್ಮದೇ "ಸಾಫ್ಟ್ ವೇರ್" ಅಭಿವೃದ್ಧಿಗೊಳಿಸಿಕೊಂಡಿರುತ್ತವೆ. ಇದನ್ನು ಅಲ್ಲಗಳೆಯುವಂತಿಲ್ಲ.

ಕೈಗಾರಿಕೆ ವಲಯದಲ್ಲಿ ಸಹಕಾರದ ಪಾಲು ಕ್ಷೀಣಿಸುತ್ತಿರುವವನ್ನು ಗಮನಿಸುತ್ತಿದ್ದೇವೆ. ಈ ಹಿಂದೆ ಇದ್ದ ಸಹಕಾರ ಕೈಗಾರಿಕೆ ವಲಯಗಳು ಖಾಸಗಿ ಪಾಲಾಗಿವೆ ಅಥವ ನಿಷ್ಕ್ರಿಯಗೊಂಡಿವೆ ಅಥವ ಸಮಾಪನೆಯಾಗಿವೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಉತ್ತೇಜನ ದಿಂದ ಸ್ಥಾಪಿಸಲ್ಪಟ್ಟ ಕೆಲವೇ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತವೆ. (ಖಾದಿ, ಉಣ್ಣೆ, ಜೇನು, ಚಾಪೆ, ಗುಡಿಗಾರ, ಕಮ್ಮಾರ , ಕುಂಬಾರಿಕೆ, ಮರಗೆಲಸ, ಕೈಮಗ್ಗ ಇತರೆ) ಆಧುನಿಕ ಯಂತ್ರಗಾರಿಕೆ ಯಿಂದ 'ಸಣ್ಣದು ಸುಂದರ ಎಂಬ ಪರಿಕಲ್ಪನೆ ಮಾಯವಾಗಿದೆ. ಬೃಹತ್ ಉದ್ಯಮ, ಕೈಗಾರಿಕೆ ಸಹಕಾರ ವಲಯಕ್ಕೆ ಕನಸೇ ಆಗಿದೆ. ಈ ಪರಿಸ್ಥಿತಿಯಲ್ಲಿ ಸಹಕಾರದ ಪಾಲನ್ನು ಹೆಚ್ಚಳಗೊಳಿಸುವ ಮಾರ್ಗವಾದರೂ ಏನು?

ಕೃಷಿ ಮತ್ತು ಕೃಷಿ ಪೂರಕ ವಲಯ ದಲ್ಲಿ ಸಹಕಾರದ ಪಾಲು ನಿಖರವಾಗಿ ಲಭ್ಯವಾಗದಿದ್ದರೂ ಕೃಷಿ ಪತ್ತಿನ ವಲಯದಲ್ಲಿ ಅದು ಶೇ 19 ಹೈನುಗಾರಿಕೆ ಶೇ 35, ಧಾನ್ಯ, ದ್ವಿದಳ ಧಾನ್ಯ, ಎಣ್ಣೆ ಬೀಜ ಹಣ್ಣು, ತರಕಾರಿ, ಸಕ್ಕರೆ, ವಾಣಿಜ್ಯ ಬೆಳೆಗಳಾದ ಅಡಕೆ, ತೆಂಗು, ಕೋಕೋ, ರಬ್ಬರ್, ಕಾಫಿ, ಸಾಂಬಾರು ಪದಾರ್ಥಗಳಾದ ಏಲಕ್ಕಿ, ಮೆಣಸು, ಲವಂಗ, ಚಕ್ಕೆ ಇತರೆ ಉತ್ಪನ್ನ, ಸಂಸ್ಕರಣೆ ಮಾರಾಟದಲ್ಲಿ ಅನೇಕ ಸಹಕಾರ ಸಂಘಗಳು ಮತ್ತು ಅವುಗಳ ಶೃಂಗ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆಯಾದರೂ ಒಟ್ಟಾರೆ ಮಾರುಕಟ್ಟೆಯಲ್ಲಿ ಇದರ ಪಾಲು ಎಷ್ಟು ಎಂಬದು ತಿಳಿಯುತ್ತಿಲ್ಲ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಈ ವಲಯದಲ್ಲಿ ಸಾಕಷ್ಟು ಕೊಡುಗೆ ಇದ್ದರೂ, ಬೆಳವಣಿಗೆಯಲ್ಲಿ ಸಾಧನೆ ಮಾಡಿದ್ದರೂ ಕೂಡ ಹೆಮ್ಮೆಯಿಂದ ತನ್ನ ಸಾಧನೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಕೃಷಿ ಪತ್ತಿನ ವಲಯ ಶೇ.80ಕ್ಕೂ ಮಿಲಿದ ಸಣ್ಣ ಮತ್ತು ಅತಿ ಸಣ್ಣ ರೈತರ ಅವಶ್ಯಕತೆ ಪೂರೈಸುತ್ತಿದೆ. ಕಿರು ಹಣಕಾಸು ಸೌಲಭ್ಯಗಳನ್ನು ಒದಗಿಸುತ್ತಿದೆ. ಇದರಂತೆ ಕೃಷಿಯೇತರ ಪತ್ತು ವಲಯ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಉತ್ಪನ್ನಕ್ಕೆ ತನ್ನ ಕೊಡುಗೆ ನೀಡುತ್ತಲಿದೆ. ತೋಟಗಾರಿಕೆ ಉತ್ಪನ್ನ ಮಾರುಕಟ್ಟೆ ಮತ್ತು ಸಂಸ್ಕರಣೆ ಸಹಾರ ಸಂಘಗಳು (ಹಾಪ್ ಕಾಮ್ಸ್) ವಾಣಿಜ್ಯ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘಗಳು (ಕ್ಯಾಂಪ್ ಕೋ , ಮಾಮ್ಕೋಸ್, ಆಪ್ಸ್ ಕೋಸ್) ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ ತನ್ನ ಪಾಲು ಎಷ್ಟು ಎಂಬುದು ತಿಳಿದುಬರುತ್ತಿಲ್ಲ. ಸಕ್ಕರೆ ಕಾರ್ಖಾನೆಗಳು, ನೂಲಿನ ಗಿರಣಿಗಳು ಸಹಕಾರ ವಲಯದಲ್ಲಿ ಕ್ಷೀಣಿಸಿರುವುದು ಕೆಲವು ರಾಜ್ಯಗಳಲ್ಲಿ ಮಾತ್ರ ಕಾರ್ಯನಿವಾಹಿಸುತ್ತಿರುವುದು ಕಂಡುಬರುತ್ತದೆ. ಈ ವಲಯದಲ್ಲಿನ ಸಹಕಾರ ಸಂಘಗಳು ಇನ್ನೂ ಹೆಚ್ಚಿನ ಕಾರ್ಯಕ್ಷಮತೆ ಯಿಂದ ನಡೆದು (ಇದಕ್ಕೆ ಮಾದರಿಯಾಗಿರುವುದು ಹೈನುಗಾರಿಕೆ ವಲಯದ 'ಅಮುಲ್ 'ನಂದಿನಿ ಎಂದರೆ ತಪ್ಪಾಗಲಾರದು) ಆರ್ಥಿಕತೆಯಲ್ಲಿ ತನ್ನ ಕೊಡುಗೆಯನ್ನು ಕೊಳ್ಳುವಲ್ಲಿ ಸಾಕಷ್ಟು ಅವಕಾಶವಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಈ ದಿಸೆಯಲ್ಲಿ ಭಾರತ ಸರ್ಕಾರದ ಕ್ರಮಗಳು ಶ್ಲಾಘನೀಯ. ಪ್ರಾಕೃ. ಪ.ಸ.ಸಂ. ಗಳ ಕಂಪ್ಯೂಟರೀಕರಣ, ಬಹು ಸೇವಾ ಕೇಂದ್ರಗಳಾಗಿ ಪರಿವರ್ತನೆ ಅದಕ್ಕಾಗಿ ಮಾದರಿ ಬೈಲಾಗಳ ಅಳವಡಿಕೆ. ಕೇಂದ್ರದಲ್ಲಿ ಕೃಷಿ ಪರಿಕರಗಳ ಅಭಿವೃದ್ಧಿಗಾಗಿ ನಿಧಿ ಸೃಷ್ಠಿ. ರಾಷ್ಟ್ರಮಟ್ಟದಲ್ಲಿ ರಫ್ತು ಸಹಕಾರ ಸಂಘ, ಸಾವಯವ ಸಹಕಾರ ಸಂಘಗಳ ಸ್ಥಾಪನೆ. ನ್ಯಾಫೆಡ್ , ಮತ್ತು ಎಸ್.ಸಿ.ಸಿ.ಎಫ್., ಬಲವರ್ಧನೆ ಇವುಗಳಿಂದ ಸಾಕಷ್ಟು ಸಹಕಾರ ವಲಯದ ಅಭಿವೃದ್ಧಿ ನಿರೀಕ್ಷಿಸಬಹುದಾಗಿದೆ. ರಾಜ್ಯ ಸರ್ಕಾರಗಳ ಶೂನ್ಯ ಬಡ್ಡಿ ಧರ ಸಾಲ ವಿತರಣೆ, ಹಾಲಿನ ಉತ್ಪಾದನೆಗೆ ಪ್ರೊತ್ಸಾಹಧನ , ಈ ಉಪಕ್ರಮಗಳು ಸಾಕಷ್ಟು ಆರ್ಥಿಕತೆಗೆ ಚೇತರಿಕೆ ನೀಡುವ ಕ್ರಮಗಳಾಗಿರುತ್ತವೆ.

ಭಾರತದ ಆರ್ಥಿಕತೆಯ ಬಗ್ಗೆ ಈ ಕೆಳಕಂಡಂತೆ ನೀಡಿರುವ ತಖ್ತೆ ಬೆಳಕನ್ನು ಚೆಲ್ಲುತ್ತದೆ.

| ವರ್ಷ | ಡಾಲರ್) ಆಧಾಯ ( ಡಾಲರ್ ಗಳಲ್ಲಿ ) | ಆರ್ಥಿಕತೆಯ ಗಾತ್ರ ( ಟ್ರಿಲಿಯನ್ ಡಾಲರ್) ಸರಾಸರಿ ಪ್ರತಿ ವ್ಯಕ್ತಿಯ ವಾರ್ಷಿಕ |
|---|---|---|
| 2021 | 3.15 | 2234 |
| 2022 | 3.38 | 2379 |
| 2023 | 3.73 | 2601 |
| 2024 | 4.06 | 2802 |
| 2025 | 4.40 | 3011 |
| 2026 | 4.76 | 3231 |
| 2027 | 5.15 | 3465 |
| 2028 | 5.57 | 3720 |

ಭಾರತದ ಐದು ಟ್ರಿಲಿಯನ್ ಆರ್ಥಿಕತೆ ಯಲ್ಲಿ ವಲಯವಾರು ಪಾಲು ಈ ಮುಂದಿನಂತೆ ಅಂದಾಜಿಸಲಾಗಿದೆ. ಕೃಷಿ ಮತ್ತು ಕೃಷಿ ಪೂರಕ ವಲಯದಲ್ಲಿ 01 ಟ್ರಿಲಿಯನ್ ಡಾಲರ್, ಕೈಗಾರಿಕೆ ಉತ್ಪಾದನೆ ವಲಯದಲ್ಲಿ 01 ಟ್ರಿಲಿಯನ್ ಡಾಲರ್, ಮತ್ತು ಸೇವಾ ವಲಯದಲ್ಲಿ 03 ಟ್ರಿಲಿಯನ್ ಡಾಲರ್ ಆರ್ಥಿಕ ಉತ್ಪಾದನೆ ನಿರೀಕ್ಷಿಸಲಾಗಿದೆ.

ಭಾರತದಲ್ಲಿ ಹಾಲಿ ಸರಾಸರಿ ವಾರ್ಷಿಕ ಆಧಾಯ 2400 ಡಾಲರ್ (ರೂ 192,000) , 2005 – 16 ರಿಂದ 2023 ಕ್ಕೆ ಆಹಾರದಲ್ಲಿ ತರಕಾರಿ ಬಳಕೆಯಲ್ಲಿ ಶೇ 19.4 , ಹಣ್ಣಿನ ಬಳಕೆ ಶೇ.38 ಏರಿಕೆಯಾಗಿದೆ ಎಂದು ಅಂಕಿ ಅಂಶಗಳು ತಿಳಿಸುತ್ತವೆ. ಇದು ಸಂತೋಷದ ಸಂಭ್ರಮಿಸ ಬೇಕಾದ ಅಂಶವೇ ಆಗಿರುತ್ತದೆ. ಆದರೆ ಇದೇ ಸಮಯದಲ್ಲಿ, 82.5 ಕೋಟಿ ಜನಸಂಖ್ಯೆಗೆ ಆಹಾರ ಭದ್ರತೆಯನ್ನು ನೀಡಬೇಕಾಗಿದೆ. ಹಸಿವಿನ ಸೂಚ್ಯಂಕದಲ್ಲಿ 97ರಿಂದ 111ನೇ ಸ್ಥಾನಕ್ಕೆ ಕುಸಿದಿದ್ದೇವೆ. ಪರಿಸರ ಸಂರಕ್ಷಣೆಯನ್ನು undefined ಒಳಗೊಂಡಂತೆ "ಶೂನ್ಯ ಹಸಿವು" ಸಾಧನೆ ಮಾಡಬೇಕಾದ ಸುಸ್ಥಿರ ಅಭಿವೃದ್ಧಿ ಗುರಿಗಳು ನಮ್ಮ ಮುಂದೆ ಇದೆ. ಈ ದ್ವಂದ್ವ ಗಳ ನಿವಾರಣೆಗೆ 'ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಪ್ರಗತಿ ಸಾಧಿಸಿ ಭಾರತದ ಆರ್ಥಿಕತೆಗೆ ತನ್ನ ಹೆಚ್ಚಿನ ಪಾಲನ್ನು ಒದಗಿಸಬೇಕಾದ ಜವಾಬ್ದಾರಿ ಸಹಕಾರ ವಲಯದ್ದಾಗಿರುತ್ತದೆ, ಸಹಕಾರ ಚಳುವಳಿಯದಾಗಿರುತ್ತದೆ. ಆದಾಗ ಮಾತ್ರ ಭಾರತ ಸರ್ಕಾರದ "ಸಹಕಾರ ದಿಂದ ಸಮೃದ್ಧಿ" ಘೋಷಣೆಯನ್ನು ಸಫಲ ಗೊಳಿಸಿದಂತಾಗುತ್ತದೆ.

******************************************************************************

## ಭಾಗ : 02

## 26. ಸಹಕಾರ ಸಂಘಗಳಲ್ಲಿ ಸಹಕಾರ ಮೌಲ್ಯಗಳ ಪಾಲನೆಯ ಅಗತ್ಯತೆ

ಸಹಕಾರ ಸಂಘಗಳು ಆರಂಭವಾದದ್ದು 19ನೇ ಶತಮಾನದ ಮಧ್ಯದಲ್ಲಿ, ಕೈಗಾರಿಕೆ ಕ್ರಾಂತಿಯ ಫಲವಾಗಿ ಉಂಟಾದ ಪಲ್ಲವಗಳಲ್ಲಿ ಸಹಕಾರ ಕ್ರಾಂತಿ ಚಳುವಳಿಯೂ ಒಂದು. ಕೈಗಾರಿಕೆ ಕಾರ್ಮಿಕರ ಶ್ರಮವನ್ನು ಅವಲಂಭಿಸಿತ್ತು. ಆದರೆ, ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದಾಗ ಅವರು ತಮ್ಮ ಬದುಕಿನ ಅವಶ್ಯಕತೆಗೆ ಅವರು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ. ಇಂಗ್ಲೆಂಡ್‌ನ ಮ್ಯಾಟೆಸ್ಟರ್ ಪಟ್ಟಣದ ಟೋಡ್ ಲೇನ್‌ನಲ್ಲಿ ಕಾರ್ಮಿಕರು ಸಂಘಟಿತಗೊಂಡು ಸಹಕಾರ ಸಂಘ ಸ್ಥಾಪಿಸಿದರು. ಅವರೇ ರಾಕ್‌ಡೇಲ್ ಅಗ್ರಗಾಮಿಗಳು (Rochdale pioneers). ಇವರು ತಮ್ಮ ಸಹಕಾರ ಸಂಘವನ್ನು ನಡೆಸಲು ತಾವೇ ಕೆಲವೊಂದು ನೀತಿ ನಿಯಮಗಳನ್ನು ರಚಿಸಿಕೊಂಡರು. ಈ ನೀತಿನಿಯಮಗಳೇ ಕಾಲ ಕ್ರಮೇಣ ಸಹಕಾರ ತತ್ವಗಳಾದವು. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (International cooperative Alliance - ICA) ಈ ತತ್ವಗಳನ್ನು ಅನುಸರಿಸುವಂತೆ ವಿಶ್ವದ ಸಹಕಾರ ಚಳುವಳಿಗೆ ದಿಕ್ಸೂಚಿಯಾಗಿ ನೀಡಿದೆ. ಕಾಲಕಾಲಕ್ಕೆ ತಕ್ಕಂತೆ ಅದರ ಬದಲಾವಣೆಗಳನ್ನು ಮಾಡುತ್ತಾ ಬಂದಿದೆ. ಪ್ರಸ್ತುತ 1994ರ ಸಮ್ಮೇಳನದಲ್ಲಿ ಅಳವಡಿಸಿಕೊಂಡ ಏಳು (7) ತತ್ವಗಳನ್ನು ಪಾಲಿಸಲಾಗುತ್ತಿದೆ. ಅದರಂತೆ ಸಹಕಾರ ಕಾಯ್ದೆ ಕಾನೂನು, ಉಪ ನಿಯಮಗಳು, ವ್ಯವಹಾರಗಳು ನಡೆಯುವ ಅವಶ್ಯಕತೆ ಸಹಕಾರ ಚಳುವಳಿ ದೃಷ್ಟಿಯಿಂದ ಅತಿ ಅವಶ್ಯ. ಇದೇ ಸಮ್ಮೇಳನವು ಸಹಕಾರ ಸಂಘಗಳ ಅಭ್ಯುದಯಕ್ಕೆ ಮತ್ತು ಒಟ್ಟಾರೆ ಸಹಕಾರ ಚಳುವಳಿಯ ಉತ್ತಮ ಬೆಳವಣಿಗೆ ದೃಷ್ಟಿಯಿಂದ ನಾಲ್ಕು ಸಹಕಾರ ಮೌಲ್ಯಗಳನ್ನು ಪಾಲಿಸಲು ಪ್ರತಿಪಾದಿಸಿತು.

**ಈಸಹಕಾರ ಮೌಲ್ಯ ಗಳು ಈ ಕೆಳಕಂಡಂತಿವೆ.**

(1) ಸ್ವ ಸಹಾಯ ಮತ್ತು ಪರಸ್ಪರ ಸಹಾಯ –Self help and mutual help.

(2) ಸ್ವಯಂ ಜವಾಬ್ದಾರಿ – Self responsiblity.

(3) ಪ್ರಜಾ ಪ್ರಭುತ್ವ – Democracy.

(4) ಸಮಾನತೆ, ಬಂಡವಾಳ ಮತ್ತು ಒಗ್ಗಟ್ಟು –Equality, Equity, and solidarity.

ಈ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಸಹಕಾರ ಸಂಘದ ಭಾಗೀದಾರರೆಲ್ಲರೂ ಅಳವಡಿಸಿಕೊಂಡು ಆಚರಣೆಗೆ ತಂದು ಅನುಷ್ಠಾನಗೊಳಿಸಿದ್ದೇ ಆದಲ್ಲಿ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಚರಣೆಗೊಳ್ಳುವುದಲ್ಲದೇ ಸಹಕಾರ ಚಳುವಳಿಯು ತನ್ನ ಅಂತಿಮ ಗುರಿಯಾದ ಸದಸ್ಯರ ಆರ್ಥಿಕ ಪ್ರಗತಿ, ಸಾಮಾಜಿಕ ಏಳ್ಗೆ, ಸಾಂಸ್ಕೃತಿಕ ಅಭಿವೃದ್ಧಿಯಾಗಲು ಕಾರಣವಾಗುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಮೌಲ್ಯವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಂಡು ಅಳವಡಿಸಿಕೊಂಡಲ್ಲಿ ಸಹಕಾರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ.

ಈ ಮೌಲ್ಯಗಳನ್ನು ಸಹಕಾರ ಸಂಘದ ಭಾಗೀದಾರರುಗಳಾದ (1) ಸದಸ್ಯರು (2)ಆಡಳಿತ ಮಂಡಳಿ (3) ಸಿಬ್ಬಂದಿ ವರ್ಗದವರು ಪಾಲಿಸಬೇಕಾಗುತ್ತದೆ.

**(1)ಸ್ವ ಸಹಾಯ ಮತ್ತು ಪರಸ್ಪರ ಸಹಾಯ:**

ಸಹ+ಕಾರ= ಸಹಕಾರ, ಯಾವುದೇ ಕಾರ್ಯವನ್ನು ಒಬ್ಬರು ಮಾಡಲಾಗುವುದಿಲ್ಲವೋ ಆ ಕಾರ್ಯವನ್ನು ಎಲ್ಲರೂ ಒಟ್ಟುಗೂಡಿ ಮಾಡುವುದೇ ಸಹಕಾರ. ತನ್ನ ಸ್ವಯಂ ಅಭಿವೃದ್ಧಿಗೆ ತಾನು ಶ್ರಮಿಸಬೇಕು ಜೊತೆ ಜೊತೆಗೆ ಇತರರನ್ನು ತನ್ನೊಡನೆ ಇತರರನ್ನು ಒಳಗೊಳ್ಳಬೇಕು. ತನಗೆ ತಾನು ಸಹಾಯ ಮಾಡಿಕೊಳ್ಳುವುದಲ್ಲದೇ ತನ್ನೊಡನೆ ಇರುವ, ತನ್ನಂತೆ ಇರುವ ಇತರೆ ಸದಸ್ಯರಿಗೆ ಕೂಡ ತಾನು ಅನುಸರಿಸಿದ ರೀತಿ, ನೀತಿ, ಮಾರ್ಗೋಪಾಯಗಳನ್ನು ತೋರಿಸಿ ಕೊಡುವುದು. ಕಾಗೆ ಒಂದಗಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿ ಒಂದು ಕುಟುಕ ಕಂಡೊಡೆ ಕೂಗಿ ಕರೆಯದೆ ತನ್ನ ಕುಲವನ್ನೆವ? ಎಂಬ ಬಸವಣ್ಣನವರ ವಚನೋಕ್ತಿ ನೆನಪಿಗೆ ಬರುತ್ತದೆ. ಈ ಮೌಲ್ಯಕ್ಕೆ ಸರಿಹೊಂದುವಂತೆ ಈ ಹಿಂದೆ (ಷೇರು) ಹೂಡಿಕೆ ಮೇಲೆ ಪರಿಮಿತ ಲಾಭಾಂಶ (ಡಿವಿಡೆಂಡ್) ಎಂಬ ಸಹಕಾರ ತತ್ವ ಅಡಕವಾಗಿತ್ತು. ಸಂಘದ (ಸದಸ್ಯರ) ಭವಿಷ್ಯದ ಒಳಿತಿಗಾಗಿ ಆಪದ್ಧನ ಸೃಷ್ಠಿ, ಸಂಘದ ವ್ಯವಹಾರವು ಸದಸ್ಯರ ನಡುವೆ ಇರುವಂತಹ ವ್ಯವಹಾರ. ಇದರಿಂದ ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬುದು ಸಹಕಾರ ಸಂಘದ ಉದ್ದೇಶ. ಮತ್ತು ಎಲ್ಲರೂ ಬಲ್ಲ ನಾಣ್ಣುಡಿ. ಸಿಟಿಜನ್ ಕೋ ಆಪರೇಟೀವ್ ಬ್ಯಾಂಕ್ vs ಆದಾಯ ತೆರಿಗೆ ಇಲಾಖೆಯ ಪ್ರಕರಣದಲ್ಲಿ ಮಾನ್ಯ ಸರ್ವೊಚ್ಚ ನ್ಯಾಯಲಯ ಸ್ವಸಹಾಯ ಮತ್ತು ಪರಸ್ಪರ ಸಹಾಯ ಎಂಬುದು ಸಹಕಾರ ಸಂಘದ ಮೂಲಭೂತ ಅಂಶಗಳಲ್ಲಿ ಒಂದು ಎಂಬುದನ್ನು ಎತ್ತಿ ಹಿಡಿದಿದೆ. ಸದಸ್ಯರು ಸಂಘದ ಆಗು ಹೋಗುಗಳಲ್ಲಿ ಈ ಮೌಲ್ಯವನ್ನು ಪಾಲಿಸಬೇಕು. ಆಡಳಿತ ಮಂಡಳಿಯು ಈ ಮೌಲ್ಯವನ್ನು ಕಾಪಾಡುವಂತೆ ತಮ್ಮ ನಿರ್ಧಾರ, ನಿಲುವು, ನೀತಿಗಳಲ್ಲಿ ಅಳವಡಿಸಿಕೊಳ್ಳಬೇಕು.

**(2) ಸ್ವಯಂ ಜವಾಬ್ದಾರಿ:**

ಈ ಮೌಲ್ಯವು ಅತ್ಯಂತ ಸತ್ವಯುತವಾದದ್ದು, ಯಾವುದೇ ಒಂದು ಸಂಸ್ಥೆಯಲ್ಲಿ, ಅಥವಾ ಒಂದು ಕುಟುಂಬದಲ್ಲೇ ಆಗಲಿ ಅದರ ಅಂಗಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದರೆ ಅದಕ್ಕಿಂತ ಹೆಚ್ಚಿನದು ಯಾವುದಿದೇ? 'ಅರಿವಿಗಿಂತ ಮಿಗಿಲುಂಟೆ ಎಂಬ ವಚನೊಕ್ತಿ ನೆನಪಿಗೆ ಬರುತ್ತದೆ. ಒಂದು ಸಹಕಾರ ಸಂಸ್ಥೆಯಲ್ಲಿ ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ಮೂರು ಅಂಗಗಳು ಭಾಗೀದಾರರು ಇದರೊಡನೆ ಸಂಘದೊಡನೆ ವ್ಯವಹರಿಸುವರು ಸರಬರಾಜುದಾರರು ಇತರರನ್ನು ಭಾಗೀದಾರರೆಂದು ಪರಿಗಣಿಸಬಹುದು. ಈ ಎಲ್ಲಭಾಗೀದಾರರೂ ತಮ್ಮ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳು(Roles and Responsiblities) ಗಳನ್ನು ತಿಳಿದು (ಅರಿತು) ಅದರಂತೆ ನಡೆದು ಕೊಂಡರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ ಎಂಬವ ಚನ ಸಾರ್ಥಕವಾದಂತೆ ಆಗುತ್ತದೆ.

ಸಹಕಾರ ಸಂಘದ ಯಜಮಾನರು ಸಂಘದ ಸದಸ್ಯರು ಅದರ ಗ್ರಾಹಕರು ಕೂಡ ಅವರೇ ಆಗಿರುತ್ತಾರೆ ಎಂಬುದು ಅದರ ವೈಶಿಷ್ಟ್ಯ. ಸದಸ್ಯರು ಸಂಘ ತನಗೇನು ಮಾಡಿದೆ ಎಂಬುದಕ್ಕಿಂತ ತಾನು ಸಂಘಕ್ಕೆ ಏನು ಮಾಡಿರುತ್ತೇನೆ? ಎಂದು ಪ್ರಶ್ನಿಸಿಕೊಳ್ಳುವುದು ಸೂಕ್ತ. ಸದಸ್ಯ ತನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವುದೆಂದರೆ ತಾನು ಸಂಘದ ಚಟುವಟಿಕೆಗಳಲ್ಲಿ, ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಆಗಿದೆ. ಮೊದಲನೆಯದಾಗಿ ಸದಸ್ಯನಿಗೆ ಇರುವ ಹಕ್ಕು ಮತ್ತು ಅವಕಾಶವೆಂದರೆ ತಾನು ಸಾಮಾನ್ಯ ನಿಕಾಯದ ಭಾಗವಾಗಿ ಸಂಘದ ವಾರ್ಷಿಕ ಮತ್ತು ವಿಶೇಷ ಮಾಹಾ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ವಾರ್ಷಿಕ ವರದಿ, ಲೆಕ್ಕ ಪರಿಶೋಧನವರದಿ, ಯೋಜನೆ ವರದಿ, ಆಯ–ವ್ಯಯ, ಅಂತಿಮ ಲೆಕ್ಕಗಳು, ಇವುಗಳ ಅಧ್ಯಯನ, ಸದಸ್ಯರ, ಆಡಳಿತ ಮಂಡಳಿ, ಸಿಬ್ಬಂದಿ ನೀತಿ ನಡವಳಿಕೆಗಳನ್ನು ರೂಪಿಸುವಲ್ಲಿ ಸಹಕರಿಸುವುದು. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ, ಚಿಕಿತ್ಸಕಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಭಾಗಿಯಾಗುವುದು. ಚುನಾವಣೆಯಲ್ಲಿ ಭಾಗವಹಿಸುವುದು. ಮತದಾನ ಮಾಡುವುದು ಪ್ರಜ್ಞಾವಂತ, ಜವಾಬ್ದಾರಿಯತ, ಕ್ರಿಯಾಶೀಲ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಅದರ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಇದರಿಂದ ಸದಸ್ಯರು ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಇದರಂತೆ ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಭಾಗವಹಿಸುವಿಕೆ ಎಂಬುದನ್ನು ಸಹಕಾರ ತತ್ವವಾಗಿ ಪರಿಗಣಿಸಲಾಗಿದೆ. ಇದರ ಪಾಲನೆಯಾಗದೆ ಸಂಘದ ವ್ಯವಹಾರಗಳನ್ನು ಹಿಗ್ಗಿಸಲಾಗುವುದಿಲ್ಲ. ಸಂಘ ಯಶಸ್ಸು ಗಳಿಸಲಾಗುವುದಿಲ್ಲ. ಸಹಕಾರ ಚಳುವಳಿ ಕುಂಟಿತಗೊಳ್ಳುತ್ತದೆ. ಇದರಿಂದಾಗಿ ಕಾಯ್ದೆ ಭಾಗವಾಗಿ ಮತದಾನ ಹಕ್ಕು ಪಡೆಯಬೇಕಾದಲ್ಲಿ ಮಹಾ ಸಭೆಯಲ್ಲಿ ಭಾಗವಹಿಸುವುದು, ಕನಿಷ್ಟ ಸೇವೆ ಸೌಲಭ್ಯ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಎಲ್ಲ ಸದಸ್ಯರು ತಮ್ಮಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದುಕೊಂಡಲ್ಲಿ ಸಹಕಾರ ಸಂಘಗಳು ಸದಸ್ಯ ಚಾಲಿತ (member driven) ಸಹಕಾರ ಸಂಘಗಳು ನಿರ್ಮಾಣವಾಗುವಲ್ಲಿ ಸಂಶಯವಿಲ್ಲ.

ಆಡಳಿತ ಮಂಡಳಿಯು ಸ್ವಯಂ ಆಗಿ ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ತನ್ನ ಪಾತ್ರವನ್ನು ತಾನು ನಿರ್ವಹಿಸಿದಲ್ಲಿ ಸಹಕಾರ ಸಂಘ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಯೇ ತೀರುತ್ತದೆ. ಸಹಕಾರ ಸಂಘದ ಚುಕ್ಕಾಣಿ ಇರುವುದೇ ಆಡಳಿತ ಮಂಡಳಿಯಲ್ಲಿ. ಆಡಳಿತ ಮಂಡಳಿಯು ತಾನು ಸದಸ್ಯರಿಗೆ ತನ್ನನ್ನು ಆರಿಸಿ ಆಡಳಿತದ ಜವಾಬ್ದಾರಿಯನ್ನು ವಹಿಸಿರುವ ಸದಸ್ಯರಿಗೆ ಹೊಣೆಗಾರ ಎಂಬುದನ್ನು ಅರಿತು ನಡೆಯುವುದು ಬಹು ಮುಖ್ಯ. ತನ್ನ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳೇನು? ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆಗಳ ಪೂರೈಕೆಗಾಗಿ ತಾನು ತೆಗೆದುಕೊಂಡ ಕ್ರಮಗಳೇನು? ಎಂಬ ಆತ್ಮವಿಮರ್ಶೆ ಅತ್ಯಗತ್ಯ. ಆಡಳಿತ ಮಂಡಳಿ ಸಭೆಗೆ ಹಾಜರಾಗುತ್ತಿದ್ದೇನೆಯೇ? ಸಭೆಗೆಪೂರ್ವ ತಯಾರಿಯೊಡನೆಹಾಜರಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆಯೇ? ಸಂಘದ ಕಾರ್ಯಾಚರಣೆ ಲಾಭದಾಯಕವಾಗಿ ನಡೆಯುತ್ತಿದೆಯೇ? ಲೆಕ್ಕ ಪತ್ರಗಳು ಸರಿಯಾಗಿ ನಿರ್ವಹಣೆಯಾಗುತ್ತಿದೆಯೇ? ಅಂತಿಮಲೆಕ್ಕಗಳ ಫಲಿತಾಂಶಗಳೇನು? ಸಂಘದ ನಿಧಿಗಳ ನಿರ್ವಹಣೆ ಯಾವ ರೀತಿ ಆಗುತ್ತಿದೆ? ಆಸ್ತಿ– ಜವಾಬ್ದಾರಿ ನಿರ್ವಹಣೆ ಹೇಗೆ ನಡೆಯುತ್ತಿದೆ? ಇದರ ಬಗ್ಗೆ ಹಿಮ್ಮಾಹಿತಿ (feed back) (MIS – Monitoring information system) ಪಡೆಯಲಾಗುತ್ತಿದ್ದೆಯೆ?. ಇದರ ಪರಿಶೀಲನೆಯಾಗುತ್ತಿರ್ದೆಯೇ? ತಪ್ಪು ಒಪ್ಪುಗಳುಕಂಡು ಬರುತ್ತಿದ್ದಾವೆಯೇ? ಸೂಕ್ತ ಸರಿಪಡಿಸುವ, ಚಿಕಿತ್ಸಾ ಕ್ರಮಗಳೇನು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಜವಾಬ್ದಾರಿ ಆಡಳಿತ ಮಂಡಳಿಯದ್ದಾಗಿರುತ್ತದೆ. ಆಡಳಿತ ಮಂಡಳಿಯು ತನ್ನ ನಿರ್ಧಾರಗಳಲ್ಲಿ ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಮಾಡಿಕೊಡದೆ ಪಾರದರ್ಶಕತೆಯಿಂದ ವರ್ತಿಸಿದ್ದಲ್ಲಿ, ತನ್ನ ತೀರ್ಮಾನಗಳು ಎಲ್ಲರನ್ನು ಒಳಗೊಂಡು, ಸಕಲರ ಪಾಲ್ಗೊಳ್ಳುವಿಕೆಯಿಂದ ತೆಗೆದುಕೊಂಡ ತಿರ್ಮಾನವೇ ಆದರೆ ಅದರ ಅನುಷ್ಠಾನವು ಸುಲಭವಾಗುತ್ತದೆ ಮತ್ತು ಯಶಸ್ವಿಯಾಗುತ್ತದೆ. ತೀರ್ಮಾನವು ಮುಂದಾಲೋಚನೆ, ದೂರ ದರ್ಶಿತ್ವದಿಂದ

ಕೂಡಿರಬೇಕು. ಅದರ ಆಗು ಹೋಗುಗಳ (pros-cons) ಬಗ್ಗೆ ಅರಿವಿರಬೇಕು. ಮಿಗಿಲಾಗಿ ತಾವು ಸದಸ್ಯರಿಗೆ (ಮಹಾಸಭೆಗೆ) ಹೊಣೆಗಾರರು ಎಂಬುದನ್ನು ಮರೆಯಲಾಗದು. ಇಂತಹ ಪ್ರಜ್ಞಾವಂತ, ಪ್ರಭುದ್ಧ ಆಡಳಿತ ಮಂಡಳಿ ಅಸ್ತಿತ್ವದಲ್ಲಿದ್ದಲ್ಲಿ ಸಹಕಾರ ಸಂಘ, ಒಟ್ಟಾರೆ ಸಹಕಾರ ಚಳುವಳಿ ಯಶಸ್ವಿಯಾಗುವಲ್ಲಿ ಯಾವುದೇ ಸಂಶಯವಿರುವದಿಲ್ಲ.

ಮತ್ತೊಂದು ಪ್ರಮುಖ ಅಂಗ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಒಳಗೊಂಡಂತೆ ಸಿಬ್ಬಂದಿ ವರ್ಗ. ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ನೌಕರನು/ಳು ಅತ್ಯಂತ ಪ್ರಮುಖ ವ್ಯಕ್ತಿ. ಅದರಲ್ಲಿ ಮೇಲು ಕೆಳಗೆ ಎಂಬ ಪ್ರಶ್ನೆಯಿಲ್ಲ. ಯಾರೂ ಅಮುಖ್ಯರಲ್ಲ. ಆಡಳಿತದ ದೃಷ್ಟಿಯಿಂದ, ಒಂದು ನಿಯಂತ್ರಣ ವ್ಯವಸ್ಥೆಗಾಗಿ ಸಿಬ್ಬಂದಿ ಶ್ರೇಣಿ ನಿರ್ಮಾಣವಾಗುತ್ತಿರುತ್ತದೆ ವಿನಃ ಬೇರೆ ಅಥವಾ ಅನ್ಯತಾ ಉದ್ದೇಶವಿರುವುದಿಲ್ಲ. ಪ್ರತಿಯೊಬ್ಬ ನೌಕರರು ತಮ್ಮ ತಮ್ಮ ಜವಾಬ್ದಾರಿಗಳನ್ನು ವಹಿಸಿದ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ, ಸಕಾಲದಲ್ಲಿ ನಿರ್ವಹಣೆಮಾಡಿದಲ್ಲಿ ಅದಕ್ಕಿಂತ ಮಿಗಿಲಾದುದೇನಿದೆ. ಸಂಘದ ಕಾರ್ಯಾಚರಣೆ ಸುಸೂತ್ರವಾಗಿ ತಾನೇ ತಾನಾಗಿ ನಡೆಯುತ್ತದೆ. ಸಹಕಾರ ಸಂಘದ ಯಶಸ್ಸುತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಅರಿತ ಸಿಬ್ಬಂದಿಯನ್ನು ಅವಲಂಭಿಸಿರುತ್ತದೆ. ಜ್ಞಾನವುಳ್ಳ, ಕೆಲಸದಲ್ಲಿ ನುರಿತ ಸಿಬ್ಬಂದಿಯಾಗಿದ್ದು, ಸಂಘದ ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆ ಈಡೇರಿಸಬೇಕೆಂಬ ಗುಣಾತ್ಮಕ ಮನೋ ಚಿಂತನೆ ಉಳ್ಳವರಾಗಿದ್ದರೆ, ಅವರು ಆಡಳಿತ ಮಂಡಳಿಗೂ ದಿಕ್ಸೂಚಿಯಾಗಿ ವರ್ತಿಸಿ ಸಹಕಾರ ಸಂಘವನ್ನು ಯಶಸ್ವಿಗೊಳಿಸಬಲ್ಲರು ಎಂಬುದು ಸರ್ವಕಾಲಿಕ ಸತ್ಯ.

ಇನ್ನು ಸಂಘದ ಸರಬರಾಜುದಾರರು, ಇನ್ನಿತರ ಸೇವೆ ಸೌಕರ್ಯಗಳನ್ನು ಸಂಘಕ್ಕೆ ಒದಗಿಸುವವರೂ ಸಂಘವು ವಹಿಸಿರುವ ಜವಾಬ್ದಾರಿಯನ್ನು ತಾವು ನಿರ್ವಹಿಸಿದರೆ ಸಂಘದ ಕೆಲಸಕಾರ್ಯಗಳು ಸುಲಲಿತವಾಗಿ ನೆರವೇರುತ್ತವೆ. ಸಹಕಾರ ಸಂಘವು ಒಂದು ಯಶಸ್ವಿ ಸಹಕಾರ ಸಂಘ ಎಂದೆನಿಸಿಕೊಳ್ಳುತ್ತದೆ.

**(3) ಪ್ರಜಾ ಪ್ರಭುತ್ವ:**

ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳು. ಪ್ರಜ್ಞಾವಂತ ಜವಾಬ್ದಾರಿಯುತ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು ಪ್ರಜ್ಞಾವಂತ ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಅತ್ಯುತ್ತಮ ನಾಯಕತ್ವ ಗುಣಗಳ ಬೆಳವಣಿಗೆಗೆ ಸಹಕಾರ ಸಂಸ್ಥೆಗಳು ಅವಕಾಶ ಒದಗಿಸುತ್ತವೆ. ಈ ಸಂಸ್ಥೆಗಳಲ್ಲಿ ಕೇವಲ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲದೇ ಸಂಸ್ಥೆಗಳು ಔದ್ಯೋಗಿಕ ಸಂಸ್ಥೆಗಳಾಗಿರುವುದರಿಂದ ವ್ಯವಹಾರಿಕ ಅಂಶಗಳು, ವ್ಯವಹಾರಿಕ ಜ್ಞಾನ, ಕೌಶಲ್ಯಗಳ ಕಲಿಕೆಗೆ ಸದಾವಕಾಶ ದೊರೆಯುತ್ತದೆ. ಪ್ರಜಾಪ್ರಭುತ್ವ ಮತ್ತು ನಾಯಕತ್ವ ಎರಡೂ ಅವಿಭಾಜ್ಯ ಶ್ರೇಷ್ಠ ನಾಯಕತ್ವ ವಿಲ್ಲದೇ ಪ್ರಜಾಪ್ರಭುತ್ವ ಬೆಳೆಯಲಾರದು ಅದರಂತೆ ಪ್ರಜಾ ಪ್ರಭುತ್ವ ಆಧರಿತ ಸಹಕಾರ ಸಂಸ್ಥೆಗಳು. ತಥಾ ರಾಜಾ ತಥಾ ಪ್ರಜಾ ಅಲ್ಲ ಪ್ರಜಾಪ್ರಭುತ್ವದಲಿ ತಥಾ ಪ್ರಜಾ ತಥಾ ರಾಜ ಎಂಬುದನ್ನು ಒಪ್ಪಿಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ಹೇಗೆ ಮುಖ್ಯವೋ ಹಾಗೆ ಸಹಕಾರ ಸಂಘಗಳಲ್ಲಿ ಸದಸ್ಯರು ಮುಖ್ಯರು, ಅವರೇ ಸದಸ್ಯ ಚಾಲಿತ ಸಹಕಾರ ಸಂಘವನ್ನು ರೂಪಿಸಬಲ್ಲರು.

**(4) ಸಮಾನತೆ, ಬಂಡವಾಳ, ಒಗ್ಗಟ್ಟು:**

ಈ ಸಹಕಾರ ಮೌಲ್ಯಗಳ ಪಾಲನೆ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಸಹಕಾರ ಸಂಘದಲ್ಲಿ ಸದಸ್ಯರೆಲ್ಲರೂ ಸಮಾನರು. ಕೆಲವರು ಹೆಚ್ಚು ಸಮಾನರು ಕೆಲವರು ಕಡಿಮೆ ಸಮಾನರು ಎಂಬ ಪ್ರಶ್ನೆ ಉದ್ಭವಿಸಬಾರದು. ಸಹಕಾರ ಸಂಘಕ್ಕೆ ಸದಸ್ಯರಾದ ನಂತರ ಸಹಕಾರ ಸಂಘದಲ್ಲಿ ಅವರೆಲ್ಲರೂ ಸಮಾನರು, ಒಬ್ಬ ಸದಸ್ಯ ಎಷ್ಟೇ ಷೇರು ಹೊಂದಿದ್ದರೂ ಅವರಿಗೆ ಇರುವುದು ಒಂದೇ ಮತ. ಸಮಾನತೆ, ಸಮಾನ ಮನಸ್ಕರು, ಸಮಾನ

ಚಿಂತನೆ ಅತಿ ಅವಶ್ಯ. ಭಿನ್ನಮತ ಸರ್ವೇ ಸಾಮಾನ್ಯ ಆದರೆ ಚಿಂತನ ಮಂಥನ ನಡೆದು ಸದಸ್ಯರ ಒಳಿತಿಗಾಗಿ ಅತ್ಯುತ್ತಮ ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲರೂ ಸಮಾನರು ಎನ್ನುವ ಮನೋಭಾವನೆ, ಚಿಂತನೆ ಸಹಕಾರ ಸಂಘದ ಯಶಸ್ವಿ ಕಾರ್ಯಾಚರಣೆ ದೃಷ್ಟಿಯಿಂದ ಅತಿ ಅವಶ್ಯ.

ಬಂಡವಾಳವಿಲ್ಲದೇ ಯಾವುದೇ ವ್ಯವಹಾರ ಮಾಡಲಾಗುವುದಿಲ್ಲ. ಬಂಡವಾಳವಿಲ್ಲದಿದ್ದಲ್ಲಿ ಬಂಡವಾಳವಿಲ್ಲದ ಬಡಾಯಿ ಟಿ.ಪಿ. ಕೈಲಾಸಂರವರ ನಾಟಕದತಾಗುತ್ತದೆ. ಅದರಲ್ಲಿಯೂ ಸಹಕರ ಸಂಘದಲ್ಲಿನ ಬಂಡವಾಳ ಒಂದು ರೀತಿ ಮೌಲ್ಯವರ್ಧಿತ ಬಂಡವಾಳ (equity) ಅದರಲ್ಲಿ ಪ್ರೀತಿ, ಪ್ರೇಮ, ನಮ್ಮ ಸಂಘ ನಮ್ಮದು ಮುಖಭಾವ, ಶ್ರಮ, ಕಷ್ಟಪಟ್ಟುಗಳಿಸಿದ ಗಳಿಕೆ ಅಂಶಗಳು ಮೇಳೈಸಿದೆ. ಹಾಗಾಗಿ ಇದರ ಮಹತ್ವ ಅತಿ ಹೆಚ್ಚಿನದು. ಬಂಡವಾಳ ಕ್ರೋಢೀಕರಣ, ಬಂಡವಾಳಕ್ಕೆ ಬಂಡವಾಳದ ಸೇರ್ಪಡೆ, ಉಳಿಕೆ, ಅದರ ವಿವೇಚನಾಯುತ ವ್ಯವಹಾರ ಹೂಡಿಕೆ ಬಹು ಮುಖ್ಯ ವಿಚಾರವಾಗುತ್ತದೆ.

ಒಗ್ಗಟ್ಟು (solidarity) ಯಾವುದೇ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆ ಸಹಕಾರ ಸಂಘದಲ್ಲಿಯೂ ಕೂಡ. ಪಟ್ಟಭದ್ರ ಹಿತಾಸಕ್ತಿಗಳು, ಸಂಘಟನೆಯನ್ನು ಒಡೆಯಲು ಸದಾ ಹವಣಿಸುತ್ತಿರುತ್ತವೆ. ಸಹಕಾರ ಸಂಘವು ಈ ವಿಷಯಗಳಲ್ಲಿ ಅತಿ ಎಚ್ಚರಿಕೆ ಇಂದ ಇರತಕ್ಕದ್ದು. ಅನೇಕ ವೇಳೆ ಬಾಹ್ಯದಿಂದ ಅಲ್ಲದೇ ಆಂತರಿಕವಾಗಿ ನುಸುಳಿ ಯಶಸ್ವಿ ಕಾರ್ಯಾಚರಣೆಗೆ ಧಕ್ಕೆ ತರುವ, ಹಾಳುಗೆಡಹುವ ಕೆಲಸ ಮಾಡುತ್ತವೆ. ಇಂತಹ ದುಷ್ಟ ಶಕ್ತಿಗಳ ವಿರುದ್ದ ಸಹಕಾರ ಸಂಘದ ಭಾಗೀಧಾರರೆಲ್ಲರೂ ಒಗ್ಗೂಡಿ ಕಾರ್ಯವೆಸುಗುವ ಶಕ್ತಿಯನ್ನು ಹೊಂದಿರಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಅರಿತು ಸಾಬೀತು ಪಡಿಸಬೇಕು.

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು ವಿಶ್ವಾದಾದ್ಯಂತ ಸಹಕಾರ ಸಂಘಗಳನ್ನು ಅಧ್ಯಯನ ಮಾಡಿ ಈ ಮೇಲಿನ ಸಹಕಾರ ಮೌಲ್ಯಗಳನ್ನು ರೂಪಿಸಿದೆ. ಇವುಗಳ ಅಳವಡಿಕೆಯಿಂದ ಸಹಕಾರಿಗಳು ಯಶಸ್ವಿ ಸಹಕಾರ ಸಂಘಗಳನ್ನು ಕಟ್ಟಿ ಉಳಿಸಿಬೆಳೆಸುತ್ತಾರೆ ಎಂಬುದು ಸದಾಶಯವೇ ಸರಿ.

**ಇವನಾರವ, ಇವನಾರವ,ಇವನಾರವನೆಸದಿರಯ್ಯಾ**

**ಇವನಮ್ಮವ, ಇವನಮ್ಮವ, ಇವ ನಮ್ಮವನೆಂದಿನಿಸಯ್ಯಾ**

**ಕೂಡಲ ಸಂಗಮ ದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ**

**– ಬಸವಣ್ಣ**

**ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ॥**

**********************************************************************************************************

# 27. ಸಹಕಾರ ತತ್ವಗಳ ಪಾಲನೆಯಿಂದ ಆಗುವ ಧನಾತ್ಮಕ ಪರಿಣಾಮಗಳು

ಸಂಘ ನಡೆಸುವಾಗ ಸದಸ್ಯನಾಗಿ, ಆಡಳಿತ ಮಂಡಳಿ ಸದಸ್ಯನಾಗಿ ಅಥವಾ ಪಧಾಧಿಕಾರಿಯಾಗಿ ನಾನು ನನ್ನ ಜವಾಬ್ದಾರಿಯನ್ನು ಸ್ವಯಂ ಪ್ರೇರಿತವಾಗಿ ಇತರರಿಂದ ಹೇಳಿಸಿಕೊಳ್ಳದೇ ನಿರ್ವಹಿಸುತ್ತೇನೆ ಎಂಬ ಸ್ಪಷ್ಟ ನಿಲುವು ತೆಗೆದುಕೊಳ್ಳತಕ್ಕದ್ದು. ಅವರವರ ಜವಾಬ್ದಾರಿಯನ್ನು ಅರಿತರೆ ಸಹಕಾರ ಸಂಘ ತನ್ನ ಧ್ಯೇಯೋದ್ದೇಶ ಈಡೇರಿಸುವಲ್ಲಿ

ಸಫಲವಾಗುವುದರಲ್ಲಿ ಯಾವುದೇ ಸಂಶಯ ವಿರುವುದಿಲ್ಲ.

ಸಹಕಾರ ತತ್ವಗಳು ಯಾವುವು? ಅವು ಹೇಗೆ ರೂಢಿಗತವಾಗಿ ಬಂದಿವೆ ಎಂಬುದನ್ನು ಅರಿಯುವ ಮೊದಲಿಗೆ 'ಸಹಕಾರ ಎಂದರೇನು? ಎಂಬ ಸಹಜ ಪ್ರಶ್ನೆ ಮೂಡುತ್ತದೆ. ಸಹ ಎಂದರೆ ಒಟ್ಟಿಗೆ ಕಾರ್ಯವೆಸಗುವಿಕೆ, ಒಟ್ಟಿಗೆ ಕೂಡಿ ಕೆಲಸ ಮಾಡುವುದು, ಒಬ್ಬರಿಂದ ಆಗದ ಕೆಲಸವನ್ನು ಎಲ್ಲರೂ ಸೇರಿ ಮೂಲತಃ ಸಂಘ ಜೀವಿಯಾದ ಮನುಷ್ಯ ಸಂಘವನ್ನು ರಚಿಸಿಕೊಂಡು ಸಹಕಾರ ಸಂಘದ ಮೂಲಕ ತನ್ನ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಮಾಡಿಕೊಂಡಿರುವ ವ್ಯವಸ್ಥೆಯಾಗಿದೆ.

ಸಹಕಾರದ ಮೂಲ ಆರಂಭವಾದದ್ದೆ ಕಾರ್ಮಿಕ ಚಳುವಳಿಯ ಅಂಗವಾಗಿ, ಬ್ರಿಟನ್‌ನಲ್ಲಿ ಆದ ಕೈಗಾರಿಕಾ ಕ್ರಾಂತಿಯ ಫಲವಾಗಿ ಹುಟ್ಟಿದ ಕಾರ್ಮಿಕ ವರ್ಗ ತನ್ನ ಸೀಮಿತ ಆದಾಯದಲ್ಲಿ ಕ್ಷೇಮ ಜೀವನ ನಡೆಸಲು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ, ತಮ್ಮ ದಿನನಿತ್ಯದ ಅಗತ್ಯ ವಸ್ತುಗಳ ಖರೀದಿಗೆ ಒಬ್ಬರೆ ನಿರತರಾಗುವ ಬದಲಿಗೆ ಕೆಲವರು ಒಟ್ಟಿಗೆ ಸೇರಿ ಖರೀದಿಸಿ ಹಂಚಿಕೊಳ್ಳುವುದರಿಂದ ಆಗುವ ಪ್ರಯೋಜನಗಳನ್ನು ಕಂಡುಕೊಂಡರು ಇದರಿಂದ ಉದ್ಭವಿಸಿದ್ದೇ ಸಹಕಾರ ಸಂಘ.

ಈ ಸಹಕಾರಿಗಳನ್ನು ರಾಕ್ ಡೇಲ್ ಅಗ್ರಗಾಮಿಗಳು (Pioneers) ಎಂದು ಕರೆಯಲಾಗಿದೆ. ಇವರು ಸಹಕಾರ ಸಂಘ ನಡೆಸುವಾಗ್ಗೆ ತಾವೇ ಕೆಲವು ಕಟ್ಟುಪಾಡುಗಳನ್ನು ನೀತಿ ನಿಯಮಗಳನ್ನು ರೂಪಿಸಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದರು. ಇವುಗಳೇ ಸಹಕಾರ ತತ್ವಗಳು ಮತ್ತು ಅದನ್ನು ಅನುಸರಿಸಿ ನಿಯಮಗಳನ್ನು ರಚಿಸಲಾಯಿತು ಇವಗಳನ್ನು ಇತರೆ ಸಹಕಾರ ಸಂಘಗಳು ಅನುಸರಿಸಿ ಸಹಕಾರ ಚಳುವಳಿ ರೂಪಿತವಾಯಿತು.

ವಿಶ್ವದಾದ್ಯಂತ ಸಹಕಾರದ ಬಗ್ಗೆ ಶಿಕ್ಷಣಕ್ಕಾಗಿ ಒಂದು ಸಹಕಾರ ಶೃಂಗ ವ್ಯವಸ್ಥೆ ರೂಪಿತವಾಗಿದೆ. ಭಾರತದಲ್ಲಿ ಪ್ರಾಥಮಿಕವಾಗಿ ಸಹಕಾರ ಸಂಘಗಳು ಒಗ್ಗೂಡಿ ಜಿಲ್ಲಾ ಮಟ್ಟದಲ್ಲಿ ಸಹಕಾರ ಒಕ್ಕೂಟ ಸಹಕಾರ ಒಕ್ಕೂಟಗಳು ಒಗ್ಗೂಡಿ ರಾಜ್ಯದಲ್ಲಿ ರಾಜ್ಯ ಸಹಕಾರ ಮಹಾಮಂಡಳ ಮತ್ತು ರಾಜ್ಯ ಮಹಾಮಂಡಳಗಳು ಒಗ್ಗೂಡಿ ರಾಷ್ಟ್ರಮಟ್ಟದಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಒಕ್ಕೂಟ. ಹೀಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ವಿಜರ್‌ಲ್ಯಾಂಡ್ ಜಿನೀವಾ ಕೇಂದ್ರ ಸ್ಥಾನ ಹೊಂದಿ ಅಂತರಾಷ್ಟ್ರೀಯ ಸಹಕಾರ ಮೈತ್ರಿಕೂಟ ರಚನೆಯಾಗಿದೆ. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಕೂಟವು ವಿಶ್ವದ ಸಹಕಾರ ಚಳುವಳಿಯ ಬೆಳವಣಿಗೆ, ಆಗತ್ಯತೆ, ದಿಕ್ಕು ಇವುಗಳನ್ನು ಅನುಸರಿಸಿ ವಿಶ್ವಾಧ್ಯಂತ ಸಹಕಾರ ಪಸರಿಸುವಂತೆ ಕ್ರಮಗಳನ್ನು ಕೈಗೊಳ್ಳುತ್ತಿವೆ. ಈ ಮೈತ್ರಿಕೂಟವು ಸಹಕಾರ ತತ್ವಗಳು ಸಹಕಾರ ಸಂಘದ ವ್ಯಾಖ್ಯಾನವನ್ನು ನೀಡಿದೆ. ಕಾಲಕಾಲಕ್ಕೆ ಬದಲಾದ ವಿಶ್ವದ ಆರ್ಥಿಕ ಪರಿಸ್ಥಿತಿಯ ಅಗತ್ಯತೆಗೆ ಅನುಸಾರ ಇವುಗಳಲ್ಲಿ ಬದಲಾವಣೆಗಳನ್ನು ತರುತ್ತಲ್ಲದೆ ಅದರಂತೆ ಸದಸ್ಯರಾಷ್ಟ್ರಗಳು ಪಾಲಿಸುತ್ತಾ ಬಂದಿವೆ. ಜುಲೈ ತಿಂಗಳ ಮೂರನೇ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಣೆ ಮಾಡಲಾಗುತ್ತಿದೆ.

ಈ ಅಂತರರಾಷ್ಟೀಯ ಮೈತ್ರಿಕೂಟವು ಸಹಕಾರ ಸಂಘ ಎಂದರೇನು? ಎಂಬುದಕ್ಕೆ ಈ ರೀತಿ ವ್ಯಾಖ್ಯಾನಿಸಿದ 'ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮ ಸಾಮಾನ್ಯ ಆರ್ಥಿಕ, ಸಮಾಜಿಕ ಸಾಂಸ್ಕೃತಿಕ, ಅವಶ್ಯಕತೆಗಳ, ಆಕಾಂಕ್ಷೆಗಳ ಪೂರೈಕೆಗಾಗಿ ರಚಿಸಿಕೊಂಡ ಸಮೂಹ ಒಡೆತನವುಳ್ಳ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಒಳಗೊಂಡ ಸ್ವಾಯತ್ತ ಔದ್ಯೋಗಿಕ ಸಂಸ್ಥೆ ಈ ಹಿನ್ನೆಲೆಯಲ್ಲಿ ಈ ಸಂಸ್ಥೆಯು ನಡೆಯಲು ಕಾರಣೀಭೂತರಾದ ಭಾಗೀದಾರರಾದ ಸದಸ್ಯರು, ಆಡಳಿತ ಮಂಡಳಿ ಪಧಾಧಿಕಾರಿಗಳು ಮತ್ತು ನೌಕರರು ಸಹಕಾರ ಸಂಘವನ್ನು ಯಶಸ್ವಿಯಾಗಿ ನಡೆಸಿ ಸದಸ್ಯರ ಅವಶ್ಯಕತೆಗಳ, ಆಕಾಂಕ್ಷಿಗಳ ಪೂರೈಕೆಗಾಗಿ ಹೇಗೆ ನಡೆದುಕೊಳ್ಳಬೇಕು? ಎಂಬುದಕ್ಕೆ ಉತ್ತರ ಸಹಕಾರ ತತ್ವಗಳನ್ನು ಅರಿತು ಅವುಗಳನ್ನು ಪಾಲನೆ ಮಾಡುವುದರಲ್ಲಿ ಎಂದರೆ

ತಪ್ಪಾಗಲಾರದು.

ರಾಕ್‌ಡೇಲ್ ಅಗ್ರಗಾಮಿಗಳು ಪಾಲಿಸಿದ ತತ್ವಗಳು ಮತ್ತು ಕಾಲ ಕಾಲಕ್ಕೆ ಆದ ಬದಲಾವಣೆಗಳೊಂದಿದೆ. 1937ರಲ್ಲಿ ಸಹಕಾರ ತತ್ವಗಳನ್ನು ರಚಿಸಿ ಅದಕ್ಕೆ ರಾಕ್‌ಡೇಲ್ ತತ್ವಗಳು ಎಂದು ಕರೆಯಿತು. ಆ ತತ್ವಗಳು ಈ ಕೆಳಕಂಡಂತಿವೆ.

1. ತೆರೆದ ಮತ್ತು ಮುಕ್ತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ನಿಯಂತ್ರಣ
3. ಷೇರು ಬಂಡವಾಳದ ಮೇಲೆ ಪರಿಮಿತ ಬಡ್ಡಿ
4. ಲಾಭದ ಸಮ ಪ್ರಮಾಣದ ಹಂಚಿಕೆ
5. ಸಹಕಾರ ಶಿಕ್ಷಣ
6. ಸಹಕಾರ ಸಂಘಗಳ ನಡುವೆ ಸಹಕಾರ

ಅಂದಿನ ದಿನಗಳಿಗೆ ಈ ತತ್ವಗಳ ಅಗತ್ಯತೆ ಕಂಡು ಬಂದಿದ್ದು ಇವುಗಳನ್ನು ಪಾಲಿಸಲು ಉದ್ದೇಶಿಸಲಾಗಿತ್ತು. ಅದರಂತೆ ಸಹಕಾರ ಕಾಯ್ದೆ ಕಾನೂನುಗಳು ರಚನೆಗೊಂಡು ಅನುಷ್ಠಾನಕ್ಕೆ ತರಲಾಗಿದೆ. ಸಹಕಾರ ಚಳುವಳಿ ಬೆಳೆದಂತೆ ಆದರೆ ವ್ಯಾಪ್ತಿ ವಿಸ್ತೀರ್ಣಗೊಂಡಂತೆ ಆರ್ಥಿಕ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಅನುಸರಿಸಿ ನಂತರ ಸಾಮಾಜಿಕ ಕಳಕಳಿ ಎಂಬ ಏಳನೇ ಸಹಕಾರ ತತ್ವವನ್ನು ಸೇರಿಸಲಾಯಿತು.

**ಸಹಕಾರ ಮೌಲ್ಯಗಳು**

**1. ಸ್ವಸಹಾಯ ಮತ್ತು ಒಬ್ಬರು ಮತ್ತೊಬ್ಬರಿಗೆ ಸಹಾಯ :** ಸಹಕಾರದ ಮೂಲಬೇರು ಅಡಗಿರುವುದು 'ನಾನು ಎನ್ನುವುದರ ಬದಲಿಗೆ ನಾವು ನಮ್ಮದು ಎಂಬುದಾಗಿದೆ. ಸಂಘಟನೆಗೊಂಡಿರುವ ಉದ್ದೇಶವೇ ನನ್ನಿಂದ ಆಗದ ಕೆಲಸವನ್ನು ಎಲ್ಲರೂ ಒಟ್ಟುಗೂಡಿ ಕಾರ್ಯಗತಗೊಳಿಸೋಣ ಎಂಬ ಉದ್ದೇಶದಿಂದ ಇಲ್ಲಿ ಸಮಾನತೆ ಅಂಶ ಪ್ರಮುಖ ಪಾತ್ರ ವಹಿಸುತ್ತದೆ.

**2. ಸ್ವಯಂ ಜವಾಬ್ದಾರಿ:** ಸಂಘ ನಡೆಸುವಾಗ ಸದಸ್ಯನಾಗಿ, ಆಡಳಿತ ಮಂಡಳಿ ಸದಸ್ಯನಾಗಿ ಅಥವಾ ಪಧಾಧಿಕಾರಿಯಾಗಿ ನಾನು ನನ್ನ ಜವಾಬ್ದಾರಿಯನ್ನು ಸ್ವಯಂ ಪ್ರೇರಿತವಾಗಿ ಇತರರಿಂದ ಹೇಳಿಸಿಕೊಳ್ಳದೇ ನಿರ್ವಹಿಸುತ್ತೇನೆ ಎಂಬ ಸ್ಪಷ್ಟನಿಲುವು ತೆಗೆದುಕೊಳ್ಳತಕ್ಕದ್ದು, ಅವರವರ ಜವಾಬ್ದಾರಿಯನ್ನು ಅರಿತರೆ ಸಹಕಾರ ಸಂಘ ತನ್ನ ದ್ಯೆಯೋದ್ದೇಶ ಈಡೇರಿಸುವಲ್ಲಿ ಸಫಲವಾಗುವುದರಲ್ಲಿ ಯಾವುದೇ ಸಂಶಯ ವಿರುವುದಿಲ್ಲ.

**3. ಪ್ರಜಾಪ್ರಭುತ್ವ :** ಈ ಮೌಲ್ಯವನ್ನು ಇದರ ಘನತೆಯನ್ನು ಕಾಪಾಡುವುದು ಪ್ರತಿಯೊಬ್ಬ ಸದಸ್ಯನ ಕರ್ತವ್ಯ. ತನಗೆ ಸಂಘವು ಏನು ಮಾಡಿದೆ ಎಂಬುದರ ಬದಲಿಗೆ ತಾನು ಸಂಘಕ್ಕೆ ಏನು ಮಾಡಿದ್ದೇನೆ ಎಂದು ಪ್ರಶ್ನಿಸಿಕೊಳ್ಳತಕ್ಕದ್ದು.

**4. ಸಮಾನತೆ, ಬಂಡವಾಳ, ಒಗ್ಗಟ್ಟು :** ಸಹಕಾರ ಸಂಘದ ದೌರ್ಬಲ್ಯವೇ ಅಸಮಾನತೆ, ನಾವು ಒಂದು ದೊಡ್ಡಗುಂಪು ಲೋಕೋ ಭಿನ್ನ ರುಚಿಃ ಎಂಬಂತೆ ಅನೇಕ ರೀತಿಯಲ್ಲಿ ಭಿನ್ನವಾಗಿದ್ದೇವೆ. ಆದರೆ ನಾವು ಸದಸ್ಯರಾಗಿ ಸಾಮಾನ್ಯ ಉದ್ದೇಶ ನಮ್ಮದಾಗಿದೆ. ಗುರಿ ಸಾಮಾನ್ಯವಾಗಿದೆ.

ಬಂಡವಾಳ ವಿಲ್ಲದೆ ವ್ಯವಹಾರವಿಲ್ಲ. ಬಂಡವಾಳವಿಲ್ಲದ ಬಡಾಯಿಗಳಾಗಿ ಬಿಡುತ್ತೇವೆ. ಹನಿ ಹನಿ ಗೂಡಿದರೆ ಹಳ್ಳ ತೆನೆ ತೆನೆ ಗೂಡಿದರೆ ಬಳ್ಳ ಎಂಬುದು ಬಹು ಮುಖ್ಯವಾಗುತ್ತದೆ. ಎಷ್ಟು ಷೇರು ಹೊಂದಿದರು ಮತ ಮಾತ್ರ ಒಂದು ಆಗಿರುತ್ತದೆ. ಇದು ಪ್ರಜಾಪ್ರಭುತ್ವದ ತಳಹದಿ ಹೊಂದಿದ ಸಹಕಾರ ಸಂಘದ ತಳಪಾಯ, ಆದರೆ ಬಂಡವಾಳವಿಲ್ಲದೇ

ವ್ಯವಹಾರ ನಡೆಸಲು, ವ್ಯವಹಾರವನ್ನು ವೃದ್ಧಿಗೊಳಿಸಲು ಸಾಧ್ಯವಿಲ್ಲ ಆದುದ್ದರಿಂದ ಅಧಿಕ ಷೇರುಗಳ ಬಂಡವಾಳ ತೊಡಗಿಸತಕ್ಕದ್ದು ಠೇವಣಾತಿಗಳನ್ನು ಮಾಡತಕ್ಕದ್ದು. ಎಲ್ಲಿ ಸುಲಭ ಸಾಲ ಸೌಲಭ್ಯ, ಕಡಿಮೆ ವೆಚ್ಚ, ನ್ಯಾಯಯುತ ವೆಚ್ಚ ಸಹಿತ ಸಾಲವನ್ನು ತರುವುದು ಮತ್ತು ಲಾಭಗಳಿಸಿದಾಗ ಹೆಚ್ಚು ನಿಧಿಗಳನ್ನು ಇರಿಸಿ ಸ್ವಂತ ಬಂಡವಾಳವನ್ನು ಹೆಚ್ಚಿಸುವ ಬಗ್ಗೆ ಗಮನ ನೀಡುವುದು. ಇದರಿಂದ ವೆಚ್ಚ ರಹಿತ ಬಂಡವಾಳ ಸೃಷ್ಟಿಸಲು ಸಾಧ್ಯ.

ಒಗ್ಗಟ್ಟು ಬಹುಮುಖ್ಯ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿ ಮರೆಯಲಾಗದು. ಒಗ್ಗಟ್ಟಿದ್ದಲ್ಲಿ ನಾವು ಏನನ್ನಾದರೂ ಸಾಧಿಸಬಹುದು ಅದು ಸಂಘಕ್ಕೆ ಸಶಕ್ತತೆಯನ್ನು ನೀಡುತ್ತದೆ. ಉತ್ತಮ ನಾಯಕತ್ವವನ್ನ ಒದಗಿಸುತ್ತದೆ. ಮಾರುಕಟ್ಟೆಯಲ್ಲಿ ತನ್ನ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ.

**ಸಹಕಾರಿ ತತ್ವಗಳು**

**1.ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ:** ಒಬ್ಬ ವ್ಯಕ್ತಿ ಸಹಕಾರ ಸಂಘದಿಂದ ತಾನು ಏನು ಪ್ರಯೋಜನ ಪಡೆಯಬಹುದು ತನ್ನ ಆರ್ಥಿಕ ಮತ್ತು ತನ್ಮೂಲಕ ಸಾಮಾಜಿಕವಾಗಿ ಏರುಗತಿಯನ್ನು ಕಾಣಬಹುದು ಎಂಬುದನ್ನು ತಾನೇ ಕಂಡುಕೊಳ್ಳಬೇಕು ಎಂದು ನಿರೀಕ್ಷಿಸಲಾಗಿದೆ. ಮತ್ತೊಬ್ಬರ ಬಲವಂತಕ್ಕೆ ಆದಾಗ ಸಹಕಾರ ಸಂಘ ತನ್ನದು ತಾನು ಇದರಲ್ಲಿ ಕನಿಷ್ಠ ಬಂಡವಾಳ ಹೂಡಿದ್ದೇನೆ ಎಂಬ ಕಳಕಳಿ, ತುಡಿತ ಉಂಟಾಗುವುದಿಲ್ಲ, ಸ್ವಯಂ ಪ್ರೇರಿತವಾದಲ್ಲಿ ಅದಕ್ಕಿಂತ ಮಿಗಿಲಾದ ಆದರ್ಶ ಮತ್ತೊಂದಿಲ್ಲ, ಸದಸ್ಯತ್ವ ನೊಂದಣಿಯಾದ ನಂತರ ಸದಸ್ಯತ್ವ ಮಂಜೂರಾತಿ ಅಧಿಕಾರ ಆಡಳಿತ ಮಂಡಳಿಯಲ್ಲಿ ನಿಹಿತವಾಗಿರುತ್ತದೆ.

**2. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ :** ಸದಸ್ಯರು ಸರ್ವಸದಸ್ಯರ ಸಭೆ ಸಾಮಾನ್ಯ ನಿಕಾಯ ಒಂದು ದೊಡ್ಡಗುಂಪು ತಾನು ಒಡೆಯನಾದರು ಸದಸ್ಯರು ದೈನಂದಿನ ವ್ಯವಹಾರ, ಕಾರ್ಯಾಚರಣೆ ಮಾಡಲಾರ. ಸಹಕಾರ ಸಂಘದ ಮತ್ತೊಂದು ವೈಶಿಷ್ಟ್ಯ ತಾನೇ ಒಡೆಯ ಮತ್ತು ತಾನೇ ಗ್ರಾಹಕನೂ ಕೂಡ. ಹೀಗಿರುವಾಗ ಆಡಳಿತಕ್ಕೆ / ಕಾರ್ಯನಿರ್ವಹಣೆಗೆ ಕಂಡುಕೊಂಡ ಮಾರ್ಗ ಚುನಾವಣೆಯಿಂದ ತನ್ನ ನಾಯಕರನ್ನು (ಆಡಳಿತ ಮಂಡಳಿ ಸದಸ್ಯರು / ನಿರ್ದೇಶಕರು) ಆರಿಸಿ ಅವರಿಗೆ ಸಂಘದ ಕಾರ್ಯಾಚರಣೆಯ ಜವಾಬ್ದಾರಿಯನ್ನು ನೀಡುವುದು, ಮತ್ತು ಸರ್ವಸದಸ್ಯರ ಸಭೆಯಲ್ಲಿ ಅವರ ಕಾರ್ಯಾಚರಣೆಯನ್ನು ಪರಮಾರ್ಶಿಸುವುದು.

**3. ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು:** ಸದಸ್ಯರಾದ ಮಾತ್ರಕ್ಕೆ ಸಹಕಾರ ಸಂಘವನ್ನು ಬೆಳೆಸಲು ಸಾಧ್ಯವಾಗುವುದಿಲ್ಲ ಸಂಘದ ಉದ್ದೇಶಿತ ಕಾರ್ಯ ಚಟುವಟಿಕೆಗಳಲ್ಲಿ ಸದಸ್ಯರು ಪಾಲ್ಗೊಂಡಾಗ ಮಾತ್ರ ಸಂಘದ ಒಟ್ಟಾರೆ ವ್ಯವಹಾರದ ಗಾತ್ರ ಹಿಗ್ಗಲು ಸಾಧ್ಯ. ಆಗ ಮಾತ್ರ ಲಾಭದಾಯಕ ವ್ಯವಹಾರ ನಡೆಸಲು ಸಾಧ್ಯ. ಕೇವಲ ನಿಷ್ಕ್ರಿಯ ಸದಸ್ಯರಿಂದ ಅವರಿಗೂ ಮತ್ತು ಇತರ ಸದಸ್ಯರಿಗೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಇತ್ತೀಚಿಗಿನ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ ಒಬ್ಬ ಸದಸ್ಯ ಮತದಾನದ ಹಕ್ಕು ಪಡೆಯಲು ಎರಡು ಅಂಶಗಳನ್ನು ಪಾಲಿಸಿರಲೇಬೇಕು ಎಂಬ ಷರತ್ತು ವಿಧಿಸಲಾಗಿದೆ 1. ಕಳೆದ ಐದು ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸಿರಬೇಕು. 2. ಉಪನಿಯಮಗಳಲ್ಲಿ ತಿಳಿಸಿರುವಂತೆ ಸಂಘದಿಂದ ಕನಿಷ್ಠಸೇವೆ ಸೌಲಭ್ಯವನ್ನು (ವ್ಯವಹಾರ) ಪಡೆದಿರಬೇಕು.

**4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ:** ಸಹಕಾರ ಸಂಘಗಳ ರಚನೆಯಲ್ಲಿ ಮತ್ತು ಕಾರ್ಯಾಚರಣೆಯಲ್ಲಿ ಸದಸ್ಯರು ತಾವು ರಚಿಸಿಕೊಂಡಿರುವ ಉಪನಿಯಮ ಕಾನೂನು ಮತ್ತು ಕಾಯ್ದೆಗಳ ಕಟ್ಟುಪಾಡಿಗೆ ಒಳಪಟ್ಟು ಸ್ವಾಯತ್ತತೆಯನ್ನು ಹೊಂದಿರುತ್ತಾರೆ ಮತ್ತು ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಈ ವಾತಾವರಣವಿದ್ದಲ್ಲಿ ಸಹಕಾರ ಸಂಘಗಳು ಅಭಿವೃದ್ಧಿ

ಹೊಂದಲು ಸಾಧ್ಯವಾಗುತ್ತದೆ. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಸ್ವೇಚ್ಛಚಾರಕ್ಕೆ ಎಡೆ ಮಾಡಿಕೊಡಲಾಗದು ಇದರಿಂದ ಸದಸ್ಯರ ಆಸೆ ಆಕಾಂಕ್ಷೆಗಳ ಈಡೇರಿಕೆಗೆ ಪೂರಕವಾಗುವ ಬದಲಿಗೆ ಮಾರಕವಾಗುವ ಸಂಭವವಿರುತ್ತದೆ.

**5. ಶಿಕ್ಷಣ, ತರಬೇತಿ ಮತ್ತು ಪ್ರಚಾರ :** ಸಹಕಾರ ಚಳುವಳಿಯ ಬೆಳವಣಿಗೆಗೆ ಸದಸ್ಯ ಶಿಕ್ಷಣ ಅತ್ಯಮೂಲ್ಯ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜ್ಞಾವಂತ ಮತದಾರ ಎಷ್ಟು ಪ್ರಮುಖ ಪಾತ್ರ ನಿರ್ವಹಿಸುತ್ತಾನೋ ಅದೇ ರೀತಿ ಸಹಕಾರ ಸಂಘದ ಅತ್ಯಮೂಲ್ಯ, ಆಸ್ತಿ ಪ್ರಜ್ಞಾವಂತ, ಜಾಗೃತ, ಸಕ್ರಿಯ ಸದಸ್ಯ, ಸದಸ್ಯ ಸಹಕಾರದ ವಿಷಯದಲ್ಲಿ ಅರಿತವನಾಗಿದ್ದು ತನಗಾಗುತ್ತಿರುವ ಪ್ರಯೋಜನ, ತನ್ನದೆಂಬ ಹಮ್ಮು ಭಿಮ್ಮು ಬೇರೆ ವ್ಯವಸ್ಥೆಯಲ್ಲಿ ಪಡೆಯಲು ಅಸಾಧ್ಯ ಎಂಬ ಅರಿವು ಇರತಕ್ಕದ್ದು. ಇದನ್ನು ಮೂಡಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ ಇದಕ್ಕಾಗಿಯೇ ನಮ್ಮ ರಾಷ್ಟ್ರದಲ್ಲಿ ಮೂರು ಹಂತದ ಶೃಂಗವ್ಯವಸ್ಥೆ ನಿರ್ಮಾಣವಾಗಿದೆ. ಕಾಯ್ದೆಯಲ್ಲಿ ಸಹಕಾರ ಸಂಘವು ತನ್ನ ಲಾಭದಲ್ಲಿ (ಶೇ.1.5) ಸಹಕಾರ ಶಿಕ್ಷಣ ವಂತಿಗೆ ನೀಡುವುದನ್ನು ಕಡ್ಡಾಯ ಮಾಡಲಾಗಿದೆ. ಹಾಗೆಯೇ ಚುನಾಯಿತ ಆಡಳಿತ ಮಂಡಳಿ ಸದಸ್ಯರು, ಪಧಾಧಿಕಾರಿಗಳು ಮತ್ತು ಸಂಘ ಮುಖ್ಯಕಾರ್ಯನಿರ್ವಾಹಕರೂ ಒಳಗೊಂಡಂತೆ ಇತರೆ ಸಿಬ್ಬಂದಿ ತರಬೇತಿಯನ್ನು ಪೆಡೆಯಬೇಕಾಗುತ್ತದೆ. ಇದರಿಂದ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಲ್ಲದೆ ನೈಪುಣ್ಯವನ್ನು ಗಳಿಸಬಹುದಾಗಿದೆ.

**6. ಸಹಕಾರ ಸಂಸ್ಥೆಗಳ ನಡುವೆ ಸಹಕಾರ :** ಈ ತತ್ವದ ಆಧಾರದಲ್ಲಿ ಸಹಕಾರ ಸಂಘಗಳು ಒಂದೊಕ್ಕೊಂದು ಪೂರಕವಾಗಿ ಕಾರ್ಯವೆಸಗಿದಾಗ ಚಳುವಳಿ ಬೆಳೆಯಲು ಉಳಿಯಲು ಸಾಧ್ಯವಾಗುತ್ತದೆ. ಎಲ್ಲ ರೀತಿಯ ಅಂದರೆ ವಿವಿಧ ಉದ್ದೇಶಗಳನ್ನು ಹೊಂದಿದ ಸಹಕಾರ ಸಂಘಗಳೆಲ್ಲವೂ ಸಹಕಾರ ಕುಟುಂಬದ ಸದಸ್ಯರೇ ಆಗಿರುತ್ತಾರೆ. ಕುಟುಂಬ ಸದಸ್ಯರೊಳಗೆ ಸಹಕಾರವಿದ್ದಲ್ಲಿ ಕುಟುಂಬ ಬೆಳೆಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ನಮ್ಮ ಬಂಡವಾಳ ನಮ್ಮಲ್ಲಿಯೇ ಪ್ರೌಡೀಕರಣಗೊಳ್ಳತಕ್ಕದ್ದು, ಇದಕ್ಕೆ ಪೂರಕವಾಗಿ ಸಹಕಾರ ಕಾಯ್ದೆ ಕಾನೂನುಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ.

**7. ಸಾಮಾಜಿಕ ಕಳಕಳಿ :** ಯಾವುದೇ ಸಂಸ್ಥೆ ತನ್ನ ಸಮೂಹ ಸಮಾಜದಿಂದ ಹೊರತಾದುದಲ್ಲ ಯಾವುದೇ ಸಂಸ್ಥೆ 'ದ್ವೀಪವಾಗಿ ಉಳಿಯಲಾಗುವುದಿಲ್ಲ. ಆದುದರಿಂದ ಯಾವುದೇ ವ್ಯಕ್ತಿಯಾಗಲಿ ಸಂಸ್ಥೆಯಾಗಲಿ ತನ್ನ ಸಮುದಾಯ ಸಮಾಜಕ್ಕಾಗಿ ತನ್ನ ಕೊಡುಗೆಯೇನು? ಎಂಬುದನ್ನು ಪರಮಾರ್ಶಿಸಬೇಕು. ಆದುದ್ದರಿಂದ ಸಹಕಾರ ಸಂಘಗಳು ತಾವು ಗಳಿಸಿದ ಲಾಭದಲ್ಲಿ ಇಂತಿಷ್ಟು ಭಾಗವನ್ನು ಸಮುದಾಯದ ಒಳಿತಿಗಾಗಿ ಇರಿಸಿ ಅದರಿಂದ ಅನೇಕ ರೀತಿ ಕ್ಷೇಮಾಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡಿರುತ್ತವೆ. ಇದರಿಂದ ಸಮೂಹದ, ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆ.

ರಾಕ್‌ಡೇಲ್ ಅಗ್ರಗಾಮಿಗಳು ದಿನಗಳಲ್ಲಿ ಅವಶ್ಯಕತೆ ಎಂದು ಕಂಡುಬಂದ ಮತ್ತು ಮುಂದೆಯೂ ತತ್ವಗಳಾಗಿ ಪರಿಗಣಿಸಿದ್ದ 'ಷೇರು ಬಂಡವಾಳದ ಮೇಲೆ ಪರಿಮಿತ ಬಡ್ಡಿ ಲಾಭ ಸಮಪ್ರಮಾಣದ ಹಂಚಿಕೆಗಳನ್ನು ಕೈ ಬಿಡಲಾಗಿದೆ ಸಣ್ಣ ಪ್ರಮಾಣದಲ್ಲಿ ಕಾರ್ಯವೆಸಗುತ್ತಿದ್ದಾಗ ಮತ್ತು ಕೇವಲ ಸ್ಥಿತಿ ವಂತರಲ್ಲದ ಸದಸ್ಯರಿದ್ದಾಗ ಇದರ ಪಾಲನೆ ಅಗತ್ಯತೆ ಇತ್ತು. ಆದರೆ ಈಗಿನ ಆರ್ಥಿಕ ಪರಿಸ್ಥಿತಿ ವಿಸ್ತಾರಗೊಂಡಿದೆ ಎಲ್ಲ ವರ್ಗಗಳಿಗೂ ಸಹಕಾರ ವಿಸ್ತಾರಗೊಂಡಿದೆ. ಆದರೂ ಕಾಯ್ದೆಯಲ್ಲಿ ಶೇ 24 ಮೀರದಂತೆ ಡಿವಿಡೆಂಡ್ ವಿತರಿಸಲು ತನ್ನ ಸದಸ್ಯ ವ್ಯವಹಾರಕ್ಕೆ ತಕ್ಕಂತೆ ಬೋನಸ್ ಪಡೆಯಲು (ಲಾಭ ಹಿಂತಿರುಗಿ ಪಡೆಯಲು) ಅವಕಾಶ ಕಲ್ಪಿಸಲಾಗಿದೆ. ಹೀಗೆ ಸಹಕಾರ ಮೌಲ್ಯಗಳು ಮತ್ತು ತತ್ವಗಳ ಪಾಲನೆಯಿಂದ ಸಹಕಾರ ಚಳುವಳಿಯ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರಲು ಸಾಧ್ಯವಾಗುತ್ತದೆ.

***************************************************************************************************

# 28. ಸಹಕಾರ ಸಂಘಗಳು ಮತ್ತು ಪ್ರಮುಖ ಸಹಕಾರ ತತ್ವ ಪಾಲನೆ – ಒಂದು ವಿಶ್ಲೇಷಣೆ

19ನೇ ಶತಮಾನದಲ್ಲಿ 'ಸಹಕಾರದ ಉಗಮವಾಗುವುದಕ್ಕೆ ಕಾರಣ ಮತ್ತು ಸಹಕಾರ ಸಂಘಗಳು ಭದ್ರ ಬುನಾದಿಯ ಮೇಲೆ ನೆಲೆಗೊಳ್ಳಲು ಕಾರಣ ಅಂದಿನ ಸಹಕಾರಿಗಳು ಪಾಲಿಸಿದ ಸ್ವ ಸಹಾಯ ಮತ್ತು ಪರಸ್ಪರ ಸಹಾಯ ಈ ತತ್ವಗಳನ್ನು ಈಗಿನ ಸಹಕಾರ ಸಂಘಗಳು ಪಾಲಿಸುತ್ತಿದೆಯೇ? ಎಂಬ ಪ್ರಶ್ನೆ ಈಗ ಮುನ್ನೆಲೆಗೆ ಬಂದಿದೆ.

ಈ ಪ್ರಶ್ನೆಗೆ ಉತ್ತರವನ್ನು ಸಹಕಾರಿಗಳಾದ ನಾವು ನಮಗೆ ಪ್ರಶ್ನಿಸಿಕೊಂಡು ಆತ್ಮ ವಿಶ್ಲೇಷಣೆ ಮಾಡಿಕೊಳ್ಳುವುದು ಇಂದಿನ ಅಗತ್ಯತೆಯಾಗಿದೆ. ಅದರಲ್ಲಿಯೂ ಪತ್ತಿನ ಸಹಕಾರ ಸಂಘಗಳು (ಕೃಷಿಯೇತರ) ಲೇವಾದೇವಿ ಮಾಡುತ್ತಿವೆಯೇ? ಎಂಬ ಪ್ರಶ್ನೆ ಉದ್ಭವವಾಗಿದೆ. ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪು (2017ರ ಸಿವಿಲ್ ಅಪೀಲು ಸಂಖ್ಯೆ 10245) (ಸಿಟಿಜನ್ ಕೋ–ಆಪರೇಟೀವ ಸೊಸೈಟಿ V/S ಅಸಿಸ್ಟೆಂಟ್ ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್ ಹೈದರಾಬಾದ್) ಈ ಪ್ರಶ್ನೆಗಳನ್ನು ಎತ್ತಿದೆ. ಈ ಪ್ರಕರಣದಲ್ಲಿ ಆದಾಯ ತೆರಿಗೆ ಕಲಂ 80ಪಿ ಯಲ್ಲಿ ನೀಡಿರುವ ವಿನಾಯತಿ ಪಡೆಯಲು ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಆದಾಯ ತೆರಿಗೆ ಅಧಿಕಾರಿಗಳು ಪರಸ್ಪರ ಸಹಾಯ ತತ್ವಗಳನ್ನು ಪಾಲಿಸದೇ ಇರುವುದರಿಂದ ಸಂಘ ಬಯಸಿದ ವಿನಾಯ್ತಿಗಳನ್ನು ನೀಡಲಾಗುವುದಿಲ್ಲ ಎಂದು ಆದೇಶಿಸಿರುವ ಆದೇಶವನ್ನು ಎತ್ತಿ ಹಿಡಿಯಲಾಗಿದೆ.

ಈ ಸಹಕಾರ ಸಂಘವು ಆಂಧ್ರ ಪ್ರದೇಶದ ಮ್ಯೂಚುಯಲಿ ಏಯ್‌ಡ್ ಸಹಕಾರ ಕಾಯ್ದೆ (ಆದರ್ಶ ಸಹಕಾರ ಕಾಯ್ದೆ) ಯಡಿಯಲ್ಲಿ ನೊಂದಣಿಯಾಗಿ ತದನಂತರದಲ್ಲಿ ಬಹುರಾಜ್ಯ ಸಹಕಾರ ಕಾಯ್ದೆಗೆ ಬದಲಾವಣೆ ಮಾಡಿಕೊಂಡು ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಕಾಯ್ದೆ ರೀತ್ಯಾ ಸದಸ್ಯರೊಡನೆ ನಾಮ ಮಾತ್ರ ಸದಸ್ಯತ್ವಕ್ಕೆ ಅವಕಾಶವಿದೆ. ಸಂಘವು ಮುಂದುವರೆದು ನಾಮಮಾತ್ರ ಸದಸ್ಯರಲ್ಲದೇ ಸಾರ್ವಜನಿಕ ರಿಂದಲೂ ಠೇವಣಿ ಸಂಗ್ರಹಣೆ ಮಾಡಿದೆ ಎಂದು ಉಲ್ಲೇಖಿಸಿದೆ. ಈ ಸಂಘವು ಸದಸ್ಯರು, ಸಾರ್ವಜನಿಕ ಠೇವಣಿದಾರರಿಂದ ಸಂಗ್ರಹಿಸಿದ ಠೇವಣಿ ಮೊತ್ತಗಳನ್ನು ಸದಸ್ಯರಿಗೆ ವಿವಿಧರೀತಿಯ ಸಾಲ ನೀಡಿದ್ದು, ಮತ್ತು ಹೂಡಿಕೆಗಳಿಂದ ಲಾಭಗಳಿಸಿರುತ್ತದೆ. ಪರಸ್ಪರ ಸಹಾಯ ತತ್ವವನ್ನು ಪಾಲಿಸಿರುವುದಿಲ್ಲ. ಆದುದ್ದರಿಂದ ಆದಾಯ ತೆರಿಗೆ ವಿನಾಯ್ತಿಗೆ ಈ ಸಹಕಾರ ಸಂಘ ಅರ್ಹವಲ್ಲವೆಂದು ಆದೇಶಿಸಿದೆ.

ಈ ಸಂದರ್ಭದಲ್ಲಿ ಸಹಕಾರಿಗಳಾದ ನಾವು ನಮ್ಮ ಸಹಕಾರ ಸಂಘದಲ್ಲಿ ಯಾವ ಪರಿಸ್ಥಿತಿ ಇದೆ ಎಂದು ಕೇವಲ ಅಲ್ಪಾವಧಿ ಕೃಷಿ ಸಾಲಗಳಿಗೆ ಸೀಮಿತವಾಗಿದ್ದ ಈ ಕ್ಷೇತ್ರ ವೈವಿಧ್ಯಮಯ ಚಟುವಟಿಕೆ ಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗಿದೆ. ಜಿಲ್ಲಾ ಕೇಂದ್ರ ಸಹಕಾರ ಮೂಲದಲ್ಲಿ ಆದಾಯ ತೆರಿಗೆ ಕಡಿತಕ್ಕೆ ವಿನಾಯ್ತಿ ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ಸಹಕಾರ ಕಾಯ್ದೆಯಲ್ಲಿ ನಾಮಮಾತ್ರ (Nominal) ಮತ್ತು ಸಹ ಸದಸ್ಯರನ್ನು ಸಂಘದಲ್ಲಿ ತೆಗೆದುಕೊಳ್ಳಲು ಅವಕಾಶವನ್ನು ಯಾವ ಕಾರಣಕ್ಕಾಗಿ ಕಲ್ಪಿಸಲಾಗಿದೆ? ಈ ಅವಕಾಶದ ಹಿಂದಿರುವ ಉದ್ದೇಶವಾದರೂ ಏನು? ಈ ಅವಕಾಶಗಳು ಸದುಪಯೋಗ ಪಡಿಸುವ ಬದಲಿಗೆ ದುರುಪಯೋಗವಾಗುತ್ತಿದೆಯೇ? ಈ ಅವಕಾಶವನ್ನು ಮುಂದುವರೆಸಬೇಕೇ? ಎಂಬ ಪ್ರಶ್ನೆಗಳು ಉದ್ಭವಿಸಿದೆ. 1904ರ ಕಾಯ್ದೆ ಅನಿಯಮಿತ ಸಹಕಾರ ಸಂಘಗಳಿಗೆ ಮಾತ್ರ ಅವಕಾಶ ನೀಡಿತ್ತು. ಅಂದರೆ ಸದಸ್ಯರು ತಮ್ಮ ಷೇರು ಮಾತ್ರವಲ್ಲದೇ ಸಂಘ ನಷ್ಟಕ್ಕೆ ಈಡಾದಲ್ಲಿ ಅದಕ್ಕೂ ಹೊಣೆಗಾರರಾಗಿರುವುದು. ಈ ನಿಯಮದಿಂದಾಗಿ ಸಹಕಾರ ಸಂಘಗಳು ನಿರೀಕ್ಷೆಯಷ್ಟು ನೊಂದಣಿಯಾಗಲಿಲ್ಲ. ನಿರೀಕ್ಷೆ ಸದಸ್ಯರೆಲ್ಲರೂ 'ಸ್ವ ಸಹಾಯ, ಪರಸ್ಪರ ಸಹಾಯ ತತ್ವವನ್ನು ಅಕ್ಷರಷಃ ಪಾಲಿಸುತ್ತಾರೆ ಎಂದು ಭಾವಿಸಲಾಗಿತ್ತೇ? 1919ರಲ್ಲಿ 'ನಿಯಮಿತ ಸದಸ್ಯರು (ಷೇರುದಾರರು) ತಾವು ಹೂಡಿದ ಬಂಡವಾಳಕ್ಕೆ ಮಾತ್ರ ಹೊಣೆಗಾರರು ಎಂಬ ಅವಕಾಶವನ್ನು ಕಲ್ಪಿಸಲಾಯಿತು. ಈಗಲೂ ಕಾಯ್ದೆಯಲ್ಲಿ ಎರಡೂ ಅವಕಾಶಗಳಿದ್ದರೂ ಯಾವುದೇ ಸಹಕಾರ ಸಂಘ ಅನಿಯಮಿತವಾಗಿ ನೋಂದಣಿಯಾಗಿರುವುದನ್ನು ಕಂಡಿಲ್ಲ. ಸ್ವಸಹಾಯ ಸಂಘಗಳು

ಸಹಕಾರ ಸಂಘಗಳಲ್ಲದಿದ್ದರೂ ಒಂದು ರೀತಿಯ ಅನಿಯಮಿತ ತತ್ವ ಪಾಲನೆಯಿಂದ ಯಶಸ್ವಿಯಾಗಿ ನಡೆದಿರುವುದನ್ನು ಕಂಡಿರುತ್ತೇವೆ. ಸಹಕಾರ ಸಂಘಗಳ ಸದಸ್ಯತ್ವ ಗಾತ್ರವು ಹಿರಿದಾಗಿದ್ದು, ಅಸಮಾನತೆ, ಬಿನ್ನತೆ ಕಂಡುಬರುವುದು ಸಹಜವೇ ಆಗಿದೆ. ಸರ್ವಸದಸ್ಯರ ಸಭೆ ನಡುವಳಿಕೆಗಳಲ್ಲಿ ತಮ್ಮ ಸಹಕಾರ ಸಂಘದೊಡನೆಯ ವ್ಯವಹಾರದಲ್ಲಿ ಚುನಾವಣೆಯಲ್ಲಿ ಇದು ಗೋಚರವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಹಕಾರ ಸಂಘದ ವ್ಯವಸ್ಥಾಪನೆಯಲ್ಲಿ ಅಸಮತೋಲನಗಳನ್ನು ನಿಭಾಯಿಸಿ ತತ್ವಪಾಲನೆ ಮಾಡುವುದಾದರೂ ಎಂತು? ಇದರಿಂದಾಗಿ 'ಸಹಕಾರ ತತ್ವಗಳು ಪರಿಷ್ಕರಣೆ ಮಾಡುವ ಮೊದಲು ಬಂಡವಾಳದ ಮೇಲೆ ಸೀಮಿತ ಬಡ್ಡಿ ಮತ್ತು ಉಪನಿಯಮಗಳಲ್ಲಿ ಹೂಡಿಕೆಗಳ ಮೇಲೆ ಕಡಿವಾಣಗಳನ್ನು ಹೇರಲಾಗಿತ್ತು. ವಿಶ್ವದಲ್ಲಿ ಆರ್ಥಿಕತೆಯ ಚಿಂತನೆಗಳ ಬದಲಾವಣೆಯಿಂದಾಗಿ ಈ ನಿರ್ಬಂಧಗಳನ್ನು ಸಡಿಲಿಸಲಾಗಿದೆ. ಸಹಕಾರ ಸಂಘಗಳು ಅಸ್ಥಿತ್ವದಲ್ಲಿ ಉಳಿಯಬೇಕು. ಆರ್ಥಿಕತೆಯ ಒಂದು ಭಾಗವಾಗಬೇಕು, ದುರ್ಬಲರಿಗೆ ಆರ್ಥಿಕ ಸಬಲತೆಯನ್ನು ನೀಡಬೇಕು. ಎಲ್ಲರನ್ನೂ ಒಳಗೊಳ್ಳಬೇಕು. ಸಹಕಾರಿ ಸಂಘಗಳು ಸಬಲತೆಯನ್ನು ಹೊಂದಬೇಕು ಎಂದಾದರೆ ಸೇವೆಯನ್ನು ಒದಗಿಸಬೇಕು ಎಂದಾದರೆ ಲಾಭ ಗಳಿಸಲೇಬೇಕು. ಲಾಭ ಗಳಿಸದಿದ್ದಲ್ಲಿ ನಷ್ಟ ಹೊಂದಿದಲ್ಲಿ ಬಂಡವಾಳವೇ ಕರಗಿಹೋದಲ್ಲಿ ಸೇವೆ ಮಾಡುವುದೆಂತು? ಎಲ್ಲರನ್ನೂ ಒಳಗೊಂಡಂತೆ ಸಹಕಾರ ಸಂಘ ಬೆಳವಣಿಗೆಯಾದಲ್ಲಿ ಮಾತ್ರ ಇದು ಸಾಧ್ಯ.

ಸಹಕಾರ ಸಂಘಗಳ ಕಾಯ್ದೆಯಲ್ಲಿ ಸದಸ್ಯ ಎಂದರೆ 'ನಾಮಮಾತ್ರ ಮತ್ತು 'ಸಹಸದಸ್ಯರು ಸೇರುತ್ತಾರೆ ಎಂದು ವ್ಯಾಖ್ಯಾನಿಸಿದೆ. ಕಾಯ್ದೆ, ಉಪನಿಯಮಗಳ ರೀತಿ ಸದಸ್ಯತ್ವಕ್ಕೆ ಅರ್ಹರಿಲ್ಲದವರೂ ಸಹಕಾರ ಚಟುವಟಿಕೆಯಲ್ಲಿ ಪಾಲ್ಗೊಳ್ಳಲಿ ಎಂಬ ಸದಾಶಯ ಇದರಲ್ಲಿದೆ. ಆದುದರಿಂದಲೇ ಕಾಯ್ದೆಯಲ್ಲಿ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. (ಅವರಿಗೆ ಮತದಾನದ ಹಕ್ಕು ಇರುವುದಿಲ್ಲ) ಅಲ್ಲದೇ ವ್ಯಾಜ್ಯಗಳು ಉಂಟಾದಲ್ಲಿ ಬಗೆಹರಿಸಲು ಸಹಕಾರ ವ್ಯವಸ್ಥೆಯಲ್ಲಿ ಅಡಕವಾಗಿರುವ ಸಹಕಾರ ನ್ಯಾಯಾಲಯದ ಪರಧಿಯಲ್ಲಿ ತರಲು ನೆರವಾಗಿದೆ. ಸಹಕಾರ ಸಂಘದ ವ್ಯವಹಾರಗಳ ವಿಸ್ತರಣೆಗೆ ಸದಾವಕಾಶ ದೊರೆತಿದೆ.

ಕೇವಲ ಅಲ್ಪಾವಧಿ ಕೃಷಿ ಸಾಲಗಳಿಗೆ ಸೀಮಿತವಾಗಿದ್ದ ಈ ಕ್ಷೇತ್ರ ವೈವಿಧ್ಯಮಯ ಚಟುವಟಿಕೆ ಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗಿದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಮೂಲದಲ್ಲಿ ಆದಾಯ ತೆರಿಗೆ ಕಡಿತಕ್ಕೆ ವಿನಾಯ್ತಿ ಇತ್ತು. ಠೇವಣಿದಾರರನ್ನು ನಾಮಮಾತ್ರ ಸದಸ್ಯರನ್ನಾಗಿ ಸ್ವೀಕರಿಸಿ ಈ ಸೌಲಭ್ಯ ನೀಡಲಾಗುತ್ತಿತ್ತು. ಈ ಸೌಲಭ್ಯ ಈಗ ತೆಗೆದು ಹಾಕಲಾಗಿದೆ. ಆದಾಯ ತೆರಿಗೆ ಕಾಯ್ದೆ 80ಪಿ ಬದಲಾವಣೆಯಿಂದಾಗಿ ಕೃಷಿ ಸಾಲ ಹೊರತುಪಡಿಸಿ ಇತರೆ ಆದಾಯಗಳ ಮೇಲೆ ತೆರಿಗೆ ಪಾವತಿಸಲಾಗುತ್ತಿದೆ. ಪೂರ್ಣ ವಿನಾಯ್ತಿ ಇರುವುದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಮಾತ್ರ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅಧಿಕ ವ್ಯವಹಾರಗಳಿದ್ದಾಗ ರಿಟರ್ನ್‌ನ್ನು ಈ ಹಿಂದಿನಿಂದಲೂ ಸಲ್ಲಿಸಲಾಗುತ್ತಿದೆ. ಈ ಕೆಲವು ಕಾಯ್ದೆಗಳಲ್ಲಿ ಸಹಕಾರ ಸಂಘಗಳಿಗೆ ಬೆಂಬಲ ವಿನಾಯ್ತಿ ಸೌಲಭ್ಯಗಳನ್ನು ನೀಡಿರುತ್ತವೆ. ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಸಹಕಾರ ಸಂಘಗಳಿಗೆ ಬೆಂಬಲ ನೀಡಬೇಕೆಂದು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸಹಕಾರ ಸಂಘಗಳು ಇರುವ ಅವಕಾಶಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆಯೇ? ಎಂಬ ಪ್ರಶ್ನೆ ಸಹಜವಾದುದೇ ಆಗಿದೆ ಎಂಬುವುದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ. ಕೆಲವು ಸಹಕಾರ ಸಂಘಗಳು ಮಾಡುವ ತಪ್ಪಿನಿಂದಾಗಿ ಇಡೀ ಸಹಕಾರ ಕ್ಷೇತ್ರದ ಮೇಲೆ ದುಷ್ಪರಿಣಾಮ ಬೀಳುವಂತಾಗಿದೆ. ಈ ಮಾಹಿತಿ ಯುಗದಲ್ಲಿ ದುರ್ನಡತೆಗಳಿಗೆ ಹೆಚ್ಚು ಪ್ರಚಾರ ಸಿಕ್ಕಿ ಸಹಕಾರ ಚಳುವಳಿಗೆ ಧಕ್ಕೆ ತರುವಂತಾಗಿದೆ.

ನಾಮಮಾತ್ರ ಅಥವ ಸಹಸದಸ್ಯತ್ವದ ಅವಕಾಶಗಳನ್ನು ಸದುಪಯೋಗ ಪಡಿಸುವ ಬದಲಿಗೆ ಸದಸ್ಯತ್ವದ ಅರ್ಹತೆ ಉಳ್ಳವರನ್ನು ಹೊರಗಿಡಲಾಗುತ್ತಿದೆಯೇ? ಸಹಕಾರಿಗಳು, ಸಹಕಾರ ನಾಯಕತ್ವದ ಜವಾಬ್ದಾರಿಯ ನೊಗಯೊತ್ತ ಆಡಳಿತ ಮಂಡಳಿ ಈ ದಿಶೆಯಲ್ಲಿ ಆಡಳಿತ ಮಂಡಳಿ ಸದಸ್ಯರು (ನಿರ್ದೇಶಕರು) ಪದಾಧಿಕಾರಿಗಳು ಆಲೋಚಿಸಬೇಕಾಗಿದೆ.

ಇದನ್ನು ತಡೆಗಟ್ಟಲು ಕಾಯ್ದೆಯಲ್ಲಿ ಸಹ ಸದಸ್ಯತ್ವಕ್ಕೆ ಸಂಬಂಧಿಸಿದಂತೆ (ನೌಕರರ ಸಹಕಾರ ಸಂಘ) ಹೊರತುಪಡಿಸಿ ಇತರೆ ಸಹಕಾರ ಸಂಘಗಳಲ್ಲಿ ಒಟ್ಟಾರೆ ಸದಸ್ಯತ್ವದ ಶೇಕಡಾ 15ಕ್ಕೆ ಮೀರುವಂತಿಲ್ಲ ಎಂದು ನಿರ್ಬಂಧ ವಿಧಿಸಲಾಗಿದೆ. ಸಹಕಾರ ಸಂಘಗಳಲ್ಲಿ ಸದಸ್ಯರೊಡನೆ ವ್ಯವಹಾರದ ಬದಲಿಗೆ ನಾಮಮಾತ್ರ ಮತ್ತು ಸಹ ಸದಸ್ಯರ ವ್ಯವಹಾರವೇ ಹೆಚ್ಚಳವಾದಲ್ಲಿ ಇದು ನ್ಯಾಯೋಚಿತವೇ? ಎಂಬುದನ್ನು ಸಹಕಾರಿಗಳು ಆಲೋಚಿಸಬೇಕಾಗಿದೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆಯಲ್ಲಿ ನಾಮಮಾತ್ರ ಮತ್ತು ಸಹ ಸದಸ್ಯತ್ವಕ್ಕೆ ಅವಕಾಶವಿದೆ. ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಯಲ್ಲಿ ನಾಮಮಾತ್ರ ಸದಸ್ಯರಿಗೆ ಮಾತ್ರ ಅವಕಾಶವಿದೆ. ಅಂದರೆ ಸೌಹಾರ್ದ ಸಹಕಾರ ಕಾಯ್ದೆ ರಚಿಸುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ಅರ್ಥೈಸಬಹುದಾಗಿದೆ. ಹೀಗಾಗಿ ನಮ್ಮ ಮುಂದಿನ ಪ್ರಶ್ನೆ ಈ ಬೆಳವಣಿಗೆಗಳಿಂದಾಗಿ ನಾಮಮಾತ್ರ ಮತ್ತು ಸಹ ಸದಸ್ಯತ್ವದ ಅವಕಾಶವನ್ನೇ ತೆಗೆದುಹಾಕಬಹುದೇ? ತೆಗೆದುಹಾಕುವಲ್ಲಿ ಆಗುವ ಪರಿಣಾಮಗಳಾವುವು? ತೆಗೆದುಹಾಕುವುದರಿಂದ ಎಲ್ಲರನ್ನೂ ಒಳಗೊಳ್ಳುವಿಕೆಗೆ ಧಕ್ಕೆ ಬರುವುದಿಲ್ಲವೇ? ಸಹಕಾರ ಸಂಘಗಳ ಚಟುವಟಿಕೆಗಳು ಅಸೀಮಿತ ಅನೇಕ ವೈವಿಧ್ಯಮಯ ಸಹಕಾರ ಸಂಘಗಳಿವೆ. ಕೇವಲ ಪತ್ತಿನ ಸಹಕಾರ ಸಂಘಗಳು ಅಥವ ಮತ್ತಾವುದೋ ರೀತಿಯ ಸಹಕಾರ ಸಂಘದಲ್ಲಿ ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬ ಕಾರಣಕ್ಕೆ ಎಲ್ಲಾ ರೀತಿಯ ಸಹಕಾರ ಸಂಘಗಳಿಗೆ ಅನ್ವಯವಾಗುವುದನ್ನು ತಿದ್ದುಪಡಿ ಮಾಡುವುದು ಎಷ್ಟು ಸಮಂಜಸ?

ಇದಕ್ಕೆ ಉತ್ತರ ನಮ್ಮಲ್ಲಿಯೇ ಅಡಗಿದೆ. ಸದಸ್ಯರು ಸಂಘದ ಚಟುವಟಿಕೆಗಳಲ್ಲಿ ಹೆಚ್ಚು ಭಾಗಿಯಾಗ ಬೇಕು ಪ್ರಜ್ಞಾವಂತ ಸದಸ್ಯರು ಸಂಘದ ಹಿತಾಸಕ್ತಿ ಕಾಪಾಡುವಂತೆ, ಸದಸ್ಯರಿಗೆ ಹೊಣೆಗಾರರಾಗಿ ನಡೆದುಕೊಳ್ಳುವಂತೆ ಪದಾಧಿಕಾರಿಗಳನ್ನು, ಪದಾಧಿಕಾರಿಗಳು ಅವರಿಗೆ ಹೊಣೆಗಾರರಾಗಿ ನಡೆದುಕೊಳ್ಳುವಂತೆ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡಬೇಕಾಗಿದೆ. ಇಲ್ಲಿ ಸಕ್ರಿಯ ಸಹಕಾರ ತತ್ವಗಳಲ್ಲಿ ನಂಬಿಕೆಯುಳ್ಳ ಸಹಕಾರ ತತ್ವಗಳನ್ನು ಪಾಲಿಸುವಂತಹ ಸಹಕಾರ ನಾಯಕತ್ವದ ಅಗತ್ಯತೆ ಇದೆ. ಈ ಕೊರತೆಯಿಂದ ಸಹಕಾರ ಚಳುವಳಿಗೆ ಧಕ್ಕೆ ಬರುವ ಸಾಧ್ಯತೆಗಳಿವೆ. ಸಹಕಾರಿಗಳು ಮೇಲೆ ಉಲ್ಲೇಖಿಸಿದ ತೀರ್ಪನ್ನು ಎಚ್ಚರಿಕೆಯ ಕರೆಗಂಟೆ ಎಂದು ಪರಿಗಣಿಸಬೇಕಾಗಿದೆ.

*****************************************************************************************

# 29. ಅಂತರಾಷ್ಟ್ರೀಯ ಸಹಕಾರ ವರ್ಷ –2025 – ಪ್ರಾಮುಖ್ಯತೆ ಒಂದು ಅವಲೋಕನ

ವಿಶ್ವ ಸಂಸ್ಥೆ 2025 ನೇ ವರ್ಷವನ್ನು ಅಂತರರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿದೆ. ಈ ಹಿಂದೆ ಮೊದಲ ಬಾರಿಗೆ 2012 ನ್ನು ಅಂತಾರಾಷ್ಟ್ರೀಯ ವರ್ಷ ಎಂದು ಘೋಷಿಸಲಾಗಿತ್ತು. ಅದರ ಯಶಸ್ಸು

ಕಂಡ ವಿಶ್ವ ಸಂಸ್ಥೆ ಮತ್ತೊಮ್ಮೆ ಅಂತರರಾಷ್ಟ್ರೀಯ ಸಹಕಾರ ವರ್ಷವನ್ನು ಘೋಷಿಸಿದೆ ಎಂದು 'ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ ಪ್ರಕಟಿಸಿದೆ. ಇದು ಸಹಕಾರಿಗಳೆಲ್ಲರೂ ಸಂಭ್ರಮಿಸುವ ವಿಷಯವಾಗಿರುತ್ತದೆ.

ವಿಶ್ವ ಸಂಸ್ಥೆಯ ಈ ಘೋಷಣೆಗೆ ಕಾರಣ ಸಹಕಾರ ಸಂಘಗಳ ಆರ್ಥಿಕ ಬೆಳವಣಿಗೆಯೊಂದಿಗಿನ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳು ಎಂದು ಸಂಬಂಧಿಸಿದ ಲೇಖನವೊಂದು ತಿಳಿಸಿದೆ. ಇದುವೇ ವಿಶ್ವ ಸಂಸ್ಥೆಯ ನಿರ್ಧಾರಕ್ಕೆ ಕಾರಣವಾಗಿರುತ್ತದೆ. ಅದರಂತೆ ವಿಶ್ವಸಂಸ್ಥೆಯ ಸಾಮಾನ್ಯ ನಿಕಾಯವು ದಿನಾಂಕ 22ನೇ ನವೆಂಬರ್ 2023ರ ತನ್ನ ಠರಾವು ಮಾಡಿದೆ.

ವಿಶ್ವದ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಸಹಕಾರ ಸಂಘಗಳು ಸಾಧನವಾಗುತ್ತದೆ ಎಂಬುದು ವಿಶ್ವ ಸಂಸ್ಥೆಯ

ಬಲವಾದ ನಂಬಿಕೆ. ವಿಶ್ವದಲ್ಲಿ 3 ದಶಲಕ್ಷ ಸಹಕಾರ ಸಂಘಗಳು ಇದ್ದು ವಿಶ್ವದ ಜನಸಂಖ್ಯೆಯ ಶೇ 12 ಜನರು ಸದಸ್ಯರಾಗಿರುತ್ತಾರೆ ಎಂಬ ಅಂದಾಜಿದೆ. ಭಾರತದಲ್ಲಿ 7.89 ಕೋಟಿ ಸಹಕಾರ ಸಂಘಗಳಿದ್ದು 29 ಕೋಟಿ ಸದಸ್ಯರಿದ್ದಾರೆ ಎಂಬ ಅಂದಾಜಿದೆ. ಈ ವಾಹಕಗಳು (ಸಹಕಾರ ಸಂಘಗಳು) ಸುಸ್ಥಿರ ಅಭಿವೃದ್ಧಿಯ ಪ್ರಮುಖ ಗುರಿಗಳಾದ ಆಹಾರ ಭದ್ರತೆ, ಬಡತನ ನಿರ್ಮೂಲನೆ, ಪರಿಸರ ಸಮತೋಲನವನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಉತ್ತಮವಾಗಿ ಜೀವಿಸಬಲ್ಲ ವಿಶ್ವವನ್ನು ನೀಡುವುದಲ್ಲದೇ ಸಮತಾ ಸಮಾಜವನ್ನು ನಿರ್ಮಾಣ ಮಾಡಬಲ್ಲವು ಎಂಬುದು ಸದಾಶಯ. ಮತ್ತು ಇದು ಸಾಧ್ಯ ಕೂಡ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸಿಕೊಡುವುದುಆಯಾ ಸರ್ಕಾರಗಳ ಮತ್ತು ಸಮುದಾಯದ ಜವಾಬ್ದಾರಿಯಾಗುತ್ತದೆ. ಇದೇ ಅತ್ಯಂತ ದುಸ್ಥಿರ ಸವಾಲಾಗಿರುತ್ತದೆ. ವಿಶ್ವ ಸಂಸ್ಥೆಯು ಸಹಕಾರ ಸಂಘಗಳು ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸಬಲ್ಲವು ಎಂಬ ಅರಿವು ಮೂಡಿಸುವ ಸಲುವಾಗಿ ಪ್ರಚಾರಾಂದೋಲನವಾಗಿ 2025ನ್ನು ಅಂತರರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿದೆ. ಈ ದಿಸೆಯಲ್ಲಿ ಹಾಲಿ ಇರುವ ಶಾಸನಗಳು, ನಿಯಂತ್ರಣ ವ್ಯವಸ್ಥೆಗಳ ಪುನರ್ ಪರಿಶೀಲನೆ, ಪುನರಾವಲೋಕನ ಮಾಡಿ ಸಹಕಾರ ಸಂಘಗಳ ಅಭ್ಯುದಯಕ್ಕೆ ಸರ್ಕಾರಗಳು, ಸಂಬಂಧಿಸಿದ ಸಂಸ್ಥೆಗಳು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ವಿಶ್ವ ಸಂಸ್ಥೆ ಬಯಸಿದೆ. ಅಲ್ಲದೆ ವಿಶೇಷವಾಗಿ ಆಹಾರ ಉತ್ಪಾದನೆ ಮತ್ತು ಮಾರುಕಟ್ಟೆ ವಲಯದ ಸಹಕಾರ ಸಂಘಗಳಲ್ಲಿ ಬಂಡವಾಳದ ಹೆಚ್ಚಳ, ಪೂರಕವಾದ ಮಾರುಕಟ್ಟೆ, ನ್ಯಾಯಯುತವಾದ ಬೆಲೆ ದೊರಕುವುದು ಮತ್ತು ಇದಕ್ಕೆ ಅಗತ್ಯ ವಾತಾವರಣ ನಿರ್ಮಾಣ ಮಾಡಲು ಕರೆಕೊಟ್ಟಿದೆ. ಇದರಲ್ಲಿ ಮಹಿಳೆಯರ, ಅಬಲ ವರ್ಗಗಳ ಪಾತ್ರ ಮತ್ತು ಅವರಿಗೆ ಪ್ರಾಮುಖ್ಯತೆ ನೀಡುವ ಬಗ್ಗೆ ಮತ್ತು ಅವರ ಸಾಮರ್ಥ್ಯಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ನೀಡಬೇಕಾದ ಅವಶ್ಯಕತೆ ಬಗ್ಗೆ ತಿಳಿಹೇಳಲಾಗಿದೆ.

ಸುಸ್ಥಿರ ಅಭಿವೃದ್ಧಿಗೆ ಕಾರಣವಾಗ ಬಲ್ಲ ಸಾಮಾಜಿಕ ಮತ್ತು ಐಕ್ಯಮತ್ಯ ಆರ್ಥಿಕತೆ (Social and Solidarity Economy -SSE) ಸಂಸ್ಥೆಗಳೆಂದರೆ ಸಾಮೂಹಿಕ ಮತ್ತು/ಅಥವಾ ಸಾಮಾನ್ಯ ಆಸಕ್ತಿಯ ಆರ್ಥಿಕ, ಸಾಮಾಜಿಕ, ಮತ್ತು ಪರಿಸರ ಕಾಳಜಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಔದ್ಯೋಗಿಕ ಸಂಸ್ಥೆಗಳು, ಸಂಸ್ಥೆಗಳು ಮತ್ತು ಘಟಕಗಳು ಎಂದು ವ್ಯಾಖ್ಯಾನಿಸಲಾಗಿದೆ. ಅಲ್ಲದೆ ಸ್ವಯಂ ಸಹಕಾರ ಮತ್ತು ಪರಸ್ಪರ ಸಹಕಾರ, ಪ್ರಜಾಪ್ರಭುತ್ವ ಮತ್ತು/ಅಥವ ಎಲ್ಲರ ಭಾಗವಹಿಸುವಿಕೆಗೆ ಅವಕಾಶವುಳ್ಳ ಆಡಳಿತ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವುಳ್ಳ, ಮತ್ತು ಹೆಚ್ಚುವರಿ ಹಂಚಿಕೆಯಲ್ಲಿ ಮತ್ತು ಹೆಚ್ಚುವರಿ ಮೊತ್ತ ಮತ್ತು ಅಥವ ಲಾಭ ಹಂಚಿಕೆಯಲ್ಲಿ ಬಂಡವಾಳ ಮೀರಿ ಜನತೆಗೆ ಪ್ರಥಮ ಆದ್ಯತೆ ಎಂದು ತಿಳಿಸಿದೆ. ಈ ಎಲ್ಲ ಗುಣ ಲಕ್ಷಣಗಳನ್ನು ಸಹಕಾರ ಸಂಘಗಳು ಹೊಂದಿದ್ದು ಅಭಿವೃದ್ಧಿ ಯಲ್ಲಿ ಅತ್ಯಂತ ಪ್ರಾಮುಖ್ಯತೆ, ಆದ್ಯತೆಯನ್ನು ಸಹಕಾರ ಸಂಘಗಳಿಗೆ ನೀಡಬೇಕಾಗಿರುವುದು ಈ ಶತಮಾನದ ಅವಶ್ಯಕತೆಯಾಗಿದೆ.

ಈ ಹಿನ್ನೆಲೆಯಲ್ಲಿ, ಭಾರತವು ಭಾರತದ ಆರ್ಥಿಕ ಸಚಿವರು ಸಾರ್ವಜನಿಕವಾಗಿ ತಿಳಿಸಿದಂತೆ ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ತಲುಪಿರುತ್ತದೆ. 2028ರ ಒಳಗೆ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪುವ ಗುರಿ ಹೊಂದಲಾಗಿದೆ. ಇತ್ತೀಚೆಗೆ ಕೇಂದ್ರ ಸಹಕಾರ ಸಂಘಗಳ ನಿಬಂಧಕರ(Central Registrar of cooperative societies) ಕಛೇರಿ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಸರಕಾರದ ಸಹಕಾರ ಸಚಿವರು ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಸಹಕಾರ ಸಂಘಗಳು ತನ್ನ ಕೊಡುಗೆ ನೀಡುವುದರ ಪ್ರಾಮುಖ್ಯತೆ ಬಗ್ಗೆ ತಿಳಿಸಿದ್ದಾರೆ. ಬಹು ರಾಜ್ಯ ಕಾಯ್ದೆಯಡಿಯಲ್ಲಿ ಹೆಚ್ಚುವರಿಯಾಗಿ ಸಹಕಾರ ಸಂಘಗಳು ನೊಂದಣಿ ಯಾಗಿರುವ ಬಗ್ಗೆ ಮಾಹಿತಿ ತಿಳಿಸಿರುತ್ತಾರೆ. ಅಲ್ಲದೆ ಆಹಾರ ಉತ್ಪಾದನೆ ಮಾರಾಟ ರಫ್ತು ಸಹಕಾರ ಸಂಘವನ್ನು ಮತ್ತು ಇತರೆ ಮೂರು ರೀತಿಯ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಒಂದು ಲಕ್ಷದಿಂದ ಮೂರು ಲಕ್ಷಕ್ಕೆ ಏರಿಸುವುದು

ಇವುಗಳನ್ನು ರೈತ ವಿವಿವಿದೋದ್ದೇಶ ಸಹಕಾರ ಸಂಘಗಳಾಗಿ ಪರಿವರ್ತಿಸಿ ಅಲ್ಪಾವಧಿಯ ಬೆಳೆಸಾಲ ಅಲ್ಲದೆ ಇತರೆ ಕೃಷಿ ಪೂರಕ, ಕೃಷಿ ಅವಲಂಭಿತ ಉದ್ದೇಶಗಳಿಗೂ, ಹೈನುಗಾರಿಕೆ , ಮೀನುಗಾರಿಕೆ, ನೇಕಾರಿಕೆ ಮುಂತಾದ ಗ್ರಾಮೀಣ ಪ್ರದೇಶದ ಇತರೆ ಎಲ್ಲ ರೀತಿಯ ಉದ್ಯೋಗಗಳಿಗೆ ದುಡಿಯುವ ಬಂಡವಾಳ ಸಾಲವನ್ನು ಒದಗಿಸಲು ಉದ್ದೇಶಿಸಿದೆ. ಇದಲ್ಲದೆ ಒಟ್ಟು 60 ಉಪಕ್ರಮಗಳನ್ನು ಕೈಗೊಳ್ಳಲಾಗಿರುವುದಾಗಿ ಕೇಂದ್ರ ಸಹಕಾರ ಸಚಿವರು ತಿಳಿಸಿರುತ್ತಾರೆ.

ಈ ಉಪಕ್ರಮಗಳಿಗೆ ಸಹಕಾರ ಚಳುವಳಿಯು ಸಕಾರಾತ್ಮಕವಾಗಿ ಸ್ಪಂದಿಸಿ ಕಾರ್ಯನಿರ್ವಹಿಸಿದಲ್ಲಿ ಈ ಆಶಯವನ್ನು ಪೂರೈಸಬಹುದಾಗಿದೆ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೆ ದತ್ತಾಂಶ ಲಭ್ಯತೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಸಹಕಾರ ವಲಯದ ಬಗ್ಗೆ ಅಂಕಿ ಅಂಶಗಳ ಸಂಗ್ರಹಣೆಗೆ ಪ್ರಾಮುಖ್ಯತೆ ನೀಡುವ ಬಗ್ಗೆ 2005ರ ಅಂತಾರಾಷ್ಟ್ರೀಯ ಸಹಕಾರ ವರ್ಷ ಘೋಷಣೆಯಲ್ಲಿ ಉಲ್ಲೇಖಿಸಿರುತ್ತಾರೆ. ಮಾಹಿತಿ ತಂತ್ರಜ್ಞಾನದ ಕ್ರಾಂತಿಯಾಗಿದ್ದು ಅದರ ಸದುಪಯೋಗವನ್ನು ಈ ವಲಯ ಕೈಗೊಳ್ಳಬೇಕಾಗಿದೆ. ಬಹುಹಂತದ ಸಹಕಾರ ವ್ಯವಸ್ಥೆಯಲ್ಲಿ ಉನ್ನತ ಸಂಸ್ಥೆಗಳು, ನಿಬಂಧಕರು, ಇದರ ಸದುಪಯೋಗವನ್ನು ಪಡೆಯಬೇಕಾಗಿದೆ. ಲಭ್ಯ ಅಂಕಿ ಅಂಶಗಳಂತೆ ಭಾರತದ ಆರ್ಥಿಕತೆಯಲ್ಲಿ ಕೃಷಿ ಮತ್ತು ಕೃಷಿ ಅವಲಂಭಿತ ವೃತ್ತಿಗಳ ಕೊಡುಗೆ ಶೇ.20, ಕೈಗಾರಿಕೆ– ಶೇ.25.92. ಸೇವಾ ವಲಯ – ಶೇ.53.89, ಆಗಿರುತ್ತದೆ. ಹಾಲಿ ಸಕ್ರೀಯ ಸಹಕಾರ ಚಳುವಳಿಯ ಮೇಲ್ನೋಟಕ್ಕೆ ಕಂಡುಬರುವಂತೆ ಇದರ ಕೊಡಗೆ ಶ್ಲಾಘನೀಯ ವಾಗಿರುವುದಿಲ್ಲ ಎಂದು ತಿಳಿಯುತ್ತಿದೆ. ಉದಾಹರಣೆಗೆ ಪತ್ತಿನ ವಲಯದಲ್ಲಿ ಸಹಕಾರದ ಕೊಡುಗೆ ಶೇ.19. ಹೈನುಗಾರಿಕೆ ಶೇ.35, ದಾನ್ಯ, ಹಣ್ಣು, ತರಕಾರಿ ವಲಯಗಳಲ್ಲಿ ಕೇವಲ ಧರ ನಿಗದಿ ಪಡಿಸಲು ನಿಯಂತ್ರಣದಲ್ಲಿ ಸಹಾಯಕರ ವಾಗಿರುತ್ತದೆ. ರಸಗೊಬ್ಬರ ತಯಾರಿಕೆಯಲ್ಲಿ ಶೇ.80 ಇರುತ್ತದೆ. ಇತರೆ ವಲಯಗಳು ಅತಿ ಕನಿಷ್ಟ ಮಟ್ಟದಲ್ಲಿರುತ್ತದೆ ಎಂಬುದು ವಿಷಾದನೀಯ. ಖಾಸಗಿ ವಲಯದ ಸ್ಪರ್ಧೆಯಲ್ಲಿ ನಲುಗಿದೆ ಎಂದರೆ ತಪ್ಪಾಗಲಾರದು. ಈ ಹಿನ್ನಲೆಯಲ್ಲಿ 2025 ಅಂತರಾಷ್ಟ್ರೀಯ ಸಹಕಾರ ವರ್ಷಾಚರಣೆಯನ್ನು ಭಾರತದ ಸಹಕಾರಿಗಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸುವ ಬಗ್ಗೆ ತನ್ನ ವೈಪಲ್ಯತೆಗಳನ್ನು ಸಾಮರ್ಥ್ಯವಾಗಿ ಪರಿವರ್ತಿಸುವ ಬಗ್ಗೆ, ಇರುವ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಸವಾಲುಗಳನ್ನು ಸಮರ್ಥವಾಗಿ ಅತ್ಯುತ್ತಮ ನಾಯಕತ್ವದಿಂದ ಎದುರಿಸಬೇಕಾಗಿದೆ.

**"ಪ್ರತಿ ದಿನ ತಮ್ಮದೇ ದಾಖಲೆಗಳನ್ನು ತಾವೇ ಮುರಿಯಿರಿ. ಏಕೆಂದರೆ ಯಶಸ್ಸು ಎಂಬುದು ತಮ್ಮೊಂದಿಗೆ ತಾವೇ ನಡೆಸುವ ಕಾಳಗದಿಂದ ಬರುತ್ತದೆ." – ಚಂದ್ರಶೇಖರ ಅಜಾದ್,**

**********************************************************************************************************

# 30. ಅಂತರರಾಷ್ಟ್ರೀಯ ಸಹಕಾರ ದಿನ ಧ್ಯೇಯ : ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು

ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ ಯಾಗಿ ಆಚರಿಸಲಾಗುತ್ತಿದೆ. ಈ ವರ್ಷ ಇದು 101ನೇ ದಿನಾಚರಣೆ, ವಿಶ್ವ ಸಂಸ್ಥೆಯು ಅಂಗೀಕರಿಸಿದ ನಂತರ ಇದು 29ನೇ ದಿನಾಚರಣೆಯಾಗಿರುತ್ತದೆ. ಅಂತಾರಾಷ್ಟೀಯ ಮೈತ್ರಿ ಸಂಸ್ಥೆಯು ಪ್ರತಿ ವರ್ಷ ಈ ಆಚರಣೆಗೆ ದಿಕ್ಸೂಚಿಯಾಗಿ ಆಯಾ ವರ್ಷದ ಘೋಷ ವಾಕ್ಯ ನೀಡಿ ವಿಶ್ವಾದ್ಯಂತ ಸಹಕಾರ ಸಂಘಗಳು ಇದನ್ನು ಅಳವಡಿಸಿಕೊಂಡು ಆಚರಿಸುವ ಸದುದ್ದೇಶವನ್ನು ಹೊಂದಿದೆ. ಈ ವರ್ಷ ಮೊದಲ ಶನಿವಾರವೇ 1ನೇ ಜುಲೈ ಆಗಿರುವುದು ಕಾಕತಾಳೀಯವಾಗಿರುತ್ತದೆ. ಸಹಕಾರ ಸಂಘಗಳ ಉನ್ನತೀಕರಣ ಮತ್ತು ಅಭಿವೃದ್ಧಿಗಾಗಿ ಸಮಿತಿ (COPAC – committee for the promotion and advancement of cooperatives)ಯು 1995 ರಿಂದ ಇದನ್ನು ನಿರ್ಧರಿಸುತ್ತದೆ. ಈ ವರ್ಷದ ಘೋಷವಾಕ್ಯ

ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು ಎಂಬುದಾಗಿದೆ.

ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯ ಉದ್ದೇಶ ಸಹಕಾರ ಸಂಘಗಳ ಬಗ್ಗೆ ಅರಿವು ಮೂಡಿಸುವುದು ಇದರ ಮೂಲಕ ಸಹಕಾರ ಚಳವಳಿಯ ವಿಶ್ವಶಾಂತಿ, ಸಮಾನತೆ, ಆರ್ಥಿಕ ದಕ್ಷತೆ ಮತ್ತು ಅಂತರಾಷ್ಟ್ರೀಯ ಒಗ್ಗಟ್ಟನ್ನು ಉತ್ತೇಜಿಸುವುದೇ ಆಗಿದೆ. ಈ ವರ್ಷದ ಘೋಷ ವಾಕ್ಯದ ಪ್ರಾಮುಖ್ಯತೆ ವಿಶ್ವವು 2030ರ ಒಳಗೆ ಸುಸ್ಥಿರ ಅಭಿವೃದ್ಧಿ ಸಾಧಿಸಿ ವಿಶ್ವದಲ್ಲಿ ಮುಂದಿನ ಪೀಳಿಗೆಗೆ ಭೂಮಿಯಲ್ಲಿ ವಾಸಿಸಲು ಯೋಗ್ಯವಾದ ಪರಿಸರವನ್ನು ನಿರ್ಮಾಣ ಮಾಡುವುದಾಗಿದೆ. ಹಾಲಿ ಮಾನವನ ಅತಿಯಾದ ಭೂಮಿಯ ಲಭ್ಯ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ ಭೂಮಿಯು ವಾಸಿಸಲು ಯೋಗ್ಯವಲ್ಲದ ವಾತಾವರಣ ನಿರ್ಮಾಣವಾಗಿದೆ. ಅತಿಯಾದ ಅಭಿವೃದ್ಧಿ, ಅದರಿಂದ ಅತಿಯಾದ ಸಂಪನ್ಮೂಲಗಳ ಬಳಕೆ, ಅದರಲ್ಲಿಯೂ ಅತಿಯಾದ ಪಳೆಯುಳಿಕೆ ಇಂಧನ ಬಳಕೆ, ಇದರಿಂದ ಕುಲಷಿತ ವಾತಾವಾರಣ ಇದರಿಂದ ಭೂಮಿಯು ತನ್ನ ಸಹಜ ವಾತಾವರಣ ಕಳೆದು ಕೊಂಡು ಇಂಗಾಲ ಸೂಸುವಿಕೆಯಿಂದ ಹಸಿರುಮನೆ ಪರಿಣಾಮ ಉಂಟಾಗಿ ಭೂಮಿಯು ಅತಿಯಾಗಿ ಬಿಸಿಯಾಗುತ್ತಿದೆ. ಇದನ್ನು ಕಡಿಮೆ ಮಾಡುವ ಅಗತ್ಯತೆ ಇದೆ.ಕಡಿಮೆ ಮಾಡಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆ ಇದೆ. ಇಲ್ಲದಿದ್ದಲ್ಲಿ ವಿವಿಧ ದುಷ್ಪರಿಣಾಮಗಳನ್ನು ಭೂಮಿ ಎದುರಿಸಬೇಕಾಗುತ್ತದೆ. ಉದಾಹರಣೆಗೆ, ಅಕಾಲಿಕ ಮಳೆ, ಮೇಘ ಸ್ಫೋಟ, ಹಿಮ ಕರಗುವಿಕೆ ಇದರಿಂದ ಸಮುದ್ರ ಮಟ್ಟದಲ್ಲಿ ಏರಿಕೆ, ಸಮುದ್ರ ತೀರದಲ್ಲಿನ ಅನೇಕ ನಗರಗಳ ಮುಳುಗುವಿಕೆ. ವಾತಾವರಣದ ಬದಲಾವಣೆಯಿಂದ ನೀರಾವರಿ, ಕೃಷಿ, ಕೈಗಾರಿಕೆ ಹೀಗೆ ಒಟ್ಟಾರೆ ವಿಶ್ವದ ಆರ್ಥಿಕತೆ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದುದರಿಂದ ಇದನ್ನು ತಡೆಗಟ್ಟುವುದು ಮತ್ತು ಅಭಿವೃದ್ಧಿಯನ್ನು ಸಾಧಿಸುವುದೂ ಮಾನವನ ಬೆಳವಣಿಗೆ ದೃಷ್ಟಿಯಿಂದ ಅತಿ ಅವಶ್ಯ. ಇವೆರಡೂ ಸಾಧನೆಗಳೇ ಸುಸ್ಥಿರ ಅಭಿವೃದ್ಧಿ.

ಸುಸ್ಥಿರ ಅಭಿವೃದ್ಧಿ ಸಾಧನೆಗಾಗಿ ವಿಶ್ವಸಂಸ್ಥೆಯು ಹದಿನೇಳು ಗುರಿಗಳನ್ನು ನೀಡಿ 2030ರ ಒಳಗೆ ಸಾಧಿಸಲು ಉದ್ದೇಶಿಸಿದೆ. ಅದರಂತೆ ಎಲ್ಲ ರಾಷ್ಟ್ರಗಳು ಈ ದಿಸೆಯಲ್ಲಿ ಅನೇಕ ಉಪಕ್ರಮಗಳನ್ನು ತೆಗೆದುಕೊಳುಳತ್ತಿವೆ. ಈ ಗುರಿ ಸಾಧನೆಯಲ್ಲಿ ಆರ್ಥಿಕ ಬೆಳವಣಿಗೆಯ ಪಾಲುದಾರರಾದ ಸಹಕಾರ ಸಂಘಗಳು ಭಾಗವಹಿಸಿ ಈ ಗುರಿಗಳ ಸಾಧನೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಆಶಯವನ್ನು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ ಹೊಂದಿದೆ. ಸಂಕ್ಷಿಪ್ತವಾಗಿ ಈ ಹದಿನೇಳು ಗುರಿಗಳು ಈ ಮುಂದಿನಂತಿವೆ. 1) ಬಡತನ ನಿರ್ಮೂಲನೆ 2) ಶೂನ್ಯ ಹಸಿವು 3) ಉತ್ತಮ ಆರೋಗ್ಯ ಮತ್ತು ಸ್ವಾತ್ತತೆ. 4) ಗುಣಮಟ್ಟದ ಶಿಕ್ಷಣ 5) ಲಿಂಗ ಸಮಾನತೆ 6) ಶುದ್ಧ ನೀರು ಮತ್ತು ಸ್ವಾಸ್ಥಶೌಚ ವ್ಯವಸ್ಥೆ 7) ನಿಲುಕ ಬಲ್ಲ ವೆಚ್ಚದಲ್ಲಿ ಶುದ್ಧಶಕ್ತಿ (ಇಂಧನ) 8) ಗೌರವಯುತ ನಡವಳಿಕೆ ಯುಳ್ಳ ಉತ್ತಮ ಕೆಲಸ ಮತ್ತು ಆರ್ಥಿಕ ಬೆಳವಣಿಗೆ9) ಕೈಗಾರಿಕೆ ಮತ್ತು ನವೋಧ್ಯಮ 10) ಅಸಾಮಾನತೆಯ ನಿವಾರಣೆ 11) ಸುಸ್ಥಿರ ನಗರಗಳು ಮತ್ತು ಸಮೂಹಗಳು 12)ಜವಾಬ್ದಾರಿಯತ ಬಳಕೆ ಮತ್ತು ಉತ್ಪಾದನೆ 13)ವಾತಾವರಣ ಕ್ರಿಯಾ ಯೋಜನೆ 14) ನೀರಿನಲ್ಲಿನ ಜೀವ ಜಗತ್ತು 15) ಭೂಮಿಯ ಮೇಲಿನ ಜೀವ ಜಗತ್ತು 16) ಶಾಂತಿ, ನ್ಯಾಯ ಮತ್ತು ಬಲಯುತ ಸಂಸ್ಥೆಗಳು 17) ಗುರಿಗಳ ಸಾಧನೆಯಲ್ಲಿ ಪಾಲುಗಾರಿಕೆ.

ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳು ಆರ್ಥಿಕ ಔದ್ಯೋಗಿಕ ಸಂಸ್ಥೆಗಳಾಗಿದ್ದು, ಸಹಕಾರ ತತ್ವಗಳಲ್ಲಿ ಸಾಮಾಜಿಕ ಜವಾಬ್ದಾರಿ ಕೂಡ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿದ್ದು ಅದರ ಅಂಗವಾಗಿ ಈಗಾಗಲೆ ಅನೇಕ ಈ ರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು ಈ ಕಾರ್ಯಕ್ರಮಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮೇಲಿನ ಎಸ್. ಜಿ.ಪಿ (sustainable development goals S.G.P) (ಸುಸ್ಥಿರ ಅಭಿವೃದ್ಧಿ ಗುರಿಗಳು) ಗುರಿಗಳನ್ನು ಸಾಧಿಸಲು ನೆರವಾಗುತ್ತಿವೆ. ಕರ್ನಾಟಕದಲ್ಲಿ ಉದಾಹರಣೆಗೆ, ಯಶಸ್ವಿನಿ ಆರೋಗ್ಯ ವಿಮೆ ಜಾರಿ – ನಿಲುಕ ಬಲ್ಲ ವೆಚ್ಚದಲ್ಲಿ ಅತಿ ಹೆಚ್ಚು ವೆಚ್ಚವಾಗುವ ಚಿಕಿತ್ಸೆ ಲಭ್ಯತೆ. ಸಹಕಾರ ಸಂಘಗಳಲ್ಲಿ ಶುದ್ಧ ನೀರಿನ ಘಟಕಗಳ ನಿರ್ವಹಣೆ, ಮಕ್ಕಳ ಕ್ಷೀರ ಭಾಗ್ಯ ಯೋಜ್ಯನೆಯಲ್ಲಿ

ಪಾಲೊಗಳ್ಳುವಿಕೆ. ಪೌಷ್ಠಿಕ ಆಹಾರದ ಸರಬರಾಜು ಯೋಜನೆ, ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ (ಪಿ.ಡಿ.ಎಸ್). ಅಡುಗೆ ಅನಿಲ ವಿತರಣೆ, ವಿದ್ಯಾಥಿಗಳಿಗೆ ವಿದಾರ್ಥಿ ವೇತನ, ರೈತರ ಮತ್ತು ಜಾನುವಾರುಗಳಿಗೆ ವಿಮೆ ಸೌಲಭ್ಯ. ಇವೆಲ್ಲವು ಸುಸ್ಥಿರ ಬೆಳವಣಿಗೆಯ ಭಾಗವಾಗಿವೆ.

ಈ ದಿಸೆಯಲ್ಲಿ ಅದರಲ್ಲೂ 2030ರೊಳಗೆ ಭೂಮಿ ತಾಪಾಪಾನ ಕಡಿಮೆಗೊಳಿಸಲು (ಕನಿಷ್ಟ 01 ಡಿ.ಸೆ.) ತುರ್ತು ಕಾರ್ಯ ಕ್ರಮಗಳನ್ನು ಸಹಕಾರ ಸಂಘಗಳು ಈ ಅಂತಾರಾಷ್ಟ್ರೀಯ ಸಹಕಾರ ದಿನದಂದು ಆಲೋಚಿಸಿ ಹಾಕಿಕೊಳ್ಳಬಹುದು? ಇದರಿಂದ ಸಹಕಾರಿಗಳು ಈ ಕಾರ್ಯಕ್ರಮದಿಂದ ಹೊರಗಿಲ್ಲ ಎಂಬದನ್ನು ಸಾಬೀತು ಪಡಿಸಬಹುದಲ್ಲವೇ? ಈ ದಿಸೆಯಲ್ಲಿ ಆಲೋಚಿಸಿದಾಗ

- ಪಳೆಯುಳಿಕೆ ಇಂಧನಗಳ ಬಳಕೆ ಕಡಿತಗೊಳಿಸುವುದು (ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು) ಪರ್ಯಾಯವಾಗಿ ವಿದ್ಯುಚ್ಛಕ್ತಿ ಚಾಲಿತ ವಾಹನಗಳ ಬಳಕೆ ಉತ್ತೇಜಿಸುವದು. ನೌಕರರು ಮತ್ತು ಸದಸ್ಯರು. ಅವುಗಳ ಖರೀದಿಗೆ ಪತ್ತಿನ ವ್ಯವಸ್ಥೆಯಲ್ಲಿ ಉತ್ತೇಜಿಸುವುದು. ಹಾಗೆಯೇ ದೈನಂದಿನ ಬಳಕೆಯಲ್ಲಿ ಸೌರಶಕ್ತಿ, ಪವನಶಕ್ತಿ, ಸಮುದ್ರ ಅಲೆಗಳ ಶಕ್ತಿಗಳ ಬಳಕೆಗೆ ಆದ್ಯತೆ ಉತ್ತೇಜನ ನೀಡುವುದು. ಸಹಕಾರ ಸಂಘಗಳ ಮೇಲ್ಚಾವಣಿಗಳಲ್ಲಿ ಸೌರ ಫಲಕಗಳ ಅಳವಡಿಕೆ.
- ನೀರಿನ ಸದ್ಬಳಕೆ ಯಾವುದೇ ಕಾರಣಕ್ಕೆ ಕುಡಿಯುವ ನೀರು ಪೋಲಾಗಿದಂತೆ ನೋಡಿಕೊಳ್ಳುವುದು. ಮಳೆ ನೀರಿನ ಕೊಯ್ಲು ತಂತ್ರಗಾರಿಕೆ ಅಳವಡಿಕೆ. ರೈತರು ತಮ್ಮ ಹೊಲ, ತೋಟಗಳಲ್ಲಿ ಕಿರು ನೀರಾವರಿ (ಹನಿ, ಸಿಂಪಡನೆ ನೀರಾವರಿ) ತಾಂತ್ರಿಕತೆಯ ಬಳಕೆ ಅದಕ್ಕೆ ಉತ್ತೇಜನ
- ಮಣ್ಣಿನ ಫಲವತ್ತತೆ, ಆರೋಗ್ಯ ಕಾಪಾಡುವಲ್ಲಿ ಉಪಕ್ರಮಗಳು, ಮಣ್ಣಿನ ಪರಿಕ್ಷಾ ಕೇಂದ್ರಗಳಸ್ಥಾಪನೆ, ಮಣ್ಣಿನ ಸವಕಳಿ ತಡೆ ಕ್ರಮಗಳಿಗೆ ಉತ್ತೀಜನ. ಸಾವಯವ ಗೊಬ್ಬರಗಳ ಉಪಯೋಗಕ್ಕೆ ಉತ್ತೇಜನ. ರಸಾಯನಿಕ ಗೊಬ್ಬರಗಳ ಸರಿಯಾದ, ಅಗತ್ಯಮಟ್ಟದಲ್ಲಿ ಬಳಕೆಗೆ ಉತ್ತೇಜನ. ಅತಿ ಕಡಿಮೆ ಕೃಷಿ ಪ್ರದೇಶದಲ್ಲಿ ಅತಿ ಹೆಚ್ಚು ಉತ್ಪಾದನೆ ತಂತ್ರಗಾರಿಕೆಗೆ ಅಗತ್ಯ ತಾಂತ್ರಿಕ ಸೌಲಭ್ಯಗಳು ಲಭ್ಯವಿದ್ದು ಅವುಗಳ ಸದ್ಭಳಕೆಗೆ ಉತ್ತೇಜನ
- ಸಹಕಾರಿ ಸಮೂಹ ಕೃಷಿ, ಜಂಟಿ ಕೃಷಿಗೆ ವಿಫಲ ಅವಕಾಶಗಿದ್ದು ಅದರ ಸಾಧನೆ.
- ಕೃಷಿ, ತೋಟಗಾರಿಕೆ, ಕೃಷಿ ಅವಲಂಭಿತ ಹೈನುಗಾರಿಕೆ, ಕೋಳಿ ಸಾಕಾಣಿ, ಕುರಿಸಾಕಾಣಿ, ಹಂದಿ ಸಾಕಾಣಿ ಈ ಪಶು ಸಂಗೋಪನೆ ಕಾರ್ಯಕ್ರಮಗಳಿಗೆ ಉತ್ತೇಜನ, ಸೌಲಭ್ಯಗಳನ್ನು ಒದಗಿಸುವುದಲ್ಲದೇ ಉತ್ಪನ್ನಗಳಿಗೆ ಮಧ್ಯಮ ವರ್ತಿಗಳ ಕೈತಪ್ಪಿಸಿ ಸಹಕಾರ ಸಂಘಗಳು ರೈತರಿಗೆ ನ್ಯಾಯಯುತ ಧರ ದೊರೆಯುವಂತೆ ನೋಡಿಕೊಳ್ಳುವುದು. ಈ ದಿಸೆಯಲ್ಲಿ ಆಧುನಿಕ ಮಾಹಿತಿ ತಂತ್ರಜ್ಞಾನ ಸಾಕಷ್ಟು ಅನುಕೂಲಕರ ವಾತಾವರಣ ನಿರ್ಮಾಣ ಮಾಡಿದ್ದು ಸಹಕಾರ ಸಂಘಗಳು ಅದರ ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ.
- ಅಸಂಘಟಿತ ಕಾರ್ಮಿಕ ವಲಯದ ಸಹಕಾರ ಸಂಘಗಳನ್ನು ಸ್ಥಾಪಿಸಿ ಅದರ ಮೂಲಕ ಅವರಿಗೆ ಅವಶ್ಯಕತೆಗಳು ಆರ್ಥಿಕ ಸಾಮಾಜಿಕ ಸವಲತ್ತುಗಳನ್ನು ಪಡೆಯಲು ಸಹಕಾರಿಯಾಗುತ್ತದೆ.

  ಮೇಲಿನವು ಕೆಲವೇ ಕೆಲವು ಸಲಹೆಗಳಾಗಿದ್ದು, ಸಹಕಾರ ಸಂಘಗಳಲ್ಲಿನ ಸಹಕಾರಿಗಳು ಪೆಟ್ಟಿಗೆ ಯಿಂದ ಹೊರಗೆ (out of the box) ಆಲೋಚಿಸಿದಾಗ ತಮ್ಮ ಪರಿಸರದಲ್ಲಿ ತಾವು ಆಯೋಜಿಸಬಲ್ಲ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಬಹುದು. ಇದರಿಂದ ಅಂತರರಾಷ್ಟ್ರೀಯ ಸಹಕಾರ ದಿನವನ್ನು

ಅರ್ಥ ಪೂರ್ಣವಾಗಿ ಆಚರಿಸಿದಂತಾಗುತ್ತದೆ.

**ದೀಪವು ನಿನ್ನದೆ ಗಾಳಿಯು ನಿನ್ನದೆ ಆರದಿರಲಿ ಬೆಳಕು,**

**ಕಡಲು ನಿನ್ನದೆ ಹಡಗು ನಿನ್ನದೆ, ಮುಳಗದಿದರಲಿ ಬದುಕು,**

**ಬೆಟ್ಟವು ನಿನ್ನದೆ, ಬಯಲು ನಿನ್ನದೆ ಹಬ್ಬಿ ನಗಲಿ ಪ್ರೀತಿ ........ಕೆ.ಎಸ್. ನರಸಿಂಹಸ್ವಾಮಿ.**

*******************************************************************************************************

# 30. ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ – ಮಹತ್ವ (ಜುಲೈನ ಮೊದಲ ಶನಿವಾರ, 3ನೇ ಜುಲೈ 2021)

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು (International Cooperative Alliance ICA) 1923ರಿಂದ ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವನ್ನಾಗಿ ಆಚರಿಸುತ್ತಿದೆ. ವಿಶ್ವಸಂಸ್ಥೆಯು ಇದನ್ನು ಪರಿಗಣಿಸಿ 1995 ರಿಂದ ಇದೇ ದಿನವನ್ನು ಅಂತರರಾಷ್ಟ್ರೀಯ ಸಹಕಾರ ದಿನವನ್ನಾಗಿ ಅಂಗೀಕರಿಸಿ ಘೋಷಣೆ ಮಾಡಿತು. ಈ ವರ್ಷದ ಆಚರಣೆಯು 99ನೆಯದು ಮತ್ತು ವಿಶ್ವಸಂಸ್ಥೆ ಅಂಗೀಕೃತ ದಿನವಾಗಿ 27ನೆಯದಾಗಿದೆ. ಅದು 3ನೇ ಜುಲೈ 2021.

ಪ್ರತಿವರ್ಷ ಒಂದು ವಿಷಯಧಾರಿತವಾಗಿ ಘೋಷವಾಕ್ಯವನ್ನು ನಿರ್ಧರಿಸಲಾಗುತ್ತದೆ. 2015ರಿಂದ ವಿಶ್ವ ಸಂಸ್ಥೆಯ 2030ರ ಸುಸ್ಥಿರ ಅಭಿವೃದ್ಧಿ ಗುರಿ (Sustainable Development Goal - SDG) ಆಧರಿಸಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO- ವಿಶ್ವಸಂಸ್ಥೆಯ ಅಂಗ) ಸಹಯೋಗದೊಂದಿಗೆ ಈ ಗುರಿ ಸಾಧಿಸಲು ಕೈಜೋಡಿಸಿದೆ. ಈ ವರ್ಷ ಎಸ್.ಡಿ.ಜಿ ಗುರಿ–13, ಹವಾಮಾನ ವೈಪರಿತ್ಯ ಮತ್ತು ಅದರ ಪರಿಣಾಮಗಳ ನಿಯಂತ್ರಣಕ್ಕೆ ತಕ್ಷಣ ಕ್ರಮಗಳು ಇದರ ಆಧಾರಿತವಾಗಿ ಒಟ್ಟಿಗೆ ಉತ್ತಮ ಪುನರ್ ನಿರ್ಮಾಣ (Rebuild better together) ಎಂಬ ಘೋಷಣೆಯನ್ನು ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ ಮಾಡಿದೆ.

ಸಹಕಾರ ಎಂಬುದು ಒಂದು ಶಕ್ತಿ. ವಿಶ್ವದ 3 ದಶಲಕ್ಷ ಸಹಕಾರ ಸಂಘಗಳು ವಿಶ್ವದ ಮಾನವ ಶಕ್ತಿಯ ಶೇ. 12 ರಷ್ಟನ್ನು ಆವರಿಸಿಕೊಂಡಿದೆ. 3 ದಶಲಕ್ಷ ನೌಕರರಿಗೆ ನೇರ ಉದ್ಯೋಗ ಒದಗಿಸಿದ್ದು ಪರೋಕ್ಷವಾಗಿ ನೂರು ಕೋಟಿ ಸದಸ್ಯರಿಗೆ ಅವರ ಕುಟುಂಬಗಳಿಗೆ ಜೀವಾಳವಾಗಿರುತ್ತದೆ. ಇದರೊಡನೆ ಸಹಕಾರದ ಮಾರ್ಗ ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಬೆಳವಣಿಗೆ ಇದರ ಗುರಿ, ಎಲ್ಲರನ್ನು ಒಳಗೊಂಡಂತಹ ಅಭಿವೃದ್ಧಿ ಇದರ ವ್ಯಾಪ್ತಿ ಗಡಿಯೇ ಇಲ್ಲದ ವಿಶ್ವ, ನಿಜ ಅರ್ಥದಲ್ಲಿ ವಸುದೈವ ಕುಟುಂಬಕಂ ಹೀಗಿರುವಾಗ ಸುಸ್ಥಿರ ಅಬಿವೃದ್ಧಿಗೆ ಸಹಕಾರವೇ ನೆಲೆಯಲ್ಲವೇ?

ವಿಶ್ವ ಸಂಸ್ಥೆಯು ವಿಶ್ವದ ಸುಸ್ಥಿರ ಅಭಿವೃದ್ಧಿಗೆ 2030 ರೊಳಗೆ ಸಂಘಟಿಸಬೇಕೆಂದು 16 ಗುರಿಗಳನ್ನು 2015ರಲ್ಲಿ ನಿಗದಿಪಡಿಸಿದೆ. ಈ ಗುರಿಗಳನ್ನು ಪ್ರತ್ಯೇಕ ಕೋಷ್ಟಕ (ಅನುಬಂಧ)ದಲ್ಲಿ ಒದಗಿಸಿದೆ.

ಈ ಹಿಂದಿನ ಅಂತರರಾಷ್ಟ್ರೀಯ ಸಹಕಾರ ದಿನಗಳಲ್ಲಿ ಹಲವು ಗುರಿಗಳಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲಾಗಿದೆ. ಈ ವರ್ಷ ಗುರಿ–13ನ್ನು ಘೋಷ ವಾಕ್ಯಕ್ಕಾಗಿ ಪರಿಗಣಿಸಿದೆ.

ವರ್ಷವಾರು ಋತುಗಳಲ್ಲಿ ಆಗುತ್ತಿರುವ ಹವಾಮಾನ ಬದಲಾವಣೆಗಳು, ಕರಗುತ್ತಿರುವ ಹಿಮಗಡ್ಡೆಗಳು, ಅದರಿಂದ ಆಗುತ್ತಿರುವ ಪ್ರಪಾತಗಳು, ಮೇಘ ಸ್ಫೋಟಗಳು, ಮಳೆಗಾಲದಲ್ಲಿ (ಮುಂಗಾರು–ಹಿಂಗಾರು) ಆಗುತ್ತಿರುವ ವ್ಯತ್ಯಯಗಳನ್ನು

ನಾವು ಗಮನಿಸುತ್ತಿರುತ್ತೇವೆ. ಈ ಹವಾಮಾನ ಬದಲಾವಣೆಗಳು ಕೃಷಿ ಪ್ರಧಾನವಾದ ನಮ್ಮ ಮತ್ತು ಹಲವಾರು ರಾಷ್ಟ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಕೃಷಿ ಪದ್ಧತಿಯನ್ನೇ ಬದಲಾಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ ಆಹಾರ ಉತ್ಪಾದನೆ, ಇದರ ಅವಲಂಭಿತ ಕೈಗಾರಿಕೆ ಮತ್ತು ಸರಪಳಿ ಕ್ರಿಯೆಯಾಗಿ ಇತರೆ ಅನೇಕ ವಲಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆಹಾರ ಭದ್ರತೆಗೆ ಚ್ಯುತಿಯಾಗುತ್ತಿದೆ ಎಂಬುದು ಆತಂಕಕಾರಿ ಬೆಳವಣಿಗೆ.

ಇದಕ್ಕೆ ಕಾರಣವಾದರೂ ಏನು? ಎಂದು ಪರಿಶೀಲಿಸಿದಲ್ಲಿ ಕಂಡುಬರುವ ಅಂಶವೆಂದರೆ ಪ್ರಕೃತಿಯೊಡನೆ ಮಾನವ ವರ್ತಿಸುತ್ತಿರುವ ರೀತಿಯೇ ಆಗಿದೆ ಎಂದರೆ ತಪ್ಪಾಗಲಾರದು. ಮಾನವ ಅಭಿವೃದ್ಧಿ ಎಂದು ಅರ್ಥೈಸಿರುವುದು ತನ್ನ ಜೀವನಮಟ್ಟ ಉತ್ತಮಗೊಳಿಸುವುದು. ಉತ್ತಮಗೊಳ್ಳಲು ಅನುಸರಿಸಿದ ಮಾರ್ಗ ವಿಜ್ಞಾನ ಮತ್ತು ತಂತ್ರಜ್ಞಾನ.

ಇದು ಎರೆಡು ಅಲುಗಿನ ಕತ್ತಿಯಂತೆ. ಇದರ ಎಲ್ಲೆಯಿಲ್ಲದ ಮುಂದುವರಿಕೆ. ಪ್ರಕೃತಿ ಮೇಲಿನ ನಿರಂತರ ಅತ್ಯಾಚಾರ. ಇದರ ಪರಿಣಾಮವೇ ವಿಶ್ವದ ತಾಪಮಾನ ಏರಿಕೆ. ಈ ಏರಿಕೆ 2 ಡಿಗ್ರಿ ಸೆಲ್ಸಿಯಸ್ ಆದಲ್ಲಿ ಹಲವು ಭೂಪ್ರದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮಗಳಾಗಿ ಜೀವಿಸಲು ಯೋಗ್ಯಲಾರದಾಗುತ್ತದೆ. ಆಗುವ ನಷ್ಟ ಊಹಿಸಲು ಅಸಾದ್ಯ. ಆದುದರಿಂದ 2015ರಲ್ಲಿ ಪ್ಯಾರಿಸ್ ಶೃಂಗ ಸಭೆಯಲ್ಲಿ ಆದ ಒಪ್ಪಂದದಂತೆ ಏರಿಕೆಯ ಪ್ರಮಾಣವನ್ನು $1.5^0$ ಸೆ ಒಳಗೆ ನಿಯಂತ್ರಿಸುವುದು. ಇದಕ್ಕೆ ಅಗತ್ಯ ಕ್ರಮಕೈಗೊಳ್ಳಲು ಈ ರಾಷ್ಟ್ರಗಳು ಕಟಿಬದ್ಧವಾಗಿವೆ. ಭಾರತವು ಈ ಒಪ್ಪಂದ ಭಾಗವಾಗಿದೆ. ಇದರಲ್ಲಿ ಎರಡು ಅಂಶಗಳು ಒಂದು ಮತ್ತೊಂದಕ್ಕೆ ಪೂರಕವಾಗಿದೆ. ಮೊದಲನೆಯದು ಇಂಗಾಲ ಹೊರಸೂಸುವಿಕೆಯನ್ನು ಕಡಿತಗೊಳಿಸುವುದು. ಎರಡನೆಯದು ನವೀಕರಣಗೊಳ್ಳಬಲ್ಲ (ಅಕ್ಷಯ) ಶಕ್ತಿ ಉತ್ಪಾದನೆಯನ್ನು ಹೆಚ್ಚಳಗೊಳಿಸುವುದು. ಪಳೆಯುಳಿಕೆ (Fossil) ಇಂಧನವಾದ ತೈಲ ಮತ್ತು ಕಲ್ಲಿದ್ದಲು ಆಧಾರಿತ ಶಕ್ತಿಮೂಲ ಮತ್ತು ಕೈಗಾರಿಕೆ ಸಾಗಾಣಿಕೆಯಲ್ಲಿ ಅದರ ಉಪಯೋಗವನ್ನು ಕಡಿತಗೊಳಿಸುವುದು. ಪರ್ಯಾಯವಾಗಿ ಅಕ್ಷಯ ಇಂಧನಗಳಾದ ಸೌರಶಕ್ತಿ, ಪವನ (ಗಾಳಿ) ಆಧಾರಿತ ಶಕ್ತಿ ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದು.

ಭಾರತವು ಕಳೆದ ದಶಕದಲ್ಲಿ ಈ ಮೂಲಗಳ ಶಕ್ತಿಯನ್ನು ನಾಲ್ಕರಷ್ಟು ವೃದ್ಧಿಸಿದೆ. 2030ಕ್ಕೆ ಗುರಿ ಹೊಂದಿದ್ದು ಸಾಧಿಸುವುದು ಬಹಳಷ್ಟಿದೆ. ಏಕೆಂದರೆ ಈಗಿರುವ ಏರಿಕೆ ದರದಲ್ಲಿಯೇ ಆದಲ್ಲಿ 2030ಕ್ಕೆ ವಿಶ್ವ ತಾಪಮಾನ ಏರಿಕೆ ಪ್ರಮಾಣ $2.4^0$ ಸೆ. ಆಗುತ್ತದೆ ಎಂಬುದು ಒಂದು ಅಂದಾಜು.

ಹವಾಮಾನ ವೈಪರೀತ್ಯಗಳನ್ನು ತಡೆಗಟ್ಟುವ ಮೂಲಕ ವಿಶ್ವದ ಸುಸ್ಥಿರ ಬೆಳವಣಿಗೆಗೆ ಸಹಕಾರವು ಸಮುದಾಯ, ಸರ್ಕಾರದೊಟ್ಟಿಗೆ ಕೈಜೋಡಿಸಿ ಕಾರ್ಯನಿರ್ವಹಿಸುವ ಜವಾಬ್ದಾರಿ ಇದೆ. ಈ ದಿಸೆಯಲ್ಲಿ ಸಹಕಾರ ಸಂಘಗಳು ಪಳೆಯುಳಿಕೆ ಇಂಧನ ಬಳಕೆಯನ್ನು ಕಡಿಮೆಗೊಳಿಸಬೇಕು. ಸದಸ್ಯರಲ್ಲಿ, ಸಾರ್ವಜನಿಕರಲ್ಲಿ ಇದರ ಬಗ್ಗೆ ಸದಭಿಪ್ರಾಯ ಮೂಡಿಸುವುದು. (ಉದಾ: ಬೈಸಿಕಲ್ ಬಳಕೆಗೆ ಪ್ರೋತ್ಸಾಹಿಸುವುದು, ಉತ್ತೇಜಿಸುವುದು, ಪಾರಿತೋಷಕ ನೀಡುವುದು) ವಿದ್ಯುಚ್ಚಕ್ತಿ ವಾಹನಗಳ ಬಳಕೆ, ಸೌರಶಕ್ತಿ ಉತ್ಪಾದನೆಗೆ ಅಗತ್ಯ ಪರಿಕರಗಳನ್ನು ಅಳವಡಿಸಿಕೊಳ್ಳುವುದು. ಓಝೋನ್ ಪದರದ ಚದುರುವಿಕೆಗೆ ಕಾರಣವಾದ ರಾಸಾಯನಿಕಗಳು (ಕ್ಲೋರೋಫ್ಲೋರೋ ಕಾರ್ಬನ್), ಶುಚಿತ್ವಕ್ಕಾಗಿ ಬಳಸುವ ರಾಸಾಯನಿಕ ಪದಾರ್ಥಗಳನ್ನು ಕಡಿತಗೊಳಿಸುವುದು, ಅರಣ್ಯನಾಶ ತಡೆಗಟ್ಟುವಿಕೆ, ವೈವಿಧ್ಯಮಯ ಗಿಡ, ಮರಗಳನ್ನು ನೆಟ್ಟು, ಬೆಳೆಸಿ, ಪೋಷಿಸಿ ಜೈವವೈವಿಧ್ಯಮತೆಯನ್ನು ಪುನರ್ ನಿರ್ಮಾಣ ಮಾಡುವುದು. ಒಟ್ಟಾರೆ ಇಂಗಾಲ ಹೊರಸೂಸುವಿಕೆ ಕಡಿತಗೊಳಿಸುವುದು, ನವೀಕರಣಗೊಳಿಸುವುದು, ನವೀಕರಣ (ಅಕ್ಷಯ) ಇಂಧನ ಬಳಕೆ ಹೆಚ್ಚಿಸುವುದು ಒಟ್ಟಾರೆಯಾಗಿ ಪರಿಸರ ಸ್ನೇಹಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಇಂತಹ ಯೋಜನೆಗಳಲ್ಲಿ (ಜೈವಿಕ ಡೀಸೆಲ್, ಎಥೆನಾಲ್) ಹೂಡಿಕೆ ಮಾಡುವುದು. ಸಹಕಾರ ಪತ್ತು ವಲಯವು ಹೂಡಿಕೆ ಮತ್ತು ದುಡಿಯುವ ಬಂಡವಾಳ ಒದಗಿಸುವ ಉತ್ಪನ್ನಗಳಿಗೆ ಆದ್ಯತೆ ನೀಡುವುದು ಈ ದಿಸೆಯಲ್ಲಿ ಸಕಾರಾತ್ಮಕ ಕ್ರಮವಾಗುತ್ತದೆ.

ಭಾರತವು ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ – (SDG) ಸಾಧನೆಯಲ್ಲಿ 115ನೇ ಸ್ಥಾನದಲ್ಲಿದ್ದದ್ದು 117ನೇ ಸ್ಥಾನಕ್ಕೆ ಕುಸಿದಿದೆ. ಪರಿಸರ ಸಾಧನೆ ಸೂಚ್ಯಂಕದಲ್ಲಿ 180 ದೇಶಗಳ ಪೈಕಿ 168ನೇ ಸ್ಥಾನದಲ್ಲಿದೆ. ಇದು ಅತ್ಯಂತ ಕಳವಳಕಾರಿ ಅಂಶವಾಗಿದೆ. ಸಹಕಾರ ಚಳವಳಿ ತನ್ನ ಸಾಮಾಜಿಕ ಬದ್ಧತೆ ಅಂಗವಾಗಿ ಅಂತರರಾಷ್ಟ್ರೀಯ ಸಹಕಾರ ದಿನ ದಂದು ಒಟ್ಟಿಗೆ ಉತ್ತಮ ಪುನರ್ ನಿರ್ಮಾಣ ಮಾಡೋಣ ಎಂಬ ಪ್ರತಿಜ್ಞೆ ಸ್ವೀಕಾರ ಮಾಡುವುದರೊಂದಿಗೆ ಹಲವು ಪರಿಸರ ಸ್ನೇಹಿ ಕಾರ್ಯಕ್ರಮಗಳೊಂದಿಗೆ ರಾಷ್ಟ್ರ ಮತ್ತು ವಿಶ್ವದ ಸುಸ್ಥಿರ ಅಭಿವೃದ್ಧಿಯ ಪಾಲುದಾರರಾಗಿ ಶ್ರಮಿಸೋಣ.

**ಸವಿನುಡಿಯ ಸಿರಿಗುಡಿಯ**

**ಕಟ್ಟುವವರು ನಾವು**

**ಹೊಂಗನಸುಗಳು ಮುಡಿಯ**

**ಮುಟ್ಟುವವರು ನಾವು– ಕುವೆಂಪು**

**ಅನುಬಂಧ**

**ಸುಸ್ಥಿರ ಬೆಳವಣಿಗೆ ಗುರಿಗಳು (Sustainable development Goals - SDG)**

**ಎಸ್.ಡಿ.ಜಿ.–1 ಬಡತನ ನಿರ್ಮೂಲನೆ –** ಯಾವ ಸ್ವರೂಪದಲ್ಲಿಯೂ ಬಡತನವಿರಬಾರದು. ಸಮಸ್ತ ನಾಗರೀಕರಿಗೂ ಸಾಮಾಜಿಕ ಭದ್ರತೆ ಇರಬೇಕು.

**ಎಸ್.ಡಿ.ಜಿ.–2 ಶೂನ್ಯ ಹಸಿವು –** ಹಸಿವಿನಿಂದ ಯಾರೂ ಬಳಲಬಾರದು. ಎಲ್ಲರಿಗೂ ಆಹಾರ ಭದ್ರತೆ ಇರಬೇಕು. ಪೌಷ್ಠಿಕಾಂಶಯುಕ್ತ ಆಹಾರ ದೊರೆಯಬೇಕು. ಸುಸ್ಥಿರ ಕೃಷಿ ನೀತಿಗೆ ಉತ್ತೇಜನ.

**ಎಸ್.ಡಿ.ಜಿ.–3 ಉತ್ತಮ ಆರೋಗ್ಯ –** ಎಲ್ಲರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ದೊರೆಯಬೇಕು. ಎಲ್ಲ ವಯಸ್ಸಿನವರು, ವರ್ಗದವರ ಆರೋಗ್ಯ ಉತ್ತಮ ಸ್ಥಿತಿಯಲ್ಲಿ ಇರಬೇಕು.

**ಎಸ್.ಡಿ.ಜಿ.–4 ಗುಣಮಟ್ಟದ ಶಿಕ್ಷಣ –** ಎಲ್ಲರನ್ನು ಒಳಗೊಂಡ ಶಿಕ್ಷಣ ನೀತಿ, ಜೀವನ ನಿರ್ವಹಣೆಗೆ ಅವಕಾಶಗಳನ್ನು ಒದಗಿಸುವಂತಹ ಗುಣಮಟ್ಟದ ಶಿಕ್ಷಣ ನೀತಿ.

**ಎಸ್.ಡಿ.ಜಿ.–5 ಲಿಂಗ ಸಮಾನತೆ –** ಲಿಂಗ ಸಮಾನತೆ ಎಲ್ಲೆಡೆ ಸಾಧ್ಯವಾಗಬೇಕು. ಮಹಿಳೆಯರು ಮತ್ತು ಬಾಲಕಿಯರ ಸಬಲೀಕರಣ.

**ಎಸ್.ಡಿ.ಜಿ.–6 ಶುದ್ಧ ನೀರು ಮತ್ತು ಶುಚಿತ್ವ –** ಎಲ್ಲರಿಗೂ ಶುದ್ಧ ನೀರಿನ ನಿರಂತರ ಲಭ್ಯತೆ ಮತ್ತು ಶುಚಿತ್ವ ನಿರ್ವಹಣೆಗೆ ಅಗತ್ಯ ಸೌಲಭ್ಯ.

**ಎಸ್.ಡಿ.ಜಿ.–7 ಕೈಗೆಟಕುವ ಶುದ್ಧ ಇಂಧನ –** ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಪರಿಸರ ಸ್ನೇಹಿ ಇಂಧನ ದೊರೆಯಬೇಕು.

**ಎಸ್.ಡಿ.ಜಿ.–8 ಗುಣಮಟ್ಟದ ಕೆಲಸ ಮತ್ತು ಆರ್ಥಿಕ ಬೆಳವಣಿಗೆ –** ಎಲ್ಲರಿಗೂ ಉತ್ತಮ ಗುಣಮಟ್ಟದ ಕೆಲಸ ದೊರೆಯಬೇಕು. ಎಲ್ಲರನ್ನೂ ಒಳಗೊಳ್ಳುವ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ.

**ಎಸ್.ಡಿ.ಜಿ.–9 ಕೈಗಾರಿಕೆ, ಅನ್ವೇಷಣೆ, ಮೂಲಸೌರ್ಕ** – ಎಲ್ಲರನ್ನು ಒಳಗೊಂಡ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿ.

**ಎಸ್.ಡಿ.ಜಿ.–10 ಅಸಮಾನತೆ ನಿರ್ಮೂಲನೆ** – ಜನರು /ಜಿಲ್ಲೆಗಳು /ರಾಜ್ಯಗಳು /ದೇಶಗಳ ನಡುವಣ ಅಸಮಾನತೆ ನಿರ್ಮೂಲನೆ.

**ಎಸ್.ಡಿ.ಜಿ.–11 ಸುಸ್ಥಿರ ನಗರ ಮತ್ತು ಸಮುದಾಯಗಳು** – ಜನ ವಸತಿ ಪ್ರದೇಶಗಳು ಸುರಕ್ಷಿತ ಮತ್ತು ಸುಸ್ಥಿರವಾಗಿರಬೇಕು.

**ಎಸ್.ಡಿ.ಜಿ.–12 ಹೊಣೆಯಾಧಾರಿತ ಬಳಕೆ ಮತ್ತು ಉತ್ಪಾದನೆ** – ಎಲ್ಲಾ ಸರಕು ಮತ್ತು ಸೇವೆಗಳ ಸುಸ್ಥಿರವಾದ ಉತ್ಪಾದನಾ ನೀತಿ ಮತ್ತು ಜವಾಬ್ದಾರಿಯುತ ಬಳಕೆ ಉತ್ತೇಜನ.

**ಎಸ್.ಡಿ.ಜಿ.–13 ಹವಾಮಾನ** – ಹವಾಮಾನ ವೈಪರೀತ್ಯ ಮತ್ತು ಅದರ ಪರಿಣಾಮಗಳ ನಿಯಂತ್ರಣಕ್ಕೆ ತಕ್ಷಣದ ಕ್ರಮಗಳು.

**ಎಸ್.ಡಿ.ಜಿ.–14 ಜಲಚರ ಜೀವಿಗಳು** – ಜಲಚರ ಜೀವಿಗಳ ಸಂರಕ್ಷಣೆ ಮತ್ತು ಸಮುದ್ರದ ಸಂಪನ್ಮೂಲಗಳ ಸುಸ್ಥಿರ ಬಳಕೆ

**ಎಸ್.ಡಿ.ಜಿ.–15 ನೆಲಜೀವಿಗಳು** – ಪರಿಸರ ಸಂರಕ್ಷಣೆ, ಜೀವ ವೈವಿಧ್ಯ ಸಂರಕ್ಷಣೆ

**ಎಸ್.ಡಿ.ಜಿ.–16 ಶಾಂತಿ, ನ್ಯಾಯ ಮತ್ತು ಪ್ರಬಲ ಸಂಸ್ಥೆಗಳು** – ಸಮುದಾಯಗಳಲ್ಲಿ ಶಾಂತಿಯನ್ನು ಉತ್ತೇಜಿಸಬೇಕು. ಎಲ್ಲರಿಗೂ ನ್ಯಾಯ ಕೈಗೆಟುಕಬೇಕು.

*****************************************************************************************************

# 32. ಅಂತರರಾಷ್ಟ್ರೀಯ ಸಹಕಾರ ದಿನ – ಅದರ ಮಹತ್ವ– ಅವಲೋಕನ

ಭಾರತದಲ್ಲಿ ಭಾರತದ ಪ್ರಥಮ ಪ್ರದಾನಿ ಪಂಡಿತ್ ಜವರ್‌ಲಾಲ್ ನೆಹರೂ ಅವರ ಸಹಕಾರ ಚಳುವಳಿಯ ಬದ್ಧತೆ ಮತ್ತು ಕೊಡುಗೆ ನೆನಪಿಗಾಗಿ ನಾವು ಅವರ ಹುಟ್ಟು ಹಬ್ಬದ ನೆನಪಿನಲ್ಲಿ ಸಹಕಾರ ಸಪ್ತಾಹ ಆಚರಿಸುವುದು ಸಹಕಾರಿಗಳಿಗೆ ತಿಳಿದ ವಿಷಯ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನ ಎಂದು ಆಚರಿಸಲಾಗುತ್ತಿದೆ. ವಿಶ್ವದ ಎಲ್ಲ ಸಹಕಾರಿಗಳು ಸಮಾನರು ಎಂದು ಸಾರುವ ದಿನ, ವಿಶ್ವಾದ್ಯಂತ ಸಹಕಾರಿಗಳ ನಡುವೆ ಸಮಾನತೆಯನ್ನು ಸಾರಿ ಬಡತನ ನಿರ್ಮೂಲನೆ ಉದ್ದೇಶವನ್ನು ಹೊಂದಿರುತ್ತದೆ. ಬಡಜನರ ಅವಶ್ಯಕತೆಗನುಸಾರವಾಗಿ ವ್ಯವಹಾರ ನಡೆಸಿ ಸಹಕಾರಿಗಳ ನಡುವೆ ಭ್ರಾತೃತ್ವ ಏರ್ಪಡಿಸುವ ಸಂದೇಶವನ್ನು ಹೊಂದಿದೆ. ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ ನೇತೃತ್ವದಲ್ಲಿ 1992ರಿಂದ ಈ ದಿನಾಚರಣೆಯನ್ನು ಆಚರಿಸುತ್ತಾ ಬರಲಾಗುತ್ತಿದೆ.

**ದಿನಾಚರಣೆಯ ಗುರಿ :**

* ಸಹಕಾರದ ಬಗ್ಗೆ ಜಾಗೃತಿ ಉಂಟು ಮಾಡುವುದು.

* ವಿಶ್ವಸಂಸ್ಥೆಯ ಉದ್ದೇಶ ಮತ್ತು ಗುರಿಗಳ ಸಾಧನೆಗೆ ಅದರ ಸಹಯೋಗದೊಂದಿಗೆ ಪೂರಕವಾಗಿ ಅಂತರರಾಷ್ಟ್ರೀಯ ಸಹಕಾರ ಚಳುವಳಿ ಕೆಲಸ ಮಾಡುವುದು.

* ವಿಶ್ವಸಂಸ್ಥೆಯು ಗುರುತಿಸುವ ನಿವಾರಿಸಬೇಕಾದ ಸಂಕಷ್ಟಗಳ ನಿರ್ವಹಣೆಯಲ್ಲಿ ಸಹಕಾರ ಚಳುವಳಿಯು ತನ್ನ ಪಾತ್ರವನ್ನು ಗುರುತಿಸಿ ಕಾರ್ಯಾಚರಣೆಗೆ ತರುವುದು.

ಸ್ಥಳೀಯ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸರ್ಕಾರಗಳನ್ನು ಒಳಗೊಂಡಂತೆ ಸಂಬಂಧಿಸಿದ ದಂಸ್ಥೆಗಳ ಮತ್ತು ಸಹಕಾರ ಚಳುವಳಿಯ ನಡುವೆ ಸಾಮರ್ಥ್ಯ ಮತ್ತು ಪಾಲುದಾರಿಕೆಯನ್ನು ವಿಸ್ತರಿಸುವುದು.

2016ರಲ್ಲಿ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಐಸ್ಥೆಯು, ವಿಶ್ವ ಸಂಸ್ಥೆಯು 2030ರೊಳಗೆ ಸಾಧಿಸಬೇಕಾದ ಗುರಿಗಳನ್ನು ನಿಗದಿಪಡಿಸಿದ್ದು ಅಭಿವೃದ್ಧಿ ಹೊಂದಿದ ಅಭಿವೃದ್ಧಿ ಶೀಲ ರಾಷ್ಟ್ರಗಳೊಡನೆ ಕೈಜೋಡಿಸಿ ಈ ಸಾಧನೆ ಮಾಡಲು ತಿಳಿಸಿರುವ ಹದಿನೇಳು ಅಂಶಗಳ ಪೈಕಿ ಸಹಕಾರ ಚಳುವಳಿಯು ತನ್ನ ಕೊಡುಗೆಯನ್ನು ಈ ಅಂಶಗಳ ಬಗ್ಗೆ ನೀಡಬೇಕಾಗಿ ಕರೆ ನೀಡಿದೆ. ಈ ಅಂಶಗಳ ಬಗ್ಗೆ ಭಾರತದಲ್ಲಿ ನಮ್ಮ ಸಹಕಾರಿ ಸಂಘಗಳು, ಈಗಾಗಲೆ ಕಾರ್ಯೋನ್ಮುಕವಾಗಿದ್ದು ಪ್ರತಿಯೊಂದು ಅಂಶದಲ್ಲೂ ತಾನು ಯಾವ ರೀತಿಯಲ್ಲಿ ತೊಡಗಿಸಿಕೊಳ್ಳಬಲ್ಲದು ಎಂಬುದನ್ನು ಆಲೋಚಿಸಲು ಇದು ಸುಸಮಯ.

**1. ವಿಶ್ವದ ಸಮಸ್ತ ಜನತೆಯ ಬಡತನ ನಿರ್ಮೂಲನೆ :** ದಿನಕ್ಕೆ 1.25 ಡಾಲರ್‌ಗಿಂತ ಕಡಿಮೆ ಆದಾಯದವರನ್ನು ಬಡ ಜನತೆಯಂದು ವಿಶ್ವಸಂಸ್ಥೆ ಗುರುತಿಸುತ್ತದೆ. ಬಡತನಕ್ಕೆ ಕಾರಣಗಳನ್ನು ಗುರುತಿಸಿ ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಹಿಡಿಯಬೇಕಾಗಿದೆ. ಬಡತನದ ವಿವಿಧ ಆಯಾಮಗಳನ್ನು ಗ್ರಹಿಸಿ ಪರಿಹಾರೋಪಾಯಗಳನ್ನು ಜಾರಿಗೆ ತರುವುದು ಸಾಮಾಜಿಕ ಅನಿಷ್ಟಗಳ ಹೋಗಲಾಡಿಸುವಿಕೆ, ಪ್ರಾಕೃತಿಕ ಸಂಪನ್ಮೂಲಗಳ ಸದ್ಬಳಕೆಗೆ ಸಮಾನ ಹಕ್ಕು. ಆರ್ಥಿಕ ಸೇವೆಗಳ ಲಭ್ಯತೆ, ಬಳಸಬಹುದಾದ, ತಕ್ಕನಾದ ತಾಂತ್ರಿಕತೆಯ ಪೂರೈಕೆ.

**2. ಹಸಿವೆಯನ್ನು ಕೊನೆಗೊಳಿಸುವುದು. ಆಹಾರ ಸಂರಕ್ಷಣೆಯ ಸಾಧನೆ, ಪೋಷಾಕಾಂಶಗಳುಳ್ಳ ಆಹಾರ ಒದಗಿಸುವುದು ಮತ್ತು ಸುಸ್ಥಿರ ಕೃಷಿ ಪ್ರೋತ್ಸಾಹಿಸುವುದು :** ವರ್ಷ ಪೂರ್ತಿ ರಕ್ಷಿತ ಪೋಷಕಾಂಶ ಭರಿತ ಸಾಕಷ್ಟು ಆಹಾರವು ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಹಿರಿಯ ವ್ಯಕ್ತಿಗಳಿಗೆ, ಹದಿಹರೆಯದ ಹೆಣ್ಣುಮಕ್ಕಳಿಗೆ ಬಸರಿಯಾಗಿರುವ ಮತ್ತು ಹಾಲೂಡುತ್ತಿರುವ ತಾಯಂದರಿಗೆ ಪೂಷಕಾಂಶ ಆಹಾರ ಒದಗಿಸುವುದು. ಸಣ್ಣ ಮತ್ತು ಮದ್ಯಮ ಭೂ ಹಿಡುವಳಿದಾರರಿಗೆ ಪ್ರೋತ್ಸಾಹ ನೀಡಿ ಕೃಷಿ ಉತ್ಪನ್ನವನ್ನು ದ್ವಿಗುಣಗೊಳಿಸುವುದು ಅಲ್ಲದೆ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆಯಲ್ಲಿ ಕಿರು ಉತ್ಪನ್ನಗಾರರನ್ನು ಪ್ರೋತ್ಸಾಹಿಸುವುದು. ಮಣ್ಣಿನ ಫಲವತ್ತತೆ, ಸಂರಕ್ಷಣೆ ಮಾಡುವುದು ಭೂಮಿಯಲ್ಲಿ ಆಗುತ್ತಿರುವ ವಾತಾವರಣದ ಬದಲಾವಣೆಗೆ ತಕ್ಕಂತೆ ಕೃಷಿ ಪದ್ಧತಿಗಳಲ್ಲಿ ಬದಲಾವಣೆ, ಪಾರಂಪರಿಕ ಜ್ಞಾನ – ಬೀಜ, ಕೃಷಿ ಪದ್ಧತಿ, ಪಶುಸಂಗೋಪನೆಯಲ್ಲಿರುವುದನ್ನು ಸಂರಕ್ಷಿಸುವುದು ಮತ್ತು ಬಳಸುವುದು.

**3. ಉತ್ತಮ ಆರೋಗ್ಯ ಮತ್ತು ಸುಖಬಾಳ್ವೆ :** ಎಲ್ಲ ವಯಸ್ಸಿನ ಜನರಿಗೂ ಉತ್ತೇಜಿಸುವುದು, ಹೆರಿಗೆಯಲ್ಲಿ ತಾಯಂದಿರ ಸಾವನ್ನು ಕಡಿತಗೊಳಿಸುವುದು (ಒಂದು ಲಕ್ಷಕ್ಕೆ ಎಪ್ಪತ್ತು ಸಾವುಗಳಾಗುತ್ತಿವೆ) ಐದು ವರ್ಷದ ಒಳಗಿನ ಹಸುಳೆಗಳ ಸಾವು ಕಡಿತಗೊಳಿಸುವುದು, ಸಾಂಕ್ರಾಮಿಕ ರೋಗಗಳಾದ ಏಡ್ಸ್, ಕ್ಷಯ, ಜಾಂಡೀಸ್ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವುದು. ಸಾಮಾಜಿಕ ಕಳಂಕಗಳಾಗಿರುವ, ಕುಡಿತ, ತಂಬಾಕು ಸೇವನೆ, ಮಾಧಕ ಪದಾರ್ಥಗಳ ಸೇವನೆ ತಡೆಗಟ್ಟುವಿಕೆ. ರಸ್ತೆ ಅಪಘಾತಗಳು ಆರೋಗ್ಯ ಸುರಕ್ಷಾಕ್ರಮಗಳು, ವಿಮೆ, ನೀರು, ವಾಯು, ಭೂ ಪರಿಸರ ಮಾಲಿನ್ಯ ತಡೆಗಟ್ಟುವಿಕೆ. ಎಲ್ಲರನ್ನೂ ಒಳಗೊಂಡಂತೆ ಸಮಾನ, ಗುಣಮಟ್ಟದ ಶಿಕ್ಷಣ, ಎಲ್ಲರಿಗೂ ಜೀವನ ಪರ್ಯಂತ ನಿರಂತರ ಕಲಿಕೆಗೆ ಅವಕಾಶ : ಹಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಎಂಬ ಭೇದಭಾವವಿಲ್ಲದೆ ಎಲ್ಲ ಮಕ್ಕಳಿಗೂ ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣ ಜ್ಞಾನದ ಜೊತೆಗೆ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡುವುದು. ಲಿಂಗಭೇದ ವಿರದೆ ಸಾಕ್ಷರತೆ ಮತ್ತು ಲೆಕ್ಕಗಳ ಅಭ್ಯಾಸ, ಶಿಕ್ಷಣದಲ್ಲಿ ಅಹಿಂಸೆ ಮತ್ತು ಸುಸ್ಥಿರ ಅಭಿವೃದ್ಧಿ ಬಗ್ಗೆ ಹೆಚ್ಚಿನ ಒತ್ತನ್ನು ನೀಡುವುದು ಅಗತ್ಯ ಆರ್ಥಿಕ ಸೌಲಭ್ಯ

ಒದಗಿಸುವುದು. ಶಿಕ್ಷಕರನ್ನು ಒದಗಿಸುವುದು.

**5. ಲಿಂಗ ಸಮಾನತೆಯನ್ನು ಸಾಧಿಸುವುದು ಮತ್ತು ಮಹಿಳೆಯರ ಸಬಲತೆ :** ಮಹಿಳೆ ಮತ್ತು ಪುರುಷರನ್ನು ಸಮಾನತೆಯಾಗಿ ಕಾಣುವುದು. ಮಹಿಳೆಯರ ಶೋಷಣೆ ತಪ್ಪಿಸುವುದು ಬಾಲ್ಯ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟುವುದು ಮನೆಗೆಲಸಗಳಲ್ಲಿ ಜವಾಬ್ದಾರಿಯನ್ನು ಸಮಾನವಾಗಿ ಹೊರುವುದು, ಮಹಿಳಾ ನಾಯಕತ್ವ ಪ್ರೋತ್ಸಾಹಿಸುವುದು, ಮಹಿಳೆಯರ ವಿಶೇಷ ಆರೋಗ್ಯ ಅವಶ್ಯಕತೆಗಳನ್ನು ಪೂರೈಸುವುದು, ಯಜಮಾನಿಕೆ ಹಕ್ಕುಗಳನ್ನು ನೀಡುವುದು, ಆರ್ಥಿಕ ಸಬಲರನ್ನಾಗಿ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳುವುದು, ಲಿಂಗ ಸಮಾನತೆಗೆ ಅವಶ್ಯ ಕಾಯ್ದೆ ಕಾನೂನು, ನೀತಿ ನಿಯಮಗಳನ್ನು ರಚಿಸುವುದು ಮತ್ತು ಪಾಲಿಸುವುದು.

**6. ಎಲ್ಲರಿಗೂ ಶುದ್ಧ ನೀರು ಮತ್ತು ನೈರ್ಮಲ್ಯ ಒದಗಿಸುವುದು** : ಎಲ್ಲರಗೂ ಶುದ್ಧ ಕುಡಿಯುವ ನೀರಿನ ಲಭ್ಯತೆಗೆ ಸೌಕರ್ಯ ನಿರ್ಮಾಣ, ವಿಶೇಷವಾಗಿ ಮಹಿಳೆಯರಿಗೂ ಅನುಕೂಲಕರ ಶೌಚಾಲಯ ನಿರ್ಮಾಣ, ಬಹಿರ್ದೆಸೆಯನ್ನು ಸಂಪೂರ್ಣ ಹೋಗಲಾಡಿಸುವುದು, ನೀರಿನ ಮಾಲಿನ್ಯ ತಡೆಗಟ್ಟುವಿಕೆ, ನೀರಿನ ಮಿತ ಮತ್ತು ಪರಿಣಾಮಕಾರಿ ಬಳಕೆ, ನೀರಿನ ಸಂಪನ್ಮೂಲಗಳ ರಕ್ಷಣೆ. ಈ ಕಾರ್ಯಕ್ರಮಗಳಲ್ಲಿ ಸ್ಥಳೀಯರ ಭಾಗಿತ್ವಕ್ಕೆ ಪ್ರಾಮುಖ್ಯತೆ ನೀಡುವುದು.

**7. ಎಲ್ಲರಿಗೂ ಕೈಗೆಟುಕುವ, ಅವಲಂಭಿಸಬಲ್ಲ ಸುಸ್ಥಿರ ಮತ್ತು ಆಧುನಿಕ ಶಕ್ತಿ ಮೂಲಗಳ ಲಭ್ಯತೆಯನ್ನು ಖಾತ್ರಿಗೊಳಿಸುವುದು** : ಈ ದೃಷ್ಠಿಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಗೆ ಸಾಕಷ್ಟು ಪ್ರಾಮುಖ್ಯತೆ ನೀಡುವುದು. ಶಕ್ತಿ ಬಳಕೆಯಲ್ಲಿ ಸೋರಿಕೆಗಳನ್ನು ತಡೆಗಟ್ಟಿ ಕಾರ್ಯ ತತ್ಪರತೆಯನ್ನು ಹೆಚ್ಚಿಸುವುದು ಪರಿಸರ ಪೂರಕ ಸೌರಶಕ್ತಿ, ಗಾಳಿ, ಇನ್ನಿತರೆ ಮೂಲಗಳ ಅವಿಷ್ಕಾರ, ಬಳಕೆ ಶುದ್ಧ ಪರಿಸರ ನಿರ್ಮಾಣಕ್ಕೆ ಸಹಕಾರ.

**8. ಸಮಗ್ರ ಒಳಗೊಳ್ಳುವಿಕೆ ಉಳ್ಳ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಎಲ್ಲರಿಗೂ ಗೌರವಯುತ ಪೂರ್ಣ ಮತ್ತು ಉತ್ಪಾದಕ ಉದ್ಯೋಗ ಒದಗಿಸುವುದು** : ಶೇ7ಕ್ಕೆ ಕಡಿಮೆ ಇಲ್ಲದಂತೆ ಜಿ.ಡಿ.ಪಿ ಬೆಳವಣಿಗೆ ದರ ಕಾಪಾಡುವುದು, ಉದ್ಯೋಗದಲ್ಲಿ ವೈವಿಧ್ಯತೆಯನ್ನು ಆವಿಷ್ಕರಿಸುವುದು. ತಾಂತ್ರಿಕತೆಯನ್ನು ಉನ್ನತೀಕರಿಸುವುದು. ತನ್ಮೂಲಕ ಮೌಲ್ಯಯುತ ಶ್ರಮ ಸಹಿತ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು. ಸಣ್ಣ ಮಾಧ್ಯಮಿಕ ಮತ್ತು ಸೂಕ್ಷ್ಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು. ಉತ್ಪಾದನೆ ಮತ್ತು ಬಳಕೆಯಲ್ಲಿ ಸಂಪನ್ಮೂಲಗಳ ಸದ್ಬಳಕೆ, ನಿರುದ್ಯೋಗ ನಿರ್ಮೂಲನೆ, ಕಾರ್ಮಿಕರ ಹಕ್ಕುಗಳ ರಕ್ಷಣೆ, ಬಲವಂತದ ಶ್ರಮ ಪದ್ಧತಿಗಳನ್ನು ನಿರ್ಮೂಲನೆ ಮಾಡುವುದು, ಸ್ಥಳೀಯ ಆರ್ಥಿಕ ಸಂಸ್ಥೆಗಳ ಬಲವರ್ಧನೆಗೆ ಒತ್ತು ಕೊಡುವುದು.

**9. ಅಗತ್ಯ ಮೂಲಭೂತ ಸೌಕರ್ಯಗಳ ನಿರ್ಮಾಣ :** ಒಳಗೊಳ್ಳಬಲ್ಲ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿಯನ್ನು ಪ್ರೋತ್ರಾಹಿಸುವುದು ವಿನೂತನ ಪದ್ಧತಿಗಳ ಅಳವಡಿಕೆಗೆ ಪ್ರಾಶಸ್ತ್ಯ ನೀಡುವುದು. ಪರಿಸರ ಸ್ನೇಹಿ ತಾಂತ್ರಿಕತೆಯ ಅಳವಡಿಕೆ, ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನೆಗೆ ಪ್ರೋತ್ಸಾಹಿಸುವುದು.

**10. ರಾಷ್ಟ್ರದ ಒಳಗೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಸಮಾನತೆ ಹೋಗಲಾಡಿಸುವುದು :** ತಳಮಟ್ಟದ ಸಮುದಾಯದ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸುವುದು, ಸಾಮಾಜಿಕ, ಆರ್ಥಿಕ, ರಾಜಕೀಯ ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು. ಕಾಯ್ದೆ, ಕಾನೂನು ನೀತಿಗಳಲ್ಲಿ ತಾರತಮ್ಯಗಳನ್ನು ನಿವಾರಣೆ ಮಾಡುವುದು, ಆರ್ಥಿಕ, ಸಾಮಾಜಿಕ ರಕ್ಷಣೆ ಒದಗಿಸುವುದು ಮತ್ತು ಸಮಾನತೆ ಸಾಧಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು. ವಿಶ್ವದ ಆರ್ಥಿಕ ಮಾರುಕಟ್ಟೆಗಳ ನಿಯಂತ್ರಣ, ಜನಗಳ ವಲಸೆಗಳು ಕ್ರಮಬದ್ದತೆ, ರಕ್ಷಣೆ ಮತ್ತು ಜವಾಬ್ದಾರಿಯುತ ಕ್ರಮಗಳ ಆಗತ್ಯತೆ, ವಿದೇಶಿ ಬಂಡವಾಳ ಹೂಡಿಕೆಗಳ ಬಗ್ಗೆ ಎಚ್ಚರಿಕೆ ಕ್ರಮಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಅಗತ್ಯತೆಗಳ ಪೂರೈಕೆಗೆ ಹೆಚ್ಚಿನ ಪ್ರಾಶಸ್ತ್ಯ.

**11. ನಗರ ಮತ್ತು ಮಾನವರ ನೆಲೆಗಳನ್ನು ಒಳಗೊಂಡಂತ ರಕ್ಷಣೆ ಉಳ್ಳ ಅನುಕೂಲಕರ ಸುಸ್ಥಿರ ಪ್ರದೇಶಗಳನ್ನಾಗಿ ನಿರ್ಮಾಣ ಮಾಡುವುದು :** ಎಲ್ಲರಿಗೂ ಸಾಕಷ್ಟು ಮತ್ತು ರಕ್ಷಣಾ ವ್ಯವಸ್ಥೆ ಉಳ್ಳ, ಸೌಕರ್ಯವುಳ್ಳ, ಕೈಗೆ ಎಟುಕುವ ದರಗಳಲ್ಲಿ ವಸತಿ ಸೌಕರ್ಯ, ಪ್ರಯಾಣ ಸೌಕರ್ಯಗಳು, ಕಸ ನಿರ್ವಹಣೆ, ಆರೋಗ್ಯಕರ ಪರಿಸರ ಸಾಂಕ್ರಾಮಿಕ ರೋಗಗಳ ತಡೆಯುವಿಕೆ, ಪಾರಂಪರಿಕ ಸ್ಥಳಗಳನ್ನು ಸಂಸ್ಕೃತಿಯನ್ನು ಕಾಪಾಡುವುದು. ನಗರ, ನಗರ ಪೂರ್ವ ಮತ್ತು ಗ್ರಾಮೀಣ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಕೊಂಡಿಗಳನ್ನು ಉಳಿಸಿಕೊಳ್ಳಲು ಬೆಂಬಲ ನೀಡುವುದು. ಅಭಿವೃದ್ಧಿ ಶೀಲ ಮತ್ತು ಕಡಿಮೆ ಅಭಿವೃದ್ಧಿಗೊಂಡಿರುವ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡುವುದು.

**12. ಸುಸ್ಥಿರ ಬಳಕೆ ಮತ್ತು ಉತ್ಪಾದನೆಯನ್ನು ಖಾತ್ರಿ ಪಡಿಸಿಕೊಳ್ಳುವುದು :** ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಅಂತರ ಕಡಿತಗೊಳಿಸಲು ಒಂದು ಹತ್ತು ವರ್ಷಗಳ ಯೋಜನೆಯನ್ನು ಹಾಕಿಕೊಳ್ಳುವುದು, ಪ್ರಕೃತಿ ಸಂಪನ್ಮೂಲಗಳ ನ್ಯಾಯಯುತ ಬಳಕೆ, ವಿಶ್ವಾದ್ಯಂತ ಆಹಾರ ನಷ್ಟದ ತಡೆಗಟ್ಟುವಿಕೆಗೆ ಕ್ರಮಗಳು ಕಸ ಪುನರ್ ಬಳಕೆ ವಿಧಾನಗಳಿಗೆ ಪ್ರಾಶಸ್ತ್ಯ. ಸಾರ್ವಜನಿಕ ಖರೀದಿ, ಶೇಖರಣೆ ವಿಧಾನ, ನೀತಿಗಳಲ್ಲಿ ಸುಸ್ಥಿರತೆ ತರುವುದು.

**13. ವಿಶ್ವದ ವಾತಾವರಣ ಬದಲಾವಣೆಯಾಗುತ್ತಿರವ ಕ್ರಿಯೆಗಳ ಬಗ್ಗೆ ತಕ್ಷಣ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು :** ವಾತಾವರಣದಲ್ಲಿ ಆಗುತ್ತಿರುವ ಬದಲಾವಣೆಗಳು ಹಸಿರು ಮನೆ ವಾತಾವರಣ ಪರಣಾಮಗಳಿಗೆ ಹೊಂದಿಕೊಳ್ಳುವಿಕೆ ಬದಲಾವಣೆಗೆ ಹೊಂದಿಕೊಳ್ಳುವಂತೆ, ಬದಲಾವಣೆ ತಡೆಗಟ್ಟಲು ಅಗತ್ಯ ರಾಷ್ಟ್ರೀಯ ನೀತಿಯೋಜನೆ ಮತ್ತು ತಂತ್ರಗಾರಿಕೆಗಳನ್ನು ಅಳವಡಿಸಿಕೊಳ್ಳುವುದು. ಇವುಗಳನ್ನು ಶಿಕ್ಷಣ ಪದ್ಧತಿಗಳಲ್ಲಿ ಅಳವಡಿಸುವುದು ಮತ್ತು ಜಾಗೃತಿ ಮೂಡಿಸುವುದು. ಇದರ ಬಗ್ಗೆ ಬದ್ಧತೆಗಳನ್ನು ಅನುಷ್ಠಾನಗೊಳಿಸುವುದು, ಮಹಿಳೆ ಮತ್ತು ಯುವಕರನ್ನು ಹೆಚ್ಚು ಈ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸುವುದು.

**14. ಸಾಗರ, ಸಮುದ್ರದ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು :** ಸಮುದ್ರ ಮಾಲಿನ್ಯ ತಡೆಗಟ್ಟುವಿಕೆ ಕ್ರಮಗಳು, ಕಡಲತೀರ ಮತ್ತು ಸಮುದ್ರ ಪರಿಸರಗಳನ್ನು ಸಂರಕ್ಷಿಸುವುದು. ಮೀನುಗಾರಿಕೆ, ಆಳ ಸಮುದ್ರ ಮೀನುಗಾರಿಕೆಯಲ್ಲಿ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು. ಸಂಪನ್ಮೂಲ ಸಂರಕ್ಷಣೆಗೋಸ್ಕರ ಮಳೆಗಾಲದ ಋತು ಮತ್ತು ಕೆಲವು ರೀತಿಯ ಮೀನುಗಾರಿಕೆ ಮೇಲೆ ನಿಷೇದ ಹೇರುವುದು. ಸಣ್ಣ ಪ್ರಮಾಣದ ಪಾರಂಪರಿಕ ಮೀನುಗಾರಿಕೆ ಪ್ರೋತ್ಸಾಹಿಸುವುದು.

**15. ಭೂ ಮೇಲೆಯ ಪರಿಸರ ವ್ಯವಸ್ಥೆಗಳ ಸಂರಕ್ಷಣೆ ಪುನರ್ ಅಭಿವೃದ್ಧಿ, ಸುಸ್ಥಿರ ಉಪಯೋಗ ಅಭಿವೃದ್ಧಿಯನ್ನು ಬೆಂಬಲಿಸುವುದು :** ಅರಣ್ಯಗಳ ವಿನಾಶ ತಡೆಗಟ್ಟುವುದು, ಅರಣ್ಯಗಳ ಸಮಗ್ರ ಜೈವಿಕ ವೈವಿಧ್ಯ ಕಾಪಾಡುವುದು, ಭೂ ಹದಗೆಟ್ಟಿರುವುದನ್ನು ಸರಿಪಡಿಸಲು ಅಗತ್ಯಕ್ರಮಗಳು. ಭೂಮಿಯ ಸಿಹಿನೀರಿನ ಪರಿಸರ ವ್ಯವಸ್ಥೆ, ಅರಣ್ಯಗಳು ಗಿರಿಗಳು, ಪರ್ವತಗಳು, ಹಸಿಭೂಮಿಯ ಸಂರಕ್ಷಣೆ. ಅರಣ್ಯನಾಶ, ಅರಣ್ಯ ಅತಿಬಳಕೆ ಕಡಿತಗೊಳಿಸುವುದು, ಮಣ್ಣು ಮತ್ತು ಭೂಮಿಯ ಸವಕಳಿ ತಡೆಗಟ್ಟುವಿಕೆ, ಮಣ್ಣಿನ ಫಲವಂತಿಕೆ ರಕ್ಷಣೆ ಮತ್ತು ಪುನರ್‌ವರ್ಧೀಕರಣ. ಅರಣ್ಯ ಪಶು ಸಂಪತ್ತು ರಕ್ಷಣೆ, ಪ್ರಾಣಿಗಳ ವಧೆ ನಿಯಂತ್ರಣ, ಉತ್ಪನ್ನಗಳ ಕಳ್ಳತನ ತಡೆಗಟ್ಟುವಿಕೆ, ರಾಷ್ಟ್ರದ ಒಳಗಿನ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ನಿಯಂತ್ರಣ, ಕಳೆಗಳ ನಾಶ, ಅಲ್ಲಿನ ನಿವಾಸಿಗರ ಹಕ್ಕುಗಳ ರಕ್ಷಣೆ, ಬಡತನ ನಿರ್ಮೂಲನ ಕಾರ್ಯಕ್ರಮಗಳ ಮೂಲಕ ಸಸ್ಯ ಮತ್ತು ಪ್ರಾಣಿ ಸಂಪನ್ಮೂಲಗಳನ್ನು ರಕ್ಷಿಸಿ ಜೈವ ವೈವಿಧ್ಯತೆಯನ್ನು ರಕ್ಷಿಸುವುದು.

**16. ಶಾಂತಿ ಮತ್ತು ಸೌಹಾರ್ದಯುತವಾಗಿ ಎಲ್ಲರನ್ನೂ ಒಳಗೊಂಡಂತ ಸಮಾಜ ನಿರ್ಮಾಣ, ಸುಸ್ಥಿರ ಅಭಿವೃದ್ಧಿ ಯೊಂದಿಗೆ ನ್ಯಾಯ ಒದಗಿಸುವ ಹೊಣೆಗಾರಿಕೆ ಉಳ್ಳ ಸಂಸ್ಥೆಗಳನ್ನು ಎಲ್ಲ ಹಂತಗಳಲ್ಲೂ ನಿರ್ಮಾಣ ಮಾಡುವುದು :**

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು, ಎಂಬ ಧ್ಯೇಯ ವಾಕ್ಯದಂತೆ ಬದ್ಧತೆಯಿಂದ ನಡೆದುಕೊಳ್ಳುವುದು. ಸಾವು, ಕೊನೆಗೊಳಿಸುವುದು. ಮಕ್ಕಳ, ಹಿಂಸೆಗಳನ್ನು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಅಂತಿಮಗೊಳಿಸುವುದು, ಲಂಚಗುಳಿತನ, ಭ್ರಷ್ಟಚಾರ ನಿರ್ಮೂಲನೆ, ಇವುಗಳನ್ನು ಜಾರಿಗೆ ತರಲು ಸಂಸ್ಥೆಗಳನ್ನು ಕಟ್ಟುವುದು, ಸಂಸ್ಥೆಗಳಲ್ಲಿ ಪರಿಣಾಮಕಾರಿ, ಪಾರದರ್ಶಕ ಹೊಣೆಗಾರಿಕೆವುಳ್ಳಂತ ಆಡಳಿತ ವ್ಯವಸ್ಥೆ ಇರತಕ್ಕದ್ದು. ಮಾಹಿತಿಗಳು ಎಲ್ಲರಿಗೂ ಲಭ್ಯವಾಗುವಂತೆ ಎಲ್ಲರನ್ನೂ ಒಳಗೊಂಡಂತ ಆಡಳಿತ ವ್ಯವಸ್ಥೆಯ ನಿರ್ಮಾಣ. ಲಿಂಗಭೇದ, ವರ್ಗಭೇದವಿಲ್ಲದ ಸಮಾಜ ನಿರ್ಮಾಣದ ಅಗತ್ಯ ನಿಯಂತ್ರಣ ವ್ಯವಸ್ಥೆಗಳನ್ನು ಕಲ್ಪಿಸುವುದು, ಸಂಬಂಧಿಸಿದ ಸಂಸ್ಥೆಗಳ ಬಲವರ್ಧನೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**17. ಭೂಮಿಯ ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವದ ಪಾಲುಗಾರಿಕೆ ಯನ್ನು ಪುನಶ್ಚೇತನಗೊಳಿಸುವುದು ಮತ್ತು ಅನುಷ್ಠಾನ ವಿಧಾನಗಳನ್ನು ಸಶಕ್ತಗೊಳಿಸುವುದು:** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯವಾಗಿ ಸಂಪನ್ಮೂಲಗಳ ಸಂಗ್ರಹಣೆ, ಸದ್ಬಳಕೆ. ಅಧಿಕ ಸಂಪನ್ಮೂಲಗಳ ಸಂಗ್ರಹಣೆಗೆ ಒಪ್ಪಿಕೊಂಡಿರುವ ವಿಷಯಗಳ ಪಾಲನೆಯಲ್ಲಿ ಬದ್ಧತೆ, ಈ ವಿಷಯಗಳಲ್ಲಿ ಆಧುನಿಕ ಮಾಹಿತಿ ತಂತ್ರಜ್ಞಾನಗಳ ಸದುಪಯೋಗ ಪಡೆಯುವುದು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಶಿಷ್ಯ ನೀತಿಗಳನ್ನು ಆಳವಡಿಸಿಕೊಳ್ಳುವುದು. ಮೇಲಿನ ಹದಿನೇಳು ಗುರಿಗಳನ್ನು ಸಾಧಿಸಲು ಯಾವ ರೀತಿ ಕಾರ್ಯಕ್ರಮಗಳನ್ನು ಸಹಕಾರಿಗಳಾಗಿ ನಾವು ನಮ್ಮ ಸಹಕಾರಿ ಸಂಘಗಳಲ್ಲಿ ಅಳವಡಿಸಿಕೊಂಡು ರಾಷ್ಟ್ರ ಮತ್ತು ವಿಶ್ವದ ಸುಸ್ಥಿರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬಹುದು ಎಂಬದರ ಬಗ್ಗೆ ವಿಮರ್ಶಿಸಲು ಇದು ಸಕಾಲ,

****************************************************************************************************

# 33. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ – ಭೇಟಿ, ಅನುಭವ

ಬೆಲ್ಜಿಯಂ ದೇಶದ ರಾಜಧಾನಿ ಬ್ರುಸೆಲ್ಸ್. ರಾಷ್ಟ್ರದ ರಾಜಧಾನಿ ಜೊತೆಗೆ ಯೂರೋಪ್ ಒಕ್ಕೂಟದ ಕೇಂದ್ರ ಸ್ಥಾನ. ಈ ನಗರದಲ್ಲಿ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ತನ್ನ ಕೇಂದ್ರ ಸ್ಥಾನ ಹೊಂದಿದೆ. ಕುಟುಂಬದೊಡನೆ ಬ್ರುಸೆಲ್ಸ್‌ಗೆ ಪ್ರವಾಸದ ಅವಕಾಶ ದೊರೆತಾಗ ಹೊಳೆದದ್ದು ಐಸಿಎ (International Co-operative Alliance) ಗೆ ಬೇಟಿ ನೀಡುವ ಅವಕಾಶ.

ಬ್ರುಸೆಲ್ಸ್ ಜೆನ್ನೆ ನದಿ ದಂಡೆಯ ಮೇಲೆ ಕ್ರಿ.ಶ. 580ರಲ್ಲಿ ನಿರ್ಮಾಣ ಆಗಿ 17ನೇ ಶತಮಾನದಲ್ಲಿ ಫ್ರೆಂಚರ ಆಡಳಿತಕ್ಕೆ ಒಳಪಟ್ಟು ಬೆಲ್ಜಿಯಂ ದೇಶದ ರಾಜಧಾನಿಯಾಗಿ ರೂಪುಗೊಂಡಿತು. ಬೆಲ್ಜಿಯಂ ರಾಷ್ಟ್ರವು ಫ್ರೆಂಚರಿಂದ ಜುಲೈ 21, 1831 ರಂದು ಸ್ವಾತಂತ್ರ್ಯ ಪಡೆಯಿತು. ಫ್ರೆಂಚ್ ಭಾಷೆ ಇಲ್ಲಿಯ ಅಧಿಕೃತ ಭಾಷೆಯಾಗಿ ಬಳಕೆಯಾಗುತ್ತಿದೆ. ಬ್ರುಸೆಲ್ಸ್ ಒಂದು ಸುಂದರ ಪಟ್ಟಣ. 18 ಮತ್ತು 19ನೇ ಶತಮಾನದ ವೈಭೋಯುತ ಕಟ್ಟಡಗಳು ಮೆರಗನ್ನು ನೀಡಿದೆ. ಅವಿನ್ಯೂ ಮಿಲ್‌ಕ್ಯಾಂಪ್ಸ್ 105ರಲ್ಲಿ ಐ.ಸಿ.ಎ.ಯ ಕಛೇರಿ ಇದೆ. ಶ್ರೀ ಪಿ ಸಂತೋಷ್‌ಕುಮಾರ್ (ಕಾಯ್ದೆ ವಿಷಯಗಳ ಸಮನ್ವಯ ಅಧಿಕಾರಿಗಳು) ಇವರೊಡನೆ ಪೂರ್ವ ನಿಗಧಿಯಂತೆ ಚರ್ಚಿಸಲು ಅವಕಾಶವಾಯಿತು. ಐ.ಸಿ.ಎ. ಕಾರ್ಯಾಚರಣೆ, ಯೂರೋಪ್ ಮತ್ತು ವಿಶ್ವದ ಸಹಕಾರ ಆಂದೋಲನದ ಚಿತ್ರಣದ ಬಗ್ಗೆ ಅವರೊಡನೆ ಚರ್ಚಿಸಲು ಸಾಧ್ಯವಾಗಿದ್ದು, ಒಂದು ಅಪರೂಪದ ಅನುಭವ.

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು 313 ವಿಶ್ವದ ವಿವಿಧ ಸಹಕಾರ ಸಂಸ್ಥೆಗಳ 110 ರಾಷ್ಟ್ರಗಳ ಸದಸ್ಯತ್ವವನ್ನು ಹೊಂದಿದೆ. ವಿಶ್ವದ ಸಹಕಾರ ಚಳುವಳಿಯ ಒಕ್ಕೂಟವಾಗಿ ರೂಪುಗೊಂಡಿದೆ. ವಿಶ್ವದ ಸಹಕಾರ ಸಂಸ್ಥೆಗಳನ್ನು ಒಗ್ಗೂಡಿಸಲು, ಪ್ರತಿನಿಧಿಸಲು ಮತ್ತು ಸೇವೆ ಸಲ್ಲಿಸಲು ಇಂಗ್ಲೇಂಡ್‌ನ ಲಂಡನ್ ನಲ್ಲಿ 19ನೇ ಆಗಸ್ಟ್ 1895 ರಂದು

ಆರಂಭಿಸಲಾಯಿತು. ಸಹಕಾರದ ಕುರಿತು ವಿಶ್ವಮಟ್ಟದಲ್ಲಿ ಧ್ವನಿಯಾಗಿ, ಸಹಕಾರ ಜ್ಞಾನದ ಪರಿಣಿತಿಯ ಪೀಠವಾಗಿ, ಸಹಕಾರದ ಪರ ಮತ್ತು ಅದರ ಬಗ್ಗೆ ಸಂಘಟನಾ ಕ್ರಿಯೆಯ ಜವಾಬ್ದಾರಿಯನ್ನು ಹೊತ್ತಿದೆ. ಭಾರತದ ರಾಷ್ಟ್ರೀಯ ಸಹಕಾರ ಒಕ್ಕೂಟ ಪ್ರಾಥಮಿಕ ಸದಸ್ಯತ್ವವನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ, ಇಫ್ಕೋ ಸಹ ಸದಸ್ಯತ್ವವನ್ನು ಹೊಂದಿದೆ. ಸಂಸ್ಥೆಯ ತನ್ನ ಸಾಮಾನ್ಯ ಸಭೆಯಲ್ಲಿ ರಾಷ್ಟ್ರ ಸಂಸ್ಥೆಗಳು (ಉದಾ:– ಎನ್.ಸಿ.ಯು.ಐ) ಪ್ರಾಥಮಿಕ ಸದಸ್ಯ, ಸಹಕಾರ ಸಂಸ್ಥೆಗಳನ್ನೂ ಸಹ ಸದಸ್ಯರಾಗಿ, ಇತರೆ ಸಹಾನುಭೂತಿ ತೋರುವ ಸಂಸ್ಥೆಗಳ ಒಗ್ಗಟ್ಟಿನ ಸದಸ್ಯ (Members solidarity) ಎಂದು ಸದಸ್ಯತ್ವ ನೀಡಲಾಗುವುದು. ಸದಸ್ಯತ್ವದ ಹಣ ಕಾರ್ಯಕ್ರಮಗಳಿಗೆ ವಿಶ್ವಮಟ್ಟದ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳು ಒದಗಿಸುವ ಹಣಕಾಸಿನ ನೆರವಿನಿಂದ ತನ್ನ ಕಾರ್ಯಕ್ರಮಗಳನ್ನು ನಡೆಸುತ್ತದೆ. ತನ್ನಚಟುವಟಿಕೆ ನಡೆಸಲು 20 ಸದಸ್ಯರ ಆಡಳಿತ ಮಂಡಳಿ (Governing Board) ಹೊಂದಿದೆ. ಪ್ರಸ್ತುತ ಅರ್ಜೆಂಟೈನಾ ರಾಷ್ಟ್ರದ ಡಾ॥ ಅರಿಲ್ ಗೊರ್‌ಕೋರವರು ಅಧ್ಯಕ್ಷರಾಗಿದ್ದಾರೆ.

**ಸಂಸ್ಥೆಯು ನಾಲ್ಕು ವಲಯಗಳ ಸಾಮಾನ್ಯ (ಅಸೆಂಬ್ಲಿ ಛಿಜಟಛಟಥಿ) ಸಭೆಗಳನ್ನು ಹೊಂದಿರುತ್ತದೆ.**

1. ಆಫ್ರಿಕ
2. ಯೂರೋಪ್
3. ಏಷಿಯಾ ಪೆಸಿಫಿಕ್
4. ಅಮೇರಿಕ

ಏಷಿಯಾ ಪೆಸಿಫಿಕ್ ಅಸೆಂಬ್ಲಿ ಸಭೆ 1960 ಆರಂಭಗೊಂಡಿದ್ದು, ಅತೀ ದೊಡ್ಡ ಅಸೆಂಬ್ಲಿಯಾಗಿದ್ದು, 70 ರಾಷ್ಟ್ರಗಳ ಪ್ರತಿನಿಧಿಸುವ ಸಂಸ್ಥೆಗಳನ್ನು ಹೊಂದಿರುತ್ತದೆ. ಸ್ವೀಡನ್‌ನ ಸಹಕಾರ ಸಂಸ್ಥೆಗಳ ಸಹಕಾರದಿಂದ ಸ್ಥಾಪಿಸಲಾಗಿದ್ದು, ಪ್ರಾದೇಶಿಕ ಸಹಕಾರ ವಿದ್ಯಾ ಕೇಂದ್ರವನ್ನು ಸ್ಥಾಪಿಸಿದೆ. ಪ್ರಾದೇಶಿಕ ನಿರ್ದೇಶಕರು ಈ ಅಸೆಂಬ್ಲಿಯ ಮುಖ್ಯಸ್ಥರಾಗಿರುತ್ತಾರೆ. ದೆಹಲಿಯು ಕೇಂದ್ರ ಸ್ಥಾನವಾಗಿದ್ದು, ಪ್ರಸ್ತುತ ಡಾ॥ ಬಾಲಸುಬ್ರಮಣ್ಯ ಐಯ್ಯರ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸಹಕಾರವು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದ್ದು, ವ್ಯಕ್ತಿಗತ ಹೂಡಿಕೆಗೆ ಪ್ರಾಧಾನ್ಯತೆ ನೀಡದೆ ಸಮೂಹ ಹೂಡಿಕೆಗೆ ಪ್ರಾಧಾನ್ಯತೆ ನೀಡುವ ಮೂಲಕ ಈ ವ್ಯವಸ್ಥೆಯು ತನ್ನ ಅಸ್ಮಿತೆ/ಅನನ್ಯತೆ (Identity) ಯನ್ನು ಸಾರಲು ಜಗತ್ತಿನಲ್ಲಿ ಆಗುತ್ತಿರುವ ಆರ್ಥಿಕ, ಸಾಮಾಜಿಕ ಪಲ್ಲಟದಿಂದ ಆಗುತ್ತಿರುವ ಅಸಮಾನತೆ ಮತ್ತು ಅದರ ಪರಿಣಾಮಗಳ ತಡೆಗಟ್ಟುವಿಕೆಗೆ ಸಹಕಾರ ಒಂದು ಮಾದರಿ ವ್ಯವಸ್ಥೆಯಾಗಿ ರೂಪುಗೊಳ್ಳವ ಅವಶ್ಯಕತೆ ಇದೆ.

**ಈ ಗುರಿಯನ್ನು ಸಾಧಿಸಲು 8 ವಿಭಾಗವಾರು ಅಂಗ ಸಂಸ್ಥೆಗಳನ್ನು ಸ್ಥಾಪಿಸಿರುತ್ತದೆ.**

1. ICAO International Co-operative Agricultural Organization.
   ಅಂತರರಾಷ್ಟ್ರೀಯ ಸಹಕಾರ ಕೃಷಿ ಸಂಸ್ಥೆ
2. CCW Consumer Co-operative World Wide
   ವಿಶ್ವಸಹಕಾರಿಗ್ರಾಹಕ ಸಂಸ್ಥೆ
3. ICFO International Co-operative Fisheries Organization
   ಅಂತರರಾಷ್ಟ್ರೀಯ ಸಹಕಾರಿ ಮೀನುಗಾರರ ಸಂಸ್ಥೆ

4. IHCO International Health Co-operative Organization
   ಅಂತರರಾಷ್ಟ್ರೀಯಆರೋಗ್ಯ ಸಹಕಾರ ಸಂಸ್ಥೆ
5. ICA housing International Co-operative Housing Organization
   ಅಂತರರಾಷ್ಟ್ರೀಯ ಸಹಕಾರ ವಸತಿ ಸಂಸ್ಥೆ
6. ICMIF International Co-operative and Mutual Insurance Federation
   ಅಂತರರಾಷ್ಟ್ರೀಯ ಸಹಕಾರ ವಿಮಾ ಮಹಾಮಂಡಲ
7. ICBA International Co-operative Banking Association
   ಅಂತರರಾಷ್ಟ್ರೀಯ ಸಹಕಾರ ಬ್ಯಾಂಕಿಂಗ್ ಸಂಘ
8. CICOPA: International Organization of Industrial Artisanal and service producers Co-operatives
   ಅಂತರರಾಷ್ಟ್ರೀಯ ಗುಡಿ ಕೈಗಾರಿಕೆ ಮತ್ತು ಸೇವಾ ಉತ್ಪನ್ನ ಸಹಕಾರಿಗಳ ಸಂಸ್ಥೆ

ಈ ಸಂಸ್ಥೆಗಳು ಮೈತ್ರಿ ಸಂಸ್ಥೆಯ ಸದಸ್ಯ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಒದಗಿಸುವುದು. ಸಮೀಕ್ಷೆ ನಡೆಸುವುದು, ಸಂಶೋಧನೆ ನಡೆಸಿ ಸಹಕಾರಆಂದೋಲನಕ್ಕೆ ಇಂಬುಗೊಡುವುದು ಮತ್ತು ಅಭಿವೃದ್ಧಿಗೆ ಶ್ರಮಿಸುತ್ತವೆ.

ಸಹಕಾರದ ವಿವಿಧ ವಿಷಯ ವಸ್ತುಗಳ ಬಗ್ಗೆ ಅರಿಯಲು (Thematic Committee) ಸಮಿತಿಗಳನ್ನು ರಚಿಸಲಾಗಿರುತ್ತದೆ.

(Committee on Co-operative research) ಸಹಕಾರದ ಸಂಶೋಧನಾ ಸಮಿತಿ

(Communications Committee) ಸಂಹವಾನ ಸಮಿತಿ

(Human resource Development Committee) ಮಾನವ ಸಂಪನ್ಮೂಲ ಸಮಿತಿ

(Gender Equality Committee) ಲಿಂಗ ಸಮಾನತೆ ಸಮಿತಿ

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು 1923ರಿಂದ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸುತ್ತಾ ಬಂದಿದೆ. 1995ರಿಂದ ವಿಶ್ವ ಸಂಸ್ಥೆಯ ಸಹಯೋಗದೊಂದಿಗೆ ಆ ವರ್ಷದ ವಸ್ತು ವಿಷಯ ವನ್ನು ನಿರ್ಧರಿಸಲಾಗುತ್ತಿದೆ. ಐ.ಸಿ.ಎ. ಸ್ಥಾಪನಾ ಸದಸ್ಯನಾಗಿ ಸಹಕಾರ ಪ್ರೋತ್ಸಾಹ ಮತ್ತು ಅಭಿವೃದ್ಧಿ ಸಮಿತಿ ಯನ್ನು ರಚಿಸಲಾಗಿರುತ್ತದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿ ಸಾದಿಸಲು (sustainable developmental Goal SDG) ಹೊಂದಿರುವ ವಸ್ತು ವಿಷಯವಾದ ಒಳಗೊಂಡ ಅಭಿವೃದ್ಧಿ ಮತ್ತು ಸಭ್ಯತೆಯ ಕಲಸ (Inclusivedevelopment and Decent work) ಅಂಗವಾಗಿ 2019ರ 6ನೇ ಜುಲೈರಂದು (Co-operative Decent Work) ಸಭ್ಯತೆಯ ಕೆಲಸಕ್ಕಾಗಿ ಸಹಕಾರ ಎಂಬ (ಘೋಷ ವಾಕ್ಯ) ವಸ್ತು ವಿಷಯವಾಗಿ ನಿರ್ಧರಿಸಲಾಗಿದೆ. ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಜನ ಕೇಂದ್ರೀಕೃತ ಔದ್ಯೋಗಿಕ ಸಂಸ್ಥೆಗಳು ಕೆಲಸ ಮಾಡುವ ಸ್ಥಳದಲ್ಲಿ ಮಾನವ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೆಚ್ಚು ಒತ್ತನ್ನು ನೀಡುವುದಾಗಿದೆ. ಇದು ವಿಶ್ವ ಸಂಸ್ಥೆಯ 25ನೇ ಅಂತರರಾಷ್ಟ್ರೀಯ

ಸಹಕಾರ ದಿನ ಮತ್ತು 96ನೇ ಅಂತರರಾಷ್ಟ್ರೀಯ ಸಹಕಾರ ದಿನವಾಗಿರುತ್ತದೆ.

ಈ ದಿಸೆಯಲ್ಲಿ ಸಹಕಾರಿಗಳು ಆಲೋಚಿಸಿ ಸಹಕಾರ ಸಂಸ್ಥೆಗಳಲ್ಲಿ ಅನುಷ್ಠಾನಕ್ಕೆ ತರುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. (11ನೇ ಜೂನ್ 2019 ಮಂಗಳವಾರ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಗೆ ಭೇಟಿ ನೀಡಿದ ಫಲವಾಗಿ ಈ ಲೇಖನ ಮೂಡಿಬಂದಿದೆ. ಇದನ್ನು ಸಾಧ್ಯವಾಗಿಸಿದ ನಮ್ಮ ಪುತ್ರ ವಿಶ್ವಾಸ್ ಎಲೆ ಮತ್ತು ಅವನ ಶ್ರೀಮತಿ ಮಾಧುರಿಯನ್ನು ನೆನಪಿಸುತ್ತೇನೆ.)

**ಲೇಖನಕ್ಕೆ ಸಂಬಂಧಿಸಿದಂತೆ ಛಾಯಾ ಚಿತ್ರಗಳು**

**ಶ್ರೀಯುತ ಸಂತೋಷ್ ಕುಮಾರ್ ಪಿ ಕಾಯ್ದೆ ವಿಷಯಗಳ ಸಮನ್ವಯ ಅಧಿಕಾರಿಗಳೊಂದಿಗೆ**




**ಐ.ಸಿ.ಎ ನಲ್ಲಿ ಒದಗಿಸಿದ ಸಹಕಾರಿ ವಿಷಯದ ಪುಸ್ತಕಗಳು**

*******************************************************************************************************

# ಭಾಗ : 03

## 34. ಸಹಕಾರ ಸಂಘ ಲಾಭಗಳಿಸಲೇಬೇಕೆ? ಏಕೆ? ಹೇಗೆ

ಸಹಕಾರ ಸಂಘ ಲಾಭಗಳಿಸಲೇ ಬೇಕೆ? ಎಂಬ ಪ್ರಶ್ನೆ ಪ್ರತಿಯೊಬ್ಬ ಸಹಕಾರಿಯಲ್ಲಿಯೂ ಮೂಡುವುದು ಸಹಜ. ಏಕೆಂದರೆ ಸಹಕಾರಿ ಸಂಘಗಳು ಆರಂಭಗೊಂಡಿರುವುದು ಐತಿಹಾಸಿಕವಾಗಿ ಸೇವಾ ಮನೋಭಾವದಿಂದ ಸೇವೆಯೇ ನಮ್ಮ ಮೂಲ ಧ್ಯೆಯ ಲಾಭವಲ್ಲ, ಎಂಬ ಚಿಂತನೆ ಸಹಕಾರಿಗಳಲ್ಲಿ ಮನೆ ಮಾಡಿದ್ದುದು ಆಸಹಜವೇನಲ್ಲ, ಏಕೆಂದರೆ ಸಹಕಾರ ಸಂಘಗಳ ಅವಶ್ಯಕತೆ, ಸಹಕಾರ ಚಳುವಳಿ ಮೂಡಿಬಂದಿದ್ದೇ ಮಧ್ಯಮ ಮತ್ತು ಕೆಳವರ್ಗದ ಆರ್ಥಿಕ ಸ್ವರಗಳಿಂದ. ಹೀಗಿರುವಾಗ ಸಹಕಾರಿಗಳು ಆಲೋಚಿಸಬೇಕಾದ ವಸ್ತು ಲಾಭಗಳಿಸದೇ ಸೇವೆ ಸಲ್ಲಿಸಲು ಸಾಧ್ಯವೇ? ಇದಕ್ಕೆ ಉತ್ತರ ಇಲ್ಲ ಎಂದೇ ಹೇಳಬೇಕಾಗುತ್ತದೆ. ಕೇವಲ ಸೇವೆ ಎಂದಾದರೇ ಸಂಪನ್ಮೂಲಗಳು ಒದಗುವುದಾದರೂ ಎಲ್ಲಿಂದ? ನಷ್ಟ ಹೊಂದಿ ಬಂಡವಾಳವನ್ನು ಕರಗಿಸುತ್ತಾ ಹೋದಾದಲ್ಲಿ ಬಂಡವಾಳವಿಲ್ಲದ ಬಡಾಯಿ ಆಗುವುದಿಲ್ಲವೇ? ಹೂಡಿದ ಬಂಡವಾಳ ಹಿಂದಕ್ಕೆ ಬರಬೇಕು. ಬಂಡವಾಳದಿಂದ ಮಡಿಮೆಯಾಗಬೇಕು. ಬಂಡವಾಳಕ್ಕೆ ಬಂಡವಾಳ ಸೇರ್ಪಡೆಯಾಗಬೇಕು ಆಗಲೇ ಸಂಘವು ಸೇವೆಯನ್ನು ನಿರಂತರವಾಗಿ ನೀಡಲು ಸಾಧ್ಯ ಮತ್ತು ಇದನ್ನು ಸಾಧಿಸಲು ಲಾಭಗಳಿಸಲೇ ಬೇಕಲ್ಲವೇ?

ಸಹಕಾರ ಸಂಘದ ಉದ್ದೇಶ ಸದಸ್ಯರಿಗೆ ಸೇವೆ ಸಲ್ಲಿಸುವುದೇ ಆಗಿದೆ. ಈ ಸೇವೆ ಸಲ್ಲಿಸಲು ಸಂಘದ ವ್ಯವಹಾರದಲ್ಲಿ ಲಾಭ ಗಳಿಸಿದಾಗ ಮಾತ್ರ ಎಂಬ ಅರಿವು ನಮ್ಮಲ್ಲಿ ಇರಬೇಕಾಗುತ್ತದೆ. ನಮ್ಮ ಪ್ರಾಥಮಿಕವಾಗಿ ಒಂದು ವ್ಯಾವಹಾರಿಕ ಸಂಸ್ಥೆ ಔದ್ಯೋಗಿಕ ಸಂಸ್ಥೆ, ಒಬ್ಬರು ಮಾಡಲಾರದ್ದನ್ನು ನಾವೆಲ್ಲರೂ (ಸದಸ್ಯರು) ಒಟ್ಟುಗೂಡಿ ಮಾಡಹೊರಟಿದ್ದೇವೆ. ನಾವು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ. ಸಹಕಾರ ಮಾರ್ಗ ಎಂದಾಕ್ಷಣ ನಮ್ಮ ಸಂಸ್ಥೆಯೂ ವ್ಯವಹಾರಿಕ ಸಂಸ್ಥೆ ಎಂಬುದನ್ನು ಮರೆಯಲಾಗದು ಷೇರು ಬಂಡವಾಳದ ಮೇಲೆ ಡಿವಿಡೆಂಡ್ ಪಡೆಯಬೇಕು ಅಥವ ಗಳಿಸಬೇಕು. ಸಹಕಾರ ಸಂಘ ಅನೇಕ ವರ್ಷಗಳ ಕಾಲ ನಡೆಯಬೇಕು. ಪೀಳಿಗೆಯಿಂದ ಪೀಳಿಗೆಗೆ ತನ್ನ ನಿರಂತರ ಸೇವೆ ಒದಗಿಬರಬೇಕು ಎಂಬ ಆಶಯ ಸಾಧಿಸಬೇಕು. ಸ್ಥಿರ ಸ್ಯೆರಣೆ ಸಾಧಿಸಬೇಕು ಎಂದಾದಾಗ ಲಾಭಗಳಿಸಲೇಬೇಕು. ಸಂಘ ಲಾಭದಲ್ಲಿ ನಡೆಯುತ್ತದೆ ಎಂದಾದರೆ ಅದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತೋರಿಸುತ್ತದೆ. ಇದರಿಂದ ಸದಸ್ಯರಿಗೆ ಮತ್ತೂ ಹೆಚ್ಚಿನ ವಿಶ್ವಾಸ, ಒಲುವು ಮೂಡುತ್ತದೆ. ಸದಸ್ಯರಿಗೆ, ಸಿಬ್ಬಂದಿಗೆ ಆರ್ಥಿಕ ಮತ್ತು ಇತರೆ ಸಲಕರಣೆ, ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. ಸಂಘದ ಆರ್ಥಿಕ ಸೇವೆಯಲ್ಲದೆ ಸದಸ್ಯರ ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳ ಪೂರ್ರೈಕೆಗೂ ಅವಕಾಶವಾಗುತ್ತದೆ.

**ಲಾಭ ಮತ್ತು ಅದರ ಯೋಜನೆ :** ಲಾಭ ಎಂದರೆ ನಮ್ಮ ಆಧಾಯದಲ್ಲಿ ಖರ್ಚುಗಳನ್ನು ಕಳೆದರೆ ಅದೇ ಲಾಭ. ಅಂದರೆ ಲಾಭಯೋಜನೆ ಎಂದರೇನು? ಆದಾಯವನ್ನು ಹೆಚ್ಚಿಸುವುದು ಖರ್ಚುಗಳನ್ನು ಕಡಿಮೆಗೊಳಿಸುವುದು. ಅಷ್ಟೇ ಅಲ್ಲವೇ? ಎಷ್ಟು ಸರಳ ಆದರೆ ಅನುಷ್ಠಾನ ಜಾರಿಗೆ ತರುವ ಬಗೆ ಕ್ಲಿಷ್ಟಕರ ಎಚ್ಚರಿಕೆಯ ಯೋಜನೆ ಮತ್ತು ಜಾಣ ತಂತ್ರಗಾರಿಕೆಯಿಂದ ಮಾತ್ರ ಇದು ಸಾಧ್ಯ. ಲಾಭ ಆಕಸ್ಮಿಕ ಅಲ್ಲ ಎಂಬುದನ್ನು ಮರೆಯಬಾರದು ವ್ಯವಹಾರ ನಿಪುಣತೆ ವ್ಯವಸ್ಥಿತ ತಂತ್ರಗಾರಿಕೆ ಅಳವಡಿಕೆಯಿಂದ ಮಾತ್ರ ಲಾಭಗಳಿಸಲು ಸಾಧ್ಯ ಹೀಗಾದಲ್ಲಿ ನಾವು ಅಲೋಚಿಸಬೇಕಾಗಿರುವುದು. ನಮಗೆ ಆಧಾಯ ಎಲ್ಲಿಂದ ಬರುತ್ತದೆ? ಇದು ಆಯಾ ಸಹಕಾರ ಸಂಘಗಳು ನಡೆಸುತ್ತಿರುವ ವ್ಯವಹಾರಗಳನ್ನು ಅವಲಂಭಿಸಿರುತ್ತದೆ. ಪತ್ತಿನ ಸಹಕಾರ ಸಂಘಗಳಾದಲ್ಲಿ ಸಾಲಗಳಿಂದ ಗಳಿಸುವ ಬಡ್ಡಿ, ಹೂಡಿಕೆಗಳಿಂದ ಬರುವ ಬಡ್ಡಿ, ಡಿವಿಡೆಂಡ್. ನಿಧಿಯೇತರ ವ್ಯವಹಾರಗಳನ್ನು ನಡೆಸುತ್ತಿದ್ದಲ್ಲಿ ಅದರಿಂದ ಬರುತ್ತಿರುವ ಕಮಿಷನ್, ಅಂತರ ಇತರೆ. ಉತ್ಪಾದನಾ, ಸಂಸ್ಕರಣಾ ಮಾರಾಟ ಸಹಕಾರ ಸಂಘಗಳಾದರೆ ಮಾರಾಟದಿಂದ ಬರುವ ಆಧಾಯ, ಖರ್ಚು ಅಥವ ವೆಚ್ಚಗಳಾವುವು? ಪತ್ತಿನ ಸಹಕಾರ

ಸಂಘಗಳಲ್ಲಿ ಪ್ರಮುಖವಾಗಿ ಮತ್ತು ಇತರೆ ಸಂಘಗಳು ಎಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುತ್ತಿದೆಯೋ ಮತ್ತು/ಅಥವ ಬೇರೆ ಸಂಸ್ಥೆಗಳಿಂದ ಸಾಲ ಪಡೆಯಲಾಗುತ್ತಿದೆಯೋ ಅಲ್ಲಿ ಆರ್ಥಿಕ ವೆಚ್ಚಗಳು ಅನಿವಾರ್ಯ, ಠೇವಣಾತಿಗಳ ಮೇಲಿನ ಬಡ್ಡಿ, ಪಡೆದ ಸಾಲದ ಮೇಲಿನ ಬಡ್ಡಿ ಪಾವತಿಸುವುದು ಮತ್ತು ಪಾವತಿಸಬೇಕಾದುದಕ್ಕೆ ಲಾಭ– ನಷ್ಟ ಖಾತೆಯಲ್ಲಿ ಅವಕಾಶವನ್ನು ಕಲ್ಪಿಸುವುದು ಅವಶ್ಯ ಉತ್ಪಾದನಾ, ಸಂಸ್ಕರಣ ಮಾರಾಟ ಸಹಕಾರ ಸಂಘಗಳಲ್ಲಿ ವ್ಯಾಪಾರ ತಃಖ್ತೆಯನ್ನು ತಯಾರಿಸಬೇಕಾಗುತ್ತದೆ. ಉತ್ಪಾದನಾ ವೆಚ್ಚಗಳು, ಸಂಸ್ಕರಣಾ ವೆಚ್ಚಗಳು. ಖರೀದಿ ವೆಚ್ಚಗಳು, ಸಾಗಾಣಿಕಾ ವೆಚ್ಚಗಳು, ಸಂಗ್ರಹಣಾ ವೆಚ್ಚಗಳು, ವಿಮಾ ವೆಚ್ಚಗಳು ಹೀಗೆ ಹಲವು, ವೆಚ್ಚಗಳು ಅನಿವಾರ್ಯ, ಪತ್ತಿನ ಸಹಕಾರ ಸಂಘಗಳಲ್ಲಿ ಹೂಡಿಕೆ ಮತ್ತು ಸಾಲಗಳ ಮೇಲಿಂದ ಬಂದ ಬಡ್ಡಿ ಆಸ್ತಿಯ ಮೇಲಿನ ಗಳಿಕೆಯಾಗುತ್ತದೆ. ಇದರಲ್ಲಿ ಒಟ್ಟಾರೆ ನಿಧಿಗಳ ಮೇಲಿನ ವೆಚ್ಚ (ಠೇವಣಿಗಳ ಮೇಲಿನ ಬಡ್ಡಿ ಸಾಲದ ಮೇಲಿನ ಬಡ್ಡಿ) ಕಳೆದರೆ ನಮಗೆ ಉಳಿಯುವುದೇ ಅಂತರ ಅಥವ ಲಾಭ. ಉತ್ಪಾದನಾ ಸಂಸ್ಕರಣಾ ಮಾರಾಟ ಸಹಕಾರ ಸಂಘಗಳಲ್ಲಿ ಮಾರಾಟದಿಂದ ಬಂದ ಮೊತ್ತದಲ್ಲಿ ಉತ್ಪಾದನಾ, ಖರೀದಿ ವೆಚ್ಚ ಕಳೆದರೆ ಉಳಿಯುವುದೇ ಲಾಭವಾಗುತ್ತದೆ. ಈ ಆದಾಯ ಅಥವಾ ಅಂತರದಲ್ಲಿ ಸಂಘವು ವಹಿವಾಟಿನ ವೆಚ್ಚ ಅಥವ ವೇತನ, ಸೌಕರ್ಯ, ಸೌಲಭ್ಯಗಳು, ಶಾಸನಬದ್ದ ಪಾವತಿಗಳು, ಇತರೆ ವ್ಯವಹಾರಿಕ ವೆಚ್ಚಗಳು, ಸಭೆ ಖರ್ಚುಗಳು, ಸ್ಟೇಷನರಿ, ಪ್ರಿಂಟಿಂಗ್, ಕಂಪ್ಯೂಟರ್ ನಿರ್ವಹಣೆ, ಕಛೇರಿ ನಿರ್ವಹಣೆ ಇತರೆ: ಅಲ್ಲದೆ ಮತ್ತೊಂದು ಪ್ರಮುಖ ಅಂಶ ಯಾವುದೇ ವ್ಯವಹಾರವನ್ನು ತೊಡಕುರಹಿತವಾಗಿ, ತೊಂದರೆ ಇಲ್ಲದೇ ಮಾಡಲಾಗುವುದಿಲ್ಲ. ಸಂಘದ ಎಲ್ಲಾ ವ್ಯವಹಾರಗಳಲ್ಲೂ ತೊಡಕು ಇದ್ದೇ ಇರುತ್ತದೆ. ತೊಡಕು, ತೊಂದರೆ ಇದೆ ಎಂದು ವ್ಯವಹಾರ ಮಾಡದೇ ಇರಲಾಗದು ತೊಡಕು ರಹಿತ ವ್ಯವಹಾರವಿಲ್ಲ. ತೊಡಕು ಅನಿವಾರ್ಯ ನಡೆಯುವಾಗ ಎಡವಲೇ ಬೇಕು. ಎಡವುತ್ತೇವೆ ಎಂದು ನಡೆಯಬಾರದೇ?

'ಕೈಕೆಸರಾದರೆ ಮಾತ್ರ ಬಾಯಿಗೆ ಮೊಸರು ದೊರೆಯುವುದಲ್ಲವೇ ಆದುದರಿಂದ ನಾವು ವ್ಯವಹಾರಕ್ಕೆ ತಕ್ಕಂತೆ ತೊಡಕು ವೆಚ್ಚ (risk cost) ಎಂದು ಬದಿಗೆ ತೆಗೆದಿರಸಬೇಕಾಗುತ್ತದೆ. ಪತ್ತಿನ ಸಹಕಾರ ಸಂಘಗಳಲ್ಲಿ ದುಡಿಯಲಾರದ ಆಸ್ತಿ ಹೆಚ್ಚಳವಾದಷ್ಟು ತೊಡಕು ವೆಚ್ಚ ಹೆಚ್ಚುತ್ತದೆ. ಅನೇಕ ರೀತಿಯ ತೊಡಕುಗಳನ್ನು ಗುರುತಿಸಲಾಗಿದೆ. ಅದೇ ರೀತಿಯಲ್ಲಿ ಉತ್ಪಾದನೆ, ಸಂಸ್ಕರಣ, ಮಾರಾಟ ಸಹಕಾರ ಸಂಘಗಳಲ್ಲಿನ ವ್ಯವಹಾರಗಳಲ್ಲಿ ಬಾಧ್ಯವಾಗಿ ಮಾರಾಟ ಆಧರಿಸಿ, ಧರ ಆಧರಿಸಿ, ಉತ್ಪನ್ನದ ಸಂಗ್ರಹಿಸಿಡಬಹುದಾದ ಸಮಯ (shelf life) ಆಧರಿಸಿ, ವೆಚ್ಚಗಳಿವೆ. ಈ ಎಲ್ಲ ವೆಚ್ಚಗಳನ್ನು ಕಳೆದು ಉಳಿಯುವುದೇ ನಿವ್ವಳ ಲಾಭವಾಗುತ್ತದೆ. ಈ ನಿವ್ವಳ ಲಾಭವನ್ನು ಸರ್ವಸದಸ್ಯರ ಸಭೆಯ, ನಿರ್ಣಯದಂತೆ ಉಪವಿಧಿಗಳನ್ವಯ ಹಂಚಿಕೆ ಮಾಡಬೇಕಾಗಿರುತ್ತದೆ. ಸದಸ್ಯರು ಡಿವಿಡೆಂಡ್ ಪಡೆಯಬೇಕಾಗುತ್ತದೆ.

**ಲಾಭಗಳಿಕೆಗೆ ಮಾರ್ಗೋಪಾಯಗಳು :**

1. ಸಂಪನ್ಮೂಲಗಳ ಯೋಜನಾತ್ಮಕ ಅಭಿವೃದ್ಧಿ ಸಂಪನ್ಮೂಲಗಳಲ್ಲದೆ ವ್ಯವಹಾರಗಳಿಲ್ಲ. ಬಂಡವಾಳ ವಿಲ್ಲದೇ ವ್ಯವಹಾರ ಮಾಡಲಾಗುವುದಿಲ್ಲ. ಸಂಪನ್ಮೂಲಗಳ ರೂಢಿಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಗಿರುತ್ತದೆ. ಸಂಪನ್ಮೂಲಗಳ ಮೇಲೆ ವೆಚ್ಚಗಳ ಮೇಲೆ ಹಿಡಿತ ಇರಬೇಕಾಗುತ್ತದೆ. ವೆಚ್ಚರಹಿತ ಬಂಡವಾಳ ಲಭ್ಯತೆ ಬಗ್ಗೆ ಮೂಲಗಳನ್ನು ಹುಡುಕ ಬೇಕಾಗುತ್ತದೆ. ಸಹಕಾರ ಸಂಘಗಳಲ್ಲಿ ವೆಚ್ಚ ರಹಿತ ಸಂಪನ್ಮೂಲ/ ಬಂಡವಾಳವೆಂದರೆ ಷೇರು ಬಂಡವಾಳ, ಸದಸ್ಯರಿಂದ ಅಧಿಕ ಷೇರು ಬಂಡವಾಳ ಸಂಗ್ರಹಣೆಗೆ ಒತ್ತು ನೀಡಬಹುದು. ಹೆಚ್ಚು ಹೆಚ್ಚು ಸದಸ್ಯರನ್ನು ಸೇರಿಸಿಕೊಳ್ಳುವುದರಿಂದಲೂ ಷೇರು ಬಂಡವಾಳವನ್ನು ಹೆಚ್ಚಳಗೊಳಿಸಿ ಕೊಳ್ಳಬಹುದು. ಷೇರು ಬಂಡವಾಳದ ಮೇಲೆ ಲಾಭಗಳಿಸಿ ಹಂಚಿಕೆಯಾದಾಗ ಡಿವಿಡೆಂಡ್ ನೀಡುವುದರಿಂದ ಸದಸ್ಯರು ವ್ಯವಹಾರದ ಪಾಲುದಾರರೇ ಆದುದರಿಂದ ಷೇರು ಬಂಡವಾಳದ ವೃದ್ಧಿಗೆ ಸಹಕರಿಸಬೇಕಾದುದು ತಮ್ಮ ಕರ್ತವ್ಯವಾಗುತ್ತದೆ. ನಿವ್ವಳ ಲಾಭಗಳಿಸಿದ ಮೇಲೆ ಸರ್ವಸದಸ್ಯರ ಸಭೆಯಲ್ಲಿ ಲಾಭ ಹಂಚಿಕೆಯಲ್ಲಿ ಸಾಮಾನ್ಯ ನಿಕಾಯವು ನಿಧಿಗಳ ಹೆಚ್ಚಳಕ್ಕೆ ಆಧ್ಯತೆ ನೀಡಬೇಕಾಗುತ್ತದೆ. ಉಪವಿಧಿಗಳಲ್ಲಿ ಕಾಯ್ದೆ ಪ್ರಕಾರ ಶೇಕಡ ಇಪ್ಪತ್ತೈದಕ್ಕೆ

ಕಡಿಮೆ ಇಲ್ಲದಂತೆ ಆಪದ್ಧನ ತೆಗೆದಿರಿಸುವುದು ಎಂದಿರುತ್ತದೆ. ಲಾಭಗಳಿಸಿದಾಗ ಲಾಭ ಹಂಚಿಕೆ ಮಾಡಿ ಕರಗಿಸುವುದಕ್ಕಿಂತ ಈ ಅವಕಾಶದಂತೆ ಶೇ.25ಕ್ಕೂ ಮೀರಿ ಮೀಸಲು ನಿಧಿ / ಆಪದ್ಧನ ನಿಧಿ ಇರಿಸುವುದು ಜಾಣತನವಾಗುತ್ತದೆ. ಈ ನಿಧಿ ನಮ್ಮದೇ ಆಗಿರುತ್ತದೆ. ಇದು ಪೂರ್ಣ ವೆಚ್ಚ ರಹಿತವಾಗಿರುತ್ತದೆ. ಇನ್ನಾವುದೇ ಹಂಚಿಕೆಯಾಗದ ನಿಧಿಗಳ ಮೊತ್ತಗಳು ವ್ಯವಹಾರಿಕ ಮೂಲವಲ್ಲದ ಮೊತ್ತ, ಆದಾಯಗಳಿದ್ದಲ್ಲಿ ಅದನ್ನು ಮೀಸಲು ನಿಧಿ / ಆಪದ್ಧನ ನಿಧಿಗೆ ಸೇರಿಸುವುದರಿಂದ ವೆಚ್ಚ ರಹಿತ ಬಂಡವಾಳ / ಸಂಪನ್ಮೂಲಗಳನ್ನು ಹೆಚ್ಚಳಗೊಳಿಸಬಹುದಾಗಿದೆ. ವೆಚ್ಚರಹಿತ ಠೇವಣಾತಿಗಳು ಸಾಧ್ಯವಿಲ್ಲ. ಆದರೆ ಕಡಿಮೆ ವೆಚ್ಚದ ಠೇವಣಾತಿಗಳ ಬಗ್ಗೆ ಆಲೋಚಿಸ ಬಹುದಾಗಿದೆ. ಸಂಘದ ಮೇಲಿನ ವಿಶ್ವಾಸಿಕ ಠೇವಣಿದಾರರನ್ನು ಸಂಪರ್ಕಿಸಿ ಇದರ ಸಂಗ್ರಹಣೆ ಬಗ್ಗೆ ಕ್ರಮಗೊಳ್ಳಬೇಕಾಗುತ್ತದೆ. ಸಹಕಾರ ಸಂಘಗಳ ಸಾಮಾರ್ಥ್ಯ ಇದೇ ಆಗಬೇಕಾಗಿದೆ. ನಾವು ಹೊರಗಿನವರಲ್ಲ. ಸದಸ್ಯ ಮತ್ತು ಆಡಳಿತ ಮಂಡಳಿ, ಸಿಬ್ಬಂದಿಯೂ ಕೂಡ ಸ್ಥಳೀಯರೇ ಆಗಿದ್ದೇವೆ. ಬೇಡಿಕೆ ಠೇವಣಿಗಳ (ಉಳಿತಾಯ, ಚಾಲ್ತಿ) ಹೆಚ್ಚಳಗೊಳಿಸುವ ಬಗ್ಗೆ (ಪತ್ತಿನ ಸಹಕಾರ ಸಂಘಗಳಲ್ಲಿ) ಆಧ್ಯತೆ ನೀಡಬೇಕಾಗುತ್ತದೆ. ಅವಧಿ ಠೇವಣಾತಿಗಳ ನಿರ್ವಹಣೆ ಜಾಗರೂಕತೆಯಿಂದ ಮಾಡಿದ ಹೂಡಿಕೆ ಮತ್ತು ಸಾಲ ನೀಡಿಕೆ, ಸಾಲ ಮತ್ತು ಹೂಡಿಕೆ ವಲಯಗಳ ಆರೋಗ್ಯವನ್ನು ಅವಲಂಭಿಸಿರುತ್ತದೆ. ಉತ್ಪನ್ನ ಸಂಸ್ಕರಣೆ ಮಾರುಕಟ್ಟೆಗಳಲ್ಲಿಯೂ ಹಲವೆಡೆ ಠೇವಣಿ ಸಂಗ್ರಹಣೆ ಮಾಡಿರುವುದು ಕಂಡು ಬರುತ್ತದೆ. ಇಲ್ಲಿ ಬಂಡವಾಳವು, ದಾಸ್ತಾನು, ಸಲಕರಣೆ ಸ್ಥಿರ ಆಸ್ತಿಗಳ/ ಬಂಡವಾಳಗಳ ಮೇಲೆ ಹೂಡಿಕೆಯಾಗುವುದರಿಂದ ಸಕಾಲದಲ್ಲಿ ಠೇವಣಿದಾರರಿಗೆ ಹಿಂತಿರುಗಿಸಬಹುದಾದ ದ್ರವ್ಯಾಸ್ತಿ ನಿರ್ವಹಣೆ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಇಲ್ಲದೇ ಇದ್ದಲ್ಲಿ ಠೇವಣಿದಾರರ ವಿಶ್ವಾಸ ಕಳೆದುಕೊಳ್ಳುವುದಲ್ಲದೇ ವ್ಯವಹಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಪಡೆದ ಸಾಲಗಳು ವೆಚ್ಚ ರಹಿತವಾಗಿರಲು ಸಾಧ್ಯವಿರುವುದಿಲ್ಲ. ಸಾಲ ನೀಡುವ ಸಂಸ್ಥೆಯಕರಾರು, ಷರತ್ತು ಮತ್ತು ನೀಡಬೇಕಾದ ಬಡ್ಡಿದರಗಳನ್ನು ಅವಲಂಭಿಸಿರುತ್ತದೆ. ಪಡೆದ ಸಾಲಗಳನ್ನು ಕರಾರುವಕ್ಕಾಗಿ ವರುಪಾವತಿಸುವ ಬಗ್ಗೆ ಗಮನವಿರಬೇಕಾಗುತ್ತದೆ. ಇದಕ್ಕೆ ತಕ್ಕಂತೆ ಆಸ್ತಿ ಜವಾಬ್ದಾರಿಗಳ ನಿರ್ವಹಣೆಯ ವ್ಯವಸ್ಥೆಯನ್ನು ಒಳಗೊಂಡಿರಬೇಕಾಗುತ್ತದೆ. ಆಗ ಪಡೆದ ಸಾಲವು ಅತ್ಯುತ್ತಮ ಸಂಪನ್ಮೂಲವಾಗಿರುವುದಲ್ಲಿ ಸಂಶಯವಿಲ್ಲ. ನಗದು ಪತ್ತಿನ ಸಾಲತರುವಲ್ಲಿ ದಾಸ್ತಾನುಗಳು ಮತ್ತುತಂದ ಸಾಲದ ಸಮರ್ಪಕ ನಿರ್ವಹಣೆಯಿಂದ ಲಾಭಗಳಿಸಲು ಸಾಧ್ಯವಾಗುತ್ತದೆ.

**2. ವ್ಯವಹಾರಗಳಲ್ಲಿ ತಂತ್ರಗಾರಿಕೆ :** ವ್ಯವಹಾರದ ಗಾತ್ರದಲ್ಲಿ ಹೆಚ್ಚಳಗೊಳಿಸುವುದು ಸ್ಪರ್ದಾತ್ಮಕ. ಈ ದಿನಗಳಲ್ಲಿ ಆಧಾಯ ಮತ್ತು ವೆಚ್ಚಗಳಲ್ಲಿ ಅಂತರ ಅಧಿಕವಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ವ್ಯವಹಾರದ ಗಾತ್ರವನ್ನು ಹಿಗ್ಗಿಸಿಕೊಳ್ಳುವುದು ಮತ್ತು ಅಂತರ/ ಲಾಭಕಡಿಮೆ ಇಟ್ಟುಕೊಳ್ಳಬಹುದಾಗಿದೆ. ಇದರಿಂದ ಒಟ್ಟಾರೆ ವ್ಯವಹಾರದಲ್ಲಿ ಲಾಭಗಳಿಸಬಹುದಾಗಿದೆ. ವ್ಯವಹಾರಗಳಲ್ಲಿ ವೈವಿಧ್ಯತೆಯನ್ನು ಸಾಧಿಸುವುದು ಬದಲಾಗುತ್ತಿರುವ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳನುಸಾರ ನೂತನ, ವಿನೂತನ ಅವಕಾಶಗಳು ಲಭ್ಯವಾಗುತ್ತಿವೆ. ಅದಕ್ಕೆ ತಕ್ಕಂತೆ ನೂತನ ಉತ್ಪನ್ನಗಳ ಆವಿಷ್ಕಾರಗಳನ್ನು ಮಾಡುವುದು ಆಯಾ ಸಹಕಾರ ಸಂಘದ ಪರಿಸರಕ್ಕನ್ವಯವಾಗುವಂತೆ ಉತ್ಪನ್ನಗಳನ್ನು ನಿರ್ಮಾಣಮಾಡುವ ಅವಶ್ಯಕತೆ ಇದೆ. ಲಭ್ಯ ಬಂಡವಾಳವನ್ನು ಯಾವುದೇ ಒಂದು ಅಥವ ಎರಡು ವಲಯಗಳಲ್ಲಿ ತೊಡಗಿಸುವ ಬದಲು ವೈವಿಧ್ಯಮಯ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ವ್ಯವಹಾರಿಕ ತೊಡಕುಗಳನ್ನು ಕಡಿಮೆ ಮಾಡಿಕೊಳ್ಳಬಹುದು. ಒಂದು ವಲಯದಲ್ಲಿ ಕಡಿಮೆ ಲಾಭಅಥವ ನಷ್ಟವಾದರೆ ಮತ್ತೊಂದು ವಲಯದಲ್ಲಿ ಲಾಭಗಳಿಸಿ ಅದನ್ನು ಸರಿದೂಗಿಸಬಹುದಾಗಿದೆ.

**3. ವ್ಯಾಪಾರ ಅಭಿವೃದ್ಧಿಯೋಜನೆ :** ಮೇಲಿನ ಅಂಶಗಳ ಆಧಾರದ ಮೇರೆಗೆ ತನ್ನ ಸಂಸ್ಥೆಯ ಸಾಮರ್ಥ್ಯ, ಅವಕಾಶ,

ದೌರ್ಬಲ್ಯಗಳು ಮತ್ತು ಸವಾಲುಗಳನ್ನು ಅಭ್ಯಯಿಸಿ ಅವಧಿವಾರು ಯೋಜನೆ ತಯಾರಿಸಿ ತನ್ನ ಪರಿಸರದಲ್ಲಿ ಲಭ್ಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಲಾಭದಾಯಕವಾಗಿ ಯೋಜನೆ ರೂಪಿಸುವುದು. ತಯಾರಿಸಿದ ಯೋಜನೆಯಂತೆ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿದೆಯೇ ಇಲ್ಲವೇ? ಇಲ್ಲವಾದಲ್ಲಿ ಕಾರಣಗಳೇನು ಅದನ್ನು ಸರಿಪಡಿಸುವ ಕ್ರಮಗಳೇನು ಎಂಬ ಬಗ್ಗೆ ಸಕಾಲಿಕ ನಿರ್ಧಾರಗಳು ಅಗತ್ಯ. ಈ ದಿಸೆಯಲ್ಲಿ ಈಗಿನ ಲಭ್ಯ ಮಾಹಿತಿ ತಂತ್ರಜ್ಞಾನ ಕ್ರಾಂತಿ ನೆರವಾಗುತ್ತದೆ ಹಿಮ್ಮಾಹಿತಿ ಪಡೆಯುವುದು ಲೆಕ್ಕಗಳ ನಿರ್ವಹಣೆ ಕ್ರಮಗಳು ಅತ್ಯಂತ ಸಹಕಾರಿ, ಆಧುನಿಕ ಕಂಪ್ಯೂಟರೀಕರಣ ವ್ಯವಸ್ಥೆ ಇಂದಿನ ಅಗತ್ಯತೆ. ನಮ್ಮ ಸ್ಪರ್ಧಿಗಳು ನಾಗಲೋಟದಿಂದ ಓಡುತ್ತಿದ್ದಾರೆ. ಆರ್ಥಿಕತೆಯ ಬೆಳವಣಿಗೆಗನುಗುಣವಾಗಿ ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳನ್ನೇ ಬದಲಾಯಿಸಿ ನೂತನ ಅಗತ್ಯ/ಅಗತ್ಯವಲ್ಲದ ಉತ್ಪನ್ನಗಳನ್ನು ಸೃಷ್ಟಿಮಾಡಿ ನವ ಮಾರುಕಟ್ಟೆಯನ್ನೇ ಸೃಷ್ಟಿ ಮಾಡುತ್ತಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನಾವು ಬದಲಾಗದಿದ್ದಲ್ಲಿ ಉಳವು ಸಾಧ್ಯಯವಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ಯೋಜನೆ ತಯಾರಿಸುವಲ್ಲಿ ಬದಲಾವಣೆ ತರುವುದು ಮತ್ತು ಪರಿಸರಕ್ಕೆ ಹೊಂದಿಕೊಳ್ಳುವುದು ಈ ದಿನದ ಅನಿವಾರ್ಯ ಮತ್ತು ಅವಶ್ಯಕ.

**4. ಇತರೆ ಅಂಶಗಳು :** ವೆಚ್ಚಗಳ ಮೇಲಿನ ನಿಯಂತ್ರಣದಿಂದ ಖರ್ಚುಗಳನ್ನು ಕಡಿಮೆಗೊಳಿಸಿ ಲಾಭ ಅಧಿಕಗೊಳಿಸಬಹುದು. ವೆಚ್ಚಗಳ ನಿಯಂತ್ರಣ ಮಾಡುವಲ್ಲಿ ವಿವೇಚನೆಯುತವಾಗಿ ಆಲೋಚಿಸುವುದು ಬಹುಮುಖ್ಯ ಮಾನವ ಸಂಪನ್ಮೂಲ ನಿರ್ವಹಣೆ ಅತಿ ಸೂಕ್ಷ್ಮವಲಯ. ಇತ್ತೀಚಿಗಿನ ದಿನಗಳಲ್ಲಿ ಇದರಲ್ಲಿ ವೆಚ್ಚಗಳನ್ನು ಹೂಡಿಕೆ ಎಂದೇ ಪರಿಗಣಿಸಲಾಗುತ್ತಿದೆ. ಮಾನವ ಶಕ್ತಿಯ ಸದುಪಯೋಗದಿಂದ, ಅವರಜ್ಞಾನ, ನೈಪುಣ್ಯತೆಯ ಬಳಸುವಿಕೆ, ಸಂಸ್ಥೆಯ ಬಗ್ಗೆ ಅವರ ಸಕಾರಾತ್ಮಕ ಚಿಂತನೆಗೆ ಅವಕಾಶ ಕಲ್ಪಿಸುವ ಪರಿಸರ ನಿರ್ಮಾಣ ಅತಿ ಪ್ರಮುಖ ಪಾತ್ರವಹಿಸುತ್ತದೆ. ಯಾವ ವೆಚ್ಚಗಳನ್ನು ತಗ್ಗಿಸುವ ಅವಕಾಶಗಳಿವೆ ಅವುಗಳನ್ನು ಅಧ್ಯಯನ ಮಾಡಿ ತಗ್ಗಿಸುವುದು. ನಿಯಂತ್ರಿಸುವುದು. ಎಲ್ಲಿ ವೆಚ್ಚಗಳನ್ನು ಮಾಡುವುದು ಅನಿವಾರ್ಯವೇ ಆಗಿದೆ. ಆವಲಯದಲ್ಲಿ ಮಾಡಿ ಹೆಚ್ಚಿನ ಗಳಿಕೆಗೂ ಅವಕಾಶವಾಗುವಂತೆ ಕ್ರಮ ತೆಗೆದುಕೊಳ್ಳುವುದು. ಆನೇಕ ಬಾರಿ ಅರಿವಿಲ್ಲದೆಯೇ ವ್ಯವಹಾರದಲ್ಲಿ ಸೋರಿಕೆಗಳಾಗುತ್ತವೆ. ಈ ಸೋರಿಕೆಗಳಾಗದಂತೆ ಎಚ್ಚರಿಕೆ ಕ್ರಮಗಳನ್ನು ಸೂಕ್ತ ಮೇಲ್ವಿಚಾರಣೆ, ಆಂತರಿಕ ನಿಯಂತ್ರಣ (checks & balances) ವ್ಯವಸ್ಥೆಯಿಂದ ತಡೆಗಟ್ಟಬೇಕಾಗುತ್ತದೆ. (ಉದಾ: ಬಡ್ಡಿ ದರಗಳ ಲೆಕ್ಕಾಚಾರ, ದಾಸ್ತಾನು ನಿರ್ವಹಣೆಯಲ್ಲಿ ನಷ್ಟಗಳು) ಇವುಗಳನ್ನು ತಡೆಗಟ್ಟುವುದರಿಂದ ಲಾಭವನ್ನು ಅಧಿಕಗೊಳಿಸಿಕೊಳ್ಳಬಹುದಾಗಿದೆ.

ಸಹಕಾರ ಸಂಘಗಳು ಸದಸ್ಯರಿಗೆ ಸೇವೆ ಒದಗಿಸುವ ಉದ್ದೇಶ ಸಾಧಿಸಬೇಕಾದಲ್ಲಿ ಸಂಸ್ಥೆ ಲಾಭಗಳಿಸಿಯೇ ತೀರಬೇಕು. ಲಾಭಗಳಿಸಲು ಯೋಜನಾಬದ್ಧವಾದ ಬೆಳವಣಿಗೆಯಿಂದ ಮಾತ್ರ ಸಾಧ್ಯ ಹೊರತು ಯಾವುದೇ ಆಕಸ್ಮಿಕಗಳಿಂದ ಸಾಧ್ಯವಿಲ್ಲ. ಆದುದರಿಂದ ಸಹಕಾರ ಸಂಘಗಳು ಆಧುನಿಕ ವಿದ್ಯುನ್ಮಾನ, ಕಂಪ್ಯೂಟರೀಕರಣ. ಮಾಹಿತಿ ತಂತ್ರಜ್ಞಾನದ ನೆರವನ್ನು ಪಡೆದುತನ್ನ ವ್ಯವಹಾರಗಳನ್ನು ವಿಸ್ತರಿಸಿಕೊಳ್ಳುವುದು ಮತ್ತು ಲಾಭದಾಯಕವಾಗಿ ವ್ಯವಹಾರಗಳನ್ನು ನಡೆಸುವುದು ಈ ದಿನದ ಅವಶ್ಯಕತೆ. ಸಹಕಾರ ವಲಯ ಈಗ ಮಾಡು ಅಥವ ಮಡಿ (do or die) ಮತ್ತು ಬೆಳೆಯಿರಿ ಅಥವ ಅಳಿಯಿರಿ (flourish or perish) ಎಂಬ ಘಟ್ಟವನ್ನು ಮುಟ್ಟಿದ್ದೇವೆ. ಮಧ್ಯಮ, ಕೆಳಮಧ್ಯಮ ಮತ್ತು ಬಡವರ ಆಶಾಕಿರಣವಾದ ಸಹಕಾರ ಚಳುವಳಿಯನ್ನು ಬೆಳೆಸುವುದು ಸಹಕಾರಿಗಳ ಇಂದಿನ ಸವಾಲಾಗಿದೆ. ಆದುದರಿಂದ ವ್ಯವಹಾರಗಳನ್ನು ಲಾಭದಾಯಕವಾಗಿ ನಡೆಸಬೇಕು ಮತ್ತು ಲಾಭದ ಗಳಿಕೆಯಿಂದ ಉಳಿಸಬೇಕಾಗಿರುವುದು ಅನಿವಾರ್ಯ ಮತ್ತು ಅವಶ್ಯಕ.

****************************************************************************************

# 35. ಸಹಕಾರ ಸಂಘಗಳಲ್ಲಿ ಸಾಮಾನ್ಯ ನಿಕಾಯ ಸಭೆಯ ಪ್ರಾಮುಖ್ಯತೆ

ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಅದರಂತೆ ಪ್ರಜಾ ಸತ್ತಾತ್ಮಕ ಸಂಸ್ಥೆಗಳಾದ ಸಹಕಾರ ಸಂಘಗಳಲ್ಲಿ ಸದಸ್ಯರೇ ಪ್ರಭುಗಳು. ಸಹಕಾರ ಸಂಘ ಎಂದರೆ ವ್ಯಕ್ತಿಗಳು ಸ್ವಯಂ ಪ್ರೇರಣೆಯಿಂದ ಒಟ್ಟಿಗೆ ಸೇರಿ ತಮ್ಮ ಸಾಮಾನ್ಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಅವಶ್ಯಕತೆಗಳ, ಆಕಾಂಕ್ಷೆಗಳ ಪೂರೈಕೆಗಾಗಿ ರಚಿಸಿಕೊಂಡ ಸಮೂಹ ಒಡೆತನವುಳ್ಳ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಒಳಗೊಂಡ ಸ್ವಾಯತ್ತ ಓದ್ಯೋಗಿಕ ಸಂಸ್ಥೆ. ಆದುದರಿಂದ ಎಲ್ಲ ಸದಸ್ಯರೂ ಸಹಕಾರ ಸಂಘದ ಆಡಳಿತ/ ವ್ಯವಸ್ಥಾಪನೆ ನಡೆಸಲು ಸಾಧ್ಯ  ವಿಲ್ಲದಿರುವುದರಿಂದ ಅದರಆಡಳಿತ/ ವ್ಯವಸ್ಥಾಪನೆಯ ಚುಕ್ಕಾಣಿ/ ಜವಾಬ್ದಾರಿಯನ್ನು ಅವರಿಂದ ಚುನಾಯಿತ ಆಡಳಿತ ಮಂಡಳಿಯಲ್ಲಿರಿಸಿದೆ.

ಈ ಆಡಳಿತ ಮಂಡಳಿ ತನ್ನ ಹೊಣೆಗಾರಿಕೆ/ ಜವಾಬ್ದಾರಿಯನ್ನು, ಸದಸ್ಯರ ಅವಶ್ಯಕತೆಗಳ, ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಿದೆ ಎಂಬುದರ ಪರಿಶೀಲನೆ/ ಪರೀಕ್ಷೆಯೇ ಸಾಮಾನ್ಯ ನಿಕಾಯ ಸಭೆ/ ಸಾಮಾನ್ಯ ಸಭೆ ಶಾಸನ ಬದ್ಧವಾಗಿ ವಾರ್ಷಿಕವಾಗಿ ಒಮ್ಮೆ ಮತ್ತು ಅವಶ್ಯಕತೆಗನುಸಾರ ವಿಶೇಷವಾಗಿಯೂ ಈ ಸಭೆಯನ್ನು ನಡೆಸಬಹುದಾಗಿದೆ.

ಕೋವಿಡ್–19 ರ ಪರಿಣಾಮವಾಗಿ ಕಳೆದ ಎರಡು ವರ್ಷಗಳು ವಾರ್ಷಿಕ ಸಾಮಾನ್ಯ ನಿಕಾಯ ಸಭೆಯನ್ನು ಆನ್ ಲೈನ್ ಮುಖಾಂತರ ಮತ್ತು ಡಿಸೆಂಬರ್ 25ರ ವಿಸ್ತೃತ ದಿನಾಂಕಗಳಂದು ಸಭೆಗಳನ್ನು ನಡೆಸಲಾಯಿತು. ವಿಶೇಷವಾಗಿ ಸರ್ಕಾರ ಇದಕ್ಕೆ ಅನುಮತಿ ನೀಡಿತ್ತು. ಈ ಸಭೆಗಳು ಶಾಸನಬದ್ಧ ಅವಶ್ಯಕತೆಯನ್ನು ಪೂರೈಕೆ ಮಾಡಿದವು. ಇವು ಒಂದು ರೀತಿ ಔಪಚಾರಿಕವಾಗಿ ನಡೆದ ವೇವಿನಃ ಪರಿಣಾಮಕಾರಿಯಾಗಿತ್ತೇ ಎಂಬುದು ಪ್ರಶ್ನಾರ್ಹ.

ಕೋವಿಡ್ –19, ಪಿಡುಗು ನಿವಾರಣೆಯಾಗಿ ಒಂದು ಹಂತ ತಲುಪಿರುವ ಈ ಸಮಯದಲ್ಲಿ, 2021–22ನೇ ಸಾಲಿನ ವಾರ್ಷಿಕ ಸಾಮಾನ್ಯ ನಿಕಾಯ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸುವುದು ಸಹಕಾರ ಸಂಘಗಳ ಜವಾಬ್ದಾರಿಯಾಗಿರುತ್ತದೆ. ಅದರಂತೆ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ಸಭೆಯನ್ನು ಯಶಸ್ವಿ ಸಭೆಯನ್ನಾಗಿಸುವುದು ಸದಸ್ಯರ ಕರ್ತವ್ಯವಾಗಿರುತ್ತದೆ. ಸಹಕಾರ ಸಂಘದ ಆಡಳಿತ/ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳಲು ಇರುವ ಏಕೈಕ ನೇರ ಅವಕಾಶವಿರುವುದು ಈ ಸಭೆಯಲ್ಲಿ ತಾನು ಸಕ್ರಿಯವಾಗಿ ಭಾಗವಹಿಸುವುದು. ಸಕ್ರಿಯವಾಗಿ ಭಾಗವಹಿಸುವುದೆಂದರೆ ತಾನು ಆಯ್ಕೆ ಮಾಡಿದ ಆಡಳಿತ ಮಂಡಳಿಯ ಸಂಘದ ಕಾರ್ಯಾಚರಣೆಯ ಪರಿಶೀಲನೆ, ಜವಾಬ್ದಾರಿಯ ನಿರ್ವಹಣೆಯ ಪರಿಶೀಲನೆ. ಮುಂದಿನ ವರ್ಷದಲ್ಲಿ ನಡೆಸಬೇಕಾದ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ. ಈ ದಿಸೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಕಾನೂನುಗಳು ರೂಪಿಸಲ್ಪಟ್ಟಿದೆ. ಸದಸ್ಯರ ಸಕ್ರಿಯ ಭಾಗವಹಿಸುವಿಕೆಗೆ ಇವುಗಳ ಅರಿವು, ಸಂಘಗಳ ಲೆಕ್ಕಗಳ ತಿಳುವಳಿಕೆ ಅಗತ್ಯ. ಅಲ್ಪ ಪೂರ್ವ ತಯಾರಿಕೆಯೊಂದಿಗೆ, ನೋಟಿಸಿನಲ್ಲಿನ ಕಾರ್ಯಕ್ರಮಪಟ್ಟಿ, ಸೂಚನೆಗಳ ಅಭ್ಯಯಿಸುವಿಕೆಯಿಂದ ಅವುಗಳನ್ನು ಅನುಸರಿಸುವುದರಿಂದ ಸಕ್ರಿಯ ಭಾಗವಹಿಸುವಿಕೆ ಸಾಧ್ಯ. ಹೆಚ್ಚಿನ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದಲ್ಲಿ ಸಹಕಾರ ಸಂಘವು ಹೆಚ್ಚು ಯಶಸ್ವಿಯಾಗಿ ಕಾರ್ಯನಿರ್ವಹಿಸಬಲ್ಲದು.

ಪ್ರಜೆಗಳೇ ಪ್ರಭುಗಳು ಅಂತೆಯೇ ಸಾಮಾನ್ಯ ನಿಕಾಯ ಕ್ಕೆ ಅಂತಿಮ ಅಧಿಕಾರ ಇರುವಂತಹದು. (ಕ.ರಾ.ಸ.ಸಂ ಕಾಯ್ದೆಕಲಂ 26 )ಅಂತಿಮ ಅಧಿಕಾರ ಅಥವಾ ಸ್ವತಂತ್ರ ಎಂದು ಸ್ವೇಚ್ಛೆಯಿಂದ ವರ್ತಿಸಲಾಗದು. ಅಂತಿಮಅಧಿಕಾರ ಕೆಲವೊಂದು ಮಿತಿಗಳಿಗೆ ಒಳಪಟ್ಟಿದೆ. ಉಪನಿಯಮ, ಕಾಯ್ದೆ, ನಿಯಮ (ಕಾನೂನು), ಸಹಕಾರ ತತ್ವಗಳು, ಲಾಭದಾಯಕ ವ್ಯವಹಾರಗಳು, ಸರ್ವ ಸದಸ್ಯರ ಒಳಿತು, ಸಮಷ್ಠಿ ಪ್ರಜ್ಞೆ ಒಳಗೊಂಡಿರಬೇಕು. ಈ ಹಿನ್ನೆಲೆಯಲ್ಲಿ, ಸಾಮಾನ್ಯ ಸಭೆ (General meeting) ಅಥವಾ ಸಾಮಾನ್ಯ ನಿಕಾಯ ಸಭೆ (General body meeting) ಮಹತ್ವದ ಸಭೆಯಾಗಿರುತದೆ. 97ನೇ ಸಂವಿಧಾನ ತಿದ್ದುಪಡಿ ಆಶಯದಂತೆ ಕ.ರಾ.ಸ.ಸಂ.ಗಳ ಕಾಯ್ದೆ 27 ತಿದ್ದುಪಡಿಯಾಗಿದ್ದು, ಚರ್ಚಿಸಿ ನಿರ್ಣಯಿಸಬೇಕಾದ

ವಿಷಯಗಳನ್ನು ವಿಸ್ತೃತಗೊಳಿಸಲಾಗಿದೆ.ಇದರ ಮೂಲಕ ಸಂವಿಧಾನದ ಆಶಯವು, ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಅವಶ್ಯವೂ ಆದ ಸದಸ್ಯ ಚಾಲಿತ ಸಹಕಾರ ಸಂಘಗಳ (member driven co-operatives)ನಿರ್ಮಾಣ ಸಾಧ್ಯ.

ಕ.ರಾ.ಸ.ಸಂ. ಕಾಯ್ದೆಕಲಂ 27ರಲ್ಲಿ ಸಭೆಯಲ್ಲಿ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಗ್ಗೆ ವಿಸ್ತೃತವಾಗಿ ತಿಳಿಸಿದೆ. ಇದರ ವಿಧಿವಿಧಾನಗಳ ಬಗ್ಗೆ ನಿಯಮ (ಕಾನೂನು) ಸಂ.14 AJಯಲ್ಲಿ ಸವಿವರವಾಗಿ ತಿಳಿಸಲಾಗಿದೆ.ಕಲಂ 28 ಅ (ಡಿ) ರಂತೆ ಸಭೆ ನಡೆಸುವ ಜವಾಬ್ದಾರಿ ಆಡಳಿತ ಮಂಡಳಿಯದ್ದಾಗಿರುತ್ತದೆ.

ಕ.ರಾ.ಸ. ಸಂ.ಕಾಯ್ದೆ ಕಲಂ 27 (1) ರಂತೆ ಪ್ರತಿ ಸಹಕಾರ ಸಂಘವು ಪ್ರತಿವರ್ಷ ಸೆಪ್ಟೆಂಬರ್ 25ರ ಒಳಗೆತಮ್ಮ ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು, ಇದರ ಪ್ರಮುಖ ಅಂಶಗಳುಈ ಕೆಳಕಂಡಂತಿವೆ.

1) ಹಿಂದಿನ ವಾರ್ಷಿಕ ವರದಿಯ ಪರಿಗಣನೆ. ವಾರ್ಷಿಕ ವರದಿಯಲ್ಲಿ ಆಡಳಿತ ಮಂಡಳಿಗೆ ಕಲಂ 28 (ಅ) ಯಲ್ಲಿ ನಿಗದಿ ಪಡಿಸಿರುವ ಪ್ರಮುಖ ಕರ್ತವ್ಯ ಜವಾಬ್ದಾರಿಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಒಳಗೊಂಡಿರಬೇಕೆಂದು ಆಶಿಸಲಾಗಿದೆ. ಸದಸ್ಯತ್ವ, ಚಟುವಟಿಕೆಗಳು, ಅವುಗಳ ಪ್ರಗತಿ, ಆರ್ಥಿಕ ಪ್ರಗತಿಗಳು, ಸಿಬ್ಬಂದಿ ಕಾರ್ಯಾಚರಣೆ ಇತರೆ ಪ್ರತಿಯೊಂದು ಅಂಶಗಳ ಬಗ್ಗೆ ಸದಸ್ಯರು ಅವಲೋಕನ ಮಾಡಿ, ವಿಮರ್ಶಿಸಿ, ಸಕರಾತ್ಮಕವಾಗಿ ಪ್ರತಿಕ್ರಿಯಿಸಿ ಆಡಳಿತ ಮಂಡಳಿಗೆ ಲೋಪಗಳಿದ್ದಲ್ಲಿ ತಿಳಿಸಿ, ಸರಿಪಡಿಸುವ ಮಾರ್ಗೋಪಾಯಗಳನ್ನು ಸೂಚಿಸಬಹುದು. ಆಡಳಿತ ಮಂಡಳಿಯು ಸಲಹೆಸೂಚನೆಗಳನ್ನು ಪರಿಗಣಿಸಿ ಅಳವಡಿಸಿಕೊಳ್ಳುವುದರ ಮೂಲಕ ಸಂಘದ ಪ್ರಗತಿ ಸಾಧ್ಯವಾಗುತ್ತದೆ. ಇವುಗಳನ್ನು ಆರೋಪ (complaint) ಎಂದುಪರಿಗಣಿಸುವ ಬದಲಾಗಿ ಇದು ಹಿಮ್ಮಾಹಿತಿ (feed back) ಎಂದು ಪರಿಗಣಿಸಬೇಕಾಗುತ್ತದೆ.

2) ಕಲಂ 63ರ ಅಡಿಯಲ್ಲಿ ಆಗಿರುವ ಹಿಂದಿನ ವರ್ಷದ ಲೆಕ್ಕ ಪರಿಶೋಧನೆ ವರದಿ, ವರದಿಯಲ್ಲಿ ತೋರಿಸಿರುವ ಲೋಪಗಳು, ನ್ಯೂನತೆಗಳು, ಇವುಗಳನ್ನು ಸರಿಪಡಿಸಲು ಆಡಳಿತ ಮಂಡಳಿ ಕ್ರಮಗಳು ಇದರ ಬಗ್ಗೆಅನುಪಾಲನೆ. ಇದು ಸಾಮಾನ್ಯ ಸಭೆಯ ಬಹಳ ಪ್ರಮುಖ ಅಂಗ. ಕಾಯ್ದೆ ತಿದ್ದುಪಡಿಯಂತೆ ಪ್ರತಿ ಸಂಘವು ತನ್ನ ಲೆಕ್ಕಗಳನ್ನು ಆರ್ಥಿಕ ವರ್ಷ ಮುಗಿದ ಒಂದು ತಿಂಗಳ ಒಳಗಾಗಿ ಅಂತಿಮಗೊಳಿಸುವುದು, ಅಂತಿಮ ಲೆಕ್ಕಗಳನ್ನು ತನ್ನ ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೇಮಕಮಾಡಿಕೊಂಡಿರುವ ಲೆಕ್ಕ ಪರಿಶೋಧಕರಿಗೆ ಸಲ್ಲಿಸುವುದು. ಅವರಿಗೆ ಈ ಕಾರ್ಯನಿರ್ವಹಿಸಲು ನಿಗದಿಪಡಿಸಲು ಇರುವ ಅಂತಿಮ ಗಡುವು ಸೆಪ್ಟೆಂಬರ್ 1ನೇ ದಿನಾಂಕ. ಇದರಿಂದಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಬಾಕಿ ಉಳಿಯುವುದಿಲ್ಲ. ಆಯಾ ವರ್ಷದ ಲೆಕ್ಕ ಪರಿಶೋಧನೆ ವರದಿ ಮತ್ತು ಅನುಪಾಲನೆ (ಸರಿಪಡಿಸಲು ಆಡಳಿತ ಮಂಡಳಿ ತೆಗೆದುಕೊಂಡಿರುವ ಕ್ರಮಗಳು) ಆಯಾ ವರ್ಷವೇ ಮಂಡನೆಯಾಗುವುದು ಕಡ್ಡಾಯವಾಗಿದೆ. ಸದಸ್ಯರು ಮುಂಚೆಯೇ ಇದನ್ನು ಅಧ್ಯಯನ ಮಾಡಿದಲ್ಲಿ ಸಂಘದ ಆಡಳಿತ ಮಂಡಳಿಗೆ ಉಚಿತ, ಸಲಹೆ ಸೂಚನೆ, ಮಾರ್ಗದರ್ಶನ ನೀಡಲು ಸದಾವಕಾಶ ಸಾಮಾನ್ಯ ಸಭೆಯಾಗಿರುತ್ತದೆ.

3) ಸಂಸ್ಥೆಯ ಪರಿವೀಕ್ಷಣೆ, ವಿಚಾರಣೆ, ಆಗಿದ್ದಲ್ಲಿ ಅದರ ವರದಿ, ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ, ಸದಸ್ಯರು ಅಧ್ಯಯನ ಮಾಡಿ ಆಡಳಿತ ಮಂಡಳಿಯು ಸಂಘವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಬಗ್ಗೆ ದಿಕ್ಸೂಚಿಯಾಗಿ ಕಾರ್ಯ ನಿರ್ವಹಿಸಬಹುದು.

4) ನಿವ್ವಳ ಲಾಭ ವಿಲೇವಾರಿ, ಮೀಸಲು ನಿಧಿ (ಆಪದ್ಧನ ನಿಧಿ)ಗಳ ಸೃಷ್ಟಿ, (ಸದಸ್ಯರಿಗೆ ಅವರ ವ್ಯವಹಾರಕ್ಕೆ ಅನುಗುಣವಾಗಿ ಬೋನಸ್ ಹಂಚಿಕೆ: ಉದಾ: ಹಾಲು ಉ.ಸ. ಸಂ. ಉಪನಿಯಮ ರೀತಿ), ಡಿವಿಡೆಂಡ್ (ಲಾಭಾಂಶ) ಹಂಚಿಕೆ. ಈ ವಿಷಯ ಅತ್ಯಂತ ಪ್ರಮುಖ ವಿಷಯ. ಲಾಭವನ್ನು ಪೂರ್ಣಹಂಚಿ ಭವಿಷ್ಯಕ್ಕೆ ಏನೂ ಇಲ್ಲದಂತೆ

ಮಾಡಿಕೊಳ್ಳುವುದು ಜಾಣತನವಲ್ಲ. ಬದಲಿಗೆ ಸಂಘದ ಭವಿಷ್ಯಕ್ಕೆ, ಮುಂದಿನ ಪೀಳಿಗೆಗೆ ಅನುಕೂಲಕರ, ಸಂಘದ ನಿಧಿಗಳ ವೆಚ್ಚಗಳ ತಗ್ಗಿಸುವಿಕೆ, ಸ್ಥಿರ ಆಸ್ತಿಗಳ ನಿರ್ಮಾಣಕ್ಕೆ ಹಾದಿ ನಿರ್ಮಾಣ ಮಾಡುವ ಬಗ್ಗೆ ಸದಸ್ಯರ ಆಲೋಚನೆಗಳು ಇರುವುದು ಶ್ರೇಯಸ್ಕರ.

5) ಮುಂದಿನ ವರ್ಷದ ಆಯ–ವ್ಯಯ, ಚಟುವಟಿಕೆಗಳ ಪರಮಾರ್ಶೆ. ಈ ವಿಷಯದಲ್ಲಿ ರಚನಾತ್ಮಕ ಸಲಹೆಗಳು ಸಂಘದ ಪೂರಕ ಬೆಳವಣಿಗೆಗೆ ಸಹಾಯಕ

6) ಉಪನಿಯಮಗಳ ತಿದ್ದುಪಡಿ, ಉದ್ದೇಶಿತ ತಿದ್ದುಪಡಿಗಳನ್ನು ಮತ್ತು ಕಾರಣಗಳನ್ನು ನೋಟಿಸಿನೊಡನೆ ತಿಳಿಸಲಾಗಿರುತ್ತದೆ. ಸಂಘದ ಭವಿಷ್ಯದ ಕಾರ್ಯಚರಣೆ ದೃಷ್ಟಿಯಿಂದ, ಕಾಯ್ದೆ ಕಾನೂನು, ಅನುಗುಣವಾಗಿ ಸರಿಯದ್ದಲ್ಲಿ ಇದಕ್ಕೆ ಪರವಾಗಿ ನಿಲ್ಲುವುದು ಅಗತ್ಯ. ಉಪನಿಯಮ ತಿದ್ದುಪಡಿಗೆ ಕನಿಷ್ಠ ಮತದಾನ ಹಕ್ಕು ಉಳ್ಳಸದಸ್ಯರ ಮೂರನೇ ಎರಡರಷ್ಟು ಮತಗಳೊಂದಿಗೆ ಬೆಂಬಲ ದೊರೆಯಬೇಕು. ಇದಲ್ಲದೇ ಆಡಳಿತ ಮಂಡಳಿ ಸದಸ್ಯರು, ಸದಸ್ಯರಿಗೆ ಹೊಗೆಗಾರರು ಎಂಬುದನ್ನು ಒರೆಗೆ ಹಚ್ಚಲು (ಪರಿಶೀಲಿಸಲು) ಅನುವಾಗುವಂತೆ ಹಲವು ವಿಷಯಗಳನ್ನು ಕಾರ್ಯ ಸೂಚಿಯಲ್ಲಿ ಸೇರಿಸುವಂತೆ ಈ ಕಲಂನಲ್ಲಿ ಸೇರಿಸಲಾಗಿದೆ. ಅವು, ನಿರ್ದೇಶಕರ, ಮುಖ್ಯ ಕಾರ್ಯನಿರ್ವಾಹಕರ ಹತ್ತಿರ ಸಂಬಂಧಿಗಳ ನೇಮಕಾತಿ ಪರಮಾರ್ಶೆ, ಸಿಬ್ಬಂದಿ, ಪಧಾಧಿಕಾರಿಗಳು, ನಿರ್ದೇಶಕರು ಗಳಿಗೆ ನಡವಳಿಕೆ ನೀತಿ ಸಂಹಿತೆ ರೂಪಿಸುವುದು, ನಿರ್ದೇಶಕರು ಮತ್ತು ಸದಸ್ಯರು ಸಂಘದ ಸೇವೆಯನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಪರಿಶೀಲನೆ, ನಿರ್ದೇಶಕರು ಪಡೆದಿರುವ ಸಾಲಗಳು ಮತ್ತು ಸುಸ್ತಿಯಾಗಿರುವ ಬಗ್ಗೆ, ಮತ್ತು ವಸೂಲಿ ಕ್ರಮಗಳ ಬಗ್ಗೆ, ನಿರ್ದೇಶಕರಿಗೆ ಪಾವತಿಸಿರುವ ಪ್ರಯಾಣ ಭತ್ಯ ದಿನ ಭತ್ಯ, ಇತರೆ ಪರಮಾರ್ಶೆ. ಲೆಕ್ಕಪರಿಶೋಧಕರ ನೇಮಕಾತಿ ಮತ್ತಿನ್ನಿತರೆ ನಿಷಯಗಳನ್ನು ಒಳಗೊಳ್ಳುತ್ತದೆ. ಸಭೆಯು ಮುಂದೆ ಸಹಕಾರ ಸಂಘ ನಡೆಯಲು ಸಾದ್ಯವಿಲ್ಲದಿದ್ದಲ್ಲಿ ಸಮಾಪನೆಗೂ ಶಿಫಾರಸ್ಸು ಮಾಡಬಹುದಾಗಿದೆ.

ಸಭೆಗೆ ಅವಶ್ಯಕ ನಿಷ್ಟ ಹಾಜರಾತಿ ಸಂಖ್ಯೆಯು (ಕಲಂ 27 (4) ರಂತೆ ಮತದಾನ ಹಕ್ಕುಳ್ಳ ಸದಸ್ಯರ ಶೇ10 ಅಥವಾ 1000 ಯಾವುದು ಕಡಿಮೆಯೋ ಅದು ಆಗಿರುತ್ತದೆ. ಇಲ್ಲಿ ಮತದಾನ ಹಕ್ಕು ಉಳ್ಳ ಸದಸ್ಯರು ಎಂದರೆ ಕಲಂ 19ರಂತೆ ತಮ್ಮ ಹಕ್ಕು ಚಲಾಯಿಸುವ ಹಕ್ಕನ್ನು ಕಳೆದು ಕೊಂಡಿರಬಾರದು. ಎಂದರೆ ಸಂಘದ ಯಾವುದೇ ಭಾದ್ಯತೆಯನ್ನುಉಳಿಸಿಕೊಂಡರ ಬಾರದು.ಕಲಂ 20 ರಂತೆಸಭೆ ದಿನಾಂಕದಿಂದಒಂದುವರ್ಷ ಹಿಂದೆ ಸದಸ್ಯರಾದವರು ಮಾತ್ರ ಹಕ್ಕು ಹೊಂದಿರುತ್ತಾರೆ. ತದ ನಂತರ ಸದಸ್ಯರಾದವರಿಗೆ ಮತದಾನದ ಹಕ್ಕು ಇರುವುದಿಲ್ಲ. ನಾಮಮಾತ್ರ, ಸಹ ಸುಸ್ತಿದಾರರಿಗೆ ಮತದಾನದ ಹಕ್ಕು ಇರುವುದಿಲ್ಲ. ಅಲ್ಲದೆ ಕ.ರಾ.ಸ.ಸಂ ಕಾಯ್ದೆ1959, ಕಲಂ 20 (a IV), (a-V)7.10.21ರಂದು ತಿದ್ದುಪಡಿಯಾಗಿದ್ದು ಹೆಚ್ಚು ಸದಸ್ಯರು ಸಂಘದ ಕಲಾಪಗಳಲ್ಲಿ ಭಾಗವಹಿಸುವಂತೆ ಮಾಡಲು ಸರಳಗೊಳಿಸಲಾಗಿದೆ. ಅದರಂತೆ 20 (a-IV) ಕಳೆದ ಐದು ವರ್ಷಗಳಲ್ಲಿ ಕನಿಷ್ಟ ಎರಡು ಮಹಾಸಭೆಗಳಲ್ಲಿ ಭಾಗವಹಿಸದಿದ್ದಲ್ಲಿ 20 (a-V) ಕಳೆದ ಐದು ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಕನಿಷ್ಟ ಸೇವೆ ಸೌಲಭ್ಯ ಉಪನಿಯಮಗಳಲ್ಲಿ ತಿಳಿಸಿದಂತೆ ಉಪಯೋಗಿಸಿಕೊಳ್ಳದಿದ್ದಲ್ಲಿ ಮತದಾನದ ಹಕ್ಕು ಕಳೆದು ಕೊಳ್ಳುತ್ತಾರೆ.

ಸಾಮಾನ್ಯ ನಿಕಾಯ ಸಭೆ/ಸಾಮಾನ್ಯ ಸಭೆ ಅತ್ಯಂತ ಮಹತ್ಯ ಪೂರ್ಣವಾಗಿದ್ದು ಈ ಸಭೆಯಲ್ಲಿ ಹೆಚ್ಚು ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಬಲಗೊಳಿಸುವುದು ಈ ದಿನದ ಅವಶ್ಯಕತೆಯಾಗಿದೆ.

**ಸಹಕಾರಂ ಬಾಳ್ಗೆ ಸಹಕಾರಂ ಗೆಲ್ಗೆ**

*************************************************************************************************

# 36. ಸಹಕಾರ ಸಂಘಗಳಲ್ಲಿ ವಾರ್ಷಿಕ ಮಹಾಸಭೆ ಇದರ ಪ್ರಾಮುಖ್ಯತೆ

ಸಹಕಾರ ಸಂಘಗಳ ಯಜಮಾನರು ಅದರ ಸದಸ್ಯರು, ಅದರ ಗ್ರಾಹಕರು, ಫಲಾನುಭವಿಗಳೂ ಅವರೇ. ಇದೊಂದು ಸಹಕಾರದ ವೈಶಿಷ್ಟ್ಯ. ಈ ವ್ಯಾಖ್ಯೆಯ ದಿಟವಾದ ಅರಿವು ಆ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಎಷ್ಟು ಸಮರ್ಥವಾಗಿ ಸಶಕ್ತತೆಯಿಂದ ನಡೆಯುತ್ತದೆ ಎಂಬುದರಿಂದ ತಿಳಿಯಬಹುದು. ವಾರ್ಷಿಕ ಮಹಾಸಭೆಯು ಕೇವಲ ಒಂದು ಆಚರಣೆ, ಶಾಸನಬದ್ಧ ಅವಶ್ಯಕತೆ ಎಂದು ನಡೆಯದೇ ವಾರ್ಷಿಕ ಮಹಾಸಭೆ ನಡೆಸಬೇಕಾದ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ, ಅರ್ಥಬದ್ಧವಾಗಿ ತಾವು ಸದಸ್ಯರಿಗೆ ಹೊಣೆಗಾರರು ಎಂಬ ಅರಿವಿನೊಡನೆ ನಡೆಸುವುದು ಮತ್ತು ಸದಸ್ಯರು ಪ್ರಜ್ಞಾವಂತರಾಗಿ ಪಾಲ್ಗೊಂಡು, ಜವಾಬ್ದಾರಿಯುತವಾಗಿ ನಡೆದುಕೊಂಡು ಸಂಘದ ಪ್ರಗತಿಗೆ ಕಾರಣರಾದರೆ ವಾರ್ಷಿಕ ಮಹಾಸಭೆಯ ಉದ್ದೇಶವು ಸಫಲವಾದಂತಾಗುತ್ತದೆ.

ಪ್ರತಿ ಸಹಕಾರ ಸಂಘವು ತನ್ನ ವಾರ್ಷಿಕ ಮಹಾಸಭೆ, ಸರ್ವ ಸದಸ್ಯರ ಸಭೆ, ಸಾಮಾನ್ಯ ನಿಕಾಯದ ಸಭೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ 27 ರನ್ವಯ ಸೆಪ್ಟೆಂಬರ್ 25 ರ ಒಳಗೆ ನಡೆಸಬೇಕಾದ್ದು ಕಡ್ಡಾಯ. ಇದರ ಹೊಣೆಗಾರಿಕೆ ಆಡಳಿತ ಮಂಡಳಿಯದು(ಕಲಂ 28(i))ಒಂದು ಸಮಯ ವಿಫಲರಾದಲ್ಲಿ(ಕ.ರಾ.ಸ. ಕಲಂ 29ಸಿ 3(ಬಿ))ನಿರ್ದೇಶಕರು ಅನರ್ಹತೆಗೂ ಮತ್ತು ಆಡಳಿತ ಮಂಡಳಿಯನ್ನು(ಕಲಂ)ರದ್ಧತಿ ಅಥವಾ ಅಮಾನತ್ತಿನಲ್ಲಿಡಬಹುದಾಗಿದೆ. 2020-21ನೆ ಸಾಲಿನ ವಾರ್ಷಿಕ ಮಹಾಸಭೆಯನ್ನು ಕೋವಿಡ್-19 ಕಾರಣಕ್ಕಾಗಿ ಡಿಸೆಂಬರ್ 31 ರವರೆಗೆ ನಡೆಸಲು ಸರ್ಕಾರವು ತನಗೆ ಕಲಂ 121ರಲ್ಲಿ ನಿಹಿತವಾದ ಅಧಿಕಾರದಂತೆ ಕಾಲಾವಕಾಶ ನೀಡಿದೆ. ಅಲ್ಲದೆ ವಿದ್ಯುನ್ಮಾನ ಮತ್ತು ಭೌತಿಕವಾಗಿ ಸಭೆ ನಡೆಸಲು ಅವಕಾಶ ನೀಡಿರುತ್ತದೆ.

ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಬೇಕಾದ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಲಂ-27 ರಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. 97ನೇ ಸಂವಿಧಾನ ತಿದ್ದುಪಡಿಯ ಆಶಯದಂತೆ 2013ರ ಕಾಯ್ದೆ ತಿದ್ದುಪಡಿಗಳಲ್ಲಿ ಈ ಕಲಂನ್ನು ಸಶಕ್ತವಾಗಿ ಮಾಡಲಾಗಿದೆ ಎಂದರೆ ತಪ್ಪಾಗಲಾರದು. ಇದರೊಡನೆ ವಾರ್ಷಿಕ ಮಹಾಸಭೆ ನಡೆಸುವ ವಿಧಿವಿಧಾನಗಳ ಬಗ್ಗೆ ಕ.ರಾ.ಸ. ನಿಯಮ 14ಎಜೆ ಯಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.

**ಇವುಗಳಲ್ಲಿ ಕೆಲವೊಂದು ಪ್ರಮುಖ ಅಂಶಗಳ ಬಗ್ಗೆ ಸಹಕಾರಿಗಳಾದ ನಾವು ಗ್ರಹಿಸಬೇಕಾದದ್ದು, ಅತಿ ಅವಶ್ಯ.**

1. ಸಭೆಯ ತಿಳುವಳಿಕೆ ಪತ್ರವನ್ನು ಎಲ್ಲ ಸದಸ್ಯರಿಗೆ ಹದಿನೈದು ದಿನಗಳ ಮೊದಲಿಗೆ ರವಾನಿಸುವುದು.
2. ತಿಳುವಳಿಕೆ ಪತ್ರದಲ್ಲಿ ಕಲಂ 27ರಲ್ಲಿ ನಿಹಿತ ರೀತಿ ಕಾರ್ಯಕ್ರಮ ಪಟ್ಟಿ ಇರತಕ್ಕದ್ದು.
3. ಸಭೆಯ ಕೋರಂ (ಕನಿಷ್ಠ ಅವಶ್ಯ ಹಾಜರಾತಿ ಸಂಖ್ಯೆ) ಮತದಾನ ಹಕ್ಕುಳ್ಳ ಸದಸ್ಯರ ಶೇ. 10 ಅಥವಾ 1000 ಯಾವುದು ಕಡಿಮೆಯೋ ಅದು.
4. ಸಭೆಗೆ ನಿಗದಿಪಡಿಸಿದ ಸಮಯದ ಒಂದು ಗಂಟೆ ಒಳಗೆ ಕೋರಂ ಆಗದಿದ್ದಲ್ಲಿ ಸಭೆಯನ್ನು ಸಭೆಯ ಅಧ್ಯಕ್ಷರು ಮುಂದೂಡಬೇಕಾಗುತ್ತದೆ.
5. ಸಭೆಯ ಆರಂಭದಿಂದ ಕೊನೆಯವರೆಗೂ ಕೋರಂನಷ್ಟು ಹಾಜರಾತಿ ಇರಬೇಕಾಗುತ್ತದೆ.
6. ಸಭೆ ಅಧ್ಯಕ್ಷರು ಮುಂದೂಡಿದ ಸಭೆಯ ದಿನಾಂಕ, ಸಮಯ ಗೊತ್ತುಪಡಿಸಬೇಕು. ಅದೇ ವಿಷಯಗಳನ್ನು ಕೈಗೊಳ್ಳಬೇಕು ಮತ್ತು ಈ ಸಭೆಗೂ ಕೋರಂ ಅವಶ್ಯ.

ಇದರಿಂದ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಭಾಗವಹಿಸುವಿಕೆಗೆ ನೀಡಿರುವ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ. ಸದಸ್ಯರು ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳಲು ಕಲಂ 27–ಎ ಅನ್ನು ನೂತನವಾಗಿ ಸೇರ್ಪಡಿಸಲಾಯಿತು ಮತ್ತು ಕಲಂ 20ರಲ್ಲಿ ತಿದ್ದುಪಡಿಗಳನ್ನು ತರಲಾಯಿತು. ಕಲಂ 27ಎ ರೀತಿ ಪ್ರತಿ ಸದಸ್ಯರು ಸಂಘದ ವ್ಯವಸ್ಥಾಪನೆಯಲ್ಲಿ ಭಾಗವಹಿಸಬೇಕು. ಅದೆಂದರೆ, ಕಳೆದ ಐದು ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಟ ಮೂರು ಸಭೆಗಳಿಗೆ ಹಾಜರಾಗಬೇಕು. ಉಪನಿಯಮಗಳಲ್ಲಿ ತಿಳಿಸಿದಂತೆ ಪ್ರತಿವರ್ಷ ಕನಿಷ್ಠ ಸೇವೆ ಸೌಲಭ್ಯಗಳನ್ನು ಬಳಸಿಕೊಂಡಿರಬೆಕು. ಇಲ್ಲದಿದ್ದಲ್ಲಿ ಮುಂದಿನ ಮೂರು ವರ್ಷಗಳು ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ. ಕಲಂ 20(a-iv) ರ ರೀತಿ ಐದು ಸಾಮಾನ್ಯ ಸಭೆಗಳಲ್ಲಿ ಮೂರು ಸಭೆಗಳಿಗೆ ಹಾಜರಾಗದಿದ್ದಲ್ಲಿ ಕಲಂ 20(a-v) ರೀತಿ. ಸತತ ಮೂರು ವರ್ಷಗಳಲ್ಲಿ ಉಪನಿಯಮದಲ್ಲಿ ತಿಳಿಸಿದಂತೆ ಕನಿಷ್ಟ ಸೇವೆ ಸೌಲಭ್ಯ ಉಪಯೋಗಿಕೊಳ್ಳದಿದ್ದಲ್ಲಿ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಸದಸ್ಯರು ಕಾಯ್ದೆ ಕಾನೂನುಗಳ ಪಾಲನೆಗಾಗಿ ಭಾಗವಹಿಸುವುದಕ್ಕಿಂತ ಸಹಕಾರ ಸಂಘ ನಮ್ಮದು, ನಾನು ಸದಸ್ಯನಾಗಿರುತ್ತೇನೆ. ಸಹಕಾರ ಸಂಘ ಪ್ರಜಾಸತ್ತಾತ್ಮಕ ಸಂಸ್ಥೆ, ಇದು ಪ್ರಜಾಸತ್ತಾತ್ಮಕ ನಿಯಂತ್ರಣ ಹೊಂದಿದೆ. ಸಂಘ ನನಗೇನು ಮಾಡಿದೆ ಎನ್ನುವುದಕ್ಕಿಂತ ಸಂಘಕ್ಕೆ ನಾನೇನು ಮಾಡಿದ್ದೇನೆ. ನನ್ನ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಾನು ನಿರ್ವಹಿಸಿದ್ದೇನೆಯೇ ಎಂಬುದು ಸಹಕಾರ ಸಂಘದ ಯಶಸ್ಸು ಮತ್ತು ಸಹಕಾರ ಸಂಘದ ಚಳುವಳಿ ದೃಷ್ಟಿಯಿಂದ ಗಮನಿಸಬೇಕಾದ ಅಂಶ. ಆದುದ್ದರಿಂದ ಪ್ರಜ್ಞಾವಂತ ಸದಸ್ಯರಾದವರು ತಮ್ಮ ಬಾದ್ಯತೆಯನ್ನು ತೀರಿಸಿರುವುದಲ್ಲದೇ ಕರ್ತವ್ಯವನ್ನು ನಿರ್ವಹಿಸುವಾಗ ತಾನು ಸಶಕ್ತನಾಗುತ್ತಾನೆ(ಳೆ). ಆಗ ಮಹಾಸಭೆಯಲ್ಲಿ ಅಗತ್ಯತೆಯಿಂದ ವಿಷಯವಾರು ವಿಷಯಗಳನ್ನು ಗ್ರಹಿಸಿ, ವಾರ್ಷಿಕ ವರದಿಯನ್ನು ಅಧ್ಯಯನ ಮಾಡಿ ಸಂಘದ ಪ್ರಗತಿಗೆ ಅವಶ್ಯ ಟಿಪ್ಪಣಿ ತಯಾರಿಸಿಕೊಂಡು ನ್ಯೂನ್ಯತೆಗಳು ಕಂಡು ಬಂದಿದ್ದರೆ, ಅಂತಿಮ ಆರ್ಥಿಕ ತಃಖ್ತೆಗಳಲ್ಲಿ ವ್ಯಾಪ್ತಿಯಗಳಿದ್ದಲ್ಲಿ ಪ್ರಶ್ನಿಸಿ ಆಡಳಿತ ಮಂಡಳಿಯ ಕಾರ್ಯಾಚರಣೆಯನ್ನು ಸರಿಯಾದ ಹಾದಿಗೆ ತರಲು ಇದು ಒಂದು ಸದಾವಕಾಶ.

ಆಡಳಿತ ಮಂಡಳಿಯು, ನಿರ್ದೇಶಕರು ಯಾವುದೇ ಸ್ವಹಿತಾಸಕ್ತಿ ಹೊಂದಿರುವುದಿಲ್ಲ. ಪಾರದರ್ಶಕತೆಯಿಂದ ಸದಸ್ಯರ ಹಿತಾಸಕ್ತಿಯಂತೆ ವರ್ತಿಸುತ್ತಿದ್ದಾರೆ ಎಂಬುದನ್ನು ಸದಸ್ಯರು ಅರಿಯುವಂತೆ ಮಾಡಲು ಕ.ರಾ.ಸ.ಸಂ. ಕಲಂ 27 ರಂತೆ ವ್ಯಾಪ್ತಿಯಲ್ಲಿ ಮಂಡಿಸಬೇಕಾದ ವಿಷಯಗಳು.

1. ನಿರ್ದೇಶಕರ ಅಥವಾ ಮುಖ್ಯಕಾರ್ಯನಿರ್ವಾಹಕರ ನೆಂಟರಿಸ್ಟರುಗಳು ನೇಮಕಾತಿಯಾಗಿದ್ದಲ್ಲಿ ಅವರ ಪಟ್ಟಿ
2. ಸಂಘದ ಪದಾಧಿಕಾರಿಗಳಿಗೆ (ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳಿಗೆ, ಸಿಬ್ಬಂದಿ ವರ್ಗಗಳಿಗೆ ನಡತೆ ನೀತಿ ಸಂಹಿತೆ ರಚಿಸುವುದು.
3. ನಿರ್ದೇಶಕರು ಸಂಘ ಸೇವೆ ಸೌಲಭ್ಯ ಉಪಯೋಗಿಸಿಕೊಂಡಿರುವುದರ ಬಗ್ಗೆ ಟಿಪ್ಪಣಿ
4. ನಿರ್ದೇಶಕರು ಮತ್ತು ಅವರ ನೆಂಟರಿಸ್ಟರಿಗೆ ನೀಡಿರುವ ಸಾಲಗಳು, ಸುಸ್ತಿ, ವಸೂಲಿ ಕ್ರಮಗಳು
5. ನಿರ್ದೇಶಕರು, ಪದಾಧಿಕಾರಿಗಳು ಪಡೆದಿರುವ ಪ್ರವಾಸಭತ್ಯೆ, ದಿನಭತ್ಯೆ, ಸಂಭಾವನೆಗಳು ಇವುಗಳ ಪರಾಮರ್ಶೆ.

ಆಡಳಿತ ಮಂಡಳಿಯೂ ಕೂಡ ತನ್ನ ಜವಾಬ್ದಾರಿಯನ್ನು ಅರಿತು ನಿಷ್ಪಕ್ಷಪಾತದಿಂದ ತಮ್ಮ ಸ್ವಹಿತಾಸಕ್ತಿ, ದುರಾಸೆಗಳನ್ನು ಕೈಬಿಟ್ಟು ಸದಸ್ಯರ ಹಿತಾಸಕ್ತಿಗನುಸಾರ ಪರಿವರ್ತಿಸಿ, ಆಡಳಿತ ಮಂಡಳಿ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಘದ ಸರ್ವತೋಮುಖ ಏಳ್ಗೆಗೆ ಶ್ರಮಿಸಿದಾಗ ವಾರ್ಷಿಕ ಮಹಾಸಭೆಯು ಅರ್ಥಪೂರ್ಣವಾಗಿ ನಡೆದು, ಅದರ ಉದ್ದೇಶ ಸಾಧನೆಯಿಂದ ಪರಿಪೂರ್ಣತೆಯನ್ನು ಪಡೆದಂತಾಗುತ್ತದೆ.

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು

ಒರೆಯಾವಿನ ಬೆನ್ನ ಹರಿಯಲೇಕಯ್ಯ?

ಲಜ್ಜೆಗೆಡಲೇಕೆ? ನಾಣುಗೆಡಲೇಕೆ?

ಕೂಡಲಸಂಗಮದೇವನುಳ್ಳನ್ನಕ್ಕ

ಬಿಜ್ಜಳನ ಭಂಡಾರವೆನಗೇಕಯ್ಯಾ – ಬಸವಣ್ಣ

************************************************************************************************

# 37. ಆಡಳತ ಮಂಡಲಿ ಸರ್ವ ಸದಸ್ಯರ ಸಭೆಗೆ ಉತ್ತರದಾಯಿ ಸದಸ್ಯರಿಗೆ ಅವಕಾಶ

ಭಾರತ ಸಂವಿಧಾನದ ಆಶಯ ಭಾರತ ಸರ್ವ ಜನಾಂಗದ ಶಾಂತಿಯ ತೋಟವಾಗಿ ರೂಪುಗೊಳ್ಳುವಂತಾಗಬೇಕು. ಈ ಆಶಯ ಈಡೇರಲು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಫಲ ಸರ್ವರಿಗೂ ದೊರೆಯಬೇಕು. ಈ ಪರಿವರ್ತನೆಗೆ ತಕ್ಕ ರಹದಾರಿ ಸಹಕಾರಿ ಆಂದೋಲನ. ಭಾರತದಂತಹ ವೈವಿಧ್ಯಮಯ ಸಮಾಜದಲ್ಲಿ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ನ್ಯಾಯ ದೊರೆಯಬೇಕೆಂಬುದಾದರೆ, ಅದು ಸಹಕಾರ ಚಳವಳಿಯಿಂದ ಮಾತ್ರ ಸಾಧ್ಯ. ಇದಕ್ಕೆ ಸಹಕಾರ ತತ್ವಗಳೇ ಬುನಾದಿ. ಅವುಗಳಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣ ಅಥವಾ ಆಡಳಿತ ಎಂಬ ತತ್ವ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ ಎಂದರೆ, ಸಂಶಯವಿಲ್ಲ. ಸಹಕಾರ ಸಂಘಗಳು ಸಣ್ಣ ಸಂಸ್ಥೆಗಳಿಂದ ಬೃಹತ್ ಸಂಸ್ಥೆಗಳವರೆಗೆ ಮತ್ತು ಸಂಸ್ಥೆಗಳದೇ ಆದ ಶೃಂಗ ವ್ಯವಸ್ಥೆಯನ್ನು ಹೊಂದಿದೆ. ಇದರಿಂದಾಗಿ ಸದಸ್ಯರಲ್ಲಿ ವಿಭಿನ್ನತೆ ಎದ್ದು ಕಾಣುತ್ತದೆ. ಈ ವಿಭಿನ್ನತೆ ನಿವಾರಣೆಯಲ್ಲಿ ಸಂಘದ ಉದ್ದೇಶಗಳ, ಸದಸ್ಯರ ಆಸೆ, ನಿರೀಕ್ಷೆ, ಆಕಾಂಕ್ಷೆಗಳ, ಅವಶ್ಯಕತೆಗಳ ಈಡೇರಿಕೆಯಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣ ವ್ಯವಸ್ಥೆ ಅತಿ ಮುಖ್ಯ ಪಾತ್ರ ನಿರ್ವಹಿಸುತ್ತದೆ. 97ನೇ ಸಂವಿಧಾನದ ತಿದ್ದುಪಡಿಯ ಆಶಯವೂ ಅನುಚ್ಛೇದ 43(ಬಿ)ಯಲ್ಲಿ ಇದನ್ನು ವ್ಯಕ್ತಪಡಿಸಲಾಗಿದೆ.

ಸಹಕಾರ ಸಂಘದ ಚಲನೆಯಲ್ಲಿ ಸದಸ್ಯರ ಪಾತ್ರ ಅತಿ ಪ್ರಮುಖವಾದುದು. 97ನೇ ಸಂವಿಧಾನ ತಿದ್ದುಪಡಿಯ ಆಶಯವು ಇದೇ ಆಗಿರುತ್ತದೆ. ಸಹಕಾರ ಸಂಘಗಳು ಸದಸ್ಯ ಚಾಲಿತ ಸಹಕಾರ ಸಂಘಗಳಾಗಿ ರೂಪುಗೊಳ್ಳಬೇಕು. ಪ್ರಜಾಸತ್ತಾತ್ಮಕವಾಗಿ ಚುನಾಯಿತ ಆಡಳಿತ ಮಂಡಳಿಯು ಸದಸ್ಯರಿಗೆ ಹೊಣೆಗಾರರು. ಚುನಾಯಿತ ಆಡಳಿತ ಮಂಡಳಿಯು ಸದಸ್ಯರ ಹಿತಾಸಕ್ತಿ ಕಾಪಾಡಲು ನಿರೀಕ್ಷೆಗಳ, ಅಪೇಕ್ಷೆಗಳ, ಆಕಾಂಕ್ಷೆಗಳ, ಅವಶ್ಯಕತೆಗಳ ಪೂರೈಕೆಗೆ ಬದ್ಧರಾಗಿರಬೇಕು. ಆ ಬದ್ಧತೆಯ ಬಗ್ಗೆ ಪರಿಶೀಲನೆಗೆ ಸದಸ್ಯರಿಗೆ ಇರುವ ಅವಕಾಶವೇ "ಸಾಮಾನ್ಯ ಸಭೆ".

ಸಹಕಾರ ಸಂಘದಲ್ಲಿ ಸಹಕಾರ ಸಂಘದ ಸದಸ್ಯರೇ ಅದರ ಯಜಮಾನರು. ಅವರೇ ಅದರ ಗ್ರಾಹಕರೂ ಕೂಡ. ಇದು ಈ ವ್ಯವಸ್ಥೆಯ ವೈಶಿಷ್ಟ್ಯತೆ. ಹೀಗಾಗಿ ಸಹಕಾರ ಸಂಘದ ಆಗುಹೋಗುಗಳಿಗೆ ಅವರೇ ಜವಾಬ್ದಾರರು. ಈ ಸಂಸ್ಥೆ ನಮ್ಮದು. ಸದಸ್ಯರಾಗಿ ಈ ನಮ್ಮ ಸಂಸ್ಥೆಯಲ್ಲಿ ನಮ್ಮ ಜವಾಬ್ದಾರಿಕೆಯನ್ನು ನಾವು ಸರಿಯಾಗಿ ನಿಭಾಯಿಸಿದ್ದೇವೆಯೇ ಎಂಬ ಆತ್ಮ ವಿಶ್ಲೇಷಣೆ ಇಂದಿನ ಅವಶ್ಯಕತೆ. ಪ್ರತಿ ಸದಸ್ಯರು ತಮ್ಮ ಹೊಣೆಗಾರಿಕೆ ಹಾಗೂ ಜವಾಬ್ದಾರಿಯನ್ನು ಪೂರೈಸಿದ್ದಲ್ಲಿ ಸಹಕಾರ ಸಂಘದ ಯಶಸ್ವಿ ಕಾರ್ಯಾಚರಣೆ ಸಾಧ್ಯ. ಅನೇಕ ಯಶಸ್ವಿ ಸಹಕಾರ ಸಂಘಗಳ ಗುಟ್ಟು ಇದೆ ಆಗಿರುತ್ತದೆ ಎಂಬುದು ಅನುಭವ ವೇದ್ಯ. ಇದರಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆ ಅತಿ ಪ್ರಮುಖ ಎಂಬ ಅಂಶವನ್ನು ಪ್ರತಿ ಸದಸ್ಯರು ಅರಿಯಬೇಕು ಮತ್ತು ಅದರಂತೆ ನಡೆಯಬೇಕಾಗುತ್ತದೆ. ಕೇವಲ ಸದಸ್ಯರ ಸಂಖ್ಯೆ ಹೆಚ್ಚಿದ್ದು, ಪಾಲ್ಗೊಳ್ಳುವ ಸದಸ್ಯರ ಸಂಖ್ಯೆ ಕಡಿಮೆ

ಇದ್ದಲ್ಲಿ ಸಹಕಾರ ಸಂಘವು ಯಶಸ್ವೀ ಸಹಕಾರ ಸಂಘ ಎಂದೆನಿಸಿಕೊಳ್ಳಲು ಸಾಧ್ಯವಿಲ್ಲ. ಸದಸ್ಯರ ಪಾಲ್ಗೊಳ್ಳುವಿಕೆ ಒಂದೆಡೆ ಅದರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು, ಅದರ ಸೇವೆ ಮತ್ತು ಸೌಲಭ್ಯಗಳನ್ನು ಪಡೆಯುವುದಾಗಿದೆ. ಇನ್ನೊಂದೆಡೆ ಅದರ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳುವುದೆಂದರೆ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡಿ ಯೋಗ್ಯ ನಿರ್ದೇಶಕರನ್ನು ಆಯ್ಕೆ ಮಾಡುವುದು ಸಾಮಾನ್ಯ ಸಭೆ ಅಥವಾ ಸರ್ವ ಸದಸ್ಯರ ಸಭೆ, ವಾರ್ಷಿಕ ಮಹಾಸಭೆ, ವಿಶೇಷ ಮಹಾಸಭೆಗಳಲ್ಲಿ ಪಾಲ್ಗೊಂಡು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಭಾಗಿಯಾಗುವುದು, ಸಂಘದ ಕಾರ್ಯಾಚರಣೆಗಳನ್ನು ಪರಾಮರ್ಶಿಸುವುದು, ಸಂಘದ ಕಾರ್ಯಾಚರಣೆಯ ಭವಿಷ್ಯದ ಬಗ್ಗೆ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುವುದೇ ಆಗಿದೆ. ಇದಕ್ಕೆ ಸದಾವಕಾಶ ಸಾಮಾನ್ಯ ಸಭೆ. ಸಾಮಾನ್ಯ ಸಭೆಯಲ್ಲಿ ಭಾಗವಹಿಸದಿದ್ದಲ್ಲಿ ತಾವು ಎಲ್ಲಾ ಅವಕಾಶದಿಂದ ವಂಚಿತರಾಗುತ್ತಿದ್ದೀರಿ ಎಂಬ ಅರಿವು ಪ್ರತೀ ಸದಸ್ಯನಲ್ಲಿ ಇರಬೇಕಾದುದು ಅತ್ಯಂತ ಅವಶ್ಯಕ.

ಸಹಕಾರ ಸಂಘದ ಕಾರ್ಯಚರಣೆಯಲ್ಲಿ "ಸಾಮಾನ್ಯ ನಿಕಾಯ" (General Body) ಅತಿ ಪ್ರಮುಖ ಅಂಗ. ಅಂತಿಮ ಅಧಿಕಾರ ಅದರಲ್ಲಿ ನಿಹಿತವಾಗಿರುತ್ತದೆ. ಸಹಕಾರ ಸಂಘದ ಆಗುಹೋಗುಗಳಿಗೆ ಅದೆ ಜವಾಬ್ದಾರಿಯಾಗುತ್ತದೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯಿದೆ ಕಲಂ 26ರಲ್ಲಿ ಈ ಅಂಶವನ್ನು ಹೇಳಲಾಗಿದೆ. ಸಾಮಾನ್ಯ ನಿಕಾಯವು ಸಹಕಾರ ತತ್ವ, ಸಹಕಾರ ಸಂಘದ ನ್ಯಾಯಯುತ ವ್ಯವಹಾರ, ಸಹಕಾರ ಕಾಯಿದೆ ಕಾನೂನಿನ ಉಪನಿಯಮಗಳಿಗೆ ಒಳಪಟ್ಟು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ನಿರ್ಧಾರಗಳು ಬಹುಮತದ ನಿರ್ಧಾರಗಳಾಗಿರಬೇಕು.

ಇತ್ತೀಚಿನ ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ ಸಹಕಾರ ಸಂಘಗಳ ಕಾಯಿದೆ ಕಾನೂನಿನಲ್ಲಿ ಆಗಿರುವ ತಿದ್ದುಪಡಿಗಳು ಮೇಲಿನ ಆಶಯಗಳ ಪೂರೈಕೆಗಳಿಗೆ ಪೂರಕವಾಗಿ ರೂಪುಗೊಂಡಿವೆ. ಸಹಕಾರ ಸಂಘಗಳಲ್ಲಿ ವಾರ್ಷಿಕ ಮಹಾಸಭೆಯು ಕಡ್ಡಾಯವಾಗಿ ಸೆಪ್ಟೆಂಬರ್ 25ರೊಳಗೆ ಜರುಗಬೇಕು. (ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ27) ವಾರ್ಷಿಕ ಮಹಾಸಭೆಯು ಸಶಕ್ತವಾಗುವಂತೆ ಅದರಲ್ಲಿ ಚರ್ಚಿಸಿ, ನಿರ್ಣಯಿಸಬೇಕಾಗಿರುವ ಕಾರ್ಯಕ್ರಮಗಳ ವಿಷಯಗಳ ಪಟ್ಟಿಯನ್ನು ವಿಸ್ತೃತಗೊಳಿಸಲಾಗಿದೆ. ಅಲ್ಲದೆ, ಮಹಾಸಭೆಯಲ್ಲಿ ವಿಷಯಗಳಿಗೆ ಸಂಬಂಧಪಟ್ಟಂತೆ ಮತದಾನದ ಪ್ರಶ್ನೆ ಬಂದಲ್ಲಿ ಕನಿಷ್ಠ ಹಾಜರಾತಿಗೆ ಮತದಾನದ ಹಕ್ಕುಲ್ಲೇ ಸದಸ್ಯರು ಮಾತ್ರ ಲೆಕ್ಕಕ್ಕೆ ಬರುತ್ತಾರೆ ಎಂಬುದು ಗುರುತರ ವಿಷಯವಾಗಿದೆ. ಈಗ ಉದ್ಭವವಾಗುವ ಪ್ರಶ್ನೆ ಮತದಾನ ಹಕ್ಕುಳ್ಳ ಸದಸ್ಯರು ಯಾರು? ಕಳೆದ 5 ಮಹಾಸಭೆಗಳಲ್ಲಿ ಕನಿಷ್ಠ 3 ಮಹಾಸಭೆಗಳಲ್ಲಿ ಭಾಗವಹಿಸಿದವರು ಮತ್ತು ಸತತ ಮೂರು ವರ್ಷಗಳಲ್ಲಿ ಉಪನಿಯಮಗಳಲ್ಲಿರುವಂತೆ ಕನಿಷ್ಠ ಸೇವೆ ಮತ್ತು ಸೌಲಭ್ಯವನ್ನು ಬಳಸಿಕೊಂಡಿರುವವರು (ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ27) ಕೋರಂ ಮತದಾನದ ಹಕ್ಕುಳ್ಳ ಸದಸ್ಯರ ಶೇಕಡಾ 10 ಅಥವಾ 1000 ಯಾವುದು ಕಡಿಮೆಯೋ ಅದು. (ನಿಯಮ 14) ಆದ್ದರಿಂದ ಸದಸ್ಯರು ಮತದಾನದ ಹಕ್ಕು ಪಡೆಯಲು ಸಂಘಕ್ಕೆ ತಮ್ಮ ಬಾಧ್ಯತೆಗಳೇನಾದರೂ ಇದ್ದಲ್ಲಿ ಅದನ್ನು ತೀರುವಳಿ ಮಾಡುವುದು. ತೀರುವಳಿ ಮಾಡದಿದ್ದಲ್ಲಿ ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. (ಕಲಂ 19) ಕಳೆದ 5 ಸಾಮಾನ್ಯ ಸಭೆಗಳಲ್ಲಿ ಕನಿಷ್ಠ 3ರಲ್ಲಿ ಭಾಗವಹಿಸಿರಬೇಕು. ಉಪನಿಯಮಗಳಂತೆ ಕನಿಷ್ಠ ಈ ಸೇವಾ ಸೌಲಭ್ಯಗಳನ್ನು ಬಳಸಿಕೊಂಡಿರಬೇಕು. ಇಲ್ಲದಿದ್ದಲ್ಲಿ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಆದುದ್ದರಿಂದ ಸದಸ್ಯರು ಸಕ್ರಿಯ ಸದಸ್ಯರಾಗಲು ಈ ಅರ್ಹತೆಗಳನ್ನು ಹೊಂದಬೇಕು. ಈ ದೃಷ್ಟಿಯಿಂದಲೂ ಸದಸ್ಯರು ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ಅತಿ ಮಹತ್ವದ ಪಾತ್ರ. ಸಂಘದ ಕಾರ್ಯಾಚರಣೆಯಲ್ಲಿ ಇದು ಅತೀ ಮಹತ್ವದ ಪಾತ್ರ ನಿರ್ವಹಿಸುತ್ತದೆ.

ಸದಸ್ಯರು ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಮುನ್ನ ಪೂರ್ವಭಾವಿ ತಯಾರಿ ಅತ್ಯಗತ್ಯ. ಮಹಾಸಭೆಯ ಕಾರ್ಯಸೂಚಿಯನ್ನು ಅಭ್ಯಸಿಸಿರಬೇಕು. ಕಾರ್ಯಸೂಚಿಯಲ್ಲಿ ವಿಷಯಗಳ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 27ರಲ್ಲಿ ವಿವರಿಸಲಾಗಿದೆ. ವಿಷಯಗಳ ಬಗ್ಗೆ ಆಡಳಿತ ಮಂಡಳಿಯು ತನ್ನ ವರದಿಯಲ್ಲಿ

ನೀಡಿರುತ್ತದೆ. ಆ ಮಹಾಸಭೆ ನಡೆಸುವ ಜವಾಬ್ದಾರಿಯು ಆಡಳಿತ ಮಂಡಳಿಯದ್ದಾಗಿರುತ್ತದೆ. ಕಳೆದ ವರ್ಷದ ಚಟುವಟಿಕೆ, ಆರ್ಥಿಕ ತಃಖ್ತೆಗಳು, ಲೆಕ್ಕಪರಿಶೋಧನಾ ವರದಿ, ಅದಕ್ಕೆ ಅನುಪಾಲನೆ ಇವುಗಳಲ್ಲದೆ, ಪರಿವೀಕ್ಷಣೆ ವಿಚಾರಗಳಾಗಿದ್ದಲ್ಲಿ ಆ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು, ಆಡಳಿತ ಮಂಡಳಿ ಸದಸ್ಯರಿಗೆ ಉತ್ತರದಾಯಿತ್ವ ಹೊಂದಿರುತ್ತದೆ ಎಂಬುದಕ್ಕೆ ಅನ್ವಯವಾಗುವಂತೆ ನಿರ್ದೇಶಕರು ಪಡೆದಿರುವ ಪ್ರವಾಸ ಭತ್ಯೆ, ದಿನ ಭತ್ಯೆ ಇತರೆ ಖರ್ಚುಗಳು, ನಿರ್ದೇಶಕರಿಗೆ, ಸದಸ್ಯರಿಗೆ ನೀತಿ ಸಂಹಿತೆ ರೂಪಿಸುವುದು ಇಂತಹ ವಿಷಯಗಳನ್ನು ಅಡಕಗೊಂಡಿರುತ್ತದೆ. ಸದಸ್ಯರು ಪೂರ್ವಭಾವಿಯಾಗಿ ಅರಿತು ಸೂಚನೆಯನ್ವಯ ಮೊದಲೆ ಪ್ರಶ್ನೆಗಳನ್ನು ಸ್ಪಷ್ಟೀಕರಣಗಳನ್ನು ಆಡಳಿತ ಮಂಡಳಿಗೆ ಕೇಳಿದ್ದಲ್ಲಿ ನಿಖರ ಉತ್ತರ ಸ್ಪಷ್ಟೀಕರಣ ಪಡೆಯಲು ಸಾಧ್ಯ. ಪ್ರಜ್ಞಾವಂತ ಸದಸ್ಯರು ಭಾಗವಹಿಸಿದ್ದಲ್ಲಿ ಆಡಳಿತ ಮಂಡಳಿಯು ಅದಕ್ಕೆ ತಕ್ಕನಾಗಿ ಸ್ಪಂದಿಸುತ್ತದೆ. ಸಂಘದ ಕಾರ್ಯಾಚರಣೆಯನ್ನು ಜವಾಬ್ದಾರಿಯುತವಾಗಿ ಯಶಸ್ವಿಯಾಗಿ, ನಡೆಸುತ್ತದೆ. ಪ್ರಜ್ಞಾವಂತ ಸದಸ್ಯರಿಲ್ಲದಿದ್ದಲ್ಲಿ ಆಡಳಿತ ಮಂಡಳಿಯು ತನ್ನ ಕರ್ತವ್ಯದಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಸಹಕಾರಿ ಸಂಘದ ಯಶಸ್ವೀ ಕಾರ್ಯಾಚರಣೆಯಲ್ಲಿ ಜವಾಬ್ದಾರಿಯುತ ಸಾಮಾನ್ಯ ನಿಕಾಯದ ಪಾತ್ರ ಬಹಳ ಹೆಚ್ಚಿನದು ಎಂಬುದನ್ನು ಸದಸ್ಯರು ಮನಗಾಣಬೇಕಾಗಿರುವುದು ಈ ದಿನದ ಅವಶ್ಯಕ.

ಸದಸ್ಯರು ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸುವುದು ಕ್ರಿಯಾತ್ಮಕವಾಗಿ ವಿಶ್ಲೇಷಿಸುವುದು, ಸಲಹೆ ಸೂಚನೆಗಳನ್ನು ನೀಡುವುದರಿಂದ ಆಡಳಿತ ಮಂಡಳಿಗೆ ತನ್ನ ಕರ್ತವ್ಯ ನಿರ್ವಹಿಸಲು ಸಹಕರಿಸಿದಂತಾಗುತ್ತದೆ. ಮೇಲಾಗಿ ಆಡಳಿತ ಮಂಡಳಿಯು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಾಮಾನ್ಯ ನಿಕಾಯವು ಅನುಮೋದಿಸಿ ತನ್ನ ಬೆಂಬಲ ನೀಡಿದಂತಾಗುತ್ತದೆ. ಸದಸ್ಯರು ಸಾಮಾನ್ಯ ಸಭೆಗೆ ಹಾಜರಾಗುವುದು ತಮ್ಮ ಕರ್ತವ್ಯವೆಂದೆ ಭಾವಿಸಬೇಕು.

****************************************************************************************************

# 38. ಸಹಕಾರ ಸಂಘಗಳು, ವರ್ಷಾಂತ್ಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು

ಸಹಕಾರ ಸಂಘಗಳಿಗೆ ಮಾರ್ಚ್ ತಿಂಗಳು ತನ್ನ ಆರ್ಥಿಕ ವರ್ಷ(ಸಹಕಾರ ವರ್ಷ)ದ ಅಂತಿಮ ತಿಂಗಳು. ಈ ತಿಂಗಳು ಕಳೆಯುತ್ತಿದ್ದಂತೆ ಆರ್ಥಿಕ ವರ್ಷ ಮುಗಿಯುತ್ತದೆ. ಆರ್ಥಿಕ ವರ್ಷ ಮುಗಿಯುವ ಮುನ್ನ ತನ್ನ ಆರ್ಥಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತುತನ್ನ ಸದಸ್ಯರಿಗೆ ತನ್ನ ಕಾರ್ಯಚರಣೆ ಬಗ್ಗೆ ತಿಳಿಸಲು ಸಂತಸವಾಗುವಂತಾಗಲು ಕೆಲವು ಕ್ರಮಗಳನ್ನು ಈಗಲೇ ಕೈಗೊಳ್ಳಬೇಕು. ಅವುಗಳ ಅವಲೋಕನ ಕೈಗೊಂಡು ಸಕಾಲದಲ್ಲಿ ಚಿಕಿತ್ಸಾ ಕ್ರಮ ಕೈಗೊಂಡರೆ ಮಾತ್ರ ಸಾಧ್ಯ.

**1. ಸಾಲ ವಸೂಲಾತಿ:** ಪತ್ತಿನ ಚಟುವಟಿಕೆಯುಳ್ಳ ಸಹಕಾರ ಸಂಘಗಳಲ್ಲಿ ತಮ್ಮ 'ಆಸ್ತಿ ಜವಾಬ್ದಾರಿ' ತಃಖ್ತೆಯಲ್ಲಿನ ಪ್ರಮುಖ ಆಸ್ತಿ. ಸಾಲಗಳು ಮತ್ತು ಮುಂಗಡಗಳು, ಇದರ ಆರೋಗ್ಯ ಅತ್ಯಂತ ಮಹತ್ವಪೂರ್ಣವಾದದ್ದು. ಇದರ ಷೆಡ್ಯೂಲ್, ಕುಳುವಾರು ಬಾಕಿ ಪಟ್ಟಿಯ ಪರಿಶೀಲನೆ ಅತ್ಯಂತ ಅವಶ್ಯಕ, ಸದರಿ ಷೆಡ್ಯೂಲ್ ಗೂ ಆಸ್ತಿ ಜವಾಬ್ದಾರಿ ತಖ್ತೆಯಲ್ಲಿನ ಮೊತ್ತಕ್ಕೂ ತಾಳೆಯಾಗಬೇಕು. ವ್ಯತ್ಯಾಸಗಳಿದ್ದಲ್ಲಿ ಅದಕ್ಕೆ ಕಾರಣವನ್ನು ಕಂಡು ಹಿಡಿಯ ಬೇಕು. ಅನೇಕವೇಳೆ 'ಬೇನಾಮಿ ಸಾಲಗಳು' ದುರುಪಯೋಗಗಳು, ದುರ್ವಿನಿಯೋಗಗಳು ಇದರಲ್ಲಿ ಹುದುಗಿರುತ್ತವೆ. ಅಮಾನತ್(suspense) ಅಮಾನತ್ ಆಗಿ ಉಳಿಯ ಬಾರದು. ಸದರಿ ಆಸ್ತಿಯ ವಿಂಗಡನೆ ಬಹಳ ಮುಖ್ಯ. ವಿಂಗಡನೆ ಮಾಡುವ ಮುನ್ನ ಸಾಲದ ಬೇಡಿಕೆ ವಸೂಲಿ ಬಾಕಿ ಪರಿಶೀಲನೆ ಬಹಳ ಮುಖ್ಯ. ಸಕಾಲದಲ್ಲಿ ಸಾಲ ವಸೂಲಿಯಾಗುತ್ತಿದ್ದಲ್ಲಿ, ಗಡುವು ಮೀರದಿದ್ದಲ್ಲಿ, ಸುಸ್ತಿಯಾಗದಿದ್ದಲ್ಲಿ ಯಾವುದೇ ಕ್ರಮದ ಅಗತ್ಯವಿಲ್ಲ. ಆದರೆ ವಸೂಲಾತಿಯಾದ ಬಡ್ಡಿ, ಮೊತ್ತ ಮತ್ತು ದರದ ಪರಿಶೀಲನೆ

ಅಗತ್ಯ. ಇದರಿಂದ ಸೋರಿಕೆ ತಡೆಗಟ್ಟಬಹುದು.

ಒಂದು ಸಮಯ ತಪ್ಪು ಸಂಭವಿಸಿದ್ದಲ್ಲಿ ಸರಿಪಡಿಸಲು ಇದು ಸೂಕ್ತಸಮಯ. ಸುಸ್ತಿಯಾಗಿದ್ದಲ್ಲಿ ತಿಳುವಳಿಕೆ ನೋಟಿಸು ನೀಡುವ ಮೂಲಕ ಮುಂದಿನ ವಸೂಲಿ ಕ್ರಮಗಳನ್ನು ಕೈಗೊಂಡಲ್ಲಿ ಮೊತ್ತ ವಸೂಲಿಯಾದಲ್ಲಿ ಬಡ್ಡಿ ಆದಾಯ ಈ ವರ್ಷದ ಆರ್ಥಿಕ ವರ್ಷಕ್ಕೆ ಬರುತ್ತದೆ. ಸುಸ್ತಿ ಸಾಲಗಳ ಮೇಲೆ ವಸೂಲಿ ಕ್ರಮಗಳನ್ನು ಕೈಗೊಳ್ಳುವುದರಿಂದ ಅಧಿಕ ಬಡ್ಡಿ ಆದಾಯಕ್ಕೆ ಅವಕಾಶವಾಗುತ್ತದೆ. ಸಾಲಗಳು ವಸೂಲಾತಿಯಾಗದಿದ್ದಲ್ಲಿ ಸಂಘದ ಆಸ್ತಿ ಜವಾಬ್ದಾರಿ ತಖ್ತೆಯ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತವೆ. ಉತ್ತಮ ಗುಣಮಟ್ಟದ ಆಸ್ತಿಯು ಕಡಿಮೆ ಗುಣಮಟ್ಟಕ್ಕೂ, ಕಡಿಮೆ ಗುಣಮಟ್ಟದ ಆಸ್ತಿಯು ಅನುಮಾನಸ್ಪದ ಆಸ್ತಿಗೆ ಜಾರುತ್ತದೆ. ಅದರಲ್ಲಿ ಅನುಮಾನಸ್ಪದ (ಡಿ.1) 1 ಇದ್ದದ್ದು 2 (ಡಿ.2) ಮತ್ತು 3 (ಡಿ.3) ಕ್ಕೆ ಜಾರುತ್ತದೆ. ಇದರಿಂದ ಅಂತಿಮ ಲೆಕ್ಕ ತಯಾರಿಸುವಾಗ ಲಾಭ ನಷ್ಟ ತಃಖ್ತೆಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಬೇಕಾಗುತ್ತದೆ. ಇದರಿಂದ ನಿವ್ವಳ ಲಾಭವು ಕಡಿಮೆಯಾಗುತ್ತದೆ. ಅಥವಾ ನಿವ್ವಳ ನಷ್ಟದಲ್ಲಿದ್ದಲ್ಲಿ ನಿವ್ವಳ ನಷ್ಟ ಮತ್ತಷ್ಟು ಹೆಚ್ಚಾಗುತ್ತದೆ. ಆಸ್ತಿಯ ಕಳಪೆ ಮಟ್ಟ ಹೆಚ್ಚುವುದರಿಂದ ಅದರ ಮೇಲಿನ ತೊಡಕುತೂಕ (Risk weight) ಅಧಿಕಗೊಳ್ಳುತ್ತದೆ. ಇದರಿಂದ ಸಮರ್ಪಕ ಬಂಡವಾಳ (ತೊಡಕು ತೂಕ ಸಹಿತ ಆಸ್ತಿಗೆ ಸ್ವಂತ ಬಂಡವಾಳದ ಅನುಪಾತ) (CRAR - capital adequacy) ಕಡಿಮೆಯಾಗುತ್ತದೆ. ಇದರಿಂದ ತಾನು ಸಾಲ ತರುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸಹಕಾರ ಸಂಸ್ಥೆಗಳಲ್ಲಿ ಇದುಕನಿಷ್ಠ ಶೇ.9 ಇರಬೇಕು ಎಂದು ನಿರೀಕ್ಷಿಸಲಾಗಿದೆ.

ಮತ್ತೊಂದು ಗಮನಕ್ಕೆ ತೆಗೆದುಕೊಳ್ಳಬೇಕಾದ ಅಂಶವೆಂದರೆ, ಮಾರ್ಚ್ ಅಂತ್ಯಕ್ಕೆ ಠೇವಣಿಗಳ ಮೇಲೆ ಮತ್ತು ಪಡೆದ ಸಾಲಗಳ ಮೇಲೆ ಬಡ್ಡಿ ಪಾವತಿಸಬೇಕಾಗುತ್ತದೆ. ಒಂದು ಸಮಯ ಪಾವತಿಸದಿದ್ದರೂ ಅದಕ್ಕೆ ಲಾಭ ನಷ್ಟ ಖಾತೆಯಲ್ಲಿ ಅವಕಾಶ ಕಲ್ಪಿಸಲೇ ಬೇಕು. ಇದರಿಂದ ನಿಧಿಗಳ ಮೇಲಿನ ವೆಚ್ಚ ಅಧಿಕ ಗೊಳ್ಳುತ್ತದೆ ಮತ್ತು ಆಸ್ತಿಯ ಮೇಲಿನ ಗಳಿಕೆ ಕಡಿಮೆಯಾಗಿ ಅಂತರವು ಕುಗ್ಗುತ್ತದೆ. ಸಂಘವು ನಷ್ಟವನ್ನು ಅನುಭವಿಸುತ್ತದೆ. ಆದುದರಿಂದ ವಿಳಂಬವಿಲ್ಲದೇ ಸುಸ್ತಿ ಸಾಲಗಳ ಮತ್ತು ದುಡಿಯಲಾರದ ಆಸ್ತಿ (ಎನ್.ಪಿ.ಎ) ಆಸ್ತಿಗಳನ್ನು ಪ್ರತಿ ಲೆಕ್ಕವಾರು ಪರಿಶೀಲಿಸಿ ಪ್ರತಿ ಸಾಲಗಾರ ಮೇಲೆ ತುರ್ತು ಕ್ರಮಕೈಗೊಂಡು ಬಡ್ಡಿ ಸಹಿತಸಾಲವನ್ನು ವಸೂಲಿ ಮಾಡಬೇಕು. ಆಸ್ತಿಯ ಗುಣಮಟ್ಟ ಏರುಗತಿಯಲ್ಲಿರಬೇಕು ವಿನಃ ಕೆಳಗೆ ಇಳಿಯುವಂತಾಗಬಾರದು.

**2) ಹೂಡಿಕೆಗಳು:** ಹೂಡಿಕೆಗಳ ಲೇಖನ ಪತ್ರಗಳು, ದೃಢೀಕರಣಗಳು, ಇವುಗಳ ಪರಿಶೀಲನೆ. ಇವುಗಳು ಸಂಘದಲ್ಲಿ ಇದಕ್ಕಾಗಿ ಇರಿಸಿರುವ ರಿಜಿಸ್ಟರ್‌ನಲ್ಲಿ ದಾಖಲಾಗಿವೆ ಎಂಬುದನ್ನು ಖಾತ್ರಿ ಗೊಳಿಸಿಕೊಳ್ಳಬೇಕು. ಇವುಗಳ ಮೇಲೆ ಬರಬೇಕಾಗಿರುವ ಬಡ್ಡಿ, ಡಿವಿಡೆಂಡ್, ಇವುಗಳು ಮಾರ್ಚ್ ಅಂತ್ಯದೊಳಗೆ ಜಮೆ ಆಗುವಂತೆ ನೋಡಿಕೊಳ್ಳುವುದು. ಅದಕ್ಕೆ ಬೇಕಾದ ಪತ್ರ ವ್ಯವಹಾರ, ತಿಳುವಳಿಕೆ ನೀಡುವ ಕ್ರಮಗಳನ್ನು ಕೈಗೊಳ್ಳುವುದು.ಸಹಕಾರ ಸಂಘಗಳಲ್ಲಿ ಕ್ರೋಢೀಕೃತ ಬಡ್ಡಿ (accrued intrest), ಆದಾಯವನ್ನು ಆದಾಯವೆಂದು ಪರಿಗಣಿಸಲು ಬರುವುದಿಲ್ಲ. ಆ ವರ್ಷದಲ್ಲಿ ಜಮೆ ಆದ ಆದಾಯವನ್ನು ಮಾತ್ರ ಲಾಭಕ್ಕೆ ತೆಗೆದುಕೊಳ್ಳಬಹುದು.

**3) ಚರ ಸ್ಥಿರ** ಆಸ್ತಿಗಳು ಮತ್ತು ನಿಧಿಯೇತರ ಆದಾಯ ಮೂಲಗಳು: ನಿಧಿಯೇತರ ವ್ಯವಹಾರಗಳನ್ನು ಮಾಡುತ್ತಿದ್ದಲ್ಲಿ ಒಂದು ಸಮಯ ಬರಬೇಕಾಗಿದ್ದ ಬಾಡಿಗೆಗಳು, ಏಜೆನ್ಸಿಕಮಿಷನ್ ಮುಂತಾದ ಆದಾಯಗಳನ್ನು ಸಂಬಂಧಿಸಿದವರನ್ನು ಸಂಪರ್ಕಿಸಿ ಅವುಗಳನ್ನು ಸಂದಾಯ ಮಾಡಿಸಿಕೊಳ್ಳತಕ್ಕದ್ದು, ಯಾವುದೇ ಕಾರಣಕ್ಕೆ ಬಾಕಿ ಉಳಿಯದಂತೆ ನೋಡಿಕೊಳ್ಳುವುದು. ಖರೀದಿ ಮಾರಾಟ, ಗೊಬ್ಬರ, ಬಿತ್ತನೆ ಬೀಜ, ಔಷಧ, ಕೀಟನಾಶಕಗಳು ಇತರೆ; ಬಟ್ಟೆ, ದಿನಪಯೋಗಿ ವಸ್ತುಗಳು, ಪಡಿತರ, ಕಿರಾಣಿ, ಇತರೆ, ವಸ್ತುಗಳ ದಾಸ್ತಾನನ್ನು ನಿಖರವಾಗಿ ಪರಿಶೀಲಿಸುವದು. ಪುಸ್ತಕದಲ್ಲಿನ ದಾಸ್ತಾನು ಮತ್ತು ನೈಜ ದಾಸ್ತಾನು ತಾಳೆಯಾಗತಕ್ಕದ್ದು. ಹಾಳಾದ, ಬಿಕರಿಯಾಗದ ದಾಸ್ತಾನುಗಳನ್ನು ನಷ್ಟವೆಂದು ಪರಿಗಣಿಸಲು ಅಗತ್ಯಕ್ರಮ ಕೈಗೊಳ್ಳಬೇಕು,

ಖರೀದಿ ದರವನ್ನು ಅಗತ್ಯತೆಗನುಸಾರ ಸವಕಳಿಯನ್ನು ತೆಗೆದು ವ್ಯಾಪಾರ ತಃಖ್ತೆ ತಯಾರಿಸುವುದು. ನಷ್ಟ, ಸೋರಿಕೆ, ದುರುಪಯೋಗಗಳಾಗಿದ್ದಲ್ಲಿ ವಸೂಲಿ ಕ್ರಮ ಮಾರ್ಚ್ ಒಳಗೆ ಕೈಗೊಳ್ಳುವುದು. ಇದರಿಂದ ನಿಖರವಾದ ವ್ಯಾಪಾರ ಲಾಭವನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ಇತರೆ ಚರ ಸ್ಥಿರ ಆಸ್ತಿಗಳ ಮೇಲೆ ಅದರ ಜೈವಿತಾಧಾರದ ಮೇಲೆ ಲಾಭ ನಷ್ಟ ತಃಖ್ತೆಯಲ್ಲಿ 'ಸವಕಳಿ' (depriciation) ತೆಗೆಯಬೇಕು. ಇದರಿಂದ ಆಸ್ತಿ – ಜವಾಬ್ದಾರಿ ತಃಖ್ತೆಯಲ್ಲಿ ನೈಜ ನಿವ್ವಳ ಲಾಭ ಪ್ರತಿಬಿಂಬಿಸಿದಂತಾಗುತ್ತದೆ.

**4) ಷೇರು ಬಂಡವಾಳ:** ಪತ್ತಿನ ಸಹಕಾರ ಸಂಘಗಳಲ್ಲಿ ಬಂಡವಾಳ ವೃದ್ಧಿಗಾಗಿ ಸಹಕಾರ ಸಂಘಗಳಲ್ಲಿ ನೀಡಿದ ಸಾಲದ ಶೇ. 5–10 ರಷ್ಟು ಹೆಚ್ಚುವರಿ ಷೇರು ಸಂಗ್ರಹಣೆ ರೂಢಿಯಲ್ಲಿದೆ. ಮಾರ್ಚ್ ಮಾಹೆಯಲ್ಲಿ ಸಾಲ ತೀರುವಳಿಯಾಗುವಾಗ ಹೆಚ್ಚುವರಿ ಷೇರನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಇದರಿಂದ ಪಾವತಿಯಾದ ಷೇರು ಬಂಡವಾಳ ತಗ್ಗುತ್ತದೆ. ಆದಷ್ಟೂ ಆ ಷೇರನ್ನು ಸಂಘದಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸುವುದು. ಸಾಲ ನವೀಕರಿಸುವುದು ಅಥವಾ ನೂತನ ಸಾಲಗಳನ್ನು ವಿತರಿಸುವುದರಿಂದ ಹೆಚ್ಚುವರಿ ಷೇರುಸಂಗ್ರಹಣೆ ಸಾಧ್ಯವಾಗುತ್ತದೆ. ಪಾವತಿಸಿದ ಷೇರು ಬಂಡವಾಳ 'ಸ್ವಂತ ನಿಧಿ'ಯ ಭಾಗವಾಗುವುದರಿಂದ ಇದರ ಹೆಚ್ಚಳದಿಂದ (ಸಿ.ಆರ್.ಎ.ಆರ್.)ಸಮರ್ಪಕ ಬಂಡವಾಳ ಹೊಂದಲು ಸಾಧ್ಯವಾಗುತ್ತದೆ.

**5) ನಿಧಿಗಳು:** ಕಾಯ್ದಿರಿಸಿದ (ಮೀಸಲು) ನಿಧಿಗಳು ಸಮರ್ಪಕ ಬಂಡವಾಳದ ಭಾಗವಾಗುತ್ತದೆ. ಇವುಗಳನ್ನು ಬೇರೆ ಉದ್ದೇಶಗಳಿಗೆ ಬಳಸದೆ ಪ್ರತ್ಯೇಕ ಹೂಡಿಕೆ ಮಾಡುವುದರಿಂದ ಋಣಭಾರವಿಲ್ಲದ ನಿಧಿಗಳ ಕಾಪಾಡುವಿಕೆಯಿಂದ ಸಮರ್ಪಕ ಬಂಡವಾಳದ ಹೆಚ್ಚಳಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಆಪದ್ಧನ ನಿಧಿಗಳನ್ನು ಇತರೆ ಉದ್ದೇಶಗಳಿಗೆ ಬಳಸಬಾರದು.

**6) ಠೇವಣಿಗಳು:** ಠೇವಣಿಗಳ ಮೇಲೆಬಡ್ಡಿ ಪಾವತಿಸುವುದಿದ್ದರೆ ಪಾವತಿಸುವುದು. ಒಂದು ಸಮಯ ಪಾವತಿಸಲಾಗದಿದ್ದಲ್ಲಿ ಅವಕಾಶವನ್ನು ಕಲ್ಪಿಸಬೇಕು. ಇದರಿಂದ ನೈಜ ಖರ್ಚು, ನೈಜ ವೆಚ್ಚದ ಅರಿವಾಗುತ್ತದೆ. ನೈಜ ನಿವ್ವಳ ಲಾಭ ಪ್ರತಿ ಬಿಂಬವಾಗುತ್ತದೆ.

**7) ಪಡೆದ ಸಾಲಗಳು:** ಪಡೆದ ಸಾಲದ ಮೇಲಿನ ಬಡ್ಡಿ ಪಾವತಿಸುವುದು. ಪಾವತಿಸುವುದು ಇಲ್ಲದಿದ್ದಲ್ಲಿ ಪಾವತಿಸುವ ಬಗ್ಗೆಅವಕಾಶ ಕಲ್ಪಿಸಬೇಕು. ಇದರಿಂದ ನೈಜ ನಿವ್ವಳ ಲಾಭ ಪ್ರತಿಬಿಂಬಿಸಲಾಗುತ್ತದೆ.

ಈ ಮೇಲಿನ ಅಂಶಗಳನ್ನು 'ಮಾರ್ಚ್' ಆರ್ಥಿಕ ವರ್ಷದ ಕಡೆಯ ಮಾಸದಲ್ಲಿ ಕೈಗೊಂಡರೆ ಮತ್ತು ಮಾರ್ಚ್ ಆದ ನಂತರ 'ಅಂತಿಮ ಲೆಕ್ಕ'ಗಳನ್ನು ಅಂತಿಮಗೊಳಿಸಲು ಸಾಧ್ಯವಾಗುತ್ತದೆ. ಸಹಕಾರ ಸಂಘಗಳು ಗಣಕೀಕರಣವಾಗಿರುವುದರಿಂದ ಅಂದಿನ ಲೆಕ್ಕಗಳು ಅಂದಿಗೆ ಅಂತ್ಯವಾಗುತ್ತವೆ. ಆದುದರಿಂದ ಆರ್ಥಿಕ ವರ್ಷದ ಕೊನೆಯ ಮಾಸವಾದ 'ಮಾರ್ಚ್' ಮಾಸ ಅತ್ಯಂತ ಪ್ರಮುಖ ಮಾಸವಾಗುತ್ತದೆ. ಕಾಲ ಕಳೆದವನ್ನು ಹಿಂತಿರುಗಿ ಪಡೆಯಲಾಗುವುದಿಲ್ಲ ಎಂಬ ಅರಿವಿನ ನಂತರ ಅರಿಯುವ ಬದಲಿಗೆ ಮುಂಚೆಯೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಸಂಘದ 'ಆರೋಗ್ಯ ಕರ' ಆಸ್ತಿ ಜವಾಬ್ದಾರಿ ತಃಖ್ತೆ ನಿರ್ಮಾಣ ಸಾಧ್ಯ. ಇದರಿಂದ ಸದಸ್ಯರಿಗೆ ಸಂಘದ ನೈಜ ಆರ್ಥಿಕ ಚಿತ್ರಣ ಒದಗಿಸುವುದಲ್ಲದೆ ನೈಜ'ಲಾಭಾಂಶ' ವಿತರಿಸಬಹುದು. ಸಹಕಾರ ಸಂಘವನ್ನು ದೀರ್ಘಾವಧಿಯಲ್ಲಿ ಪೋಷಿಸಬಹುದು.

**ನೈತಿಕ ಪ್ರವೃತ್ತಿ ಎಷ್ಟು ಉನ್ನತವಾಗಿರುತ್ತದೋ ಉನ್ನತಿಯೂ ಅಷ್ಟೇ ಎತ್ತರದ್ದಾಗಿರುತ್ತದೆ.**

**– ಸ್ವಾಮಿ ವಿವೇಕಾನಂದ**

**************************************************************************************

# 39. ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ – ಪ್ರಾಮುಖ್ಯತೆ

ಸಹಕಾರ ಸಂಘ/ಸಹಕಾರಿಗಳು ಅರ್ಥಿಕ ವರ್ಷ ಮುಗಿದ ಒಂದು ತಿಂಗಳು (ಏಪ್ರಿಲ್) ಒಳಗೆ ತನ್ನ ಅಂತಿಮ ಲೆಕ್ಕಗಳನ್ನು ಸಿದ್ಧಪಡಿಸತಕ್ಕದ್ದು, ಶಾಸನಬದ್ಧ ಅಗತ್ಯತೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63, ಸಹಕಾರ ಸಂಘಗಳ ನಿಯಮ 60ರ ಸಂ.29. ರಿಂದ 30ಎ ಮತ್ತು ಸಹಕಾರ ಸಂಘಗಳ ಅಧಿನಿಯಮ 1997 2004 ಸಂ.8 ರಿಂದ 10 ರವರೆಗೆ ಲೆಕ್ಕಪರಿಶೋಧನೆ ಮತ್ತು ವಿಧಿ ವಿಧಾನಗಳ ಬಗ್ಗೆ ತಿಳಿಯಪಡಿಸಲಾಗಿದೆ. ಇದು ಸಹಕಾರ ಸಂಸ್ಥೆಗಳ ಆಸ್ತಿಗಳ ಪರಿಶೀಲನೆಯನ್ನೂ ಒಳಗೊಂಡಿರುತ್ತದೆ. ಇದಕ್ಕೆ ಸಹಕಾರ ಬ್ಯಾಂಕ್‌ಗಳು ಹೊರತಾಗಿರುವುದಿಲ್ಲ. ಇತ್ತೀಚೆಗೆ ಸಹಕಾರ ಬ್ಯಾಂಕ್‌ಗಳಲ್ಲಿ ಆದ ಅನಾಹುತಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿಗೆ ಕಾರಣವಾಗಿ ನಿಯಂತ್ರಣ ಬ್ಯಾಂಕ್ ಆದ ರಿಸರ್ವ್ ಬ್ಯಾಂಕ್ ಹೆಚ್ಚು ನಿಯಂತ್ರಣಗಳನ್ನು ಹೊರಿಸಲು ಸಾಧ್ಯವಾಗಿದೆ. ಈಗ ರಿಸರ್ವ್ ಬ್ಯಾಂಕ್ ಲೆಕ್ಕಪರಿಶೋಧನೆಗೂ ಕೆಲವು ಮಾನದಂಡಗಳನ್ನು ವಿಧಿಸಿರುತ್ತದೆ. (ಎಕನಾಮಿಕ್ ಟೈಮ್ಸ್‌ನ ವರದಿ ದಿನಾಂಕ : 28–4–2021) ಲೆಕ್ಕಪರಿಶೋಧಕರ ನೇಮಕಾತಿಗೆ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಅಗತ್ಯ. ಆಸ್ತಿಯ ಗಾತ್ರ ರೂ. 15,000 ಕೋಟಿ ಮೀರಿದ್ದಲ್ಲಿ ಎರಡು ಲೆಕ್ಕಪರಿಶೋಧಕರು (ಕಂಪನಿ)ಗಳು ಜಂಟಿಯಾಗಿ ಲೆಕ್ಕಪರಿಶೋಧನೆ ನಡೆಸುವುದು ಅಗತ್ಯವಾಗುತ್ತದೆ.

ಇದರ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಅತಿಯಾದ ನಿಯಂತ್ರಣಕ್ಕೆ ಒಳಪಡಲು ಕಾರಣಗಳೇನು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಥೆಗಳ ಚುಕ್ಕಾಣಿ ಹಿಡಿದಿರುವ ಆಡಳಿತ ಮಂಡಳಿಯ ವೈಫಲ್ಯ. ಆಡಳಿತ ಮಂಡಳಿ ತಮ್ಮ ಸಂಸ್ಥೆಯ ಆಗುಹೋಗುಗಳ ಬಗ್ಗೆ ಅಗತ್ಯ ಹಿಮ್ಮಾಹಿತಿ ಪಡೆಯದಿರುವುದು. ಸಕಾಲಿಕ ನಿರ್ಧಾರಗಳು, ಅಗತ್ಯ ಚಿಕಿತ್ಸಕ ಕ್ರಮಗಳನ್ನು ಕೈಗೊಳ್ಳದೇ ಇರುವುದು ಕಾರಣವಾಗಿರುತ್ತದೆ. ಕೆಲವು ಬಾರಿ 'ಬೇಲಿಯೇ ಎದ್ದು ಹೊಲ ಮೇಯುವ' ಪರಿಸ್ಥಿತಿಯಾಗಿರುತ್ತದೆ. ಈ 'ಪರಿಸ್ಥಿತಿ'ಯು 'ಪರಿವೀಕ್ಷಣೆ'ಯಲ್ಲಾಗಲಿ 'ಲೆಕ್ಕಪರಿಶೋಧನೆ'ಯಲ್ಲಾಗಲಿ ಪ್ರತಿಫಲನಗೊಳ್ಳದೇ ಇರುವುದಕ್ಕೆ ಕಾರಣವಾದರೂ ಏನು? ಇದು 'ಅಗೋಚರ' ಪರಿಸ್ಥಿತಿಯಲ್ಲಿ ಹುದುಗಿದ್ದು, 'ಗೋಚರ'ವಾಗುವುದಾದರೂ ಯಾವಾಗ ಮತ್ತು ಹೇಗೆ? ಎಂಬುದನ್ನು ಪರಿಶೀಲಿಸಬೇಕಾಗಿದೆ.

ವ್ಯವಹಾರದ ಗಾತ್ರ ಅಧಿಕವಿದ್ದು, ಲಾಭಗಳಿಕೆ ಕಡಿಮೆ ಇರುವುದು, ಲಾಭ ಗಳಿಸಿದ್ದರೂ ತನ್ನ ಜವಾಬ್ದಾರಿಗಳನ್ನು ತೀರಿಸುವಲ್ಲಿ ಸಂಕಷ್ಟ ಎದುರಿಸುತ್ತಿರುವುದು 'ಡಿವಿಡೆಂಡ್' ಹಂಚಿಕೆ ಮಾಡಲಾಗದಿರುವುದು ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸಲು ಸಾಧ್ಯವಾಗದಿರುವುದು, ಸಾಲಗಾರರಿಗೆ ಸಾಲ ಮರುಪಾವತಿಸಲು ಸಾಧ್ಯವಾಗದಿರುವುದು ವ್ಯವಹಾರಕ್ಕೆ ಬಂಡವಾಳದ ಕೊರತೆಯಾದಾಗ ಇಂತಹ ವಿಷಮ ಪರಿಸ್ಥಿತಿಗಳಲ್ಲಿ ಸಂಸ್ಥೆಯಲ್ಲಿ 'ಏನೋ, ಎಲ್ಲಿಯೋ ಲೋಪವಾಗಿದೆ' ಎಂಬುದು ಗೋಚರವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅಂತಿಮ ಲೆಕ್ಕಗಳ ತಯಾರಿಕೆಯಲ್ಲಿ ತಾಳ ಮೇಳವಿಲ್ಲದಾಗಲೂ ಗೋಚರವಾಗುತ್ತದೆ. ಬಹಳಷ್ಟು ಪ್ರಸಂಗಗಳಲ್ಲಿ 'ಕೊಟ್ಟವನು ಕೋಡಂಗಿ ಈಸಿಕೊಂಡವನು ಈರಭದ್ರ' ಆಗುತ್ತಾನೆ. ಅಲ್ಲದೆ 'ಹುಚ್ಚು ಮುಂಡೆ ಮದುವೇಲಿ ಉಂಡೋನೆ ಜಾಣ' ಎಂಬ ಗಾದೆಗಳು ಸಾರ್ಥಕತೆಯನ್ನು ಪಡೆಯುತ್ತವೆ. ಇದಕ್ಕೆ ಪರಿಹಾರವಾದರೂ ಏನು?

ಇದಕ್ಕೆ ಪರಿಹಾರವೇ 'ಪರಿವೀಕ್ಷಣೆ' ಮತ್ತು 'ಲೆಕ್ಕಪರಿಶೋಧನೆ'. ಅದರಲ್ಲಿಯೂ ಈ ಎರಡು ಕ್ರಿಯೆಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ 'ಆಸ್ತಿಗಳ ಪರಿಶೀಲನೆ ಕಾರ್ಯ'.

ಸಹಕಾರ ಸಂಸ್ಥೆಯ ಸಂಪನ್ಮೂಲಗಳು ಅದರ ಪಾವತಿಯಾದ ಷೇರುಬಂಡವಾಳ, ಕ್ರೋಢೀಕೃತ ನಿಧಿಗಳು,

ಠೇವಣಾತಿಗಳು, ಪಡೆದ ಸಾಲಗಳು, ಹಂಚಿಕೆಯಾಗದ ಲಾಭಗಳು, ದೇಣಿಗೆಗಳು, ಕೊಡುಗೆಗಳು ಆಗಿರುತ್ತವೆ. ಇವುಗಳನ್ನು ತನ್ನ ಆಸ್ತಿಯಲ್ಲಿ (ಜಿಂದಗಿ ತೊಡಗಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ಹೂಡಿಕೆಗಳು, ಸಾಲಗಳು ಮತ್ತು ಮುಂಗಡಗಳು, ಚರ ಮತ್ತು ಸ್ತಿರ ಆಸ್ತಿಗಳು. ಈ ಆಸ್ತಿಗಳ ನೈಜ, ನಿಖರ ಪರಿಶೀಲನೆ ಆದಲ್ಲಿ ಸಂಪನ್ಮೂಲಗಳು (ಜವಾಬ್ದಾರಿಗಳು, ಸಾಲ) ಎಲ್ಲಿ, ಹೇಗೆ ತೊಡಗಿಸಲಾಗಿದೆ ಎಂಬುದು ಕಂಡುಬರುತ್ತದೆ. ನಗದು ಪರಿಶೀಲನೆ ನಡೆಸಿ, ನಗದು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕಿನಲ್ಲಿನ ಶಿಲ್ಕು ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಖಚಿತ ಪಡಿಸಿಕೊಳ್ಳಬೇಕು. ಹೂಡಿಕೆಗಳ ಬಗ್ಗೆ ಇರುವ ದಾಖಲಾತಿಗಳು, ದೃಢೀಕರಣಗಳು ರಕ್ಷಣೆಗಳ ಸಂಬಂಧಿಸಿದ ಸಂಸ್ಥೆಗಳಿಂದ ಇವುಗಳ ಅಸಲಿಯತ್ತಿನ ಬಗ್ಗೆ ಖಚಿತಗೊಳಿಸಬೇಕು, ತಃಖ್ತೆಯಲ್ಲಿನ ಮೊತ್ತಕ್ಕೂ ದಾಖಲಾತಿಯಲ್ಲಿನ ಮೊತ್ತಕ್ಕೂ ತಾಳೆ ಇರಬೇಕಾಗುತ್ತದೆ. ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

ಪತ್ತಿನ ಸಹಕಾರ ಸಂಸ್ಥೆಗಳು, ಪತ್ತು ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳು, ಸಹಕಾರ ಬ್ಯಾಂಕ್‌ಗಳು ಇವುಗಳಲ್ಲಿ ಅವರ ಪ್ರಮುಖ ಆಸ್ತಿಯೇ 'ಸಾಲಗಳು ಮತ್ತು ಮುಂಗಡಗಳು'. ಇದರ ವಾಸ್ತವತೆ ಮತ್ತು ಆರೋಗ್ಯವೇ ಸಂಸ್ಥೆಯ ಆಗುಹೋಗುಗಳಿಗೆ ಕಾರಣವಾಗಿರುತ್ತದೆ. ಇದರ ಸವಿವರವಾದ ಪರಿಶಿಷ್ಟ (ಷಡ್ಯೂಲ್) ನಿಖರವಾಗಿ ಪ್ರಕರಣಾವಾರು (ಕೇಸ್ ಬೈ ಕೇಸ್ ಸ್ಟಡಿ, ಅನಾಲಿಸಿಸ್) ವಿಶ್ಲೇಷಣೆ ಮಾಡಲೇಬೇಕಾಗಿರುತ್ತದೆ. ದಾಖಲೆಗಳ ಪರಿಶೀಲನೆಯಲ್ಲದೆ ಸಾಲಗಾರರ ಪರಿಶೀಲನೆ ಅವರು ಒದಗಿಸಿರುವ ರಕ್ಷಣಾತ್ಮಕ ಆಸ್ತಿಗಳ ಬೌಧಿಕ ಪರಿಶೀಲನೆ ಅತಿ ಅಗತ್ಯ. ಸಹಕಾರ ಸಂಸ್ಥೆಗಳಲ್ಲಿ ಅವರು ರಚಿಸಿಕೊಂಡಿರುವ ಸಾಲ ನೀತಿ, ನಿಯಮಗಳು ಅವುಗಳ ಉಲ್ಲಂಘನೆ, ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡಗಳು ಉದಾ: ವಲಯಾವಾರು ತೊಡಗಿಸುವಿಕೆ Exposure norms) ಸಾಲ ಗರಿಷ್ಠ ಮಿತಿ ಎಡರು ತೊಡಕುಗಳು Tricks) ಇವೂಗಳ ನೈಜ, ನಿಖರ ನಿಷ್ಪೂರವಾದ ಪರಿಶೀಲನೆ ಅಗತ್ಯ. ಇದೇ ರೀತಿಯಲ್ಲಿ 'ಖರೀದಿ ಮಾರಾಟ' 'ರೂಪಾಂತರ/ ಸಂಸ್ಕರಣೆ' ಸಹಕಾರ ಸಂಸ್ಥೆಗಳಲ್ಲಿ ಅಖೈರು ದಾಸ್ತಾನಿನ ವಾಸ್ತವ ಪರಿಸ್ಥಿತಿ ಬೌಧಿಕ ಪರಿಶೀಲನೆ ಅತಿ ಅಗತ್ಯ ಇತರೆ ಚರ ಮತ್ತು ಸ್ಥಿರಾಸ್ತಿಗಳು, ಅವುಗಳ ಸಂಬಂಧಿಸಿದ ದಾಖಲಾತಿಗಳು, ಕಡತಗಳು, ರಿಜಿಸ್ಟರ್‌ಗಳು ಮತ್ತು ಅವುಗಳ ಬೌಧಿಕ ಪರಿಶೀಲನೆ ಬಹು ಮುಖ್ಯ. ಈ ಪರಿಶೀಲನೆಗಳಲ್ಲಿ ವಿಫಲವಾಗಿರುವುದು 'ಹತ್ತಿಕೊಂಡು ಉರಿದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಪರಿಸ್ಥಿತಿಗೆ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಪರಿಸ್ಥಿತಿ ಕೈಮೀರಿ ಸರಿಪಡಿಸಲಾರದ ಮಟ್ಟವನ್ನು ಮುಟ್ಟಿರುತ್ತೇವೆ. ಹೀಗಾಗಿ ಅನೇಕ ವೇಳೆ ಪರಿವೀಕ್ಷಣೆ, ಲೆಕ್ಕಪರಿಶೋಧನೆ ಕ್ರಮಗಳು 'ಶವ ಪರೀಕ್ಷೆ' ಯಾಗುತ್ತದೆ ವಿನಃ ಸದಸ್ಯರ, ಸಾರ್ವಜನಿಕರ ಹಿತಾಸಕ್ತಿ, ನಿರೀಕ್ಷೆ, ಆಸೆ ಆಕಾಕ್ಷೆ. ಅಗತ್ಯತೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ.

ಅನೇಕ ಸೋರಿಕೆಗಳು, ದುರುಪಯೋಗಗಳು ದುರ್ವಿನ ಯೋಗಗಳು, ಮಿಥ್ಯ ಆಸ್ತಿಗಳು, ನಷ್ಟಗಳು ಆಸ್ತಿ ತಖ್ತೆಯಲ್ಲಿ ಆಸ್ತಿಯಾಗಿ ಹುದುಗಿರುತ್ತವೆ. ಇವುಗಳು 'ಕನ್ನಡಿಯೊಳಗಿನ ಗಂಟು', 'ಬ್ಯಾಂಕ್‌ಗಳಲ್ಲಿ ಆಸ್ತಿ ವರ್ಗೀಕರಣದಲ್ಲಿ ಆಗುತ್ತಿರುವ ಅಗಾದವಾದ ವ್ಯತ್ಯಾಸಗಳು ಮತ್ತು ತಪ್ಪು ದಾರಿಗೆ ಕಾರಣವಾಗಿರುವ ಲೆಕ್ಕ ತಃಖ್ತೆಗಳ'ನ್ನು ತಡೆಯಲು ಬಿಗಿ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗಿರುತ್ತದೆ. (ಎಕನಮಿಕ್ ಟೈಮ್ಸ್ ವರದಿ ದಿನಾಂಕ : 28–4– 2021) ಎಂದು ರಿಸರ್ವ್ ಬ್ಯಾಂಕ್ ತಿಳಿಸಿರುತ್ತದೆ. ಈ ಅಕ್ರಮಗಳು "ಆತ್ಮ ವಂಚನೆ" ಯಲ್ಲದೇ ಮತ್ತೇನು? ತನ್ನ ಮೇಲೆ ವಿಶ್ವಾಸ ವಿರಿಸಿರುವ ಸದಸ್ಯರಿಗೆ, ಠೇವಣಿದಾರರಿಗೆ ಮೋಸವೆಸಗಿದಂತಾಗಲಿಲ್ಲವೇ? ಸಹಕಾರ ಚಳುವಳಿಗೆ ಇದು ಮಾರಕವಾಗಿ ಪರಿಣಮಿಸುವುದಿಲ್ಲವೇ? ಸಹಕಾರಿಗಳು 'ಆತ್ಮಾವಲೋಕನ' ಮಾಡಿಕೊಳ್ಳಲು ಇದು ಸಕಾಲ.

**********************************************************************************************

# 40. ಕೃಷಿಯೇತರ ಪತ್ತಿನ ಸಹಕಾರ ಸಂಘಗಲ್ಲಿ ಲಾಭಗಳಿಕೆಯ ಮಾರ್ಗೋಪಾಯಗಳು

ಸಹಕಾರ ಸಂಘಗಳು ಸೇವಾ ಸಂಸ್ಥೆಗಳು, ಅವು ಲಾಭಗಳಿಸಬೇಕೇ? ಎಂಬ ಜಿಜ್ಞಾಸೆ ಅನೇಕರನ್ನು ಕಾಡಿದ್ದು ಉಂಟು. ಆದರೆ, ಈಗಿನ ಚಿಂತನೆ 'ಲಾಭಗಳಿಸಲೇಬೇಕು' ಎಂಬುದು ಸ್ಪಟಿಕದಷ್ಟೇ ಸ್ಪಷ್ಟ ಲಾಭ ಏಕೆ ಗಳಿಸಬೇಕು? ಈ ದೃಷ್ಟಿಯಲ್ಲಿ ಆಲೋಚಿಸಿದಾಗ ನಾವು ಮನಗಾಣಬೇಕಾದುದು ಸಹಕಾರಿ ಸಂಘ ಪಪಥಮವಾಗಿ ಒಂದು 'ವ್ಯವಹಾರಿಕ ಸಂಸ್ಥೆ' ಆದರೆ, 'ಸಾಮಾಜಿಕ ಬದ್ಧತೆ' ಅದರ ಅವಿಭಾಜ್ಯ ಅಂಗ, ಹೀಗಾಗಿ 'ಸೇವೆ' ಕೂಡ ಪ್ರಥಮ ಪ್ರಾಶಸ್ತ್ಯವನ್ನು ಪಡೆದಿದೆ. ಆದರೆ, ಲಾಭವಿಲ್ಲದೆ ಸೇವೆ ಮಾಡುವುದಾದರೂ ಹೇಗೆ? ಲಾಭಗಳಿಸಿ ಸಂಘವು ಸುಸ್ಥಿರವಾಗಿ ಉಳಿದರೆ ಮಾತ್ರ ಸೇವೆ ಸಲ್ಲಿಸಬಹುದಾಗಿದೆ. ಲಾಭಗಳಿಸದೆ ನಷ್ಟ ಅನುಭವಿಸಿದರೆ ಸಂಘವೇ ಅಸ್ತಿತ್ವದಲ್ಲಿಲ್ಲದಿದ್ದರೆ ಸೇವೆ ನೀಡುವುದಾದರೂ ಹೇಗೆ? ಲಾಭಗಳಿಸದಲ್ಲಿ ಮಾತ್ರ ಸದಸ್ಯರ ಹೂಡಿಕೆಯಾದ ಷೇರು ಮೊತ್ತಕ್ಕೆ 'ಡಿವಿಡೆಂಡ್' ರೂಪದಲ್ಲಿ ಪ್ರತಿಫಲ ಒದಗಿಸಬಹುದಾಗಿದೆ. ಸದಸ್ಯರ ವಿಶ್ವಾಸಗಳಿಸಬಹುದಾಗಿದೆ. ಸುಸ್ಥಿರ ಬೆಳವಣಿಗೆಯಿಂದ ಸದಸ್ಯರ ಅಗತ್ಯತೆಗಳ, ಆಕಾಂಕ್ಷೆಗಳ ಪೂರೈಕೆ ಮಾಡಬಹುದಾಗಿದೆ. ಸಂಘ ಶಾಶ್ವತವಾಗಿ ನೆಲೆಯೂರಿ ಪೀಳಿಗೆಯಿಂದ ತನ್ನ ಸೇವೆಯನ್ನು ಒದಗಿಸಲು ಸಾಧ್ಯವಾಗುತ್ತದೆ. ಲಾಭ ಆಕಸ್ಮಿಕ ಅಲ್ಲ, ಲಾಭವನ್ನು ಯೋಜನಾತ್ಮಕವಾಗಿ ಗಳಿಸುವ ಅವಶ್ಯಕತೆ ಇದೆ. ಹಾಗಾದರೆ ಲಾಭ ಎಂದರೇನು? ಒಟ್ಟು ಆದಾಯದಲ್ಲಿ ಒಟ್ಟು ಖರ್ಚುಗಳನ್ನು ಕಳೆದರೆ ಮಿಗುವುದೇ ಲಾಭ.. ಅಂದರೆ ಲಾಭಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಖರ್ಚುಗಳನ್ನು ಕಡಿತಗೊಳಿಸಬೇಕು. ಈ ಸೂತ್ರ ಸರಳವಾಗಿ ಮೇಲ್ನೋಟಕ್ಕೆ ಕಂಡರೂ ಅಳವಡಿಸಿಕೊಳ್ಳಲು ಅನುಷ್ಠಾನಕ್ಕೆ ತರಲು ಜಾಣ ತಂತ್ರಗಾರಿಕೆಯ ಆವಶ್ಯಕತೆ ಇದೆ.

ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಆದಾಯದ ಮೂಲ ಯಾವುದು? ನೀಡಿದ ಸಾಲಗಳಿಂದ ಬರುವ ಬಡ್ಡಿ ಹೂಡಿಕೆಗಳಿಂದ ಬರುವ ಬಡ್ಡಿ ಇತರೆ ಸೇವೆಗಳನ್ನು ಸದಸ್ಯರಿಗೆ ಒದಗಿಸುತ್ತಿದ್ದರೆ ಅದರ ಮೇಲೆ ವಿಧಿಸುತ್ತಿರುವ ಶುಲ್ಕ ಅಥವಾ ನಿಧಿಯೇತರ ವ್ಯವಹಾರ ಉದಾಹರಣೆಗೆ ಇ–ಸ್ಟಾಂಪಿಂಗ್‌ನಿಂದ ಗಳಿಸುತ್ತಿರುವ ಕಮಿಷನ್, ಇನ್ನು ಸಂಘವು ಅನುಭವಿಸಬೇಕಾದ ಖರ್ಚು ವೆಚ್ಚಗಳಾವುವು? ಮೊದಲನೆಯದಾಗಿ ಆರ್ಥಿಕ ವೆಚ್ಚಗಳು ಠೇವಣಿಗಳ ಮೇಲಿನ ಬಡ್ಡಿ ಪಡೆದ ಸಾಲಗಳ ಮೇಲಿನ ಬಡ್ಡಿಪಾವತಿ, ಠೇವಣಿಗಳೇ ನಮ್ಮ ಪ್ರಮುಖ ಸಂಪನ್ಮೂಲ, ಠೇವಣಿಗಳಲ್ಲಿ ನಮ್ಮಲ್ಲಿರುವ ಬೇಡಿಕೆ ಠೇವಣಿಗಳಷ್ಟು ಅವಧಿ ಠೇವಣಿಗಳೆಷ್ಟು ಪ್ರಮಾಣದಲ್ಲಿದೆ. ಅವುಗಳ ಮೇಲೆ ಎಷ್ಟು ಬಡ್ಡುಿ ದರ ನೀಡಲು ಸಾಧ್ಯತೆ ಇದೆ? ನೀಡಲು ನಿರ್ಧರಿಸಲಾಗಿದೆ. ಠೇವಣಿ ಆಕರ್ಷಿಸಲು ಹೆಚ್ಚಿನ ಬಡ್ಡಿ ಭರವಸೆ ರೂಢಿಗತವಾಗಿ ಬಂದಿರುವುದನ್ನು ಗಮನಿಸುತ್ತಿದ್ದೇವೆ. ಈ ಬಡ್ಡಿ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿದೆಯೇ? ಕಡಿಮೆ ಬಡ್ಡಿದರದ (ಕಡಿಮೆ ವೆಚ್ಚದ) ಠೇವಣಿ ಮತ್ತು ಅಧಿಕ ಬಡ್ಡಿದರದ (ಹೆಚ್ಚಿನ ವೆಚ್ಚದ ಠೇವಣಿಯ ಅನುಪಾತ ಎಷ್ಟಿದೆ? ಠೇವಣಿ ಮತ್ತು ಸಾಲ ನೀಡುವಿಕೆಯ ಅನುಪಾತ ಎಷ್ಟಿದೆ? ಅವಧಿ ಠೇವಣಿಗಳಲ್ಲಿ ಅಲ್ಪಾವಧಿ ಠೇವಣೆಗಳು ಎಷ್ಟಿವೆ? ದೀರ್ಘಾವಧಿ ಠೇವಣೆಗಳು ಎಷ್ಟಿವೆ? ಯಾವಯಾವ ಕಾಲಕ್ಕೆ ಎಷ್ಟು ಎಷ್ಟೆಷ್ಟು ಫಲಭರಿತವಾಗಿ ಹಿಂದಿರುಗಿಸಬೇಕಾಗುತ್ತದೆ. ಅದಕ್ಕೆ ನಗದು ಒಳಹರಿವಿನ ಮಾರ್ಗಗಳಾವುವು? ಠೇವಣೆಗಳನ್ನು ನವೀಕರಿಸಲು ಸಾಧ್ಯತೆಗಳಿವೆಯೇ? ಹೊಸ ಠೇವಣಿಗಳನ್ನು ಕ್ರೂಢೀಕರಿಸಲು ಹಾಕಿಕೊಂಡಿರುವ ಕಾರ್ಯತಂತ್ರಗಳಾವುವು? ಠೇವಣೆಗಳನ್ನು ಸಕಾಲದಲ್ಲಿ ಹಿಂತಿರುಗಿಸಿದಾಗ ಮಾತ್ರ ಠೇವಣಿದಾರರ ವಿಶ್ವಾಸಗಳಿಸಲು ಸಾಧ್ಯ ಅದಕ್ಕಾಗಿ ಎಪ್ಪರ ಅನುಪಾತದಲ್ಲಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದೆ. ಎಷ್ಟು ಪ್ರಮಾಣದಲ್ಲಿ ನಗದು । ಬ್ಯಾಂಕ್ ಶಿಲ್ಕು ಇರಿಸಲಾಗಿದೆ. ಬ್ಯಾಂಕ್‌ನಲ್ಲಿ ಬೇಡಿಕೆಯ ಕಾಲಬದ್ಧ ಜವಾಬ್ದಾರಿ ಅನ್ವಯ ಶೇ.25–27 ರವರೆಗೆ ಮತ್ತು ಶೇ. 3–4 ರವರೆಗೆ ನಗದು / ಬ್ಯಾಂಕ್ ಶಿಲ್ಕು ಎಸ್.ಎಲ್.ಆರ್. ಶಾಸನ ಬದ್ಧ ದ್ರವ್ಯ ಆಸ್ತಿ ನಿರ್ವಹಣೆ ಮತ್ತು ಆಪತ್ತು ನಗದು ನಿರ್ವಹಣೆ ಮಾಡಲಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ಸಂಘದಲ್ಲೂ ನಿರ್ವಹಣೆ ಮಾಡಲು ಸಾಧ್ಯವೇ? ಠೇವಣಿಗಳ

ಮೇಲಿನ ಬಡ್ಡಿ ಒಪ್ಪಿಕೊಂಡಂತೆ ಪಾವತಿಸುವುದಲ್ಲದೇ ಆರ್ಥಿಕ ವರ್ಷದ ಅಂತ್ಯದಲ್ಲಿ ನೀಡಬೇಕಾಗಿರುವ ಬಡ್ಡಿಗೆ ಆಸ್ತಿ–ಜವಾಬ್ದಾರಿ ತಖ್ತೆಯಲ್ಲಿ ಅವಕಾಶ ಕಲ್ಪಿಸಬೇಕು ಅದರಂತೆ ಸಂಪನ್ಮೂಲವಾಗಿ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್ ಅಥವಾ ಯಾವುದೇ ಪಟ್ಟಣ ಬ್ಯಾಂಕ್ ಅಥವಾ ಇತರೆ ಯಾವುದೇ ಮೂಲದಿಂದ ನಗದು ಪತ್ತಿನ ಸಾಲ ಅಥವಾ ಪಡೆದ ಸಾಲವನ್ನು ಒಪ್ಪಿಕೊಂಡ ಷರತ್ತುಗಳನ್ವಯ ಮರುಪಾವತಿಸುವ ಬದ್ಧತೆ ತೋರಬೇಕಾಗುತ್ತದೆ. ತಪ್ಪಿದಲ್ಲಿ ಸುಸ್ತಿಯಾಗಿ ಸುಸ್ತಿಬಡ್ಡಿ ಸಹಿತ ಮರು ಪಾವತಿಸಬೇಕಾಗುತ್ತದೆ. ಆರ್ಥಿಕ ವರ್ಷದ ಅಂತ್ಯಕ್ಕೆ ಪಾವತಿಸಬೇಕಾಗಿರುವ ಬಡ್ಡಿಗೆ ಆಸ್ತಿ ಜವಾಬ್ದಾರಿ ತಟ್ಟೆಯಲ್ಲಿ ಅವಕಾಶ ಕಲ್ಪಿಸಬೇಕಾಗುತ್ತದೆ. ಈ ಎಚ್ಚರಗಳನ್ನು ಆರ್ಥಿಕ ವೆಚ್ಚಗಳಲ್ಲಿ ಪರಿಪಾಲಿಸಬೇಕಾದ್ದು ಅತ್ಯಗತ್ಯ ಈ ವೆಚ್ಚಗಳನ್ನು ತಗ್ಗಿಸಲು ಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಅದರಂತೆ ವರ್ತಿಸುವುದರಿಂದ ವೆಚ್ಚ ತಗ್ಗಿಸಲು ಸಾಧ್ಯ. ಮತ್ತೊಂದು ವೆಚ್ಚ ವಹಿವಾಟಿನ ವೆಚ್ಚ ಅಥವಾ ವ್ಯವಸ್ಥಾಪನ ವೆಚ್ಚ ಇವುಗಳು ಸಂಘ ನಡೆಸುವಾಗ ಅತ್ಯಗತ್ಯ. ಇವುಗಳನ್ನು ಕಡಿತಗೊಳಿಸುವುದು ಕಷ್ಟಕರ ಆದರೂ ಅನಗತ್ಯ ವೆಚ್ಚಗಳನ್ನು ಮಾತ್ರ ತಗ್ಗಿಸಬಹುದು. ಈ ವೆಚ್ಚಗಳ ಸರಿದೂಗುವಿಕೆಗಾಗಿ ವ್ಯವಹಾರಗಳನ್ನು ಹೆಚ್ಚಿಸುವುದು ಜಾಣೆ. ಅದರ ಬಗ್ಗೆ ಆಲೋಚಿಸಿ ಅದರಂತೆ ಜನಾಬದ್ಧವಾಗಿ ವ್ಯವಹಾರಗಳನ್ನು ವೃದ್ಧಿಸಿಕೊಂಡು ಗಳಿಸುವ ಲಾಭದಲ್ಲಿ ಈ ವೆಚ್ಚಗಳನ್ನು ಭರಿಸಿ ನಿವ್ವಳ ಲಾಭಗಳಿಸಬೇಕು. ಈ ವೆಚ್ಚಗಳು ಪ್ರಮುಖವಾಗಿ ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳಾದ ಆಡಳಿತ ಮಂಡಳಿ ಖರ್ಚುಗಳು, ಪ್ರವಾಸ ಭತ್ಯೆ, ಸ್ಟೇಷನರಿ, ಪ್ರಿಂಟಿಂಗ್ ಕಂಪ್ಯೂಟರ್ ನಿರ್ವಹಣೆ, ವಿದ್ಯುಚ್ಛಕ್ತಿ ಬಾಡಿಗೆ ಹೀಗೆ ಹತ್ತು ಹಲವಾರು ಖರ್ಚುಗಳು ಬರುತ್ತವೆ. ವ್ಯವಹಾರಗಳನ್ನು ನಡೆಸುವಾಗ ಪ್ರತಿಯೊಂದು ವ್ಯವಹಾರಗಳಲ್ಲೂ 'ತೊಡಕು' ಇದ್ದೇ ಇರುತ್ತದೆ. 'ತೊಡಕು' ಇಲ್ಲದೇ ಯಾವುದೇ ವ್ಯವಹಾರ ತೊಡಕು ರಹಿತವಾಗಿ ಸುಲಲಿತವಾಗಿ, ಸುಗಮವಾಗಿ ನಡೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ 'ತೊಡಕಿ'ನ ಅನುಪಾತದಂತೆ ಅದಕ್ಕಾಗಿ ವೆಚ್ಚವೆಂದು ಆಸ್ತಿ ಜವಾಬ್ದಾರಿ ತಖ್ತೆಯಲ್ಲಿ ಕಾದಿರಿಸುವುದು ಮತ್ತು ವೆಚ್ಚ ಲೆಕ್ಕಾಚಾರ ಮಾಡುವಾಗ ಇದನ್ನು ಗಣನೆಗೆ ತೆಗೆದುಕೊಳ್ಳುವುದು ಉತ್ತಮ ಕ್ರಮವಾಗುತ್ತದೆ. ಅಲ್ಲದೆ, ತಮ್ಮ ಆಸ್ತಿಯ ಆರೋಗ್ಯ ಅಥವಾ ಅನಾರೋಗ್ಯ ಅನುಸರಿಸಿ. ಆಸ್ತಿಯನ್ನು ವಿಂಗಡಣೆ ಮಾಡಿ ಅದಕ್ಕೆ ಅನುಸಾರವಾಗಿ ಅದರ ಅನುಪಾತದಂತೆ ಆಸ್ತಿ ಜವಾಬ್ದಾರಿ ತಟ್ಟೆಯಲ್ಲಿ ಅವಕಾಶವನ್ನು ಕಲ್ಪಿಸುವ ಆವಶ್ಯಕತೆ ಇದೆ. ಇದರಿಂದ ಲಾಭ ಕಡಿಮೆ ಎಂದು ಗೋಚರಿಸಿದರೂ ಅವ್ಯಕ್ತ ನಿಧಿಯನ್ನು ಕ್ರೂಡೀಕರಿಸಿದಂತಾಗುತ್ತದೆ ಮತ್ತು ಮುಂದೇ ಸಂಭವನೀಯ ನಷ್ಟವನ್ನು ತಡೆಗಟ್ಟಲು ಸಹಾಯವಾಗುತ್ತದೆ.

ಠೇವಣಿಗಳು, ಪಡೆದ ಸಾಲಗಳಲ್ಲದೆ ಪತ್ತಿನ ಸಹಕಾರ ಸಂಘದಲ್ಲಿ ಲಭ್ಯ ಸಂಪನ್ಮೂಲವೆಂದರೆ ಷೇರು ಬಂಡವಾಳ ಮತ್ತು ನಿಧಿಗಳು, ಷೇರು ಬಂಡವಾಳ ವೆಚ್ಚ ರಹಿತ ಬಂಡವಾಳ ಏಕೆಂದರೆ, ಲಾಭಗಳಿಸಿ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯಿಸಿದಂತೆ ಲಾಭದಿಂದ 'ಡಿವಿಡೆಂಡ್' ವಿತರಿಸಲಾಗುತ್ತದೆ. ಸಹಕಾರಿ ಸಂಘಗಳಲ್ಲಿ ಪದ್ಧತಿಯಾಗಿ ನಡೆದು ಬಂದಿರುವಂತೆ ಬಂಡವಾಳ ಮತ್ತು ಸಾಲ ನೀಡಿಕೆ ಸಾಲ ತರುವಿಕೆಗೆ ಬಾಂಧವ್ಯ ಕಲ್ಪಿಸಲಾಗಿದೆ. ಇದರಿಂದಾಗಿ ಆಗತ್ಯ ಸ್ವಂತ ಬಂಡವಾಳದ ಅನುಪಾತ ಆಧಾರವಾಗಿ ಸಾಲ ನೀಡಿಕೆಯಾಗುತ್ತದೆ ಮತ್ತು ಸಾಲ ತರಲಾಗುತ್ತದೆ. ಆದುದರಿಂದ ಸಾಲ ವಿತರಣೆಯ ಶೇ. ಹತ್ತು ಭಾಗವನ್ನು ಅಧಿಕ (ಹೆಚ್ಚುವರಿಯಾಗಿ) ಷೇರು ಪಡೆಯಲಾಗುತ್ತದೆ. ಇದರಿಂದ ವೆಚ್ಚ ರಹಿತ ಬಂಡವಾಳವನ್ನು ಹೆಚ್ಚಳಗೊಳಿಸಲು ಸಾಧ್ಯವಾಗುತ್ತದೆ.

ನಿಧಿಗಳು (ಆಪದ್ಧನ ನಿಧಿ) ನಮ್ಮ ಲಾಭದಲ್ಲಿ ತೆಗೆದಿರಿಸಿದ ಮೊತ್ತ ಇವು ನಮ್ಮದೇ ದುಡಿಮೆಯಾಗಿ ಉಳಿಸಿರುವುದು. ಇದು ಪೂರ್ಣ ವೆಚ್ಚ ರಹಿತ. ಇದು ನಮ್ಮ ಸ್ವಂತ ಬಂಡವಾಳದ ಭಾಗ. ಇದು ಅದರ ಪ್ರಮುಖ ಭಾಗವಾಗುವ ಅವಶ್ಯಕತೆ ಇದೆ. ಯಾವುದೇ ಯಶಸ್ಸುಗಳಿಸಿದ ಸಹಕಾರ ಸಂಘದ ಗುಟ್ಟು ಇದರಲ್ಲಿ ಅಡಗಿದೆ ಬಂದ ಲಾಭವನ್ನು ಪ್ರತಿಷ್ಠೆಗಾಗಿ ಹರಿದು ಹಂಚದೆ ನಿಧಿಗಳನ್ನು ಸೃಷ್ಟಿ ಮಾಡುವುದು ಮತ್ತು ನಿವ್ವಳ ಲಾಭ ಲೆಕ್ಕಾಚಾರ ಪೂರ್ವದಲ್ಲಿಯೇ ವಿವಿಧ ಉದ್ದೇಶಗಳಿಗೆ

ನಿಧಿಗಳನ್ನು ಸೃಷ್ಟಿ ಮಾಡುವುದು. ಸಂಘದ ಉಪ ನಿಯಮಗಳಲ್ಲಿ ಶೇ.25ಕ್ಕೆ 'ಕಡಿಮೆ ಇಲ್ಲದಂತೆ' ಆಪದ್ಧನ ನಿಧಿಗೆ ನಿವ್ವಳಲಾಭದಲ್ಲಿ ತೆಗೆದಿರಿಸುವುದು ಎಂದಿರುತ್ತದೆ. ಅಂದರೆ ಶೇ.25ಕ್ಕೂ ಮೀರಿ ತೆಗೆದಿರುಸುವಲ್ಲಿ ಯಾವುದೇ ಅಭ್ಯಂತರವಿಲ್ಲ. ಸರ್ವಸದಸ್ಯರ ಸಭೆಯು ಇನ್ನೂ ಹೆಚ್ಚಿನ ಅಂಶ (ಶೇ.35.45) ಆಪದ್ಧನ ತೆಗೆದಿರಿಸುವ ತೀರ್ಮಾನ ತೆಗೆದುಕೊಂಡಲ್ಲಿ ವೆಚ್ಚ ರಹಿತ ಬಂಡವಾಳ ಕ್ರೂಢೀಕರಿಸಲು ಸಾಧ್ಯವಾಗುತ್ತದೆ. ಇದರಿಂದ ಅಗತ್ಯ ಬಂಡವಾಳ(Capital Adequacy) ತೊಡಕು ತೂಕ ಸಹಿತ ಅಸ್ತಿ ಮತ್ತು ಸ್ವಂತ (Capital to Risk Weighted Asset Ratio CRAR) ಕಾಪಾಡುವಲ್ಲಿ ಸಾಧ್ಯವಾಗುತ್ತದೆ. ಪತ್ತಿನ ಸಂಸ್ಥೆಗಳಲ್ಲಿ ಇದು ಶೇ. 9 ಕನಿಷ್ಠ ಇರುವುದನ್ನು ನಿರೀಕ್ಷಿಸಲಾಗಿದೆ.

ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಮುಖ ಆಸ್ತಿ ಎಂದರೆ 'ಪತ್ತು' ಅಥವಾ 'ಸಾಲ' ಇದರ ಆರೋಗ್ಯ ಅನಾರೋಗ್ಯ ಪರಿಸ್ಥಿತಿಯನ್ನು ಲಾಭಗಳಿಸುವಿಕೆ ಅವಲಂಭಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕು ಅತ್ಯಂತ ಕಡಿಮೆ ಅಗತ್ಯತೆಯಷ್ಟು ಹೊಂದಿರಬೇಕು. ಏಕೆಂದರೆ, ಇದರಲ್ಲಿ ಗಳಿಕೆ ಇಲ್ಲ. ಮತ್ತೊಂದು ರೀತಿಯಲ್ಲಿ ವಿಮೆ ಖರ್ಚು ಮತ್ತು ಹೆಚ್ಚಿನ ತೊಡಕು (Risk) ಅಡಗಿರುತ್ತದೆ. ಹೂಡಿಕೆಗಳು ಇಂದಿನ ದಿನಮಾನಗಳಲ್ಲಿ ಹೆಚ್ಚಿನ ಗಳಿಕೆ ತರುವ ಪರಿಸರವಿರುವುದಿಲ್ಲ. ತೊಡಕು ಕೂಡ ಹೆಚ್ಚಿ ಇರುವ ಪರಿಸ್ಥಿತಿ ಇದೆ. ಗಳಿಕೆಗೆ ಅವಲಂಭಿಸಬೇಕಾಗಿರುವುದು ಮತ್ತು ಸಂಘದ ಉದ್ದೇಶವು ಅದೇ ಆಗಿರುವುದು 'ಸಾಲ' ಅಥವಾ 'ಪತ್ತು' ಈ ಆಸ್ತಿಯ ಗುಣಮಟ್ಟ ಉತ್ತಮವಾಗಿರಬೇಕು ಎಂದರೆ ಸಾಲ ವಸೂಲಾತಿ ಎಂಬುದಕ್ಕಿಂತ 'ಸಾಲ ಮರುಪಾವತಿ' ಎಂಬುದು ಹೆಚ್ಚಿನ ಪ್ರಾಶಸ್ತ್ಯ ಪಡೆಯುತ್ತಿದೆ ನೀಡಿದ. ವಿತರಿಸಿದ ಸಾಲ ಬೇಡಿಕೆ ಅನ್ವಯ ಬಡ್ಡಿಸಹಿತ ಹಿಂತಿರುಗಿ ಬಂದಾಗ 'ಗಳಿಕೆ' ಆಸ್ತಿಯ ಮೇಲಿನ ಗಳಿಕೆ ಹೆಚ್ಚಳವಾಗಿರುತ್ತದೆ. ಆಸ್ತಿಯ ಮೇಲಿನಗಳಿಕೆಯಲ್ಲಿ ನಿಧಿಗಳ ಮೇಲಿನ ವೆಚ್ಚ ಕಳೆದರೆ ಉಳಿಯುವುದೇ 'ಅಂತರ', ಅಂತರ (Margin) ಅಧಿಕವಿದ್ದಷ್ಟೂ ಲಾಭಗಳಿಕೆ ಸಾಧ್ಯ ಉತ್ತಮ ಸಾಲ ಮರುಪಾವತಿ ಇದ್ದಲ್ಲಿ ಆಸ್ತಿಯ ಗುಣಮಟ್ಟವಿದ್ದು, ಚಾಲ್ತಿ ಸಾಲವಿದ್ದಲ್ಲಿ ಆಸ್ತಿಯ ವಿಂಗಡಣೆ ಮಾಡಿದಾಗ ಉತ್ತಮ ಗುಣಮಟ್ಟ (Standard Asset) ಆಸ್ತಿ ಹೆಚ್ಚಿದ್ದು, ಕಡಿಮೆ ಗುಣಮಟ್ಟ (Sub Standard) ಅನುಮಾನಾಸ್ಪದ ಗುಣಮಟ್ಟ (Doubtful) ಆಸ್ತಿ ಅದರಲ್ಲಿ ಡಿ.1. ಡಿ2. ಡಿ.3. ಎಂದು ವಿಂಗಡಿಸಿ ಮತ್ತು ವಸೂಲಾತಿಯ ಎಲ್ಲ ಪ್ರಯತ್ನಗಳು ವಿಫಲವಾಗಿ ವಸೂಲಾತಿಯಾಗದ ಆಸ್ತಿ 'ನಷ್ಟದ ಅಸ್ತಿ'ಯಾಗಿ ಪರಿಗಣಿಸಬೇಕಾಗಿದೆ. ಇದರ ಅನುಪಾತವಾಗಿ ಶೇ.2, 10. 20, 30, 40, 100 ರಂತೆ ನಿವ್ವಳ ಲಾಭ ನಿರ್ಣಯ ಪೂರ್ವದಲ್ಲಿ ಲಾಭ ನಷ್ಟ ಖಾತೆಯಲ್ಲಿ ಅಳವಡಿಸಿ ಆಸ್ತಿ ಜವಾಬ್ದಾರಿ ತಖ್ತೆಯಲ್ಲಿ ಅವಕಾಶ (Provisioning) ಕಲ್ಪಿಸತಕ್ಕದ್ದು. ಈ ರೂಡಿ ಕೃಷಿ ಪತ್ತಿನ ಕ್ಷೇತ್ರದಲ್ಲಿ ಈಗಾಗಲೇ ರೂಢಿಗೆ ಬಂದಿರುತ್ತದೆ. ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಈ ಉತ್ತಮ ವಿಧಾನಗಳನ್ನು ಅಳವಡಿಸಿಕೊಳ್ಳುವ ಆಗತ್ಯತೆ ಇದೆ. ಇದರಿಂದ ಸಂಘವು ತನ್ನ ಆಸ್ತಿ ಜವಾಬ್ದಾರಿ ತಖ್ತೆಯ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸದಸ್ಯರ ಮತ್ತು ಠೇವಣಿದಾರರ ಹಿತಾಸಕ್ತಿ ಕಾಪಾಡಲು ಸಾಧ್ಯವಾಗುತ್ತದೆ. ಈ ಮೇಲಿನ ತಂತ್ರಗಾರಿಕೆಯ ಅಳವಡಿಕೆಗಳಿಂದ ಯೋಜನೆ ಬದ್ಧವಾಗಿ ಸದಸ್ಯತ್ವ ಹೆಚ್ಚಳವಾಗುತ್ತದೆ. ಇದರಿಂದ ಷೇರು ಠೇವಣಿ ವೃದ್ಧಿಗೊಳ್ಳುತ್ತದೆ. ಇದರಿಂದ ಅಧಿಕ ವೈವಿಧ್ಯಮಯ ಉತ್ಪನ್ನಗಳುಳ್ಳ ಸಾಲಗಳನ್ನು ನೀಡಬಹುದಾಗಿದೆ ಹೆಚ್ಚುವರಿ ಷೇರು ಸಂಗ್ರಹಿಸಬಹುದು. ಇದರಿಂದ ಹೆಚ್ಚಿನ ಲಾಭಗಳಿಸಿ ಸದಸ್ಯರಿಗೆ ಗುಣಮಟ್ಟದ ಸೇವೆ, ಎಲ್ಲರೀತಿಯ ಸೇವೆ, ವಿವಿಧ ಉತ್ಪನ್ನಗಳ ಲಭ್ಯತೆ ಇರುವಂತೆ ನೋಡಿಕೊಳ್ಳಬಹುದು ಇದರಿಂದ ಪತ್ತಿನ ಕ್ಷೇತ್ರದ ಮಂತ್ರವಾದ 'ಸಾಕಷ್ಟು ಸಾಲ (ಅವಶ್ಯಕತೆಯಷ್ಟು) ಸಕಾಲದಲ್ಲಿ (ಅವಶ್ಯಕತೆ ಇದ್ದಾಗ) ಸಕಲರಿಗೂ (ಅಗತ್ಯತೆ ಇರುವ ಎಲ್ಲರಿಗೂ) ಸಾಲ ಒದಗಿಸಲು ಸಾಧ್ಯವಾಗುತ್ತದೆ. ಆದುದರಿಂದ ಸಂಘಗಳು ಲಾಭಗಳಿಸಲೇಬೇಕು ವಿನಃ ಅನ್ಯಮಾರ್ಗವಿಲ್ಲ ಅಲ್ಲವೇ?

************************************************************************************************

# 41. ಪತ್ತಿನ ಸಹಕಾರ ಸಂಘಗಳು ಮತ್ತು ಆರ್ಥಿಕ ಶಿಸ್ತು ಪಾಲನೆ ಪ್ರಾಮುಖ್ಯತೆ

ಕೃಷಿ ಪತ್ತಿನ ಸಹಕಾರ ಸಂಘಗಳು, ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕ್‌ಗಳು ಸದಸ್ಯರಿಂದ ಮತ್ತು ಬ್ಯಾಂಕ್‌ಗಳು ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುತ್ತಿದ್ದು ಠೇವಣಿದಾರರ ಹಿತಾಸಕ್ತಿ ಕಾಪಾಡುವುದು ಮತ್ತು ಬದ್ಧತೆಯಂತೆ ಠೇವಣಿ ಹಿಂತಿರುಗಿಸುವುದು ಅವುಗಳ ಆದ್ಯಕರ್ತವ್ಯವಾಗಿರುತ್ತದೆ.

ಆರ್ಥಿಕ ವರ್ಷ ಮುಗಿದ ನಂತರದಲ್ಲಿ ಆಸ್ತಿ ಜವಾಬ್ದಾರಿ ತಃಖ್ತೆ ಅಂತಿಮಗೊಳಿಸುವಿಕೆ ಪ್ರಮುಖಘಟ್ಟ. ತಃಖ್ತೆಯು ನೈಜ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದು ಸದಸ್ಯರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಮುಖ್ಯವಾಗಿರುತ್ತದೆ. ಅಲ್ಲದೆ ಸಂಸ್ಥೆಯ ಮುಂದಿನ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ದಿಶೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕ್‌ಗಳಿಗೆ ನಬಾರ್ಡ್ ಮತ್ತು ರಿಸರ್ವ ಬ್ಯಾಂಕಿನಿಂದ ಆದಾಯ ಗುರುತಿಸುವಿಕೆ ಮತ್ತು ಆಸ್ತಿಗಳ ವಿಂಗಡಣೆ ಮತ್ತು ಅದರ ಅನುಪಾತದಂತೆ ಅವಕಾಶ ಕಲ್ಪಿಸುವಿಕೆಗೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದೇ ರೀತಿ ಅವುಗಳ ಆರೋಗ್ಯ ದೃಷ್ಟಿಯಿಂದ ಸಿ.ಆರ್.ಎ.ಆರ್. (capital to Risk Weighted Asset Ratio) ಇಂತಿಷ್ಟೆಂದು ನಿಗದಿಪಡಿಸಿದೆ ಅಥವಾ ನಿರೀಕ್ಷಿಸಲಾಗಿದೆ. ಆದರೆ ಪತ್ತಿನ ಸಹಕಾರ ಸಂಘಗಳಿಗೆ ಯಾವುದೇ ಪ್ರಾಧಿಕಾರ ಇದನ್ನು ನಿಗಧಿಪಡಿಸಿರುವುದಿಲ್ಲ, ಆರ್ಥಿಕ ಶಿಸ್ತಿನ ಪಾಲನೆ ದೃಷ್ಟಿಯಿಂದ ಈ ಸಹಕಾರ ಸಂಘಗಳು ಅದೇ ಮಾನದಂಡಗಳನ್ನು ಪಾಲಿಸುವುದರಿಂದ ಸದಸ್ಯರ ಮತ್ತು ಠೇವಣಿದಾರ ಸದಸ್ಯರ ಹಿತಕಾಪಾಡಿದಂತಾಗುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಅಲ್ಪಾವಧಿ ಕೃಷಿ ಪತ್ತಿನ ರಚನೆಯ ಪುನಃಶ್ಚೇತನ ಸಮಯದಲ್ಲಿ (ಪ್ರೊಫೆಸರ್ ವೈದ್ಯನಾಥನ್ ವರದಿ ಅನುಷ್ಠಾನ) ಆದಾಯ ಗುರುತಿಸುವಿಕೆ ಆಸ್ತಿ ವಿಂಗಡಣೆ ಮತ್ತು ಅವಕಾಶ ಕಲ್ಪಿಸುವಿಕೆ (IRAC norms) ಮತ್ತು ಸಿ.ಆರ್.ಎ.ಆರ್.ನ್ನು ಕನಿಷ್ಟ ತೊಡಕು ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ (Capital to Risk weighted Asset Ratio) ಶೇಕಡಾ 7 ಎಂದು ನಿಗಧಿಪಡಿಸಲಾಯಿತು ಮತ್ತು ಮುಂದೆ ಮೂರು ವರ್ಷಗಳಲ್ಲಿ ಶೇಕಡಾ 9 ಮತ್ತು ಮುಂದಕ್ಕೆ ಶೇಕಡ 12 ಮುಟ್ಟಬೇಕೆಂದು ನಿರೀಕ್ಷಿಸಲಾಯಿತು. ಪಟ್ಟಣ ಬ್ಯಾಂಕುಗಳಿಗೆ ಅದಕ್ಕೂ ಹಿಂದಿನಿಂದಲೇ ಆದಾಯ ಗುರುತಿಸುವಿಕೆ ಮತ್ತು ಆಸ್ತಿ ವಿಂಗಡಣೆ ಮತ್ತು ಅವಕಾಶ ಕಲ್ಪಿಸುವಿಕೆ ರೂಢಿಗೆ ತಂದಿದ್ದು ಸಿ.ಆರ್.ಎ.ಆರ್.ನ್ನು ಶೇಕಡ 9 ಎಂದು ನಿಗಧಿಪಡಿಸಿದೆ.

ಈ ಹಿನ್ನೆಲೆಯಲ್ಲಿ ಆದಾಯ ಗುರುತಿಸುವಿಕೆ ಆಸ್ತಿ ವಿಂಗಡಣೆ ಅವಕಾಶ ಕಲ್ಪಿಸುವಿಕೆ (Income Recognition Asset Classification and Provisioning Norms, IRAC Norms) ಎಂದರೆ ಏನು ಎಂದು ತಿಳಿಯಬೇಕಾದ ಅನಿವಾರ್ಯತೆ ಇದೆ. ಆದಾಯ ಗುರುತಿಸುವಿಕೆ ಎಂದರೆ ವಸೂಲಾದ ಬಡ್ಡಿಯನ್ನು ಮಾತ್ರ ಆದಾಯ ಎಂದು ಪರಿಗಣಿಸತಕ್ಕದ್ದು. ಬರಬೇಕಾದ ಬಡ್ಡಿಯನ್ನು ಲಾಭಕ್ಕೆ ಪರಿಗಣಿಸುವಂತಿಲ್ಲ. ಈ ಸಂದರ್ಭದಲ್ಲಿ ಪರಿಗಣಿಸಬೇಕಾದ ಮತ್ತೊಂದು ಅಂಶ ಠೇವಣಿಗಳ ಮೇಲೆ ಪಾವತಿ ಮಾಡಬೇಕಾದ ಬಡ್ಡಿಗೆ ಅವಕಾಶ ಕಲ್ಪಿಸಬೇಕು. ಆಸ್ತಿಗಳನ್ನು ಗುಣಮಟ್ಟದ ಆಧಾರದ ಮೇರೆಗೆ ವಿಂಗಡಿಸಬೇಕು. ಅದು ಹೂಡಿಕೆಗಳಾದರೂ ಆಗಿರಬಹುದು ಅಥವಾ ಸಂಘದ ಪ್ರಮುಖ ಆಸ್ತಿಯಾದ ಸಾಲಗಳು ಮತ್ತು ಮುಂಗಡಗಳಾಗಿರಬಹುದು.

ಈ ಆಸ್ತಿಗಳ ಗುಣ ಮಟ್ಟದ ಆದಾರದಂತೆ ಆಸ್ತಿಗಳನ್ನು 'ಉತ್ತಮ' (Statndard) 'ಕಡಿಮೆ ಉತ್ತಮ' (Sub-staandard) 'ಅನುಮಾನಾಸ್ಪದ' (Doubtful) ಮತ್ತು 'ನಷ್ಟದ' (Loss) ಆಸ್ತಿಗಳೆಂದು ವಿಂಗಡಿಸಬೇಕು. ಅನುಮಾನಾಸ್ಪದ ಆಸ್ತಿಯನ್ನು ಡಿ1, ಡಿ2, ಡಿ3 ಎಂದು ವಿಂಗಡಿಸಲಾಗಿದೆ. ಯಾವ ಆಸ್ತಿಯು ಚಾಲ್ತಿಯಲ್ಲಿದ್ದು ಬಡ್ಡಿ ಆದಾಯ ತರುತ್ತಿದೆಯೋ

ಅದನ್ನು ಗುಣಮಟ್ಟವೆಂದು, ಯಾವುದು ಸುಸ್ತಿಯಾಗಿ ಒಂದು ವರ್ಷದ ಒಳಗೆ ಇದೆಯೋ ಅದನ್ನು 'ಕಡಿಮೆ ಗುಣಮಟ್ಟ' ಯಾವುದು ಈ ಅವಧಿ ಮೀರಿದರೆ ಅನುಕ್ರಮವಾಗಿ 2–3, 3–4, 4–6 ವರ್ಷಗಳು ಡಿ1, ಡಿ2, ಡಿ3 ಎಂದು, ಹಿಂತಿರುಗಿ ಬಾರದ ಆಸ್ತಿಯಾದರೆ 'ನಷ್ಟದ ಆಸ್ತಿ ಎಂದು ಪರಿಗಣಿಸತಕ್ಕದ್ದು. ಈ ದಿಶೆಯಲ್ಲಿ ನಬಾರ್ಡ್/ರಿಸರ್ವ್ ಬ್ಯಾಂಕ್/ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಮಾನದಂಡಗಳನ್ನು ನಿಗಧಿಪಡಿಸಿ ಸುತ್ತೋಲೆಗಳನ್ನು ಹೊರಡಿಸಿರುತ್ತವೆ. ಈ ಆಸ್ತಿಗಳು ದುಡಿಯುವ/ಕಾರ್ಯನಿರತ (Performing) ಆಸ್ತಿಯಾಗಿರುವುದಿಲ್ಲ. ದುಡಿಯಲಾರದ/ಕಾರ್ಯನಿರತವಲ್ಲದ (non-performing) ಆಸ್ತಿಗಳಾಗಿರುತ್ತವೆ.

ಆಸ್ತಿ ಜವಾಬ್ದಾರಿ ತಃಖ್ತೆ ಅಂತಿಮಗೊಳಿಸುವ ಮುನ್ನ ಹಾಲಿ ಅನುಸರಿಸುತ್ತಿರುವ ಮಾನದಂಡಗಳಂತೆ ಲಾಭ ನಷ್ಟದ ತಃಖ್ತೆಯಲ್ಲಿ ನಷ್ಟವೆಂದು ಪರಿಗಣಿಸಿ ದುಡಿಯಲಾರದ ಆಸ್ತಿ (NPA)ಗೆ ಅನುಗುಣವಾಗಿ ಅವಕಾಶ (Provision)ವನ್ನು ಕಲ್ಪಿಸತಕ್ಕದ್ದು. ಇದರಿಂದ ಲಾಭವು ಅಷ್ಟರಮಟ್ಟಿಗೆ ಕಡಿಮೆ ಲಾಭವೆಂದು ಗೋಚರಿಸುತ್ತದೆ. ನಷ್ಟದಲ್ಲಿದ್ದರೆ ಹೆಚ್ಚು ನಷ್ಟ ಎಂದು ಗೋಚರಿಸುತ್ತದೆ. ಉತ್ತಮಗುಣಮಟ್ಟದ ಆಸ್ತಿಗೆ ಶೇಕಡ 0.25, ಕಡಿಮೆ ಗುಣಮಟ್ಟದ ಆಸ್ತಿಗೆ ಶೇಕಡ 10, ಡಿ1, ಶೇಕಡ 20–30, ಡಿ2, ಶೇಕಡ 30–50, ಡಿ3 ಶೇಕಡ 50–100, ನಷ್ಟದ ಆಸ್ತಿಗೆ ಶೇಕಡ 100 ಅವಕಾಶ ಕಲ್ಪಿಸಬೇಕಾಗುತ್ತದೆ. ಪ್ರತಿಯೊಂದು ಆಸ್ತಿಯನ್ನು ಗುರುತಿಸಿ ಪರಿಶಿಷ್ಠ ತಯಾರಿಸಬೇಕಾಗುತ್ತದೆ.

ಪ್ರತಿ ಆಸ್ತಿಗೆ ಎಷ್ಟು ಶೇಕಡ ಅವಕಾಶ ಕಲ್ಪಿಸಲಾಗಿದೆ ಎಂಬುದನ್ನು ಅರಿತಿರತಕ್ಕದ್ದು. ಇದರಿಂದ ಸದರಿ ಆಸ್ತಿಯು ಮತ್ತೂ ಕೆಳಮಟ್ಟಕ್ಕೆ ನೂಕಲ್ಪಡುತ್ತಿದೆಯೇ ಅಥವ ಮೇಲ್ಪಟ್ಟಕ್ಕೆ ಹೋಗಲು ಸಾಧ್ಯವಾಗಿದೆಯೇ ಎಂದು ಪರಿಶೀಲಿಸಲು ಸಾಧ್ಯವಾಗುತ್ತದೆ. ಒಂದು ಸಮಯ ಒಂದು ಆಸ್ತಿಯು ವಸೂಲಿಯಾದಲ್ಲಿ ಅದಕ್ಕೆ ಕಲ್ಪಿಸಿದ 'ಅವಕಾಶ'ವನ್ನು ಲಾಭಕ್ಕೆ ಪರಿಗಣಿಸಲು ಸಾಧ್ಯವಾಗುತ್ತದೆ. ನಷ್ಟದ ಆಸ್ತಿಯಾಗಿ ವಸೂಲಾತಿಯಾಗಲು ಸಾಧ್ಯವಿಲ್ಲ. ಯಾವುದೇರಹ ಇಲ್ಲ ಎಂದಾದಾಗ 'ಮನ್ನಾ' ಮಾಡಲು ಸಾಧ್ಯವಾಗುತ್ತದೆ. ಅಥವ ಏಕಗಂಟಿನಲ್ಲಿ ಮರುಪಾವತಿಗೆ (one time settlement OTS) ಅವಕಾಶ ನೀಡಬಹುದಾಗಿದೆ.

ಪತ್ತಿನ ಸಹಕಾರ ಸಂಘದ ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಸಂಕ್ಷಿಪ್ತಗೊಳಿಸಿ ಅವಲೋಕಿಸಿದಲ್ಲಿ ಅದು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಜವಾಬ್ದಾರಿ | ಕ್ರ.ಸಂ | ಆಸ್ತಿ |
|---|---|---|---|
| 1 | ಷೇರು ಬಂಡವಾಳ | 1 | ನಗದು/ ಬ್ಯಾಂಕ್ ಶಿಲ್ಕು |
| 2 | ನಿಧಿಗಳು | 2 | ಹೂಡಿಕೆಗಳು |
| 3 | ಠೇವಣಿಗಳು | 3 | ಸಾಲಗಳು ಮತ್ತು ಮುಂಗಡಗಳು |
| 4 | ಪಡೆದ ಸಾಲಗಳು | 4 | ಚರ ಮತ್ತು ಸ್ಥಿರ ಆಸ್ತಿಗಳು |
| 5 | ವಿಲೇವಾರಿಯಾಗದ ನಿವ್ವಳ ಲಾಭ | 5 | ನಿವ್ವಳ ನಷ್ಟ |
| | **100** | | **100** |

ತೊಡಕು ತೂಕ ಸಹಿತ ಆಸ್ತಿಗೆ ನಿಧಿಗಳ ಅನುಪಾತ (Capital to Risk Weighted Asset Ratio CRAR) ಅರ್ಥೈಸಿಕೊಳ್ಳಲು ಮೇಲಿನ ತಃಖ್ತೆ ಸಹಕಾರಿಯಾಗುತ್ತದೆ. 'ತೊಡಕುತೂಕ ಸಹಿತ ಆಸ್ತಿ'ಎಂದರೆ ಕೇವಲ ಆಸ್ತಿಯಲ್ಲಿ ಅದರ

ಗುಣಮಟ್ಟ ಆಧಾರಿತವಾಗಿ ಅದರ 'ತೊಡಕು ತೂಕ' ಏರಿಕೆಯಾಗುತ್ತದೆ. ತೊಡಕು (Risk) ತೂಕ (Weight) ಗುಣಮಟ್ಟ ಕಳಪೆಯಾದಂತೆ ಏರಿಕೆ ಆಗುತ್ತದೆ. ತೊಡಕು ಎಂದರೆ ಸಂಭವನೀಯ ನಷ್ಟ. ತೊಡಕಿಲ್ಲದೆ ಯಾವುದೇ ವ್ಯವಹಾರ ಮಾಡಲು ಸಾಧ್ಯವಿಲ್ಲ. ಆದರೆ ಎಷ್ಟರ ಮಟ್ಟಿನ ತೊಡಕು ಎಂಬುದು ಮುಖ್ಯವಾಗುತ್ತದೆ. ತೊಡಕು ಜಾಸ್ತಿ ಇದ್ದಷ್ಟೂ ಅದರ ತೂಕ ಹೆಚ್ಚಿಸಲಾಗುತ್ತದೆ. ತೊಡಕು ಕಡಿಮೆ ಇದ್ದಲ್ಲಿ ಕಡಿಮೆ ತೂಕವಾಗುತ್ತದೆ. ಉದಾಹರಣೆಗೆ, ಚಿನ್ನಾಭರಣ ಸಾಲ 'ಚಿನ್ನವೇ' ಅಡವು ಆಗಿದ್ದಲ್ಲಿ ತೊಡಕು ಕಡಿಮೆ. ಚಿನ್ನವೇ ಅಲ್ಲದೆ ಬೇರೆ ವಸ್ತು ಇದ್ದಲ್ಲಿ ತೂಕ ಅಧಿಕಗೊಳ್ಳುತ್ತದೆ. ರಕ್ಷಣೆ ಹೊಂದಿದ ಆಸ್ತಿಗಳು ಕಡಿಮೆ ತೂಕ, ರಕ್ಷಣಾರಹಿತ ಆಸ್ತಿಗಳು (secured - unsecured) ಹೆಚ್ಚಿನ ತೂಕ ಪಡೆಯುತ್ತದೆ. ಆಸ್ತಿಗಳಿಗೆ ತೊಡಕು ತೂಕ ಸೇರಿಸುವುದರಿಂದ ಅದರ ಮೊತ್ತ ಹೆಚ್ಚಳಗೊಳ್ಳುತ್ತದೆ.

'ಬಂಡವಾಳ' ಎಂದರೆ ಇಲ್ಲಿ 'ಸ್ವಂತ ಬಂಡವಾಳ' ಅದು ಷೇರು ಬಂಡವಾಳ ಮತ್ತು ನಿಧಿಗಳು. ನಿಧಿಗಳು ಯಾವುದೇ ಹೊರೆ ಹೊಂದಿರಬಾರದು (unencumbered reserve). ಇದಕ್ಕೆ ತೊಡಕು ತೂಕ ಸಹಿತ ಬಂಡವಾಳದ ಅನುಪಾತವು ಸಿ.ಆರ್.ಎ.ಆರ್. ಆಗುತ್ತದೆ. ಅಗತ್ಯ ಸಮರ್ಪಕ ಬಂಡವಾಳ (Capital adequacy) ಎಂದೂ ಕರೆಯಲಾಗುತ್ತದೆ.

ಸಮರ್ಪಕ (ಕನಿಷ್ಠ) ಬಂಡವಾಳ = ಸ್ವಂತ ಬಂಡವಾಳ **X 100** ಸಮರ್ಪಕ ಬಂಡವಾಳ=ಸ್ವಂತ ಬಂಡವಾಳ ಒಟ್ಟು ತೊಡಕು ಸಹಿತ ತೂಕ ಆಸ್ತಿಗಳು.

ಈ ಕೋಷ್ಟಕದಂತೆ ತಮ್ಮ ಸಹಕಾರ ಸಂಘದ ಸಿ.ಆರ್.ಎ.ಆರ್.ನ್ನು ಅರಿಯಬೇಕಾಗುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಕಡ್ಡಾಯವಾಗಿ ಈ ಅಂಶ ಉಲ್ಲೇಖವಾಗುತ್ತಿದೆ. ಆದರೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಈ ಅಂಶ ಪರಿಗಣಿಸಲಾಗುತ್ತಿಲ್ಲ. ಈ ಸಹಕಾರ ಸಂಘಗಳು ಮೇಲಿನ ಮಾನದಂಡಗಳನ್ನು ಪಾಲಿಸಿದಲ್ಲಿ ಅತ್ಯುತ್ತಮ ಆರ್ಥಿಕ ಶಿಸ್ತಿನ ಪರಿಪಾಲನೆಯಾಗಿ ಠೇವಣಿದಾರರ, ಸದಸ್ಯರ ಹಿತಕಾಪಾಡಲು ಸಾಧ್ಯವಾಗುತ್ತದೆ.

******************************************************************************

# 42. ಪತ್ತಿನ ಸಹಕಾರ ಸಂಘ /ಬ್ಯಾಂಕುಗಳಲ್ಲಿ ಸಕಾಲಿಕ ಕ್ರಮಗಳು

ಈ ಆರ್ಥಿಕ ವರ್ಷದ ಕಡೆಯ ತ್ರೈಮಾಸಿಕದಲ್ಲಿ ನಾವಿದ್ದೇವೆ. ಈ ತ್ರೈಮಾಸಿಕ ಅಂತ್ಯಗೊಳ್ಳುತ್ತಲೇ ಆರ್ಥಿಕ ವರ್ಷ ಪೂರೈಸಿದೊಡನೆ ಅಂತಿಮ ಲೆಕ್ಕಪತ್ರಗಳನ್ನು ಖೈದುಗೊಳಿಸಿ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ತಯಾರಿಸುತ್ತೇವೆ. ಈ ತಃಖ್ತೆ ಸಹಕಾರ ಸಂಘದ ಆರೋಗ್ಯ, ಅನಾರೋಗ್ಯವನ್ನು ಪ್ರತಿಫಲಿಸುತ್ತದೆ. ಸಹಕಾರ ಸಂಘ ಲಾಭದಲ್ಲಿರಬೇಕು. ನಿವ್ವಳ ಲಾಭ ಗಳಿಸಿರಬೇಕು. ನಿವ್ವಳ ಲಾಭದಿಂದ ಸದಸ್ಯರಿಗೆ ಡಿವಿಡೆಂಡ್ ಘೋಷಣೆ ಮಾಡಬೇಕು. ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರ ಆಡಳಿತ ಮಂಡಳಿಯ ಕಾರ್ಯಾಚರಣೆಯನ್ನು ಮೆಚ್ಚಬೇಕು ಎಂಬುದು ಸದಾಶಯ. ಇದನ್ನು ಈಡೇರಿಸಬೇಕು ಎಂದಾದರೆ, ಕಡೆಯ ತ್ರೈಮಾಸಿಕದಲ್ಲಿ ಸಂಘವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಲ್ಲಿ ಸಾಧ್ಯವಾಗುತ್ತದೆ.

ಪತ್ತಿನ ಸಹಕಾರ ಸಂಘಗಳಲ್ಲಿ 'ಬಡ್ಡಿ ಆದಾಯ'ವೇ ಪ್ರಮುಖ ಆದಾಯ. 'ಸಾಲ ಮತ್ತು ಮುಂಗಡ'ವೇ ಪ್ರಮುಖ ಆಸ್ತಿ. ಇದರ ಆರೋಗ್ಯವೇ ಸಂಘದ ಆರೋಗ್ಯವನ್ನು ನಿರ್ಧರಿಸುತ್ತದೆ. ಹಿಂದಿನ ಮೂರು ತ್ರೈಮಾಸಿಕದಲ್ಲಿ ವಸೂಲಿಯಾದ ಬಡ್ಡಿ ಬಗ್ಗೆ ನಿಖರವಾದ ಹಿಂದಿನ ಮಾಹಿತಿಯನ್ನು ಪಡೆಯತಕ್ಕದ್ದು. ವಸೂಲಾದ ಬಡ್ಡಿಯನ್ನು ಮಾತ್ರ

ಆದಾಯ ಎಂದು ಪರಿಗಣಿಸಬೇಕಾಗುತ್ತದೆ. ಮುಂದಿನ ಉಳಿಕೆ ತ್ರೈಮಾಸಿಕದಲ್ಲಿ ವಸೂಲಿಯಾಗಬೇಕಾದ 'ಬಡ್ಡಿ' ಆದಾಯವನ್ನು ಅಂದಾಜಿಸಬೇಕಾಗುತ್ತದೆ. ಈ ಬಡ್ಡಿಯನ್ನು ಅಂದಾಜಿಸಲು ಸಂಘಕ್ಕೆ ಬೇಡಿಕೆ ವಸೂಲಿ ಬಾಕಿ ತಃಖ್ತೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಸುಸ್ತಿ ಸಾಲಗಳಿದ್ದಲ್ಲಿ ಆ ಸುಸ್ತಿ ಸಾಲಗಳ ಬೇಡಿಕೆ ಎಷ್ಟಿದೆ, ಬೇಡಿಕೆ ಹೆಚ್ಚು ಇದ್ದಲ್ಲಿ ಇದರ ಮೇಲಿನ ಬಡ್ಡಿ ಬೇಡಿಕೆಯೂ ಹೆಚ್ಚಿನದಾಗಿರುತ್ತದೆ. ಈ ಸಾಲಗಳ ವಸೂಲಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ. ಈ ಸಾಲಗಳು ಆಗಲೆ 'ಕಾರ್ಯನಿರತವಲ್ಲದ ಆಸ್ತಿ' (ಎನ್.ಪಿ.ಎ.) ಎಂದು ವಿಂಗಡಿಸಲಾಗಿದೆಯೆ. ಯಾವ ಗುಣಮಟ್ಟದ ಆಸ್ತಿಯಾಗಿದೆ. ಕಳಪೆ ಗುಣಮಟ್ಟದ ಆಸ್ತಿ (substandard) ಯಾಗಿದ್ದಲ್ಲಿ ಇನ್ನು ಕೆಳಮಟ್ಟದ ಆಸ್ತಿಯಾಗಿ ಜಾರದಂತೆ ಅಂದರೆ ಅನುಮಾನಾಸ್ಪದ ಆಸ್ತಿ (doubtful) ಯಾಗಬಾರದು. ಅನುಮಾನಾಸ್ಪದ ಆಸ್ತಿಯಾಗಿದ್ದಲ್ಲಿ (D1 ರಿಂದ D2, D2 ಇಂದ D3) ಇನ್ನೂ ಕೆಳಹಂತಕ್ಕೆ ಜಾರದಂತೆ ಎಚ್ಚರ ವಹಿಸಬೇಕು. ಎಚ್ಚರ ವಹಿಸುವುದು ಎಂದರೆ ಅದನ್ನು ವಸೂಲಿ ಮಾಡುವುದು. ಅನುಮಾನಾಸ್ಪದದಿಂದ ನಷ್ಟದ (loss asset) ಆಸ್ತಿಗೆ ಜಾರಬಾರದು. ಇದರಿಂದ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಹೆಚ್ಚಿನ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ಆದರೆ ವಸೂಲಾತಿಯಾದಲ್ಲಿ 'ಅವಕಾಶ' ಕಲ್ಪಿಸುವ ಅವಶ್ಯಕತೆ ಬೀಳುವುದಿಲ್ಲ. ಇದರಿಂದ ಲಾಭದಲ್ಲಿ ತಗ್ಗಿಸುವ ಅಥವಾ ನಷ್ಟ ಹೆಚ್ಚಿಸುವ ಸಾಧ್ಯತೆ ತಪ್ಪುತ್ತದೆ. ಅಲ್ಲದೆ ಈಗಾಗಲೇ 'ಅವಕಾಶ' ಕಲ್ಪಿಸಿದ್ದರೆ, ಪೂರ್ಣ ವಸೂಲಾತಿಯಾದಲ್ಲಿ ಲಾಭಕ್ಕೆ ತೆಗೆದುಕೊಳ್ಳಬಹುದು. ಇದರಿಂದ 'ಲಾಭ' ಗಳಿಸಬಹುದಾಗಿದೆ. ಈ ಕ್ರಮ ಅನುಸರಿಸಲು 'ಕುಳುವಾರು ಬಾಕಿ ಪಟ್ಟಿ' (schedule) ಬಹುಮುಖ್ಯ. ಪ್ರತಿ ಸಾಲದ ಖಾತೆಯನ್ನು ವಿಶ್ಲೇಷಿಸಬೇಕಾಗುತ್ತದೆ. ಪ್ರತಿ ಸಾಲದ ಖಾತೆಯನ್ನು ಅಧ್ಯಯನ ಮಾಡಿ (case by case study) ಸಾಲ ವಸೂಲಾತಿಗೆ ತೆಗೆದುಕೊಳ್ಳಬಹುದಾದ 'ತಂತ್ರಗಾರಿಕೆ'ಯನ್ನು ರೂಪಿಸಬೇಕು. ಅಗತ್ಯತೆಗನುಸಾರ ಕಠಿಣ ಕಾನೂನು ಕ್ರಮಗಳನ್ನು (co-erosive action) ತೆಗೆದುಕೊಳ್ಳುವುದು. ಸಾಲಗಾರನೊಡನೆ ವ್ಯವಹರಿಸುವ ಚತುರತೆಯನ್ನು ಉಳ್ಳವರಾಗಿದ್ದು, 'ಸೋತು ಗೆಲ್ಲುವ' ಅಂತಿಮವಾಗಿ ಇಬ್ಬರಿಗೂ 'ಗೆಲುವು' ಉಂಟಾಗುವಂತೆ (win to win situation) ಅನುಸರಿಸುವಂತೆ ಕ್ರಮವಹಿಸುವುದು. ಶೇಕಡ ನೂರರ ಅವಕಾಶ ಈಗಾಗಲೇ ಕಲ್ಪಿಸಿದ್ದಲ್ಲಿ ಒಂದು ಬಾರಿಗೆ ಖಾತೆ ಖೈದುಗೊಳಿಸುವ ಕ್ರಮ (one time settlement-OTS) ವನ್ನು ಅಂತಿಮ ಕ್ರಮವಾಗಿ ತೆಗೆದುಕೊಳ್ಳವುದು.

ನಿಖರವಾದ 'ಕುಳುವಾರು ಬಾಕಿ ಪಟ್ಟಿ'ಯಲ್ಲಿ ಉದ್ದೇಶಿತ ಸುಸ್ತಿ ಸಾಲಗಾರರು ಯಾರು? ಇವರ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳಾವುವು? ಉದ್ದೇಶಿತವಲ್ಲದ ಸಾಲಗಾರರು ಯಾರು? ಇವರ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳೇನು? ಅತೀ ಹೆಚ್ಚಿನ ಮೊತ್ತ ಯಾವ ವಿಧದ ಸಾಲದಲ್ಲಿ ಕ್ರೂಢೀಕರಣಗೊಂಡಿದೆ. ಇದಕ್ಕೆ ಕಾರಣವೇನು? ಅದಕ್ಕೆ ಪರಿಹಾರ ಮಾರ್ಗಗಳೇನು? ಸುಸ್ತಿ ಸಾಲಗಳಲ್ಲಿ ಅತಿ ಮೇಲಿರುವ ಸಾಲ ಖಾತೆಗಳಾವುವು? (top ten, twenty) ಅವುಗಳ ವಸೂಲಿಗೆ ತೆಗೆದುಕೊಳ್ಳಬೇಕಾದ ಕ್ರಮಗಳೇನು? ಈ ಸಾಲ ವಸೂಲಾತಿಗಾಗಿ ವಿಶೇಷ ತಂಡ ರಚನೆ. ಈ ತಂಡವು ಆಲೋಚಿಸಿ, ಯೋಚಿಸಿ, ಯೋಜಿಸಿದಂತೆ ಅನುಷ್ಠಾನಗೊಳಿಸಿ ಫಲಿತಾಂಶವನ್ನು ವಿಶ್ಲೇಷಿಸಬೇಕು. ಅಲ್ಲದೆ ಅಗತ್ಯತೆಗನುಸಾರ ತಪ್ಪುಗಳಿದ್ದಲ್ಲಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾಲ ವಸೂಲಾತಿಯಲ್ಲಿ ಯಾವುದೇ 'ಹೆಬ್ಬೆಟ್ಟಿನ ನಿಯಮ' (Thumb rule)ಗಳಲ್ಲಿ ವಿಶೇಷ ಚತುರತೆಯಿಂದ ಮಾತ್ರ ಸಾಧ್ಯ. ಇದನ್ನು ಅನುಭವ ಮತ್ತು ಬದ್ಧತೆಯಿಂದ ಮಾತ್ರ ಗಳಿಸಲು ಸಾಧ್ಯ. ಈ ಸಾಲಗಳ ವಸೂಲಾತಿಯಲ್ಲಿ ಆದ್ಯತೆಗಳನ್ನು (priority) ನಿರ್ಧರಿಸುವುದು ಬಹಳ ಮುಖ್ಯ. ಯಾವ ಸಾಲ ವಸೂಲಾಗುತ್ತದೆಯೋ ಅದಕ್ಕೆ ಮಹತ್ವ ನೀಡಬೇಕು. ತೀರಾ ಕಷ್ಟಸಾಧ್ಯ ಸಾಲಗಳಿಗೆ ಸಮಯ ವ್ಯರ್ಥ ಮಾಡುವುದಕ್ಕಿಂತ ವಸೂಲಾತಿಯಾಗುವ ಸಾಲಗಳಿಗೆ ಮಹತ್ವ ನೀಡಬೇಕಾಗುತ್ತದೆ. ವಾರ್ಷಿಕ ಅಂತ್ಯದಲ್ಲಿರುವುದರಿಂದ ಸಮಯದ ಮಹತ್ವನ್ನು ನಾವು ಇಲ್ಲಿ ಅರಿಯಬೇಕಾಗಿದೆ. ಸುಸ್ತಿ ಸಾಲಗಳ ವಸೂಲಾತಿಯಲ್ಲಿ ಯಶಸ್ವಿಯಾದಷ್ಟು ಹೆಚ್ಚಿನ ಬಡ್ಡಿಯ ಗಳಿಕೆ ಸಾಧ್ಯ. ಇದರಿಂದ ನಿವ್ವಳ ಲಾಭವೂ ಹೆಚ್ಚುತ್ತದೆ. ಇದರೊಡನೆ ಚಾಲ್ತಿ ಸಾಲಗಳಲ್ಲಿ ಬೇಡಿಕೆಗನುಸಾರ ಸಾಲ ವಸೂಲಾತಿಯಾಗುತ್ತಿದೆಯೇ ಎಂಬುದರ ಬಗ್ಗೆ ಹಿಂದಿನ ಮಾಹಿತಿ ಪಡೆದು ವಸೂಲಾತಿಗೆ ಸೂಕ್ತ ಸಕಾಲಿಕ

ಕ್ರಮಗಳನ್ನು ಆಧ್ಯತೆ ಮೇರೆಗೆ ಕೈಗೊಳ್ಳಬೇಕು. ಸಕಾಲಿಕ ಕ್ರಮಗಳಾಗದಿದ್ದಲ್ಲಿ ಸಾಲಗಳು ಸುಸ್ತಿಯಾಗಿ ತದನಂತರದಲ್ಲಿ ಕಾರ್ಯನಿರತವಲ್ಲದ ಆಸ್ತಿಗಳಾಗಿ ಪರಿವರ್ತಿತಗೊಂಡು ಆಸ್ತಿ–ಜವಾಬ್ದಾರಿ ತಃಖ್ತೆಯ ಅನಾರೋಗ್ಯಕ್ಕೆ ಕಾರಣವಾಗುತ್ತದೆ.

ಹೂಡಿಕೆಗಳನ್ನು ವಿಶ್ಲೇಷಣೆಗೆ ತೆಗೆದುಕೊಳ್ಳತಕ್ಕದ್ದು. ಹೆಚ್ಚು ಆದಾಯ ತರುತ್ತಿರುವ ಹೂಡಿಕೆಗಳನ್ನು ನವೀಕರಣಗೊಳಿಸುವುದು ಅಥವಾ ಹೆಚ್ಚಳಗೊಳಿಸುವುದು. ಹೂಡಿಕೆಗಳು ಠೇವಣಿಗಳಾಗಿದ್ದಲ್ಲಿ ಅದರ ಮೇಲೆ ಬಡ್ಡಿ ಜಮಾ ಆಗಿರುತ್ತದೆಯೇ, ಇಲ್ಲವೇ? ಎಂಬುದರ ಪರಿಶೀಲನೆ ಷೇರುಗಳಾಗಿದ್ದಲ್ಲಿ, ಡಿವಿಡೆಂಡ್ ಪಡೆಯಲಾಗುತ್ತಿದೆಯೇ, ಇಲ್ಲವೇ? ಲಾಭದಾಯಕವಾಗಿ ಪರಿಣಮಿಸಿದೆಯೇ? ಇತರೆ ಹೂಡಿಕೆಗಳಾಗಿದ್ದಲ್ಲಿ ಅವುಗಳಿಂದ ಗಳಿಕೆ ಪ್ರಮಾಣ ಎಷ್ಟಿದೆ, ಮಾರಾಟ ಮಾಡಬಹುದೆ, ಮರು ಹೂಡಿಕೆ ಮಾಡಬಹುದೆ ಎಂಬುದರ ಬಗ್ಗೆ ಅಂದಾಜಿಸುವುದು ಮತ್ತು ತಕ್ಕ ಚಿಕಿತ್ಸಾ ಕ್ರಮ ತೆಗೆದುಕೊಳ್ಳವುದು ಜಾಣತನದ ನಡೆಯಾಗುತ್ತದೆ.

ನಿಧಿಗಳ ನಿರ್ವಹಣೆಯಲ್ಲಿ 'ಠೇವಣಿಗಳ' ನಿರ್ವಹಣೆಗೆ ಪ್ರಾಮುಖ್ಯತೆ ಅಗತ್ಯ. ಅದರಲ್ಲಿಯೂ ಅವಧಿ ಠೇವಣಿಗಳು ಈ ತ್ರೈಮಾಸಿಕದಲ್ಲಿ ಫಲಿತವಾಗುವ ಠೇವಣಿಗಳು, ಹಿಂತಿರುಗಿಸುವ ಬದ್ಧತೆ ಇರುತ್ತದೆ. ಅಲ್ಲದೆ 'ಬಡ್ಡಿ ಸಹಿತ' ಹಿಂತಿರುಗಿಸಬೇಕಾಗುತ್ತದೆ ಎಂಬ ವಾಸ್ತವವನ್ನು ನಾವು ಮರೆಯಲಾಗದು. ಆದಷ್ಟೂ ಗ್ರಾಹಕರೊಡನೆ ಸ್ನೇಹ ಬಾಂಧವ್ಯದೊಂದಿಗೆ ವರ್ತಿಸಿ ಠೇವಣಿಗಳು ನವೀಕರಣಗೊಳ್ಳುವಂತೆ ನೋಡಿಕೊಳ್ಳಬೇಕಾಗುತ್ತದೆ. ಇದರಿಂದ ನಮ್ಮ ಸಂಪನ್ಮೂಲವನ್ನು ವೃದ್ಧಿಸಿದಂತಾಗುತ್ತದೆ. ದ್ರವ್ಯ ಆಸ್ತಿ ನಿರ್ವಹಣೆಯೂ ಸುಗಮವಾಗುತ್ತದೆ.

ಪಡೆದ ಸಾಲಗಳು (borrowings) ನಿರ್ವಹಣೆಯಲ್ಲಿ ಅವುಗಳ ಮೇಲೆ ಸಾಲ ನೀಡಿರುವ ಸಂಸ್ಥೆ ವಿಧಿಸಿರುವ ಷರತ್ತುಗಳ ಪರಿಪಾಲಿಸುವ ಬಗ್ಗೆ ಸಂಘ ಬದ್ಧವಾಗಿರಬೇಕಾಗುತ್ತದೆ. ಸಕಾಲಿಕ ಬಡ್ಡಿಪಾವತಿ, ಕಂತು ಮರುಪಾವತಿ, ನಗದು ಪತ್ತಿನ ಸಾಲವಾಗಿದ್ದಲ್ಲಿ ತಮ್ಮ ಸಾಲ ನೀಡುವಿಕೆಯ ವಿಸ್ತಾರ (coverage) ನೀಡಿರುವ ರಕ್ಷಣೆಗಳು (securities) ಇವುಗಳ ನಿರ್ವಹಣೆಗಳ ಕಡೆಗೆ ಗಮನ ಹರಿಸತಕ್ಕದ್ದು. ಪಡೆದ ಸಾಲಗಳ ಷರತ್ತುಗಳ ಪಾಲನೆಯಲ್ಲಿ ಉಲ್ಲಂಘನೆಯಾದಲ್ಲಿ ಹೆಚ್ಚಿನ ಬಡ್ಡಿ ಹೊರೆ ಬೀಳುತ್ತದೆ. ಸಂಘದ ನಷ್ಟಕ್ಕೆ ಕಾರಣವಾಗುತ್ತದೆ.

ಠೇವಣಿಗಳು ಮತ್ತು ಪಡೆದ ಸಾಲಗಳಿಗೆ ವರ್ಷಾಂತ್ಯದಲ್ಲಿ ಒಂದು ಸಮಯ ಬಡ್ಡಿ ಪಾವತಿಸದಿಲ್ಲದಿದ್ದರೂ ಪಾವತಿಗೆ ಅವಕಾಶ ಕಲ್ಪಿಸಿ, ಲಾಭ–ನಷ್ಟ ಖಾತೆ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆ ತಯಾರಿಸಬೇಕಾಗುತ್ತದೆ ಎಂಬ ಅಂಶವನ್ನು ಮರೆಯಲಾಗುವುದಿಲ್ಲ. ಇದಕ್ಕೆ ಹೊಂದಿದಂತೆ ಆಸ್ತಿಯ ಮೇಲಿನ ಗಳಿಕೆಯಲ್ಲಿ ವಸೂಲಾತಿಯಾದ ಬಡ್ಡಿಯನ್ನು ಮಾತ್ರ ಲಾಭಕ್ಕೆ ತೆಗೆದುಕೊಳ್ಳಬೇಕು ಎಂಬ ಅಂಶವನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

ಈ ಮೇಲಿನ ಅಂಶಗಳ ಬಗ್ಗೆ ಆಡಳಿತ ಮಂಡಳಿಯು ಗಮನ ಹರಿಸಬೇಕಾಗಿರುವುದರಿಂದ ಅದು ಹಿಮ್ಮಾಹಿತಿ (feedback) ಪಡೆಯುವ ಅಗತ್ಯತೆ ಇದೆ. ಅದಕ್ಕೆ ತಕ್ಕ ಮುನ್ಸೂಚಕ ಮಾಹಿತಿ ವ್ಯವಸ್ಥೆ (monitoring information system - MIS) ನಿರ್ಮಿಸಿಕೊಳ್ಳುವ ಅವಶ್ಯಕತೆ ಇದೆ. ಕಂಪ್ಯೂಟರೀಕರಣ ಇದಕ್ಕೆ ಪರಿಹಾರವಾಗಿ ಒದಗಿ ಬಂದಿದೆ. ಇದರಿಂದ ಆರ್ಥಿಕ ವರ್ಷ ಮುಗಿಯುವ ಮುನ್ನ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ಧರಿಸಲು ಸಾಧ್ಯವಾಗುತ್ತದೆ. 'ಆಂತರಿಕ ಲೆಕ್ಕಪರಿಶೋಧನೆ' ಇಲ್ಲಿ ನಮ್ಮ ನೆರವಿಗೆ ಬರುತ್ತದೆ. ಸಕಾಲಿಕವಾಗಿ ವರದಿಗಳನ್ನು ಪಡೆದು ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು. ತಪ್ಪುಗಳು, ಲೋಪದೋಷಗಳು, ಸೋರಿಕೆಗಳು ಇದ್ದಲ್ಲಿ ಆರ್ಥಿಕ ವರ್ಷ ಕಳೆದು ಹೋಗುವ ಮೊದಲಿಗೆ ಸರಿಪಡಿಸುವ ಕ್ರಮ ತೆಗೆದುಕೊಳ್ಳತಕ್ಕದ್ದು. ಇದರಿಂದ ಆಗುವ ನಷ್ಟವನ್ನು ತಪ್ಪಿಸಬಹುದು. ಉದಾಹರಣೆಗೆ ಹೆಚ್ಚಿನ ಬಡ್ಡಿ ಪಾವತಿಗಳು, ಕಡಿಮೆ ಬಡ್ಡಿ ವಸೂಲಾತಿ, ಸುಳ್ಳು ಖರ್ಚುಗಳು, ತಪ್ಪು ತಃಖ್ತೆಗಳ ತಯಾರಿಕೆ (wrong schedule) ಇವುಗಳ ಮೇಲೆ ನಿಗಾ ಇಡುವುದರಿಂದ ನಿಖರವಾದ ಮತ್ತು ಆರೋಗ್ಯಕರ ಆಸ್ತಿ–ಜವಾಬ್ದಾರಿ

ತಃಖ್ತೆ ತಯಾರಿಕೆ ಸಾಧ್ಯವಾಗುತ್ತದೆ.

ವರ್ಷಾಂತ್ಯಗೊಂಡ ನಂತರ ಪರಿತಪಿಸುವ ಬದಲಾಗಿ ಅಂತ್ಯಗೊಳ್ಳುವ ಮುನ್ನ ಅಂತಿಮ ತ್ರೈಮಾಸಿಕದಲ್ಲಿ ಇನ್ನೂ ಕಾಲ ಮಿಂಚಿಲ್ಲದಿರುವುದರಿಂದ ಸಕಾಲಿಕ ಕ್ರಮಗಳಿಂದ ಸಂಸ್ಥೆಯನ್ನು ಲಾಭದಾಯಕವಾಗಿರುವಂತೆ ನೋಡಿಕೊಳ್ಳುವುದು ಸದಸ್ಯರಿಗೆ ಹೊಣೆಗಾರಿಕೆಯುಳ್ಳ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಇದರೊಡನೆ ನೊಗಹೊತ್ತ ಜೋಡೆತ್ತಿನಂತೆ ಕರ್ತವ್ಯ ನಿರ್ವಹಿಸುವ ಮುಖ್ಯಕಾರ್ಯನಿರ್ವಾಹಕರನ್ನೂ ಒಳಗೊಂಡಂತೆ ಸಂಸ್ಥೆಯ ಸಿಬ್ಬಂದಿಯ ಜವಾಬ್ದಾರಿಯೂ ಆಗಿರುತ್ತದೆ ಎಂಬುದನ್ನು ನಾವು ಅರಿತಿರಬೇಕು. ಇದರಿಂದ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಮತ್ತು ಸದಸ್ಯರ ಆಶೋತ್ತರಗಳ ಈಡೇರಿಕೆ ಸಾಧ್ಯವಾಗುತ್ತದೆ.

*****************************************************************************************

# 43. ಸಹಕಾರ ಚಳುವಳಿಯು ಪ್ರಸ್ತುತ ಪರಿಸ್ಥಿತಿಯಲ್ಲಿ ಪತ್ತಿನ ಸಹಕಾರ ಸಂಘಗಳ ವ್ಯವಸ್ಥೆ

ಭಾರತದ ಸಹಕಾರ ಚಳುವಳಿ ಆರಂಭವಾದದ್ದೇ 'ಕೃಷಿ ಪತ್ತಿನ ಸಹಕಾರ ಸಂಘಗಳ' ಸ್ಥಾಪನೆ ಮೂಲಕ, ಆದುದರಿಂದ 'ಸಹಕಾರ' ಮತ್ತು 'ಪತ್ತು' (ಸಾಲ) ಅವಿಭಾಜ್ಯ ಅಂಗಗಳಾಗಿ, 'ಒಂದೇ ನಾಣ್ಯದ ಎರಡು ಮುಖಗಳೇ' ಎಂಬಂತೆ ಇಂದಿಗೂ ಮುಂದುವರಿಯುತ್ತಿದೆ ಎಂದರೆ ತಪ್ಪಾಗಲಾರದು. ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕೆ ಕ್ರಾಂತಿಯ ಫಲವಾಗಿ, ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಕ್‌ಡೇಲ್' ಅಗ್ರಗಾಮಿಗಳಿಂದ 'ಗ್ರಾಹಕ "ಬಳಕೆದಾರರ 'ಸಹಕಾರ ಸಂಘ ಸ್ಥಾಪನೆಯಾಗಿ ಒಂದು ಚಳುವಳಿಯ ಆಂದೋಲನದ ರೂಪವನ್ನು ಪಡೆಯಿತು. ಜರ್ಮನಿ ಮತ್ತು ಇತರೆ ಐರೋಪ್ಯ ರಾಷ್ಟ್ರಗಳಲ್ಲಿ ರೈತರು 'ರಾಫಿಸನ್' ಮಾದರಿ ಸಹಕಾರ ಸಂಘಗಳನ್ನು ಆರಂಭಿಸಿದರು. ಜರ್ಮನಿಯಲ್ಲಿ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ನೆಲೆಸಿದ್ದ ಕುಶಲ ಕರ್ಮಿಗಳು, ವ್ಯಾಪಾರಸ್ಥರು 'ಹರ್ಮನ್ ಷ್ಲೂಜ್ 'ಎಂಬ ನ್ಯಾಯದೀಶರೊಬ್ಬರ ಪ್ರೇರಣೆಯಿಂದ ತಮ್ಮ ಆರ್ಥಿಕ ಅವಶ್ಯ ಪೂರೈಕೆಗಾಗಿ' ಪತ್ತಿನ ಸಹಕಾರ ಸಂಘಗಳ'ನ್ನು ಆರಂಭಿಸಿದರು. ತಮ್ಮ ಷೇರು ಬಂಡವಾಳ ಮತ್ತು ಠೇವಣಿಗಳನ್ನು ಸಂಗ್ರಹಿಸಿ ಅವಶ್ಯವಿದ್ದವರಿಗೆ ಬಡ್ಡಿ ಸಹಿತ ಸಾಲ ವಿತರಣೆ ಆರಂಭಿಸಿದರು. ಇವುಗಳನ್ನು 'ಷ್ಲೂಜ್' ಮಾದರಿ ಸಹಕಾರ ಸಂಘಗಳೆಂದು ಕರೆಯಲಾಯಿತು.

ಭಾರತದಲ್ಲಿ ಖಾಸಗಿ ಲೇವಾದೇವಿದಾರರಿಂದ ರೈತರು ಶೋಷಣೆಗೆ ಒಳಗಾಗುತ್ತಿದ್ದುಒಂದು ರೀತಿಯ 'ರೈತರ ದಂಗೆ' ಪ್ರವೃತ್ತಿ ಭಾರತದಲ್ಲಿ ಕಂಡು ಬಂದಿದ್ದರಿಂದ ಇದರ ಪರಿಹಾರೋಪಾಯ ಕಂಡು ಹಿಡಿಯಲು ಅಂದಿನ(19 ನೇ ಶತಮಾನದ ಆದಿ 20ನೇ ಶತಮಾನದ ಆರಂಭ) ಮದ್ರಾಸ್ ಪ್ರಾಂತ್ಯದಲ್ಲಿ ಬ್ರಿಟಿಷ್ ಸರ್ಕಾರ 'ಫ್ರೆಡ್ರಿಕ್ ನಿಕೋಲ್ಸನ್' ಎಂಬ ಅಧಿಕಾರಿಯನ್ನು ಐರೋಪ್ಯ ರಾಷ್ಟ್ರಗಳಿಗೆ ಕಳುಹಿಸಿ ಅಲ್ಲಿನ ಸಹಕಾರ ಚಳುವಳಿ ಬಗ್ಗೆ ಮಾಹಿತಿ, ವರದಿಪಡೆಯಿತು. ಉತ್ತರ ಪ್ರದೇಶದಲ್ಲಿ 'ಡೂಪರ್ ನೆಕ್ಸ' ಎಂಬ ಅಧಿಕಾರಿಯನ್ನು ನೇಮಿಸಿ ವರದಿಪಡೆಯಿತು. ಇವುಗಳನ್ನು ಗಣನೆಗೆ ತೆಗೆದುಕೊಂಡ ಸರ್ ಎಡ್ವರ್ಡ್ ಲಾ ಸಮಿತಿ ಒಂದು ವರದಿಯನ್ನು ನೀಡಿತು. ಇದರ ಆಧಾರದ ಮೇರೆಗೆ 'ಭಾರತದ ಪತ್ತಿನ ಸಹಕಾರ ಕಾಯ್ದೆ 1904 ಜಾರಿಗೆ ಬಂತು. ಈ ಕಾಯ್ದೆಯನ್ವಯ ಭಾರತಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಸೇವ ಸಹಕಾರ ಸಂಘಗಳು ಮತ್ತು ನಗರ ಪ್ರದೇಶಗಳಲ್ಲಿ ಪತ್ತಿನ ಸಹಕಾರ ಸಂಘಗಳು ಆರಂಭ ಗೊಂಡವು. ಕರ್ನಾಟಕದಲ್ಲಿ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಪ್ರಪ್ರಥಮ ಸಹಕಾರ ಸಂಘ 1905 ರಲ್ಲಿ ಸ್ಥಾಪನೆಯಾಗಿದ್ದನ್ನು ಗುರುತಿಸಲಾಗಿದೆ. ಇದರ ಪ್ರಥಮ ಅಧ್ಯಕ್ಷರಾದ ಸಹಕಾರದ ಬಗ್ಗೆ ಬದ್ಧತೆ ತೋರಿದ ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ ರವರನ್ನು ಕರ್ನಾಟಕದ ಸಹಕಾರ ಪಿತಾಮಹ ಎಂದು ಗುರುತಿಸಲಾಗಿದೆ.

ಅಂದಿನ ಗ್ರಾಮೀಣ ಪ್ರದೇಶದ ಸೇವಾ ಸಹಕಾರ ಸಂಘಗಳು ಮತ್ತು ಮುಂದುವರೆದ ಗ್ರಾಮೀಣ ಸಹಕಾರ ಚಳುವಳಿ ಸರ್ಕಾರದ ಅವಲಂಭಿತವಾಗಿ ಬೆಳವಣಿಗೆಯಾಗಿರುವುದನ್ನು ಕಾಣುತ್ತಲಿದ್ದೇವೆ. ಆದರೆ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಸರ್ಕಾರ ಅವಲಂಭಿತವಾಗದೇ ತಮ್ಮದೇ ಆದ ಸಂಪನ್ಮೂಲಗಳನ್ನು ಸಂಗ್ರಹಿಸಿ ಸ್ವಾವಲಂಭನೆಯಿಂದ, ಸ್ವತಂತ್ರವಾಗಿ ಷ್ಲೂಜ್ ಮಾದರಿ ಸಹಕಾರ ಸಂಘಗಳು ಬೆಳವಣಿಗೆಯಾಗಿರುವುದನ್ನು ಕಾಣುತ್ತಲಿದ್ದೇವೆ. ಇದಕ್ಕೆ ಕಾರಣ ಈ ಪ್ರದೇಶದಲ್ಲಿದ್ದ ಜನಗಳ ತಿಳುವಳಿಕೆ, ಜ್ಞಾನ, ಸಹಕಾರದ ಅರಿವು, ಇದರಿಂದ ಆಗುವ ಪ್ರಯೋಜನಗಳ ಬಗ್ಗೆ ಸುಲಭವಾಗಿ ಗ್ರಹಿಸಿದ್ದು, ಅಲ್ಲದೇ ಅವರಲ್ಲಿ ಲಭ್ಯ ಸಂಪನ್ಮೂಲಗಳು. ಅದರಲ್ಲಿಯೂ ಈ ಚಳವಳಿಯು ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಅತ್ಯಂತ ಯಶಸ್ವಿಯಾಗಿ ಬೆಳೆದುಬಂದಿರುವುದನ್ನು ಕಾಣುತ್ತಲಿದ್ದೇವೆ.

ಈ ಸಹಕಾರ ಸಂಘಗಳು ಸಮಾನ ಮನಸ್ಕರು, ಸಮಾನ ಚಿಂತಕರು, ಸಮಾನ ಆರ್ಥಿಕತೆ, ಸಹಕಾರ ಮೌಲ್ಯವಾದ ಸಮಾನತೆ ಮತ್ತು ಐಕ್ಯತೆ ಅಥವಾ ಒಗ್ಗಟ್ಟಿನಿಂದ ಕೂಡಿದ ಸಮೂಹಗಳಲ್ಲಿ ಅತ್ಯಂತ ಯಶಸ್ವಿಯಾಗಿ ಸಂಘಟಿತ ವಾಗಿರುವುದನ್ನು ಕಾಣುತ್ತೇವೆ. ಈ ಸಹಕಾರ ಸಂಘಗಳ ಯಶಸ್ವಿಗೆ ಇದೂ ಒಂದು ಕಾರಣ ಎಂದರೆ ತಪ್ಪಾಗಲಾರದು. ಅನೇಕ ಆರಂಭಿಕವಾಗಿ ಸಹಕಾರ ಸಂಘಗಳಾಗಿದ್ದವು, ಮುಂದೆ ವ್ಯವಹಾರ ಗಾತ್ರವನ್ನು ಹಿಗ್ಗಿಸಿಕೊಂಡು ಪ್ರಾಥಮಿಕ (ಪಟ್ಟಣ) ಸಹಕಾರ ಬ್ಯಾಂಕ್‌ಗಳಾಗಿ ಪರಿವರ್ತಿತವಾಗಿವೆ. ಅನೇಕ ಸಹಕಾರ ಸಂಘಗಳು ಭಾರತದಲ್ಲಿ ಸಹಕಾರ ಚಳವಳಿ ಆರಂಭಗೊಂಡ ಸಮಯದಲ್ಲಿ ಸ್ಥಾಪನೆಯಾದ ಸಹಕಾರ ಸಂಘಗಳು ಈಗಲೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು 'ಶತಮಾನೋತ್ಸವ' ಆಚರಿಸಿವೆ. 125ನೇ ವಾರ್ಷಿಕೋತ್ಸವ ಸಂಭ್ರಮಾಚರಣೆಯ ಹೊಸ್ತಿಲಲ್ಲಿವೆ. ಇದಕ್ಕೆಕಾರಣ 'ಸಹಕಾರ ತತ್ವ'ಗಳ ಪಾಲನೆ ಮತ್ತು ಸಂಘದ ಚಟುವಟಿಕೆಯಲ್ಲಿ ಸದಸ್ಯರ ನಿರಂತರ ಪಾಲ್ಗೊಳ್ಳುವಿಕೆ. ಹೀಗಾಗಿ ಸಹಕಾರ ಸಂಘಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತಾ ಬಂದಿದೆ.' ಈ ಕಾಲಘಟ್ಟದಲ್ಲಿ' ಈ ವ್ಯವಸ್ಥೆಯ ಮುಂದುವರಿಕೆ ನಮ್ಮ ಮುಂದಿರುವ ಪ್ರಶ್ನೆ.90ರ ದಶಕದಿಂದ ಭಾರತದ ಆರ್ಥಿಕತೆಯು ಒಂದು 'ದ್ವೀಪ'ವಾಗದೆ ಜಗತ್ತಿನ ಆರ್ಥಿಕತೆಯೊಂದಿಗೆ ಒಂದಾಗಿ 'ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ'ದ ಭಾಗವಾಗಿ ಮೂರು ಟ್ರಿಲಿಯನ್ ಆರ್ಥಿಕತೆಯಿಂದ ಐದು ಟ್ರಿಲಿಯನ್ ಆರ್ಥಿಕತೆಯತ್ತ ಸಾಗುತ್ತಿದೆ. ಈ 'ಸಂಕ್ರಮಣ' ಕಾಲದಲ್ಲಿ 'ಸಹಕಾರ ಚಳವಳಿ' ಸ್ಪರ್ಧೆಯನ್ನು ಎದುರಿಸಲಾಗದೆ ನಲುಗಿ ಹೋಗಿರುವುದನ್ನು ಕಾಣುತ್ತ ಇದ್ದೇವೆ, ಅನುಭವಿಸುತ್ತಲು ಇರುತ್ತೇವೆ. ಆದರೂ ಬಡ ಮತ್ತು ಮಧ್ಯಮ ವರ್ಗದವರಿಗೆ 'ಆಶಾ ಕಿರಣ' ಪತ್ತಿನ ಸಹಕಾರ ಸಂಘಗಳು ಎಂದರೆ ಅತಿಶಯೋಕ್ತಿಯಲ್ಲ. ಖಾಸಗಿ ಲೇವಾದೇವಿದಾರರೂ ಏನೇ ನಿರ್ಬಂಧಗಳಿದ್ದರೂ ಅತೀವ ಬಡ್ಡಿ, (ಮೀಟರ್ ಬಡ್ಡಿ) ಹೊರೆ ಹೊರೆಸಿ ಶೋಷಣೆ ಮಾಡುತ್ತಿರುತ್ತಾರೆ. ಖಾಸಗಿ, ವಾಣಿಜ್ಯ ಬ್ಯಾಂಕುಗಳು ಭದ್ರತೆ ಮತ್ತು ಅತಿ ಹೆಚ್ಚು ವ್ಯವಹರಿಸುವವರ ಕಡೆಗೆ ಗಮನಹರಿಸುತ್ತಾರೆ. ಇದಕ್ಕೆ ಪರಿಹಾರ ವೆಂದರೇ ನಮ್ಮದೇ ಆದ ಪ್ರಜಾಸತ್ತಾತ್ಮಕ, ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಬೆಳವಣಿಗೆಗೆ ಕಾರಣವಾದ ನಮ್ಮ ಪತ್ತಿನ ಸಹಕಾರ ಸಂಘಗಳು.

ಕರ್ನಾಟಕದಲ್ಲಿ ಸುಮಾರು 5500 ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಯಶಸ್ಸಿಗೆ ಇಲ್ಲಿನ ಸದಸ್ಯರ ಮತ್ತು ಅವುಗಳಲ್ಲಿ, 'ನಾಯಕತ್ವ' ವಹಿಸಿರುವ ಆಡಳಿತ ಮಂಡಳಿ. ಪ್ರಜ್ಞಾವಂತ ಸದಸ್ಯರು, ಜವಾಬ್ದಾರಿಯುತ, ಸದಸ್ಯರಿಗೆ ತಮ್ಮ ಹೊಣೆಗಾರಿಕೆ ಇದೆ, ತಮಗೆಅವರ ಉತ್ತರದಾಯಿತ್ವವಿದೆ, ನಾವು ಅವರ ಆಸೆ, ಆಕಾಂಕ್ಷೆ, ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದು ಮೂಡಿಸಿರುವ ಭರವಸೆ. ಆದರೆ, ಕೆಲವೇ ಕೆಲವು ಸಹಕಾರ ಸಂಘಗಳಲ್ಲಿ ಆಗಿರುವ 'ಹಗರಣ'ಗಳು ಇಡೀ ಸಹಕಾರ ವ್ಯವಸ್ಥೆಗೆ ಕಳಂಕ ತಂದಿರುವುದು, ಅದರವ್ಯಾಪಕ ಮಾಧ್ಯಮಗಳ ಪ್ರಚಾರ, ಸಾಮಾಜಿಕ ಮಾಧ್ಯಮಗಳಲ್ಲಿನ ಪ್ರಸಾರ ಉತ್ತಮ ವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಮೇಲೂ ದುಷ್ಪರಿಣಾಮ ಬೀರುವುದನ್ನು ಕಾಣುತ್ತಿದ್ದೇವೆ. ಈ ಕಾಲಘಟ್ಟದಲ್ಲಿ ಸದಸ್ಯರ ನಂಬಿಕೆ ವಿಶ್ವಾಸ ಉಳಿಸಿಕೊಳ್ಳಬೇಕಾದ್ದು ಅನಿವಾರ್ಯ

ಮತ್ತು ಅವಶ್ಯಕ. ನೌಕರರ ಪತ್ತಿನ ಸಹಕಾರ ಸಂಘಗಳಾಗಿರಬಹುದು. ಅಥವಾ ಇತರೆಪತ್ತಿನ ಸಹಕಾರ ಸಂಘಗಳಾಗ ಬಹುದು ಕೆಲವೊಂದು ಆರ್ಥಿಕ ಶಿಸ್ತನ್ನು ಪಾಲಿಸ ಬೇಕಾಗುತ್ತದೆ. ಇದರಿಂದ ಸಹಕಾರ ಸಂಘವನ್ನು ಲಾಭದಾಯವಾಗಿ ನಡೆಸಿಸದಸ್ಯರಿಗೆ 'ಡಿವಿಡೆಂಡ್' (ಲಾಭಾಂಶ) ಘೋಷಣೆಯನ್ನು ಪ್ರತಿವರ್ಷ ಮಾಡಬಹುದಾಗಿದೆ. ಈ ಸಹಕಾರ ಸಂಘಗಳು 'ಬ್ಯಾಂಕಿಂಗ್' ಪರಿಧಿಯಲ್ಲಿ ಬಾರದಿದ್ದರೂ ಮಾಡುತ್ತಿರುವ ವ್ಯವಹಾರವು 'ಬ್ಯಾಂಕಿಂಗ್' ಚಟುವಟಿಕೆಯೇ ಆಗಿರುತ್ತದೆ. ಠೇವಣಿ ಸಂಗ್ರಹಿಸುತ್ತಿದ್ದೇವೆ. ಆದರೆ ಸಾರ್ವಜನಿಕರಿಂದಲ್ಲ, ಸದಸ್ಯರಿಂದ ಮಾತ್ರ. ಠೇವಣಿಯನ್ನು ಸಾಲವಾಗಿ ವಿತರಿಸುತ್ತದ್ದೇವೆ, ಮತ್ತು ಹೂಡಿಕೆಗಳಲ್ಲಿ ತೊಡಗಿಸುತ್ತಿದ್ದೇವೆ. ಹೂಡಿಕೆ ಮತ್ತು ಸಾಲ ಮುಂಗಡಗಳ ಮೇಲೆ ಗಳಿಸುವ 'ಬಡ್ಡಿ'ಯೇ ಪ್ರಮುಖ ಆದಾಯ. ಠೇವಣಿಗಳು ಮತ್ತು ಒಂದು ಸಮಯ ಇತರೆಡೆಯಿಂದ ತಂದ ಸಾಲವಿದ್ದಲ್ಲಿ ಅದರ ಮೇಲೆ ಪಾವತಿಸುವ ಬಡ್ಡಿಯೇ ಪ್ರಮುಖ ಖರ್ಚು. ಇದರ ಅಂತರವೇ ಗರಿಷ್ಟ ಲಾಭ ಇದರಲ್ಲಿ ಸಂಘವು ವ್ಯವಸ್ಥಾಪನ ವೆಚ್ಚ ಸರಿಯಾಗಿಸಿ ಉಳಿಕೆಯೇ ನಿವ್ವಳ ಲಾಭವಾಗುತ್ತದೆ. ನಿವ್ವಳ ಲಾಭ ಗಳಿಸದೆಯೇ ಸಹಕಾರ ಸಂಘ ನಡೆಸಲಾಗುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಸಂಘದ ಆಸ್ತಿ – ಜವಾಬ್ದಾರಿ ತಃಖ್ತೆಯ ಪ್ರತಿ ಅಂಶವನ್ನು ವಿಶ್ಲೇಷಿಸಿ ಅದರ ಆಗು ಹೋಗುಗಳ ಬಗ್ಗೆ ಅರಿಯಬೇಕಾಗಿರುತ್ತದೆ.

**ಷೇರು ಬಂಡವಾಳ:** ಇದು ಸಂಘದ ಮೂಲ ಬಂಡವಾಳ. ಪ್ರತಿ ಸದಸ್ಯ ಕನಿಷ್ಠ ಒಂದು ಷೇರು ಖರೀದಿಸುವುದು ಕಡ್ಡಾಯ. ಷೇರು ಬಂಡವಾಳ ವೆಚ್ಚ ರಹಿತ ಬಂಡವಾಳ. ನಿವ್ವಳ ಲಾಭದಲ್ಲಿ 'ಲಾಭಾಂಶ' (ಡಿವಿಡೆಂಡ್) ಘೋಷಣೆ ಆದ ನಂತರ ಪಾವತಿಸಲಾಗುತ್ತದೆ. ಇದು 'ಸ್ವಂತ ಬಂಡವಾಳ'ದ ಭಾಗ. ಇದನ್ನು ಅಧಿಕಗೊಳಿಸಿಕೊಳ್ಳುವುದು ಅಗತ್ಯ. ಇದರಿಂದ ನಿಧಿಗಳ ಮೇಲಿನ ವೆಚ್ಚವನ್ನು ತಗ್ಗಿಸಬಹುದು. ತೊಡಕು ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ (ಸಮರ್ಪಕ ಬಂಡವಾಳ) ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ. ಪಾವತಿಯಾದ ಷೇರು ಅಧಿಕಗೊಳಿಸಲು ಕೆಲವು ಮಾರ್ಗೋಪಾಯಗಳನ್ನು ಅನುಸರಿಸಬೇಕಾಗುತ್ತದೆ. ಸದಸ್ಯತ್ವದ ಹೆಚ್ಚಳ, ಷೇರಿನಮೌಲ್ಯ ಏರಿಸುವಿಕೆ (ಉಪನಿಯಮ ತಿದ್ದುಪಡಿ ಮೂಲಕ), ಸಾಲ ನೀಡುವಲ್ಲಿ ಹೆಚ್ಚುವರಿ ಷೇರು ಸಂಗ್ರಹಣೆ (ಶೇ–5–10)'

**ಹೆಚ್ಚು ಸಾಲ ನೀಡಿಕೆ ನಿಧಿಗಳು:** ಸಂಘದ ನಿವ್ವಳ ಲಾಭ ವಿಲೇವಾರಿಯಿಂದ ನಿಧಿಗಳನ್ನು ಸೃಷ್ಟಿಸಲಾಗುತ್ತದೆ. ಸಹಕಾರ ಕಾಯ್ದೆ, ಉಪನಿಯಮ ರೀತಿ ಶೇ 25ಕ್ಕೆ ಕಡಿಮೆ ಇಲ್ಲದಂತೆ ಆಪದ್ಧನ (ಮೀಸಲು) ನಿಧಿ ತೆಗೆದಿರಿಸತಕ್ಕದ್ದು. ಯಾವುದೇ ಋಣಬಾರವಿಲ್ಲದ ನಿಧಿಗಳು ಸ್ವಂತ ಬಂಡವಾಳದ ಭಾಗವಾಗುತ್ತದೆ. ನಿಧಿಗಳು ನಿವ್ವಳ ಲಾಭ ವಿಂಗಡನೆಯಿಂದ ಸೃಷ್ಟಿಯಾಗಿದ್ದು, ವೆಚ್ಚ ರಹಿತ ಬಂಡವಾಳವಾಗಿರುತ್ತದೆ. ಶೇ 25ಕ್ಕೆ ಕಡಿಮೆ ಇಲ್ಲದಂತೆ ಎಂದು ಕಾಯ್ದೆ ಹೇಳುವಾಗ ಅದಕ್ಕಿಂತ ಹೆಚ್ಚು ತೆಗೆದಿರುವುವಲ್ಲಿ ಯಾವುದೇ ನಿರ್ಬಂಧವಿಲ್ಲ. ಆದುದರಿಂದ ಅದಕ್ಕಿಂತ ಅಧಿಕ ತೆಗೆದಿರಿಸುವುದು ವಿವೇಚನಾಯುತ ನಡೆಯಾಗುತ್ತದೆ. ಇದರಿಂದ ನಿಧಿಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸಬಹುದು. ಸ್ವಂತ ಬಂಡವಾಳದ ಹೆಚ್ಚಳದಿಂದ ಸಮರ್ಪಕ ಬಂಡವಾಳವನ್ನು ಅಧಿಕಗೊಳಿಸಿಕೊಳ್ಳಬಹುದು. ನಿಧಿಗಳನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡಿ, ಇತರೆಡೆಗೆ ಖರ್ಚು ಮಾಡದೇ ಇರುವುದುಸಮಂಜಸ.

**ಠೇವಣಿಗಳು:** ಠೇವಣಿಗಳು ಪತ್ತಿನ ಸಹಕಾರ ಸಂಘದಪ್ರಮುಖ ಸಂಪನ್ಮೂಲ. ಠೇವಣಿಗಳು ವೆಚ್ಚ ಸಹಿತ ಬಂಡವಾಳ. ಇದು ಸ್ವಂತ ಬಂಡವಾಳವಲ್ಲ, ಇತರರಿಂದ ಪಡೆದ ಬಂಡವಾಳ. ಇದರ ಮೇಲಿನ ವೆಚ್ಚವನ್ನು ನಿಯಂತ್ರಣದಲ್ಲಿರಿಸಿಕೊಳ್ಳುವುದು ಅತಿ ಅಗತ್ಯ. ಇದರ ಮೇಲಿನ ವೆಚ್ಚ ಹೆಚ್ಚಳವಾದಲ್ಲಿ ನಿಧಿಗಳ ಮೇಲಿನ ವೆಚ್ಚ ಅಧಿಕ ಗೊಳ್ಳುತ್ತದೆ. ಗಳಿಕೆಯಲ್ಲಿನ ಅಂತರ ಕುಗ್ಗುತ್ತದೆ. ಆದುದರಿಂದ ಕಡಿಮೆ ವೆಚ್ಚದ ಠೇವಣಿಗಳಾದ(ಕಾಸಾ–ಕರೆಂಟ್ ಅಕೌಂಟ್ ಮತ್ತು ಸೇವಿಂಗ್ಸ್ ಅಕೌಂಟ್) ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳಲ್ಲಿ ನಠೇವಣಿ ಹೆಚ್ಚು ಇರುವಂತೆ ನೋಡಿಕೊಳ್ಳುವುದು. ಇವು ಬೇಡಿಕೆ ಠೇವಣಿಗಳು ಎನಿಸಿಕೊಳ್ಳುತ್ತವೆ. ನಿಖರ ನಿಶ್ಚಿತ (ಫಿಕ್ಸಡ್) ಠೇವಣಿಗಳು ಅವಧಿ ಠೇವಣಿಗಳು ಎನಿಸಿಕೊಳ್ಳುತ್ತವೆ. ಇದರ

ಮೇಲೆ ಹೆಚ್ಚು ಬಡ್ಡಿದರ ನೀಡಲಾಗುತ್ತದೆ. ಇದರಿಂದ ಠೇವಣಿಗಳ ಮೇಲಿನ ವೆಚ್ಚ, ತನ್ಮೂಲಕ ನಿಧಿಗಳ ಮೇಲಿನ ವೆಚ್ಚ ಅಧಿಕಗೊಳ್ಳುತ್ತದೆ. ಠೇವಣಿಗಳ ಮೇಲೆ ಬಡ್ಡಿ ನಿಗದಿಸುವಲ್ಲಿ ಆಡಳಿತ ಮಂಡಳಿ ವಿವೇಚನಯುತವಾಗಿ ವರ್ತಿಸಬೇಕಾಗುತ್ತದೆ. ಠೇವಣಿಗಳ ಮಿಶ್ರಣದಲ್ಲಿ ಕಡಿಮೆ ವೆಚ್ಚದ ಠೇವಣಿ ಅಧಿಕವಿರುವಂತೆ, ಮತ್ತು ಹೆಚ್ಚಿನ ವೆಚ್ಚದ ಠೇವಣಿ ಕಡಿಮೆ ಇರುವಂತೆ ನೋಡಿಕೊಳ್ಳಬೇಕು. ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಸಮಯ ಮತ್ತು ಬೇಡಿಕೆ ಜವಾಬ್ದಾರಿಯನುಸಾರ ಶೇ.03ರ ಠೇವಣಿಗಳನ್ನು ನಗದು ಅಥವಾ ಬ್ಯಾಂಕ್ ಶಿಲ್ಕು ಆಗಿ (ನಗದು ಮೀಸಲು ಅನುಪಾತ – ಕ್ಯಾಶ್ ರಿಸರ್ವ ರೇಶಿಯೋ – ಸಿ.ಆರ್.ಆರ್) ಆಗಿಮತ್ತು ಶೇ.25ನ್ನು ಶಾಸನಬದ್ಧ ದ್ರವ್ಯ ಆಸ್ತಿ (ಸ್ಟಾಚುಯರಿ ಲಿಕ್ವಿಡ್ ರೇಶಿಯೋ) ಆಗಿ ಹೂಡಿಕೆ (ನಿಶ್ಚಿತ ಠೇವಣಿ, ಸರ್ಕಾರಿ ರಕ್ಷಾ ಪತ್ರಗಳು) ಮಾಡಿರಬೇಕು. ಈ ರೂಢಿಗಳನ್ನು 'ಪತ್ತಿನ ಸಹಕಾರ ಸಂಘಗಳಲ್ಲಿ' ಅನುಸರಿಸುವುದು ಒಳ್ಳೆಯದು. ಇದರಿಂದ ಠೇವಣಿದಾರರಿಗೆ ಅವಶ್ಯಕತೆಗನುಸಾರ' ಬೇಡಿಕೆ ಅನುಸಾರ ಹಿಂತಿರುಗಿಸಲು ಸಾಧ್ಯವಾಗುತ್ತದೆ. ಇದರಿಂದ ಠೇವಣಿದಾರರ (ಸದಸ್ಯರ) ವಿಶ್ವಾಸ ಗಳಿಸಲು ಸಾಧ್ಯ. ಎಲ್ಲ ಠೇವಣಿಗಳನ್ನುಸಾಲದಲ್ಲಿ ತೊಡಗಿಸಿದಾಗ ಠೇವಣಿಗೆಬೇಡಿಕೆ ಬಂದಾಗಹಿಂತಿರುಗಿಸಲು ದ್ರವ್ಯ ಆಸ್ತಿ ಇರುವುದಿಲ್ಲ. ಇದರಿಂದ ಸದಸ್ಯರ (ಠೇವಣಿದಾರರ) ವಿಶ್ವಾಸವನ್ನು ಕಳೆದುಕೊಳ್ಳುತ್ತೇವೆ. ಅಲ್ಪಾವಧಿ ಠೇವಣಿಗಳು ನಮ್ಮಲ್ಲಿದ್ದಲ್ಲಿ ಅಲ್ಪಾವಧಿ ಸಾಲಗಳನ್ನು ನೀಡಬೇಕು. ದೀರ್ಘಾವಧಿ ಠೇವಣೆಗಳಿದ್ದಲ್ಲಿ ದೀರ್ಘಾವಧಿ ಸಾಲಗಳನ್ನು ನೀಡಬೇಕು. ಇದರಿಂದ ನಗದು ಒಳಹರಿವು ಮತ್ತು ಹೊರ ಹರಿವನ್ನು ಸಮತೋಲನಗೊಳಿಸಬಹುದು ಇಲ್ಲದಿದ್ದಲ್ಲಿ ಠೇವಣಿದಾರರ ವಿಶ್ವಾಸವನ್ನು ಕಳೆದು ಕೊಳ್ಳಬೇಕಾಗುತ್ತದೆ. ಇದಕ್ಕೆ ಆಸ್ತಿ ಜವಾಬ್ದಾರಿ ನಿರ್ವಹಣೆ ಎನ್ನಲಾಗುತದೆ. ಪತ್ತಿನ ಸಹಕಾರ ಸಂಘಗಳ ಮೇಲಿನ ಠೇವಣಿಗೆ ವಿಮೆ ಇರುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ವಿಮಾ ಯೋಜನೆ ಅನುಷ್ಠಾನದ ಬಗ್ಗೆ ಆಲೋಚಿಸಬೇಕಿದೆ.

**ಪಡೆದ ಸಾಲಗಳು:** ಅನೇಕ ಪತ್ತಿನ ಸಹಕಾರ ಸಂಘಗಳು ಅದರಲ್ಲಿಯೂ ನೌಕರರ ಪತ್ತಿನ ಸಹಕಾರ ಸಂಘಗಳು ಇತರೆ ಬ್ಯಾಂಕ್/ಜಿ.ಕೇ.ಸ. ಬ್ಯಾಂಕ್‌ನಿಂದ ನಗದು ಪತ್ತಿನ ಮಿತಿ ಪಡೆದು ಸದಸ್ಯರಿಗೆ ಸಾಲ ವಿತರಿಸುತ್ತಿವೆ. ಪಡೆದ ಸಾಲದ ಮೇಲಿನ ಬಡ್ಡಿ ಮತ್ತು ನೀಡಿದ ಸಾಲದ ಮೇಲಿನ ಅಂತರ ಲಾಭವಾಗುತ್ತದೆ. ಪಡೆದ ಸಾಲದ ಮೇಲೆ ವಿಧಿಸುವ ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. ನೀಡಿದ ಸಾಲವನ್ನು ಸಕಾಲದಲ್ಲಿ ವಸೂಲಿ ಮಾಡಿ ಬ್ಯಾಂಕಿಗೆ ಹಿಂತಿರುಗಿಸಬೇಕು. ಇಲ್ಲವಾದಲ್ಲಿ ಸಂಘವು ನಷ್ಟ ಅನುಭವಸುವ ಸಂಭವವಿರುತ್ತದೆ.

**ನಗದು/ ಬ್ಯಾಂಕ್ ಶಿಲ್ಕು:** ಆದಷ್ಟು ಕಡಿಮೆ ಪ್ರಮಾಣದಲ್ಲಿ ಆದರೆ ಅಗತ್ಯತೆ ಇರುವಷ್ಟು ಇರಿಸಿಕೊಳ್ಳಬೇಕು. ಇದರಿಂದ ಗಳಿಕೆ ಇರುವುದಿಲ್ಲ. ಅಲ್ಲದೆ ವಿಮೆ ಮುಂತಾದ ಸೌಲಭ್ಯಗಳನ್ನು ಹೊಂದಬೇಕು. ಇವುಗಳಿಗೆ ವೆಚ್ಚವನ್ನೂ ಮಾಡಬೇಕಾಗುತ್ತದೆ.

**ಹೂಡಿಕೆಗಳು:**ಅತಿ ಎಚ್ಚರದಿಂದ ಗಳಿಕೆ ಬರುವಂತ ಹೂಡಿಕೆಗಳಲ್ಲಿ ತೊಡಗಿಸಬೇಕು. ಡಿವಿಡೆಂಡ್, ಬಡ್ಡಿ ಬರುವಂತಹ ಹೂಡಿಕೆಗಳನ್ನು ಮಾಡಬೇಕು. ಆದಷ್ಟೂ ತೊಡಕು ರಹಿತವಾಗಿರುವಂತೆ ಹೂಡಿಕೆ ಮಾಡಬೇಕು. ಸುರಕ್ಷತಾ ಮತ್ತು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಸಾಲಗಳು ಮತ್ತು ಮುಂಗಡಗಳು:** ಇದುವೇ ಪತ್ತಿನ ಸಹಕಾರ ಸಂಘದ ಪ್ರಮುಖ ಆಸ್ತಿ. ಈ ಆಸ್ತಿಯ ಆರೋಗ್ಯ ಸಂಘದ ಆರೋಗ್ಯದದ್ಯೋತಕ.ಸಾಲ ನೀಡುವಲ್ಲಿ ನಿಯಮಗಳನ್ನು ಪಾಲಿಸುವುದು. ಸಾಲವಸೂಲಾತಿ ಅಥವ ಮರುಪಾವತಿ ಸಾಲ ನೀಡಿಕೆಯಲ್ಲಿ ಪಾಲಿಸುವ ಪ್ರಾಮಾಣಿಕತೆ, ಮತ್ತು ನಿಷ್ಠೆಯನ್ನು ಬಹುತೇಕ ಅವಲಂಭಿಸಿರುತ್ತದೆ. ಒಂದು ಪತ್ತಿನ ಸಹಕಾರ ಸಂಘದಲ್ಲಿ 'ಸಾಲಗಾರ' ಕೂಡ' ಠೇವಣಿದಾರ 'ಸದಸ್ಯನಷ್ಟೇ ಪ್ರಮುಖ ಎಂಬುದನ್ನು ಮರೆಯಲಾಗದು. ಸಾಕಷ್ಟು ಸಾಲ, ಸಕಾಲದಲ್ಲಿ ಸಾಲ ನೀಡಿದಲ್ಲಿ ಸಾಲ ಮರುಪಾವತಿ (ವಸೂಲಾತಿ) ಅದು ಕಷ್ಟಕರ ವಾಗುವುದಿಲ್ಲ. ಇದರಲ್ಲಿಏರು ಪೇರುಆದರೆ ಸಾಲ ವಸೂಲಾತಿ ಕಷ್ಟವಾಗುತ್ತದೆ ಮತ್ತು ಸಂಘವು ನಷ್ಟವನ್ನು ಅನುಭವಿಸುತ್ತದೆ. ಪತ್ತಿನ ಸಹಕಾರ ಸಂಘಗಳಲ್ಲಿ ಆಸ್ತಿಯ ವಿಂಗಡನೆ ರೂಡಿಯಲಿಲ್ಲ. ಇತರೆ ಪತ್ತಿನ ವಲಯದಲ್ಲಿ ಇದು ರೂಡಿಯಲ್ಲಿದೆ. ಅಲ್ಲದೆ

ಅದರ ಶ್ರೇಣ ಅನುಸಾರ ಲಾಭ ನಷ್ಟ ತನ್ನೆಯಲ್ಲಿ ನಿವ್ವಳ ಲಾಭ ಪೂರ್ವದಲ್ಲಿ ಅದಕ್ಕಾಗಿ 'ಅವಕಾಶ' ಕಲ್ಪಿಸಲಾಗುತ್ತದೆ. ಅದೇ ರೂಡಿಯನ್ನು ಪತ್ತಿನ ಸಹಕಾರ ಸಂಘಗಳಲ್ಲಿ ಅನುಸರಿಸಿದರಂ ಸಂಘದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಸಕಾಲದಲ್ಲಿ ಸಾಲ ವಸೂಲಾತಿ ಮತ್ತು ಸಾಲ ವಿತರಣೆಯಿಂದ ಸಂಘದ ವ್ಯವಹಾರವನ್ನು ವಿಸ್ತರಿಸಿಕೊಳ್ಳಬಹುದು. ಯಾವುದೇ ಒಂದೇ ವಿಧದ ಸಾಲವಿತರಿಸುವ ಬದಲಿಗೆ ವೈವಿಧ್ಯಮಯ ಸಾಲಗಳನ್ನು ವಿತರಿಸುವುದು ಉತ್ತಮ ಕ್ರಮ.ಒಂದು ವಲಯ ತೊಂದರೆ ಗೀಡಾದರೂ ಮತ್ತೊಂದು ವಲಯ ಸಂಘವನ್ನು ಕಾಪಾಡುತ್ತದೆ.

**ಇತರೆ ಚಟುವಟಿಕೆಗಳು:** ಅನೇಕ ಸಹಕಾರ ಸಂಘಗಳ ಕ.ರಾ.ಪ.ಸ.ಸಂ. ಮಹಾಮಂಡಳ, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಒಡಂಬಡಿಕೆಯೊಂದಿಗೆ ಇ–ಸ್ಟಾಂಪ್ ವಿತರಣೆ ಮಾಡುತ್ತಿದ್ದು, ಆದಾಯ ಗಳಿಸುತ್ತಿವೆ. ಇತರೆ ಬ್ಯಾಂಕ್‌ಗಳ ಸಹಯೋಗದೊಂದಿಗೆ, ಆರ್.ಟಿ.ಜಿ.ಎಸ್. ನೆಫ್ಟ್, ಸೌಲಭ್ಯ ಒದಗಿಸುತ್ತಿವೆ.

**ಸಮರ್ಪಕ ಬಂಡವಾಳ:** (ತೂಕ ಸಹಿತ ಆಸ್ತಿಗೆ ಸ್ವಂತ ಬಂಡವಾಳದ ಅನುಪಾತ – Capital to risk weighted asset ratio-CRAR): ಪತ್ತಿನ ಸಹಕಾರವಲಯ ಹೊರತುಪಡಿಸಿ ಇತರೆ ವಲಯಗಳಲ್ಲಿ ಸಂಸ್ಥೆಯ ಆರೋಗ್ಯದ ಅರಿವಿಗೆ ಇದನ್ನು ಲೆಕ್ಕ ಹಾಕಲಾಗುತ್ತಿದೆ. ಇದು ಕನಿಷ್ಟ ಶೇ.9 ಇರಬೇಕೆಂದು ನಿರೀಕ್ಷಿಸಲಾಗಿದೆ. ಈ ರೂಡಿಪದ್ಧತಿ ಈ ವಲಯದಲ್ಲಿ ಬಂದರೆ ಒಳ್ಳೆಯದು.ಇದರಿಂದ ಸದಸ್ಯರಿಗೆ ಉತ್ತಮ ಮಾಹಿತಿ ಒದಗಿಸಿದಂತಾಗುತ್ತದೆ.

ಕರ್ನಾಟಕದಲ್ಲಿ ಪತ್ತಿನ ಸಹಕಾರ ಸಂಘಗಳು ತಮ್ಮದೇ ಮಹಾ ಮಂಡಳ ರಚಿಸಿಕೊಂಡಿದ್ದು, ಮಹಾಮಂಡಳವು ಈ ಸಂಘಗಳ ಸರ್ವತೋಮುಖ ಅಭಿವದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ.

ಮಹಾ ಮಂಡಳವು ಶಿಕ್ಷಣ, ತರಬೇತಿ, ಪ್ರಚಾರದ ಮೂಲಕ ಈ ಸಹಕಾರ ಸಂಘಗಳ ಬಲವರ್ಧನೆಗೆ ಕಾರಣವಾಗಿರುತ್ತದೆ. ಇದರಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಲಕ್ಷಾಂತರ ಜನರಿಗೆ ಉದ್ಯೋಗಸೃಷ್ಟಿ ಮತ್ತು ಆರ್ಥಿಕ ಬೆಳವಳಿಗೆಗೆ ಕಾರಣವಾಗಿರುವುದು ಹೆಮ್ಮೆಯ ವಿಷಯವಾಗಿದೆ. 'ಸಣ್ಣದು ಸುಂದರ' ಮತ್ತು ಇದರ ಒಕ್ಕೂಟ ವ್ಯವಸ್ಥೆಯಿಂದ ಸದಸ್ಯರ ಆರ್ಥಿಕ ಪ್ರಗತಿಗೆ ಕಾರಣವಾಗಿರುವುದು ಶ್ಲಾಘನೀಯ ಮತ್ತು ಈ ವ್ಯವಸ್ಥೆ ಆರ್ಥಿಕ ಪ್ರಗತಿಯೊಡನೆ ಸಾಮಾಜಿಕ ನ್ಯಾಯಕ್ಕೆ ಇದು ಅತ್ಯುತ್ತಮ ಮಾದರಿಯಾಗಿರುತ್ತದೆ. ಈ ಕಾಲಘಟ್ಟದಲ್ಲಿ ಮತ್ತು ಮುಂದೆಯೂ ಈ ವ್ಯವಸ್ಥೆ ಪ್ರಸ್ತುತತೆ ಉಳಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ.

**ಹಣ ಎಂಬುದು ಗೊಬ್ಬರವಿದ್ದಂತೆ, ಗುಡ್ಡೆ ಹಾಕಿಟ್ಟರೆ ದುರ್ನಾತ ಬೀರುತ್ತದೆ. ಹರಡಿದರೆ ಬೆಳೆಯುತ್ತಾ ಹೋಗುತ್ತದೆ.**

**– ಜೆ.ಆರ್.ಡಿ.ಟಾಟಾ.**

*********************************************************************************************

# 44. ಪತ್ತಿನ ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಸಮರ್ಪಕ ಬಂಡವಾಳ ಹೊಂದುವ ಅವಶ್ಯಕತೆಯ ಪ್ರಾಮುಖ್ಯತೆ

ಪತ್ತಿನ ಸಹಕಾರ ಸಂಘಗಳು ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಸದಸ್ಯರಿಂದ ಠೇವಣಿ ಸಂಗ್ರಹಿಸುವುದು ಮತ್ತು ಸದಸ್ಯರಿಗೆ ಸಾಲ ನೀಡುವ ಮತ್ತು ಇತರೆಡೆ ಹೂಡಿಕೆ ಮಾಡುವ ಚಟುವಟಿಕೆಯಲ್ಲಿ ಕೊಡಗಿನ ಕೊಂಡಿವೆ. ಅಂದರೆ, ಇದೂ ಕೂಡ ಸಂಘದೊಳಗಿನ ಬ್ಯಾಂಕಿಂಗ್ ಚಟುವಟಿಕೆ. ಬ್ಯಾಂಕ್‌ಗಳು ರಿಸರ್ವ್ ಬ್ಯಾಂಕ್‌ನಿಂದ ಪರವನಾಗಿ ಪಡೆಯುವುದರಿಂದ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸಲು ಮತ್ತು ಸಾರ್ವಜನಿಕರಿಗೆ ಸಾಲ ನೀಡಲು ಅರ್ಹತೆ ಪಡೆದಿರುತ್ತವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ಗಳು,

ಈ ಚಟುವಟಿಕೆಯನ್ನು ಸದಸ್ಯರೊಂದಿಗೆ ಮಾತ್ರ ನಡೆಸುತ್ತಿವೆ. ಈ ಸಂಸ್ಥೆಗಳಿಗೆ 'ನಬಾರ್ಡ್' 'ಸಮರ್ಪಕ ಬಂಡವಾಳ' ಅಥವಾ 'ತೊಡಕು ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ'ವನ್ನು ನಿಗಧಿಪಡಿಸಿದೆ. ಅದು ಇಂಗ್ಲಿಷ್‌ನಲ್ಲಿ 'ಕ್ಯಾಪಿಟಲ್ ಟು ರಿಸ್ಕ್ ವೈಟೆಡ್ ಅಸೆಟ್ ರೇಶಿಯೋ' (ಸಿ.ಆರ್.ಎ.ಆರ್). ಅಲ್ಲದೆ ಜಿ.ಕೇ.ಸ. ಬ್ಯಾಂಕ್, ರಾಜ್ಯ ಸ. ಬ್ಯಾಂಕ್‌ಗಳಿಗೂ ನಿಗದಿಪಡಿಸಿದೆ. ಇದು ಶೇ 9. ಹಾಗೂ ಶೇ12 ರಷ್ಟನ್ನು ಹೊಂದುವ ನೀರಿಕ್ಷೆ ವ್ಯಕ್ತಪಡಿಸಲಾಗಿದೆ. ಇದು ಸಂಸ್ಥೆಯ ಆರ್ಥಿಕ ಆರೋಗ್ಯದ ಪರಿಸ್ಥಿತಿಯ ಧ್ಯೋತಕವಾಗಿರುತ್ತದೆ. ಇದರಿಂದ ಸಂಸ್ಥೆಯು ಮುಂದೆ ಕಾಣಲಾರದ ನಷ್ಟಗಳು, ತೊಡಕುಗಳು ಬಂದಾಗ ಅದನ್ನು ತಡೆದು ಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ. ಇದರಿಂದ ಠೇವಣಿದಾರರ, ಸಾಲ ನೀಡುವವರ ವಿಶ್ವಾಸಕ್ಕೆ ಪಾತ್ರರಾಗಬಹುದು. ಆದುದರಿಂದ ಈ ನೀತಿಯನ್ನು ಪತ್ತಿನ ಸಹಕಾರ ಸಂಘಗಳು ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಅಳವಡಿಸಿಕೊಳ್ಳುವುದು ತಮ್ಮ ಉತ್ತಮ ಕಾರ್ಯಾಚರಣೆ ದೃಷ್ಟಿಯಿಂದ ಅಗತ್ಯ.

ಹಾಗಾದರೆ ಸಮರ್ಪಕ ಬಂಡವಾಳ ಅಥವಾ 'ಕ್ಯಾಪಿಟಲ್ ಅಡಿಕ್ವೆಸಿ' ಅಥವಾ ಸಿ.ಆರ್.ಎ.ಆರ್. ಎಂದರೇನು? ಎಂಬ ಪ್ರಶ್ನೆ ಮೂಡುವುದು ಸಹಜ. ಪ್ರಾ.ಕೃ.ಪ.ಸ.ಸಂ.ಗಳ, ಪ್ರಾ.ಸ.ಕ್ರ. ಮತ್ತು ಗ್ರಾ.ಅ. ಬ್ಯಾಂಕಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಯಾ ಆರ್ಥಿಕ ವರ್ಷದ ಅಂತಿಮ ಲೆಕ್ಕ ಆಧರಿಸಿ, ಇದುಶೇ. ಎಷ್ಟಿದೆ ಎಂದು ನಮೂದಿಸಲಾಗುತ್ತದೆ. ಅದರಂತೆ, ಸಹಕಾರ ಬ್ಯಾಂಕ್‌ಗಳ ಲೆಕ್ಕಪರಿಶೋಧನಾ ವರದಿಗಳಲ್ಲಿನ ಮೂದಿಸುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಇದರ ಅರ್ಥ ಅರಿಯುವುದು ಅಷ್ಟೇ ಮುಖ್ಯವಾಗಿರುತ್ತದೆ.

ಸಿ.ಆರ್.ಎ.ಆರ್.ನ ವಿಸ್ತೃತ ರೂಪ ವಿವರಿಸುವಂತೆ, ಸಂಸ್ಥೆಯ ಆಸ್ತಿಜವಾಬ್ದಾರಿ ತಃಖ್ತೆ (ಅಡಾವೆ ಪತ್ರಿಕೆ)ಯಲ್ಲಿನ ಅಂಕಿಅಂಶಗಳ ಆಧಾರವಾಗಿ, ಅದರ 'ತೊಡಕು ತೂಕ ಆಸ್ತಿಗೆ ಬಂಡವಾಳದ ಅನುಪಾತ'. ಇಲ್ಲಿ ಬಳಸಿರುವ ಪದಪುಂಜಗಳ ಅರ್ಥವನ್ನು ತಿಳಿಯಬೇಕು. 'ತೊಡಕು ತೂಕ ಆಸ್ತಿ' ಎಂದರೇನು? (ರಿಸ್ಕ್‌ವೈಟೆಡ್‌ಅಸೆಟ್). ಸಂಸ್ಥೆಯು ನಡೆಸುವ ಪ್ರತಿ ವ್ಯವಹಾರವೂ ತೊಡಕು (ರಿಸ್ಕ್)ನಿಂದ ಕೂಡಿರುತ್ತದೆ. 'ತೊಡಕು' ಎಂದರೆ ಸಂಭವನೀಯ ನಷ್ಟ. ತೊಡಕಿಲ್ಲದೇ ಯಾವುದೇ ವ್ಯವಹಾರವನ್ನು ಮಾಡಲಾಗುವುದಲ್ಲ. ತೊಡಕು ಅನಿವಾರ್ಯ.ಆದರೆ ಎಷ್ಟು ತೊಡಕನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಆಧರಿಸಿಆ ಆಸ್ತಿಗೆ 'ತೊಡಕುತೂಕ' ವನ್ನು ಸೇರಿಸಲಾಗುತ್ತದೆ. (ರಿಸ್ಕ್‌ವೈಟ್). ಆಸ್ತಿಯ ಆರೋಗ್ಯ ಗುಣಮಟ್ಟದ್ದಾಗಿದ್ದರೆ ಕಡಿಮೆ ತೊಡುಕು ತೂಕವಿರುತ್ತದೆ. ಆಸ್ತಿಯ ಆರೋಗ್ಯ ಕಳಪೆ ಮಟ್ಟದಲ್ಲಿದ್ದರೆ ಆಸ್ತಿಯ ತೊಡಕು ತೂಕ ಅಧಿಕವಾಗಿರುತ್ತದೆ. ಅದು ಕಾರ್ಯನಿರತವಲ್ಲದ ಆಸ್ತಿ (ಎನ್.ಪಿ.ಎ–ನಾನ್‌ಪರ್ಫಾಮಿಂಗ್ ಅಸೆಟ್)ಆದಷ್ಟು ತೂಕ ಅಧಿಕಗೊಳ್ಳುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ತೊಡಕು ತೂಕದ ಬಗ್ಗೆಪ್ರತಿ ವರ್ಷ ನಿಗದಿಪಡಿಸಿ ಸುತ್ತೋಲೆ ಹೊರಡಿಸುತ್ತದೆ. ಲೇಖನದ ಜೊತೆ ಆಕೋಷ್ಟಕವನ್ನು ಒದಗಿಸಿದೆ. ಅದರಂತೆ ತೊಡಕು ತೂಕ ಸೇರಿಸಿದಾಗ ಆಸ್ತಿಯ ಒಟ್ಟು ಮೊತ್ತ ಏರಿಕೆಯಾಗುತ್ತದೆ. ಇಲ್ಲಿ 'ಬಂಡವಾಳ' ವೆಂದರೇನು? 'ಬಂಡವಾಳ' ವೆಂದರೆ' ಸ್ವಂತ ಬಂಡವಾಳ'(ಓನ್‌ಕ್ಯಾಪಿಟಲ್), ಇದು ಸಂಸ್ಥೆಯ ಪಾವತಿಯಾದ ಷೇರು ಬಂಡವಾಳ ಮತ್ತು ಸ್ವಂತ ನಿಧಿಗಳನ್ನು ಒಳಗೊಳ್ಳುತ್ತದೆ. ಇದಕ್ಕೆ ಟಯರ್ – 1, ಬಂಡವಾಳ ಎನ್ನಲಾಗುತದೆ. ಪಾವತಿಯಾದ ಷೇರು ಬಂಡವಾಳ ನಮ್ಮದೇ ಆಗಿರುತ್ತದೆ. ನಿಧಿಗಳು ನಮ್ಮ ಲಾಭದಿಂದ ಭವಿಷ್ಯಕ್ಕೆ ತೆಗೆದಿರಸಲಾದ ನಿಧಿಗಳು,ಅದು ಮೀಸಲು ನಿಧಿ (ಆಪದ್ಧನ ನಿಧಿ,ರಿಸರ್ವ್ ಫಂಡ್)ಆಗಿರುತ್ತದೆ. ಇದರ ಮೇಲೆ ಯಾವುದೇ ಋಣಭಾರವಿರಬಾರದು. 'ಆನ್ ಎನ್ ಕಂಬರ್ಡ್ ರಿಸರ್ವ್' ಇದನ್ನು ಮಾತ್ರ 'ಸ್ವಂತ ಬಂಡವಾಳ' ಎಂದು ಪರಿಗಣಿಸಲಾಗುತ್ತದೆ. ಇದರ ಅನುಪಾತ (ರೇಶಿಯೋ)ವನ್ನು ಈ ಕೆಳಕಂಡ ಕೋಷ್ಟಕದಂತೆ ಲೆಕ್ಕ ಹಾಕಲಾಗುವುದು.

ಸ್ವಂತ ಬಂಡವಾಳ ಸಮರ್ಪಕ ಬಂಡವಾಳ=ಸ್ವಂತಬಂಡವಾಳ–ತೂಕ ಸಹಿತ ಆಸ್ತಿಯ ಒಟ್ಟು ಮೊತ್ತ. (ಸಿ.ಆರ್.ಎಲ್)

ಸ್ವಂತ ಬಂಡವಾಳ=ಪಾವತಿಯಾದ ಷೇರು ಬಂಡವಾಳ+ ಋಣಭಾರರಹಿತ ನಿಧಿಗಳು–ಕ್ರೋಡಿಕೃತ ನಷ್ಟಗಳು.

**ಸಹಕಾರ ಸಂಸ್ಥೆಗಳು ಸಮರ್ಪಕ ಬಂಡವಾಳ ಹೊಂದಲು ಅಳವಡಿಸ ಕೊಳ್ಳಬೇಕಾದ ಅವಶ್ಯ ತಂತ್ರಗಾರಿಕೆ:**

ಇದು ಕನಿಷ್ಟ ಶೇ9.ಎಂದು ನೀರೀಕ್ಷಿಸಲಾಗಿದೆ. ಈ ಸಮರ್ಪಕ ಬಂಡವಾಳ ಹೊಂದಬೇಕಾದರೆ ಸಂಘದ ಜವಾಬ್ದಾರಿ ಕಡೆಯಲ್ಲಿನ ಸಂಗತಿಗಳು, ಸಂಪನ್ಮೂಲಗಳೂ ಆದ ಪಾವತಿಯಾದ ಷೇರುಬಂಡವಾಳವು ಅಧಿಕವಾಗಿರಬೇಕಾಗುತ್ತದೆ. ಇದರ ಹೆಚ್ಚಳಕ್ಕಾಗಿ ಸಂಘವು ಅವಶ್ಯ ತಂತ್ರಗಾರಿಕೆಯನ್ನು ಅನುಸರಿಸಬೇಕಾಗುತ್ತದೆ. ಮೂಲವಾಗಿ ಷೇರು ಬಂಡಾಳದ ಮೊತ್ತ ಕಡಿಮೆ ಇದ್ದಲ್ಲಿ ಉಪನಿಯಮ ತಿದ್ದುಪಡಿಯೊಂದಿಗೆ ಅದನ್ನು ಅಧಿಕಗೊಳಿಸುವುದು, ಸದಸ್ಯತ್ವವನ್ನು ಹೆಚ್ಚಿಸುವುದು. ಸಾಲ ವಿತರಿಸುವಲ್ಲಿ ತಪ್ಪದೇ ಹೆಚ್ಚುವರಿ ಷೇರು ಸಂಗ್ರಹಿಸುವುದು. ನಿಧಿಗಳ ಸೃಷ್ಠಿಗೆ ಪ್ರಾಧಾನ್ಯತೆ ನೀಡಬೇಕು. ಕಾಯ್ದೆ ಪ್ರಕಾರಶೇ 25ಕ್ಕೆ ಕಡಿಮೆ ಇಲ್ಲದಂತೆ ಮೀಸಲು ನಿಧಿಗೆ ಲಾಭದಲ್ಲಿ ತೆಗೆದಿರಿಸುವುದು ಎಂದಿದೆ. ಇದು ಸರ್ವ ಸದಸ್ಯರ ಸಭೆ ಅಧಿಕಾರವಾಗಿದ್ದು, ಆಡಳಿತ ಮಂಡಳಿಯೂ ಶೇ 25 ಕ್ಕಿಂತ ಹೆಚ್ಚಿಗೆ ಮೀಸಲು ನಿಧಿ ಸೃಜಿಸಲು ಅವಕಾಶವಿದ್ದು ಸರ್ವಸದಸ್ಯರ ಅನುಮೋದನೆಗೆ ಮಂಡಿಸಲು ಆಲೋಚಿಸಿ ಕ್ರಮವಿಡುವುದು ಸಂಸ್ಥೆಯ ಆರ್ಥಿಕ ಆರೋಗ್ಯ ದಷ್ಟಿಯಿಂದ ಅಗತ್ಯ. ಈ ಕ್ರಮನಿಧಿಗಳ ಮೇಲಿನ ವೆಚ್ಚವನ್ನು ಕಡಿಮೆಗೊಳಿಸುತ್ತದೆ. ಆಡಳಿತ ಆಸ್ತಿಯ ತೊಡಕು ತೂಕಸಹಿತ ಮೊತ್ತ ಕಡಿಮೆಗೊಳಿಸಿಕೊಳ್ಳಬೇಕು. ಎಂದರೆ ಆಸ್ತಿಯ ಆರೋಗ್ಯದ ಗುಣಮಟ್ಟ ಉತ್ತಮವಾಗಿರಬೇಕು. ಹೂಡಿಕೆಗಳು ಗಳಿಕೆ ತರುವಂತಹ, ತರುತ್ತಿರುವ ಹೂಡಿಕೆಗಳಾಗಬೇಕು. ಸಾಲ ಮತ್ತು ಮುಂಗಡಗಳ ವಲಯವು ಪತ್ತಿನ ಸಹಕಾರ ಸಂಘಗಳ, ಪತ್ತಿನ ವ್ಯವಹಾರ ನಡೆಸುತ್ತಿರುವ ವಿವಿದೋದ್ದೇಶ ಸಹಕಾರ ಸಂಘಗಳ ಪ್ರಮುಖ ಆಸ್ತಿಯಾಗಿರುವುದರಿಂದ ಇದರ ಆರೋಗ್ಯ ಅತಿಮುಖ್ಯ. ಎಂದರೆ ಸಾಲದ ವಸೂಲಾತಿ ಅತ್ಯುತ್ತಮವಾಗಿರಬೇಕು. ಕಾರ್ಯನಿರ್ವದಲ್ಲದ ಆಸ್ತಿ (ಎನ್.ಪಿ.ಎ) ಅತಿ ಕಡಿಮೆ ಇರಬೇಕು. ಅದಕ್ಕೆ ಅಗತ್ಯದಷ್ಟು ಅಕಾಶವನ್ನು ಕಲ್ಪಿಸಿರಬೇಕು. ಈ ಕ್ರಮಗಳಿಂದ ಸಂಘವು ಸಮರ್ಪಕ ಬಂಡವಾಳ ಹೊಂದಿ ಯಶಸ್ವಿ ಕಾರ್ಯಾಚರಣೆ ಸಾಧ್ಯವಾಗುತ್ತದೆ.

**ತೊಡಕು ತೂಕ ಆಸ್ತಿ ಕೋಷ್ಟಕ**

| ಕ್ರ.ಸಂ. | ಆಸ್ತಿ | ತೊಡಕು ತೂಕ ಶೇ. |
|---|---|---|
| | ನಗದು ಶಿಲ್ಕ | 0 |
| | ಬ್ಯಾಂಕಿನಿನಲ್ಲಿನ ಚಾಲ್ತಿ ಖಾತೆ | 20 |
| | ಬ್ಯಾಂಕಿನಲ್ಲಿನ ಉಳಿತಾಯ ಖಾತೆ | 22.5 |
| | ಬ್ಯಾಂಕ್ ಅಲ್ಲದೆ ಇತರ ಸಂಸ್ಥೆ | 22.5 |
| | **ಹೂಡಿಕೆಗಳು** | |
| | ಸರ್ಕಾರದ ಭದ್ರತೆಗಳು | 2.5 |
| | ಸಹಕಾರ ಸಂಸ್ಥೆಗಳ ಷೇರುಗಳು | 102.5 |
| | ಮೀಸಲು ನಿಧಿಹೂಡಿಕೆ | 22.5 |
| | ಬ್ಯಾಂಕಲ್ಲಿನ ನಿಶ್ಚಿತ ಠೇವಣಿಗಳು | 22.5 |
| | ಸಣ್ಣ ಉಳಿತಾಯ ಪತ್ರಿಕೆಗಳು | 2.5 |
| | ಭವಿಷ್ಯನಿಧಿ ಟ್ರಸ್ಟ್ / ಬ್ಯಾಂಕಿನಲ್ಲಿ ಠೇವಣಿ | 22.5 |
| | ಮಾರುಕಟ್ಟೆ ಸ.ಸಂ.ಗಳಲ್ಲಿ ಠೇವಣಿ | 102.5 |

| | | |
|---|---|---|
| | **ಸಾಲಗಳು ಮತ್ತು ಮುಂಗಡಗಳು** | |
| | ಅಲ್ಪ ಅವಧಿ/ಮದ್ಯಮ/ ದೀರ್ಘಾವಧಿಸಾಲಗಳು | ಶೇ 100 |
| | ಸಿಬ್ಬಂದಿ ಮುಂಗಡಗಳು ರಕ್ಷಣೆ ಇದ್ದಲ್ಲಿ | 20 |
| | ಅಂತಿಮ ದಾಸ್ತಾನು | |
| | ನಿವೇಶನ, ಕಟ್ಟಡ, ಗೋದಾಮು | 100 |
| | ಕಂಪ್ಯೂಟರ್,ಮರ ಮುಟ್ಟು. ವಿದ್ಯುಚ್ಛಕ್ತಿಪರಿಕರಗಳು | 100 |
| | ವಾಹನಗಳು | 100 |
| | ಕೃಷಿ ಉಪಕರಣಗಳು | 100 |
| | **ಇತರೆ ಆಸ್ತಿಗಳು** | |
| | ಕ್ರೋಡೀಕೃತ ಬಡ್ಡಿ ಆದರೆ ಸುಸ್ತಿಯಾಲ್ಲ | 100 |
| | ಸುಸ್ಥಿಬಡ್ಡಿ | 100 |
| | ಹೂಡಿಕೆ ಮೇಲೆ ಬಡ್ಡಿಬಾಕಿ | 100 |
| | ಸಂಡ್ರಿಡೆಟರ್ಸ್ | 100 |
| | ಇತರೆ ಬರಬೇಕಾದದ್ದು | 100 |
| | ದುರುಪಯೋಗ ಮೊತ್ತ | 100 |
| | ಮುಂಗಡ ಪಾವತಿಸಿದ ಖರ್ಚುಗಳು | 100 |

**(ಲೇಖನಕ್ಕೆ ಆಧಾರ:ನಬಾರ್ಡನ ಸಾಮರ್ಥ್ಯಭಿವೃದ್ಧಿ ಕಾರ್ಯಕ್ರಮಗಳ ಅಧ್ಯಯನಸಾಮಗ್ರಿ)**

************************************************************************************************

# 45.ಪತ್ತಿನ ಸಹಕಾರ ಸಂಘಗಳಲ್ಲಿ ಠೇವಣಿ ಸಂಗ್ರಹಣೆ, ಸಾಲವಿತರಣೆ, ಸಾಲ ವಸೂಲಾತಿಯ ಕ್ರಮಗಳು

ಭಾರತದಲ್ಲಿ ಸಹಕಾರ ಚಳುವಳಿ ಆರಂಭ ಗೊಂಡಿದ್ದು 'ಭಾರತದ ಪತ್ತಿನ ಸಹಕಾರ ಕಾಯ್ದೆ 1904 'ರಿಂದ ಎಂದರೆ ತಪ್ಪಾಗಲಾರದು. ಆಗ ರೈತರ ಪತ್ತಿನ ಅವಶ್ಯಕತೆ ಪೂರೈಸಲು ಯೂರೋಪ್ ನ 'ರಾಫಿಸನ್' ಮಾದರಿ ಅನುಸರಿಸಲಾಯಿತು. ಯೂರೋಪ್ ನಲ್ಲಿ ಪಟ್ಟಣ, ಅರೆಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರು ಕೃಷಿ ಅವಶ್ಯ ಉಪಕರಣ ತಯಾರಿ ಉದಾಃ –ಕುಲುಮೆ (ಕಮ್ಮಾರಿಕೆ) ಬಡಗಿ (ಮರಗೆಲಸ) ಸಣ್ಣ ವ್ಯಾಪಾರ ವಹಿವಾಟು ಈ ರೀತಿಯ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಜನತೆ ತಮ್ಮಲ್ಲಿನ ಹೆಚ್ಚುವರಿ ಹಣವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಿ ಅವಶ್ಯಕತೆಗೆ ಅನುಸಾರ ಅವರೇ ಅಥವಾ ಅವಶ್ಯಕತೆ ಇರುವವರಿಗೆ ಸಾಲ(ಪತ್ತು)ನೀಡಲು ಸ್ಥಾಪನೆಯಾದ ಸಹಕಾರ ಸಂಘಗಳಿಗೆ 'ಷ್ಲೂಜ್' ಮಾದರಿ ಸಹಕಾರ ಸಂಘಗಳು ಎಂದು ಕರೆಯಲಾಯಿತು. ಸರ್ ಹರ್ಮನ್ ಷ್ಲೂಜ್ ಎನ್ನುವವರ ನಾಯಕತ್ವ ಮಾರ್ಗದರ್ಶನ ದಲ್ಲಿ ಈ ಸಹಕಾರ ಸಂಘಗಳು ಸ್ಥಾಪನೆಯಾದುದರಿಂದ ಈ ಹೆಸರಿನಿಂದ ಅವುಗಳನ್ನು ಕರೆಯಲಾಯಿತು. 1904 ರ

ಕಾಯ್ದೆ ಭಾರತದಲ್ಲಿ ಜಾರಿಯಾದ ನಂತರ ಭಾರತದಲ್ಲಿ ಯೂ ಈ ಮಾದರಿಯ ಸಹಕಾರ ಸಂಘಗಳು ಆರಂಭಗೊಂಡವು. ಅದರಲ್ಲಿಯೂ ಪ್ರಮುಖವಾಗಿ ಗುಜರಾತ್, ಮಹರಾಷ್ಟ್ರ ಕರ್ನಾಟಕದಲ್ಲಿ ಅನೇಕ ಈ ರೀತಿಯ ಸಹಕಾರ ಸಂಘಗಳು ಸ್ಥಾಪನೆಯಾಗಿ ಚಳುವಳಿಯ ರೂಪವನ್ನು ಪಡೆಯಿತು. ಈ ಸಹಕಾರ ಸಂಘಗಳನ್ನು ನಾವು 'ಪತ್ತಿನ ಸಹಕಾರ ಸಂಘಗಳು' ಎಂದು ಗುರುತಿಸುತ್ತಿರುತ್ತೇವೆ.

ಕರ್ನಾಟಕದಲ್ಲಿ ಐದು ಸಾವಿರ ಕ್ಕೂ ಮೀರಿ ಈ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವು ತನ್ನ ಸದಸ್ಯರಿಂದ ಠೇವಣಿ ಸಂಗ್ರಹಣೆ ಮಾಡುತ್ತವೆ ಮತ್ತು ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಸಾಲವನ್ನು ಒದಗಿಸಿ ವ್ಯವಹಾರಕ್ಕೆ 'ದುಡಿಯುವ ಬಂಡವಾಳ' ಆಸ್ತಿ ನಿರ್ಮಾಣಕ್ಕಾಗಿ 'ಹೂಡಿಕೆ ಸಾಲ' ಅಲ್ಲದೆ ಬಳಕೆ ವಸ್ತುಗಳ ಖರೀದಿ ಮುಂತಾದ ಜೀವನ ಉತ್ತಮ ಗೊಳಿಸುವಿಕೆಗಾಗಿ ವೈಯಕ್ತಿಕ ಸಾಲ, ಖಾತ್ರಿ ಸಾಲಗಳನ್ನು ಒದಗಿಸುತ್ತಿವೆ. ಇದರಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗ ಸೃಷ್ಠಿ, ಸಾಮಾನ್ಯ ಜನತೆಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಅಭಿವೃದ್ಧಿಗೆ ಕಾರಣವಾಗಿರುತ್ತವೆ. ಅನೇಕ ಸಹಕಾರ ಸಂಘಗಳುನಿಧಿಯೇ ತರ ವ್ಯವಹಾರವಾಗಿ ಇ–ಸ್ಟಾಂಪ್ ಪೇಪರ್ ಮಾರಾಟ ಏಜೆನ್ಸಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಿವೆ.

**ಠೇವಣಿ** ಸಂಗ್ರಹಣೆ: ಈ ಸಹಕಾರ ಸಂಘಗಳಲ್ಲಿ ಸದಸ್ಯರ ಮೂಲ ಬಂಡವಾಳವೇ 'ಪಾವತಿಯಾದ ಷೇರು ಬಂಡವಾಳ'. ಈ ಬಂಡವಾಳದಿಂದ ಸಹಕಾರ ಸಂಘಗಳ ವ್ಯವಹಾರವಾದ 'ಸಾಲ ವಿತರಣೆ' ಮಾಡಲು ಎಷ್ಟು ಸಾಧ್ಯ? ಸಹಕಾರ ಸಂಘಗಳಲ್ಲಿ ಸಾಲ ವಿತರಣೆ ಮೊತ್ತದ ಶೇ 5 ಅಥವ 10 ನ್ನು ಅಧಿಕ(ಹೆಚ್ಚುವರಿ ಬಂಡವಾಳ) ವಾಗಿ ಸಂಗ್ರಹಿಸುವ ಪದ್ಧತಿ ರೂಢಿಯಲ್ಲಿದೆ. ಇದರಿಂದ ಸಂಘದ ಸ್ವಂತ ಬಂಡವಾಳ ಹೆಚ್ಚಳ ಸಾಧ್ಯವಾಗುತ್ತದೆ. ಮತ್ತು ಇದು ವೆಚ್ಚ ರಹಿತ ಬಂಡವಾಳ ವಾಗಿರುತ್ತದೆ. ಏಕೆಂದರೆ, ಲಾಭಗಳಿಸಿದಲ್ಲಿ, ಲಾಭಂಶ (ಡಿವಿಡೆಂಡ್) ಘೋಷಣೆ ಯಾದಲ್ಲಿ ಲಾಭದಲ್ಲಿ ಹಂಚಲಾಗುತ್ತದೆ ಯಾವುದರಿಂದ ಇದು ವೆಚ್ಚ ರಹಿತ ಬಂಡವಾಳ ವಾಗುತ್ತದೆ. ಆದರೆ ಕೇವಲ ಇದನ್ನೇ ಅವಲಂಭಿಸಿದರೆ ವ್ಯವಹಾರ ವೃದ್ಧಿ ಸಲು ಸಾಧ್ಯವಾಗುವುದಿಲ್ಲ. ಸಂಘವು ಇತರೆಡೆಯಿಂದ ಬಂಡವಾಳವನ್ನು (ಸಂಪನ್ಮೂಲ)ವನ್ನು ತರುವುದು ಅನಿವಾರ್ಯ. ಆದುದರಿಂದ ಪತ್ತಿನ ಸಹಕಾರ ಸಂಘಗಳು 'ಠೇವಣಿ ಸಂಗ್ರಹಣೆ' ಮಾಡಲೇಬೇಕು.

ಪತ್ತಿನ ಸಹಕಾರ ಸಂಘಗಳು 'ಸಹಕಾರ ಸಂಘ' ವಾದುದರಿಂದ ಇವು ಠೇವಣಿಗಳನ್ನು ತನ್ನ' ಸದಸ್ಯ'ರಿಂದ ಮಾತ್ರ ಸಂಗ್ರಹಣೆ ಮಾಡಬೇಕು. ಏಕೆಂದರೆ ಇವುಗಳು 'ಬ್ಯಾಂಕ್' ಅಲ್ಲ, ಯಾವ ಸಂಸ್ಥೆಗಳು 'ಬ್ಯಾಂಕಿಂಗ್ ಕಾಯ್ದೆ'ಯಡಿಯಲ್ಲಿ ಬರುತ್ತವೋ ಅವು ಮಾತ್ರ 'ಸಾರ್ವಜನಿಕರಿಂದ' ಠೇವಣಿ ಸಂಗ್ರಹಣೆ ಮಾಡಬಹುದು. ಈ ಸಹಕಾರ ಸಂಘಗಳ ವ್ಯವಹಾರವು ತನ್ನ ಸದಸ್ಯರ ನಡುವೆ ನಡೆಸುವ ವ್ಯವಹಾರ ಮಾತ್ರ ಆಗಿರುತ್ತದೆ. ಸಹಕಾರ ಸಂಘವು ತನ್ನ ಸದಸ್ಯರಿಂದ ಮಾತ್ರ 'ಠೇವಣಿ' ಸಂಗ್ರಹಣಿ ಮಾಡಬೇಕು ಮತ್ತು ತನ್ನ ಸದಸ್ಯರಿಗೆ ಮಾತ್ರ 'ಸಾಲ' ನೀಡಬೇಕು. 'ಸದಸ್ಯ' ಎಂದರೆ ಅದು 'ನಾಮ ಮಾತ್ರ' ಮತ್ತು 'ಸಹಸದಸ್ಯ' ನನ್ನು ಒಳಗೊಳ್ಳುತ್ತದೆ.

**ಠೇವಣಿ ವಿಧಗಳು:** ಠೇವಣಿಗಳನ್ನು (1) 'ಬೇಡಿಕೆ' ಠೇವಣಿಗಳು(Demand deposits) (2) 'ಅವಧಿ' ಠೇವಣಿಗಳು(Term deposits) ಎಂದು ವಿಂಗಡಿಸಿದೆ.

(1) **ಬೇಡಿಕೆ ಠೇವಣಿಗಳು:** ಇವುಗಳನ್ನು ಠೇವಣಿದಾರರು ಬೇಡಿಕೆ ಇಟ್ಟು ಹಿಂತಿರುಗಿ ಪಡೆಯಲು ಕೇಳಿದಾಗ ಹಿಂತಿರುಗಿಸಲೇಬೇಕು. 'ಉಳಿತಾಯ' ಠೇವಣಿಗಳು ಮತ್ತು 'ಚಾಲ್ತಿ' ಠೇವಣಿಗಳು.

(Savings bank account, Current account -CASA). ಬೇಡಿಕೆ ಸಲ್ಲಿಸಿದಾಗ (ಚೆಕ್/ವಿತ್ ಡ್ರಾಯಲ್ ಸ್ಲಿಪ್ ಮೂಲಕ) ಹಿಂತಿರುಗಿಸಲೇ ಬೇಕಾಗಿರುವುದರಿಂದ ಇದರ ಮೇಲೆ ಕಡಿಮೆ ಬಡ್ಡಿದರ ನೀಡಲಾಗುತ್ತದೆ. ಆದುದರಿಂದ

ಇವು 'ಕಡಿಮೆ ವೆಚ್ಚ'ದ(low-cost deposits) ಠೇವಣಿಗಳು ಎನಿಸಿ ಕೊಳ್ಳುತ್ತವೆ. ಸಂಘದಲ್ಲಿ ಈ ಖಾತೆಯಲ್ಲಿ ಕನಿಷ್ಟ ಮೊತ್ತದ ಖಾದಿರಿಸುವಿಕೆಯನ್ನು ಕಡ್ಡಾಯ ಗೊಳಿಸುವುದರಿಂದ ಕನಿಷ್ಟ ಮೊತ್ತಸಂಘದಲ್ಲಿ ಉಳಿಯುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲಾಗುತ್ತದೆ. ಬೇಡಿಕೆ ಠೇವಣಿಗಳನ್ನು ಬೇಡಿಕೆ ಬಂದಾಗ ಹಿಂತಿರುಗಿಸಲೇ ಬೇಕಾಗಿರುವುದರಿಂದ ಬ್ಯಾಂಕ್ ಗಳಲ್ಲಿ 'ನಗದು ಮೀಸಲು ಅನುಪಾತ'(Cash Reserve ratio -CRR) ಮತ್ತು 'ಶಾಸನ ಬದ್ಧ ದ್ರವ್ಯ ಆಸ್ತಿ ಅನುಪಾತ' (Statutory Liquid Ratio) ವಾಗಿ ಇಂತಿಷ್ಟು ಮೊತ್ತವನ್ನು ನಗದು ರೂಪದಲ್ಲಿ ಮತ್ತು/ಅಥವ ಸುಲಭವಾಗಿ ನಗದು ರೂಪುಗೊಳ್ಳುವ ಆಸ್ತಿ ರೂಪದಲ್ಲಿ ಇರಿಸಿ ಕೊಳ್ಳಬೇಕಾದ್ದು ಕಡ್ಡಾಯ. ಸಮಯ ಮತ್ತು ಬೇಡಿಕೆ ಜವಾಬ್ದಾರಿಯ (Time and Demand Liability) ಯ ಶೇ 03 ನ್ನು ಸಿ.ಆರ್. ಆರ್ ಆಗಿ ಮತ್ತು ಶೇ 25– 28 ನ್ನು ಎಸ್ ಎಲ್.ಆರ್. ಗಿ ಇರಿಸಿ ಕೊಂಡಿರಬೇಕು. ಹೀಗಾಗಿ ಇಷ್ಟು ಮೊತ್ತವು ಸಾಲ ನೀಡಲು ಲಭ್ಯ ವಿರುವುದಿಲ್ಲ. ಈ ನಿಯಮಗಳು ಸಹಕಾರ ಸಂಘಗಳಿಗೆ ಅನ್ವಯ ವಾಗದೇ ಇದ್ದರೂ ಇದನ್ನು ಸಂಘಗಳು ಪಾಲಿಸಿದಲ್ಲಿ ಸದಸ್ಯ ಠೇವಣಿದಾರರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಬಹುದು.

(2) **ಅವಧಿ ಠೇವಣಿಗಳು:** ಅವಧಿ ಠೇವಣಿಗಳು ಸಂಘಕ್ಕೆ ನಿರ್ದಿಷ್ಟ ಸಮಯದಲ್ಲಿ ಫಲಿತವಾಗುವುದರಿಂದ ಸಂಘಕ್ಕೆ ಲಭ್ಯ ಸಂಪನ್ಮೂಲದ ಬಗ್ಗೆ ನಿಖರವಾದ ಮಾಹಿತಿ ಲಭ್ಯವಾಗುತ್ತದೆ. ಅವಧಿ ನಗರಿ ಪಡಿಸಲಾಗಿರುವುದರಿಂದ ಈ ಠೇವಣಿಗಳಿಗೆ ಹೆಚ್ಚಿನ ಬಡ್ಡಿಧರ ನೀಡಲಾಗುತ್ತದೆ. ಆದುದರಿಂದ ಇದು ಹೆಚ್ಚಿನ ವೆಚ್ಚದ ಠೇವಣಿಯಾಗಿರುತ್ತದೆ. (High cost deposits). ಅವಧಿ ಠೇವಣಿಗಳು ಅಲ್ಪಾವಧಿ ಆಗಬಹುದು ಅಥವ ದೀರ್ಘಾವಧಿ ಠೇವಣೆಗಳು ಆಗಬಹುದು. ದೀರ್ಘಾವಧಿ ಠೇವಣಿಗಳಿಗೆ ಹೆಚ್ಚಿನ ಬಡ್ಡಿಧರ ನೀಡಲಾಗುತ್ತದೆ ಕಾರಣ ಅದು ಸಂಘಕ್ಕೆ ದೀರ್ಘಾವಧಿವರೆಗೆ ಸಂಪನ್ಮೂಲವಾಗಿ ಬಳಕೆಗೆ ಲಭ್ಯವಿರುತ್ತದೆ.

ಆದುದರಿಂದ ಈ ಠೇವಣಿಗಳ ನವೀಕರಣಕ್ಕೆ ಸಂಘವು ಹೆಚ್ಚು ಆಧ್ಯತೆಯನ್ನು ನೀಡಬೇಕು ಮತ್ತು ಅದಕ್ಕಾಗಿ ಠೇವಣಿ ದಾರರ (ಗ್ರಾಹಕರ) ವಿಶ್ವಾಸ ಅತಿ ಮುಖ್ಯ ವಾಗುತ್ತದೆ. ಇದನ್ನು ಗಳಿಸುವಲ್ಲಿ ಸಂಘ ನೀಡುವ ಸೇವೆ ಅತಿ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಸಕಾಲದಲ್ಲಿ ಬಡ್ಡಿ ಪಾವತಿ, ಅವಶ್ಯಕತೆ ಇದ್ದಾಗ ಠೇವಣಿ ಮೇಲೆ ಸುಲಭ ಸಾಲ, ಇವರೊಡನೆ ನಿರಂತರ ಗ್ರಾಹಕ ಸಂಪರ್ಕ, ಇದನ್ನು ನೀಡಲು ಆಧುನಿಕ ತಂತ್ರಜ್ಞಾನ ಸಹಾಯಕವಾಗಿದೆ. ಅವರ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಇಂತಹ ದಿನಗಳಂ ದು ಶುಭಾಷಯ ಸಂದೇಶ ರವಾನೆ. ವಿನೂತನ 'ಉತ್ಪನ್ನ'ಗಳ ಬಿಡುಗಡೆ, ಆಕರ್ಷಿಕ ಹೆಸರುಗಳ ನೀಡುವಿಕೆ, ಇಂತಹ ಉಪಕ್ರಮಗಳು ಠೇವಣಿ ಸಂಗ್ರಹಣೆಗೆ ಅನುಕೂಲಕರವಾಗುತ್ತದೆ. ಸಂಘದ ಒಳ ವಾತಾವರಣ, ಸುಸಜ್ಜಿತ ಪೀಠೋಪಕರಣಗಳು, ರಕ್ಷಣಾ ಕೊಠಡಿ, ಲಾಕರ್ ಸೌಲಭ್ಯ ಇವುಗಳು ಠೇವಣಿ ಸಂಗ್ರಹಣೆಗೆ ಅವಶ್ಯ ಅಲ್ಲದೆ ನಗು ಮುಖದ ಸೇವೆ ಅತಿ ಅಗತ್ಯ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯಿಂದಾಗಿ ಗ್ರಾಹಕ, ಬ್ಯಾಂಕರ್ ಸಂಪರ್ಕ ತಂತ್ರಜ್ಞಾನದಿಂದ ಆಗುತ್ತಿದ್ದು ಬೌತಿಕ ಸಂಪರ್ಕದ ಅವಶ್ಯಕತೆಯೇ ಇಲ್ಲದಾಗಿದೆ. ನಮ್ಮ ಸಹಕಾರ ಸಂಘಗಳು ಆ ಮಟ್ಟಿಗೆ ಬೆಳೆದಲ್ಲಿ ಮಾತ್ರ ಇಂದಿನ ಯುವ ಜನತೆಯ ನ್ನು ಒಳಗೊಳ್ಳಲು ಸಾಧ್ಯವಾಗುತ್ತದೆ.

**ಠೇವಣಿ ಮಿಶ್ರಣ:** (Deposit mix): ಸಂಘದ ಒಟ್ಟಾರೆ ಠೇವಣಿಯಲ್ಲಿ ಕಡಿಮೆ ವೆಚ್ಚದ ಠೇವಣಿ ಎಷ್ಟಿದೆ? ಹೆಚ್ಚಿನ ವೆಚ್ಚದ ಠೇವಣಿ ಎಷ್ಟಿದೆ? ಎಂಬುದರ ಮೇಲೆ ಠೇವಣಿ ಮೇಲಿನ ವೆಚ್ಚ(Cost of deposit) ಅವಲಂಭಿತವಾಗಿರುತ್ತದೆ. ಕಡಿಮೆ ವೆಚ್ಚದ ಠೇವಣಿ ಅಧಿಕ ವಿದ್ದಲ್ಲಿ ಠೇವಣಿ ಮೇಲಿನ ವೆಚ್ಚ ಕಡಿಮೆ ಯಾಗುತ್ತದೆ. ಅದೇ ಅಧಿಕ ವೆಚ್ಚದ ಠೇವಣಿ ಹೆಚ್ಚಿಗೆ ಇದ್ದಲ್ಲಿ ಠೇವಣಿ ಮೇಲಿನ ವೆಚ್ಚ ಅಧಿಕವಾಗುತ್ತದೆ. ಆದುದರಿಂದ ಸಂಘದಲ್ಲಿ ಕಡಿಮೆ ವೆಚ್ಚದ ಠೇವಣಿ ಸಂಗ್ರಹಣೆಗೆ ಆಧ್ಯತೆ ನೀಡಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಪರಿಶ್ರಮದ ಅವಶ್ಯಕತೆ ಇದೆ. ಕಡಿಮೆ ವೆಚ್ಚದ ಠೇವಣಿ: ಅಧಿಕ ವೆಚ್ಚದ ಠೇವಣಿ 60:40 ಇರುವಂತೆ ಆಗಿಸಲಾಗುತ್ತದೆ. ನಗದು ಒಳಹರಿವು , ಹೊರ ಹರಿವು(cash inflow,cash outflow): ಆಸ್ತಿ ಜವಾಬ್ದಾರಿ

ನಿರ್ವಹಣೆ (Asset, Liability management): ಠೇವಣಿಗಳ ಸಂಗ್ರಹಣೆ, ಸಾಲ ವಸೂಲಾತಿ ನಗದು ಒಳಹರಿವಿಗೆ ಕಾರಣವಾಗುತ್ತದೆ. ಠೇವಣಿಗಳ ಹಿಂತಿರುಗಿಸುವಿಕೆ, ಸಾಲಗಳ ವಿತರಣೆ ನಗದು ಹೊರಹರಿವಿಕೆ ಕಾರಣವಾಗುತ್ತದೆ. ಇವೆರಡರ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಆಸ್ತಿ ಜವಾಬ್ದಾರಿ ನಿರ್ವಹಣೆ ಎನ್ನಲಾಗುತ್ತದೆ. ಈ ನಿರ್ವಹಣೆ ಶ್ರೇಷ್ಠ ಮಟ್ಟದಲ್ಲಿದ್ದಾಗ ಮಾತ್ರ ಸಹಕಾರ ಸಂಘ ಯಶಸ್ವಿಯಾಗಿ ನಡೆಯಲು ಸಾಧ್ಯವಾಗುತ್ತದೆ. ಠೇವಣಿಗಳು ಯಾವ, ಯಾವಾಗ ಅಥವ ಎಂದೆಂದು ಫಲಿತವಾಗುತ್ತವೆ. ಸಾಲಗಳು ಎಂದೆಂದು ಎಷ್ಟೆಷ್ಟು ಮರುಪಾವತಿಯಾಗುತ್ತವೆ ಎಂಬುದರ ಬಗ್ಗೆ ತಿಳಿದಿರಬೇಕು. ಅದರನ್ವಯ ಸಾಲದ ತರಹೆ ಮತ್ತು ಸಾಲ ಬಿಡುಗಡೆ ಅವಲಂಭಿಸಿರಬೇಕು. ಇದಕ್ಕಾಗಿ ಈಗ ಮೃದು ತಂತ್ರಜ್ಞಾನ ಲಭ್ಯವಿದೆ. ಅಲ್ಪಾವಧಿ ಠೇವಣಾತಿ ಗಳು ಹೆಚ್ಚಿದ್ದಲ್ಲಿ ಅಲ್ಪಾವಧಿ ಸಾಲಗಳನ್ನು ಹೆಚ್ಚಿಗೆ ನೀಡುವುದು. ದೀರ್ಘಾವಧಿ ಠೇವಣಿಗಳು ಇದ್ದಲ್ಲಿ ಅಷ್ಟು ಮಾತ್ರ ದೀರ್ಘಾವದಿ ಸಾಲಗಳನ್ನು ನೀಡತಕ್ಕದ್ದು. ಅಲ್ಪಾವಧಿ ಠೇವಣಾತಿಗಳೇ ಹೆಚ್ಚಿದ್ದು ದೀರ್ಘಾವಧಿ ಸಾಲಗಳನ್ನು ನೀಡಿದಲ್ಲಿ ನಗದು ಒಳಹರಿವು ಮತ್ತು ನಗದು ಹೊರಹರಿವಿನ ಸಮತೋಲನ ಕಾಯ್ದುಕೊಳ್ಳಲು ಆಗುವುದಿಲ್ಲ. ಇದರಿಂದ ಆಸ್ತಿ ಜವಾಬ್ದಾರಿ ನಿರ್ವಹಣೆ ಏರು ಪೇರಾಗಿ ಹೊಂದಾಣಿಕೆ ಆಗುವುದಿಲ್ಲ (mis match).

**ಸಾಲ ವಿತರಣೆ:** ಪತ್ತಿನ ಸಹಕಾರ ಸಂಘದ ಉದ್ದೇಶವೇ ಸದಸ್ಯರಿಗೆ ಸಾಲ ವಿತರಣೆ ಮಾಡುವುದಾಗಿದೆ. ಸಾಲ ನೀಡುವ ಉದ್ದೇಶ ಸಹಕಾರ ಸಂಘದ ಸದಸ್ಯರ ಅವಶ್ಯಕತೆಯನ್ನು ಅವಲಂಭಿಸಿರುತ್ತದೆ. 'ಸಕಾಲದಲ್ಲಿ ಸಾಲ, ಸಾಕಷ್ಟು ಸಾಲ, ಸಕಲರಿಗೂ ಸಾಲ' ಎಂಬುದು ಸಂಘದ ಘೋಷವಾಕ್ಯವಾಗಬೇಕು. ಸದಸ್ಯರಿಗೆ ತಮ್ಮ ಅವಶ್ಯಕತೆ ಗೆ ತಕ್ಕದಾಗಿ ಶೀಘ್ರವಾಗಿ ಸಾಲ ದೊರಕುವಂತೆ ಸಂಘದಲ್ಲಿ ಸಾಲ ನಿಯಮಗಳು, ಸಾಲ ನೀತಿ, ಸಾಲ ವಿತರಿಸುವ ರೂಢಿ ಪದ್ಧತಿಗಳು ಜಾರಿಗೆ ತರಬೇಕು. ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಸಹಕಾರ ಸಂಘಗಳ' ಅಳಿವು ಉಳಿವು' ನ ಪ್ರಶ್ನೆ ಇದನ್ನು ಅವಲಂಭಿಸಿರುತ್ತದೆ.

ಈ ದಿಸೆಯಲ್ಲಿ ಎಲ್ಲ ಸಹಕಾರ ಸಂಘಗಳು ಏಕ ರೂಪದಲ್ಲಿರಲು ನಿರೀಕ್ಷಿಸಲಾಗುವುದಿಲ್ಲ. ಆಯಾ ಸಹಕಾರ ಸಂಘದ ಪರಿಸರ, ಸದಸ್ಯರ ಅವಶ್ಯಕತೆ ಗಳನ್ನು ಅವಲಂಭಿಸಿರುತ್ತದೆ. ಆದರೆ ಸಂಘವು ಯಶಸ್ವಿ ಯಾಗ ಕಾರ್ಯ ನಿರ್ವಹಿಸಲು ಈ ಮುಂದೆ ಕಾಣಿಸಿದ ಸಾಲ ತತ್ವಗಳ (ಸೂತ್ರ) ನ್ನು ಪರಿಪಾಲಿಸಬೇಕಾಗುತ್ತದೆ. (ಅ) ಸುರಕ್ಷತೆ (ಆ) ದ್ರವ್ಯ ಆಸ್ತಿ (ಇ) ಉದ್ದೇಶ (ಈ) ಲಾಭದಾಯಕತೆ (ಉ) ಭದ್ರತೆ (ಊ) ವೈವಿಧ್ಯಮತೆ.

(ಅ) **ಸುರಕ್ಷತೆ:** ಸಂಘವು ನೀಡಿದ ಸಾಲವು ಸಕಾಲದಲ್ಲಿ ಬಡ್ಡಿ ಸಹಿತ ಹಿಂತಿರುಗಿ ಬರಬೇಕು. ಅದಕ್ಕಾಗಿ ಸಾಲಗಾರನು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದು ಸಾಲ ಪಡೆದು ಸಾಲ ಪಡೆದ ಉದ್ದೇಶಕ್ಕಾಗಿ ಉಪಯೋಗಿಸಿ ಸಾಲ ಮರು ಪಾವತಿಯ ಇಚ್ಛಾಶಕ್ತಿ ಉಳ್ಳವರಾಗಿರುತ್ತಾನೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಫಲಾನುಭವಿ ಆಯ್ಕೆ ಸರಿಯಾಗಿದ್ದಲ್ಲಿ ಸಂಘವು ನೀಡಿದ ಸಾಲವು ಸುರಕ್ಷಿತವಾಗಿರುತ್ತದೆ.

ಸಾಲಗಾರರ ಮರುಪಾವತಿ ಶಕ್ತಿ, ಅವರ ಆಧಾಯ ಗಳಿಸುವಿಕೆ ವಿವರಗಳು, ಸಾಲವನ್ನು ಯಾವ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಅವರ ಪ್ರಾಮಾಣಿಕತೆ, ಗುಣ ಮುಖ್ಯವಾಗುತ್ತದೆ. ಸಾಲಗಾರನ ಗುರುತಿಸುವಿಕೆ ಸರಿಯಾಗಿದ್ದಲ್ಲಿ ಸಾಲ ಸುರಕ್ಷಿತವಾಗಿದೆ ಎಂದು ಕಳೆಯಬಹುದು.

(ಆ) **ದ್ರವ್ಯ ಆಸ್ತಿ:** ಸಾಲ ವಿತರಣೆಗೆ ದ್ರವ್ಯ ಆಸ್ತಿ ಅತಿ ಅಗತ್ಯ. ಅದನ್ನು ನಿರ್ವಹಣೆ ಮಾಡುವಲ್ಲಿ ಸಂಘ ತೆಗೆದು ಕೊಳ್ಳ ಬೇಕಾದ ಕ್ರಮಗಳ ಬಗ್ಗೆ ಮೇಲಿನ ಕಂಡಿಕೆಗಳಲ್ಲಿ ವಿವರಿಸಿದೆ. ಅದು ಇಲ್ಲದಿದ್ದಲ್ಲಿ ಸಂಘವು ಠೇವಣಿದಾರರ ಮತ್ತು ಸಾಲಗಾರರ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ.

(ಆ) **ಉದ್ದೇಶ:** ಸಾಲ ನೀಡುವ ಉದ್ದೇಶ ಖಚಿತವಾಗಿರಬೇಕು. ಯಾವ ಉದ್ದೇಶಕ್ಕೆ ಸಾಲ ನೀಡಲಾಗಿದೆಯೋ ಅದೇ

ಉದ್ದೇಶಕ್ಕೆ ಸಾಲ ಉಪಯೋಗಿಸಲಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಸಾಲ ಉತ್ಪಾದನಾ ಉದ್ದೇಶಗಳಿಗೆ ನೀಡಿದಾಗ ಬಂಡವಾಳ ವೃದ್ಧಿಯಾಗಿ ಬಡ್ಡಿ ಸಹಿತ ಸಾಲ ಮರುಪಾವತಿ ಸಾಧ್ಯ.

(ಆ) **ಲಾಭದಾಯಕತೆ:** ಆಸ್ತಿಗಳ ಮೆಲಿನ ಗಳಿಕೆಯಲ್ಲಿ ನಿಧಿಗಳ ಮೇಲಿನ ವೆಚ್ಚ ಕಳೆದು ಉಳಿದುದೇ ಸಂಘದ ಗರಿಷ್ಟ ಲಾಭ ಅಥವ ಅಂತರ ಇದರಲ್ಲಿ ವ್ಯವಸ್ಥಾಪನಾ ವೆಚ್ಚ ( ವ್ಯವಹಾರ ವೆಚ್ಚ) ಕಳೆದರೆ ಉಳಿಯುವುದೇ ಸಂಘದ ನಿವ್ವಳ ಲಾಭ ಅಥವ ಅಂತರ. ಆದುದರಿಂದ ಯಾವಾಗಲೂ ಸಾಲಗಳ ಮೇಲಿನ ಬಡ್ಡಿ ಧರ ಅಧಿಕ ವಿರಿಸಿ ಠೇವಣಿಗಳ ಮೇಲಿನ ಬದ್ದಿಧರ ಕಡಿಮೆ ಇರಬೇಕು. ಇತರೆ ವೆಚ್ಚಗಳ ಮೇಲೆ ನಿಯಂತ್ರಣವಿರಬೇಕು. ಆಗ ಮಾತ್ರ ಸಂಘವು ಲಾಭದಾಯಕವಾಗಿ ನಡೆಯಬಲ್ಲದು. ನಷ್ಟ ಅನುಭವಿಸಿದಲ್ಲಿ ಸಂಘದ ಬಂಡವಾಳ ಕರಗಿ ಹೋಗುತ್ತದೆ. ಸದಸ್ಯರ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ.

(ಇ) **ಭದ್ರತೆ:** ಸಾಲಕ್ಕೆ ಸರಿಯಾದ ಭದ್ರತೆ ಹೊಂದಿದ್ದಲ್ಲಿ ಸಾಲ ಸಕಾಲದಲ್ಲಿ ಮರುಪಾವತಿ ಯಾಗದಿದ್ದರೂ ಬಡ್ಡಿ ಸಹಿತ ಸಾಲ ವಸೂಲಿ ಮಾಡಲು ಸಾಧ್ಯವಾಗುತ್ತದೆ. ದೀರ್ಘಾವಧಿ ಸಾಲಗಳಲ್ಲಿ ಸ್ಥಿರ ಆಸ್ತಿಗಳ ಭದ್ರತೆ ಅತಿ ಮುಖ್ಯ. ಅದಕ್ಕೆ ತಕ್ಕ ದಾಖಲಾತಿಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ ಎಂಬುದನ್ನು ಮರೆಯಲಾಗದು.

(ಈ) **ಸಾಲಗಳಲ್ಲಿ ವೈವಿಧ್ಯಮತೆ:** ಸಾಲ ನೀಡುವಲ್ಲಿ ಯಾವುದೇ ಒಂದೇ ವಲಯ, ಒಂದೇ ಉದ್ದೇಶಕ್ಕೆ ಸಾಲ ವಿತರಿಸ ಬಾರದು. ಸಾಲಗಳು ವಿವಿಧ ಉದ್ದೇಶಗಳಿಗೆ ವಿವಿಧ ವಲಯಗಳಿಗೆ ವಿತರಣೆಯಾಗಿದ್ದಲ್ಲಿ ಒಂದು ವಲಯ , ಒಂದು ಉದ್ದೇಶ ಸಾಲ ವಸೂಲಿಯಾಗಲಿಲ್ಲವೆಂದರೆ ಮತ್ತೊಂದು ವಲಯ , ಅಥವ ಇತರೆ ಉದ್ದೇಶಕ್ಕೆ ನೀಡಿದ ಸಾಲವು ವಸೂಲಿಯಾಗಿ ಸಂಘದ ಹಿತಾಸಕ್ತಿ ಕಾಪಾಡುತ್ತದೆ. 'ಒಂದೇ ಬುಟ್ಟಿಯಲ್ಲಿ ಎಲ್ಲ ಮೊಟ್ಟೆಗಳನ್ನು ಇಡುವ ಬದಲಿಗೆ, ಮೊಟ್ಟೆಗಳನ್ನು ಬೇರೆ ಬೇರೆ ಬುಟ್ಟಿ ಗಳಲ್ಲಿಡಿ' ಎಂಬ ಸೂತ್ರ ಅನ್ವಯವಾಗುತ್ತದೆ. ಬಿದ್ದು ಒಂದು ಬಟ್ಟೆಯಲ್ಲಿನ ಮೊಟ್ಟೆಗಳು ಒಡೆದು ಹೋದರೆ ಇತರೆ ಬುಟ್ಟಿಯಲ್ಲಿನ ಮೊಟ್ಟಿಗಳು ಕಾಪಾಡುತ್ತವೆ.

**ಸಾಲ ವಸೂಲಾತಿ:** ಪತ್ತಿನ ಸಹಕಾರ ಸಂಘಗಳಲ್ಲಿ ಅತಿ ದೊಡ್ಡ ಆಸ್ತಿ ಎಂದರೆ ತನ್ನ 'ಸಾಲಗಳು ಮತ್ತು ಮುಂಗಡೆಗಳು' ಈ ಕಲೆ ಬರಹದ ಹೊರಬಾಕಿ ಮೊತ್ತ . ಒಟ್ಟಾರೆ ಆಸ್ತಿಯ ಶೇ80ಕ್ಕೂ ಮಿಗಿಲಾಗಿರುತ್ತದೆ. ಇದರ ಆರೋಗ್ಯ ಆ ಸಹಕಾರ ಸಂಘದ ಸಾಲ ವಸೂಲಾತಿ ಪರಿಸ್ಥಿತಿಯನ್ನು ಅವಲಂಭಿಸಿರುತ್ತದೆ. ಸಹಕಾರ ಸಂಘವು ನಿಖರವಾದ 'ಬೇಡಿಕೆ , ಸಂಗ್ರಹಣೆ, ಬಾಕಿ'(Demand Collection Balance) ರಿಜಿಸ್ಟರ್ ನಿರ್ವಹಣೆ ಮಾಡಬೇಕು. ಸಾಲದ ನಿಖರವಾದ 'ಕುಳುವಾರು ಬಾಕಿ ಪಟ್ಟಿ'ಯನ್ನು ಹೊಂದಿರಬೇಕು. ಇದರಿಂದ ಸಾಲ ಬಾಕಿ ಉಳ್ಳ ಸದಸ್ಯರ ಸಾಲ ಮರುಪಾವತಿ ಬಗ್ಗೆ ಗಮನಹರಿಸಲು ಸಾಧ್ಯ.

ಸದಸ್ಯರಿಗೆ ಸಾಲ ಮರುಪಾವತಿ ಬಗ್ಗೆ ಸಕಾಲದಲ್ಲಿ ನೆನಪಿಸುವುದು, ಸಾಲ ಖಾತೆಯ ಮೇಲೆ ಕಣ್ಗಾವಲು ನಿರ್ವಹಿಸುವುದು ಅತಿ ಮುಖ್ಯ. ಇದಕ್ಕೆ ಇತ್ತೀಚೆಗೆ ಮೃದು ತಂತ್ರಜ್ಞಾನ ಅಭಿವೃದ್ಧಿ ಗೊಂಡಿದ್ದು ಅವುಗಳ ಅಳವಡಿಕೆ ಅತ್ಯಂತ ಉಪಯುಕ್ತ. ಸಕಾಲದಲ್ಲಿ ವಸೂಲಿಯಾಗ ಬೇಕಾದ ಮೊತ್ತ ಮರುಪಾವತಿಯಾಗದಿದ್ದಲ್ಲಿ ಸಾಲ ವಸೂಲಾತಿಗೆ ಕ್ರಮಗಳನ್ನು ತೆಗೆದುಕೊಳ್ಳಲೇಬೇಕು. ಸಾಲ ವಸೂಲಾತಿ 'ಸಾಲ ವಿತರಣೆ' ದಿನಾಂಕದಿಂದಲೇ ಆರಂಭವಾಗುತ್ತದೆ. ಉತ್ತಮ ಸಾಲಗಾರನನ್ನು ಗುರುತಿಸಿ ಗುಣಾತ್ಮಕವಾಗಿ ಸಾಲ ನೀಡಿದಲ್ಲಿ ಸಾಲ ಮರುಪಾವತಿ/ಸಾಲ ವಸೂಲಾತಿ ಸರಾಗವಾಗಿ ಆಗುತ್ತದೆ. ಸಂಘಕ್ಕೆ ವಸತಿಯಾದ "ಬಡ್ಡಿ " ಆಧಾಯವೇ ಆಧಾಯ. ಸಾಲ ಅಸಲು ಮತ್ತು ಬಡ್ಡಿಯೊಡನೆ ಮರುಪಾವತಿಯಾಗಬೇಕು. ಯಾವುದೇ ರೀತಿಯಲ್ಲಿ 'ಸೋರಿಕೆ' ಗೆ ಅವಕಾಶ ವಿರ ಬಾರದು. ಈ ವಿಷಯದಲ್ಲಿ ಆಂತರಿಕ ಪರಿವೀಕ್ಷಣೆ/ಲೆಕ್ಕಪರಿಶೋಧನಾ ಕ್ರಮಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಸಕಾಲದಲ್ಲಿ ವಸೂಲಾತಿಯಾಗದೆ ಸಂಘದ ಅನುಕ್ರಮಗಳಿಗೂ ಮೀರಿ ಸಾಲ

ಸುಸ್ತಿಯಾದಲ್ಲಿ(ಬೇಬಾಕಿ ) ಕಾಯ್ದೆ ಯಾತ್ಮಕ ಕ್ರಮಗಳನ್ನು ಸಕಾಲದಲ್ಲಿ ಕೈಗೊಳ್ಳಬೇಕಾಗುತ್ತದೆ. ಈ ಕ್ರಮಗಳಿಗೆ ಅಗತ್ಯ ದಾಖಲಾತಿಗಳು, ಭದ್ರತಾ ಕ್ರಮಗಳು ಅತಿ ಅಗತ್ಯ ಕ.ರಾ.ಸ. ಸಂ.ಕಾಯ್ದೆ ಕಲಂ 70 ರಲ್ಲಿ ವ್ಯಾಜ್ಯ ಹೂಡಿ 'ಅವಾರ್ಡ್/ ಡಿಕ್ರಿ ಪಡೆಯಬೇಕಾಗುತ್ತದೆ.

ತದ ನಂತರ ಕ.ರಾ. ಸ ಸಂ ಕಾಯ್ದೆ 101 ರಲ್ಲಿ ಅವುಲ್ಬಾರಿ ಮಾಡಿ ಸಾಲಗಾರರ ಚರ/ಸ್ಥಿರ ಆಸ್ತಿಗಳ ಮೂಲಕ ಸಾಲ ವಸೂಲಾತಿ ಮಾಡಬೇಕಾಗುತ್ತದೆ.

**ಸಾಲವನು ಕೊಂಬಾಗ | ಹಾಲೋಗರ ಉಂಡಂತೆ। ಸಾಲಿಗನು ಬಂದಾಗ । ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ। ಎಂಬುದೀಗ ತಿರುವು ಮುರುವು ಪರಿಸ್ಥಿತಿ ಉಂಟಾಗಿದ್ದು, ಪತ್ತಿನ ಸಹಕಾರ ಸಂಘಗಳು ಅತಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು.**

**ಈ ದಿನಗಳ ಅವಶ್ಯಕತೆ ಯಾಗಿರುತ್ತದೆ.**

**ಭಾಗ : 04 – ಅಲ್ಪಾವಧಿ ಕೃಷಿ ಪತ್ತು ರಚನೆ**

*******************************************************************************************

# 46. ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ಜವಾಬ್ದಾರಿಯುತ ಕಾರ್ಯ ನಿರ್ವಹಿಸುತ್ತವೆ.

ಮಾನವನ ನಾಗರೀಕತೆಯ ಬೆಳವಣಿಗೆಯ ಭಾಗವಾಗಿ ತನ್ನ ಆಹಾರದ ಅಗತ್ಯತೆಗಾಗಿ ಕಂಡುಕೊಂಡ ಮಾರ್ಗ 'ಕೃಷಿ'. ಪ್ರಾಕೃತಿಕವಾಗಿ ಲಭ್ಯವಿದ್ದ ಸಸ್ಯಗಳನ್ನು 'ಬೆಳೆ'ಯಾಗಿ ರೂಡಿಗೆ ತಂದದ್ದು. ಜನಸಂಖ್ಯಾ ಸ್ಪೋಟದ ಅಗತ್ಯತೆ ಪೂರೈಕೆಗಾಗಿ ಆಧುನಿಕ ಕೃಷಿ ಪದ್ಧತಿಗಳನ್ನು ರೂಢಿಗೆತರಲಾಗಿದೆ. ಆರಂಭಿಕ ದಿನ ಮಾನಗಳಲ್ಲಿ ಕೇವಲ ಸಾವಯವಗೊಬ್ಬರ ಉಪಯೋಗವಿದ್ದದ್ದು ರಸಾಯನಿಕ ಗೊಬ್ಬರಗಳ ಉಪಯೋಗ ರೂಢಿಗೆ ಬಂದಿದ್ದರ ಫಲವಾಗಿ 'ಮಣ್ಣಿನ ಸಂರಕ್ಷಣೆ' ಈ ದಿನಮಾನದ ಆಧ್ಯತೆಯಾಗಿ ಪರಿಗಣಿಸುವ ಅಗತ್ಯತೆ ಇದೆ. ವಾಂಡೆರ್‌ಬೆರ್ರಿ ಎಂಬ ತಜ್ಞನ ನುಡಿ"ಕೃಷಿ ಫಲಪ್ರದಾಯಕವಾಗಿ ಉಳಿಯಬೇಕೆಂದರೆ, ಅದು ಭೂಮಿಯ ಫಲವತ್ತತೆಯನ್ನು ಸಂರಕ್ಷಿಸಬೇಕು ಮತ್ತು ಭೂಮಿಯ ಆರ್ಥಿಕ ಆರೋಗ್ಯವನ್ನು ಕಾಪಾಡಬೇಕು. ಭೂಮಿಯನ್ನು ಉತ್ತಮವಾಗಿ ಬಳಸಬೇಕು. ಉತ್ತಮವಾಗಿ ಬಳಸಬೇಕೆಂದರೆ ಅದನ್ನು ಉಪಯೋಗಿಸುವವರು ಅದರ ಬಗ್ಗೆ ತಿಳಿದವರಾಗಬೇಕು(ಜ್ಞಾನ). ಅದನ್ನು ಹೇಗೆ ಉತ್ತಮವಾಗಿ ಉಪಯೋಗಿಸಬೇಕು (ನೈಪುಣ್ಯ) ಮತ್ತು ಅದಕ್ಕೆ ಪ್ರೇರೇಪಿಸಬೇಕು (ಪ್ರೋತ್ಸಾಹ, ಉತ್ತೇಜನ). ಅದರಂತೆ ಉಪಯೋಗಿಸಲು ಸಮಯ ಮತ್ತು ಸಶಕ್ತತೆಯನ್ನು (ಸಂಪನ್ಮೂಲ) ಹೊಂದಿರಬೇಕು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕೃಷಿಕರ ಜೀವನದ ಭಾಗವಾಗಿದ್ದು, ಕೃಷಿ ಉತ್ಪನ್ನವನ್ನು ಹೆಚ್ಚಿಸುವುದಲ್ಲದೇ ಅವರ ಆಧಾಯವನ್ನೂ ಹೆಚ್ಚಳಗೊಳಿಸುವುದಾಗಿದೆ ಎಂಬುದು ಮರೆಯಲಾಗದ ಅಂಶ.

ಭಾರತದಲ್ಲಿ ಸ್ವಾತಂತ್ರ್ಯಾನಂತರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇದರ ಭಾಂದವ್ಯ ಹೊಂದಿದ ಇತರೆ ಸಹಕಾರ ವಲಯವು ಈ ಕೆಳಕಂಡ ಕೃಷಿ ಕ್ರಾಂತಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

| ಕ್ರ. ಸಂ. | ಹೆಸರು | ಉತ್ಪನ್ನಗಳು |
|---|---|---|
| 1 | ಹಸಿರು ಕ್ರಾಂತಿ | ಆಹಾರ ಬೆಳೆಗಳು, ದ್ವಿದಳ ಧಾನ್ಯಗಳು ಎಣ್ಣೆ ಕಾಳುಗಳು |

| | | |
|---|---|---|
| 2 | ಶ್ವೇತ ಕ್ರಾಂತಿ | ಹಾಲು ಮತ್ತು ಹೈನು ಉತ್ಪನ್ನಗಳು |
| 3 | ನೀಲಿ ಕ್ರಾಂತಿ | ಮೀನುಗಾರಿಕೆ |
| 4 | ಹಳದಿ ಕ್ರಾಂತಿ | ಖಾದ್ಯತೈಲ |
| 5 | ಬೆಳ್ಳಿ ಕ್ರಾಂತಿ | ಮೊಟ್ಟೆ ಮತ್ತು ಕೋಳಿ |
| 6 | ನಸುಗೆಂಪು ಕ್ರಾಂತಿ | ಸೀಗಡಿ |
| 7 | ಸುವರ್ಣ ಕ್ರಾಂತಿ | ಹಣ್ಣು ಮತ್ತು ಜೇನು |
| 8 | ಸುವರ್ಣ ನಾರು ಕ್ರಾಂತಿ | ಸೆಣಬು |
| 9 | ಬೆಳ್ಳಿ ನಾರು ಕ್ರಾಂತಿ | ಹತ್ತಿ |

**ಮನ ಬಿಲ್ಲಿನ ಕ್ರಾಂತಿ :** ಮೇಲಿನಂತೆ ಅನೇಕ ಸಾಧನೆಗಳಾಗಿದ್ದರೂ ಈ ದಿನದ ಅವಶ್ಯಕತೆ ಅತಿ ಕಡಿಮೆ ಪ್ರದೇಶದಲ್ಲಿ ಭೂಮಿಯ ಆರೋಗ್ಯ, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು ಹೆಚ್ಚು ವೈವಿಧ್ಯಮಯ ಉತ್ಪನ್ನಗಳನ್ನು ಪಡೆಯುವ ಸಮಗ್ರ ಕೃಷಿ. ಕೇವಲ ಒಂದು ಬೆಳೆ ಬೆಳೆಯದೇ ವಿವಿಧ ಋತುಗಳಲ್ಲಿ ಅದೇಭಾಗದಲ್ಲಿ ವಿವಿಧ ಕೃಷಿ ಬೆಳೆ ಬೆಳೆಯುವುದು ಮತ್ತು ವಿಶೇಷವಾಗಿ ದ್ವಿದಳ ದಾನ್ಯಗಳು, ತೋಟಗಾರಿಕೆ, ಸಾಮಾಜಿಕ ಅರಣ್ಯ, ಮೀನುಗಾರಿಕೆ, ಕೋಳಿಸಾಕಾಣಿಕೆ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆಯನ್ನು ಕೈಗೊಳ್ಳುವುದಾಗಿದೆ.

**ರೈತರ ಆದಾಯ ದ್ವಿಗುಣ ಗೊಳಿಸುವ ಗುರಿ :** ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಲ್ಲಿ ಸಾಂಭವ್ಯ ನಷ್ಟ ಕಡಿತಗೊಳಿಸುವುದಲ್ಲದೇ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈ ದಿಸೆಯಲ್ಲಿ ಭಾರತ ಸರ್ಕಾರವು ಕೆಳಗಿನ ಏಳು ಅಂಶಗಳ ತಂತ್ರಗಾರಿಕೆಯನ್ನು ರೂಪಿಸಿದೆ.

1) ನೀರಾವರಿಗೆ ಆಧ್ಯತೆ. ಅದರಲ್ಲಿ ಯೂಕಿರು ನೀರಾವರಿ, (ಹನಿ ನೀರಾವರಿ, ತುಂತುರು ನೀರಾವರಿ) "ಪ್ರತಿ ಹನಿಗೆ ಹೆಚ್ಚು ಬೆಳೆ".

2) ಪ್ರತಿ ಪ್ರದೇಶದ ಮಣ್ಣಿನ ಆರೋಗ್ಯಕ್ಕೆ ಅನುಗುಣವಾಗಿ ಗುಣಮಟ್ಟದ ಬಿತ್ತನೆ ಬೀಜ ಮತ್ತು ಪೋಷಕಾಂಶಗಳನ್ನು ಒದಗಿಸುವುದು.

3) ಕೊಯ್ಲು ನಂತರದ ನಷ್ಟಗಳನ್ನು ತಡೆಯಲು ಉಗ್ರಾಣ ಮತ್ತು ಶೀಥಲ ಗೃಹಗಳ ಸರಪಳಿ ನಿರ್ಮಾಣಕ್ಕಾಗಿಅತಿ ಹೆಚ್ಚಿನ ಹೂಡಿಕೆ.

4) ಆಹಾರ ಸಂಸ್ಕರಣೆ ಮೂಲಕ ಮೌಲ್ಯ ವರ್ಧನೆಗೆಅತಿ ಹೆಚ್ಚಿನ ಪ್ರೋತ್ಸಾಹ.

5) 585 ಕೇಂದ್ರಗಳ ಮೂಲಕ ರಾಷ್ಟ್ರೀಯ ಕೃಷಿ ಮಾರುಕಟ್ಟೆಗಳನ್ನು ಸೃಷ್ಟಿಸುವುದು. ಲೋಪದೋಷಗಳನ್ನು ಸರಿಪಡಿಸಿ ವಿದ್ಯುನ್ಮಾನ ವೇದಿಕೆ ನಿರ್ಮಾಣ.

6) ನ್ಯಾಯಯುತ ವೆಚ್ಚದಲ್ಲಿ ಬೆಳೆ ವಿಮೆ ಜಾರಿಗೆ ತರುವುದು.

7) ಕೋಳಿ ಸಾಕಾಣೆ, ಜೇನು ಸಾಕಾಣೆ, ಮೀನುಗಾರಿಕೆ, ಹೈನುಗಾರಿಕೆ ತರಹೆಯ ಕೃಷಿ ಪೂರಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು.

ಭಾರತದ ಕೃಷಿಕ (ರೈತನ) ಆಧಾಯ ಪ್ರಮಾಣ (2012–13)ವನ್ನು ಲೆಕ್ಕಹಾಕಿದರೆ ಕೃಷಿಯಿಂದ ಅವರ ಆಧಾಯ ಶೇಕಡ 48, ಪಶು ಸಂಗೋಪನೆಯಿಂದ ಶೇಕಡ 32, ದಿನಗೂಲಿ ಇತರೆಆಧಾಯ ಶೇಕಡ 12, ಕೃಷಿಯೇತರ ಚಟುವಕೆಗಳಿಂದ ಶೇಕಡ 8 ಎಂದು ತಿಳಿದು ಬರುತ್ತದೆ. ಇದರಿಂದ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳಿಗೆ ಆದ್ಯತೆ ನೀಡುವ ಬಗ್ಗೆ ಅರಿವು ಮೂಡುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಾಕ್ಸ) ಪ್ರಾಮುಖ್ಯತೆಯನ್ನು ಅರಿಯಬೇಕಾಗಿದೆ. ರಾಷ್ಟ್ರದಲ್ಲಿ 93,367 'ಪಾಕ್ಸ್'ಇದ್ದು 45,241 ಲಾಭದಲ್ಲಿವೆ ಮತ್ತು 36,695 ನಷ್ಟದಲ್ಲಿವೆ. 4,116 ನಿಷ್ಕ್ರಿಯಗೊಂಡಿವೆ. ಒಟ್ಟಾರೆ ಸದಸ್ಯರಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಸದಸ್ಯರು ಸಾಲ ಪಡೆದಿರುತ್ತಾರೆ.

ಸಹಕಾರ ಪತ್ತುರಚನೆಯಲ್ಲಿನ ಒಟ್ಟಾರೆ ಸಾಲ (ಪತ್ತು) ಆಸ್ತಿಯಲ್ಲಿ ಪಾಕ್ಸ್‌ಗಳ ಪಾಲು ಶೇಕಡ 22. ಇವು ಬಹಳಷ್ಟು ಪಡೆದ ಸಾಲಗಳನ್ನೇ ಅವಲಂಭಿಸಿವೆ. 2010 ರಿಂದೀಚೆಗೆ ಕೃಷಿಯೇತರ ಸಾಲಗಳು ಹೆಚ್ಚಳ ಗೊಂಡಿವೆ. ಸಾಲ ಒದಗಿಸಲು (ಶೇಕಡ 50 ಗುರಿ) ಬಾಕಿ ಇರುವ ಸಂಖ್ಯೆ ಪರಿಶಿಷ್ಟ ಜಾತಿ ಶೇಕಡ 14.2, ಪರಿಶಿಷ್ಟ ವರ್ಗ ಶೇಕಡ 13.9, ಸಣ್ಣರೈತರು ಶೇಕಡ 8.1, ಗ್ರಾಮೀಣ ಗುಡಿ ಕೈಗಾರಿಕೆ ಶೇಕಡ 14.7 ಅಂಚಿನ ರೈತರು 18.1. ಈ ಅಂಕಿ ಅಂಶಗಳ ಪರಿಶೀಲನೆಯಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಾಧನೆ ಮಾಡಬೇಕಾಗಿರುವುದು ಇನ್ನು ಬಹಳಷ್ಟಿದೆ. ಅವಕಾಶಗಳು ಬಹಳಷ್ಟಿದೆ. ಸಾಲಗಳನ್ನು ವೈವಿಧ್ಯಮಯಗೊಳಿಸುವ ಅವಶ್ಯಕತೆ ಇದೆ ಎಂಬುದು ಗೋಚರಿಸುತ್ತದೆ.

**ವಿವಿದೋದ್ದೇಶ ಕೇಂದ್ರಗಳಾಗಿ ಪರಿವರ್ತಿಸಬೇಕಾದ ಅವಶ್ಯಕತೆ ಏನು?**

• ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ದೇಜಾಲವನ್ನು ಹೊಂದಿವೆ. ಕೇವಲ ಅಲ್ಪಾವಧಿ ಬೆಳೆ ಸಾಲಗಳನ್ನು ಒದಗಿಸುತ್ತಿವೆ. ಆದರೆ ಮತ್ತೊಂದೆಡೆ

• ಅತಿ ಹೆಚ್ಚಿನರೈತರು ಸಣ್ಣ ಹಿಡುವಳಿಯಿಂದಾಗಿ ತಮ್ಮದೇ ಆದ ಸ್ವಂತ ಕೃಷಿ ಉಪಕರಣಗಳನ್ನು ಹೊಂದಲು ಅಶಕ್ತರಾಗಿರುತ್ತಾರೆ.

• ನೂತನ ಅವಿಷ್ಕಾರಗಳು, ಅಭಿವೃದ್ಧಿ ವಿಷಯಗಳನ್ನು ರೈತ ಸಮುದಾಯಕ್ಕೆ ತಲುಪಿಸಬೇಕಿದೆ.

• ಹಣದ ಅವಶ್ಯಕತೆಯಿಂದಾಗಿ ಅತಿ ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ.

• ಗ್ರಾಮಾಂತರ ಪ್ರದೇಶಗಳಲ್ಲಿ ದಾಸ್ತಾನು ಸಂಗ್ರಹ ಮಾಡಿಡಲು ಅನುಕೂಲತೆಗಳಿಲ್ಲ.

ಪರಿಸ್ಥಿತಿ ಹೀಗಿರುವಾಗ ಅನೇಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅತಿ ಸಣ್ಣಗಾತ್ರದಲ್ಲಿದ್ದು ಸಶಕ್ತವಾಗಿಲ್ಲ. ಕಾರ್ಯಾಚರಣೆಧಕ್ಷವಾಗಿಲ್ಲ. ಅನೇಕ ಪರಿಕರಗಳ ದೌರ್ಭಲ್ಯಗಳನ್ನು ಹೊಂದಿವೆ. ಆದುದರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸದಸ್ಯರಿಗೆ ಮತ್ತು ಸದಸ್ಯರಾಗಲುಅರ್ಹರಿರುವವರಿಗೆ ಸೇವೆ ಒದಗಿಸಲು ಸಶಕ್ತವಾಗುವಂತೆ ಈ ಸಂಘಗಳನ್ನು ಪುನರ್‌ರೂಪಸುವಅವಶ್ಯಕತೆಇದೆ. ಸದಸ್ಯರು ಮತ್ತು ಸಾಂಭವ್ಯ ಸದಸ್ಯರಲ್ಲಿ ವಿಶ್ವಾಸ ಮೂಡಿಸಬೇಕಾದಅವಶ್ಯಕತೆಇದೆ.

**ಈ ಕೆಳಕೆಂಡ ದಿಸೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಪುನರ್‌ರೂಪಿಸಬೇಕಾಗಿದೆ.**

• ಸದಸ್ಯರ 'ಅ ಯಿಂದ ಳ' ವರಗಿನಎಲ್ಲ ಅಗತ್ಯತೆಗಳನ್ನು ಒಂದೆಡೆ ಪೂರೈಕೆಯಾಗಬೇಕು.

• ನೂತನ ವ್ಯವಹಾರ ಅವಕಾಶಗಳನ್ನು ಹುಡುಕಬೇಕು.

- ರೈತರ ಉತ್ಪನ್ನಗಳಿಂದ ಹಿಂದಿನ ಮತ್ತು ಮುಂದಿನ ಕೊಂಡಿಗಳನ್ನು ಒದಗಿಸಬೇಕು.
- ಕೃಷಿಯನ್ನು ಲಾಭದಾಯಕ ಚಟುವಟಿಕೆಯಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂಪಿಸಬಲ್ಲವು.
- ಬಹುಸೇವಾ ಕೇಂದ್ರಗಳಾಗಿ ಸದಸ್ಯರನ್ನು ಸ್ವಾವಲಂಭಿಗಳಾಗಿ ರೂಪಿಸಿ ನವೋಧ್ಯಮಿಗಳಾಗಿ ರೂಪಿಸಲು ಸಾಧ್ಯ. ಆಧಾಯ ವೃದ್ಧಿಗೆ ಸಹಕಾರಿ.
- ಗ್ರಾಮೀಣ ಆರ್ಥಿಕತೆಯ ವಿವಿಧ ವಲಯಗಳಿಗೆ ಸಂಪರ್ಕ ಏರ್ಪಡಿಸಿ, ರೈತರಆಧಾಯ ದ್ವಿಗುಣಗೊಳಿಸಬಲ್ಲದು.

**ಸಾಧ್ಯವಾಗಬಲ್ಲ ವ್ಯವಹಾರ ಚಟುವಟಿಕೆಗಳ ಪಟ್ಟಿ ಈ ಕೆಳಕಂಡಂತಿವೆ.**

- ಉತ್ತಮ ಗುಣಮಟ್ಟದ ಕೃಷಿ ಉತ್ಪನ್ನದಾಸ್ತಾನುಕೇಂದ್ರ.
- ಕೃಷಿ ಸೇವ ಕೇಂದ್ರ ಕೃಷಿ ಉಪಕರಣಗಳ ಬಾಡಿಗೆ, ಕೃಷಿ ಅಗತ್ಯತೆಗಳ ಪೂರೈಕೆ.
- ಕೃಷಿ ಸಂಸ್ಕರಣೆ (ರೂಪಾಂತರ) ಕೇಂದ್ರ : ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಸ್ಕರಣೆ
- ಕೃಷಿ ಮಾಹಿತಿ ಕೇಂದ್ರ– ವಿಸ್ತರಣಾ ಚಟುವಟಿಕೆಗಳು.
- ಕೃಷಿ ಸಾಗಾಣೆ ಮತ್ತು ಮಾರುಕಟ್ಟೆ ಅನುಕೂಲತೆಗಳು.
- ಗ್ರಾಹಕ (ಬಳಕೆ) ವಸ್ತುಗಳ ಮಾರಾಟ/ ಇತರೆ ಚಟುವಟಿಕೆಗಳು ಉದಾ: ಜನಔಷಧ ಮಾರಾಟಕೇಂದ್ರ
- ಅಲ್ಪಾವಧಿ ಕೃಷಿ ಸಾಲವಲ್ಲದೇ ಇತರೆ ಮಧ್ಯಮಾವಧಿ ಕೃಷಿ ಸಾಲ / ಕೃಷಿಯೇತರ ಸಾಲಗಳ ವಿತರಣೆ.

**ವಿವಿದೋದ್ಧೇಶ (ಬಹು) ಸೇವ ಕೇಂದ್ರ ಅಧುನಿಕತೆಯನ್ನು ಪಡೆಯಲು :**

- ತಾಂತ್ರಿಕ ಬೆಂಬಲವುಳ್ಳ–ಕಿರು ಎ.ಟಿ.ಎಂ.ಗಳ ಸ್ಥಾಪನೆ, ವೈ.ಫೈ. ಇಂಟರ್‌ನೆಟ್ (ಅಂತರ್ಜಾಲ) ಇದರಿಂದಇತರರನ್ನು ಒಳಗೊಳ್ಳುವ ಪ್ರಕ್ರಿಯೆ ಸಾಧ್ಯವಾಗುತ್ತದೆ.
- ಬ್ಯಾಂಕಿಂಗ್‌ಏಜೆಂಟ್/ ಕರೆಸ್ಪಾಂಡೆಂಟ್‌ಗಳಾಗಿ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
- ರೈತಉತ್ಪನ್ನ ಸಂಸ್ಥೆಗಳು/ ಇತರೆ ಆಧುನಿಕ ಮಾರುಕಟ್ಟೆಗಳೊಡನೆ ಸಹಯೋಗ/ಸಂಯೋಜನೆ ಹೊಂದುವುದು.
- ಕೃಷಿ ವಿಶ್ವವಿದ್ಯಾಲಯಗಳು / ಸಂಸ್ಥೆಗಳೊಡನೆ ಸಹಯೋಗದೊಡನೆ ಕೃಷಿ ವ್ಯವಹಾರದ ವಿವಿಧ ಆಯಾಮಗಳ ಪರಿಚಯ ಮಾಡಿಕೊಳ್ಳುವುದು.

**ಗುಜರಾತ್ ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕೈಗೊಂಡಿರುವ ನೂತನ ಅವಿಷ್ಕಾರ ಯೋಜನೆಗಳು : • ಶುದ್ಧ ನೀರಿನಘಟಕ ಸ್ಥಾಪನೆ.**

- ಗೋದಾಮುಗಳ ನಿರ್ಮಾಣ, ವೇರ್‌ಹೌಸ್ ನಿಯಮಗಳಡಿಯಲ್ಲಿ ಒಳಪಡಬಹುದಾದ ಮಾನದಂಡಗಳನ್ನು ಹೊಂದುವುದು.
- ಟ್ರಾಕ್ಟರ್‌ಗಳು ಮತ್ತು ಉಪಕರಣಗಳನ್ನು ಬಾಡಿಗೆಗೆಒದಗಿಸುವುದು.
- ಗ್ರಾಹಕರ ಅಂಗಡಿ

• ಸಿಮೆಂಟ್ ಮತ್ತು ಪಶು ಆಹಾರ ಮಾರಾಟ

• ಜೆರಾಕ್ಸ್‌ಯಂತ್ರ ಸ್ಥಾಪನೆ.

• ನವೀಕರಣ ಶಕ್ತಿ ಮೂಲ ಯೋಜನೆರೂಪಿಸುವುದು.

ಈ ಚಟುವಟಿಕಗಳನ್ನು ಕರ್ನಾಟಕದಲ್ಲಿಯೂಕಾಣುತ್ತಲ್ಲಿದ್ದೇವೆ.ಇದರಿಂದ ಸದಸ್ಯತ್ವದ ಹೆಚ್ಚಳ, ಹೆಚ್ಚಿನ ವ್ಯವಹಾರ ಮತ್ತು ಹೆಚ್ಚಿನಆದಾಯ ಗಳಿಸುವ ಸಾಧ್ಯತೆ. ಈ ಕ್ರಮಗಳು ಸಂಘವನ್ನು ಸುಸ್ಥಿರತೆಗೆ ಕೊಂಡೊಯ್ಯಬಲ್ಲವು.

****************************************************************************************************

# 47. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯ ಪ್ರಾಮುಖ್ಯತೆ

ಕೊಡಗು ಜಿಲ್ಲೆ ಕರ್ನಾಟಕದ ಹೆಮ್ಮೆಯಗರಿ ನಿಸರ್ಗದತ್ತ ಸಂಪತ್ತು ಭರಿತ ಜಿಲ್ಲೆ, ಒಂದು ಕಾಲದಲ್ಲಿ ಸ್ವತಂತ್ರ ರಾಜ್ಯ ಸಹಕಾರ ರಂಗವೂ ವಿಶಿಷ್ಠ ಪರಂಪರೆಯಾಗಿ ಬೆಳೆದು ಬಂದಿದೆ. ಇಲ್ಲಿನ ಸಹಕಾರ ದವಸ ಭಂಡಾರಗಳು ಅನನ್ಯ, ಅಪೂರ್ವ, ದಾನ್ಯದ ಲೆಕ್ಕದಲ್ಲಿಯೇ ಸಂಪೂರ್ಣ ಲೆಕ್ಕಪದ್ಧತಿ ಆದ್ವಿತೀಯ, ನದಿಗಳ ನಡುವೆಯ ನಾಡಿನ ಕೃಷಿ ಉತ್ಪನ್ನ ಸಹಕಾರ ಸಂಘಗಳು ಬೆಳೆದು ಬಂದಿರುವ ಹಾದಿ ಅಲ್ಲಿನ ಸಹಕಾರ ಚಳುವಳಿಯ ಬದ್ಧತೆಯನ್ನು ಎತ್ತಿ ತೋರುತ್ತದೆ. ಅದರಂತೆಯೇ 'ಸಹಕಾರ ಕೃಷಿ ಬ್ಯಾಂಕ್' ಎಂದೇ ಕರೆಯಲಾಗುತ್ತಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕುಟುಂಬಗಳೇ ನಿರ್ವಹಿಸುವ 'ಫಂಡ್', 'ಐನ್ ಮನೆ'ಯಲ್ಲಿ ನಡೆಯುವ ಕುಟುಂಬ ವಾರ್ಷಿಕ ಸಭೆಗಳು 'ಸಹಕಾರ' ಸಂಸ್ಕೃತಿಯನ್ನು ಹುಟ್ಟುಹಾಕಿವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ಜಿಲ್ಲೆಯಲ್ಲಿ ಅತ್ಯುತ್ತಮ ಸಹಕಾರ ಸಂಘಗಳಾಗಿ ರೂಪುಗೊಂಡಿವೆ. ಇದಕ್ಕೆ ಕಾರಣ ಅಲ್ಲಿನ ದಕ್ಷ ಆಡಳಿತ ಮಂಡಳಿ ಮತ್ತು ಆರ್ಥಿಕ ಮತ್ತು ಬದ್ಧತೆ ಉಳ್ಳ ಮಾನವ ಸಂಪನ್ಮೂಲ, ಸದಸ್ಯರು ಮತ್ತು ಸಿಬ್ಬಂದಿ. ಇತ್ತೀಚೆಗಿನ ದಿನಗಳಲ್ಲಿ ಇಲ್ಲಿಯ ಸಹಕಾರ ಸಂಘಗಳಲ್ಲಿಯೂ ಸೋರಿಕೆಗಳು, ದುರುಪಯೋಗಗಳು ಆಗಿರುವ ಪ್ರಸಂಗಗಳು ಕಂಡುಬರುತ್ತಿದೆ ಎಂಬುದು ಕಳವಳಕಾರಿ ಸಂಗತಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳಲ್ಲಿ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯಲು ಸದಸ್ಯರಿಗೆ ನಿರೀಕ್ಷಿತ ಮಟ್ಟದ ಸೇವೆ ಒದಗಿಸಲು ಸಾಧ್ಯವಾಗುವಂತೆ ಮಾಡಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪರಾಮರ್ಶೆ ಅವಶ್ಯ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಠೇವಣಿಗಳ ಸಂಗ್ರಹಣೆ ಮತ್ತು ಸಾಲಗಳ ವಿತರಣೆಯಲ್ಲದೇ ಖರೀದಿ ಮತ್ತು ಮಾರಾಟ ಚಟುವಟಿಕೆಗಳು ಮತ್ತು ಇತರೆ ಸೇವಾ ಚಟುವಟಿಕೆಗಳು, ನಿಧಿಯೇತರ ವ್ಯವಹಾರಗಳನ್ನು ನಡೆಸುತ್ತಿರುವುದು ಅದರ ವಿಶಿಷ್ಟತೆಯನ್ನು ಸಾರುತ್ತದೆ. ಅಲ್ಲದೇ ಅದರ ವ್ಯವಸ್ಥಾಪನೆಯಲ್ಲಿಯೂ ಬಹುರೂಪ ಅವಶ್ಯಕತೆಗಳ ಅಳವಡಿಕೆಯೂ ಬಹುಮುಖ್ಯ ಪಾತ್ರ ನಿರ್ವಹಿಸುತ್ತದೆ. ಮಿಶ್ರ ಚಟುವಟಿಕೆಗಳಲ್ಲಿ ಪ್ರತಿ ಚಟುವಟಿಕೆಯ ಹತೋಟಿಯು ವಿಭಿನ್ನ ಬೇಡಿಕೆಯನ್ನು ಅವಲಂಭಿಸಿದೆ. ಬ್ಯಾಂಕಿಂಗ್ ಚಟುವಟಿಕೆ, ರಸಗೊಬ್ಬರ ಖರೀದಿ ಮಾರಾಟ, ಪಡಿತರ ವಸ್ತುಗಳ ವಿತರಣೆ, ಗ್ರಾಹಕ ವಸ್ತುಗಳ ಮಾರಾಟ, ಕೃಷಿ ಉತ್ಪನ್ನ ಖರೀದಿ ಮಾರಾಟ ಸಂಗ್ರಹಣೆ, ಈಡಿನ ಸಾಲ, ಕೃಷಿ ಉಪಕರಣಗಳ ಖರೀದಿ ಮಾರಾಟ, ಬಾಡಿಗೆಗೆ ಒದಗಿಸುವುದು, ಕ್ರಿಮಿನಾಶಕ ಮಾರಾಟ, ಹೀಗೆ ಹತ್ತು ಹಲವು ಚಟುವಟಿಕೆಗಳು ನಡೆಯುತ್ತಿದ್ದು, ಇವುಗಳ ಲಾಭದಾಯಕ ನಿರ್ವಹಣೆ, ಸದಸ್ಯರು ಅವುಗಳನ್ನು ಬಳಸಿಕೊಳ್ಳುವ, ಸಿಬ್ಬಂದಿ ನಿಷ್ಠೆ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವುದು, ಆಡಳಿತ ಮಂಡಳಿಯು, ಸಕಾಲಿಕ ತಕ್ಕ ತೀರ್ಮಾನಗಳನ್ನು ತೆಗೆದುಕೊಳ್ಳುವುದು. ಆ ತೀರ್ಮಾನಗಳು ಅನುಷ್ಠಾನವಾಗುವಾಗ್ಯೆ ಮತ್ತು ತದನಂತರದಲ್ಲಿ ಆದ ಪರಿಣಾಮಗಳ ಬಗ್ಗೆ ಹಿಮ್ಮಾಹಿತಿ ಪಡೆಯುವುದು.

ಪಡೆದ ಹಿಮ್ಮಾಹಿತಿಯಿಂದ ತಕ್ಕ ಮಾರ್ಪಾಡುಗಳು, ಪರಿಷ್ಕರಣೆಗಳು ಚಿಕಿತ್ಸಕಾ ಕ್ರಮಗಳನ್ನು ತೆಗೆದುಕೊಳ್ಳುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿ, ದಕ್ಷತೆಯಿಂದ ಕೂಡಿರಬೇಕೆಂದರೆ ಸೂಕ್ತ ಮೇಲ್ವಿಚಾರಣೆ ಹಿಮಾಹಿತಿ ವ್ಯವಸ್ಥೆ (MIS- monitoring information system) ಅತ್ಯಗತ್ಯ. ಈ ಹಿಮ್ಮಾಹಿತಿಯು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಿವಿಧ ಚಟುವಟಿಕೆಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಮತ್ತು ಎಲ್ಲ ಚಟುವಟಿಕೆಗಳನ್ನೂ ಒಳಗೊಂಡಿರಬೇಕು. ಆಯ್ಕೆಗೊಂಡ ಬಹುಮುಖ್ಯ ಅಂಶಗಳನ್ನು ಹೊಂದಿದ್ದು, ಸರಳವಾಗಿರಬೇಕು. ಆ ಮಾಹಿತಿಯು ಚಟುವಟಿಕೆ ಲಾಭದಾಯಕವಾಗಿ ನಡೆಯುತ್ತಿದೆಯೋ, ನಷ್ಟದಲ್ಲಿ ನಡೆಯುತ್ತಿದೆಯೋ, ಲಾಭನಷ್ಟದಲ್ಲಿದ್ದರೇ, ಅದಕ್ಕೆ ಕಾರಣಗಳೇನು ಎಂಬ ಅಂಶಗಳನ್ನು ಒಳಗೊಂಡಿರಬೇಕು. ಈ ಮಾಹಿತಿಯು ಅವಶ್ಯಕತೆಗನುಸಾರ ಕಾಲಕಾಲಕ್ಕೆ, ಕಾಲಮಿತಿಯೊಳಗೆ ಪಡೆಯಬೇಕು. ಪಡೆದ ಹಿಮ್ಮಾಹಿತಿಯನ್ನು ಪರಿಶೀಲಿಸುವುದು ಅತಿ ಅವಶ್ಯ. ಪರಿಶೀಲಿಸಲು ಸಂಘದ ಆಂತರಿಕ ಪರಿವೀಕ್ಷಣೆಗೆ ಸೂಕ್ತ ಸಿಬ್ಬಂದಿ ನೇಮಕಾತಿ ಮಾಡುವುದು. ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ಅವಶ್ಯಕತೆಗನುಸಾರ ಉಪಸಮಿತಿ ರಚನೆ ಆಂತರಿಕ ಪರಿವಿಕ್ಷಣೆ ಸಮಿತಿ ಮತ್ತು ಉಪಸಮಿತಿ ವರದಿಗಳನ್ನು ಆಡಳಿತ ಮಂಡಳಿಯಲ್ಲಿ ಕೂಲಂಕುಷವಾಗಿ ಪರಿಶೀಲಿಸುವುದು ಅಗತ್ಯ. ಹಿಮ್ಮಾಹಿತಿಯಿಂದ ದಾಸ್ತಾನು ದುರುಪಯೋಗ ಹಣ ದುರುಪಯೋಗ ಅಥವ ತಪ್ಪುಗಳು ತಿಳಿದುಬರುತ್ತದೆ. ಪಡೆದ ವರದಿಗಳು, ದಲ್ಲಿಕೆಗಳನ್ನು ಪುಸ್ತಕ ಶಿಲ್ಕು ಮತ್ತು ಭೌತಿಕವಾದ ಶಿಲ್ಕುಗೆ ತುಲನೆ ಮಾಡಿ ತಾಳೆಯಾಗುತ್ತಿದೆಯೇ? ಉದಾಹರಣೆ:–ಆರಂಭ ಶಿಲ್ಕು, ಖರೀದಿ ಮಾರಾಟ, ಅಖೈರು ಶಿಲ್ಕು, ನಿಖರವಾಗಿ ಲೆಕ್ಕಹಾಕಲಾಗಿದೆಯೇ, ಖರೀದಿ ಬೆಲೆ, ಮಾರಾಟ ಬೆಲೆ, ಅಂತರ, ವ್ಯಾಪಾರ ಲಾಭವೇ, ನಷ್ಟವೇ? ಹಾಭ ಆಗಿದ್ದಲ್ಲಿ ಲಾಭಕ್ಕೆ ಕಾರಣ ನಷ್ಟವಾಗಿದ್ದಲ್ಲಿ ನಷ್ಟಕ್ಕೆ ಕಾರಣ ಏಕೆ? ಹೇಗೆ? ಎಂಬ ಅಂಶಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಲಾಭವು ಕಾರಣದಿಂದ ನ್ಯಾಯಯುತವಾಗಿರಬೇಕು. ನಷ್ಟವಾಗಿದ್ದಲ್ಲಿ ನಷ್ಟಕ್ಕೆ ಕಾರಣ ಏನು?ಯಾರು ಹೊಣೆ?ಎಂಬ ಅಂಶಗಳನ್ನು ವಿಶ್ಲೇಷಿಸಬೇಕಾಗುತ್ತದೆ. ದಾಸ್ತಾನು ಕೊರತೆಯಾದಲ್ಲಿ, ಹಾಳಾದಲ್ಲಿ, ನಷ್ಟವಾದಲ್ಲಿ ಅದಕ್ಕೆ ಹೊಣೆಗಾರರು ಯಾರು ? ಯಾವ ಕಾರಣದಿಂದ ಕೊರತೆಯಾಗಿದೆ ಎಂಬ ಅಂಶವನ್ನು ವಿಶ್ಲೇಷಿಸಬೇಕಾಗುತ್ತದೆ. ಹೊಣೆಗಾರಿಕೆಯನ್ನು ಯಾರ ಮೇಲಾದರೂ ಹೊರಿಸಿದಲ್ಲಿ ಅವರಿಂದ ನಷ್ಟ ಭರಿಸುವಕ್ರಮದ ಬಗ್ಗೆ ಆಲೋಚಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವ್ಯವಸ್ಥಾಪನೆಯು (ಆಡಳಿತ ಮಂಡಳಿ, ಮೇಲ್ಮಟ್ಟದ ಸಿಬ್ಬಂದಿ ವ್ಯವಸ್ಥೆ) ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. 'ಕಾಯಿಲೆ ವಾಸಿ ಮಾಡುವುದಕ್ಕಿಂತ ಕಾಯಿಲೆ ಬಾರದಂತೆ ತಡೆಯುವುದು' ಉತ್ತಮ ಕ್ರಮವಾಗುತ್ತದೆ.

ಪ್ರತಿ ಸಿಬ್ಬಂದಿ ವರ್ಗದವರಿಗೂ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುವುದು. ನಿಗದಿಪಡಿಸಿದ ಕರ್ತವ್ಯ ಜವಾಬ್ದಾರಿ ಬಗ್ಗೆ ಅವರಿಗೆ ಲಿಖಿತವಾಗಿ ತಿಳಿಸಿ. ತಿಳಿಸಿರುವುದಕ್ಕೆ ಸೂಕ್ತ ದಾಖಲಾತಿ ಪಡೆಯುವುದು. ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡವುದು. ಹಂಚಿಕೆ ಮಾಡಿರುವುದಕ್ಕೆ ಸೂಕ್ತ ಹಿಂಬರ ಪಡೆಯುವುದು. ಈ ದಾಖಲಾತಿಗಳನ್ನು ಸೂಕ್ತ ರಕ್ಷಣೆಯೊಂದಿಗೆ ಕಾಪಾಡುವುದು, ಪ್ರತ್ಯೇಕ ಕಡತಗಳ ನಿರ್ವಹಣೆ, ಹೊಣೆಗಾರಿಕೆಯನ್ನು ನಿಗಧಿಪಡಿಸುವಲ್ಲಿ ಅವರಿಗೆ ಕೆಲಸ ನಿರ್ವಹಣೆಯ ಜವಾಬ್ದಾರಿ/ ಹೊಣೆಗಾರಿಕೆ ನಿಗದಿ ಮಾಡಿರುವುದು. ಅತ್ಯಂತ ಮುಖ್ಯವಾಗುತ್ತದೆ. ಇದರ ಬಗ್ಗೆ ಆಡಳಿತ ಮಂಡಳಿಯು ಪರಿಶೀಲನೆ ಮಾಡಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಉಪಸಮಿತಿ ಸದಸ್ಯರು ಮೇಲ್ಪಟ್ಟದ ಸಿಬ್ಬಂದಿ ಆಕಸ್ಮಿಕ, ಹಠಾತ್ ಬೇಟಿ ನೀಡುವುದು. ಶಾಖೆಗಳಲ್ಲಿನ ನಗದು, ದಾಸ್ತಾನು ಪರಿಶೀಲಿಸುವುದು ಲೆಕ್ಕಪುಸ್ತಕಗಳನ್ನು ಪರಿಪೂರ್ಣವಾಗಿ ಬರೆಯಲಾಗಿದೆಯೇ, ನಿಖರವಾಗಿ ನಿರ್ವಹಣೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು ತಪ್ಪುಗಳು ಕಂಡುಬಂದಲ್ಲಿ ಕೂಡಲೇ ಮುಖ್ಯಕಾರ್ಯನಿರ್ವಾಹಕರ, ಆಡಳಿತ ಮಂಡಳಿಯ ಗಮನಕ್ಕೆ ತರುವುದು. ಗ್ರಾಹಕ

ಸದಸ್ಯರಿಂದ ಔಪಚಾರಿಕವಾಗಿ ಅನೌಪಚಾರಿಕವಾಗಿ ಮಾಹಿತಿ ಪಡೆಯುವುದು, ಪಡೆದ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಿವುದು. ಮೇಲಿನ ಹಂತದ ವ್ಯವಸ್ಥಾಪನೆ, ಆಡಳಿತ ಮಂಡಳಿಯು ನಿರಂತರ ಕಣ್ಣಾವಲಿರಿಸುವುದು. ಮೇಲ್ವಿಚಾರಣೆ ನಡೆಸುವುದು ಅತಿ ಮುಖ್ಯ. ತಪ್ಪು ಮಾಡಿದ ಸಿಬ್ಬಂದಿಯ ಮೇಲೆ ಆರೋಪಕ್ಕೆತಕ್ಕ ಶಿಕ್ಷೆ ವಿಧಿಸುವುದು. ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವವರನ್ನು ಗುರುತಿಸಿ, ಅಭಿನಂದಿಸಿ ಪ್ರಶಂಸಿಸಿ ಸೂಕ್ತ ಪಾರಿತೋಷಕ, ಉತ್ತೇಜನಾತ್ಮಕ ಕ್ರಮಗಳಿಂದ ಪ್ರೋತ್ಸಾಹಕದಾಯಕ ಕ್ರಮಗಳನ್ನು ಆಡಳಿತ ಮಂಡಳಿ ತೆಗೆದುಕೊಳ್ಳಬೇಕು. ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆ ಮತ್ತು ನಷ್ಟ ಭರಿಸುವ, ದುರುಪಯೋಗ ಪಡಿಸಿದ ಮೊತ್ತ ಬಡ್ಡಿ ಸಹಿತ ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳುವುದು. ರಕ್ಷಣಾತ್ಮಕವಾಗಿ ರಕ್ಷಣಾ ಠೇವಣಿಯನ್ನು ಸಂಗ್ರಹಿಸುವುದು, ಮುಚ್ಚಳಿಕೆ ಪತ್ರ ಪಡೆಯುವುದು, ಕ್ರಿಮಿನಲ್ ಅಪರಾಧವಾಗಿದ್ದಲ್ಲಿ ಅಗತ್ಯ ಕ್ರಮ (ಪೋಲೀಸ್‌ಗೆದೂರು) ಗಳನ್ನು ತೆಗೆದುಕೊಳ್ಳುವುದು. ಇದರಿಂದ ಸಂಸ್ಥೆಯಲ್ಲಿ ಶಿಸ್ತು ಮೂಡಿಸಲು ಸಾಧ್ಯವಾಗುತ್ತದೆ ಮತ್ತು ಇತರೆ ಸಿಬ್ಬಂದಿಯನ್ನು ಎಚ್ಚರಿಕೆಯಿಂದಿರಿಸಲು ಸಾಧ್ಯವಾಗುತ್ತದೆ. ಅಪರಾಧಗಳು ಸಂಭವಿಸಿದಲ್ಲಿ ಸರ್ವೇಸಾದಾರಣ ಎಂದು ಪರಿಗಣಿಸದೆ ಸಂಬಂಧಿಸಿದ ಸಿಬ್ಬಂದಿ/ ನೌಕರರ ಮೇಲೆ ತತ್ಕ್ಷಣದ ಶಿಸ್ತಿನ ಕ್ರಮವನ್ನು ಆಡಳಿತ ಮಂಡಳಿ ತೆಗೆದುಕೊಳ್ಳುವುದು ಅತ್ಯವಶ್ಯ. ಈ ಕ್ರಮ ವಹಿಸಲು ಸಂಸ್ಥೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಗಮನ ಹರಿಸುವುದು ಬಹುಮುಖ್ಯ

- ಪ್ರತಿ ಸಿಬ್ಬಂದಿಗೂ ಅವರ ಕರ್ತವ್ಯವೇನು ಎಂಬ ಬಗ್ಗೆ ಸ್ಪಷ್ಟತೆ ಇರಬೇಕು.
- ಆ ಕರ್ತವ್ಯದಲ್ಲಿ ಲೋಪವಾದರೆ ತಾನೇ ಜವಾಬ್ದಾರಿ ಎಂಬ ಅರಿವಿರಬೇಕು.
- ಅವರಿಗೆ ಆ ಕೆಲಸದ ಬಗ್ಗೆ ಸೂಕ್ತ ಜ್ಞಾನ ನೈಪುಣ್ಯತೆ ಇರುವಂತೆ ಸಜ್ಜುಗೊಳಿಸಿರಬೇಕು. (ಅನುಭವ, ತರಭೇತಿ)
- ಪ್ರಾಮಾಣಿಕತೆಯ ಮಾನದಂಡಗಳನ್ನು ವಿಧಿಸುವುದು.
- ಕಾರ್ಯಾಚರಣೆಯ ಬಗ್ಗೆ ಮೇಲ್ವಿಚಾರಣೆ, ಕಣ್ಣಾವಲು ಅತ್ಯವಶ್ಯ.
- ಒಬ್ಬರು ಮಾಡಿದ ಕೆಲಸವನ್ನು ಮತ್ತೊಬ್ಬರು ಪರಿಶೀಲಿಸಿ ನಿಖರತೆ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಕೆಳಹಂತದ ಸಿಬ್ಬಂದಿ ಕಾರ್ಯ ನಿರ್ವಹಿಸುವ ಮುನ್ನ ಮತ್ತೊಬ್ಬರಿಂದ / ಮೇಲಾಧಿಕಾರಿಯಿಂದ ಅಧಿಕಾರ ಪಡೆಯುವುದು.
- ಕಾಲಕಾಲಕ್ಕೆ ಆಂತರಿಕ ಲೆಕ್ಕಪರಿಶೀಲನೆ/ ಪರಿವೀಕ್ಷಣೆ
- ಪಾಲಿಸುತ್ತಿರುವ ವ್ಯವಸ್ಥೆ / ವಿಧಿವಿಧಾನಗಳು ಸೋರಿಕೆಗೆ /ನಷ್ಟಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂಬುದರ ಬಗ್ಗೆ ಆಡಳಿತ ಮಂಡಳಿ / ಮೇಲ್ಮಟ್ಟದ ವ್ಯವಸ್ಥಾಪನೆಯಲ್ಲಿ ಖಚಿತತೆ.

ಸಹಕಾರ ಸಂಘಗಳಲ್ಲಿ ವ್ಯವಹಾರಗಳು ಗಾತ್ರದಲ್ಲಿ ಹಿಗ್ಗಿವೆ. ವೈವಿಧ್ಯಮಯ ಚಟುವಟಿಕೆಗಳನ್ನು ಒಳಗೊಂಡಿವೆ. ಲೆಕ್ಕಪರಿಶೋಧನೆಯ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಹಿಂದಿನಂತೆ ಲೆಕ್ಕಪರಿಶೋಧನೆ ರಾಜ್ಯದ ಜವಾಬ್ದಾರಿಯಾಗಿದ್ದು, ಇಲಾಖೆಯು ಬಿಗಿಯಾದ ಲೆಕ್ಕತಪಾಸಣೆ ನಡೆಸುತ್ತಿತ್ತು. ಹಾಲಿ ಲೆಕ್ಕಪರಿಶೋಧನೆಯ ಜವಾಬ್ದಾರಿ ಸಹಕಾರ ಸಂಘದ್ದಾಗಿರುತ್ತದೆ. ಸನ್ನದ್ದು ಲೆಕ್ಕಪರಿಶೋಧಕರಿಂದ ಅದನ್ನು ನಿರೀಕ್ಷಿಸಲಾಗುವುದಿಲ್ಲ. ಆದುದರಿಂದ ಸಂಘದ ಆಡಳಿತ ಮಂಡಳಿಯು ಆಂತರಿಕ ಲೆಕ್ಕಪರಿಶೋಧನೆ, ಆಂತರಿಕ ತಡೆ ಸಮತೋಲನ ಕ್ರಮಗಳನ್ನು ಸೂಕ್ತ ಹಿಮ್ಮಾಹಿತಿ ಪಡೆದು ಆಗಿಂದ್ದಾಗ್ಗೆ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳವುದು. ಸಂಘವನ್ನು ಲಾಭದಾಯಕವಾಗಿ ನಡೆಸಲು ಮತ್ತು ಸದಸ್ಯರ ವಿಶ್ವಾಸ ಗಳಿಸಲು ಅತ್ಯಗತ್ಯ.

**************************************************************************************************

# 48. ಪ್ಯಾಕ್ಸ್ ಗಳನ್ನು ವಿವಿದೋದ್ದೇಶ ಸೇವಾ ಕೇಂದ್ರಗಳಾಗಿ ಪರಿವರ್ತನೆ : ಇದರ ಅವಶ್ಯಕತೆ – ವಿಶ್ಲೇಷಣೆ

ಭಾರತದಲ್ಲಿ ಸಹಕಾರ ಚಳುವಳಿಯ ಉಗಮವಾಗಿದ್ದು ಗ್ರಾಮೀಣ ಅಭ್ಯುದಯಕ್ಕಾಗಿ ಸಹಕಾರ ಸಂಘಗಳ ಸ್ಥಾಪನೆಯಿಂದಾಗಿ ಆಗ ಈ ಸಹಕಾರ ಸಂಘಗಳನ್ನು 'ಸೇವಾ ಸಹಕಾರ ಸಂಘ' ಸೇವೆಯ ಪ್ರಥಮ ಗುರಿ, ಆದ್ಯತೆ ಎಂದು ಪರಿಗಣಿಸಲಾಗಿತ್ತು. ಈ ಸಹಕಾರ ಸಂಘಗಳು ಸೀಮಿತ ಕಾರ್ಯಕ್ಷೇತ್ರ ಹೊಂದಿದ್ದು, ಸಂಪನ್ಮೂಲ ಕ್ರೋಢೀಕರಣ ಕಷ್ಟ ಸಾಧ್ಯವಾಗಿದ್ದರಿಂದ ಅವುಗಳ ಒಕ್ಕೂಟ ಸಂಸ್ಥೆಯಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಸ್ಥಾಪನೆಗೆ ಕಾರಣವಾಯಿತು. ಅಲ್ಲದೇ ಸರ್ಕಾರವು 'ತಕ್ಕಾವಿ ಸಾಲಗಳ ಮೂಲಕ ಸಹಾಯ ಹಸ್ತ ನೀಡಲಾಯಿತು. ಸ್ವಾತಂತ್ರ್ಯ ನಂತರ ಎ. ಡಿ ಗೋವಾಲ ರವರ ಅಧ್ಯಕ್ಷತೆಯಲ್ಲಿ ರಚಿತವಾದ 'ಗ್ರಾಮೀಣಪತ್ತು ಸಮೀಕ್ಷೆ ವರದಿ' ಸಹಕಾರ ಬೆಳವಣಿಗೆಗೆ ದಿಕ್ಸೂಚಿಯಾಗಿ ಸಹಕಾರ ಚಳುವಳಿಗೆ ಸರ್ಕಾರವೂ ಬೆಂಬಲ ನೀಡಿ ಪೂರಕಕಾಯ್ದೆ, ವಾತಾವರಣ ನಿರ್ಮಾಣಗೊಂಡಿದ್ದು ಈಗ ಇತಿಹಾಸ.

'ಇತಿಹಾಸವಿಲ್ಲದೆ ಭವಿಷ್ಯ ನಿರ್ಮಾಣ ಕಷ್ಟಸಾಧ್ಯ' ಎಂಬ ಮಾತಿದೆ. ಅದರಂತೆ ಐತಿಹಾಸಿಕವಾಗಿ 'ಸೇವಾ ಸಹಕಾರ ಸಂಘ'ಗಳು ವ್ಯವಸಾಯ ಸೇವಾ ಸಹಕಾರ ಸಂಘಗಳಾಗಿ ಕೆಲವೆಡೆ ರೈತ ಸೇವಾ ಸಹಕಾರ ಸಂಘಗಳಾಗಿ ಪರಿವರ್ತನೆಗೊಂಡವು. ಕಾರ್ಯಾಚರಣೆಯ ಭೌಗೋಳಿಕ ವಿಸ್ತಾರ ಉದ್ದೇಶ ಮತ್ತು ಸಂಪನ್ಮೂಲಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಂದಲೂ ಪಡೆಯಲಾಯಿತು. ಈ ವೇಳೆಗೆ ಅನೇಕ ಸಹಕಾರ ಸಂಘಗಳು ವಿವಿದೋದ್ದೇಶ ಸಹಕಾರ ಸಂಘಗಳಾಗಿ ಪರಿವರ್ತನೆಗೊಂಡು ಗ್ರಾಮೀಣ ಪರಿಸರದ 'ಆ' ಯಿಂದ '4' ವರೆಗಿನ ಎಲ್ಲ ಅಗತ್ಯತೆಗಳ ಪೂರೈಕೆ ಮಾಡಲು ಸಶಕ್ತವಾಗಿದ್ದವು ಮತ್ತು ಅವುಗಳಲ್ಲಿ ಅನೇಕ ಸಹಕಾರ ಸಂಘಗಳು ಈಗಲೂ ಅದೇ ರೀತಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಕಾಣುತ್ತಲಿದ್ದೇವೆ. ಕರ್ನಾಟಕದಲ್ಲಿ ಸಹಕಾರ ಚಳುವಳಿಯಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆಗಳಲ್ಲಂತೂ ಇದು ನಿಚ್ಚಳವಾಗಿ ಗೋಚರಿಸುತ್ತಿದೆ. 'ಹುಟ್ಟಿನಿಂದ ಸಾವಿನವರೆಗೂ' ಅಥವಾ 'ತೊಟ್ಟಿಲಿನಿಂದ ಚಟ್ಟದ ವರೆಗೆ' ಮಾನವನ ಸಕಲ ಅಗತ್ಯತೆಗಳನ್ನೂ ಪೂರೈಸುತ್ತಿವೆ. ಈ ಸಹಕಾರ ಸಂಘಗಳನ್ನು 'ಅಲ್ಪಾವಧಿ ಕೃಷಿಸಾಲ ರಚನೆಯ ಪುನಶ್ಚೇತನ ವರದಿ' (ಪ್ರೊ. ವೈದ್ಯನಾಥನ್ ವರದಿ) ಅಂಗೀಕಾರ ಮತ್ತು ಅನುಷ್ಠಾನದ ನಂತರ 'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು' (ಪಾಕ್ಸ್ ಕಂಅಖ/ ಕಪಿಕಖ) ಎಂದು ರಾಷ್ಟ್ರಾದ್ಯಂತ ಸಾಮಾನ್ಯ ನಾಮಧೇಯದಿಂದ ಕರೆಯಲಾಗುತ್ತಿದೆ. ಪ್ರಸಕ್ತ ಕಾಳಜಿ ಎಂದರೆ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಗ್ರಾಮೀಣ ಜನತೆಗೆ ಸರ್ವ ಅಗತ್ಯ ಸೇವೆಗಳನ್ನು ಒದಗಿಸುವುದಲ್ಲದೇ ಲಾಭದಾಯಕವಾಗಿ ನಡೆದು ಸುಸ್ತಿರವಾಗಿ ನೆಲೆಗೊಳ್ಳಬೇಕಾದ ಅವಶ್ಯಕತೆ ಬಗ್ಗೆಯಾಗಿದೆ. ಯಶಸ್ವಿಯಾಗಿ ಬದಲಾಗುತ್ತಿರುವ ಗ್ರಾಮೀಣ ಪರಿಸರದ ನವನಾವಿನ್ಯ ಅಗತ್ಯತೆಗಳನ್ನು ಪೂರೈಕೆ ಮಾಡುವುದು ಮತ್ತು ತನ್ನ ವ್ಯವಹಾರವನ್ನು ವಿಸ್ತರಿಸಿ ಒಟ್ಟಾರೆ ಮಾರುಕಟ್ಟೆಯಲ್ಲಿ ತನ್ನ ಪಾಲನ್ನು ಹಿಗ್ಗಿಸುವುದಾಗಿದೆ. ಆಗ ಮಾತ್ರ ಅದು ತನ್ನ ಸುಸ್ತಿರತೆಯನ್ನು ಕಾಪಾಡಬಲ್ಲದು. ಕಾರ್ಯಾಚರಣೆ ನಡೆಸುತ್ತಿರುವ ಸಹಕಾರ ಸಂಘಗಳೂ ಕೂಡ ಈ ಮೇಲ್ಕಂಡ ಹಿನ್ನೆಲೆಯಲ್ಲಿ ಮತ್ತು ಮಾಹಿತಿ ತಂತ್ರಜ್ಞಾನದ ಕ್ರಾಂತಿಕಾರಕ ಬದಲಾವಣೆ ಮತ್ತು ಅದರ ಅನುಷ್ಠಾನದ ಹಿನ್ನೆಲೆಯಲ್ಲಿ. ಪರಮಾರ್ಶೆ ನಡೆಸುವುದು ಈ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ ಎಂಬುದನ್ನು ಮನಗಾಣಬೇಕಾಗಿದೆ. 'ಕೋವಿಡ್–19' ಸಾಂಕ್ರಾಮಿಕ ಪರಿಣಾಮ ನಾಗಾಲೋಟದಿಂದ ನಡೆದಿದ್ದ ನಗರೀಕರಣಕ್ಕೆ ಕಡಿವಾಣ ಬಿದ್ದಿದೆ. ನಗರದ ವಲಸೆ ಹಿಮ್ಮುಖವಾಗಿದೆ. ಇದರ ಪರಿಣಾಮ ಗ್ರಾಮೀಣ ಭಾರತ ಮತ್ತು ಕೃಷಿಯ ಪ್ರಾದಾನ್ಯತೆಗೆ ಹೆಚ್ಚು ಒತ್ತು ನೀಡುವಂತಾಗಿದೆ. ಗ್ರಾಮೀಣ ಭಾರತ ಮತ್ತು ಸಹಕಾರ 'ಒಂದೇ ಮುಖದ ಎರಡು ನಾಣ್ಯಗಳು, ಸಾಮಾಜಿಕ ಆರ್ಥಿಕ ನ್ಯಾಯಯುತ ಬೆಳವಣಿಗೆಗೆ 'ಸಹಕಾರ'ವೇ ಸನ್ಮಾರ್ಗ ಎಂಬುದನ್ನು ಮನಗಾಣಲಾಗಿದೆ. 'ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು' ಎಂಬ ಮಹಾತ್ಮ ಗಾಂಧಿಯವರ ನುಡಿ ನೆನಪಿಗೆ ಬರುತ್ತಿದೆ. ಭಾರತ ಸರ್ಕಾರ ಇದನ್ನು ಮನಗಂಡು, ಸ್ವಾವಲಂಬನೆಯುತ ಬದುಕು ನಿರ್ಮಾಣಗೊಳ್ಳಲು

'ಆತ್ಮನಿರ್ಭರ'ತೆಗೆ ಒತ್ತು ನೀಡುತ್ತಿದೆ. ಗ್ರಾಮೀಣ ಭಾರತದ ಮೂಲಭೂತ ಸೌಕರ್ಯ, ಪರಿಕರಗಳ ನಿರ್ಮಾಣಕ್ಕಾಗಿ, ಕೃಷಿ ಮೂಲಭೂತ ಸೌಕರ್ಯ ನಿರ್ಮಾಣಕ್ಕಾಗಿ (agriculture infrastructure development fund) ರೂ. 20,000 ಕೋಟಿ ನಿಧಿಯನ್ನು ಸ್ಥಾಪಿಸಿದೆ. 'ನಬಾರ್ಡ್'ನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ' ಭಾರತ ಸರ್ಕಾರ ಗುರುತಿಸಿ ಅದಕ್ಕೆ ಈ ಜವಾಬ್ದಾರಿಯನ್ನು ವಹಿಸಿದೆ. ಈ ಕಾರ್ಯಕ್ರಮದ ಅಂಗವಾಗಿ 'ನಬಾರ್ಡ್"ಪಾಕ್ಸ್'ಗಳನ್ನು ವಿವಿದೋದ್ದೇಶ ಸೇವಾ ಕೇಂದ್ರಗಳಾಗಿ ರೂಪಿಸುವ ಉದ್ದೇಶವನ್ನು ಹೊಂದಿದೆ. ರಾಜ್ಯ ಸಹಕಾರ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಶೇಕಡ 60 ರಿಂದ 75 ಭಾಗವನ್ನು ಶೇ. 4ರ ಬಡ್ಡಿ ದರದಲ್ಲಿ ಒದಗಿಸಲಾಗುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್ ಮುಖೇನ ಪ್ರಸ್ತಾವನೆ ಸಲ್ಲಿಸಬೇಕಾಗಿದೆ. ಯೋಜನೆ ತಯಾರಿಯ ಪೂರ್ವಭಾವಿಯಾಗಿ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯ ಸಹಕಾರ ಬ್ಯಾಂಕ್ ಮೂಲಕ ಆಯೋಜಿಸಲಾಗುತ್ತಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ಪ್ರಮುಖ ಉದ್ದೇಶವಾದ 'ಅಲ್ಪಾವಧಿ ಕೃಷಿ ಸಾಲ' ಒದಗಿಸಿದರಷ್ಟೇ ಸಾಲದು ಇತರೆ ಸೇವೆ, ಸೌಲಭ್ಯ, ವ್ಯವಹಾರಗಳನ್ನು ಒದಗಿಸಬೇಕು. ಈ ಸಂದರ್ಭದಲ್ಲಿ ಆನಂದ ಭಕ್ಷಿರವರ ವರದಿಯನ್ನು ನೆನಪಿಸಿಕೊಳ್ಳಬೇಕು. ಮೂರು ಹಂತದ ಈ ವ್ಯವಸ್ಥೆಯಲ್ಲಿ ಒಂದು ಹಂತವನ್ನು ರದ್ದುಗೊಳಿಸುವುದು ಅವರ ಶಿಫಾರಸ್ಸು ಆಗಿತ್ತು. ಅದರಂತೆ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಪತ್ತೇತರ ಚಟುವಟಿಕೆಗಳನ್ನು ನಡೆಸುವುದು 'ಕೋರ್ ಬ್ಯಾಂಕಿಂಗ್' ಸೌಲಭ್ಯದಿಂದಾಗಿ ರೈತರಿಗೆ ನೇರವಾಗಿ ಅಲ್ಪಾವಧಿ ಕೃಷಿಸಾಲ ಒದಗಿಸುವುದು ಸಹಕಾರಿಗಳ ಬಲಯುತ ವಿರೋಧದಿಂದಾಗಿ ಅನುಷ್ಠಾನಗೊಳಿಸಲಾಗಲಿಲ್ಲ. ಆದರೆ, ಕೇರಳ ರಾಜ್ಯದಲ್ಲಿ ಮತ್ತೊಂದು ಬೆಳವಣಿಗೆಯಿಂದಾಗಿ, ಐ.ಐ.ಎಂ. ಬೆಂಗಳೂರು ನಿಂದ ಅಧ್ಯಯನ ನಡೆಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಂತವನ್ನು ರದ್ದುಗೊಳಿಸಿ ರಾಜ್ಯ ಸಹಕಾರ ಬ್ಯಾಂಕ್ ನೊಡನೆ ವಿಲೀನಗೊಳಿಸಲಾಗಿದೆ. ನಬಾರ್ಡ್ ನೀತಿ ಮತ್ತು ಅಲ್ಪಾವಧಿ ಕೃಷಿ ಸಾಲ (ಕೆ.ಸಿ.ಸಿ.)ವನ್ನು 'ರೂಪೇ' ಕಾರ್ಡ್ ಮೂಲಕ ವಿತರಿಸಲು ಅನುಕೂಲವಾಗುವಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ರೈತ ಸದಸ್ಯರ ಖಾತೆಯನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಶಾಖೆಯಲ್ಲಿ ತೆರೆದು ಅದರ ಮೂಲಕವೇ ವಿತರಿಸಲಾಗುತ್ತಿದೆ. ಯಾವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ (ಈ) ಸಂಘಗಳು ಕೇವಲ ಪಡೆದ ಸಾಲಗಳನ್ನು ಅವಲಂಬಿಸಿವೆಯೋ ಆ ಸಹಕಾರ ಸಂಘಗಳ ಅಸ್ತಿತ್ವವೇ ಪ್ರಶ್ನೆದಾಯಕವಾಗಿದೆ. ಆದುದರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಕೇವಲ ಅಲ್ಪಾವಧಿ ಕೃಷಿ ಸಾಲ ಒದಗಿಸುವುದಲ್ಲದೇ ಇತರೆ ಚಟುವಟಿಕೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ತನ್ಮೂಲಕ ಗ್ರಾಮೀಣ ಪ್ರದೇಶದಲ್ಲಿ ತನ್ನ ಪ್ರಸ್ತುತೆಯನ್ನು ಉಳಿಸಿಕೊಳ್ಳುವುದೇ ಅಲ್ಲದೇ ಸದಸ್ಯರಿಗೆ ಮತ್ತು ಗ್ರಾಮೀಣ ಜನರ ಸೇವೆ, ಸೌಕರ್ಯ, ಆಶಯ, ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ. ಮೂರು ಹಂತದ ಈ ವ್ಯವಸ್ಥೆಯಲ್ಲಿ ಒಂದು ಹಂತವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಿವಿದೋದ್ದೇಶ/ ಸೇವಾ ಕೇಂದ್ರಗಳಾಗಿ ಪರಿವರ್ತನೆ ಹೊಂದಲು ಕೆಲವು ಪೂರ್ವಬಾವಿ ತಯಾರಿಯ ಆವಶ್ಯಕತೆ ಇದೆ ಎಂಬುದನ್ನು ಮನಗಾಣಬೇಕು ಹಾಗೂ ಪರಿಗಣಿಸಬೇಕು. ಅವುಗಳು ಈ ಕೆಳಗಿನಂತಿವೆ.

1) **ಪರಿಸರ ಅಧ್ಯಯನ:** ಯಾವುದೇ ನೂತನ ಯೋಜನೆ ಹಮ್ಮಿಕೊಳ್ಳುವ ಮೊದಲಿಗೆ 'ಸ್ವಾಟ್' ವಿಶ್ಲೇಷಣೆ ಮಾಡುವುದು.

ಅ) **ಸಾಮರ್ಥ್ಯ (strength)**ಗಳ ಪಟ್ಟಿ ಮಾಡುವುದು: ಸಂಸ್ಥೆಯು ಅಷ್ಟು ವರ್ಷಗಳಿಂದ ಅಸ್ತಿತ್ವದಲ್ಲಿದೆ ಎಂದರೆ ತನ್ನ ಸಾಮರ್ಥ್ಯದಿಂದಲೇ ಆಗಿದೆ. ಅವು ತಮ್ಮ ಸದಸ್ಯತ್ವ, ತಮ್ಮ ಸಂಸ್ಥೆ ಎಂಬ ಭಾವ, ತನ್ನ ಉನ್ನತ ಸಂಸ್ಥೆಯ ಬೆಂಬಲ, ಸಮೂಹದ ಸಹಭಾಗಿತ್ವ, ಈಗಾಗಲೇ ಕ್ರೋಢೀಕರಣವಾಗಿರುವ ನಿಧಿ, ತಾನು ಹೊಂದಿರುವ ನಿವೇಶನ, ತಾನು ಕಾರ್ಯನಿರ್ವಹಿಸುತ್ತಿರುವ ಆಯಾಕಟ್ಟಿನಸ್ಥಳ, ಹೀಗೆ, ಹತ್ತುಹಲವು ಸಾಮರ್ಥ್ಯಗಳನ್ನು ಸದುಪಯೋಗಕ್ಕೆ ಒಳಪಡಿಸುವುದು.

(ಆ)**ದೌರ್ಬಲ್ಯಗಳು(weakness):** ಮಾಡುವುದು. ಉದಾಹರಣೆ : ಸಿಬ್ಬಂದಿ ಕೊರತೆ, ನಿಧಿಗಳ ಕೊರತೆ, ಹಾಲಿ ಸೌಕರ್ಯಗಳ ಕೊರತೆ, ದೌರ್ಬಲ್ಯಗಳ ಕೊರತೆಗಳನ್ನು ಸರಿಪಡಿಸುವ ಕ್ರಮಗಳ ಬಗ್ಗೆ ಆಲೋಚಿಸುವುದು. ಮಾರ್ಗೋಪಾಯಗಳನ್ನು ರೂಪಿಸುವುದು.

(ಇ)**ಅವಕಾಶಗಳು (oppartunities):** ಯಾವ ಯಾವ ನೂತನ ಅವಕಾಶಗಳಿವೆ. ಯಾವ ಯಾವ ವ್ಯವಹಾರಗಳನ್ನು ಕೈಗೊಳ್ಳಬಹುದು. ಸುತ್ತಮುತ್ತಲ ಪರಿಸರವನ್ನು ಗಮನಿಸುವುದರಿಂದ ಚಟುವಟಿಕೆಗಳನ್ನು ಗಮನಿಸುವುದರಿಂದ ವ್ಯವಹಾರಗಳನ್ನು ಕೈಗೊಳ್ಳಬಹುದು ಎಂಬುದು ಹೊಳೆಯುತ್ತದೆ. ಕೃಷಿ, ಕೃಷಿಯೇತರ, ಕೃಷಿಗೆ ಸಂಬಂಧಿಸಿದಂತೆ. ಕೊಯ್ಲು ಪೂರ್ವ, ಕೊಯ್ಲು ನಂತರ, ಕೃಷಿ ಪೂರಕ. ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳ ಅನುಷ್ಠಾನ, ಕಂದಾಯ, ಕೃಷಿ, ಪಶುಸಂಗೋಪನೆ, ರೇಷ್ಮೆ, ಕೃಷಿ ಮಾರುಕಟ್ಟೆ ತೋಟಗಾರಿಕೆ. ಕೃಷಿ, ತೋಟಗಾರಿಕೆ ಉತ್ಪನ್ನಗಳ ಸಂಗ್ರಹಣೆ, ದಾಸ್ತಾನು, ಸಂಸ್ಕರಣೆ, ಮಾರಾಟ, ಮೌಲ್ಯವರ್ಧನೆ, 'ಅವಕಾಶಗಳನ್ನು ಬಾಚಿಕೊಳ್ಳುವುದು' (grab the oppartunities).

(ಈ) **ಬೆದರಿಕೆಗಳು/ ಸವಾಲುಗಳು (threats):** ಖಾಸಗಿ ವಲಯದಲ್ಲಿನ ಸ್ಪರ್ಧೆಗಳು, ಮಾರುಕಟ್ಟೆಯಲ್ಲಿನ ಸ್ಪರ್ಧೆ ಇವುಗಳನ್ನು ಮೆಟ್ಟಿನಿಲ್ಲುವ ಬಗೆ, ಪರಿಸರದಲ್ಲಿನ ವೈಪರಿತ್ಯಗಳು ಇವುಗಳನ್ನು ಹೋಗಲಾಡಿಸುವ ಬಗೆ ಇವುಗಳನ್ನು ಆಲೋಚಿಸುವುದು. ಈ ಬಗೆಯ 'ಸ್ವಾಟ್' (SWOT) ವಿಶ್ಲೇಷಣೆಯಿಂದ ಒಂದು ಚಿತ್ರಣ ಮೂಡುತ್ತದೆ. ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ, ಆಸಕ್ತ, ಪ್ರಗತಿಪರ ಸದಸ್ಯರು ಕಲೆತು ಗುಂಪು ಚರ್ಚೆ ಮಾಡಿದರೆ ಅನೇಕ ಹೊಸ ವಿಷಯಗಳು ಹೊರಹೊಮ್ಮಲು ಸಾಧ್ಯವಿದೆ. ಬೇರೆ 05 3 (think differently) 2 ಚಿಂತನೆ (out of box thinking) ಗಳಿಂದ ನೂತನ ದಾರಿಗಳು ತೆರೆಯುತ್ತವೆ. ಈ ವಿಶ್ಲೇಷಣೆಯ ಜೊತೆಗೆ ಮತ್ತೊಂದು ರೀತಿಯ ಅಂಶಗಳ ವಿಶ್ಲೇಷಿಸಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. **"ಪೆಸೆಲ್' (PESTLE)** ವಿಶ್ಲೇಷಣೆ ಎಂದು ಕರೆಯಲಾಗುತ್ತದೆ.

(ಅ) **ರಾಜಕೀಯ (Political)** ಪರಿಸರ ಸರಿಹೊಂದುತ್ತದೆಯೇ? ಅಡಚಣೆಗಳಿದ್ದಲ್ಲಿ ನಿವಾರಿಸುವ ಬಗ್ಗೆ ಕ್ರಮಗಳು.

(ಆ) ಆರ್ಥಿಕ ಪರಿಸ್ಥಿತಿ ( economic): ನಮ್ಮ ಪರಿಸರದ ಆರ್ಥಿಕ ಪರಿಸ್ಥಿತಿ, ಅವಶ್ಯಕತೆಗಳು ಖರೀದಿ ಶಕ್ತಿ, ಠೇವಣಿ ಉಳಿತಾಯ ಸಶಕ್ತತೆ, ನಿಧಿಗಳ ಕ್ರೋಢೀಕರಣಕ್ಕೆ ಇರುವ ಅವಕಾಶಗಳು, ದೇಣಿಗೆ, ಕೊಡುಗೆ ಸ್ವೀಕರಿಸಲು ಇರುವ ಅವಕಾಶಗಳು ಇದರ ಅಧ್ಯಯನ.

(ಇ)**ಸಾಮಾಜಿಕ ಪರಿಸರ(Social)**: ಸಾಮಾಜಿಕ ಪರಿಸರ ಅನುಕೂಲವಾಗಿದೆಯೇ ಅದರ ಲಾಭಪಡಯುವ ಬಗ್ಗೆ, ಲಭ್ಯ ಅವಕಾಶಗಳು, ಜಾತಿಯತೆ ಶ್ರೇಣಿಕೃತ ಸಮಾಜ ವ್ಯವಸ್ಥೆ, ಕೈಗೊಳ್ಳುತ್ತಿರುವ, ಕೈಗಾರಿಕೆ ಕಾಯಕ ಉತ್ಪನ್ನಗಳು, ಅವುಗಳಿಗೆ ಮಾರುಕಟ್ಟೆ ಒದಗಿಸುವುದು, ಜಾತ್ರ, ಪರಿಷೆ, ಸಂತೆ, ಇವುಗಳಲ್ಲಿ ಭಾಗವಹಿಸುವಿಕೆ, ಸೂಕ್ತವಾದ ಹೊಂದಾಣಿಕೆ ಇದರ ಅಧ್ಯಯನ ಮತ್ತು ಅವಕಾಶಗಳ ಬಗ್ಗೆ, ನಿವಾರೋಪಾಯಗಳ ಬಗ್ಗೆ ಚಿಂತನೆ.

(ಈ) **ತಾಂತ್ರಿಕ ಪರಿಸರ** (Technological) : ತಾಂತ್ರಿಕತೆನಿಂದ ನೀರಾಗಿರುವುದಿಲ್ಲ. ಬದಲಾವಣೆ ಅದರಲ್ಲಿಯೂ ತ್ವರಿತ ಬದಲಾವಣೆ ಒಂದು ತಾಂತ್ರಿಕ ಕ್ರಾಂತಿಯನ್ನೇ ಕಾಣುತ್ತಿದ್ದೇವೆ. ಆಂತರಿಕ ಬದಲಾವಣೆ ಸಂಘದ ಲೆಕ್ಕನಿರ್ವಹಣೆ, ಸಾಮಾನ್ಯ ಲೆಕ್ಕ ಪದ್ಧತಿ ಅಳವಡಿಕೆ (common accounting system. CAS) ಕಂಪ್ಯೂಟರೀಕರಣ, ಡಿಜಿಟಲೀಕರಣ, ಸೂಕ್ತ ತಂತ್ರಾಂಶ ಅಳವಡಿಕೆ, ಕೋರ್ ಬ್ಯಾಂಕಿಂಗ್ ತಂತ್ರಾಂಶದ ಉಪಯೋಗ, ಇಂಟರ್‌ನೆಟ್ ಜಾಲ ಬಳಕೆ. ವಾಹ್ಯಪರಿಸರದಲ್ಲಿ ಸದಸ್ಯರಿಗೆ, ಸಾರ್ವಜನಿಕರಿಗೆ, ಕಿಯೋಸ್ಕ ಸಂಪರ್ಕ ಅನುಕೂಲತೆಗಳು, ಕೃಷಿ, ತೋಟಗಾರಿಕೆಯಲ್ಲಿ ಕೊಯ್ಲು ಪೂರ್ವ, ಅಗತ್ಯ ಪರಿಕರಗಳ, ರಸಾಯನಿಕಗಳ ಬಳಕೆ, ಕೊಯ್ಲುನಂತರದ ಆಗತ್ಯತೆಗಳು, ಕೃಷಿ ಪೂರಕ ಚಟುವಟಿಕೆಗಳಾದ, ಹೈನುಗಾರಿಕೆ, ಕುರಿಸಾಕಾಣೆ, ಕೋಳಿಸಾಕಾಣೆ, ಜೇನುಸಾಕಾಣೆ. ಇಂತಹ ಅನೇಕ ಗುಡಿಕೈಗಾರಿಕೆಗಳಲ್ಲಿ

ಆಧುನಿಕ ತಾಂತ್ರಿಕತೆಯ ಅಳವಡಿಕೆ, ಆಗುತ್ತಿರುವ ಬದಲಾವಣೆಗಳು ನೂತನ ಅವಕಾಶಗಳನ್ನು ಒದಗಿಸಬಲ್ಲದು. ಇದರ ಗಮನಿಸುವಿಕೆ ಅಧ್ಯಯನ.

(ಉ) **ಕಾಯ್ದೆಯಾತ್ಮಕ ಅಂಶಗಳು ಬದಲಾವಣೆಗಳು:** ಕೃಷಿ ಮಾರುಕಟ್ಟೆ ಕಾಯ್ದೆಯಲ್ಲಿನ ಬದಲಾವಣೆ ರೈತರಿಗೆ ಮಾರಾಟ ಮಾಡಲು ಒದಗಿಸಿರುವ ಸ್ವಾತಂತ್ರ್ಯವನ್ನು ಸಹಕಾರ ಸಂಘ ಹೇಗೆ ಉಪಯೋಗಿಸಿಕೊಳ್ಳಬಲ್ಲದು. ನಗರದಲ್ಲಿನ ಬೃಹತ್ ಚಿಲ್ಲರೆ ಮಾರಾಟ ಮಳಿಗೆಗಳಿಗೆ ಮಾರಾಟ ಮಾಡುವ ಏಜೆನ್ಸಿಯಾಗಿ ಕಾರ್ಯನಿರ್ವಹಿಸಗಬಹುದಾದ ಅವಕಾಶಗಳ ಅವಲೋಕನೆ. ಸಹಕಾರ ಕಾಯ್ದೆಯಲ್ಲಿ ಇತರೆ ಸಂಸ್ಥೆಗಳೊಡನೆ ಪಾಲುದಾರರಾಗಿ, ಸಹಯೋಗದೊಂದಿಗೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದ್ದು ಅದರ ಸದುಪಯೋಗ ಹೀಗೆ ಕಾಯ್ದೆಯಾತ್ಮಕವಾಗಿ ಒದಗಿಬಂದಿರುವ ಅವಕಾಶಗಳ ಅಧ್ಯಯನ.

(ಊ) **ಪರಿಸರಾತ್ಮಕ (environmental)** ಅಂಶಗಳ ಪರಿಗಣನೆ: ಪರಿಸರ ನೈರ್ಮಲ್ಯವನ್ನು ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿರುತ್ತದೆ. ಸಂಸ್ಕರಣೆ ಘಟಕಗಳನ್ನು ಸ್ಥಾಪಿಸುವಾಗ ಉತ್ಪನ್ನಗಳ ಮೌಲ್ಯವರ್ಧನೆ (value addition) : ಪ್ರಕ್ರಿಯೆಗಳಲ್ಲಿ ತೊಡಗಿಕೊಂಡಾಗ ಉತ್ಪನ್ನಗಳ ತ್ಯಾಜ್ಯಗಳ ವಿಲೇವಾರಿ ಮರುಬಳಕೆ, ತೆಗೆದುಕೊಳ್ಳಬೇಕಾದ ವಿವಿಧ ಇಲಾಖೆಗಳ ಪರವಾನಿಗೆಗಳು, ಅನುಮತಿಗಳು ಇವುಗಳ ಬಗ್ಗೆ ಮಾಹಿತಿ ಅತ್ಯಗತ್ಯ.

2) **ಯೋಜನೆಯ ತಯಾರಿ ಮತ್ತು ಅನುಷ್ಠಾನ:** ಮೇಲಿನ ವಿವರಣೆಯ ಅನುಸಾರ ಹಮ್ಮಿಕೊಳ್ಳಬೇಕಾದ

ಅ) ಚಟುವಟಿಕೆಯನ್ನು ಗುರುತಿಸಬೇಕು (identifiction) : ಅದು ಗೋದಾಮು ನಿರ್ಮಾಣ ಶೈತ್ಯಾಗಾರ ನಿರ್ಮಾಣ, ಸಂಸ್ಕರಣಾ ಘಟಕ (ಮೌಲ್ಯವರ್ಧಿಕರಣ) ಉದಾಹರಣೆ: ಅಕ್ಕಿಗಿರಣಿ, ಅವಲಕ್ಕಿ ತಯಾರಿಕೆ, ಹಿಟ್ಟಿನ ಗಿರಣಿ, ಎಣ್ಣೆಗಾಣ. ಉತ್ಪನ್ನಗಳ ಶ್ರೇಣೀಕರಣ (grading) ಶುದ್ಧೀಕರಣ, ಪ್ಯಾಕೇಜಿಂಗ್, 'ಬ್ರಾಂಡ್ ಆಗಿ ಉತ್ಪಾದಿಸಿ ಮಾರಾಟಮಾಡುವುದು ಆಗಿರಬಹುದು, ಗುರುತಿ[1]ದ ನಂತರ (ಆ) ತಾಂತ್ರಿಕ ಸಾಧ್ಯತೆಯನ್ನು ಪರಿಶೀಲಿಸುವುದು. (technical feasibility) ಸಲಹೆ ಸೂಚನೆ ಪಡೆಯುವುದು, ಕೈಗಾರಿಕೆ, ಕೃಷಿ, ಆಪಾರ ಸಂಸ್ಕರಣೆ, ರೇಷ್ಮೆ, ಗುಡಿ ಕೈಗಾರಿಕೆ, ಇತರೆ ಯೋಜನೆಯು (ಇ) ಆರ್ಥಿಕ ಸದೃಢತೆಯನ್ನು ಹೊಂದಿರಬೇಕು. (economically feasible) ಹೂಡಿಕೆ ಬಂಡವಾಳದ (investment capital fixed capital), ಅದರ ಮೂಲಗಳು, ದುಡಿಯುವ ಬಂಡವಾಳ (working capital), ಅದರ ಮೂಲಗಳು, ದುಡಿಯುವ ಬಂಡವಾಳ ಯೋಜನೆಯಲ್ಲಿನ ಉತ್ಪನ್ನಗಳ ಮಾರಾಟ ಸೌಲಭ್ಯಗಳು, ಮಾರುಕಟ್ಟೆ, ದರ ನಿಗಧಿ (Internal rate of return IRR), ನಗದು ಹರಿವು ಸಾಧ್ಯತೆ, (cash flow analysis) ಇವುಗಳಿಂದ ಆರ್ಥಿಕ ಸಾಧ್ಯತೆ ಬಗ್ಗೆ ತಿಳಿದು ಬರುತ್ತದೆ. ತದನಂತರ ಅಥವ ಜೊತೆ ಜೊತೆಯಾಗಿ ಪರಿಗಣಿಸಬೇಕಾದ ಅಂಶ (ಈ) ಬ್ಯಾಂಕ ಬಲಿಟಿ : ಪಡೆದ ಸಾಲವನ್ನು ಬಡ್ಡಿ ಸಹಿತ ಮರುಪಾವತಿಸುವ ಸಾಧ್ಯತೆ ಬಹಳ ಮುಖ್ಯವಾಗುತ್ತದೆ. ಈ ಯೋಜನೆಯಲ್ಲಿ ಪ್ರಮುಖ ಭಾಗವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಪಡೆಯಲಾಗುತ್ತದೆ ಮತ್ತು ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್ ಮತ್ತು 'ನಬಾರ್ಡ್'ನಿಂದ ಪುನರ್ಧನ ಸೌಲಭ್ಯ ಪಡೆಯುತ್ತದೆ. ಆದುದರಿಂದ ಹಿಂತಿರುಗಿಸುವ ಬಗ್ಗೆ, ಮರುಪಾವತಿಸುವ ಜವಾಬ್ದಾರಿ ಪ್ರತಿ ಹಂತದಲ್ಲಿಯೂ ಇದ್ದು ಅತಿ ಜಾಗರೂಕತೆಯಿಂದ ನಿರ್ವಹಿಸಬೇಕಾಗುತ್ತದೆ. ಆದುದರಿಂದ ಯೋಜನೆಯ ತಯಾರಿ ನಿಗದಿ, ಇತರೆ ಅಂಶಗಳು. ಇದರಿಂದ ಆಗುವ ಆಂತರಿಕವಾಗಿ ಮತ್ತು ಅನುಷ್ಠಾನವನ್ನು ಎಚ್ಚರಿಕೆಯಿಂದ ಜವಾಬ್ದಾರಿಯುತವಾಗಿ ಬದ್ದತೆಯಿಂದ ಅನುಷ್ಠಾನ ಮಾಡಬೇಕಾದುದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ್ದಾಗಿರುತ್ತದೆ. ಪ್ರತಿ ಹಂತದಲ್ಲಿಯೂ ಸೂಕ್ತ ಮೇಲ್ವಿಚಾರಣೆ ಮತ್ತು ಸಮಯ ಬದ್ಧ ಗುರಿ ನಿಗಧಿಪಡಿಸುವಿಕೆ ಮತ್ತು ಅನುಷ್ಠಾನ ಬಹು ಮುಖ್ಯ ಪಾತ್ರ ನಿರ್ವಹಿಸುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅಲ್ಪಾವಧಿ ಕೃಷಿ ಪತ್ತಿನ ವ್ಯವಸ್ಥೆಯ ತಳಪಾಯ (ಬುನಾದಿ) ವಾಗಿದ್ದು ಅವು ಸದೃಢವಾಗಿ ನೆಲೆಗೊಳ್ಳಬೇಕು. ಇದರಿಂದಲೇ ಗ್ರಾಮೀಣ ಭಾರತದ ಅಭ್ಯುದಯ

ಸಾಧ್ಯ. ಈ ದಿಶೆಯಲ್ಲಿ ಈ ಸಂಘಗಳು ಒದಗಿಬಂದಿರುವ ಸದಾವಕಾಶವನ್ನು ಉಪಯೋಗಿಸಿಕೊಂಡು ವಿವಿದೋದ್ದೇಶ ಸೇವಾ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಆಶಿಸಲಾಗಿದೆ.

**************************************************************************************************

# 49. ಅಲ್ಪಾವಧಿ ಕೃಷಿ ಪತ್ತು ರಚನೆಯಲ್ಲಿ ಮೇಲ್ವಿಚಾರಕರ ಪಾತ್ರ ಮತ್ತು ಜವಾಬ್ದಾರಿ

ಭಾರತದಲ್ಲಿ ಅಲ್ಪಾವಧಿ ಪತ್ತು (ಸಾಲ) ರಚನೆಯು ಬಹುತೇಕ ರಾಜ್ಯಗಳಲ್ಲಿ ಮೂರು ಹಂತಗಳನ್ನು ಹೊಂದಿರುತ್ತವೆ. ಕೇರಳ ಮತ್ತು ಛತ್ತೀಸ್‌ಘಡ ರಾಜ್ಯಗಳಲ್ಲಿ ಇತ್ತೀಚೆಗೆ ಜಿಲ್ಲಾಕೆಂದ್ರ ಸಹಕಾರ ಬ್ಯಾಂಕ್‌ಗಳನ್ನು ರಾಜ್ಯ ಸಹಕಾರ ಬ್ಯಾಂಕ್‌ಗಳೊಡನೆ ವಿಲೀನಗೊಂಡಿದೆ. ಈ ರಚನೆಯಲ್ಲಿ ಬುನಾದಿ ಅಥವಾ ತಳಹದಿ ಎಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿ.ಎ.ಸಿ.ಎಸ್., ಪಿ.ಕೆ.ಪಿ.ಎಸ್). ರಾಷ್ಟ್ರದಲ್ಲಿ ಅಂದಾಜು ಒಂದು ಲಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳನ್ನು ಮೂರು ಲಕ್ಷಕ್ಕೆ ಏರಿಸಬೇಕೆಂದು ಭಾರತ ಸರ್ಕಾರ ಆಶಯ ವ್ಯಕ್ತಪಡಿಸಿದೆ. ಈ ಸಂಘಗಳು ರೈತರಿಗೆ ಅಲ್ಪಾವಧಿ ಕೃಷಿಸಾಲವನ್ನುಒದಗಿಸುತ್ತಿವೆ.

ಅಷ್ಟೇ ಅಲ್ಲದೆ, ರೈತರಿಗೆ ಕೃಷಿಗೆ ಅಗತ್ಯ ಪರಿಕರಗಳಾದ ರಸಗೊಬ್ಬರ, ಕ್ರಿಮಿನಾಶಕ ಮತ್ತು ಇತರೆ ಅಗತ್ಯತೆಗಳನ್ನು ಪೂರೈಕೆ ಮಾಡುತ್ತಿವೆ. ಅಲ್ಲದೆ, ತನ್ನ ವ್ಯವಹಾರಗಳನ್ನು ವೈವಿಧ್ಯಮಯವಾಗಿ ವಿಸ್ತರಿಸಿಹತ್ತು ಹಲವು ಸೇವೆ, ಸೌಲಭ್ಯ, ಸೌಕರ್ಯಗಳನ್ನು ಗ್ರಾಮೀಣ ಪ್ರದೇಶದಲ್ಲಿ ಒದಗಿಸುತ್ತಿವೆ. ಈಕೆಲಸ ಕಾರ್ಯಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಎಂದರೆ "ಮೇಲ್ವಿಚಾರಕರು". ಇವರು ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್‌ಗೂ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳುಗಳ ನಡುವೆ ಇರುವ ಪ್ರಮುಖ ಕೊಂಡಿಗಳು, ಸಂಪರ್ಕ ಸೇತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಎಲ್ಲ ಚಟುವಟಿಕೆಗಳ ಉಸ್ತುವಾರಿ ಇವರ ಜವಾಬ್ದಾರಿ ಆಗಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಚರಣೆಗೊಂಡಲ್ಲಿ ತನ್ನ ಶೃಂಗ ಸಂಘವಾದ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್ ಕೂಡ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಸಬಲತೆ ತನ್ನ ಸದಸ್ಯ ಸಹಕಾರ ಸಂಘಗಳು ಅದರಲ್ಲಿಯೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಯಶಸ್ವಿ ಕಾರ್ಯಾಚರಣೆಯನ್ನು ಅವಲಂಭಿಸಿರುತ್ತದೆ. ತನ್ಮೂಲಕ ರಾಜ್ಯ ಸಹಕಾರ ಬ್ಯಾಂಕ್‌ಕೂಡ ಈ ಎರಡು ಹಂತಗಳನ್ನು ಅವಲಂಭಿಸಿರುತ್ತದೆ. ಒಟ್ಟಾರೆ ಈ ರಚನೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿದಲ್ಲಿ ಕೃಷಿ ಉತ್ಪಾದನೆ ಮತ್ತು ಇವುಗಳ ಮಾರುಕಟ್ಟೆ ಇಂದ ರೈತನ ಆಧಾಯ ಹೆಚ್ಚಳಗೊಂಡು ಬದುಕು ಹಸನಾಗುವುದಲ್ಲದೇ ರಾಷ್ಟ್ರದ ಆರ್ಥಿಕ ಪ್ರಗತಿ ಸಾಧ್ಯ.

ಈ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ 'ಮೇಲ್ವಿಚಾರಕರ' ಪಾತ್ರ ಬಹುಮುಖ್ಯವಾಗಿರುತ್ತದೆ. ಪ್ರತಿಯೊಬ್ಬ ಮೇಲ್ವಿಚಾರಕರ ಜವಾಬ್ದಾರಿಯಲ್ಲಿ 8 – 10 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತವೆ. ಅದರ ಎಲ್ಲ ಆಗು ಹೋಗುಗಳ ಜವಾಬ್ದಾರಿ ಅವರದೇ ಆಗಿರುತ್ತದೆ. ಬಹುತೇಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪನಿಯಮ ರೀತಿ ಇವರು ಪಧನಿ ಮಿತ್ತ ನಿರ್ದೇಶಕರು ಕೂಡ ಆಗಿರುತ್ತಾರೆ. ತಮ್ಮ ಉಸ್ತುವಾರಿ ಸಹಕಾರ ಸಂಘಗಳ 'ನಾಯಕರು' ಇವರು ಆಗಿರುತ್ತಾರೆ. ಇವರು ನಿಯಂತ್ರಕರಲ್ಲ. ಗೆಳೆಯರು, ಮಾರ್ಗದರ್ಶಕರು ಆಗಿರುತ್ತಾರೆ. ಸಹಕಾರ ಸಂಘ ಹೇಗೆ ಕರ್ತವ್ಯ ನಿರ್ವಹಿಸಬೇಕು, ಸಂಘವು ಸದಸ್ಯರ ಆಸೆ,ಆಕಾಂಕ್ಷೆ, ಅವಶ್ಯಕತೆ, ನಿರೀಕ್ಷೆ, ಅಪೇಕ್ಷೆಗಳ ಈಡೇರಿಕೆಗಾಗಿ ಸಂಘವು ಹಾಕಿಕೊಳ್ಳಬೇಕಾದ ಕಾರ್ಯಕ್ರಮಗಳೇನು? ಅವುಗಳನ್ನು ನಿರ್ವಹಿಸುವ ಬಗೆ ಹೇಗೆ? ಇದೆಕ್ಕೆಲ್ಲ ಉತ್ತರ "ಮೇಲ್ವಿಚಾರಕರು" ಮೇಲ್ವಿಚಾರಣೆ ನಿಪುಣತೆ (ಕುಶಲತೆ):

ಮೇಲ್ವಿಚಾರಣೆ ಮಾಡುವುದು ಸುಲಭದ ಮಾತಲ್ಲ, ಕೆಲಸವಲ್ಲ. ಅದಕ್ಕೆ ಕೆಲವು ವಿಶೇಷ ನೈಪುಣ್ಯತೆ (ಕುಶಲತೆ)ಯ ಅವಶ್ಯಕತೆ ಇದೆ. ಇದನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು.

1. **ತಾಂತ್ರಿಕ** – technical, 2. **ಮಾನವ ಸಂಬಂಧಗಳು** –Human relations, 3.**ಪರಿಕಲ್ಪನೆ** – Conceptual 4. **ನಿರ್ಧಾರ ಕೈಗೊಳ್ಳುವುದು** – Decisionmaking.

**1. ತಾಂತ್ರಿಕ –technical:** ಮೇಲ್ವಿಚಾರಣೆಗೆ ಅವಶ್ಯತಂತ್ರಗಾರಿಕೆ ಅಥವ ವಿಧಿ ವಿಧಾನಗಳ ಬಗ್ಗೆ ವಿಶೇಷ ಜ್ಞಾನ ಮತ್ತು ಅನುಭವವನ್ನು ಅವರು ಹೊಂದಿರಬೇಕಾಗುತ್ತದೆ. ಉದಾ: ಸಂಘದಲ್ಲಿ ನಿರ್ವಹಿಸಬೇಕಾದ ಲೆಕ್ಕ ನಿರ್ವಹಣೆ ಪದ್ಧತಿ (ಹಾಲಿ ಸಾಮಾನ್ಯ ಲೆಕ್ಕ ಪದ್ಧತಿ – ದ್ವಿನಮೂದುಪದ್ಧತಿ), ಲೆಕ್ಕ ಪುಸ್ತಕಗಳು, ರಿಜಿಸ್ಟರ್‌ಗಳು, ಠರಾವಿನ ಪುಸ್ತಕಗಳು, ಉಪನಿಯಮಗಳು, ಸಹಕಾರ ಕಾಯ್ದೆ, ಕಾನೂನು ಅಂತಿಮ ಲೆಕ್ಕಗಳ ತಯಾರಿ, ಆದಾಯ ಗುರುತಿಸುವಿಕೆ, ಆಸ್ತಿಗಳ ವರ್ಗಿಕರಣ, ಅವಕಾಶ ಕಲ್ಪಿಸುವಿಕೆ (IRAC norms, provisioning), ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ (ಸಿ.ಆರ್.ಎ.ಆರ್ Capital to risk weighted asset. ratio), ವ್ಯಾಪಾರ ಅಭಿವೃದ್ಧಿ ಯೋಜನೆ ತಯಾರಿ, ಅದರ ಪ್ರಾಮುಖ್ಯತೆ, ಅನುಷ್ಠಾನ. ಅದರ ವಿವಿಧ ಆಯಾಮಗಳು, ಮಜಲುಗಳು. ಇತ್ಯಾದಿ;

**2. ಮಾನವ ಸಂಬಂಧಗಳು –Human relations:** ಇತರರೊಡನೆ ಒಡಗೂಡಿ ಕೆಲಸ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲ ಕೌಶಲ್ಯ. ಸಹಕಾರ ಸಂಘದ ಅಧ್ಯಕ್ಷರ, ಆಡಳಿತ ಮಂಡಳಿಯ, ಮುಖ್ಯ ಕಾರ್ಯನಿರ್ವಾಹಕರ, ಸಿಬ್ಬಂದಿಯ ಜೊತೆಗೆ ಇರಿಸಿಕೊಳ್ಳಬೇಕಾದ ಉತ್ತಮ ಸಂಬಂಧಗಳು. 'ಇವನಾರವ ಇವನಾರವ ಎಂದೆನಿಸದೆ ಇವ ನಮ್ಮವ, ಇವ ನಮ್ಮವ, ಎಂಬ ಭಾವ ಬಸವಣ್ಣನವರ ವಚನ).ಎಲ್ಲರನ್ನೂ ಒಳಗೊಳ್ಳುವ, ಒಳಗೊಂಡು ಕಾರ್ಯನಿರ್ವಹಿಸುವಂತೆ , ಪ್ರೇರೆಪಿಸುವಂತೆ ಆಗಲು ಬೇಕಾದಂತಹ ಮಾನವ ಸಂಬಂಧಗಳು.

**3. ಪರಿಕಲ್ಪನೆ ಕೌಶಲ್ಯ –Conceptual skills:** ಇಡೀ ವ್ಯವಸ್ಥೆಯ ಒಂದೊಂದು ಅಂಗಗಳ ಪ್ರಾಮುಖ್ಯತೆ, ಅಗತ್ಯತೆ ಬಗ್ಗೆ ತಿಳುವಳಿಕೆ. ಅಲ್ಪಾವಧಿ ಬೆಳೆಸಾಲಗಳ ಪ್ರಾಮುಖ್ಯತೆ, ಅಗತ್ಯತೆ. ಮೂರು ಹಂತದ ವ್ಯವಸ್ಥೆಬೆಳೆದು ಬಂದ ಬಗೆ, ಪ್ರತಿಯೊಂದು ಹಂತದ ಪಾತ್ರ, ಕರ್ತವ್ಯ, ಜವಾಬ್ದಾರಿ, ಸಹಕಾರ ಮೌಲ್ಯಗಳು, ತತ್ವಗಳುಅವುಗಳಅನ್ವಯತೆ. ಪ್ರಜಾಪ್ರಭುತ್ವ ನಿಯಂತ್ರಣ ವ್ಯವಸ್ಥೆಯಲ್ಲಿ ವಿವಿಧ ಭಾಗೀಧಾರರ ಪಾತ್ರ. ಪ್ರವಾಗರಗಳಲ್ಲಿ ಅವುಗಳನ್ನು ತೊಡಗಿಸಬಲ್ಲ ಸಾಧ್ಯತೆಗಳ ಪರಿಶೀಲನೆ, ವಿಶ್ಲೇಷಣೆ, ಅನುಷ್ಠಾನ.

**4. ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯ:** ಮಾಹಿತಿ, ಪರಿಸ್ಥಿತಿಯ ವಿಶ್ಲೇಷಣೆ ಮತ್ತು ಸೂಕ್ತ ಸಮಯದಲ್ಲಿ ಸರಿಯಾದ ಉತ್ತಮ ನಿರ್ಧಾರ ಕೈಗೊಳ್ಳುವ ನಿಪುಣತೆ. ಸಶಕ್ತತೆ.

ಈ ಕೌಶಲ್ಯಗಳನ್ನು ಹೊಂದಿದ ಮೇಲ್ವಿಚಾರಕ ಯಶಸ್ವಿ ಮೇಲ್ಚೈ ಚಾರಕನಾಗಬಲ್ಲ. ಪ್ರಾ.ಕೃ.ಪ.ಸ. ಸಂಘದ ಎಲ್ಲ ಚಟುವಟಿಕೆಗಳನ್ನು ನೋಡಿಕೊಳ್ಳುವ (ಕಣ್ಗಾವಲು –survelliance), ಉಸ್ತುವಾರಿ ವಹಿಸುವ ಜನಾಬ್ದಾರಿ ಅವರದಾಗಿರುತ್ತದೆ. ಅದರ ಕಾರ್ಯಾಚರಣೆಯ ಮೇಲ್ವಿಚಾರಣೆ ಮತ್ತು ತಪ್ಪಿದಲ್ಲಿ ಅದನ್ನು ಸರಿಪಡಿಸುವ ಜವಾಬ್ದಾರಿ ಅವರದೇ ಆಗಿರುತ್ತದೆ. ವ್ಯವಹಾರದಿಂದ ದೊರಕಬೇಕಾದ ಲಾಭಗಳು, ವ್ಯವಹಾರದಲ್ಲಿ ಆಗಬಹುದಾದ ಸೋರಿಕೆಗಳನ್ನು ತಡೆಯ ಬಹುದಾದ ಕ್ರಮಗಳು, ಸಿಬ್ಬಂದಿ ಕಾರ್ಯಕ್ಷಮತೆ, ದಕ್ಷತೆ , ಹಾಜರಾತಿ, ತನ್ಮಯತೆ, ಬದ್ಧತೆ, ಇವುಗಳ ಪರಿಚಯ, ಕಾರ್ಯನಿರ್ವಹಿಸಲುಅವಶ್ಯಪ್ರೇರೇಪಣೆನೀಡಬಹುದಾದಅಂಶಗಳು, ಇತ್ತೀಚೆಗಿನ ದಿನಗಳಲ್ಲಿ ಅನೇಕ ಕಾರ್ಯನಿರ್ವಹಿಸುವ ಬಗೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಇವುಗಳನ್ನು ಸಂಘ ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ, ಅಳವಡಿಸಿಕೊಳ್ಳ ಬೇಕಾದ ವಿಧಿ ವಿಧಾನಗಳು, ಇವುಗಳ ಬಗ್ಗೆ ಸಂಘದ ಸಿಬ್ಬಂದಿಗೆ ತ್ವರಿತ ಮಾಹಿತಿ ಒದಗಿಸುವುದು.

ತಕ್ಕ ಸಹಾಯ ಹಸ್ತನೀಡುವುದು. ವಿವಿಧ ಸಿಬ್ಬಂದಿಗಳಿಗೆ ಹೊಣೆಗಾರಿಕೆ, ಜವಾಬ್ದಾರಿ ನಿಗದಿಪಡಿಸುವುದು. ಇದರಿಂದ ಸಂಘದ ಸುಗಮ ಕಾರ್ಯಾಚರಣೆಗೆ ಅನುವು ಮಾಡಿಕೊಡಲಾಗುತ್ತದೆ ಅಲ್ಲದೇ ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಿದಂತಾಗುತ್ತದೆ. ಸಂಘದ ಸಿಬ್ಬಂದಿ ವಹಿಸಿದಂತಹ ಜವಾಬ್ದಾರಿ ನಿರ್ವಹಿಸಲಿಲ್ಲವೆಂದರೆ ಶಿಸ್ತಿನ ಕ್ರಮ ಎದುರಿಸಬೇಕಾಗುತ್ತದೆ. ಉತ್ತಮ ಕೆಲಸ ನಿರ್ವಹಿಸಿದಲ್ಲಿ ಅದನ್ನು ಗುರುತಿಸಿ ಅವರನ್ನು ಸೂಕ್ತವಾಗಿ ಗೌರವಿಸಬೇಕು. ಮತ್ತು ಪಾರಿತೋಷಕ, ಬಹುಮಾನ, ವಿಶೇಷ ಸವಲತ್ತುಗಳನ್ನು ಒದಗಿಸಬೇಕು. ಇದು ಮೇಲ್ವಿಚಾರಕರಿಗೂ ಅನ್ವಯಿಸುತ್ತದೆ.

ಈಗಿನ ಪರಿಸರದಲ್ಲಿ ಮೇಲ್ವಿಚಾರಕರು ನಿಯಂತ್ರಕರಲ್ಲ, ತಾವು ಸಂಘದಗೆಳೆಯರು, ಅದರ ಕಾರ್ಯಕ್ಷಮತೆ, ಅದರ ಯಶಸ್ವಿ ಕಾರ್ಮ್ಚರಣೆಗೆ ಸಹಾಯ ಒದಗಿಸುವವರು ಎಂಬ ಸದಭಿಪ್ರಾಯ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ, ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿಯಲ್ಲಿ ಮಾಡುವಂತೆ ಕಾರ್ಯ ನಿರ್ವಾಹಿಸಬೇಕಾಗುತ್ತದೆ. 'ನಿಯಂತ್ರಣ' ಎಂದೆನಿಸಿದೊಡನೆ ಸಂಘದ ಅಭಿವೃದ್ಧಿಗೆ ಹಿನ್ನೆಡೆಯಾಗುತ್ತದೆ. ಮೇಲ್ವಿಚಾರಕ ಅಭಿವೃದ್ಧಿಯ ಹರಿಕಾರ ಎಂದೆನಿಸಬೇಕು. ಅವರು ಮಾರ್ಗ ದರ್ಶಕರಾಗಬೇಕಾಗುತ್ತದೆ.

**ಮಾರ್ಗ ದರ್ಶಕ(Mentor - Rolemodel):** ಮಾರ್ಗದರ್ಶಕ ಎಂದೊಡನೆ ಕೆಲವು ನಿರೀಕ್ಷೆಗಳು ಸರ್ವೇ ಸಾಮಾನ್ಯ. ಆ ಗುಣಲಕ್ಷಣಗಳನ್ನು ಮೇಲ್ವಿಚಾರಕರು ಹೊಂದಿರಬೇಕಾಗುತ್ತದೆ. ಅವುಗಳು

1) ಹೆಚ್ಚಿನ ಮಾಹಿತಿ, ತಿಳುವಳಿಕೆ ಅನುಭವ ಹೊಂದಿರುತ್ತಾನೆ.
2) ಇತರೆ ವ್ಯಕ್ತಿಗಳ ಸ್ವಭಾವ, ಚಿಂತನೆಯನ್ನು ಪ್ರಭಾವಿಸ ಬಲ್ಲ, ಬದಲಾಯಿಸ ಬಲ್ಲ, (ಮನೋ ವಿಜ್ಞಾನಿ).
3) ಉತ್ತಮ ಸಂಹವನ ಮತ್ತು ಸಂಬಂಧಗಳನ್ನು ಉಳ್ಳವನಾಗಿರುತ್ತಾನೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ "ಮಾತೇ ಮಾಣಿಕ್ಯ' 'ನುಡಿದರೆ ಮುತ್ತಿನ ಹಾರದಂತಿರಬೇಕು,' (ಬಸವಣ್ಣನವರ ವಚನ)
4) ಜ್ಞಾನ ಮತ್ತು ಕುಶಲತೆ ಇದರೊಡನೆ ಸಕಾರಾತ್ಮಕ ಮನೋಚಿಂತನೆಯನ್ನು ಹೊಂದಿರುತ್ತಾನೆ.

ಈ ಅಂಶಗಳಲ್ಲದೆ 'ಮಾರ್ಗದರ್ಶಕನು' ಈ ಕೆಳಕಂಡಂತೆ ವರ್ತಿಸುತ್ತಾನೆ. (ನಡೆದು ಕೊಳ್ಳುತ್ತಾನೆ).

1) **ಒಳಗೊಳ್ಳುವಿಕೆ ಮತ್ತು ಬದ್ಧತೆ:**ಕೆಲಸ ಕಾರ್ಯಗಳಲ್ಲಿ ಬದ್ಧನಾಗಿದ್ದು ಇತರರೊಡನೆ ತಾನೂ ಒಬ್ಬನಾಗಿ ಕಾರ್ಯನಿರ್ವಹಿಸುತ್ತಾನೆ. 'ಕಷ್ಟ ಪಟ್ಟುಕೆಲಸ ಮಾಡುವುದೇ ಅಲ್ಲದೆ, ಇಷ್ಟಪಟ್ಟು ಕೆಲಸ ಮಾಡಿದಲ್ಲಿ' ಈ ಸಾಧ್ಯತೆಗಳಿಗೆ ಅದು ಇಂಬುಗೊಡುತ್ತದೆ.
2) **ಹೊಸತನದ ಬಿತ್ತನೆ:** ಇತರರನ್ನು ಪ್ರೇರೇಪಿಸಿ ನೂತನ ವಿಷಯ, ಅವಿಷ್ಕಾರ, ಚಟುವಟಿಕೆಗಳನ್ನು ಮನಮುಟ್ಟುವಂತೆ ಮಾಡುತ್ತಾನೆ.
3) **ವೇಗವರ್ಧಕ (catalyst):**'ಈ ದಿನ ಮಾಡುವುದನ್ನು ಈಗಲೇ ಮಾಡು, ನಾಳೆ ಮಾಡುವುದನ್ನುಈ ದಿನವೇ ಮಾಡು' ಎಂದು ಕೆಲಸಗಳನ್ನು ಚಾಕುಚಕ್ಯತೆಯಿಂದ ವೇಗವಾಗಿ ಮಾಡಲು ಪ್ರೇರೇಪಿಸುತ್ತಾನೆ. ಮುಂದೂಡುವ ಪ್ರವೃತ್ತಿ (Procrastination) ಯಾವುದೇ ಕಾರಣಕ್ಕೆ ಹೊಂದಿರುವುದಿಲ್ಲ.
4) **ತೋರಿಸುವುದು:**ತಾನೇ ಕಾರ್ಯನಿರ್ವಹಿಸಿ ತೋರಿಸುವುದು, ಇತರೆಡೆ ಆದ ಕಾರ್ಯವನ್ನು ತೋರಿಸುವುದು. 'ನೋಡುವುದು' ನಂಬಿಕೆಗೆ ಆಧಾರವಾಗುತ್ತದೆ. (seeing is beliving)
5) **ಕೊಯ್ಲು:** ಫಲಿತಗೊಂಡ ನಂತರ ಫಸಲನ್ನು ಕೊಯ್ದಂತೆ, ಕಾರ್ಯನಿರ್ವಹಣೆಯ ಫಲಿತಾಂಶದಿಂದ ಅರಿತು,

ಅನುಭವ ಮತ್ತು ನಿರ್ಣಯಗಳನ್ನು ಇತರರೊಡನೆ ಹಂಚಿಕೊಳ್ಳುತ್ತಾನೆ.

ಅತ್ಯುತ್ತಮ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸಲು ಇಂತದೆ 'ಹೆಬ್ಬೆರಳು ನಿಯಮ' (Thumbrule) ಇರುವುದಿಲ್ಲ, ಮೇಲಿನ ಗುಣಗಳನ್ನು ಅಳವಡಿಸಿಕೊಳ್ಳುದಲ್ಲದೇ ಸಂದರ್ಭ ಮತ್ತು ಭಾಗೀದಾರನ ಮನೋಸ್ಥಿತಿಗೆ ಅನುಗುಣವಾಗಿ ವರ್ತಿಸಬೇಕಾಗುತ್ತದೆ. ಇದರೊಡನೆ ಅವರು ಒಬ್ಬ ಸಲಹೆಗಾರನೂ ಹೌದು, ತರಬೇತುದಾರನೂ ಹೌದು. ನಮ್ಮ ಅಂತಿಮ ಗುರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿ, ಅವುಗಳ ಯಶಸ್ಸೇ ನಮ್ಮ ಯಶಸ್ಸು.

*****************************************************************************************

# 50. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವಿಲೀನ ಸಾಧಕ – ಬಾಧಕಗಳು

1954ರ 'ಅಖಿಲ ಭಾರತ ಗ್ರಾಮೀಣ ಪತ್ತು ಸಮೀಕ್ಷ ವರದಿ' ಯ ಪರಿಣಾಮ, ಭಾರತದ ಎಲ್ಲ ಜಿಲ್ಲೆಗಳಲ್ಲಿ ಒಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಆಯಾ ಜಿಲ್ಲೆಯ 'ಸಹಕಾರ ಚಳವಳಿ' ಯ ಪ್ರತೀಕವಾಗಿ ಪುನರ್ ನಿರ್ಮಾಣ ಮಾಡಲಾಯಿತು. ಆಯಾ ಜಿಲ್ಲೆಯ ಎಲ್ಲ ರೀತಿಯ ಸಹಕಾರ ಸಂಘಗಳ ಆರ್ಥಿಕ ಪೂರೈಕೆ ಇದರ ಜವಾಬ್ದಾರಿ. ಪ್ರಮುಖ ಕರ್ತವ್ಯ ಆಯಾ ಜಿಲ್ಲೆಯ 'ಅಲ್ಪಾವಧಿ ಕೃಷಿ ಸಾಲ' ಪೂರೈಕೆ. ಹಾಗೆಯೇ, ಈ ವಲಯದ ಮೂರು ಹಂತದ ವ್ಯವಸ್ಥೆಯ ಬಲಪಡಿಸುವಿಕೆ. ಇದಕ್ಕೆ ಪೂರಕವಾಗಿ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿನ 'ಕೃಷಿ ಸಾಲ ವಿಭಾಗ' ವನ್ನು 'ನಿಗಮ'ವಾಗಿ ತದನಂತರ 'ನಬಾರ್ಡ್' ರಚನೆಯಾಗಿ 'ಪುನರ್ಧನ ಸೌಲಭ್ಯ'ದ ಅನುಕೂಲತೆಯನ್ನು ಒದಗಿಸಿದ್ದು 'ಸಹಕಾರ ವಲಯ'ಕ್ಕೆ ಬೆಂಬಲವಾದದ್ದು ಈ ವಲಯದ ಬೆಳವಣಿಗೆಗೆ ಪೂರಕವಾಯ್ತು.

2014ರ 'ಆನಂದ ಭಕ್ಷಿ ವರದಿ', ಪುನರ್ಧನ ಸೌಲಭ್ಯ ಮೂರು ಹಂತದಾಟಿ ಫಲಾನುಭವಿಗಳಿಗೆ ತಲುಪಬೇಕಾಗುತ್ತದೆ. ವೆಚ್ಚ ಕಡಿತ ದೃಷ್ಟಿಯಿಂದ ಮತ್ತು ಈಗಿನ ತಾಂತ್ರಿಕ ಸಾದ್ಯತೆಯಿಂದ ಒಂದು ಹಂತವನ್ನು ಕಡಿತಗೊಳಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಈ ವರದಿ ಸಹಕಾರ ಬೆಳವಣಿಗೆಗೆ ಪೂರಕವಾಗಿಲ್ಲ. ಅಲ್ಪಾವಧಿ ಕೃಷಿ ಸಹಕಾರ ಪತ್ತು ವ್ಯವಸ್ಥೆಗೆ ಧಕ್ಕೆ ತರುತ್ತದೆ ಎಂದು ಸಹಕಾರಿಗಳು ಪ್ರತಿರೋಧ ಒಡ್ಡಿದ್ದರಿಂದ, 'ನ್ಯಾಫ್‌ಕ್ಯಾಬ್' ಆಗ ನಾಯಕತ್ವ ವಹಿಸಿಕೊಂಡಿದ್ದರಿಂದ ಅದನ್ನು ಅನುಷ್ಠಾನಗೊಳಿಸಲಾಗಲಿಲ್ಲ. ಇದರ ಪ್ರಮುಖ ಶಿಫಾರಸ್ಸು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS) ಕೃಷಿ ಪತ್ತೇತರ, ಖರೀದಿ, ಮಾರಾಟ ವ್ಯವಹಾರ ಮಾತ್ರ ನಡೆಸುವುದು. ಅಲ್ಲಿನ ಠೇವಣಿಗಳು ಪತ್ತನ್ನು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್/ರಾಜ್ಯ ಸಹಕಾರ ಬ್ಯಾಂಕ್‌ಗೆ ವರ್ಗಾಯಿಸುವುದಾಗಿತ್ತು.

2019ರಲ್ಲಿ ಐ.ಐ.ಎಂ. ತಜ್ಞರ ವರದಿಯನ್ನಾಧರಿಸಿ ಕೇರಳ ರಾಜ್ಯದಲ್ಲಿ ರಾಜ್ಯ ಸರ್ಕಾರವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ರಾಜ್ಯ ಸಹಕಾರ ಬ್ಯಾಂಕಿನೊಡನೆ ವಿಲೀನಗೊಳಿಸಲಾಯಿತು. ಈಗ ಅಲ್ಲಿ ಎರಡು ಹಂತದ ವ್ಯವಸ್ಥೆ ಇರುತ್ತದೆ. ಅಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅತಿ ಹೆಚ್ಚಿನ ಬಂಡವಾಳದೊಡನೆ ಸದೃಢವಾಗಿವೆ. ಅಲ್ಲಿ ಅಲ್ಪಾವಧಿ ರಚನೆಯ ಕೃಷಿ ಪತ್ತಿನ ಸಹಕಾರ ರಚನೆಯ ಪುನಶ್ಚೇತನ ವರದಿ (ಪ್ರೊ॥ ವೈದ್ಯನಾಥನ್ ವರದಿ) ಯನ್ನು ಅನುಷ್ಠಾನಗೊಳಿಸಲಾಗಲಿಲ್ಲ ಎಂಬುದನ್ನು ನೆನಪಿಸಿಕೊಳ್ಳಬೇಕು. ರಾಜ್ಯ ಸಹಕಾರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಕಲಂ 11ಕ್ಕೆ ಅದು ಒಮ್ಮೆ ಜಾರಿತ್ತು. ಆದರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಅತ್ಯುತ್ತಮ ಸಬಲತೆಯನ್ನು ಹೊಂದಿದ್ದವು ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು.

ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಕಾಯ್ದೆ 2020 (BR Act (amendment)) ನ್ನು ಜಿಲ್ಲಾ ಕೇಂದ್ರ

ಸಹಕಾರ ಬ್ಯಾಂಕ್‌ಗಳಿಗೆ ಮತ್ತು ರಾಜ್ಯ ಸಹಕಾರ ಬ್ಯಾಂಕ್‌ಗಳಿಗೆ 1ನೇ ಏಪ್ರಿಲ್ 2021 ರಿಂದ ಜಾರಿಗೆ ಬರುವಂತೆ 23 ಡಿಸೆಂಬರ್ 2020 ರಂದು ಪ್ರಕಟಿಸಿದೆ. ಇದನ್ನು ಅನುಸರಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆಯನ್ನು ಹೊರಡಿಸಿದೆ. (RBI/2021-22, DOR.RUR RCE No.17/1951/007/2021-22) ಇದರಂತೆ ವಿಲೀನದ ಬಗ್ಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು/ರಾಜ್ಯ ಸಹಕಾರ ಬ್ಯಾಂಕುಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. (ಬಿ.ಆರ್. ಕಾಯ್ದೆ 44ಎ ಮತ್ತು ಕಲಂ 56).

ವಿಲೀನಕ್ಕೆ ಮುನ್ನ ಇದರ ಸಾಧಕ ಬಾಧಕಗಳನ್ನು ಪರಿಶೀಲಿಸುವ ಅಗತ್ಯತೆ ಇದೆ. ರಾಜ್ಯ, ರಾಜ್ಯಗಳ ನಡುವೆ, ಜಿಲ್ಲೆ ಜಿಲ್ಲೆಗಳ ನಡುವೆ ಭೂ ಭೌಗೋಳಿಕ ಅದರಂತೆ ಆರ್ಥಿಕ ಸಾಮಾಜಿಕ ಪರಿಸರ ವಿಭಿನ್ನವಾಗಿವೆ. ಇದಕ್ಕೆ ಹೊಂದಿಕೊಂಡಂತೆ 'ಸಹಕಾರ ಪರಿಸರ' ವಿಭಿನ್ನತೆ ಮತ್ತು ವೈವಿಧ್ಯಮಯ ಅಂಶಗಳನ್ನು ಒಳಗೊಂಡಿರುತ್ತದೆ. ಈ ದೃಷ್ಟಿಯಿಂದ ವಿಕೇಂದ್ರೀಕೃತ ಸಹಕಾರ ವ್ಯವಸ್ಥೆ (Cooperative Federalism) ತನ್ನದೇ ಆದ ರೀತಿಯಲ್ಲಿ ಛಾಪು ಮೂಡಿಸಿದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ರಾಜ್ಯ ಸಹಕಾರ ಬ್ಯಾಂಕಿನೊಡನೆ ವಿಲೀನಗೊಳಿಸಿದಲ್ಲಿ ಆ ಜಿಲ್ಲೆಯ 'ಸಹಕಾರ ಅಸ್ಮಿತೆ' (Cooperative Identity)ಗೆ ಧಕ್ಕೆ ಬರುವುದಿಲ್ಲವೇ? ಪ್ರತಿ ಜಿಲ್ಲೆಯೂ ತನ್ನದೇ ಆದ ಸಹಕಾರ ಇತಿಹಾಸವನ್ನು ಹೊಂದಿವೆ. ಅಲ್ಲಿಯ ಸಹಕಾರ ನಾಯಕತ್ವ, ಬದ್ಧತೆ, ಸಂಸ್ಕೃತಿ ಆಯಾ ಜಿಲ್ಲೆಯ ಸಹಕಾರ ಬೆಳವಣಿಗೆಗೆ ಕಾರಣವಾಗಿವೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಇಲ್ಲವಾದಲ್ಲಿ 'ಸಹಕಾರ' ಬೆಳೆಯುವುದಾದರೂ ಹೇಗೆ? ನಾಯಕತ್ವ ಸಂಸ್ಕೃತಿಗೆ ಚ್ಯುತಿ ಬರುವುದಿಲ್ಲವೇ? ತನ್ನ 'ಅಸ್ಮಿತೆ'ಯನ್ನು ಕಳೆದುಕೊಂಡಾಗ ಸಹಕಾರದಲ್ಲಿನ ಬಂಡವಾಳ, ಸಂಪನ್ಮೂಲಗಳು ಹರಿದು ಹಂಚಿಹೋಗುವುದಿಲ್ಲವೇ? ರಾಜ್ಯ ಮಟ್ಟದಲ್ಲಿನ ಬ್ಯಾಂಕ್ ಸ್ಥಳೀಯ ಅಗತ್ಯತೆಗಳನ್ನು ಗುರುತಿಸಬಲ್ಲದೇ? ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಬಲ್ಲದೇ? ಸ್ಥಳೀಯ ಸಹಕಾರ ನಾಯಕರ ಬಲ ಕುಗ್ಗುವುದಿಲ್ಲವೇ? ಸಹಕಾರಿಗಳ ಸಶಕ್ತತೆಗೆ ಇಂಧನವೇ ಇಲ್ಲದಂತಾಗುವುದಿಲ್ಲವೇ? ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹೊರತುಪಡಿಸಿ ಇತರೆ ಸಹಕಾರ ಸಂಘಗಳ ಆರ್ಥಿಕ ಹಿತಾಸಕ್ತಿ ಕಾಪಾಡಲು ಸಾಧ್ಯವಾಗುತ್ತದೆಯೇ? ರಾಜ್ಯಮಟ್ಟದ ಬ್ಯಾಂಕ್ ಆಗುವುದರಿಂದ ಆಂತರಿಕ ಆಡಳಿತ ವ್ಯವಸ್ಥೆ, ವ್ಯವಸ್ಥಾಪನ ವ್ಯವಸ್ಥೆ, ನಿಧಿಗಳ ನಿರ್ವಹಣೆ, ಆಂತರಿಕ ಹಿಡಿತ, ಪರಿಶೀಲನಾ ವ್ಯವಸ್ಥೆಗಳು ಸವಾಲಾಗಿ ಪರಿಣಮಿಸಬಲ್ಲವು.

ಪ್ರಜಾಸತ್ತಾತ್ಮಕ ನಿಯಂತ್ರಿತ ಸಂಸ್ಥೆಯಲ್ಲಿ ಮಹಾಸಭೆ, ಆಡಳಿತ ಮಂಡಳಿ ಸಭೆಗಳು, ನಿರ್ಣಾಯತ್ಮಕ ಜವಾಬ್ದಾರಿ ಉಳ್ಳ ಸಂಸ್ಥೆಗಳಾಗಿದ್ದು ಕೇವಲ ಔಪಚಾರಿಕ ಮಟ್ಟಕ್ಕಿಳಿದು 'ಸಹಕಾರ ಗುಣ' ವನ್ನೇ ಕಳೆದುಕೊಳ್ಳುವುದಿಲ್ಲವೇ? 'ಕೆಳ ಹಂತದಿಂದ ಮೇಲಣ ಬೆಳವಣಿಗೆ' (Growth from Bottom of the Pyramid)ಯ ಚಿಂತನೆಗೆ 'ಇತಿಶ್ರೀ' ಹಾಡಿದಂತಾಗುವುದಿಲ್ಲವೇ? ಕೇವಲ 'ಬಂಡವಾಳ ಗಾತ್ರ' ವನ್ನು ಹಿಗ್ಗಿಸಿ ನೋಡುವ ಈ ಕ್ರಮ, ಸಹಕಾರದ ಮೂಲ ಉದ್ದೇಶವಾದ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಹಿನ್ನಡೆ ಆಗುವುದಿಲ್ಲವೇ? ಕೇವಲ ರಚನಾ ಸ್ವರೂಪದಲ್ಲಿ 'ಸಹಕಾರ' ಹೆಸರನ್ನು ಉಳಿಸಿಕೊಂಡು 'ಸ್ವಸಹಾಯ ಮತ್ತು ಪರಸ್ಪರ ಸಹಾಯ' ಗುಣವನ್ನೇ ಕಳೆದುಕೊಳ್ಳುವುದಿಲ್ಲವೇ?

ನಮ್ಮ ರಾಜ್ಯದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾರೆ ಐದು ಸಾವಿರದ ಐದುನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸರಿಸುಮಾರು ಇಪ್ಪತ್ತು ಸಾವಿರ ಇತರೆ ಸಹಕಾರ ಸಂಘಗಳು ರಾಜ್ಯಮಟ್ಟದಲ್ಲಿ ಜಿಲ್ಲಾ ಮಟ್ಟಕ್ಕಿಂತ ಈ ಎರಡು ಹಂತದ ವ್ಯವಸ್ಥೆಯಲ್ಲಿ ಅರ್ಥಪೂರ್ಣ ಸಾವಯವ ಸಂಬಂಧಗಳನ್ನು ಹೊಂದಲು ಹೇಗೆ ಸಾಧ್ಯವಾಗುತ್ತದೆ? ಅವು ಕೇವಲ ವ್ಯವಹಾರಕ್ಕೆ ಸಂಬಂಧ ಸೀಮಿತಗೊಳಿಸಬೇಕೆ? ವ್ಯವಸ್ಥಾಪನೆಯಲ್ಲಿ ಅವುಗಳು ಪಾಲುದಾರರಾಗಬಾರದೇ? ಇದರಿಂದ ಸಹಕಾರ ಬೆಳವಣಿಗೆಗೆ ಪೆಟ್ಟು ಬೀಳುವುದಿಲ್ಲವೇ? ವಿಕೇಂದ್ರೀಕರಣ ಯುಗದಲ್ಲಿ ಕೇಂದ್ರೀಕರಣ ಎಷ್ಟು ಸರಿ? ಇಂತಹ ಹತ್ತು ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬ್ಯಾಂಕಿಂಗ್

ಪ್ರಕ್ರಿಯೆಯಿಂದ ಹೊರಗಿರಬೇಕೆ ಅಥವಾ ಕೇವಲ 'ಅಲ್ಪಾವಧಿ ಕೃಷಿ ಸಾಲ' ವಿತರಣೆಯ ವಾಹಕಗಳಾಗಬೇಕೆ? ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ಅವುಗಳನ್ನು ಒಳಕೊಳ್ಳುವುದಿಲ್ಲವೇ? 'ಬಹು ಸೇವಾ ಕೇಂದ್ರ' ಗಳಾಗಿ ಪರಿವರ್ತಿಸುವ ಪ್ರಯತ್ನದಲ್ಲಿರುವ ಈ ದಿನಗಳಲ್ಲಿ ಅವು ಕೇವಲ ಪತ್ತೇತರ ವ್ಯವಸ್ಥೆಯಲ್ಲಿ ತೊಡಗಿಕೊಳ್ಳಬೇಕೆ? ಕೆಳ ಎರಡು ಹಂತಗಳಲ್ಲಿ ಠೇವಣಿ ಸಂಪನ್ಮೂಲಗಳು ಕೊರತೆಯಾದಲ್ಲಿ 'ಪುನರ್ಧನ' ಸೌಲಭ್ಯವನ್ನು ಹೆಚ್ಚಳಗೊಳಿಸಲಾಗುವುದೇ?

ಭಾರತದ, ರಾಜ್ಯದ ಪ್ರಜ್ಞಾವಂತ, ಜಾಗೃತ ಸಹಕಾರ ನಾಯಕತ್ವ ಈ ಅಂಶಗಳ ಬಗ್ಗೆ ಸಾಧಕ ಬಾಧಕಗಳು, ಸಹಕಾರ ಚಳವಳಿಯ ಭವಿಷ್ಯದ ಬಗ್ಗೆ ಆಲೋಚಿಸಿ ಮುಂದಿನ ಹೆಜ್ಜೆ ಇಡಬೇಕಾದ್ದು ಇಂದಿನ ಅವಶ್ಯಕತೆ.

**************************************************************************************************

# ಭಾಗ : 05

## 51. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸಾಲ ವಸೂಲಾತಿ ಪ್ರಮುಖ್ಯತೆ

ಪಟ್ಟಣ ಸಹಕಾರ ಬ್ಯಾಂಕ್ ಒಂದು ಸಾಲ/ಪತ್ತು ಒದಗಿಸುವ ಸಂಸ್ಥೆ, ಪಟ್ಟಣ ಸಹಕಾರ ಬ್ಯಾಂಕ್ ದ್ವಿನಿಯಂತ್ರಣ ಉಳ್ಳ ಸಂಸ್ಥೆ, ನೊಂದಣಿ, ಸಹಕಾರ ಕಾಯ್ದೆಯಡಿಯಾಗಿದ್ದು, ಅದರ ಕಾಯ್ದೆ ಕಾನೂನು ಅಂಶಗಳು ಅನ್ವಯವಾಗುತ್ತದೆ. ರಿಸರ್ವ್ ಬ್ಯಾಂಕಿನ ಪರವಾನಗಿ ಪಡೆದಿರುವುದರಿಂದ ರಿಸರ್ವ್ ಬ್ಯಾಂಕ್ ಕಾಯ್ದೆಯೂ ಅನ್ವಯವಾಗುತ್ತದೆ. ಮತ್ತು ಸಂಬಂಧಿಸಿದಂತೆ ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆ, ನೆಗೋಷಿಯಬಲ್ ಇನ್‌ಸ್ಟುಮೆಂಟ್ಸ್ ಕಾಯ್ದೆಗಳೂ ಆನ್ವಯವಾಗುತ್ತದೆ. ಬ್ಯಾಂಕ್/ ಕಾಯ್ದೆಯಾತ್ಮಕವಾಗಿ ಕೆಲವು ಆರ್ಥಿಕ ಶಿಸ್ತುಗಳನ್ನು ಅಳವಡಿಸಿ. ಕೊಳ್ಳಬೇಕಾಗಿರುವುದಲ್ಲದೆ ಇದರ ಪರಿಣಾಮವಾಗಿ ಸದಸ್ಯರ ಮತ್ತು ಸಾರ್ವಜನಿಕರ ಹಿತ ಕಾಪಾಡಲೂ ಸಾಧ್ಯವಾಗುತ್ತದೆ ಎಂಬುದನ್ನು ಮರೆಯಲಾಗದು.

ಈ ಆರ್ಥಿಕ ಶಿಸ್ತು ಕಾಪಾಡಲು ಪ್ರಮುಖ ಅವಶ್ಯಕತೆ ಬ್ಯಾಂಕಿನ ಪ್ರಮುಖ ಆಸ್ತಿಯಾದ 'ಸಾಲಗಳು ಮತ್ತು ಮುಂಗಡಗಳ' ವಲಯದ ಆರೋಗ್ಯ ಕಾಪಾಡುವುದು. "ಈ ಆಸ್ತಿಯ ಆರೋಗ್ಯ ಚೆನ್ನಾಗಿದೆ ಎಂದರೆ ಬ್ಯಾಂಕ್ ಸುಸ್ಥಿತಿಯಲ್ಲಿದೆ. ಎಂಬುದನ್ನು ಬಿಂಬಿಸುತ್ತದೆ. ಇದರ ಆರೋಗ್ಯ ಸರಿಯಿಲ್ಲ ಎಂದಾದರೆ ಬ್ಯಾಂಕ್ ಸುಸ್ಥಿತಿಯಲ್ಲಿಲ್ಲ. ಚಿಕಿತ್ಸಾ ಕ್ರಮಗಳ ಆಗತ್ಯತೆ ಇದೆ" ಎಂಬುದನ್ನು ತೋರಿಸುತ್ತದೆ.

'ಸಾಲಗಳು ಮತ್ತು ಮುಂಗಡಗಳ' ಆರೋಗ್ಯ ಸ್ಥಿತಿ ಚೆನ್ನಾಗಿದೆ ಎಂದರೇನು? ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. 'ಕೊಟ್ಟವನು ಕೋಡಂಗಿ ಈಸ್ಕೊಂಡವನು ಈರಭದ್ರ'. ಆದರೆ, ಕೊಟ್ಟವನ ಪರಿಸ್ಥಿತಿ ಏನು? ಎಂಬುದೇ ಆಗಿದೆ. ಒಟ್ಟಾರೆ ಬ್ಯಾಂಕಿನ ಆಸ್ತಿಗಳಲ್ಲಿ ಶಾಸನ ಬದ್ಧ ಹೂಡಿಕೆಗಳು ನಗದು/ಬ್ಯಾಂಕ್ ಶಿಲ್ಕು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊರತುಪಡಿಸಿದರೆ ಅಂದರೆ ಸುಮಾರು ಶೇಕಡಾ 70 ಭಾಗ ನಮ್ಮ ಆಸ್ತಿ 'ಸಾಲಗಳು ಮತ್ತು ಮುಂಗಡಗಳು'. ನಮ್ಮ ಸಂಪನ್ಮೂಲಗಳು/ನಮ್ಮ ಜವಾಬ್ದಾರಿಗಳ ಪ್ರಮುಖ ಭಾಗ. ಇದರಲ್ಲಿ ತೊಡಗಿಸಿರುತ್ತೇವೆ. ಇದರ ಆರೋಗ್ಯ ಎಂದರೆ, ನಮ್ಮ ಸಾಲದ ವಸೂಲಾತಿ ಪ್ರಮಾಣ ಎಷ್ಟಿದೆ? ಇದನ್ನು ನಾವು ಶೇಕಡಾವಾರು ಲೆಕ್ಕ ಹಾಕುತ್ತೇವೆ.

ನಾವು ಕೊಟ್ಟ ಸಾಲಗಳ ಕಂತುಗಳ ಅಥವ ಏಕಗಂಟಿನಲ್ಲಿ ಕಾಲಕಾಲಕ್ಕೆ ಎಷ್ಟು ಪ್ರಮಾಣ ಬೇಡಿಕೆ ಇತ್ತು? ಅಂದರೆ ಮರು ಪಾವತಿಯಾಗಬೇಕಾದ ಪ್ರಮಾಣ ಎಷ್ಟು? ಎಷ್ಟು ಮರುಪಾವತಿ ಯಾಗಿದೆ? ಇನ್ನೆಷ್ಟು ಬಾಕಿ ಇದೆ? ಬೇಡಿಕೆ, ವಸೂಲಾತಿ, ಶಿಲ್ಕು ( ಡಿಸಿಬಿ Demand collection balance) ಎಂದು ಲೆಕ್ಕಾಹಾಕಿಕೊಳ್ಳ ಬೇಕಾಗುತ್ತದೆ. ಈ ಶೇಕಡಾವಾರು ಪ್ರಮಾಣ ಹೆಚ್ಚಿಗೆ ಇದ್ದಂತೆಲ್ಲಾ ನಾವು ಆರೋಗ್ಯಕರ ವಾಗಿದ್ದೇವೆ ಎಂದು ತೋರಿಸುತ್ತದೆ. ಈ ಪ್ರಮಾಣ ಹೆಚ್ಚಿಗೆ ಇದೆ ಎಂದರೆ ನಮಗೆ ಸಕಾಲದಲ್ಲಿ 'ಬಡ್ಡಿ' ಸಹಿತ ನಾವು ಹೂಡಿದ ಬಂಡವಾಳ ಹಿಂತಿರುಗಿ ಬಂದಿದೆ ಎಂದೇ

ಅರ್ಥ. ಹೂಡಿದ ಬಂಡವಾಳ ಹಿಂತಿರುಗಿ ಬರಬೇಕು.

ಕೇವಲ ಹಿಂತಿರುಗಿ ಬರುವುದಲ್ಲದೇ ಅದರ ಮೇಲಿನ ದುಡಿಮೆಯೂ ಆಗಿರಬೇಕು ಅಂದರೆ ಬಡ್ಡಿಸಹಿತ ವಸೂಲಾತಿ ಆಗಿರಬೇಕು. ನಮಗೆ ಪ್ರಮುಖ ಆದಾಯವೇ (ಅಥವಾ ಈಗಿನ ದಿನಗಳಲ್ಲಿ ಕೇವಲ ಆದಾಯ ಎಂದರೆ ತಪ್ಪಾಗಲಾರದು) ಬಡ್ಡಿ ಆದಾಯ. ನಮ್ಮ ಆಸ್ತಿಯ ಮೇಲಿನ ತೆರಿಗೆ (yield on assets) ಅಧಿಕ ಪ್ರಮಾಣದಲ್ಲಿರಬೇಕು ಎಂದಾದರೆ ನಮ್ಮ ವಸೂಲಾತಿ ಪ್ರಮಾಣ ಅಧಿಕವಾಗಿರಲೇಬೇಕು. ನಮ್ಮ ಒಟ್ಟಾರೆ ನಿಧಿಗಳ ಮೇಲಿನ ವೆಚ್ಚ (Cost of funds) ನ್ನು ಆಸ್ತಿಗಳ ಮೇಲಿನ ಗಳಿಕೆಯಲ್ಲಿ ಕಳೆದರೆ ಉಳಿಯುವುದೇ ನಮ್ಮ ಅಂತರ (margin) ಅಥವಾ ಗರಿಷ್ಠ ಲಾಭ. ಇದರಲ್ಲಿ ನಮ್ಮ ವೇತನ ಮತ್ತಿತರ ವೆಚ್ಚ ಅಂದರೆ ವ್ಯವಸ್ಥಾಪನಾ ವೆಚ್ಚ ಅಥವಾ ವಹಿವಾಟು ವೆಚ್ಚ (cost of management or transaction cost) ಇದನ್ನು ಕಳೆದರೆ ನಮಗೆ ದೊರೆಯುವುದೇ ನಮ್ಮ ನಿವ್ವಳ ಲಾಭ (net profit) ಈ ನಿವ್ವಳ ಲಾಭವನ್ನು ಸರ್ವಸದಸ್ಯರ ಸಭೆಯಲ್ಲಿ ಕಾಯ್ದೆ, ಕಾನೂನು ಮತ್ತು ಬ್ಯಾಂಕಿನ ಉಪನಿಯಮಗಳ ರೀತಿಯಲ್ಲಿ ಹಂಚಿಕೆ ಮಾಡಿದಾಗ ಸದಸ್ಯರು ಹೂಡಿದ ಬಂಡವಾಳಕ್ಕೆ 'ಡಿವಿಡೆಂಡ್' ದೊರೆಯುತ್ತದೆ. ಸಂಘದ ಇತರೆ ನಿಧಿಗಳು ಹಂಚಿಕೆಯಾಗುತ್ತವೆ.

ಇದರಲ್ಲಿ ಪ್ರಮುಖ ನಿಧಿ ನಮ್ಮ ಅಪದ್ಧನ ನಿಧಿ (reserve fund) ನಮ್ಮ ಈ ನಿಧಿ ನಮ್ಮ ಲಾಭದಿಂದಲೇ ನಾವು ತೆಗೆದಿರಿಸಿರುವುದರಿಂದ ಇದು ಯಾವುದೇ ವೆಚ್ಚ ಹೊಂದಿರುವುದಿಲ್ಲ. ಇದು ಹೆಚ್ಚಳಗೊಂಡಷ್ಟೂ ನಮ್ಮ ನಿಧಿಗಳ ಮೇಲಿನ ವೆಚ್ಚ ಕಡಿಮೆಯಾಗುತ್ತಾ ಹೋಗುತ್ತದೆ. ಅಂತರ ಹೆಚ್ಚಳಗೊಳ್ಳುತ್ತದೆ. ಈ ಅಂಶವನ್ನು ಸದಸ್ಯರು ಮನಗಾಣಬೇಕಾಗುತ್ತದೆ.

ಕಾಯ್ದೆ ಮತ್ತು ಉಪನಿಯಮಗಳಲ್ಲಿ 'ನಿವ್ವಳ ಲಾಭದಲ್ಲಿ ಶೇಕಡಾ 25ಕ್ಕೆ ಕಡಿಮೆ ಇಲ್ಲದಂತೆ' ಆಪದ್ಧನ ತೆಗೆದಿರಿಸುವುದು ಎಂದಿರುತ್ತದೆ. ಈ ಅವಕಾಶವನ್ನು ಉಪಯೋಗಿಸಿ ಸರ್ವ ಸದಸ್ಯರ ಸಭೆಯಲ್ಲಿ ಹೆಚ್ಚಿನ ಪಾಲು ಶೇಕಡಾ 35–45 ಇರಿಸಿದಲ್ಲಿ ನಮ್ಮ ನಿಧಿಗಳು ವೃದ್ಧಿಯಾಗುತ್ತವೆ. ಬಂಡವಾಳದ ಮೇಲೆ ಬಂಡವಾಳ ಕೂಡಿಸಿದಂತಾಗುತ್ತದೆ. ಈ ರೂಢಿ ಪದ್ಧತಿಯನ್ನು ಬ್ಯಾಂಕಿನಲ್ಲಿ ತಂದರೆ ಅತ್ಯುತ್ತಮ ಫಲಿತಾಂಶ ದೊರೆಯುತ್ತದೆ. ಏಕೆಂದರೆ 'ಆಗತ್ಯತೆಯಷ್ಟು ಬಂಡವಾಳ' (capital adequacy) ಎಂಬ ಮಾನದಂಡವನ್ನು ರಿಸರ್ವ್ ಬ್ಯಾಂಕ್ ನಿಗಧಿ ಪಡಿಸಿದೆ. ಒಟ್ಟಾರೆ ಬಂಡವಾಳದಲ್ಲಿ ನಿಮ್ಮ ಸ್ವಂತ ಬಂಡವಾಳವೆಷ್ಟಿದೆ ಎಂದು ಕೇಳುತ್ತಿದೆ. ಇದು ಬ್ಯಾಂಕಿನ ತೊಡಕು ತೂಕ ಸಹಿತ ಆಸ್ತಿ (capital to risk weighted asset ratio, CRAR) ಕನಿಷ್ಠ ಶೇಕಡಾ 4 ಎಂದು ನಿಗಧಿಪಡಿಸಿದೆ. ಆದುದರಿಂದ ಇದನ್ನು ಕಾಪಾಡುವುದು, ಜೊತೆಗೆ ಇದಕ್ಕಿಂತ ಹೆಚ್ಚಿನ ಶೇಕಡಾವಾರು ಇರಿಸುವುದು ಸುಲಭವಾಗುತ್ತದೆ. 'ತೊಡಕು ತೂಕ ಸಹಿತ' ಎಂಬ ಪದ ಬಳಕೆಯಾಗಿದೆ. ಇದರ ಅರ್ಥವೇನು? ನಮ್ಮ ವ್ಯವಹಾರ ತೊಡಕು ರಹಿತವಾಗಲು ಸಾಧ್ಯವಿಲ್ಲ. 'ತೊಡಕು' ಎಂದರೆ ಸಂಭವನೀಯ ನಷ್ಟ ಇದನ್ನು ಯಾವರೀತಿ ತಪ್ಪಿಸಬೇಕು ಎಂಬುದು ಬಹಳ ಮುಖ್ಯ ಯಾವಯಾವ ತರಹೆಯ ಆಸ್ತಿಗಳ ಮೇಲೆ ಎಷ್ಟು ತೊಡಕು ತೂಕವಿರಿಸಬೇಕಾಗುತ್ತದೆ ಎಂಬುದನ್ನು ಪ್ರತಿ ವರ್ಷ ರಿಸರ್ವ್ ಬ್ಯಾಂಕ್ ನಿಗಧಿ ಪಡಿಸುತ್ತದೆ. ಉದಾಹರಣೆಗೆ ಸುರಕ್ಷಿತ ಸಾಲಗಳಿಗೆ ತೂಕ ಕಡಿಮೆ ಇರುತ್ತದೆ. ಸುರಕ್ಷತೆ ಇಲ್ಲದ ಸಾಲಗಳ ಮೇಲೆ ತೂಕ ಹೆಚ್ಚಿಗೆ ಇರುತ್ತದೆ. ಯಾವಾಗ ತೊಡಕು ತೂಕ ಜಾಸ್ತಿಯಾಗುತ್ತದೋ ಆಗ ಬಂಡವಾಳ ಅನುಪಾತ ಇಳಿಯುತ್ತದೆ.

ಯಾವಾಗ ನಮ್ಮ ಆಸ್ತಿಯ ಆರೋಗ್ಯ ಸುಸ್ಥಿತಿಯಲ್ಲಿರುತ್ತದೋ ಆಗ ತೊಡಕು ತೂಕ ಕಡಿಮೆ ಇರುತ್ತದೆ. ಇದರಿಂದಾಗಿ ರಿಸರ್ವ್ ಬ್ಯಾಂಕ್ 'ಐರಾಕ್ ಮಾನದಂಡಗಳು (IRAC Norms) Income Recognition and Asset Classification and Provisioning norms ಅಂದರೆ ಉತ್ತಮ ರೂಡಿಗಳನ್ನು ಬ್ಯಾಂಕ್ ಅಳವಡಿಸಿಕೊಳ್ಳಲು (prudent norms) ವಸೂಲಾತಿಯಾದ ಬಡ್ಡಿಯನ್ನು ಆದಾಯಕ್ಕೆ ತೆಗೆದುಕೊಳ್ಳಬೇಕು. ಯಾವ ಆಸ್ತಿ ಚಾಲ್ತಿಯಲ್ಲಿದೆ. ಅದು ಬಡ್ಡಿ ತರುತ್ತದೆ ಅದು ದುಡಿಯುತ್ತಿರುವ ಆಸ್ತಿ (performing Asset) ಯಾವುದು ಬಡ್ಡಿ ಆದಾಯ ತರುತ್ತಿಲ್ಲ ಅದು (Non-performing Assets NPA) ದುಡಿಯಲಾರದ ಆಸ್ತಿ ನಿಮ್ಮ ದುಡಿಯಲಾರದ ಆಸ್ತಿಯನ್ನು ಉತ್ತಮ

ಕೆಳಮಟ್ಟದ, ಅನುಮಾನಸ್ಪದ ಮತ್ತು ನಷ್ಟದ ಆಸ್ತಿಗಳಾಗಿ ವಿಂಗಡಿಸಬೇಕಾಗಿದೆ. (standard, substandard, Dobtful and loss) (ಅನುಮಾನಾಸ್ಪದ ಆ1, ಆ2, ಆ3) ದಲ್ಲಿ ಮೂರು ಭಾಗ) ಯಾವ ಸಾಲಗಳು ಸುಸ್ತಿಯಾಗಿವೆಯೋ (overdue) ಬೇಡಿಕೆ (ತಗಾದೆ) ಯಂತೆ ವಸೂಲಿಯಾಗಿಲ್ಲವೋ ಅವುಗಳ ಮೇಲೆ ನಿಗದಿಪಡಿಸಿದಂತಹ ಮಾನದಂಡಗಳ ಅನುಸಾರ ಆಸ್ತಿಗಳನ್ನು ವಿಂಗಡಿಸಕ್ಕದ್ದು. ಮತ್ತು ಅವುಗಳ ಅನುಸಾರ ನಿವ್ವಳ ಲಾಭ ನಿರ್ಧರಿಸುವ ಮೊದಲಿಗೆ ಅವಕಾಶ (provision) ಕಲಿಸಬೇಕಾಗುತ್ತದೆ. ದುಡಿಯಲಾರದ ಆಸ್ತಿಗಳು (NPA) ಹೆಚ್ಚಳವಾದಂತೆಲ್ಲಾ ಅವಕಾಶ ಹೆಚ್ಚಿಗೆ ಮಾಡಬೇಕಾಗುತ್ತದೆ. ಬ್ಯಾಂಕ್ ನಷ್ಟದಲ್ಲಿದೆ ಎಂದು ಪ್ರತಿಬಿಂಬಿತವಾಗುತ್ತದೆ. ಸಾಲಸಕಾಲದಲ್ಲಿ ವಸೂಲಾತಿಯಾದಲ್ಲಿ ಈ ಸಂಕಷ್ಟದಿಂದ ಪಾರಾಗಬಹುದರು. ಇದರಲ್ಲಿ ಅನುಕೂಲತೆಯೂ ಇದೆ.

ನಮ್ಮ ದುಡಿಯಲಾರದ ಆಸ್ತಿ ಅನುಪಾತದಂತೆ ಅವಕಾಶ ಕಲ್ಪಿಸಿರುವುದರಿಂದ ಉತ್ತಮ ಗುಣಮಟ್ಟಕ್ಕೆ ಶೇಕಡಾ 0.25. ಕಡಿಮೆ ಗುಂಮಟ್ಟಕ್ಕೆ ಶೇಕಡಾ 10, ಡಿ–1 ಶೇಕಡಾ 5. 2–2 50, ಡಿ–3 ಶೇಕಡಾ 100, ನಷ್ಟ ಆಸ್ತಿಗೆ ಶೇಕಡಾ 100 ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಅಸ್ತಿ ಕೆಳಸ್ಥರಗಳಿಗೆ ಚಲಿಸದಂತೆ ನೋಡಿಕೊಳ್ಳುವುದು ಮುಖ್ಯ. ವಸೂಲಾತಿಯಾಗದೇ ಇದ್ದಾಗ ಅದು ಕೆಳಸ್ತರಕ್ಕೆ ಚಲಿಸುತ್ತದೆ. ಶೇಕಡಾ ನೂರು ಅವಕಾಶ ಕಲ್ಪಿಸಿದ್ದಾಗ, ಸದರಿ ಆಸ್ತಿಯು ವಸೂಲಾತಿಯಾದಗ ಪುನಃ ಲಾಭಕ್ಕೆ ತೆಗೆದುಕೊಳ್ಳಲು ಅವಕಾಶವಿದೆ. ಒಂದು ಸಮಯ ವಸೂಲಾತಿಯಾಗದೇ ಇದ್ದಲ್ಲಿ, ವಸೂಲಿ ಸಾಧ್ಯವೇ ಇಲ್ಲ, ಯಾವುದೇ ರಹ ಇಲ್ಲ ಎಂದಾದರೆ ಒಂದೇ ಭಾರಿ ಮುಕ್ತಾಯ' ಮಾಡುವುದು (one time settlement-negotiation) ಮಾಡುವುದಕ್ಕೆ ಅವಕಾಶವಾಗುತ್ತದೆ. 'ಕನ್ನಡಿಯೊಳಗಿನ ಗಂಟು'ನ್ನು 'ನಂಟು' ಮಾಡಿದಂತಾಗುತ್ತದೆ. ಲಾಭ ಹೆಚ್ಚಳವಾಗುತ್ತದೆ. ಆಸ್ತಿಯ ಆರೋಗ್ಯ ಸುಧಾರಿಸಿದಂತಾಗುತ್ತದೆ.

ಬ್ಯಾಂಕಿನಲ್ಲಿ ಠೇವಣಿದಾರರಿಗೆ ಒಪ್ಪಂದದಂತೆ ಬೇಡಿಕೆಯನ್ವಯ ಠೇವಣಿ ಹಿಂತಿರುಗಿಸುವ ಜವಾಬ್ದಾರಿ ಇರುತ್ತದೆ. ಈ ಠೇವಣಿ ಹಿಂದಕ್ಕೆ ನೀಡುವುದನ್ನು ಖಾತ್ರಿ ಮಾಡಿಕೊಳ್ಳಲು ರಿಸರ್ವ್ ಬ್ಯಾಂಕ್ ಸಮಯ (time and demand liability) ಶೇಕಡಾ 25–30 ಶಾಸನ ಬದ್ಧ ಠೇವಣಿ ಮತ್ತು ಶೇಕಡಾ 4 ನಗದು ಅನುಪಾತ ನಿರ್ವಹಣೆ ಮಾಡಲು ನಿಗದಿ ಪಡಿಸಿರುತ್ತದೆ. ಅಂದರೆ ಸುಮಾರು ನಮ್ಮ ಠೇವಣಿಗಳ ಶೇಕಡಾ 70 ಭಾಗ ಮಾತ್ರಾ ಸಾಲ ಆಸ್ತಿಯಲ್ಲಿ ತೊಡಗಿಸ ಬೇಕಾಗುತ್ತದೆ.

ಇದರಿಂದಲೇ ಠೇವಣಿದಾರರಿಗೆ ಬಡ್ಡಿ ಪಾವತಿಸಬೇಕಾಗುತ್ತದೆ. ಅಲ್ಲದೇ ಮಾರ್ಚ್ ಅಂತ್ಯಕ್ಕೆ ಪಾವತಿಸಬೇಕಾದ ಬಡ್ಡಿಗೂ ಅವಕಾಶ ಕಲ್ಪಿಸಬೇಕಾಗುತ್ತದೆ. ವಸೂಲಾತಿಯಾದ ಬಡ್ಡಿಯನ್ನು ಮಾತ್ರಾ ಲಾಭಕ್ಕೆ ತೆಗೆದುಕೊಳ್ಳಬೇಕು. ಈ ಕಾರಣದಿಂದ ನಾವು ನೀಡಿರುವ ಸಾಲವನ್ನು ಸಕಾಲದಲ್ಲಿ ವಸೂಲಿ ಮಾಡಲೇಬೇಕಾಗುತ್ತದೆ. ಒಟ್ಟಾರೆ ಬ್ಯಾಂಕಿನಲ್ಲಿ ಆಸ್ತಿ ಜವಾಬ್ದಾರಿಗಳ ನಿರ್ವಹಣೆಗೆ (asset liability management) ತನ್ನ ಸಾಲ ವಸೂಲಾತಿಯನ್ನು ಅವಲಂಭಿಸಿರುತ್ತದೆ.

'ಸಾಲವನ್ನು ಕೊಂಬಾಗ ಹಾಲೋಗರ ಉಂಡಂತೆ ಸಾಲಿಗನು ಬಂದಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ಎಂಬ ತ್ರಿಪದಿ ಈಗ ಯಾರ ಕಿಬ್ಬದಿಯ ಕೀಲ ಸಾಲನೀಡಿದವನದೇ. ಸಾಲ ಪಡೆದವನದೇ ಎಂಬ ಪರಿಸರ ನಿರ್ಮಾಣವಾಗಿರುವುದು ಕಳವಳಕಾರಿ, ಪಟ್ಟಣ ಬ್ಯಾಂಕುಗಳಲ್ಲಿ ಉತ್ತಮ ಪರಿಸ್ಥಿತಿ ಇದೆ. ಆದರೂ ವಸೂಲಾತಿಯಾಗದ ಸಾಲಗಳು ಏಕೆ ವಸೂಲಾತಿಯಾಗುತ್ತಿಲ್ಲ. ಬ್ಯಾಂಕಿನ ಒಳಗೆ ತೊಂದರೆಗಳಿವೆಯೇ? ಅಥವ ಬಾಃ್ಯ ಕಾರಣಗಳೇನಿವೆ. ಅವುಗಳನ್ನು ಹೋಗಲಾಡಿಸುವುದು ಹೇಗೆ? ಎಂಬ ಬಗ್ಗೆ ಚಿಂತನೆ ಅಗತ್ಯ. ಸಕಾಲದಲ್ಲಿ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಶಾಸನಬದ್ಧ ವಸೂಲಾತಿ ಕ್ರಮ ಜರುಗಿಸಬೇಕಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ 'ಸಾಲ ವಸೂಲಾತಿ' ಯಿಂದ, ಸಾಲ ಮರುಪಾವತಿ ಎಂಬ ಶಿಸ್ತು ಸಾಲಗಾರರಲ್ಲಿ ರೂಢಿಯಾಗುವಂತೆ ಮಾಡುವುದು ಈ ದಿನಗಳ ಆವಶ್ಯಕತೆಯಾಗಿದೆ.

***************************************************************************************

# 52. ಸಹಕಾರ ಬ್ಯಾಂಕ್‌ಗಳಲ್ಲಿ "ಆಲ್ಕೋ" (ALCO) ಪ್ರಾಮುಖ್ಯತೆ

ಇತ್ತೀಚಿನ ದಿನಗಳಲ್ಲಿ ಭಾರತದ ಮತ್ತು ನಮ್ಮ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕಿನ ಮೇಲೆ ರಾಷ್ಟ್ರದ ನಿಯಂತ್ರಣ ಬ್ಯಾಂಕ್‌ಆದ ಭಾರತೀಯ ರಿಸರ್ವ್ ಬ್ಯಾಂಕ್ ತೆಗೆದುಕೊಂಡಿರುವ ನಿಯಂತ್ರಣ ಕ್ರಮಗಳು ಮಾಧ್ಯಮದಲ್ಲಿ ವರದಿಯಾಗುತ್ತಿದ್ದಂತೆ, ಅದರಲ್ಲೂ ದೃಶ್ಯ ಮಾಧ್ಯಮಗಳಲ್ಲಿ ಅತಿ ರಂಜಿತವಾಗಿ ಋಣಾತ್ಮಕವಾಗಿ ವರದಿಯಾದದ್ದು ಸಹಕಾರ ಚಳವಳಿಯ ದೃಷ್ಟಿಯಿಂದ ಅತ್ಯಂತ ಕಳವಳಕಾರಿಯಾಗಿದೆ. ಇದರಿಂದ ಸದಸ್ಯರು ಮತ್ತು ಸಾರ್ವಜನಿಕರಿಗೆ ತಪ್ಪು ಅಭಿಪ್ರಾಯ, ಸಂದೇಶ ರವಾನೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದಕ್ಕೆ ಕಾರಣ ಸಹಕಾರ ಬ್ಯಾಂಕ್‌ಗಳಲ್ಲಿ ನಿಖರವಾದ ಆಸ್ತಿ ಜವಾಬ್ದಾರಿ ನಿರ್ವಹಣೆಯ ನೀತಿ ಇಲ್ಲದೇ ಇರುವುದು ಅಥವಾ ಅದರ ಪಾಲನೆ ಸರಿಯಾಗಿ ಆಗದೇ ಇರುವುದೇ ಆಗಿದೆ. ಆಸ್ತಿ ಜವಾಬ್ದಾರಿ ನಿರ್ವಹಣೆಯ ಜವಾಬ್ದಾರಿ, ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ (Asset liability management committee ALCO) ಅಲ್ಕೋದ್ದಾಗಿರುತ್ತದೆ. ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಸಹಕಾರ ಬ್ಯಾಂಕ್‌ಗಳಿಗೆ ತನ್ನ ಪರಿಶೀಲನಾ ವರದಿಗಳಲ್ಲಿ ಮತ್ತು ನಿರ್ದೇಶನಗಳಲ್ಲಿ ತಿಳಿಸುತ್ತಲೇ ಬಂದಿದೆ.

'ಆಲ್ಕೋ' ಎಂದರೇನು? ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿ ಬ್ಯಾಂಕಿನದೇ ಆದ ನುರಿತ ಸಿಬ್ಬಂದಿಯಿಂದ ಕೂಡಿದ ಸಮಿತಿ. ಈ ಸಮಿತಿ ತನ್ನ ಸ್ವಾತಂತ್ರ್ಯತೆಯನ್ನು ಕಾಪಾಡಿಕೊಂಡು ನಿಷ್ಪಕ್ಷಪಾತವಾಗಿ ಬ್ಯಾಂಕಿನ ಆಸ್ತಿ ಜವಾಬ್ದಾರಿಗಳ ನಿರ್ವಹಣೆ ಬಗ್ಗೆ ವಸ್ತು ನಿಷ್ಠವಾಗಿ ಅಭ್ಯಾಸ ಮಾಡಿ, ಕಾಲಕಾಲಕ್ಕೆ ಆಡಳಿತ ಮಂಡಳಿಗೆ ವಸ್ತುನಿಷ್ಠವಾದ ವರದಿಗಳನ್ನು ಅದರಲ್ಲಿಯೂ 'ತೊಡಕು (risk) ಗಳನ್ನು ಕಂಡು ಹಿಡಿದು ವರದಿ ಮಾಡುವುದು/ಎಚ್ಚರಿಕೆ ನೀಡುವುದು. ರಿಸರ್ವ್ ಬ್ಯಾಂಕ್ ಈ ಸಮಿತಿಯಲ್ಲಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರನ್ನು ಅಧ್ಯಕ್ಷರಾಗಿಯೂ ಉಪವ್ಯವಸ್ಥಾಪಕರು ಮತ್ತು ವಿವಿಧ ಶಾಖೆಯ ಮುಖ್ಯಸ್ಥರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

**ಇದರ ಕರ್ತವ್ಯಗಳು:**

1. ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಲೇಬೇಕು; ಆದರೆ ಅವಶ್ಯಕತೆಗನುಸಾರ ಎಷ್ಟು ಬಾರಿಯಾದರೂ ಸೇರಬಹುದು (ಅನೇಕ ಯಶಸ್ವಿ ಬ್ಯಾಂಕ್‌ಗಳಲ್ಲಿ ಪ್ರತಿ ಶನಿವಾರ ಅನೌಪಚಾರಿಯಾಗಿಯಾದರೂ ಸೇರಿ ಬ್ಯಾಂಕಿನ ಸಮಗ್ರ ವ್ಯವಹಾರಗಳು, ಆರ್.ಬಿ.ಐ. (ನಬಾರ್ಡ್) ಸರ್ಕಾರದ ಸುತ್ತೋಲೆ, ಆದೇಶಗಳ ಬಗ್ಗೆ ಚರ್ಚಿಸುವುದುಂಟು).
2. ಆಸ್ತಿ ಜವಾಬ್ದಾರಿ ನಿರ್ವಹಣೆಯ ತಂತ್ರಗಳಂತೆ ಮತ್ತು ಇತರೆ ತಂತ್ರಗಳನ್ನು ಮೇಲ್ವಿಚಾರಣೆ/ಉಸ್ತುವಾರಿ ಮತ್ತು ಚರ್ಚೆ ಮಾಡುವುದು. ಸಕಾರಣ ಸಮೇತ ರಿಸರ್ವ್ ಬ್ಯಾಂಕಿನ ವಿವೇಚನೆಯುತ ಮಾನದಂಡಗಳನುಸಾರ ವಿವಿಧ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು 'ಬಕೆಟ್' (ಅರವಿ)ಗಳಾಗಿ ವಿಂಗಡಿಸಿ ತುಲನೆ ಮಾಡಿ ನೋಡುವುದು.
3. ಚಾಲ್ತಿಯಲ್ಲಿನ ದ್ರವ್ಯ ಆಸ್ತಿ (Liquidity)ಯನ್ನು ಪರಿಶೀಲಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಅಲ್ಲದೆ ಅವಶ್ಯಬಿದ್ದಲ್ಲಿ ಪರ್ಯಾಯ ನಿಧಿಗಳ ಮೂಲಗಳನ್ನು ಕಂಡು ಹಿಡಿಯುವುದು.
4. ಚಾಲ್ತಿ ಮತ್ತು ಮುಂದೆ ಹೊಂದಬಹುದಾದ ಬಂಡವಾಳ ಮಟ್ಟ, (ನಿವ್ವಳ ಮೌಲ್ಯ ಮತ್ತು ತೊಡಕು ಸಹಿತ) (Capital to Risk Weighted Asset Ratio CRAR) (ತೂಕ ಸಹಿತ ಆಸ್ತಿಗೆ ಸ್ವಂತ ಬಂಡವಾಳದ ಅನುಪಾತ) ವನ್ನು ಪರಿಶೀಲಿಸಿವುದು.
5. ರಾಷ್ಟ್ರ ಮತ್ತು ಸ್ಥಳೀಯ ಮಟ್ಟದಲ್ಲಿ, ಆರ್ಥಿಕ ಪರಿಸರದಲ್ಲಿ ಬಡ್ಡಿ ದರಗಳ ಪರಿಶೀಲನೆ ಮತ್ತು ನೋಟ,
6. ದೊಡ್ಡ ಪ್ರಮಾಣದ ಆಸ್ತಿಗಳು (ಸಾಲಗಳು, ಹೂಡಿಕೆಗಳು) ಮತ್ತು ಜವಾಬ್ದಾರಿಗಳು (ಠೇವಣಿಗಳು, ಪಡೆದ ಸಾಲಗಳು) ಫಲಿತಗೊಳ್ಳುವ ಬಗ್ಗೆ ಪರಿಶಿಷ್ಟ (ಷಡ್ಯೂಲ್) ನಲ್ಲಿನ ಪ್ರತಿಯೊಂದು ಲೆಕ್ಕವನ್ನು ಪರಿಶೀಲನೆಗೆ ತೆಗೆದುಕೊಳ್ಳುವುದು.

ಏರುಪೇರಾಗಿದ್ದಲ್ಲಿ ತಕ್ಕ ಚಿಕಿತ್ಸಾಕ್ರಮಗಳನ್ನು ಸೂಚಿಸುವುದು, ಕಂಡುಹಿಡಿಯುವುದು.

7. **ಪರ್ಯಾಯ ತಂತ್ರಗಾರಿಕೆಯನ್ನು ರೂಪಿಸುವುದು ಅವುಗಳು:**

- ಬಡ್ಡಿದರಗಳ ಮತ್ತು ಅದರ ಚಲನಾ ಪ್ರವೃತ್ತಿ (Trend)
- ಠೇವಣಿಗಳು ಮತ್ತು ಸಾಲ/ಪತ್ತು ಉತ್ಪನ್ನಗಳು ಮಾರುಕಟ್ಟೆಯ ಪ್ರವೃತ್ತಿ
- ಬ್ಯಾಂಕಿನ ನಿಯಂತ್ರಣ ನಿಯಮಗಳು

8. ಆಸ್ತಿ ಜವಾಬ್ದಾರಿ ನಿರ್ವಹಣಾ ತಃಖ್ತೆಗಳಲ್ಲಿ ಒಳಹರಿವು ಮತ್ತು ಹೊರಹರಿವನ್ನು ಪರಿಶೀಲಿಸುವುದು ಮತ್ತು ಆತಂಕಗಳಿದ್ದಲ್ಲಿ ಭವಿಷ್ಯದಲ್ಲಿ ಆಗಬಹುದಾದ ಪರಿಸ್ಥಿತಿಯ (ಭವಿಷ್ಯ) ಬಗ್ಗೆ ಊಹೆ ಮಾಡುವುದು/ಅರಿಯುವುದು.
9. ಬ್ಯಾಂಕಿನ ನಿವ್ವಳ ಬಡ್ಡಿ ಆದಾಯವನ್ನು ಪರಿಶೀಲಿಸುವುದು
10. ಒಟ್ಟಾರೆ ಆಸ್ತಿಯ ಮೇಲಿನ ಗಳಿಕೆ, ಬಜೆಟ್ ವ್ಯವಸ್ಥಾಪನ ವೆಚ್ಚಗಳು ವಿವಿಧ ಅನುಪಾತಗಳನ್ನು ಪರಿಶೀಲಿಸುವುದು
11. ಸಭೆಯ ಠರಾವುಗಳನ್ನು ಆಡಳಿತ ಮಂಡಳಿಗೆ ಮಂಡಿಸುವುದು

I. **ಆಸ್ತಿ ಜವಾಬ್ದಾರಿ ವ್ಯವಸ್ಥಾಪನ ಸಮಿತಿಯು ಆಡಳಿತ ಮಂಡಳಿಗೆ ಸಲ್ಲಿಸಲೇಬೇಕಾದ ವರದಿಗಳು**

1. ಆಸ್ತಿ ಜವಾಬ್ದಾರಿ ತಃಖ್ತೆ
2. ಆದಾಯ ತಃಖ್ತೆ (ಲಾಭ ನಷ್ಟ ತಃಖ್ತೆ)
3. ಬಡ್ಡಿಹರಿವು (Interest spread)ತಃಖ್ತೆ
4. ವಿವಿಧ ಅನುಪಾತಗಳು (Ratio's)
5. ಹೂಡಿಕೆ ವಲಯದ ವಿವರಗಳು
6. ಆಸ್ತಿ ಜವಾಬ್ದಾರಿ ವ್ಯವಸ್ಥಾಪನಾ ನೀತಿ ಉಲ್ಲಂಘನೆ ಅಥವಾ ಹೊರತುಪಡಿಸಿದ್ದಲ್ಲಿ ಅದರ ಬಗ್ಗೆ ವಿವರಣೆ
7. ಆರ್ಥಿಕ ಬಜೆಟ್ (ಆಯ–ವ್ಯಯ)

II. **ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿ (ಆಲ್ಕೋ)ಯಿಂದ ಪೂರೈಕೆ ಮಾಡಬೇಕಾದ ಉದ್ದೇಶಗಳು ನಿರೀಕ್ಷೆಗಳು**

1. ಆಸ್ತಿಯ ಮೇಲಿನ ಗಳಿಕೆ
2. ನಿವ್ವಳ ಬಡ್ಡಿ ಅಂತರ
3. ಉತ್ಪಾದನಾ ಅನುಪಾತ–ಕಾರ್ಯತತ್ಪರತೆ

(ಅ) ಪ್ರತಿ ನೌಕರರಿಗೆ

(ಆ) ಪ್ರತಿ ಶಾಖೆಗೆ

4. ದ್ರವ್ಯ ಆಸ್ತಿ ಅನುಪಾತಗಳು

(ಅ) ನಗದು ಅನುಪಾತ (ಸಿ.ಆರ್.ಆರ್)

(ಆ) ನಗದು ಆಸ್ತಿ ಅನುಪಾತ (ಎಲ್.ಎ.ಆರ್)

(ಇ) ಶಾಸನ ಬದ್ಧ ಆಸ್ತಿ ಅನುಪಾತ (ಎಸ್.ಎಲ್.ಆರ್)

5. ಸಾಲ ಠೇವಣಿ ಅನುಪಾತ (ಸಿ.ಡಿ. ರೇಷಿಯೋ)

6. ತೂಕದ ಆಸ್ತಿಗೆ ತಕ್ಕ ಬಂಡವಾಳ (ಸಿ.ಆರ್.ಆರ್.ಸಿ.ಆರ್.ಎ.ಆರ್)

ಇವುಗಳ ನಿಖರ ಲೆಕ್ಕಹಾಕುವಿಕೆ ಮತ್ತು ಇದರ ವ್ಯತ್ಯಯಗಳಿಗೆ ಕಾರಣಗಳು ಮತ್ತು ಉತ್ತಮಗೊಳಿಸಿಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ಮತ್ತು ತೀರ್ಮಾನಗಳು ನಿಯಂತ್ರಕರ ಮಾನದಂಡಗಳನ್ನು ಪಾಲಿಸಲಾಗಿದೆಯೇ ಮತ್ತು ನಿಯಂತ್ರಕರಿಗೆ ವರದಿಸಲಾಗಿರುವ ಬಗ್ಗೆ ಪರಿಶೀಲನೆ.

**III. ಹೂಡಿಕೆ ನೀತಿ:**

ಪ್ರತಿ ಬ್ಯಾಂಕ್ ಹೂಡಿಕೆ ನೀತಿಯನ್ನು ರೂಪಿಸುವುದು ಮತ್ತು ಪಾಲಿಸಬೇಕಾಗಿದೆ. ಮಾರುಕಟ್ಟೆ ತೊಡಕುಗಳು ಅತಿ ಹೆಚ್ಚಾಗುತ್ತಿದ್ದು ನಿರೀಕ್ಷಿಸಲಾಗದ ಏರುಪೇರುಗಳಾಗುತ್ತಿವೆ. ಸಂಭವನೀಯ ತೊಡಕುಗಳ ಬಗ್ಗೆ ಮುನ್ನೆಚ್ಚರಿಕೆ ಮತ್ತು ಪರಿಣಿತಿ ಅಗತ್ಯ ಇವುಗಳನ್ನು ಸಮಿತಿಯು ಪರಿಶೀಲನೆಗೆ ತೆಗೆದುಕೊಳ್ಳಬೇಕು.

**IV. ಬಡ್ಡಿದರ ತೊಡಕು:–**

ಸಾಲ ನೀಡುವುದು, ಹೂಡಿಕೆ, ನಿಧಿ ತೊಡಗಿಸುವುದರಲ್ಲಿ ಮಾರುಕಟ್ಟೆಯಲ್ಲಿ ಏರು ಪೇರುಗಳು ಬಡ್ಡಿಅಂತರ ಮತ್ತು ಗಳಿಕೆಯ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಹೊಂದಾಣಿಕೆಗಳು ಏರು ಪೇರಾಗುವ (mis match) ಸಾಧ್ಯತೆಗಳಿವೆ. ಆಸ್ತಿಯ ಮತ್ತು ಜವಾಬ್ದಾರಿ ಮೇಲಿನ ಧರಗಳ ಸೂಕ್ಷ್ಮತೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆಸ್ತಿ ಜವಾಬ್ದಾರಿಗಳ 'ಬಕೆಟ್' (Bucket) 'ಅರವಿ'ಗಳಿಗಾಗಿ ವಿಂಗಡಿಸಿ ಅಧ್ಯಯನ ಮಾಡಬೇಕಾಗುತ್ತದೆ. ಈ ಅಂಶಗಳ ಪರಿಶೀಲನೆ ಅತಿ ಅಗತ್ಯ.

**V. ಅನುಪಾಲನೆಗಳು:–**

ನಿಯಂತ್ರಣ ಸಂಸ್ಥೆಗಳ ಆದೇಶಗಳು, ಸುತ್ತೋಲೆಗಳು, ಸಲ್ಲಿಕೆಗಳನ್ನು ಸಕಾಲದಲ್ಲಿ ಸಲ್ಲಿಸುವುದು. ಈ ತಯಾರಿಕೆಯಲ್ಲಿ ಅನೇಕ ಮಾಹಿತಿಗಳು ದೊರೆಯುತ್ತದೆ. ಅದರಿಂದ ವಿಧಿವಿಧಾನಗಳನ್ನು ಪಾಲಿಸುವುದರಲ್ಲಿ, ತಂತ್ರಗಾರಿಕೆ ರೂಪಿಸಿದಲ್ಲಿ, ತಂತ್ರಗಳನ್ನು ಅನುಸರಿಸುವಲ್ಲಿ ಈ ಸಮಿತಿ ಪರಿಶೀಲನೆಗೆ ತೆಗೆದುಕೊಂಡಲ್ಲಿ ಅತ್ಯುತ್ತಮ ಸುಧಾರಣೆಗಳನ್ನು ತರಬಹುದು. ನಿಯಂತ್ರಕರ, ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆಯ ಪರಿವೀಕ್ಷಣಾ ಸಮಯದಲ್ಲಿ ಗಮನಿಸಿದ ಅಂಶಗಳು ವರದಿಯಲ್ಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅನುಪಾಲನೆ ಮಾಡುವುದರಿಂದ ಮುಂದೆ ಆಗಬಹುದಾದ ಸಂಭವನೀಯ ಕಗ್ಗಂಟನ್ನು ತಡೆಯಬಹುದಾಗಿದೆ. ಈ ಸಮಿತಿಯು ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ.

**VI. ಆಸ್ತಿ ಜವಾಬ್ದಾರಿ ನಿರ್ವಹಣಾ ನೀತಿ ಪರಿಶೀಲನೆ:–**

ಆಸ್ತಿ ಜವಾಬ್ದಾರಿ ನಿರ್ವಹಣಾ ನೀತಿಯಲ್ಲಿ ಲೋಪದೋಷಗಳಿದ್ದಲ್ಲಿ, ಬದಲಾವಣೆಯ ಅಗತ್ಯತೆಗಳಿದ್ದಲ್ಲಿ ಕೆಲವು ಅಪವಾದಗಳ ಅಗತ್ಯತೆಗಳಿದ್ದಲ್ಲಿ ಸಮಿತಿಯು ಪರಿಶೀಲಿಸಿ ಸಲಹೆಗಳನ್ನು ನೀಡಬೇಕು ಆಗಿಂದಾಗ್ಯೆ ಮರು ರೂಪಿಸಿಲು ಸಾಧ್ಯವಾಗದಿದ್ದಲ್ಲಿ ವಾರ್ಷಿಕವಾಗಿ ಸೂಕ್ತ ಅಗತ್ಯ ಬದಲಾವಣೆಗಳ್ಳು ತರಬಹುದಾಗಿದೆ.

ಆಸ್ತಿ ಜವಾಬ್ದಾರಿ ನಿರ್ವಹಣಾ ನೀತಿಯಗುರಿ ಬೆಳವಣಿಗೆ, ಲಾಭಗಳಿಸುವಿಕೆ ಮತ್ತು ಸದೃಡ ಸ್ಥಿತಿಯಲ್ಲಿರುವುದೇ ಆಗಿದೆ. ಇದು ವ್ಯವಸ್ಥಾಪನಾ ಚಟುವಟಿಕೆ ಮತ್ತು ಜವಾಬ್ದಾರಿಯನ್ನು ಒಳಗೊಂಡಿದ್ದು ದ್ರವ್ಯ ಆಸ್ತಿ ಮತ್ತು ಬಡ್ಡಿದರ ತೊಡಕುಗಳ ನಿವಾರಣೆಯ ಗುರಿ ಹೊಂದಿರುತ್ತದೆ. ಇದರ ಉದ್ದೇಶ ಗ್ರಾಹಕರ (ಸದಸ್ಯರ, ಠೇವಣಿದಾರರ) ಹಿತಾಸಕ್ತಿ

ಕಾಪಾಡುವುದು ಮತ್ತು ಸೇವೆ ಒದಗಿಸುವುದಾಗಿದ್ದು ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಬಾರದು ಎಂಬುದಾಗಿದೆ. ನೀತಿಯು ಸಮಿತಿಯ (ಆಲ್ಕೋ) ವ್ಯಾಪ್ತಿ ಮತ್ತು ಜವಾಬ್ದಾರಿಯನ್ನು ವಿವರಿಸಿರುವುದು ಅಲ್ಲದೆ ಈ ನೀತಿಯೊಡನೆ ಸಾಲ ನೀತಿ, ಹೂಡಿಕೆ ನೀತಿ, ತೊಡುಕುಗಳ ನಿರ್ವಹಣೆಗೆ, ಅವಶ್ಯ ಕ್ರಮಗಳ ಕುರಿತು ಪರಿಶೀಲಿಸಲು ಜವಾಬ್ದಾರಿ ವಹಿಸುತ್ತದೆ. ಅಂತಿ ಮಧ್ಯೆಯ ಬ್ಯಾಂಕಿನ ವ್ಯವಸ್ಥಾಪನೆಯಲ್ಲಿ ಬ್ಯಾಂಕ್‌ನ್ನು ಅತ್ಯತ್ತಮ ಆರ್ಥಿಕ ಸ್ಥಿತಿಗೆ ಕೊಂಡೊಯ್ಯುವುದೇ ಆಗಿದೆ. ಬ್ಯಾಂಕಿನ ಆಡಳಿತ ಮಂಡಳಿಯು ಈ ದಿಸೆಯಲ್ಲಿ ಕಾರ್ಯನಿರ್ವಹಿಸಿದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗುವುದಿಲ್ಲ ಮತ್ತು ಸಹಕಾರ ಚಳುವಳಿಯನ್ನು ಬಲಪಡಿಸಿದಂತಾಗುತ್ತದೆ. ಇದರಿಂದ ಆರ್ಥಿಕ ಅಭಿವೃದ್ಧಿಯೊಡನೆ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ.

ಈ ಸನ್ನಿವೇಶದಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳ ಆರ್ಥಿಕ ಬಿಕ್ಕಟ್ಟು ಪರಿಹಾರಕ್ಕಾಗಿ ಮತ್ತು ಸೂಕ್ತ ತಾಂತ್ರಿಕ ಸಲಹೆ, ಸೂಚನೆ, ತರಬೇತಿ ನೀಡಿ ಮಾನವ ಸಂಪನ್ಮೂಲ ಸಜ್ಜುಗೊಳಿಸಲು ಅನುವಾಗುವಂತೆ ರಾಷ್ಟ್ರೀಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ, ರಾಷ್ಟ್ರ ಮಟ್ಟದ ಆಶ್ರಯ ಸಂಸ್ಥೆ (Umbrella Organisation) ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿಸಿದೆ. ಈ ಸಂಸ್ಥೆಯ ಸ್ಥಾಪನೆಯಿಂದ ರಾಷ್ಟ್ರಮಟ್ಟದಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳ ಪ್ರಸಕ್ತ ಕೊರತೆಯನ್ನು ನೀಗಿಸಿ ಸಹಕಾರ ಚಳುವಳಿಗೆ ಇಂಬು ಕೊಟ್ಟಂತಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

********************************************************************************************

# 53. ಬ್ಯಾಂಕಿಂಗ್ ನಿಯಂತ್ರಣ(ತಿದ್ದುಪಡಿ) ಕಾಯ್ದೆ 2020 ಇದರ ಪರಿಣಾಮಗಳು

ಸೆಪ್ಟೆಂಬರ್ 2020 ರಿಂದ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಕಾಯ್ದೆಜಾರಿಗೆ ಬಂದಿರುತ್ತದೆ.ಈ ಕಾಯ್ದೆಜಾರಿಗೆ ಬಂದಿರುವುದುರಿಂದ ಸಹಕಾರ ಸಂಸ್ಥೆಗಳ ಮೇಲೆ ಆಗಿರುವ ಪರಿಣಾಮಗಳೇನು? ಸಹಕಾರದ ಬೆಳವಣಿಗೆಗೆ ಇದು ಪೂರಕವಾಗಿದೆಯೇ? ಅಥವಾ ಮಾರಕವಾಗಿದೆಯೇ? ಮೂಲಭೂತ ಸಹಕಾರ ತತ್ವಗಳಿಗೆ ಅನುಗುಣವಾಗಿದೆಯೇ? ಎಂಬ ಪ್ರಶ್ನೆಗಳು ಮೂಡುತ್ತವೆ.

**ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.**

1. ಕಲಂ 3ರ ತಿದ್ದುಪಡಿ ಈ ಕಾಯ್ದೆಯು (ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು (ಆ) ದೀರ್ಘಾವಧಿ ಸಾಲ ನೀಡುವ ಉದ್ದೇಶವುಳ್ಳ ಸಂಸ್ಥೆಗೆ ಮತ್ತು ಈ ಸಂಘಗಳು ತಮ್ಮ ವ್ಯವಹಾರಗಳಲ್ಲಿ "ಬ್ಯಾಂಕ್", "ಬ್ಯಾಂಕರ್" ಅಥವ "ಬ್ಯಾಂಕಿಂಗ್" ಪದಗಳನ್ನು ಉಪಯೋಗಿಸುತ್ತಿಲ್ಲವೋ ಅಂಥಹ ಸಂಸ್ಥೆಗೆ ಅನ್ವಯವಾಗುತ್ತದೆ ಎಂದಿರುತ್ತದೆ.

ಅಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು "ಬ್ಯಾಂಕ್" ಹೆಸರನ್ನು ಬಳಸುವಂತಿಲ್ಲ. ಈಗಾಗಲೇ ಅಲ್ಪಾವಧಿ ಸಾಲ ರಚನೆಯ ಪುನಶ್ಚೇತನ ವರದಿ (ಪ್ರೋ.ವೈದ್ಯನಾಥನ್ ವರದಿ) ಅನುಷ್ಠಾನ ಸಮಯದಲ್ಲಿ ಭಾರತ ಸರ್ಕಾರ ಮತ್ತು ನಬಾರ್ಡ್ ಸಹಾಯ ಧನ ಒದಗಿಸುವ ಮುನ್ನ"ಬ್ಯಾಂಕ್" ಪದ ಉಪಯೋಗಿಸುವುದನ್ನು ಕೈಬಿಡಬೇಕೆಂದು ಷರತ್ತು ವಿಧಿಸಲಾಗಿತ್ತು. ಅದರಂತೆ ಕರ್ನಾಟಕದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 'ಬ್ಯಾಂಕ್' ಎಂಬ ಹೆಸರಿನಲ್ಲಿನ ಭಾಗವನ್ನು ಉಪನಿಯಮಗಳ ತಿದ್ದುಪಡಿ ಮೂಲಕ ಕೈಬಿಡಲಾಯಿತು. ಕೇರಳ ರಾಜ್ಯದಲ್ಲಿ ಈ ವರದಿ ಅನುಷ್ಠಾನಕ್ಕೆ ಬಾರದೆ ಇದ್ದುದರಿಂದ ಅಲ್ಲಿ 'ಬ್ಯಾಂಕ್' ಪದವನ್ನು ಈಗಲೂ ಉಪಯೋಗಿಸುತ್ತಿದ್ದು ಅಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 'ಬ್ಯಾಂಕ್' ಪದದ ಉಪಯೋಗವನ್ನು ಕೈಬಿಡಬೇಕಾಗುತ್ತದೆ. ಕೇರಳದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿನ ಮಾರ್ಚ್ 2019ಕ್ಕೆ ಠೇವಣಾತಿ ರೂ.95,477.89 ಕೋಟಿ ಇದ್ದು, ಇದು ಸರಾಸರಿರೂ 58.11 ಕೋಟಿಯಾಗುತ್ತದೆ. ಬ್ಯಾಂಕ್ ಪದ ಪ್ರಯೋಗ ಕೈಬಿಡುವುದುರಿಂದ ವ್ಯತಿರಿಕ್ತ ಪರಿಣಾಮಗಳೇನಾದರೂ ಆಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಠೇವಣಾತಿಗಳನ್ನು ಹೊಂದಿದ್ದ ಜಿಲ್ಲೆಗಳಲ್ಲಿನ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಈರೀತಿ ವ್ಯತಿರಿಕ್ತ ಪರಿಣಾಮವಾದದ್ದು ವರದಿಯಾಗಿಲ್ಲ. ಏಕೆಂದರೆ ಇವು ಸದಸ್ಯರ ಮೆಚ್ಚುಗೆಗೆ ಪಾತ್ರವಾಗಿದ್ದು ವಿಶ್ವಾಸಗಳಿಸಿದ್ದರ ಪರಿಣಾಮಎಂದೇ ತಿಳಿಯಬೇಕಾಗಿದೆ. 'ಬ್ಯಾಂಕ್' ಎಂಬ "ಬ್ರಾಂಡ್"ಗಿಂತ"ಸಹಕಾರ" ಎಂಬ 'ಬ್ರಾಂಡ್' ನಿರ್ಮಾಣ ಮಾಡಿವೆಎಂಬುದು ಹೆಮ್ಮೆಯ ವಿಷಯವಾಗಿದೆ.

ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು ತಾಲ್ಲೂಕ್ ಮಟ್ಟದ ಸಂಸ್ಥೆ (ಬಹುತೇಕ) ಗಳಾಗಿದ್ದು ದೀರ್ಘಾವಧಿ ಸಾಲ ವಿತರಣಾಉದ್ದೇಶ ಹೊಂದಿದ್ದವು. 'ಬ್ಯಾಂಕ್' ಎಂಬ ಪದ ಉಪಯೋಗಿಸುತ್ತಿದ್ದರೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಿಂದ ಹೊರಗಿದ್ದುದರಿಂದ ಯಾವುದೇ 'ಬ್ಯಾಂಕಿಂಗ್' ಚಟುವಟಿಕೆಯನ್ನು ನಡೆಸುತ್ತಿರಲಿಲ್ಲ. ಆದರೆ ಈಗಿನ ಈ ಕಾಯ್ದೆ ತಿದ್ದುಪಡಿಯಿಂದಾಗಿ ಇನ್ನು ಮುಂದೆತಮ್ಮ ಹೆಸರಿನ ಭಾಗವಾಗಿ 'ಬ್ಯಾಂಕ್' ಪದ ಉಪಯೋಗಿಸುವಂತಿಲ್ಲ ಹಾಲಿ 'ನಬಾರ್ಡ್'ನ ಮಾರ್ಗ ಸೂಚಿಯಂತೆ ಈ ಸಂಸ್ಥೆಗಳಲ್ಲಿ ಸದಸ್ಯರಿಂದ ಮಾತ್ರ (ಸಾರ್ವಜನಿಕರಿಂದಲ್ಲ) ಅವಧಿ ಠೇವಣಿಗಳನ್ನು ಮಾತ್ರ ಸ್ವೀಕಾರ ಮಾಡಲಾಗುತ್ತಿದೆ. 'ನಬಾರ್ಡ್' ಪುನರ್ಧನ ಸೌಲಭ್ಯದೊಂದಿಗೆ ಸಾಲ ವಿತರಿಸಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ರಾಷ್ಟ್ರಮಟ್ಟದಲ್ಲಿ ಒಟ್ಟಾರೆ ಸಾಲ ಹೊರಬಾರೆಯ ಶೇಕಡ 10 ಮಾತ್ರಠೇವಣಿ ಸಂಗ್ರಹವಾಗಿರುತ್ತದೆ. ಈ ಮೊತ್ತವುರೂ 2133 ಕೋಟಿ (ಮಾರ್ಚ್ 2019ಕ್ಕೆ) ಎಂದು ಅಂದಾಜಿಸಲಾಗಿದೆ. ಈ ತಿದ್ದುಪಡಿಯಿಂದಾಗಿ ಈ ವಲಯದ ಪುನಶ್ಚೇತನಕ್ಕೆ ಅಡ್ಡಿಯಾಗಬಹುದೆಂಬ ಅನುಮಾನ ದಟ್ಟವಾಗಿದೆ.

2. ಬ್ಯಾಂಕಿಂಗ್ ನಿಯಂತ್ರಣಕಾಯ್ದೆ ಕಲಂ 45ಕ್ಕೆ ತಿದ್ದುಪಡಿಗಳನ್ನು ತಂದಿದ್ದುಇದು ಪಟ್ಟಣ (ಪ್ರಾಥಮಿಕ) ಸಹಕಾರ ಬ್ಯಾಂಕ್‌ಗಳಿಗೆ ಅನ್ವಯವಾಗುತ್ತದೆ. ಈ ಕಲಂ ನನ್ವಯ ಬ್ಯಾಂಕಿನಕಾರ್ಯಾಚರಣೆಯಲ್ಲಿ ಶಿಸ್ತು ಮೂಡಿಸುವ ಸಲುವಾಗಿ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ 'ರಜೆ ಅವಧಿ' ಘೋಷಿಸಬಹುದಾಗಿದೆ. 'ರಜೆ ಅವಧಿ' ಅವಧಿಯಲ್ಲಿ ಭಾರತಿಯ ರಿಸರ್ವ್ ಬ್ಯಾಂಕ್ ತೆಗೆದುಕೊಳ್ಳಬಹುದಾದ ಶಿಸ್ತು ಬದ್ಧ ಕ್ರಮಗಳನ್ನು ಪುನರ್‌ರಚನೆ ಮತ್ತು ಒಗ್ಗೂಡಿಸುವಿಕೆ "ಇತರೆ ಸಮಯ"ಗಳಲ್ಲೂ ಕ್ರಮ ತೆಗೆದುಕೊಳ್ಳಬಹುದೆಂದುತಿ ದ್ದುಪಡಿ ಮಾಡಲಾಗಿದೆ. ಇದರಿಂದಾಗಿ 'ರಜೆ ಘೋಷಿ'ಸದೆ ಕೆಲವೊಂದು ಕ್ರಮಗಳನ್ನು (ಉದಾ: ಠೇವಣಿ ಹಿಂಪಡೆಯುವಿಕೆ, ಸಾಲ ನೀಡಿಕೆ ಮೇಲೆ ನಿರ್ಬಂಧಗಳನ್ನು ವಿಧಿಸುವುದು ಪುನರ್‌ರಚನೆ, ಒಗ್ಗೂಡಿಸುವಿಕೆ) ಭಾರತೀಯ ರಿಸರ್ವ್ ಬ್ಯಾಂಕ್ ತೆಗೆದುಕೊಳ್ಳಬಹುದಾಗಿದೆ. ತಪ್ಪೆಸಗುವ ಪಟ್ಟಣ ಸಹಕಾರ ಬ್ಯಾಂಕ್‌ಗಳು ತಪ್ಪೆಸಗದಂತೆ ತಮ್ಮ ನಡವಳಿಕೆ ತಿದ್ದಿಕೊಳ್ಳಲು ಸಹಕಾರಿಯಾಗುತ್ತದೆ. ಈ ತಿದ್ದುಪಡಿಗಳು ಪ್ರಾಥಮಿಕ ಸಹಕಾರ ಬ್ಯಾಂಕ್‌ಗಳಿಗೆ ಜೂನ್ 2009 ರಿಂದಲೇಜಾರಿಗೆ ಬಂದಿವೆ (ಸುಗ್ರಿವಾಜ್ಞೆ ದಿನಾಂಕ) ಎಂದು ಅರ್ಥೈಸುವುದು. ರಾಜ್ಯ ಸಹಕಾರ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಕೇಂದ್ರ ಸರ್ಕಾರ ಪ್ರಕಟಿಸುವ ದಿನಾಂಕದಿಂದ ಜಾರಿಗೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಪ್ರಮುಖ ತಿದ್ದುಪಡಿಯಾದ ಕಲಂ 56ನ್ನು ಪರಿಶೀಲಿಸಬೇಕಿದೆ.

3. ಸಹಕಾರ ಬ್ಯಾಂಕ್‌ಗಳು ತನ್ನ ಪಾವತಿಯಾದ ಷೇರು ಬಂಡವಾಳ ಕ್ರೂಢೀಕರಣಗೊಳಿಸಲು ತನ್ನಕಾರ್ಯ ವ್ಯಾಪ್ತಿಯೊಳಗೆ ಸಾರ್ವಜನಿಕರಿಗೆ ಷೇರು ಮಾರಾಟ ಮತ್ತು ಬಾಂಡ್‌ಗಳ. ಡಿಬೆಂಚರ್‌ಗಳರೂಪದಲ್ಲಿ ಮಾರಾಟ ಮಾಡಲುಕ್ರಮ ವಹಿಸಬಹುದು. ಬ್ಯಾಂಕ್‌ತನ್ನ ಬಂಡವಾಳದಲ್ಲಿ ಕಡಿಮೆಗೊಳಿಸುವಂತಿಲ್ಲ, ಎಂದರೆ ಸಾಲಗಾರರು ನೀಡಿದ ಹೆಚ್ಚುವರಿ ಷೇರು ಹಿಂತಿರುಗಿಸುವಂತಿಲ್ಲ ಮತ್ತು ಸಾಲಕ್ಕೆ ಜಮಾ ಮಾಡಿಕೊಳ್ಳಲಾಗುವುದಿಲ್ಲ. ಏನಿದ್ದರೂ, ಷೇರುಗಳನ್ನು ವರ್ಗಾವಣೆ ಮಾಡಬಹುದಾಗಿದೆ. ಈ ತಿದ್ದುಪಡಿಯು ಸಹಕಾರ ಬ್ಯಾಂಕಿನಲ್ಲಿ ಖಾಸಗಿ ಬಂಡವಾಳ ತತ್ವವನ್ನು ಸೇರಿಸಿದಂತಾಗಿದೆ. 'ಸಹಕಾರ'ದ ಮೂಲ ತತ್ವವನ್ನೇಅಲುಗಾಡಿಸದಂತಾಗಿದೆ. 'ಸ್ವ ಸಹಾಯ ಪರಸ್ಪರ ಸಹಾಯ'ವಾಗಲಿ 'ಒಬ್ಬ ಸದಸ್ಯ ಒಂದು ಮತ"ಬಂಡವಾಳ ಆಧಾರಿತ ಸಾಲ ಪಡೆಯುವ ಶಕ್ತಿ' ಗಳಾದ ಮೂಲಭೂತ ಸಹಕಾರರೂಢಿ ಪದ್ಧತಿಗಳನ್ನು ಬದಿಗೆ ಸರಿಸಿದಂತಾಗಿದೆಯಲ್ಲವೇ? ಇದರ ಮುಂದಿನ ಪರಿಣಾಮಗಳೇನು? ಎಂಬುದನ್ನು ಕಾಲವೇ ನಿರ್ಧರಿಸಲಿದೆ.

4. ಸಹಕಾರ ಬ್ಯಾಂಕ್‌ನ್ನು ನೊಂದಣಿ ಮಾಡಿರುವ ನಿಬಂಧಕರ ಪೂರ್ವಾನುಮತಿಯಿಂದ ಐದು ವರ್ಷಗಳವರೆಗೆ ಆಡಳಿತ ಮಂಡಳಿ ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೇಮಿಸಬಹುದಾಗಿದೆ.

ಸಹಕಾರ ಬ್ಯಾಂಕ್‌ಗಳು ಬಡ ಮತ್ತು ಮಧ್ಯಮ ವರ್ಗದ ಜನತೆಯ ಸಶಕ್ತತೆಯ ಪ್ರತಿಬಿಂಬಗಳಾಗಿದ್ದು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಕೆಲವು ಸಂಸ್ಥೆಗಳು ತಮ್ಮ ಕರ್ತವ್ಯ ಜವಾಬ್ದಾರಿಗಳಿಂದ ಎಡವಿದ್ದು ಠೇವಣಾತಿದಾರರ ಹಿತ ಕಾಪಾಡುವಲ್ಲಿ ವಿಫಲರಾಗಿದ್ದರಿಂದಾಗಿ ಇಡೀ ವಲಯವು ಹೆಚ್ಚಿನ ನಿಯಂತ್ರಣ ಕಾಯ್ದೆಗಳ ತಿದ್ದುಪಡಿಗೆ ಒಳಗಾಗಿದ್ದು ಒಂದು ವಿಪರ್ಯಾಸವೇ ಸರಿ.

*****************************************************************************************

# 54. ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಮಗ್ರ ಅಭಿವೃದ್ಧಿಯ ಹೆಜ್ಜೆಗಳು

ಕರ್ನಾಟದಲ್ಲಿ 'ನಂದಿನಿ' ಒಂದು ಬ್ರಾಂಡ್ ಆಗಿ ನಿರ್ಮಾಣವಾಗಿದೆ. ಇದು ನಮ್ಮೆಲ್ಲರ ಹೆಮ್ಮೆಯ ವಿಷಯ. ಸಹಕಾರ ಕ್ಷೇತ್ರಕ್ಕೆ ಇದು ಮುಕುಟಪ್ರಾಯ. ಈ ಬ್ರಾಂಡ್ ನಿರ್ಮಾಣದ ಹಿಂದೆ ಸರಿ ಸುಮಾರು ಐದು ದಶಕಗಳ ಇತಿಹಾಸವಿದೆ. ಇಂದು ಕರ್ನಾಟಕದಲ್ಲಿ ಹಾಲು ಮಹಾಮಂಡಳ (ಕೆ.ಎಂ.ಎಫ್.) 14 ಹಾಲು ಒಕ್ಕೂಟಗಳು, 27000 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು 30 ಲಕ್ಷಕ್ಕೂ ಹೆಚ್ಚಿನ ಸದಸ್ಯರು, 9 ಲಕ್ಷ ದಿನ ನಿತ್ಯಹಾಲು ಸರಬರಾಜು ಮಾಡುತ್ತಿರುವ ಸದಸ್ಯರ ಸಂಖ್ಯೆ ಪ್ರತಿ ದಿನ 90ಲಕ್ಷ ಲೀಟರು ಹಾಲು ಸರಬರಾಜು ಆಗುತ್ತಿದೆ. ವಿವಿಧನಮೂನೆಯಸ್ಯಾಚೆ (ಪಾಕೆಟ್) ಗಳಲ್ಲಿ ದ್ರವ ರೂಪದಹಾಲು ಗ್ರಾಹಕರಿಗೆಮನೆ ಬಾಗಿಲಿಗೆ ತಲುಪುವದಲ್ಲದೇ140 ಕ್ಕೂ ಹೆಚ್ಚಿನ ಹಾಲಿನ ಉತ್ಪನ್ನಗಳುಗ್ರಾಹಕರಿಗೆಲಭ್ಯವಿದೆ.' ಹನಿಹನಿಗೂಡಿದರೆಹಳ್ಳ ತೆನೆತೆನೆಗೂಡಿದರೆ ಬಳ್ಳ ' ಎಂಬ ನಾಣ್ಣುಡಿ ಅಕ್ಷರಷಃ ಸತ್ಯ ಎಂಬುದನ್ನು ಪ್ರತ್ಯಕ್ಷವಾಗಿ ನಾವು ಕಾಣುತ್ತಿದ್ದೇವೆ. ರಾಜ್ಯದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 50 ಲಕ್ಷಕ್ಕೂ ಹೆಚ್ಚು ಜನರಿಗೆ ಹೈ ನೋದ್ಯಮ ಉದ್ಯೋಗ ಒದಗಿಸಿ ಜೀವನೋಪಾಯಕ್ಕೆ ದಾರಿ ಆಗಿದೆ. ಜನರಿಗೆ ಪೌಷ್ಠಿಕಾಂಶಯುಕ್ತ ಸಮತೋಲನ ಆಹಾರ ದೊರಕುವಂತಾಗಿದೆ.

ಈ ಹೆಮ್ಮೆಯ ಸಹಕಾರ ವಲಯದ ಅಭಿವೃದ್ಧಿ, ಚಳುವಳಿಯಂತೆ ರೂಪುಗೊಳ್ಳಲು ಹೇಗೆ ಸಾಧ್ಯವಾಯಿತು? ಎಂಬದು ಕುತೂಹಲ ಭರಿತ ಎಂದರೆ ತಪ್ಪಾಗಲಾರದು. ಕರ್ನಾಟಕದಲ್ಲಿ ಐದು ದಶಕಗಳ ಮೊದಲಿಗೆ ಹೈನೋದ್ಯಮಕ್ಕೆ ಪ್ರಾಮುಖ್ಯತೆ ನೀಡಲಾಗಿತ್ತು. ಸರ್ಕಾರದಿಂದ ಅನೇಕ ಹೈನು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು ಉದಾ: ದಕ್ಷಿಣ ಕನ್ನಡ ಜಿಲ್ಲೆಯಕೆನರಾ ಹಾಲು ಒಕ್ಕೂಟ' ಆದರೂ ಹೈನು ಅಭಿವೃದ್ಧಿಯ ವೇಗ ಪಡೆದದ್ದು 'ಕರ್ನಾಟಕ ಹೈನು ಅಭಿವೃದ್ಧಿ ಯೋಜನೆ' 1974–75ರಲ್ಲಿ ಕಾರ್ಯಗತಗಳಿಸಿದ ನಂತರ ಎಂದರೆ ತಪ್ಪಾಗಲಾರದು. ಈ ಯೋಜನೆಯ ಪ್ರಮುಖ ವಿಷಯ 'ಅಮುಲ್' ಮಾದರಿಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವುದು.

'ಅಮುಲ್' ಮಾದರಿ ಎಂದರೇನು? ಅಮುಲ್ ಮಾದರಿಯನ್ನೇ ಏಕೆ ಆರಿಸ ಕೊಳ್ಳಲಾಯಿತು? ಎಂಬ ಪ್ರಶ್ನೆಗಳು ಮೂಡುವುದು ಸಹಜ. ಇದಕ್ಕೆನಾವು 'ಅಮುಲ್'ನ ಇತಿಹಾಸವನ್ನು ಅರಿಯುವ ಅಗತ್ಯತೆ ಇದೆ. ಏಕೆಂದರೆ ಹಾಲು ಉತ್ಪಾದಕ ಸಹಕಾರ ಸಂಘಗಳ ಸಮಗ್ರ ಅಭಿವೃದ್ದಿಗೆ 'ಅಮುಲ್ ಮಾದರಿ'ಯೇಬುನಾದಿ (ತಳಹದಿ, ತಳಪಾಯ) ಯಾಗಿರುತ್ತದೆ.

ಗುಜರಾತ್ ರಾಜ್ಯ ಹೈನುಗಾರಿಕೆಯ ಸಂಪದ್ಭರಿತ ರಾಜ್ಯ. ಅದು ಕೃಷ್ಣನ ನಾಡು. ದ್ವಾರಕ ಪಟ್ಟಣ ಅಲ್ಲೇ ಇದ್ದದ್ದು, ಅತ್ಯಂತ ಉತ್ಕೃಷ್ಟ ದರ್ಜೆಯ ಹಾಲು ಉತ್ಪಾದಿಸುವ ಎಮ್ಮೆ ತಳಿಗಳಾದ ಸುರ್ತಿ, ಮುರ್ರಾ, ಮಹಸಾನಿ, ಮುಂತಾದ ತಳಿಗಳು, ಗಿರ್ ತಳಿ ಹಸುಗಳು ಪಾರಂಪರಿಕವಾಗಿ ಪಶುಪಾಲನೆ ಮಾಡಲಾಗುತ್ತದೆ. ಇದರಿಂದ ಹೇರಳವಾಗಿ ಹಾಲು ಉತ್ಪಾದನೆಯಾಗುತ್ತದೆ ಮತ್ತು ಉತ್ಪಾದನೆಯಾಗುತ್ತಿತ್ತು. 1930–40 ರದಶಕದಲ್ಲಿ ಗುಜರಾತ್‌ನ ಕೇಡಾ ಜಿಲ್ಲೆಯ ಹಾಲು ಮುಂಬೈ ನಗರಕ್ಕೆ ಸರಬರಾಜು ಆಗುತ್ತಿತ್ತು. ಮುಂಬೈ ಹಾಲು ಯೋಜನೆ ಜಾರಿಯಲ್ಲಿದ್ದು ಹಾಲಿನ ಕಾಲೋನಿಗಳಿದ್ದರೂ ಹಾಲು ಸಾಕಾಗುತ್ತಿರಲಿಲ್ಲ. 'ಪೋಲ್ಸನ್' ಎಂಬ ಕಂಪನಿ ಏಕಸ್ವಾಮ್ಯ ಗಳಿಸಿತ್ತು. ಕೇಡಾಜಿಲ್ಲೆಯ ರೈತರು ತಮಗೆ ಕಂಪನಿಯು

ಶೋಷಣೆ ಮಾಡುತ್ತಾ ಇದ್ದದನ್ನು ಗಮನಿಸಿದರು. ಇದಕ್ಕೆ ಪರಿಹಾರ ಕಂಡುಕೊಳ್ಳಲು ಭಾರತದ 'ಉಕ್ಕಿನ ಮನುಷ್ಯ'ಸರ್ದಾರ್ ವಲ್ಲಭಭಾಯ್ ಪಟೇಲರನ್ನು ರೈತರು ಭೇಟಿಯಾದಾಗ ಅವರು ನೀಡಿದ ಸಲಹೆಯೇ ತಮ್ಮದೇ ಆದ ಸಹಕಾರ ಸಂಘಗಳನ್ನು ಆರಂಭಿಸುವುದು. ಪ್ರಪ್ರಥಮ ಸಹಕಾರ ಸಂಘದಗ್ರಾಮ ಸಭೆ ಧೀಮಂತ ನಾಯಕಮಾಜಿ ಪ್ರಧಾನಿ ಶ್ರೀ ಮುರಾರ್ಜಿ ದೇಸಾಯಿರವರ ಅಧ್ಯಕ್ಷತೆಯಲ್ಲಿ ನಡೆಯಿತು ಎಂಬ ದೊಂದು ದಾಖಲೆಯ ವಿಷಯ. ಇದರೊಡನೆ ಶ್ರೀ ತ್ರಿಭುವನ ದಾಸ್ ಪಟೇಲರ ನಾಯಕತ್ವದಲ್ಲಿ ಅನೇಕ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಆರಂಭವಾದವು.

ಕೇಡಾ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟವು ಆರಂಭಗೊಂಡಿತು. ಯೋಗ, ಯೋಗದಂತೆ 'ಶ್ವೇತ ಕ್ರಾಂತಿಯ ಪಿತಾಮಹ' ಎಂದೇ ಗುರುತಿಸಲಾದ ಡಾ|| ವರ್ಗಿಸ್ ಕುರಿಯನ್ ರವರು ಅಮೇರಿಕೆಯಲ್ಲಿ ತಮ್ಮ ವಿಧ್ಯಾಬ್ಯಾಸ ಮುಗಿಸಿ ಭಾರತಕ್ಕೆ ಬಂದು ಒಕ್ಕೂಟದ, ಕೇಡಾ ಜಿಲ್ಲಾ ಕೇಂದ್ರವಾದ 'ಆನಂದ್' ಗೆಸರ್ಕಾರದ ಡೈರಿಯಲ್ಲಿ ಕೆಲಸಮಾಡಲು ಬಂದರು. ಒಕ್ಕೂಟಕ್ಕೆ 'ಆನಂದ್ ಮಿಲ್ಲರ್ಸ್ ಯೂನಿಯನ್ ಲಿಮಿಟೆಡ್' ಎಂದು ನಾಮಕರಣವಾಗಿತ್ತು. ಸಂಕ್ಷಿಪ್ತವಾಗಿ 'AMUL' ಎಂದು ಕರೆಯಲಾಗುತ್ತಿತ್ತು. ಸರ್ಕಾರದ ಡೈರಿಯನ್ನು ಒಕ್ಕೂಟವು ವಹಿಸಿ ಕೊಂಡಿತು. ವರ್ಗೀಸ್ ಕುರಿಯನ್ ರು ಒಕ್ಕೂಟದ ಮೆಕಾನಿಕಲ್ ಇಂಜಿನಿಯರ್ ರವರಾಗಿದ್ದವರು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಆದರು, ತ್ರಿಭುವನ್ ದಾಸ್‌ಪಟೇಲರು ಮುವತ್ತು ವರ್ಷಕ್ಕೆ ಮಿಗಿಲಾಗಿ ಅಮುಲ್‌ನ ಅಧ್ಯಕ್ಷರಾಗಿದ್ದರು. ಅಮುಲ್ ಮುಂಬೈಗೆ ಹಾಲು ಸರಬರಾಜು ಮಾಡಲು ಆರಂಭಿಸಿತು. ಕ್ರಮೇಣ ಪೋಲ್ಸನ್ ಕಂಪನಿ ವ್ಯಾಪಾರ ಕಳೆದುಕೊಂಡು ಅಮುಲ್ ಯಶಸ್ವಿಯಾಗಿ ಕಾರ್ಯನಿರ್ವಹಿಸಿತು. ಹಸುಗೂಸಿನ (ಎಳೆ ಮಕ್ಕಳ) 'ಅಮುಲ್ ಸ್ಪ್ರೆ 'ಯಶಸ್ಸು, ಪೋಲ್ಸಾಸ್ ಕಂಪನಿಯ ಮಾರಾಟ ವ್ಯವಸ್ಥೆ, ಇತರೆ ಖಾಸಗಿ ಕಂಪನಿಗಳೊಡನೆ ಸ್ಪರ್ಧೆ ಒಡ್ಡಿ ಅಮುಲ್ ಒಂದು ಬ್ರಾಂಡ್ ಆಗಿ ನಿರ್ಮಾಣವಾಯಿತು.

ಡಾ|| ವರ್ಗೀಸ್ ಕುರಿಯನ್‌ರವರ ದೂರದೃಷ್ಟಿಯಿಂದ ಆರು ಜಿಲ್ಲಾ ಸಹಕಾರ ಒಕ್ಕೂಟಗಳು ಒಟ್ಟುಗೂಡಿ ಗುಜರಾತ್ ಹಾಲು ಮಹಾಮಂಡಳಿ ಸ್ಥಾಪಿತವಾಯಿತು. ಯಾವುದೇ ಜಿಲ್ಲೆಯ ಒಕ್ಕೂಟದ ಉತ್ಪಾದನೆಯಾದರೂ 'ಅಮುಲ್' ಎಂಬ ಬ್ರಾಂಡ್ ಅಡಿಯಲ್ಲೇ ಮಹಾ ಮಂಡಳದಡಿಯಲ್ಲಿ ಮಾರಾಟ ಮಾಡಲಾಯಿತು. ಈಗಲೂ ಅದೇ ವ್ಯವಸ್ಥೆ ಇದೆ. ಇಂದು ಅದರ ವಹಿವಾಟು ಯಾವುದೇ ಬಹುರಾಷ್ಟ್ರೀಯ ಕಂಪನಿಗಿಂತ ಕಡಿಮೆ ಇಲ್ಲ. ಈ ಸಾಧನೆಗೆ ಕಾರಣ ಅತ್ಯತ್ತಮ ನಾಯಕತ್ವ, ಅತ್ಯುತ್ತಮ ವ್ಯವಸ್ಥಾಪನ ವ್ಯವಸ್ಥೆ, ಎಲ್ಲಕ್ಕಿಂತ ಮಿಗಿಲಾಗಿ ಮೂರು ಹಂತದ ವ್ಯವಸ್ಥೆಯಲ್ಲಿ ಪ್ರತಿ ಹಂತದ ಸದಸ್ಯರ ಬದ್ಧತೆ. ಪ್ರತಿ ಹಂತದಲ್ಲಿ ಆಯಾ ಸ್ಥರದ ಕರ್ತವ್ಯಗಳ ವಿಂಗಡಣೆ, ಜವಾಬ್ಧಾರಿಗಳ ಅರಿವು. ಪ್ರಾಥಮಿಕ ಹಂತದಲ್ಲಿ ಗುಣಮಟ್ಟದ ಹಾಲಿನ ಉತ್ಪಾದನೆ, ಸಂಗ್ರಹಣೆ, ಒಕ್ಕೂಟಕ್ಕೆ ಸರಬರಾಜು. ಒಕ್ಕೂಟದಲ್ಲಿ ಹಾಲಿನ ಸಂಗ್ರಹಣೆ, ಸಂಸ್ಕರಣೆ, ಉತ್ಪನ್ನಗಳ ತಯಾರಿ ಮಾರಾಟ. ಪ್ರಾಥಮಿಕ ಸಂಘಗಳ ಸದಸ್ಯರ ಶಿಕ್ಷಣ, ತರಬೇತಿ, ರಾಸುಗಳ ಪಾಲನೆ, ಪೋಷಣೆ, ಚಿಕಿತ್ಸೆ, ಅಗತ್ಯತೆಗಳ ಪೂರೈಕೆ. ಪ್ರಾಥಮಿಕ ಸಂಘಗಳ ಮೇಲ್ವಿಚಾರಣೆ ಅಂತರ ಜಿಲ್ಲೆ, ರಾಜ್ಯ ರಾಷ್ಟ್ರಮಟ್ಟದ ಮಾರಾಟ 'ರಫ್ತು, ಅಂತರ ಒಕ್ಕೂಟಗಳ ಸಂಬಂಧಗಳ ಜವಾಬ್ದಾರಿ ಮಹಾಮಂಡಳದ್ದು. ಇದೇ 'ಅಮುಲ್ ಮಾದರಿ'.

ಈ ಮಾದರಿಯಲ್ಲಿ ರಾಷ್ಟ್ರದ್ಯಂತ ವಿಸ್ತರಿಸಲು ಕಾರಣವಾದದ್ದು, ರಾಷ್ಟ್ರದ ಎರಡನೆಯ ಪ್ರಧಾನ ಮಂತ್ರಿ' ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿಗೆ ಅನ್ವರ್ಥವಾಗಿದ್ದ, 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷವಾಕ್ಯ ನೀಡಿದ ಲಾಲ್ ಬಹದ್ದೂರ್ ಶಾಸ್ತ್ರಿ ಯವರು. ಅವರು ಅಮುಲ್‌ನ ಪಶು ಆಹಾರ ಘಟಕದ ಉದ್ಘಾಟನಾ ಕಾರ್ಯಕ್ರಮಕ್ಕೆ ಭೇಟಿ ನೀಡಿದಾಗ ಈ ವ್ಯವಸ್ಥೆಯ ಬಗ್ಗೆ ಅರಿತು ಇದರಿಂದ ಗ್ರಾಮೀಣ ಜನತೆಗೆ ಆಗುತ್ತಿರುವ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ಪ್ರಯೋಜನ, ಅಭಿವೃದ್ಧಿ ಅರಿತು. ಕುರಿಯನ್‌ರವರೊಡನೆ ಚರ್ಚಿಸಿ 'ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮ' (ಎನ್.ಡಿ.ಡಿ.ಬಿ) ಮತ್ತು 'ರಾಷ್ಟ್ರೀಯ ಹೈನು ನಿಗಮ' (ಐ.ಡಿ.ಸಿ)ಸ್ಥಾಪನೆ ಮಾಡಿಎರಡಕ್ಕೆ ಡಾ.ವರ್ಗೀಸ್ ಕುರಿಯನ್ ರವರನ್ನೇ ಚೇರ್‌ಮನ್‌ರಾಗಿ ಮಾಡಿದುದರ ಫಲವಾಗಿ ರಾಷ್ಟ್ರದ್ಯಂತ 'ಅಮುಲ್ ಮಾದರಿ' ಯನ್ನು ಪುನರ್ ಸೃಷ್ಟಿ ಮಾಡುವ ಹೈನು ಅಭಿವೃದ್ಧಿ ಯೋಜನೆ ಕಾರ್ಯಗತಗೊಳಿಸಲಾಯಿತು.

ಕರ್ನಾಟಕದಲ್ಲಿ 'ಕರ್ನಾಟಕ ಹೈನು ಅಭಿವದ್ಧಿ ಯೋಜನೆ' ಅನುಷ್ಠಾನಕ್ಕಾಗಿ 'ಕರ್ನಾಟಕ ಹೈನು ಅಭಿವೃದ್ಧಿ ನಿಗಮ'

ಸ್ಥಾಪಿಸಲಾಯಿತು. ಆರಂಭದಲ್ಲಿ ಈ ಯೋಜನೆಗಾಗಿ ಕರ್ನಾಟಕದ ದಕ್ಷಿಣ ಭಾಗದ ಕೆಲವು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಕಾರಣ ಈ ಜಿಲ್ಲೆಗಳಲ್ಲಿ ಹಸುಗಳ ಅದರಲ್ಲಿಯೂ ಮಿಶ್ರ ತಳಿ ರಾಸುಗಳ ಸಾಕಾಣಿ ರೈತರು ಈಗಾಗಲೇ ತೊಡಗಿಸಿಕೊಂಡು ಹೆಚ್ಚಿನ ಹಾಲು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದು ಕಾರಣವಾಗಿತ್ತು. ಮೈಸೂರು ಪ್ರದೇಶದಲ್ಲಿ ಮೈಸೂರು ಮಹಾ ರಾಜರು ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದ್ದರು. ರಾಷ್ಟ್ರದಲ್ಲಿಯೇ ಪ್ರಪ್ರಥಮ ಕೃತಕ ಗರ್ಭಧಾರಣೆ 1935ರಲ್ಲಿ ಮೈಸೂರು ಅರಮನೆಯ ಹಸು ಸಾಕಾಣೆ ಕೇಂದ್ರದಲ್ಲಿ ಆಗಿತ್ತು ಎಂಬುದೊಂದು ದಾಖಲೆ. ಎಂ.ವಿ.ಕೃಷ್ಣಪ್ಪರವರು ಕೇಂದ್ರದಲ್ಲಿ ಸಚಿವರಾಗಿದ್ದು, ಅನೇಕ ಹೈನುಗಾರಿಕೆ ಅಭಿವೃದ್ಧಿ ಯೋಜನೆಗಳು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲು ಕಾರಣೀಭೂತರಾದರು. ಈ ಕಾರಣಕ್ಕಾಗಿ ಎನ್.ಡಿ.ಡಿ.ಬಿ. ದಕ್ಷಿಣ ಕರ್ನಾಟಕದ ಭಾಗವನ್ನು ಪ್ರಥಮಹಂತದಲ್ಲಿ ಯೋಜನೆ ಅನುಷ್ಠಾನಕ್ಕೆ ಆಯ್ಕೆ ಮಾಡಿತು.

ಆರಂಭದಲ್ಲಿ ವಿಶ್ವ ಬ್ಯಾಂಕ್‌ನ ನೆರವು ರೂ. 50 ಕೋಟಿಯಿಂದ ಯೋಜನೆ ಆರಂಭಗೊಂಡಿತು. ಎನ್.ಡಿ.ಡಿ.ಬಿ. ಯತಾಂತ್ರಿಕ ನೆರವು, ಐ.ಡಿ.ಸಿ. ಮೂಲಕ ಆರ್ಥಿಕ ನೆರವು ದೊರೆಯಿತು. ತದ ನಂತರದಲ್ಲಿ 'ಯೂರೋಪಿಯನ್ ಎಕನಾಮಿಕ್ ಕಮ್ಯೂನಿಟಿ'(ಇ.ಇ.ಸಿ) ತನ್ನ ಹೆಚ್ಚುವರಿ ಹಾಲಿನ, ಹಾಲಿನ ಪುಡಿಯ ಮಾರಾಟದ ಹಣವನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಒದಗಿಸಿತು. ಅದರಂತೆ ಭಾರತದಲ್ಲಿ ಆ ನೆರವಿನಿಂದ 'ಆಪರೇಷನ್ ಫ್ಲಡ್'(ಕ್ಷಿರಧಾರ) ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಅದರಂತೆ ಕರ್ನಾಟಕದಲ್ಲಿ ಕ್ಷೀರಧಾರ–I ( 1978– 1981)ಕ್ಷೀರಧಾರ– II(1981–1985) ಕ್ಷೀರಧಾರ– III (1985–96)ರವರೆಗೆ ಅನುಷ್ಟಾನಗೊಳಿಸಲಾಯಿತು. ಭಾರತದಲ್ಲಿ 1970ರಲ್ಲಿ ಭಾರತೀಯ ಪ್ರತಿ ಪ್ರಜೆಗೆ ಲಭ್ಯ ಹಾಲಿನ ಪ್ರಮಾಣ110 ಮಿ.ಲಿ. ಯೋಜನೆಯ ಗುರಿ 220 ಮಿ.ಲಿ. ಯೋಜನೆ ಅಂತ್ಯಗೊಳ್ಳುವ ವೇಳೆಗೆ240 ಮಿ.ಲಿ. ತಲುಪಲಾಗಿತ್ತು. 2011 – 12 ರ ವೇಳೆಗೆ 127.9ಮೆಟ್ರಿಕ್ ಟನ್ ಹಾಲು ಉತ್ಪಾದನೆಯಾಗಿದ್ದು ಹಾಲಿನ ಲಭ್ಯ ಪ್ರಮಾಣ 290 ಮಿ.ಲೀ. 2020–21 ರ ವೇಳೆಗೆ 174ಮೆಟ್ರಿಕ್‌ಟನ್ ಉತ್ಪಾದನೆಯಾಗಿದ್ದು ಹಾಲಿನ ಲಭ್ಯತೆ ಪ್ರಮಾಣ 400 ಮಿ.ಲೀ. ತಲುಪಿದೆ ಎಂಬದು ಭಾರತದ ಹೆಗ್ಗಳಿಕೆಯಾಗಿದ್ದು ಅಮೇರಿಕೆಯ ಉತ್ಪನ್ನ ಮೀರಿ ವಿಶ್ವಕ್ಕೆ ಮೊದಲ ಸ್ಥಾನ ತಲುಪಿದೆ. ರಾಷ್ಟ್ರದಲ್ಲಿ 15 ರಾಜ್ಯ ಸರಕಾರ ಮಹಾಮಂಡಳಗಳು, 189 ಜಿ.ಸ.ಹಾ.ಉ. ಒಕ್ಕೂಟಗಳು 1.56ಲಕ್ಷ ಹಾಲು ಉತ್ಪಾದಕರ ಸಹಕಾರ ಸಂಘಗಳು, 2 ಕೋಟಿಗೂ ಮೀರಿದ ಜನಸಂಖ್ಯೆ, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದು 19 ಕೋಟಿ ಹಸು 11 ಕೋಟಿ ಎಮ್ಮೆಗಳ ಸಂಗೋಪನೆ ಯಾಗುತ್ತಿದೆ ಎಂಬುದೊಂದು ಅಂದಾಜು.

ಈ ಪ್ರಗತಿಗೆ ಕಾರಣ ಸಹಕಾರಿ ಹೈನು ವಲಯದಲ್ಲಿ ಅಳವಡಿಸಿಕೊಂಡಿರುವ 'ಅಮುಲ್ ಮಾದರಿ' ವ್ಯವಸ್ಥೆ ಮತ್ತು ಅದು ವೃತ್ತಿಪರ ವ್ಯವಸ್ಥಾಪನೆ ವ್ಯವಸ್ಥೆಯಾಗುತ್ತದೆ. ಅಲ್ಲದೆ ಹೈನುಗಾರಿಕೆಯ ವಿಸ್ತರಣಾ ಸೇವಾ ವ್ಯವಸ್ಥೆಯಾಗಿರುತ್ತದೆ. ವೃತ್ತಿ ಪರತೆ ಸಹಕಾರ ಮೂರು ಹಂತದ ವ್ಯವಸ್ಥೆಯಲ್ಲಿ ಒಳಗೊಂಡಿರುವ ಮೂರು ಭಾಗೀದಾರರು. 1) ಸದಸ್ಯರು 2) ಆಡಳಿತ ಮಂಡಳಿ 3) ಸಿಬ್ಬಂದಿ ವರ್ಗ, ಆಧುನಿಕ ಹೈನುಗಾರಿಕೆಯಲ್ಲಿ ತೊಡಗಿಸಿ ಕೊಂಡಿರುವ ರೈತ ಪುರುಷರು ಮತ್ತು ಮಹಿಳೆಯರು ಅವರನ್ನು ಯಶಸ್ವಿ ಹೈನುಗಾರರನ್ನಾಗಿ ರೂಪಿಸಿರುವ ಒಕ್ಕೂಟದ ಮತ್ತು ಪಶು ಸಂಗೋಪನಾ ಇಲಾಖೆಯ ವಿಸ್ತರಣಾಧಿಕಾರಿಗಳು.

ಈ ಮೂರು ಹಂತದ ವ್ಯವಸ್ಥೆಯಡಿಯಲ್ಲಿ ಬುನಾದಿ, ತಳಪಾಯ, ತಳಹದಿ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು. ಸಂಘದ ಸದಸ್ಯರು ಪ್ರಜ್ಞಾವಂತರು, ಬದ್ಧತೆ ಉಳ್ಳವರಾಗಿದ್ದು, ಶುದ್ಧ, ಉತ್ತಮ ಗುಣಮಟ್ಟದ ಹಾಲು ಉತ್ಪಾದನೆ ಮಾಡಿ ಸಹಕಾರ ಸಂಘಕ್ಕೆ ಸರಬರಾಜು ಮಾಡಬೇಕು. ಹಾಲು ಉತ್ಪಾದನೆಯಲ್ಲಿ ಅವರು ವೃತ್ತಿಪರರಾಗಿ ರಬೇಕು. ಎಲ್ಲ ಆಧುನಿಕ ವೈಜ್ಞಾನಿಕ ವಿಧಿ ವಿಧಾನಗಳನ್ನು ಅನುಸರಿಸಬೇಕು. ಸಹಕಾರ ಸಂಘದಿಂದ ಒದಗಿಸುವ ಪಶುಚಿಕಿತ್ಸೆ, ಪಶು ಸಂಗೋಪನೆ, (ಕೃತಕ ಗರ್ಭಧಾರಣೆ, ಗರ್ಭ ಪರೀಕ್ಷೆ, ಕರುಗಳ ಪೋಷಣೆ ಇತರೆ)ಮೇವು, ಪಶು ಆಹಾರ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವುದು. ಉತ್ಪಾದನೆಯಾದ ಹಾಲನ್ನು ಬದ್ಧತೆಯಿಂದ ಸಹಕಾರ ಸಂಘಕ್ಕೆ ಸರಬರಾಜು ಮಾಡುವುದು. ಸಹಕಾರ ಸಂಘವು ತನ್ನ ಲಾಭದಲ್ಲಿ ಶೇ. 65ಬೋನಸ್ ವಿತರಣೆ ಮಾಡುವುದು. ರಾಸು

ಅಭಿವೃದ್ಧಿ ನಿಧಿ, ಧಾನ ನಿಧಿಗಳ ಸದ್ಬಳಕೆ. ಒಕ್ಕೂಟದಿಂದ ಹೈನು ಅಭಿವೃದ್ಧಿಗೆ ಒದಗಿಸುವ ಸಕಲ ಸೌಲಭ್ಯಗಳು, ಸದಸ್ಯರಿಗೆ ಒದಗಿಸುವ ಸೌಕರ್ಯಗಳ (ವಿಮೆ, ಇತರೆ) ನ್ನು ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಮಾಡುವುದು. ಒಕ್ಕೂಟದಿಂದ ಸಹಕಾರ ಸಂಘದ ಪರಿಶೀಲನೆ, ಪರಿವೀಕ್ಷಣಿಗೆ ಒಳಪಡುವುದು, ಅಂಕಿ ಅಂಶಗಳನ್ನು ಒದಗಿಸುವುದು ಸಂಘದ ಆರೋಗ್ಯಕರ ಕಾರ್ಯಾಚರಣೆಯಿಂದ ಅತಿ ಅವಶ್ಯ.

ಒಕ್ಕೂಟವು ತಪ್ಪದೇ ಪ್ರಾಥಮಿಕ ಸಂಘಗಳಿಂದ ಹಾಲು ಸಂಗ್ರಹಣೆಗೆ ವ್ಯವಸ್ಥಿತ ಕ್ರಮ ಕೈಗೊಳ್ಳಬೇಕು. ಹಾಲಿನ ಸಂಸ್ಕರಣೆ, ಸಂಗ್ರಹಣೆ, ಉತ್ಪನ್ನಗಳ ತಯಾರಿ ಮತ್ತು ಮಾರುಕಟ್ಟೆ ಮಾಡಬೇಕು. ತನ್ನ ತಾಂತ್ರಿಕ ಅಧಿಕಾರಿಗಳು ಉದಾ:ಪಶು ವೈದ್ಯಾಧಿಕಾರಿಗಳು, ಕೃಷಿ ಅಧಿಕಾರಿಗಳು, ಡೈರಿ ತಂತ್ರಜ್ಞರು, ವಿಸ್ತರಣಾಧಿಕಾರಿಗಳು, ಮೂಲಕ ಪ್ರಾಥಮಿಕ: ಸಹಕಾರ ಸಂಘದ ಸದಸ್ಯರಿಗೆ ಸೌಕರ್ಯ, ಸೌಲಭ್ಯ, ಸಲಕರಣೆಗಳನ್ನು ತಲುವುವಂತೆ ಮಾಡಬೇಕು. ಅದಕ್ಕೆ ತಕ್ಕ ವಿಸ್ತರಣಾ ಕಾರ್ಯಕ್ರಮಗಳು, ಶಿಕ್ಷಣ, ತರಬೇತಿ ಕಾಯ ಕ್ರಮಗಳನ್ನು ಅನುಷ್ಠಾನಗೊಳಿಸುವುದು.

ಮಹಾಮಂಡಳವು ಅಂತರ ಒಕ್ಕೂಟ ಸುಸಂಬಂಧಗಳ ಉಸ್ತುವಾರಿ, ಉತ್ಪನ್ನಗಳ ತಯಾರಿ, ಮಾರಾಟ, ರಫ್ತು, ಜಾಹಿರಾತು, ಬ್ರಾಂಡ್ ಆಗಿ ರೂಪುಗೊಳ್ಳುವ ವ್ಯವಸ್ಥೆ ರೂಪಿಸುವುದು. ವ್ಯಕ್ತಿಸದಸ್ಯರ (ರೈತರ)ಶಿಕ್ಷಣ ತರಬೇತಿ,ಆಡಳಿತ ಮಂಡಳಿ ಸದಸ್ಯರ ತರಬೇತಿ ಶಿಕ್ಷಣ, ಸಿಬ್ಬಂದಿ ತರಬೇತಿ ಶಿಕ್ಷಣ. ಒಟ್ಟಾರೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಒತ್ತು ನೀಡುವುದೇ ಆಗಿದೆ.

ಹೈನುಗಾರಿಕೆಯಲ್ಲಿ ಮಹಿಳೆಯರ ಪಾತ್ರ ಅತಿ ಮುಖ್ಯ. ಅದಕ್ಕಾಗಿ ಭಾರತ ಸರ್ಕಾರ ರೂಪಿಸಿರುವ 'ಸ್ಟೆಪ್' ಯೋಜನೆ (support training fore mployment programme for women STEP)ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ಅನೇಕ ಮಹಿಳೆಯರೇ ಸದಸ್ಯರಿರುವ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ಮಹಿಳಾ ಸಶಕ್ತತೆಗೆ ಕಾರಣವಾಗಿದೆ.

ಕರ್ನಾಟಕದಲ್ಲಿ ಸರ್ಕಾರವು ಪ್ರತಿ ಲೀಟರ್ ಹಾಲಿಗೆ ರೂ.5/– ಪ್ರೋತ್ಸಾಹ ಧನ ನೀಡಿರುವುದು ಹೈನು ಅಭಿವೃದ್ಧಿಗೆ ಸಹಕಾರಿಯಾಗಿದೆ.

ಒಟ್ಟಾರೆಯಾಗಿ ಸಹಕಾರದ ಮೂರು ಹಂತದ ವ್ಯವಸ್ಥೆಯಲ್ಲಿ ಪ್ರತಿಹಂತದಲ್ಲೂ ತನ್ನ ಕರ್ತವ್ಯ ಜವಾಬ್ದಾರಿಗಳು ಸ್ಪಷ್ಟ ಹಂಚಿಕೆಯಾಗಿದ್ದು, ಸಹಕಾರ ಸಂಘಗಳಲ್ಲಿ ಸಹಕಾರ ತತ್ವದಲ್ಲಿನ ಲಂಭಾಕೃತಿಯ (verticle) ಸಂಬಂಧಗಳು ಸೌಹಾರ್ದಯುತವಾಗಿರುವುದರಿಂದ ಕರ್ನಾಟಕದಲ್ಲಿ 'ನಂದಿನಿ' ಬ್ರಾಂಡ್ ಯಶಸ್ವಿಯಾಗಿದ್ದು, 'ಶ್ವೇತಕ್ರಾಂತಿ'ಗೆ ಕಾರಣವಾಗಿದೆ. ಅನೇಕ ಅಬಲರಿಗೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯಕ್ಕೆ ಕಾರಣವಾಗಿದೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಅಳಿಸಲಾಗದ ಹೆಜ್ಜೆ ಗುರುತುಗಳಾಗಿ ಉಳಿದಿದೆ.

**********************************************************************************************

# 55. ಸಹಕಾರ ಮಾರುಕಟ್ಟೆ ಮತ್ತು ರೈತರ ಬಲವರ್ಧನೆ

ಭಾರತದಲ್ಲಿ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ನೀತಿ ಅಳವಡಿಸಿಕೊಂಡು 03 ದಶಕಗಳೇ ಸಂದಿವೆ. ಆಗಿನಿಂದ 'ಅಭಿವೃದ್ಧಿ' ಹೊಂದಿದ್ದೇವೆ ಎಂಬ ದರಲ್ಲಿ ಅನುಮಾನವಿಲ್ಲ. 03 ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ 05 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ 'ಪ್ರಗತಿ' ಯತ್ತ ಹೆಜ್ಜೆ ಇಡುತ್ತಿದ್ದೇವೆ ಇದು ಹೆಮ್ಮೆಯ ಸಂಗತಿ. ಆದರೆ ಇದರಲ್ಲಿ ಸಾಮಾಜಿಕ ನ್ಯಾಯ ಅಡಗಿದೆಯೇ?ಬಡವ, ಬಲ್ಲಿದನ ನಡುವೆ ಅಂತರ ಕುಗ್ಗಿದೆಯೇ?ಈ ಹಿನ್ನೆಲೆಯಲ್ಲಿ ಭಾರತದ ಕೃಷಿಕರ ಪಾಲು ಶೇ 24 ಪಾಲು ಅದು ಕಡಿಮೆ ಏನೂ ಅಲ್ಲ. 2020– 21 ರಲ್ಲಿ ವಿಶ್ವದ ಆಹಾರ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. 275 ದಶಲಕ್ಷ ಟನ್‌ಗಳು. ಭತ್ತ (ಅಕ್ಕಿ) 121.50,'109.00 ಗೋಧಿ, 12.00 ಸಿರಿಧಾನ್ಯಗಳು, (ಇದು ವಿಶ್ವದ

ಉತ್ಪಾದನೆಯ ಶೇ 41) 28.60 ಮುಸುಕಿನ ಜೋಳ (ಮೆಕ್ಕೆ, ಗೋವಿನ ಜೋಳ) ದಶಲಕ್ಷ ಟನ್‌ಗಳು ಇದಲ್ಲದೆ ಕಬ್ಬು, ಹತ್ತಿ, ಎಣ್ಣೆ ಬೀಜಗಳು ಉತ್ಪಾದನೆಯೂ ಅಧಿಕವಾಗಿದೆ.

'ರೈತ ನೇಗಿಲಯೋಗಿ' 'ರೈತ ರಾಷ್ಟ್ರದ ಬೆನ್ನೆಲುಬು' 'ಕೋಟಿ ವಿಧ್ಯೆಗಿಂತ ಮೇಟಿ ವಿಧ್ಯೆಯೇ ಮೇಲು' ಎಂದು ರೈತರ ಬಗ್ಗೆ , ರೈತ ಉತ್ಪಾದಿಸುವ ಉತ್ಪನ್ನಗಳಿಲ್ಲದಿದ್ದಲ್ಲಿ ಮಾನವ ಬದುಕಲು ಸಾಧ್ಯವೇ ಇಲ್ಲ.

ಅವರೇ ನಮಗೆ 'ಅನ್ನಧಾತರು'. ಆದರೂ ಅವರು ಬೆಳೆದ ಉತ್ಪನ್ನಕ್ಕೆ ಅವರೇ ಬೆಲೆ ನಿಗದಿಗೊಳಿಸಿ ಮಾರಾಟ ಮಾಡುವ ಪರಿಸ್ಥಿತಿ ಇದೆಯೇ? ಖಂಡಿತ ಇಲ್ಲ. 'ಬೇಡಿಕೆಮತ್ತು ಸರಬರಾಜು' ಶಕ್ತಿಗಳು ನಿರ್ಣಯಿಸುತ್ತಿವೆ. ಮಧ್ಯಮವರ್ತಿಗಳ ಪಾತ್ರ ಬಹಳ ಮುಖ್ಯವಾಗಿದೆ. ಬೆಳೆದ ರೈತನಿಗಿಂತ ಹೆಚ್ಚಿನ ಪ್ರತಿಫಲ 'ಮಧ್ಯವರ್ತಿ'ಗಳ ಪಾಲಾಗುತ್ತಿದೆ. ಗ್ರಾಹಕ ಅತಿ ಹೆಚ್ಚಿನ ಧರ ನೀಡಿ ಖರೀದಿಸುತ್ತಾನೆ.

ಉತ್ಪಾದಕರು ಅತಿ ಕಡಿಮೆ ಬೆಲೆ ಪಡೆಯುತ್ತಾರೆ ಅಥವ ನಷ್ಟ ಅನುಭವಿಸುತ್ತಿದ್ದಾರೆ. ಭಾರತದ ಪ್ರಜೆಗಳಾದ ನಾವು 75 ರ ಸ್ವಾತಂತ್ರ್ಯ ಸಂಭ್ರಮದಲ್ಲಿದ್ದೇವೆ. ಈ ಸಂದರ್ಭದಲ್ಲಿ, ಈ ಸಂಕಷ್ಟದ ನಿವಾರಣೆಗೆ ಆರ್ಥಿಕ ಸಬಲತೆ ಮತ್ತು ಸಾಮಾಜಿಕ ನ್ಯಾಯ, ಆರ್ಥಿಕ ಅಸಮಾನತೆಯ ನಿವಾರಣೆಗೆ ಇರುವ ಏಕೈಕ ಮಾರ್ಗವಾದ 'ಸಹಕಾರ'ವು ಹೇಗೆ ಸಹಾಯಕ್ಕೆ ಬಂದಿದೆ. ಎಲ್ಲಿ, ಏಕೆ, ವಿಫಲವಾಗಿದೆ ಎಂಬುದನ್ನು ಸಹಕಾರಿಗಳಾದ ನಾವು ಆತ್ಮಾವಲೋಕನ ಮಾಡಿಕೊಳ್ಳಲು ಇದು ಉತ್ತಮ ಸಮಯ.

ಭಾರತ ಸ್ವಾತ್ರಂತ್ಯ ನಂತರ ಆರ್ಥಿಕ ಅಭಿವೃದ್ಧಿಗಾಗಿ ಮಿಶ್ರ ಆರ್ಥಿಕ ನೀತಿಯನ್ನು ಅನುಸರಿಸಿತು. ಯೋಜನಾತ್ಮಕ ಬೆಳವಣಿಗೆಗೆ ಒತ್ತು ನೀಡಲಾಯಿತು. ವಿಜ್ಞಾನ, ತಂತ್ರಜ್ಞಾನಗಳಿಗೆ ಅಧ್ಯತೆ ನೀಡಲಾಯಿತು.

ಅದರಂತೆ ಕೃಷಿ, ಕೃಷಿ ಅವಲಂಬಿತ, ಕೃಷಿ ಪೂರಕ ಚಟುವಟಿಕೆಗಳಿಗೆ ಆಧ್ಯತೆ ನೀಡಲಾಯಿತು. ಕೃಷಿ ವಿಶ್ವವಿದ್ಯಾಲಯ, ಸಂಶೋಧನಾ ಕೇಂದ್ರಗಳು, ಹೆಚ್ಚು ಇಳುವರಿ ತಳಿಗಳನ್ನು ಹೊರತಂದರು. ನೀರಾವರಿ ಸೌಲಭ್ಯಗಳು, ರಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕ ಬಳಕೆಗೆ ಬಂದವು. ಆಧುನಿಕ ಬೇಸಾಯ ಪದ್ಧತಿಗಳು ರೂಡಿಗೆ ಬಂದವು. ರೈತರು ತಮ್ಮ ಉತ್ಪಾದನೆಯನ್ನು ಹೆಚ್ಚಿಸಿದರು. 'ಹಸಿರು ಕ್ರಾಂತಿ'ಗೆ ಕಾರಣವಾಯಿತು. ರಾಷ್ಟ್ರ ಆಹಾರ ಕೊರತೆ ನೀಗಿಸಿ ಆಹಾರ ರಫ್ತು ಮಾಡಲು ಆರಂಭಿಸಿತು. ಇದರ ಹಿಂದೆ ಸರ್ಕಾರಕ್ಕೆ ಬೆಂಬಲವಾಗಿ ನಿಂತವಲಯ 'ಸಹಕಾರ ವಲಯ'. ಸರ್ಕಾರವು ಸಹಕಾರಕ್ಕೆ ಬೆಂಬಲವಾಗಿ, ಪೋಷಕವಾಗಿ ವರ್ತಿಸಿತು. ಕೃಷಿಉತ್ಪನ್ನ, ಉತ್ಪನ್ನಗಳ ಸಂಗ್ರಹಣೆ, ಸಾಗಾಣೆ, ಸಂಸ್ಕರಣೆ (ರೂಪಾಂತರ, ಮೌಲ್ಯವರ್ಧನೆ) ಮಾರಾಟ ಮತ್ತು ಸರ್ಕಾರದ ಏಜೆನ್ಸಿಗಳಿಗೆ ಮಾರಾಟ ಅಲ್ಲದೇ ಸಾರ್ವಜನಿಕ ಆಹಾರ ವಿತರಣೆ ವ್ಯವಸ್ಥೆಯಲ್ಲಿ ಭಾಗಿ ಮತ್ತು ಕಾರಣವಾಗಿದ್ದು, ಭಾರತಾದ್ಯಂತ ತಾಲ್ಲೂಕ್ (ಬ್ಲಾಕ್) ಒಂದರಂತೆ ಪ್ರಾ.ಕೃ.ಪ.ಸ.ಸಂ. ಗಳ ಮತ್ತು ರೈತರ ಸದಸ್ಯತ್ವ ಉಳ್ಳ ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರುಕಟ್ಟೆ ಮತ್ತು ಸಂಸ್ಕರಣೆ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ಇವುಗಳದೇ ಆದರಾಜ್ಯ ಮಹಾಮಂಡಳಗಳು ಮತ್ತು ರಾಷ್ಟ್ರೀಯ ಮಹಾಮಂಡಳ (ನ್ಯಾ ಫೆಡ್) ಅಸ್ತಿತ್ವಕ್ಕೆ ಬಂದಿವೆ.

ಈ ಜಾಲದಿಂದ ಸಹಕಾರ ಮಾರುಕಟ್ಟೆ ವಲಯವು ಅದರಲ್ಲಿಯೂ 'ಆಹಾರ ಧಾನ್ಯ' ಗಳು ಮತ್ತು ಪ್ರಾದೇಶಿಕ ಭೌಗೋಳಿಕ ಪರಿಸರದನ್ವಯ ಉತ್ಪನ್ನಗಳಾದ ಹತ್ತಿ, ಬೇಳೆ ಕಾಳುಗಳು, ಎಣ್ಣಿ ಬೀಜಗಳು, ಈರಳ್ಳಿ, ಆಲೂಗೆಡ್ಡೆ, ವಾಣಿಜ್ಯ ಉತ್ಪನ್ನಗಳಿಗೆ ಉತ್ಪನ್ನ ಮಾಡಲು ಅಗತ್ಯ ರಸಗೊಬ್ಬರ, ಬೀಜ, ಕ್ರಿಮಿ, ಕೀಟನಾಶಕಗಳು, ಕೃಷಿ ಯಂತ್ರೋಪಕರಣ ಗಳನ್ನು ಒದಗಿಸುವದಲ್ಲದೇ ಉತ್ಪನ್ನವನ್ನು ಖರೀದಿಸಿ ಸಂಸ್ಕರಿಸಿ ಮಾರಾಟ ಮಾಡಲಾಗುತ್ತಿತ್ತು. ಅದಕ್ಕಾಗಿ ಸರ್ಕಾರದ ಸಹಾಯದಿಂದ (ರಾಜ್ಯ ಸರ್ಕಾರ, ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ–ಎನ್. ಸಿ.ಡಿ.ಸಿ) ಯ ಯೋಜನೆಗಳಿಂದ ಅನುಷ್ಠಾನಗೊಳಿಸಲು ಸಾಧ್ಯವಾಯಿತು.

ಈ ಸಹಕಾರ ಜಾಲದಿಂದ ಉತ್ಪಾದನೆಯ ಅಗತ್ಯ ಹಿಂಬದಿಯ ಸರಪಳಿ ಕೊಂಡಿಗಳು (Backward linkages)

ಮತ್ತು ಮುಂಬದಿಯ ಮಾರುಕಟ್ಟೆ ಸರಪಳಿ ಕೊಂಡಿಗಳನ್ನು(forward linkages) ಬಲಪಡಿಸಿ ಮಧ್ಯವರ್ತಿ ರಹಿತ ವಹಿವಾಟು ನಡೆಸಿ ರೈತರಿಗೆ ನ್ಯಾಯಯುತ ಬೆಲೆದೊರೆಕಿಸಿ ಕೊಡುವಲ್ಲಿ ಸಫಲವಾಗಿತ್ತು. ಹಾಲಿ 'ಉತ್ತುಂಗ' ಸಂಸ್ಥೆಗಳು ಮಾತ್ರಕಾರ್ಯ ನಿರ್ವಹಿಸುತ್ತಿದ್ದು ಪ್ರಾಥಮಿಕ, ಮಾಧ್ಯಮಿಕ, ಉತ್ತುಂಗಸಂಸ್ಥೆಗಳ ನಡುವೆಸಾವಯವ ಸಂಬಂಧಗಳು ಕಳಚಿಕೊಂಡಿವೆ. ರಾಷ್ಟ್ರಾದ್ಯಂತ 'ಸಹಕಾರ ಸಕ್ಕರೆ ಕಾರ್ಖಾನೆಗಳು' ಸಹಕಾರ ಹತ್ತಿ ನೂಲಿನ ಗಿರಣಿಗಳು 'ಸಹಕಾರ ಎಣ್ಣೆ ಗಿರಣಿಗಳು' ಮತ್ತು ಅವುಗಳ ಶೃಂಗ ಸಂಘಗಳು ಯಶಸ್ವಿಯಾಗಿ ನಡೆದು ಅಲ್ಲಿನ ರೈತರಿಗೆ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ಒದಗಿಸಿ ಕೊಡುವುದಲ್ಲದೇ ಇತರೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆರ್ಥಿಕ ಮತ್ತು ಸಾಮಾಜಿಕ, ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಗಿತ್ತು. ಒಟ್ಟಾರೆ ಈ ವಲಯಗಳಲ್ಲಿ ಸಹಕಾರದ ಪಾಲು ಶೇ 70–80 ರಷ್ಟಿದ್ದು ಸಹಕಾರ ಈ ವಲಯಗಳಲ್ಲಿ ತನ್ನ ಛಾಪು ಮೂಡಿಸಿತ್ತು. ಆದರೆ ಇದೆಲ್ಲವೂ ಭೂತಕಾಲ ಆಗಿದ್ದು, ವರ್ತಮಾನ ಮತ್ತು ಭವಿಷ್ಯವೇನು? ಎಂಬುದು ಕಳವಳಕಾರಿಯಾಗಿದೆ. ಅಲ್ಲಲ್ಲಿ ಕೆಲವು 'ಹಸಿರು' ವಲಯಗೋಚರವಾಗುತ್ತಿರುವುದು (ವಾಣಿಜ್ಯ ಉತ್ಪನ್ನ ಮಾರುಕಟ್ಟೆ, ಉದಾ: ಅಡಕೆ ) ಸಂತೋಷದಾಯಕ ಆದರೆ ಖಾಸಗಿ ವಲಯ ಪ್ರಬುದ್ಧ ಮಾನಕ್ಕೆ ಬಂದಿರುವುದನ್ನುಕ ಾಣುತ್ತಲಿದ್ದೇವೆ.

ಭಾರತದಲ್ಲಿ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ನೀತಿ ಅಳವಡಿಸಿಕೊಂಡು 03 ದಶಕಗಳೇ ಸಂದಿವೆ. ಆಗಿನಿಂದ 'ಅಭಿವೃದ್ಧಿ' ಹೊಂದಿದ್ದೇವೆ ಎಂಬದರಲ್ಲಿ ಅನುಮಾನವಿಲ್ಲ. 03 ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ 05 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ 'ಪ್ರಗತಿ'ಯತ್ತ ಹೆಜ್ಜೆ ಇಡುತ್ತಿದ್ದೇವೆ ಇದು ಹೆಮ್ಮೆಯ ಸಂಗತಿ. ಆದರೆ ಇದರಲ್ಲಿ ಸಾಮಾಜಿಕ ನ್ಯಾಯ ಅಡಗಿದೆಯೇ? ಬಡವ, ಬಲ್ಲಿದನ ನಡುವೆ ಅಂತರ ಕುಗ್ಗಿದೆಯೇ? ಈ ಹಿನ್ನೆಲೆಯಲ್ಲಿ ಭಾರತದ ಕೃಷಿಕರ ಪಾಲುಶೇ 24 ಪಾಲು ಅದುಕಡಿಮೆ ಏನೂ ಅಲ್ಲ. 2020– 21 ರಲ್ಲಿ ವಿಶ್ವದ ಆಹಾರ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. 275 ದಶಲಕ್ಷ ಟನ್‌ಗಳು.ಭತ್ತ (ಅಕ್ಕಿ)121.50,'109.00 ಗೋಧಿ, 12.00 ಸಿರಿಧಾನ್ಯಗಳು, (ಇದುವಿಶ್ವದಉತ್ಪಾದನೆಯ ಶೇ 41) 28.60 ಮುಸುಕಿನ ಜೋಳ(ಮೆಕ್ಕೆ, ಗೋವಿನ ಜೋಳ) ದಶಲಕ್ಷ ಟನ್‌ಗಳು ಇದಲ್ಲದೆಕಬ್ಬು, ಹತ್ತಿ, ಎಣ್ಣೆ ಬೀಜಗಳು ಉತ್ಪಾದನೆಯೂ ಅಧಿಕವಾಗಿದೆ. 20 21 – 22ರಲ್ಲಿ 49.46 ದಶಲಕ್ಷ ಡಾಲರ್ ಮೌಲ್ಯದಷ್ಟು ಆಹಾರ ರಫ್ತು ಮಾಡಲಾಗಿದೆ. ಇದೆಲ್ಲ ಹೆಗ್ಗಳಿಕೆಯ ನಡುವೆ ಭಾರತದ ಜನಸಂಖ್ಯೆ 140 ಕೋಟಿ ಮುಟ್ಟುತ್ತಿದ್ದು 2030ರವೇಳೆಗೆ 150ಕೋಟಿ ಮುಟ್ಟುತ್ತದೆ. ಭಾರತದ ಶೇ 84 ಕುಟುಂಬಗಳ ಆದಾಯವು 2021 ಕ್ಕಿಂತ ಗಣನೀಯವಾಗಿ ಕುಸಿದಿದೆ. ಅದೇ ಹೊತ್ತಿನಲ್ಲಿ ಸಹಸ್ರ ಕೋಟ್ಯಾಧಿಪತಿಗಳ ಸಂಖ್ಯೆ102 ರಿಂದ 142 ಕ್ಕೆ ಏರಿದೆ. ತಳ ಮಟ್ಟದಲ್ಲಿ ಇರುವ 55.2 ಕೋಟಿ ಜನರಲ್ಲಿ ಒಟ್ಟಾಗಿ ಇರುವ ಸಂಪತ್ತು ಭಾರತದ ಅತ್ಯಂತ ಶ್ರೀಮಂತ 98 ವ್ಯಕ್ತಿಗಳ ಕೈಯಲ್ಲಿದೆ. ತಳಮಟ್ಟದಲ್ಲಿರುವ ಅರ್ಧದಷ್ಟು ಜನರಲ್ಲಿ ಶೇ.13 ರಷ್ಟು ಸಂಪತ್ತು ಮಾತ್ರ ಇದೆ. ಈ ಅಸಮಾನತೆಗೆ ಕಾರಣವಾದರೂ ಏನು? ಮುಂದುವರೆದು ಭಾರತ ಹಸಿವಿನ ಸೂಚ್ಯಂಕದಲ್ಲಿ 107 ನೇ ಸ್ಥಾನದಲ್ಲಿದೆ. ಭಾರತದಲ್ಲಿ ಮಕ್ಕಳ ಅಪೌಷ್ಠಿಕತೆ ಪ್ರಮಾಣ ಶೇ.19.3 ವಿಶ್ವದಲ್ಲಿಯೇ ಅತ್ಯಧಿಕ. 29.1 ಅಂಕ ಪಡೆದಿರುವ ಭಾರತ 'ಅಪಾಯಕಾರಿ' ಮಟ್ಟದಲ್ಲಿದೆ. ಇವೆಲ್ಲವೂ ಏನನ್ನು ಸೂಚಿಸುತ್ತದೆ. ಅಸಮಾನತೆ ಇದರಿಂದ ಸಮಾಜದಲ್ಲಿ ಪುಕ್ಷುಬ್ಧ ವಾತಾವರಣ ಸೃಷ್ಟಿಯಾಗುತ್ತದೆ. ರಾಜಕೀಯ ಅನಿಶ್ಚಿತತೆ, ಆರ್ಥಿಕತೆಯಲ್ಲಿ ಕುಂಠಿತ, ಸಮಾಜದಲ್ಲಿ ಊಹೆಗೆ ಎಟುಕಲಾರದ ಕಾಯ್ದೆ ಕಾನೂನು ಮೀರಿದ ಪುಕ್ಷುಬ್ದ ಸ್ಥಿತಿಗೆ ಕಾರಣವಾಗುತ್ತದೆ. ಇದಕ್ಕಾಗಿ ವಿಶ್ವ ಸಂಸ್ಥೆಯು 2030ರ ಒಳಗೆ 'ಬಡತನ' ನಿರ್ಮೂಲನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸುಸ್ಥಿರ ಬೆಳವಣಿಗೆಗೆ ಒತ್ತು ಕೊಡಬೇಕು ಎಂದು ತಿಳಿಸಿದೆ. ಇದಕ್ಕೆ ಉತ್ತರವಾಗಿ 'ಸಹಕಾರ' ಮಾದರಿಗೆ ಪ್ರಾಶಸ್ತ್ಯ ನೀಡಿದೆ. 'ಯಾರನ್ನೂ ಹಿಂದೆ ಬಿಡಬೇಡಿ' (leave no one behind) ಎಲ್ಲರನ್ನೂ ಒಳಗೊಂಡಂತ ಬೆಳವಣಿಗೆ / ಅಭಿವೃದ್ಧಿ ಈ ದಿನಗಳ ಅಗತ್ಯತೆ. ಇದು ಭಾರತದ ಗ್ರಾಮಗಳಲ್ಲಿ ನೆಲೆಸಿರುವ ಶೇ 60–70ರಷ್ಟು ಕೃಷಿ, ಕೃಷಿ ಪೂರಕ, ಕೃಷಿ ಅನಂಭಿತ ರೈತ ಮತ್ತು ಕೃಷಿ ಅವಲಂಬಿತ ವೃತ್ತಿಯಲ್ಲಿ ತೊಡಗಿರುವವರು ಮತ್ತು ಅಲ್ಲಿನ ಕೃಷಿ ಕಾರ್ಮಿಕರಿಂದ ಮಾತ್ರ ಸಾಧ್ಯ.

ಭಾರತದಲ್ಲಿ ಒಟ್ಟಾರೆ ರೈತರಲ್ಲಿ ಶೇ.80 ಕ್ಕಿಂತ ಹೆಚ್ಚು ಸಣ್ಣ ಮತ್ತು ಅತಿ ಸಣ್ಣ ರೈತರಿರುತ್ತಾರೆ. ಭೂ ಒಡೆತನ ಒಡೆಯುವಿಕೆಯಿಂದ ಸಂಖ್ಯೆ ಅಧಿಕಗೊಳ್ಳುತ್ತಿದೆ. ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಒಂದು

ಹೆಕ್ಟೇರ್‌ಗಿಂತ ಕಡಿಮೆ ಹಿಡುವಳಿ ಇರುವವರ ರೈತ ಸಂಖ್ಯೆ 69 ಲಕ್ಷ. ಪ್ರತಿ ರೈತರೂ ತಮ್ಮ ಉತ್ಪನ್ನವನ್ನು ವೈಯಕ್ತಿಕವಾಗಿ ಮಾರುಕಟ್ಟೆ ಮಾಡುವುದರಿಂದ ಶೋಷಣೆ ಮತ್ತು ನಷ್ಟಕ್ಕೆ ಒಳಗಾಗುತ್ತಿದ್ದಾರೆ.ಅವರ ಉತ್ಪನ್ನಕ್ಕೆ ನ್ಯಾಯಯುತ ಲಾಭದಾಯಕ ಬೆಲೆ ಸಿಗಬೇಕೆಂದರೆ ಸಂಘಟನಾತ್ಮಕ ಪ್ರಯತ್ನದಿಂದ ಮಾತ್ರ ಸಾಧ್ಯ. ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘಗಳು, ತೋಟಗಾರಿಕೆ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘಗಳು ಸರ್ಕಾರದ ಪೋಷಣೆ ಇರುವವರೆಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿ ಸರ್ಕಾರದ ಪೋಷಣೆ, ಬೆಂಬಲ, ಆದ್ಯತೆ ಇಲ್ಲವಾಗುತ್ತಿದ್ದಂತೆ ಈ ಕಾರ್ಯ ನಿರ್ವಹಣೆಯನ್ನು ಸ್ಥಗಿತಗೊಳಿಸಿರುವುದು. ಇತರೆ ರೂಪಾಂತರ ಸಹಕಾರ ಸಂಘಗಳು ಖಾಸಾಗೀಕರಣಗೊಂಡಿರುವುದು, ರೈತ ಸದಸ್ಯರಿಗೆ ತೊಡಕಾಗಿ ಪರಿಣಮಿಸಿದೆ. ಅವರು ಖಾಸಗಿ ಮಧ್ಯಮ ವರ್ತಿಗಳನ್ನೇ ಅವಲಂಭಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಪರಿಸ್ಥಿತಿ ಹೋಗಲಾಡಿಸಲು ಭಾರತ ಸರ್ಕಾರವು 'ನಬಾರ್ಡ್' ಮತ್ತು ಎನ್.ಸಿ.ಡಿ.ಸಿ. ಮುಖಾಂತರ 'ರೈತರ ಅಭಿವದ್ಧಿ ನಿಧಿ' 'ಆತ್ಮ ನಿರ್ಭರ' ಯೋಜನೆಗಳ ಮುಖಾಂತರ ಸಂಘಟನಾತ್ಮಕ ಮಾರುಕಟ್ಟೆ ಮೂಲಕ ರೈತರೇ ತಮ್ಮ ಉತ್ಪನ್ನಗಳ ಸಂಗ್ರಹಣೆ, ವಿಂಗಡನೆ, ಶ್ರೇಣೀಕರಣ, ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಮಾಡಲು ಅನುವಾಗುವಂತೆ 'ರೈತ ಉತ್ಪಾದನಾ ಸಂಸ್ಥೆ' ಗಳನ್ನು ಆರಂಭಿಸಲು ಪ್ರೋತ್ಸಾಹಿಸುತ್ತದೆ.'ರೈತ ಉತ್ಪಾದನಾ ಸಂಸ್ಥೆಗಳು' ಕಂಪನಿ ಕಾಯ್ದೆ ಯಡಿಯಲ್ಲಿ ನೊಂದಣಿಯಾಗಿ 'ರೈತ ಉತ್ಪಾದನಾ ಕಂಪನಿ' ಯಾಗಿ ಅಥವಾ ಸಹಕಾರ ಕಾಯ್ದೆಯದೆಯಲ್ಲಿ ನೊಂದಣಿಯಾಗಿ 'ಸಹಕಾರ ಸಂಘ'ವಾಗಿ ಕಾರ್ಯನಿರ್ವಹಿಸಲು ಅವಕಾಶವಿರುತ್ತದೆ. ಕೃಷಿ ಇಲಾಖೆಯು ನೀಡಿರುವ ಮಾರ್ಗ ದರ್ಶನ ದಂತೆ ರೈತ ಉತ್ಪಾದನಾ ಸಂಸ್ಥೆಗಳು ಸಹಕಾರ ತತ್ವದಡಿಗಳಲ್ಲಿ ಕಾರ್ಯ ನಿರ್ವಹಿಸಬೇಕೆಂದಿದೆ.

ಆದುದರಿಂದ 'ಸಹಕಾರ ಸಂಘ'ವಾಗಿ ನೊಂದಣಿಯಾಗಿ ಕಾರ್ಯ ನಿರ್ವಹಿಸುವುದೇ ಹೆಚ್ಚು ಸಮಂಜಸ. ಈಗಾಗಲೆ ಅಸ್ತಿತ್ವದಲ್ಲಿರುವ ಮೂರು ಹಂತದ ಸಹಕಾರ ಕೃಷಿ ಮಾರುಕಟ್ಟೆ ಪುನಶ್ಚೇತನಗೊಳ್ಳಬಲ್ಲದೇ?ಈ ಸಹಕಾರ ಸಂಘಗಳಲ್ಲಿ ಇರುವ ಮೂಲಭೂತ ಸೌಕರ್ಯಗಳನ್ನು ಪುನ ನಿರ್ಮಾಣ, ಪುನಶ್ಚೇತನಗೊಳಿಸಿದಲ್ಲಿ ರೈತರಿಗೆ ನ್ಯಾಯ ಒದಗಿಸಿದಂತಾಗುವುದಲ್ಲವೇ? ಆದರೆ ಬೆಂಕಿಗೆ ಗಂಟೆಕಟ್ಟುವವರಾರು? ರೈತರಲ್ಲಿ ಸಂಘಟನಾ ಮನೋಭಾವ, ನಿಸ್ವಾರ್ಥ, ಪ್ರಾಮಾಣಿಕ, ಗುಣಗಳುಳ್ಳ ನಾಯಕತ್ವ ಈ ದಿನದ ಅಗತ್ಯತೆ. ಸಹಕಾರ ಚಳವಳಿಗೆ ಇದರ ಅಗತ್ಯತೆ ಅತ್ಯಂತ ಮಹತ್ವದ್ದು. ಇದರಿಂದ ಮಾತ್ರ ಆಹಾರ ಉತ್ಪಾದನೆ ಮತ್ತು ವಿತರಣೆಯಯಲ್ಲಿ ನ್ಯಾಯಯುತ, ಸಶಕ್ತ ಮತ್ತು ಎಲ್ಲರನ್ನೂ ಒಳಗೊಂಡ ವ್ಯವಸ್ಥೆ ನಿರ್ಮಾಣ ಸಾಧ್ಯ. ಇದನ್ನು 'ಅಮುಲ್' ಮಾದರಿ ಸಹಕಾರಿ ಹೈನೋಧ್ಯಮ ಸಾಬೀತು ಪಡಿಸಿದೆ. ಕರ್ನಾಟಕದಲ್ಲಿ 'ನಂದಿನಿ' ಲಕ್ಷಾಂತರ ರೈತರ ಬಾಳಿನಲ್ಲಿಬೆಳಕು ತಂದಿರುವುದು ನಮ್ಮ ಮುಂದಿದೆ. ಇತ್ತೀಚೆಗೆ ಕರ್ನಾಟಕದ 'ಕ್ಷೀರಭಾಗ್ಯ' ಯೋಜನೆ ಮಕ್ಕಳ ಅಪೌಷ್ಠಿಕತೆ ನಿವಾರಣೆ ಕಾರಣಕ್ಕಾಗಿ 'ಪಾರಿತೋಷಕ' ಗಳಿಸಿ ಜಾಗತಿಕ ಮನ್ನಣೆಗಳಿಸಿ ಪ್ರಧಾನ ಮಂತ್ರಿಗಳ ಗಮನ ಸೆಳೆದದ್ದು ಇನ್ನೂಹಸಿರಾಗಿದೆ.

ಇದೇ 'ಮಾದರಿ'ಯನ್ನು ಇತರೆ ಉತ್ಪನ್ನಗಳಿಗೂ ವಿಸ್ತರಿಸಿ ಅಳವಡಿಸಿಕೊಳ್ಳಬಾರದೇಕೆ?ಎಂಬ ಪ್ರಶ್ನೆ ಮೂಡುವುದು ಸಹಜ. ಆಯಾ ಉತ್ಪನ್ನಗಳಿಗೆ ಅದರದೇ ಆದ ಗುಣಲಕ್ಷಣಗಳಿವೆ. ತಕ್ಕ ಮಟ್ಟಿಗೆ ಎಣ್ಣೆ ಬೀಜ ವಲಯದಲ್ಲಿ ಯಶಸ್ವಿಯಾಗಿ ಕರ್ನಾಟಕದಲ್ಲಿ 'ಸಫಲ್' ಉತ್ಪನ್ನ ಗ್ರಾಹಕರಿಗೆ ದೊರೆಯುತ್ತಿದೆ. ಆಯಾ ಉತ್ಪನ್ನಕ್ಕೆ ತಕ್ಕಂತ ತಾಂತ್ರಿಕ, ವ್ಯವಸ್ಥಾಪಕ, ವೃತ್ತಿ ಪರತೆಯ, ಅಂಶಗಳನ್ನು ಅಳವಡಿಸಿಕೊಂಡು ಉತ್ತಮ ಸಹಕಾರ ನಾಯಕತ್ವ ದೊರೆತಲ್ಲಿ ಅದು ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ. 'ಸಹಕಾರ ಆರ್ಥಿಕ ಔದ್ಯೋಗಿಕ ಸಂಸ್ಥೆ' ಗಳನ್ನೊಳಗೊಂಡ ಮಾರ್ಪಾಡಾದ 'ಗಾಂಧೀಜಿ' ಯ ಪ್ರಜಾಸತ್ತಾತ್ಮಕ ಸಾಮಾಜಿಕ ವ್ಯವಸ್ಥೆಯೇ 21ನೇ ಶತಮಾನದಲ್ಲಿ ಮೇಲಿನ ಹಂತ ಮತ್ತು ತಳಹಂತದಲ್ಲಿ ಸಂಪತ್ತು ನಿರ್ಮಾಣ ಮಾಡಬಲ್ಲದು, ಭೂಮಿ ಮತ್ತು ಮಾನವರನ್ನು ಉಳಿಸಬಹುದು ಎಂದು ಆರ್ಥಿಕ ತಜ್ಞ, ಯೋಜನಾ ಆಯೋಗದ ಮಾಜಿ ಸದಸ್ಯ ಅರುಣ್ ಮೈರಾರವರು ಅಭಿಪ್ರಾಯಿಸಿರುತ್ತಾರೆ. ಸಮಾನತೆಯ ಜಗತ್ತಿನ ನಿರ್ಮಾಣ ರೈತರ ಬಲವರ್ಧನೆಯಿಂದ ಮಾತ್ರ ಸಾಧ್ಯ. ರೈತರ ಬಲವರ್ಧನೆ 'ಸಹಕಾರ ' ದಿಂದ ಮಾತ್ರ ಸಾಧ್ಯ.

(ಆಧಾರ:ವಿವಿಧ ಪತ್ರಿಕಾ ವರದಿ ಮತ್ತು ಲೇಖನಗಳು)

**************************************************************************************

# 56. ವಸತಿ ಸಹಕಾರ ಸಂಘಗಳ ಇತಿಹಾಸ ಬೆಳವಣಿಗೆ – ಭವಿಷ್ಯ

**ಪರಿಚಯ:** ಮಾನವನಿಗೆ ಊಟಕ್ಕೆ ಆಹಾರ, ಕುಡಿಯಲು ನೀರು, ತೊಡಲು ಬಟ್ಟೆ, ವಾಸಿಸಲು ನೆರಳು ಅತಿಅವಶ್ಯ. ಇದಕ್ಕಾಗಿ ಸಹಕಾರ ಸಂಘಗಳು 'ಸ್ವ ಸಹಾಯ ಪರಸ್ಪರ ಸಹಾಯ' ತತ್ವದನೆಯಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣ ಉಳ್ಳ ಸಂಸ್ಥೆಗಳಾಗಿ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದಿವೆ. ಈ ದಿಸೆಯಲ್ಲಿ 'ವಸತಿ ಸಹಕಾರ ಸಂಘಗಳು(ಗೃಹ ನಿರ್ಮಾಣ ಸಹಕಾರ ಸಂಘಗಳು) 'ನೆರಳು' 'ಸೂರು' ಒದುಗಿಸುವಲ್ಲಿ ಕಾರ್ಯನಿರತವಾಗಿವೆ. ಅದರಲ್ಲಿಯೂ ಬಡವ, ಮಧ್ಯಮ ವರ್ಗದ ಆಶಾಕಿರಣವಾಗಿ ಅವರ ಅಗತ್ಯ ನಿವೇಶನ, ಮನೆ ನಿರ್ಮಾಣಕ್ಕೆ ಸೌಕರ್ಯ ಒದಗಿಸಿ ಕೊಡುತ್ತಿವೆ.

**ಇತಿಹಾಸ:** ವಸತಿ ಆಕಾಂಕ್ಷೆ ಈಡೇರಿಕೆಗಾಗಿ ಪ್ರಪ್ರಥಮ ಸಹಕಾರ ಸಂಘ1909 ರಲ್ಲಿ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ 'ಬೆಂಗಳೂರು ಬಿಲ್ಡಿಂಗ್ ಕೋ ಆಪರೇಟಿವ್ ಸಹಕಾರ ಸಂಘ' ಸ್ಥಾಪನೆಯಾಯಿತು. ಇದು ಭಾರತದಲ್ಲಿಯೇ ಪ್ರಪ್ರಥಮ ಸಹಕಾರ ಸಂಘ ಎಂಬ ಹೆಗ್ಗಳಿಕೆಯನ್ನು ಗಳಿಸಿದೆ. ತದ ನಂತರದಲ್ಲಿ ಭಾರತದ ಇತರೆಡೆಲ್ಲಿಯೂ 'ಗೃಹ ನಿರ್ಮಾಣ ಸಹಕಾರ ಸಂಘಗಳು ಸ್ಥಾಪನೆಯಾಗಿರುವುದನ್ನು ಕಾಣುತ್ತಲಿದ್ದೇವೆ.

ಇವುಗಳ ಪ್ರಮುಖ ಉದ್ದೇಶ, ನಿವೇಶನಗಳನ್ನು ವಿಂಗಡಿಸಿ ಬಡವಾಣೆಯನ್ನು ಸಕಲ ಮೂಲಭೂತ ಸೌಕರ್ಯಗಳು ಒಳಗೊಂಡಂತೆ ನಿರ್ಮಿಸುವುದು. ನಿರ್ದೇಶನಗಳನ್ನು ಸದಸ್ಯರಿಗೆ ಹಂಚುವುದು. ಗೃಹ ನಿರ್ಮಾಣಕ್ಕಾಗಿ ಸಾಲಗಳನ್ನು ಒದಗಿಸುವುದು. ಅದಕ್ಕಾಗಿ ನಿವೇಶನ, ಮನೆಯನ್ನು ಅಡಮಾನು ಮಾಡಿಕೊಳ್ಳಲಾಗುತ್ತದೆ.

1950 ರಲ್ಲಿ, 'ಮೈಸೂರು ಸಹಕಾರಿ ಒಕ್ಕೂಟ'ವು ನಂಜನಗೂಡಿನಲ್ಲಿ ಮೈಸೂರು ರಾಜ್ಯದ ಸಹಕಾರ ಸಂಘಗಳ ಸಮ್ಮೇಳನ ಏರ್ಪಡಿಸಲಾಗಿರುತ್ತದೆ. ಈ ಸಮ್ಮೇಳದಲ್ಲಿ ವಸತಿ ಸಹಕಾರ ಕ್ಷೇತ್ರಕ್ಕೆ ಒಂದು ನೀತಿ ರೂಪಿಸಲು ಸಮಿತಿ ರಚಿಸಲಾಗುತ್ತದೆ. ಈ ಸಮಿತಿಯು ರಾಜ್ಯದ ಗೃಹ ನಿರ್ಮಾಣ ಸಹಕಾರ ಸಂಘಗಳ ಸಮನ್ವಯತೆ, ಹಣಕಾಸಿನ ಸಂಪನ್ಮೂಲ ಒದಗಿಸಲು ಒಂದು ರಾಜ್ಯ ಮಟ್ಟದ ಸಂಸ್ಥೆ ಸ್ಥಾಪಿಸಲು ಶಿಫಾರಸ್ಸು ಮಾಡುತ್ತದೆ. ಅದರಂತೆ 1950 ರ ಆಗಸ್ಟ್‌ನಲ್ಲಿ "ಮೈಸೂರು ಪ್ರಾವೆನ್ಷಿಯಲ್ ಕೋ ಆಪರೇಟಿವ್ ಹೌಸ್ ಬಿಲ್ಡಿಂಗ್ ಕಾರ್ಪೊರೇಷನ್" ಎಂದು ಸ್ಥಾಪಿಸಲಾಯಿತು. ಇದೇ ಈಗಿನ "ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿಯಮಿತ "ಆರಂಭದಲ್ಲಿ" ಸರ್ಕಾರ"ವೇ. ಈ ಮಹಾಮಂಡಲದ ಮೂಲಕ 'ಗೃಹ ನಿರ್ಮಾಣಕ್ಕಾಗಿ' ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕ ಸದಸ್ಯರಿಗೆ ಸಾಲ ವಿತರಿಸಿತು. ಭೂಕಂದಾಯ ಕಾಯ್ದೆಯಡಿಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನ ವಿಂಗಡಿಸಿ ಬಡವಾಣೆ ನಿರ್ಮಿಸಲು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರಕ್ಕೆ ಅವಕಾಶ ಇತ್ತು. ಈ ಅನುಕೂಲತೆಗಳಿಂದ ಅನೇಕ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಾಪನೆಗೊಳ್ಳಲು ಸಾಧ್ಯವಾಯಿತು.

ಕರ್ನಾಟಕದಲ್ಲಿ ಆದ ಈ ಬೆಳವಣಿಗೆಯನ್ನು ಅನುಸರಿಸಿ ಇತರೆ ರಾಜ್ಯಗಳಲ್ಲಿಯೂ 'ಗೃಹ ನಿರ್ಮಾಣ ಸಹಕಾರ ಸಂಘಗಳು' 'ಮಹಾಮಂಡಳ' ಗಳೂ ರಚನೆಯಾದವು.

ಕರ್ನಾಟಕದಲ್ಲಿ ಸರ್ಕಾರದ ಯೋಜನೆಯಾಗಿ ಪ್ರತಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ರಚಿಸಲಾಯಿತು. ಇದರ ಉನ್ನತ ಸಂಸ್ಥೆಯಾಗಿ" ಕರ್ನಾಟಕ ಪರಿಶಷ್ಟಜಾತಿ/ಪರಿಶಿಷ್ಟಪಂಗಡದ ಗೃಹ ನಿರ್ಮಾಣ ಸಹಕಾರ ಸಂಘಗಳ ಸಹಕಾರ ಕಾರ್ಪೊರೇಷನ್' ಸ್ಥಾಪಿಸಲಾಯಿತು. ಇದಕ್ಕೆ ಕರ್ನಾಟಕ ರಾಜ್ಯದ 'ಅಭಿವೃದ್ಧಿ ಕಮಿಷನರ್'(ಈಗಿನ ಅಪರ ಮುಖ್ಯ ಕಾರ್ಯದರ್ಶಿ)'ಗಳೇ ಅದಕ್ಕೆ ಪದ ನಿಮಿತ್ತ ಅಧ್ಯಕ್ಷರಾಗಿದ್ದರು. ಇದರಿಂದ ಪ್ರತಿ ತಾಲ್ಲೂಕಿನಲ್ಲೂ ಈ ವರ್ಗಕ್ಕೆ ಗೃಹಹೊಂದಲು ಸಾಧ್ಯವಾಯಿತು. ಭಾರತದಲ್ಲಿ 1,28,232, ಕರ್ನಾಟಕದಲ್ಲಿ 1,266 ಬೆಂಗಳೂರಿನಲ್ಲಿ 257 ಗೃಹ ನಿರ್ಮಾಣ ಸಹಕಾರ ಸಂಘಗಳಿವೆ. ಬೆಂಗಳೂರಿನಲ್ಲಿ ಶೇ. 60ಕ್ಕೂ ಮೀರಿ ನಿರ್ದೇಶನಗಳನ್ನು ಗೃಹ ನಿರ್ಮಾಣ ಸಹಕಾರ ಸಂಘಗಳು ಹಂಚಿವೆ. 1980–90ರ ದಶಕದ ವರೆಗೆ ಸಾರ್ವಜನಿಕರಿಗೆ ಗೃಹ ನಿರ್ಮಾಣಕ್ಕೆ ಸಾಲ ದೊರೆಯುತ್ತಿದ್ದದ್ದು ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕ ಮಾತ್ರ. ಇದರಿಂದಾಗಿ ಗೃಹ ನಿರ್ಮಾಣ

ಸಹಕಾರ ಸಂಘಗಳು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಲದಿಂದ ಸಾಲಪಡೆದು ಸದಸ್ಯರ ಅವಶ್ಯಕತೆ ಪೂರೈಸುತ್ತಿದ್ದವು. ಸರ್ಕಾರವು ಮಹಾಮಂಡಲಕ್ಕೆ ಸಾಲ ಒದಗಿಸುವುದನ್ನು ನಿಲ್ಲಿಸುತ್ತಿದ್ದಂತೆ ಅದು ಎಲ್.ಐ.ಸಿ. ಹೌಸಿಂಗ್ ಕಾರ್ಪೋರೇಷನ್‌ನಿಂದ ಸಾಲ ಪಡೆದು ಸಾಲ ವಿತರಿಸಲು ಆರಂಭಿಸಿತು. ಈ ವ್ಯವಸ್ಥೆಯಿಂದ ರಾಜ್ಯದ್ಯಂತ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರು ಗೃಹ ನಿರ್ಮಾಣ ಮಾಡಲುಸಾಧ್ಯವಾಯಿತು.

**ಪ್ರಸಕ್ತ ಪರಿಸರ:** ಸರ್ಕಾರದಿಂದ ಗೃಹ ನಿರ್ಮಾಣ ಮಂಡಳಿ ಸ್ಥಾಪನೆ, ವಾಣಿಜ್ಯ ಬ್ಯಾಂಕ್‌ಗಳು, ಖಾಸಗಿ ಬ್ಯಾಂಕ್‌ಗಳು, ಮತ್ತು ಎನ್.ಬಿ.ಎಫ್.ಸಿ.ಗಳು ಸಾಲ ಸೌಲಭ್ಯ ನೀಡಲು ಆರಂಭಿಸಿದ್ದರಿಂದ ತೀರ್ವ ಸ್ಪರ್ಧೆ ಉಂಟಾಗಿರುತ್ತದೆ. ಕಡಿಮೆ ಬಡ್ಡಿದರ, ಸುಲಭ ಕಂತುಗಳು, ಮಂಜೂರಾತಿಗೆ ಸುಲಭ, ಶೀಘ್ರ, ವಿಧಿ ವಿಧಾನಗಳು, ಮಾಹಿತಿ ತಂತ್ರಜ್ಞಾನದ ಅಳವಡಿಕೆ ಇವುಗಳು ಇಂದಿನ ಯುವ ಜನತೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ. ನಿವೇಶನ ಖರೀದಿ, ಗೃಹನಿರ್ಮಾಣ ಸುಲಭ ಸಾಧ್ಯವಾಗಿದೆ. ಇದರ ಪರಿಣಾಮ ಅಲ್ಲದೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿದ್ದ ಅನುಕೂಲತೆ ಇಲ್ಲವಾಗಿರುವುದು ಸಹಕಾರ ಸಂಘಗಳು ಕೂಡ ಖಾಸಗಿ ಡೆವಲಪರ್ಸ್‌ರಂತೆ ಕಾರ್ಯನಿರ್ವಹಿಸುವ ಅವಶ್ಯಕತೆ ಬಿದ್ದಿದೆ. ಇದು ಪೂರ್ಣ'ನಕಾರಾತ್ಮಕ' ಪರಿಣಾಮವನ್ನು ಈ ಸಹಕಾರ ಸಂಘಗಳ ಮೇಲೆ ಬೀರಿವೆ.

ಭೂಮಿಯ ಬೆಲೆ ಗಗನಕ್ಕೆಲಿರುವುದು. ಕೃಷಿಯೇತರ ಭೂಪರಿವನೆಗೆ ಇರುವ ಸಂಕಷ್ಟಗಳು, ಖಾಸಗಿ ವಲಯದ ಪೈಪೋಟಿ ಸಹಕಾರ ಸಂಘಗಳನ್ನು ಮತ್ತಷ್ಟು ನಲುಗಿಸಿವೆ.

**ಭವಿಷ್ಯ:** ಮುಂದೇನು? ಎಂಬುದು ಯಕ್ಷ ಪ್ರಶ್ನೆಯೇ ಆಗಿದೆ. ಸಹಕಾರ ಸಂಘಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯಬೇಕು. ಇದರ ಚಟುವಟಿಕೆಗಳು ನಿರಂತರವಾಗಿದ್ದಲ್ಲಿ ಮಾತ್ರ ಇದು ಸಾಧ್ಯ.

ಇದರಿಂದಲೇ ಸಹಕಾರ ಚಳುವಳಿ ಬೆಳೆಯಲು, ಉಳಿಯಲು ಸಾಧ್ಯ. ಈಗಿನ ಯುವಜನತೆಯ ಅಗತ್ಯತೆ, ಅವಶ್ಯಕತೆ ಗನುಗುಣವಾಗಿ ಸಹಕಾರ ಸಂಘಗಳು ರೂಪುಗೊಂಡಲ್ಲಿ, ತನ್ನ ಕಾರ್ಯ ಶೈಲಿಯನ್ನು ಬದಲಾಯಿಸಿಕೊಂಡಲ್ಲಿ ಮಾತ್ರ ಈ ಸಹಕಾರ ಸಂಘಗಳು ಉಳಿಯಲು ಸಾಧ್ಯ.

ಈ ದಿಸೆಯಲ್ಲಿ ಉಳಿದಿರುವ ಆಯ್ಕೆ ಎಂದರೆ ಖಾಸಗಿ ವಲಯದೊಡನೆ ಸಹಭಾಗಿತ್ವ ಅಥವ ಪಾಲುಗಾರಿಕೆ, ಹಾಲಿ ಕೆಲವು ಸಹಕಾರ ಸಂಘಗಳು ಮತ್ತು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ಯಶಸ್ವಿಯಾಗಿರುವುದನ್ನು ಪ್ರತ್ಯಕ್ಷವಾಗಿ ಕಂಡಿರುತ್ತೇವೆ.

**ಉದಾಹರಣೆಗೆ:**

1) ಬಡಾವಣೆ ನಿರ್ಮಿಸುತ್ತಿರುವ 'ರೇರಾ' ಕಾಯ್ದೆ ಮತ್ತಿನ್ನಿತರೆ ಅನ್ವಯಿಸುವ ಕಾಯ್ದೆಗಳನ್ವಯ ಅನುಮೋದಿತ ಖಾಸಗಿಯವರೊಡನೆ 'ಒಡಂಬಡಿಕೆ'/ಒಪ್ಪಂದ ಮಾಡಿಕೊಂಡು ಸದಸ್ಯರಿಗೆ ನಿವೇಶನ ಒದಗಿಸುವುದು.

2) ಗುಂಪುಮನೆ, ಸಮುಚ್ಚಯ ನಿರ್ಮಾಣದಲ್ಲಿ ತೊಡಗಿರುವ ಖಾಸಗಿಯವರೊಡನೆ ಒಪ್ಪಂದಮಾಡಿಕೊಂಡು ಸದಸ್ಯರಿಗೆ ಮನೆಒದಗಿಸುವುದು.

3) ಗೃಹ ನಿರ್ಮಾಣಕ್ಕೆ ಅವಶ್ಯ ವಸ್ತುಗಳ ಪೂರೈಕೆ (ಪಾಂಡಿಚೆರಿ ವಸತಿ ಮಹಾಮಂಡಳ), ಸಿಮೆಂಟ್, ಇಟ್ಟಿಗೆ, ಕಬ್ಬಿಣ ಇತರೆ.

4) ಇತ್ತೀಚೆಗಿನ ಆಧುನಿಕ ತಂತ್ರಜ್ಞಾನದ ಕಡಿಮೆ ವೆಚ್ಚದ ಗೃಹ ನಿರ್ಮಾಣ ಕೈಗೊಂಡು ಹಸ್ತಾಂತರಿಸುವುದು.

5) ಸಂಪನ್ಮೂಲ ಕ್ರೋಢೀಕರಣಕ್ಕೆ ಅವಶ್ಯಕ್ರಮ ಕೈಗೊಂಡು ಆಧುನಿಕ ತಂತ್ರಜ್ಞಾನದ ಅಳವಡಿಕೆ ಮೂಲಕ ಇಂದಿನ ಯುವಜನತೆಯನ್ನು ಆಕರ್ಷಿಸಿ ಸಾಲ ಒದಗಿಸುವುದು.

ಇವು ಕೇವಲ ಕೆಲವು ಉದಾಹರಣೆಗಳಷ್ಟೆ. ಸಹಕಾರ ಸಂಘವು ತನ್ನ ಸಾಮರ್ಥ್ಯ, ದೌರ್ಬಲ್ಯ, ಅವಕಾಶಗಳು, ಬೆದರಿಕೆಗಳ ಬಗ್ಗೆ ಅಧ್ಯಯನ ನಡೆಸಿ ಮುಂದಿನ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವ ನಿಟ್ಟಿನಲ್ಲಿ ಕಾರ್ಯವೆಸಗುವುದು ಸಹಕಾರ ಚಳುವಳಿಯ ದೃಷ್ಟಿಯಿಂದ ಅನಿವಾರ್ಯ ಮತ್ತು ಈ ದಿನದ ಅವಶ್ಯಕತೆ.

ಚರಿತ್ರೆ ಅರಿತವರೇ ಭವಿಷ್ಯ ನಿರ್ಮಾಣ ಮಾಡಬಲ್ಲರು. ಸಹಕಾರ ವಸತಿವಲಯದಲ್ಲಿ ಕಾರ್ಯನಿರತ ಸಹಕಾರಿಗಳು ಯೋಚಿಸಿ, ಚಿಂತನ–ಮಂಥನ ಮೂಲಕ ಈ ಸಹಕಾರ ವಲಯವನ್ನು ಉಳಿಸಿಬೆಳೆಸುವುದು ಈ ದಿನದ ಅಗತ್ಯತೆಯಾಗಿದೆ. ಸಾಮಾಜಿಕ ನ್ಯಾಯದೊಡನೆ ಅಭಿವೃದ್ಧಿ ಸಾಧ್ಯತೆ ಇರುವುದು ಸಹಕಾರ ಚಳುವಳಿಯಿಂದ ಮಾತ್ರ. ಸರ್ವರಿಗೂ ಸ್ವಂತ ಮನೆ ಹೊಂದುವ ಕನಸು ನನಸುಮಾಡುವ ಜವಾಬ್ದಾರಿ ಈ ವಲಯದಲ್ಲಿನ ಸಹಕಾರಿಗಳದಾಗಿದೆ.

*************************************************************************************************

## 57. ಆರ್ಥಿಕ ಅಸಮಾನತೆ, ದುಷ್ಪರಿಣಾಮ, ಪರಿಹಾರ "ಸಹಕಾರ"

ಭಾರತ ಸ್ವಾತಂತ್ರ್ಯ ನಂತರ, ಆರಿಸಿಕೊಂಡದ್ದು ಮಿಶ್ರ ಆರ್ಥಿಕ ನೀತಿ. ಇದರಿಂದ ಸಾರ್ವಜನಿಕ ಮತ್ತು ಖಾಸಗಿ ವಲಯಕ್ಕೆ ಸರ್ಕಾರ ಬೆಂಬಲ ನೀಡಿತು. ಇವರ ನಡುವೆ ಸುವರ್ಣ ಮಾಧ್ಯಮವಾಗಿ ಸಹಕಾರ ವಲಯಕ್ಕೆ ತಾನೂ ಪಾಲದಾರನಾಗಿ ಸಹಕಾರ ಚಳುವಳಿಗೆ ಕಾರಣವಾಗಿ ತನ್ಮೂಲಕ ಹಸಿರು ಕ್ರಾಂತಿ, ಶ್ವೇತ ಕ್ರಾಂತಿ, ನೀಲಿ ಕ್ರಾಂತಿ, ಹಳದಿ ಕ್ರಾಂತಿಗೆ ಕಾರಣವಾಗಿದ್ದು, ಈಗ ಇತಿಹಾಸವಾಗಿದೆ.

ಭಾರತದ ಆರ್ಥಿಕ ನೀತಿ 1990ರ ದಶಕದಲ್ಲಿ ಬದಲಾವಣೆ ಕಂಡಿತು. ವಿಶ್ವದಲ್ಲಿ ಭಾರತ ದ್ವೀಪವಾಗಿ ನಿಲ್ಲಲಾಗದೆ ತಾನೂ ಉದಾರೀಕರಣ, ಖಾಸಗಿಕರಣ, ಜಾಗತೀಕರಣ ನೀತಿ ಒಪ್ಪಿಕೊಳ್ಳಲಾಗಿ ಭಾರತವು ಆರ್ಥಿಕ ಮುಂದುವರೆದ ರಾಷ್ಟ್ರಗಳಲ್ಲಿ ಒಂದು ಆಗಿರುವುದು ಹೆಮ್ಮೆಯ ವಿಷಯವಾಗಿದೆ. ಈಗಾಗಲೆ ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆ ಮುಟ್ಟಿದ್ದು ಇಷ್ಟರಲ್ಲೇ ಐದು ಟ್ರಿಲಿಯನ್ ಆರ್ಥಿಕತೆ ಮುಟ್ಟುವ ಆಶಯ ಹೊಂದಲಾಗಿದೆ. ಕೆಲವು ರಾಜ್ಯಗಳು ತಾವು ಒಂದು ಟ್ರಿಲಿಯನ್ ಆರ್ಥಿಕತೆ ಹೊಂದುವುದಾಗಿ ಘೋಷಿಸಿಕೊಂಡಿವೆ. ಆದರೆ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನಾವು ಈ ಗಳಿಕೆ ಗಳಿಸಿದರೆ ಮಾತ್ರ ಸಾಕೇ? ನಮ್ಮ ಸಂವಿಧಾನದ ಆಶಯವಾದ ಸಮ ಸಮಾಜ ನಿರ್ಮಾಣ ಇದರಿಂದ ಸಾಧ್ಯವೇ?

ವಿಶ್ವದಲ್ಲಿನ ಅಸಮಾನತೆಯ ಬಗ್ಗೆ ಸಂಶೋಧನೆ ನಡೆಸುತ್ತಿರುವ ತಜ್ಞರು "ಭಾರತವು ಅತ್ಯಂತ ಶ್ರೀಮಂತರ ಬಡ ರಾಷ್ಟ್ರ" ಎಂದು ಕರೆಯುತ್ತಿದ್ದಾರೆ. ಏಕೆಂದರೆ 80–90ರ ದಶಕದಿಂದ ಅಸಮಾನತೆ ಬೆಳೆಯುತ್ತಾ ಬಂದಿದ್ದು, ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಅಧಿಕವಾಗುತ್ತಿದ್ದು, ದೊಡ್ಡ ಕಂದಕವೇ ನಿರ್ಮಾಣ ಆಗಿದೆ. ಅಸಮಾನತೆಯ ದುಷ್ಪರಿಣಾಮಗಳು ಅನೇಕ. ಅಪರಾಧಗಳು, ಅಹಿಂಸೆ, ಅನಾಚಾರ ಮುಂತಾದ ಕೆಡುಕುಗಳಿಗೆ ಕಾರಣವಾಗಬಲ್ಲದು. ಅಲ್ಲದೆ, ಆರೋಗ್ಯದ ಮೇಲೆ ಶ್ರೀಮಂತರಲ್ಲಿ ಮತ್ತು ಬಡವರಲ್ಲಿ ಮಾನಸಿಕ ಮತ್ತು ದೈಹಿಕ ದುಷ್ಪರಿಣಾಮಗಳು ಉಂಟಾಗುತ್ತವೆ. ಸಾಮಾಜಿಕ ಕ್ಷೋಭೆಗೆ ಕಾರಣವಾಗುತ್ತದೆ. ಜನ ಸಮೂಹಗಳಲ್ಲಿನ ಅಂತರ ಅಧಿಕಗೊಳ್ಳುತ್ತಿರುವುದನ್ನು ಕಣ್ಣಾರೆ ಕಾಣುತ್ತಲಿದ್ದೇವೆ.

ಈ ಮುಂದಿನ ಕೆಲವು ಅಂಶಗಳು ಸೋಜಿಗವನ್ನು ಉಂಟು ಮಾಡುತ್ತದೆ. ಭಾರತದಲ್ಲಿ 1951ರಲ್ಲಿ ಕೆನೆ ಪದರದ ಶೇಕಡ ಒಂದರಷ್ಟು ಜನಸಂಖ್ಯೆ ಭಾರತದ ಶ್ರೀಮಂತಿಕೆಯ ಶೇ. 11.5 ಪಾಲು ಹೊಂದಿದ್ದರು.

1980ಕ್ಕೆ ಅದು ಶೇ. 6ಕ್ಕೆ ಇಳಿದಿತ್ತು. 2022ರಲ್ಲಿ ಅದು ಶೇ. 22.6 ಮುಟ್ಟಿರುತ್ತದೆ. ಭಾರತದ ಮೇಲ್ಪದರದ ಶೇ. 10 ಜನಂಖ್ಯೆಯ ಸರಾಸರಿ ವಾರ್ಷಿಕ ಆದಾಯ ರೂ. 53 ಲಕ್ಷಗಳು. ಭಾರತೀಯನೊಬ್ಬನ ಸರಾಸರಿ ವಾರ್ಷಿಕ ಆದಾಯ ಕೇವಲ ರೂ. 2.3 ಲಕ್ಷಗಳು. ಶೇ. 40 ಜನಸಂಖ್ಯೆ ವಾರ್ಷಿಕ ಆದಾಯ ರೂ. 1.65 ಲಕ್ಷಗಳು. ಶೇ. 50 ಜನಸಂಖ್ಯೆಯ ವಾರ್ಷಿಕ ಆದಾಯ ರೂ. 71,000 ಮಾತ್ರ.

ಮುಂದುವರೆದು ಭಾರತದಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಶ್ರಮದಿಂದಲೇ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಕೇವಲ

ಕೆಲವರೇ ಭೂಮಿ ಅಥವಾ ಇತರೆ ಬಂಡವಾಳದಿಂದ ಜೀವನ ನಡೆಸುತ್ತಿದ್ದಾರೆ. ಈ ಶ್ರಮಜೀವಿಗಳಲ್ಲಿ ಶೇ. 90 ಭಾಗ ಅಸಂಘಟಿತ ಕಾರ್ಮಿಕರ ವಲಯವಾಗಿದೆ. ಇವರಿಗೆ ಸೇವಾ ಭದ್ರತೆ ಇಲ್ಲ. ಸೇವೆಗೆ ಪ್ರತಿ ಫಲವೂ ಇಲ್ಲ ಮತ್ತು ಆದಾಯ ಗಳಿಕೆಯು ಬಹಳ ಕಡಿಮೆ. ನೂತನ ಕೆಲಸಗಳು ಸೃಷ್ಟಿಯಾಗುತ್ತಿದೆಯೇ? ಉತ್ತಮ ಕೆಲಸಗಳು ಸೃಷ್ಟಿಯಾಗುತ್ತಿವೆಯೆ? ವೇತನ, ಕೂಲಿ ಜಾಸ್ತಿಯಾಗುತ್ತಿದೆಯೇ? ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ.

ಭಾರತ ಯುವ ಜನತೆಯ ರಾಷ್ಟ್ರವಾಗಿದೆ. ಇನ್ನು 30–35 ವರ್ಷಗಳವರೆಗೆ ಈ ಒಂದು ಅನುಕೂಲತೆ ಭಾರತಕ್ಕೆ ಇರುತ್ತದೆಯಾಗಿ ಜನಸಂಖ್ಯಾ ಶಾಸ್ತ್ರತಜ್ಞರು ಅಂದಾಜಿಸುತ್ತಿದ್ದಾರೆ. ಈ ಸುವರ್ಣಾವಕಾಶವನ್ನು ಭಾರತವು ಉಪಯೋಗಿಸಿಕೊಳ್ಳಬೇಕಾಗಿದೆ. ಯುವ ಜನತೆಯ ಸಂಪೂರ್ಣ ಶಕ್ತಿಯನ್ನು ಉದ್ಯೋಗ ಸೃಷ್ಟಿ ಮೂಲಕ ಮಾಡಿದಲ್ಲಿ ಉತ್ಪಾದಕತೆ ಅಧಿಕಗೊಳ್ಳುತ್ತದೆ. ಹಾಲಿ ನಿರುದ್ಯೋಗ ಮತ್ತು ಅಪೂರ್ಣ ಶಕ್ತಿಯ ಬಳಕೆಯನ್ನು ತಪ್ಪಿಸಬಹುದಾಗಿದೆ. ಈಗಿನ ಬಂಡವಾಳ ಶಾಹಿ ಖಾಸಗಿ ವಲಯದ ಗುರಿ ಕೇವಲ ಬಂಡವಾಳದಿಂದ ಬಂಡವಾಳ ಬೆಳವಣಿಗೆಯಾಗಿರುತ್ತದೆ ವಿನಃ ಉದ್ಯೋಗ ಸೃಷ್ಟಿಯಲ್ಲ. ಆಧುನಿಕತೆಯ ಭರಾಟೆಯಲ್ಲಿ ಮಾನವ ಸಂಪನ್ಮೂಲಕ್ಕೆ ಬೆಲೆ ಇಲ್ಲದಂತಾಗಿದೆ. ಮಾನವ ಸಂಪನ್ಮೂಲವೇ ಆಸ್ತಿ ಮತ್ತು ಬಂಡವಾಳವಾಗುವಂತಹ ಉದ್ಯೋಗ ಸೃಷ್ಟಿ ಮತ್ತು ಉತ್ಪನ್ನ ಸೃಷ್ಟಿಸುವ ಮಾದರಿಯ ಅವಶ್ಯಕತೆ ಇದೆ. ಅದುವೇ ಸಹಕಾರಿ ಮಾದರಿ.

ಭಾರತದಲ್ಲಿ ಶೇ. 53ಕ್ಕೂ ಹೆಚ್ಚಿನ ಶ್ರಮಶಕ್ತಿ ಮತ್ತು ಮಹಿಳಾ ಶ್ರಮಶಕ್ತಿ ಗ್ರಾಮೀಣ ಪ್ರದೇಶಗಳಲ್ಲಿದೆ ಎಂಬುದೊಂದು ಅಂದಾಜು. ಸಣ್ಣದು ಸುಂದರ ಎಂಬುದು ಜರ್ಮನ್ ಆರ್ಥಿಕ ತಜ್ಞ, ಶೂಮೇಕರ್‌ನ ಪುಸ್ತಕದಲ್ಲಿ ಮಹಾತ್ಮ ಗಾಂಧಿಯವರ ಪ್ರತಿಪಾದನೆಯನ್ನು ಅವರು ಒಪ್ಪಿಕೊಳ್ಳುತ್ತಾರೆ. 'ಸಹಕಾರದಿಂದ ಸ್ವಾತಂತ್ರ್ಯ' ಎಂಬುದು ಅವರ ಧ್ಯೇಯವಾಕ್ಯವಾಗಿತ್ತು. ಈಗ ಪುನಃ ಇದರ ಚಿಂತನೆಯ ಅಗತ್ಯತೆ ಕಂಡುಬರುತ್ತದೆ. ಆಧುನಿಕ ವೈಜ್ಞಾನಿಕ ಆವಿಷ್ಕಾರಗಳು, ತಂತ್ರಜ್ಞಾನ ಇವುಗಳ ಅಳವಡಿಕೆಯಿಂದ ಕೃಷಿ, ಕೃಷಿ ಅವಲಂಬಿತ ಉದ್ಯೋಗಗಳ ಸೃಷ್ಟಿಗೆ ಸಾಕಷ್ಟು ಅವಕಾಶಗಳಿವೆ. ಮಾರುಕಟ್ಟೆಗೆ ದಾರಿಯ ಮಾದರಿ ನಮ್ಮ ಕಣ್ಣಿನ ಮುಂದೆ ಇದೆ. ಅದು ಅಮುಲ್ ಮಾದರಿ ಇದರ ಯಶಸ್ವಿ ಅನುಕರಣೆ "ನಂದಿನಿ" ಇಂದ ಆಗಿದೆ. ಇದರಿಂದ ಗ್ರಾಮೀಣ ಮಟ್ಟದ ಸಣ್ಣ ಸಣ್ಣ ಸಹಕಾರ ಸಂಘಗಳು ಒಟ್ಟುಗೂಡಿ ಸಹಕಾರ ಒಕ್ಕೂಟ ವ್ಯವಸ್ಥೆ ಮೂಲಕ ಯಶಸ್ಸು ಗಳಿಸಬಹುದೆಂಬದು ಸಾಬೀತಾಗಿದೆ. ಅಗತ್ಯವಿರುವುದು ಬದ್ಧತೆ, ಶ್ರದ್ಧೆ, ಪ್ರಾಮಾಣಿಕತೆ, ಉಳ್ಳ ನಾಯಕತ್ವ, ಸಂಘಟನಾತ್ಮಕ ಶಕ್ತಿ. ಅಸಂಘಟಿತ ಕಾರ್ಮಿಕ ವಲಯಗಳಲ್ಲಿ ಸಹಕಾರ ಸಂಘಗಳ ಸ್ಥಾಪನೆಯಾಗಬೇಕು. ಸಹಕಾರ ಚಳುವಳಿ ಒಂದೇ ಆರ್ಥಿಕ ಪ್ರಗತಿಯೊಡನೆ ಸಾಮಾಜಿಕ ನ್ಯಾಯ ಒದಗಿಸಿ ಸರ್ವತೋಮುಖ ಎಲ್ಲರನ್ನೂ ಒಳಗೊಳ್ಳುವ ಶಕ್ತಿ ಮತ್ತು ಯುಕ್ತಿಯನ್ನು ಒಳಗೊಂಡಿದೆ. ಇದಕ್ಕಾಗಿ ಯುವಜನತೆಯಲ್ಲಿ ಸಹಕಾರದ ಬಗ್ಗೆ ಸಕಾರಾತ್ಮಕ ಭಾವನೆ ಮೂಡುವಂತಹ ಕಾರ್ಯಕ್ರಮಗಳಾಗಬೇಕು. ಉತ್ತಮ ಸಕಾರಾತ್ಮಾಕ ನಾಯಕತ್ವ ಯುವಜನತೆಗೆ ಮಾದರಿಯಾಗಬೇಕಾದದ್ದು ಪ್ರಸ್ತುತ ಅವಶ್ಯಕತೆಯಾಗಿದೆ. ಇದರಿಂದ ಅಸಮಾನತೆಯ ಸಮಾಜದಿಂದ ಆಗುವ ಅನಾಹುತಗಳನ್ನು ತಪ್ಪಿಸಲು ಸಾಧ್ಯ. ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ. ನಮ್ಮ ಮುಂದಿನ ಪೀಳಿಗೆಗೆ ಸಹಜ ಬದುಕು ಕಟ್ಟಿಕೊಡಲು ಸಾಧ್ಯವಾಗುತ್ತದೆ.

ರಾಕ್‌ಡೇಲ್ ಅಗ್ರಗಾಮಿಗಳು ಸಹಕಾರ ಸಂಘದ ಯಶಸ್ವಿಗಾಗಿ ತಮಗೆ ತಾವೇ ಕೆಲವು ನಿಯಮಗಳನ್ನು ರೂಪಿಸಿಕೊಂಡರು. ಅವೇ ಮುಂದೆ ಸಹಕಾರ ತತ್ವಗಳು ಎನಿಸಿಕೊಂಡವು. ಸಹಕಾರ ಸಂಘಗಳು ಈ ತತ್ವಗಳನ್ನು ಪಾಲಿಸಿದಲ್ಲಿ ಅವರ ಉದ್ದೇಶ ಸಾಧಿಸುವಲ್ಲಿ ಸಾಧ್ಯವಾಗುತ್ತದೆ. ಸ್ವಯಂ ಮತ್ತು ಮುಕ್ತ ಸದಸ್ಯತ್ವ ಇದನ್ನು ಸಹಕಾರ ಸಂಘಗಳು ಪಾಲಿಸುತ್ತಿದೆಯೇ? ಸ್ವಯಂ ಹಿತಾಸಕ್ತಿಯೇ ಮೇಲುಗೈ ಪಡೆಯುತ್ತಿದೆಯೇ ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ, ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ. ತಮಗೆ (ಸದಸ್ಯರಿಗೆ) ಹೊಣೆಗಾರಿಕೆ ಉಳ್ಳ ಆಡಳಿತ ಮಂಡಳಿ ರಚನೆಯಾಗುತ್ತಿದೆಯೇ? ಸಾಮಾನ್ಯ ನಿಕಾಯ ಸದಸ್ಯರ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನು ಪೂರೈಸುತ್ತಿದೆಯೇ? ಸಹಕಾರ ಸಂಘದ ಸದಸ್ಯರು ಎಷ್ಟರಮಟ್ಟಿಗೆ ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆಯೇ? ಸಹಕಾರ ಸಂಘವು ಎಷ್ಟರ ಮಟ್ಟಿಗೆ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯತೆಯಿಂದ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಸಂಘವು ತನ್ನ ಸದಸ್ಯರಿಗೆ, ನೌಕರರಿಗೆ, ಶಿಕ್ಷಣ ಮತ್ತು ತರಬೇತಿ ನೀಡುತ್ತಿದೆಯೇ?

ಸಹಕಾರದ ಬಗ್ಗೆ ಎಷ್ಟರ ಮಟ್ಟಿಗೆ ಪ್ರಚಾರ ಕಾರ್ಯ ಕೈಗೊಂಡಿದೆ. ಸಹಕಾರ ಸಂಘಗಳ ನಡುವೆ ಸಹಕಾರ ತತ್ವ ದಿಟವಾಗಿಯೂ ಪಾಲನೆ ಆಗುತ್ತಿದೆಯೇ? ಸಹಕಾರ ಸಂಘವು ಎಷ್ಟರ ಮಟ್ಟಿಗೆ ಸಾಮಾಜಿಕ (ಸಮೂಹ) ಕಳಕಳಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಿದೆ ಎಂಬ ಅಂಶಗಳು ಸಹಕಾರ ಚಳುವಳಿಯ ಯಶಸ್ಸಿಗೆ ಕಾರಣವಾಗುತ್ತದೆ. ಸಹಕಾರ ಸಂಘಗಳು ಯುವ ಜನತೆಯನ್ನು ಆಕರ್ಷಿಸಿ ಸಂಘಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯಬಲ್ಲವು. ಇದರಿಂದ ಸೃಷ್ಟಿಯಾಗುತ್ತಿರುವ ಆರ್ಥಿಕ ಅಸಮಾನತೆಯ ಮತ್ತು ತನ್ಮೂಲಕ ಸೃಷ್ಟಿಯಾಗುತ್ತಿರುವ ಸಾಮಾಜಿಕ ಕಂದಕವನ್ನು ಮೊಟಕುಗೊಳಿಸಲು ಸಾಧ್ಯ. ಇದು ಕೇವಲ ಗಾಳಿಗೋಪುರವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಖಂಡಿತ ಇಲ್ಲ. ಯುರೋಪ್ ಮತ್ತು ಪೂರ್ವ ಪೆಸಿಫಿಕ್ ರಾಷ್ಟ್ರಗಳಲ್ಲಿ ಯಶಸ್ವಿಯಾಗಿ ಸಹಕಾರ ಚಳುವಳಿ ಬಂಡವಾಳ ಶಾಹಿ ಹೂಡಿಕೆಗೆ ಸ್ಪರ್ಧಾತ್ಮಕವಾಗಿ ನಿಂತು ಕಾರ್ಯವೆಸಗುತ್ತಿವೆ. ಇದರಿಂದ ಸಮತಾ ಸಮಾಜ ನಿರ್ಮಾಣ ಸಾಧ್ಯವಾಗಿದೆ. ಈ ದಿಸೆಯಲ್ಲಿ ಭಾರತದ ಸಹಕಾರ ಚಳುವಳಿ ಕೂಡ ಕಾರ್ಯೋನ್ಮುಖವಾಗಬೇಕಿದೆ.

**ದೊಡ್ಡ ಯೋಚನೆಗಳೊಡನೆ ಇರುವವರು ಎಂದೂ ಏಕಾಂಗಿಗಳಲ್ಲ – ಸರ್ ಫಿಲಿಪ್ ಸಿಡ್ನಿ.**

****************************************************************************************************

# 58. ಕಿರುಹಣಕಾಸು ಗುಂಪು ಆಧಾರಿತ ಏಕೆ? ಒಂದು ಮನೋ ವೈಜ್ಞಾನಿಕ ವಿಶ್ಲೇಷಣೆ

ಕಿರು ಹಣಕಾಸು ಆರ್ಥಿಕ ಮತ್ತು ಸಾಮಾಜಿಕ ಸಬಲತೆಯನ್ನು ಶೋಷಿತ ಮತ್ತು ನಿಮ್ನ ವರ್ಗಕ್ಕೆ ಸಬಲತೆಯನ್ನು ತಂದು ಕೊಟ್ಟಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಒಂದು ಆಂದೋಲನವಾಗಿ ರೂಪುಗೊಂಡಿದೆ. ನಮ್ಮ ಸಹಕಾರ ಆಂದೋಲನ ಕೂಡ ಗುಂಪು ಆಧಾರಿತವಾಗಿಯೇ ಇದೆ. ಆದರೆ ಗುಂಪಿನ ಗಾತ್ರ ಬಹಳ ಹಿರಿದಾಗಿದೆ. ಕಿರುಹಣಕಾಸು ಸ್ವಸಹಾಯ ಗುಂಪು ಮತ್ತು ಜಂಟಿ ಬಾಧ್ಯತಾ ಗುಂಪುಗಳಿಗೆ ಒದಗಿಸುವುದು ಸಹಕಾರದ ಅವಿಭಾಜ್ಯ ಅಂಗವಾಗಿ ರೂಪುಗೊಂಡಿದೆ.

ಗುಂಪುಗಳು ರಚಿಸಿ ಅವುಗಳ ಮೂಲಕ ಸಾಲ ಒದಗಿಸುವ ರೂಢಿ ತಂದು ಅದು 'ಯಶಸ್ವಿ ಮಾದರಿ' ಎಂದೆನಿಸಿಕೊಳ್ಳಲು ಕಾರಣರಾದವರು ಡಾ॥ ಮಹಮದ್ ಯೂನೂಸ್ ಎಂಬ ಬಾಂಗ್ಲ ದೇಶದ ಆರ್ಥಿಕ ತಜ್ಞ, ಬಾಂಗ್ಲ ದೇಶದಲ್ಲಿ 'ಗ್ರಾಮೀಣ ಬ್ಯಾಂಕ್ ಮುಖೇನ ಬಡವರೂ ಬ್ಯಾಂಕಿಂಗ್ ಸೌಲಭ್ಯಕ್ಕೆ ಅರ್ಹರು ಎಂಬುದನ್ನು ಜಗತ್ತಿಗೆ ತೋರಿಸಿದರು. ಅವು 'ಸಾಲ' ಕೇಂದ್ರಿತ ಗುಂಪುಗಳಾಗಿದ್ದವು. ಭಾರತದಲ್ಲಿ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಪರಿಸ್ಥಿತಿಗನುಗುಣವಾಗಿ 'ಮೊದಲು ಉಳಿತಾಯ ತದನಂತರ ಸಾಲ'. ಮಾದರಿ ಸ್ವಸಹಾಯ ಗುಂಪು ಚಳುವಳಿ ರೂಪುಗೊಂಡಿತು. ಜಂಟಿ ಬಾಧ್ಯತಾ ಗುಂಪುಗಳ ಮುಖೇನ ಚಟುವಟಿಕೆ ಆಧಾರಿತ ಸಾಲ ಉದ್ದೇಶಿತ ಗುಂಪುಗಳ ಮೂಲಕ ಕೂಡ ಕಿರುಹಣಕಾಸು ಯೋಜನೆ ಜಾರಿಗೆ ತಂದಿರುತ್ತೇವೆ.

ಗುಂಪು ಆಧಾರಿತ ಚಟುವಟಿಕೆಗಳು ಉಳಿತಾಯ, ಸಾಲ, ಉತ್ಪಾದನೆ, ಮಾರುಕಟ್ಟೆ ಯಶಸ್ವಿಯಾಗಿದೆ. ಆಂದೋಲನದ ಸ್ವರೂಪವನ್ನು ಪಡೆದಿದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಶೈಕ್ಷಣಿಕ ಸಕಾರಾತ್ಮಕ ಬದಲಾವಣೆಗೆ ಕಾರಣವಾಗಿದೆ. ಒಬ್ಬ ವ್ಯಕ್ತಿ, ವ್ಯಕ್ತಿಯಾಗಿ ವರ್ತಿಸುವುದಕ್ಕೂ ಅವನು ಗುಂಪಿನಲ್ಲಿ ವರ್ತಿಸುವುದಕ್ಕೂ ವಿಭಿನ್ನತೆ ಕಂಡುಬರುತ್ತದೆ. ಆ ಕಾರಣದಿಂದ ಗುಂಪು ಚಟುವಟಿಕೆ ಯಶಸ್ವಿಯಾಗಲು ಕಾರಣವಾಗಿರುತ್ತದೆ. ಮನೋವೈಜ್ಞಾನಿಕವಾಗಿ ಇದನ್ನು 'ಗುಂಪು ಕ್ರಿಯಾಶೀಲತೆ' (group dynamics) ಎಂದು ಕರೆಯಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಮನೋವೈಜ್ಞಾನಿಕವಾಗಿ ಗುಂಪು ಕಾರ್ಯಾಚರಣೆ ಹೇಗೆ ಕ್ರಿಯಾಶೀಲವಾಗಿ ಪರಿಣಮಿಸುತ್ತದೆ ಎಂದು ವಿಶ್ಲೇಷಿಸುವ ಅಗತ್ಯತೆ ಇದೆ. ಇದರಿಂದ ಕೇವಲ ಯಾಂತ್ರಿಕವಾಗಿ ಗುಂಪು ರಚನೆಯಲ್ಲಿ ತೊಡಗಿಕೊಳ್ಳದೆ ಗುಂಪುರಚನೆ ಮತ್ತು ಅದರ ನಿರಂತರ ಕಾರ್ಯಾಚರಣೆಗೆ ಸಹಕಾರಿಯಾಗುವಂತೆ ಕಾರ್ಯನಿರತವಾಗುವುದು ಮುಖ್ಯ ಅಂಶವಾಗುತ್ತದೆ. ಈಗಾಗಲೇ ಸ್ವಸಹಾಯ ಗುಂಪು ರಚನೆ ಮತ್ತು ಅದರ ಸಾಲ ವಿತರಣೆ ಆರಂಭವಾಗಿ ಮೂರು ದಶಕಗಳಾಗುತ್ತಿವೆ. ಅನೇಕ ಗುಂಪುಗಳು ಅದರಲ್ಲಿಯೂ ಮಹಿಳಾ ಸ್ವಸಹಾಯ ಗುಂಪುಗಳು ಶಾಶ್ವತವಾಗಿ ನೆಲೆಗೊಂಡಿರುವುದು ಮತ್ತು ಕೆಲವು ನಶಿಸಿ

ಹೋಗಿರುವುದು ಅನುಭವ ವೇದ್ಯ. ಇದಕ್ಕೆ ಕಾರಣಗಳಾದರೂ ಏನು? ಅದರಲ್ಲಿಯೂ ಸಾಲ ಒದಗಿಸುವ ಸಹಕಾರ ಸಂಸ್ಥೆಗಳಿಗೆ ಇದು ಬಹಳ ಮುಖ್ಯ. ಒಂದೆಡೆ ಆರ್ಥಿಕ ಸಾಮಾಜಿಕ ಬದಲಾವಣೆಗೆ ಸಬಲತೆಗೆ ಕಾರಣವಾಗುವುದಲ್ಲದೇ ಸಹಕಾರ ಸಂಘಗಳಿಗೆ/ಬ್ಯಾಂಕ್‌ಗಳಿಗೆ ಇದು ಒಂದು ವ್ಯವಹಾರದ ಅವಕಾಶ ಎಂಬುದನ್ನು ಮರೆಯಲಾಗದು.

ಮನೋವಿಜ್ಞಾನಿಗಳು 'ಗುಂಪು' ಎಂದರೆ ಏನು? ಎಂಬುದಕ್ಕೆ ಅನೇಕ ವ್ಯಾಖ್ಯಾನಗಳನ್ನು ನೀಡಿರುತ್ತಾರೆ. ಇವುಗಳಲ್ಲಿ ನಮ್ಮ ಸನ್ನಿವೇಶಕ್ಕೆ ಅನುಗುಣವಾಗುವ ವ್ಯಾಖ್ಯಾನಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಬಹುದು.

ಡೇವಿಡ್ (1968) "ಎರಡು ಅಥವಾ ಹೆಚ್ಚಿನ ವ್ಯಕ್ತಿಗಳು ಸಾಮಾಜಿಕ ಮನೋವೈಜ್ಞಾನಿಕವಾಗಿ ರೂಪುಗೊಂಡ ವ್ಯವಸ್ಥೆ. ಈ ವ್ಯಕ್ತಿಗಳು ಮತ್ತು ವ್ಯವಸ್ಥೆ ತಮ್ಮ ಅಂತರ ಬಾಂಧವ್ಯದಿಂದ ಕೆಲವು ಕೆಲಸಗಳನ್ನು ಕೈಗೊಳ್ಳುತ್ತವೆ. ಗುಂಪಿನ ಸದಸ್ಯರ ನಡುವೆ ತಮ್ಮ ಪಾತ್ರ/ಕರ್ತವ್ಯ ನಿರ್ವಹಣೆಯ ಬಾಂಧವ್ಯ ಏರ್ಪಟ್ಟಿರುತ್ತದೆ. ಗುಂಪಿನ ಕರ್ತವ್ಯಗಳು ಕೆಲವು ಮಾನದಂಡಗಳಿಂದ ನಿಯಂತ್ರಿಸಲ್ಪಟ್ಟಿರುತ್ತದೆ".

ಕ್ರೆಚ್, ಕೆಚ್‌ಫೀಲ್ಡ್ ಮತ್ತು ಬಲ್ಲಾಬೆ (1962): ಎರಡು ಅಥವಾ ಹೆಚ್ಚಿನ ವ್ಯಕ್ತಿಗಳು ಈ ಮುಂದಿನ ಷರತ್ತುಗಳನ್ನು ಪಾಲಿಸುತ್ತಾರೆ'

(1)ಸದಸ್ಯರ ನಡುವೆ ಬಾಂಧವ್ಯಗಳು ಸ್ವತಂತ್ರವಾಗಿವೆ. ಒಬ್ಬರ ನಡವಳಿಕೆ ಮತ್ತೊಬ್ಬರ ನಡವಳಿಕೆಯ ಮೇಲೆ ಪ್ರಭಾವ ಬೀರುತ್ತದೆ.

(2)ಒಂದು ತತ್ವ ನಂಬಿಕೆಗಳು ಮೌಲ್ಯಗಳು ಮತ್ತು ಮಾನದಂಡಗಳು ಸದಸ್ಯರ ಪರಸ್ಪರ ನಡವಳಿಕೆಗಳನ್ನು ನಿಯಂತ್ರಿಸುತ್ತವೆ.

ಪೌಲಸ್ (1989) ಒಂದು ಗುಂಪು ಎಂದರೆ ಎರಡು ಅಥವಾ ಹೆಚ್ಚಿನ ಪರಸ್ಪರ ಕಾರ್ಯವೆಸಗುವ ವ್ಯಕ್ತಿಗಳನ್ನು ಹೊಂದಿರುತ್ತದೆ. ಅವರು ಸಾಮಾನ್ಯ ಗುರಿಗಳನ್ನು ಹೊಂದಿರುತ್ತಾರೆ. ಹೇಗಾದರೂ ಪರಸ್ಪರ ಅವಲಂಭಿಗಳಾಗಿದ್ದು ಗುಂಪಿನ ಒಂದು ಭಾಗವಾಗಿರುತ್ತಾರೆ.

ಈ ಮೇಲ್ಕಂಡ ಮೂರು ವ್ಯಾಖ್ಯಾನಗಳನ್ನು ಸ್ವಸಹಾಯ ಗುಂಪು ಮತ್ತು ಜಂಟಿ ಬಾಧ್ಯತಾ ಗುಂಪುಗಳಿಗೆ ಅನ್ವಯಿಸಿ ನೋಡಿದಾಗ ಈ ವ್ಯಾಖ್ಯಾನಗಳಿಗೆ ಒಳಪಟ್ಟಿವೆಯೇ ಎಂದು ಪರಿಶೀಲಿಸಬೇಕಾಗಿದೆ. ಈ ವ್ಯಾಖ್ಯಾನದಲ್ಲಿನ ಅಂಶಗಳಿಗೆ ಸರಿಹೊಂದಿದಲ್ಲಿ ನಮ್ಮ ಗುಂಪು ಯಶಸ್ವಿಯಾಗಿ ಕಾರ್ಯವೆಸಗಬಲ್ಲದು ಎಂದು ನಿರ್ಣಯಿಸಬಹುದಾಗಿದೆ.

**ಗುಂಪು ಪ್ರಮುಖ ವೈಶಿಷ್ಟ್ಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.**

(1)ಎರಡು ಅಥವಾ ಹೆಚ್ಚಿನ ವ್ಯಕ್ತಿಗಳು ಒಟ್ಟುಗೂಡಿ ಪರಸ್ಪರ ಪ್ರಭಾವ ಬೀರುತ್ತಾರೆ.

(2)ಗುಂಪಿನ ಸದಸ್ಯರ ನಡುವೆ ಸಾಮಾಜಿಕ ಅಂತರ ಕ್ರಿಯಾಶೀಲತೆ ಮತ್ತು ಬಾಂಧವ್ಯವನ್ನು ಹೊಂದಿರುತ್ತಾರೆ.

(3)ಗುಂಪಿನ ಸದಸ್ಯರು ಸಾಮಾನ್ಯ ಧ್ಯೇಯ, ಆಸಕ್ತಿಗಳು ಭಾವನಾತ್ಮಕತೆಗಳನ್ನು ಹೊಂದಿರುತ್ತಾರೆ.

(4)ಗುಂಪಿನ ಸದಸ್ಯರ ನಡುವೆ ಬಾಯಿಮಾತಿನಲ್ಲಿ ಅಥವಾ ಇತರೆ ವಿಧದ ಸಂಹವನ ಇರುತ್ತದೆ.

(5)ಗುಂಪಿನ ಸದಸ್ಯರು ಸಾಮಾನ್ಯ ಧ್ಯೇಯ ಹೊಂದಿದ್ದು ಒಬ್ಬರು ಮತ್ತೊಬ್ಬರನ್ನು ಉತ್ತೇಜಿಸುತ್ತಾರೆ.

(6)ಸದಸ್ಯರು ಸಾಮಾನ್ಯ ನಿಷ್ಠೆಯನ್ನು ಹೊಂದಿದ್ದು ಒಂದೇ ತರಹದ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿರುತ್ತಾರೆ.

(7)ಗುಂಪಿನಲ್ಲಿ ಒಗ್ಗಟ್ಟಿನ ಮನೋಭಾವ ಇರುತ್ತದೆ. ಸದಸ್ಯರು ಪರಸ್ಪರ ಗೌರವಯುತವಾಗಿ ಮತ್ತು ಪ್ರೀತಿ ಪ್ರೇಮದಿಂದ ನಡೆದುಕೊಳ್ಳುತ್ತಾರೆ. ಅವರ ನಡುವೆ ಭ್ರಾತೃತ್ವದ ಒಡನಾಟ ಏರ್ಪಟ್ಟಿರುತ್ತದೆ.

(8)ಸದಸ್ಯರ ನಡವಳಿಕೆಗಳನ್ನು ಗುಂಪು ನಿಯಂತ್ರಿಸುತ್ತದೆ.

(9)ಗುಂಪು ಕೆಲವು ಮಾನದಂಡಗಳು ನಿಯಮಗಳನ್ನು ಸದಸ್ಯರ ನಡವಳಿಕೆಗಳನ್ನು ನಿರೀಕ್ಷಿಸುತ್ತದೆ. ಪಾಲನೆ ಮಾಡದ ಸದಸ್ಯರು ಉಚ್ಚಾಟಿಸಲ್ಪಡುತ್ತಾರೆ.

ಗುಂಪು ರಚನೆ ಮಾಡುವಾಗ ಮತ್ತು ಗುಂಪಿನ ಮೇಲ್ವಿಚಾರಣೆ ಮಾಡುವಾಗ ಸಹಕಾರ ಸಂಘ/ಬ್ಯಾಂಕ್/ಸಂಸ್ಥೆಯ ಕಾರ್ಯಕರ್ತರು ಈ ವಿಶಿಷ್ಟಗಳನ್ನು ಗುಂಪು ಹೊಂದಿದೆಯೇ ಎಂಬುದನ್ನು ಖಾತ್ರಿಗೊಳಿಸಿಕೊಳ್ಳುವುದು ಪ್ರಮುಖ ಅಂಶ. ಸ್ವಸಹಾಯ ಗುಂಪಿನ ಸದಸ್ಯರು ಒಂದು ಪ್ರದೇಶದಲ್ಲಿ ವಾಸವಿದ್ದು ಸಾಮಾಜಿಕ, ಆರ್ಥಿಕ ಸಮಾನ ಅಂಶಗಳನ್ನು ಹೊಂದಿದ್ದಾಗ ಮೇಲಿನ ವಿಶಿಷ್ಟತೆಗಳನ್ನು ಉಳ್ಳಂತೆ ಗುಂಪು ರಚನೆಯಾಗಿ ಯಶಸ್ವಿಯಾಗಿ ಕಾರ್ಯಾಚರಣೆ ಮಾಡಲು ಸಾಧ್ಯ. ಇವಲ್ಲದೆ ಗುಂಪಿನ ಸದಸ್ಯರು ಈ ಕೆಳಕಂಡ ಕೆಲವು ಗುಣಲಕ್ಷಣಗಳನ್ನು ಹೊಂದಿದ್ದರೆ ಗುಂಪು ಪ್ರಬಲವಾಗಿ ಕಾರ್ಯವೆಸಗಬಹುದು.

(1)ಈ ಗುಂಪು ನಮ್ಮದು, ನಮಗಾಗಿ, ನಮ್ಮಿಂದಲೇ ಆಗಿದೆ ಎಂಬ ಭಾವ.

(2)**ಸಾಮಾನ್ಯ ಹಿತಾಸಕ್ತಿ:** ಎಲ್ಲ ಸದಸ್ಯರು ಒಂದೇ ರೀತಿಯ ಆಸಕ್ತಿ ಹೊಂದಿರಬೇಕು ನಮ್ಮ ಉದ್ದೇಶ ಉಳಿತಾಯ, ಅಗತ್ಯತೆ ಇದ್ದಾಗ ಸಾಲ, ಸಾಲದ ಸದ್ಬಳಕೆ, ಅಂತಿಮವಾಗಿ ಆರ್ಥಿಕ ಏಳ್ಗೆ ನಮ್ಮ ಸಾಮಾಜಿಕ ಸಾಂಸ್ಕೃತಿಕ ಅಗತ್ಯತೆಯ ಪೂರೈಕೆ.

(3)**ಒಗ್ಗಟ್ಟಿನ ಮನೋಭಾವನೆ:** ನಮ್ಮ ಗುಂಪು ಸದಸ್ಯರು ಒಗ್ಗಟ್ಟಿನಿಂದ ಕಾರ್ಯವೆಸಗುತ್ತೇವೆ ಅಲ್ಪಸ್ವಲ್ಪ ವ್ಯತ್ಯಾಸಗಳಾದಲ್ಲಿ ನಮ್ಮಲ್ಲಿಯೇ ಇತ್ಯರ್ಥ ಪಡಿಸಿಕೊಳ್ಳುತ್ತೇವೆ.

(4)**ಸದಸ್ಯರ ಪರಸ್ಪರ ಬಾಂಧವ್ಯ:** ಗುಂಪಿನ ಸದಸ್ಯರಾಗಿ ನಾವು ಸ್ನೇಹ ಬಾಂಧವ್ಯ ಹೊಂದಿರುತ್ತೇವೆ. ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಒದಗಿ ಬರುತ್ತೇವೆ. ಸಾಲ ಮರುಪಾವತಿಸಲು ಸಾಧ್ಯವಾಗದಿರುವ ಬಗ್ಗೆ ಪರಿಸ್ಥಿತಿ ವಿಶ್ಲೇಷಿಸುತ್ತೇವೆ. ಸಕಾರಣಗಳಿಲ್ಲದಿದ್ದಲ್ಲಿ ತಕ್ಕ ಕ್ರಮವನ್ನು ಗುಂಪು ತೆಗೆದುಕೊಳ್ಳುತ್ತದೆ. ಒಬ್ಬರು ಸುಸ್ತಿಯಾದಲ್ಲಿ ಮತ್ತೊಬ್ಬರ ಮೇಲೆ ಮತ್ತು ಗುಂಪಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬ ಅರಿವು.

(5)**ಗುಂಪುಗಳ ನಡುವೆ ಭಿನ್ನತೆ:** ಒಂದು ಗುಂಪು ಮತ್ತೊಂದು ಗುಂಪಿಗೂ ನಡವಳಿಕೆ, ಸಾಮಾಜಿಕ ಆರ್ಥಿಕ ಹಿನ್ನೆಲೆಗಳು ವಿಭಿನ್ನವಾಗಿದ್ದು ನಡವಳಿಕೆಗಳಲ್ಲಿ ಸಾಮ್ಯತೆ ಇರುವುದಿಲ್ಲ. ಕಾರ್ಯಕರ್ತರು ಇದನ್ನು ಗಮನಿಸಿ ತಕ್ಕಂತೆ ವರ್ತಿಸಬೇಕಾಗುತ್ತದೆ.

(6)**ಸಾಮಾನ್ಯ ಮೌಲ್ಯಗಳು:** ಗುಂಪಿನ ಸದಸ್ಯರು ಒಪ್ಪಿಕೊಂಡ ರೂಢಿಸಿಕೊಂಡಿರುವ ಮೌಲ್ಯಗಳು ಸಾಮಾನ್ಯವಾಗಿ ಬದಲಾಗುವುದಿಲ್ಲ. ಸಂತತಿಯಿಂದ ಸಂತತಿಗೆ ಮುಂದುವರೆದಿರುತ್ತವೆ. ಇದರ ಅಧ್ಯಯನ ಕಾರ್ಯಕರ್ತರಿಗೆ ಗುಂಪು ಮೇಲ್ವಿಚಾರಣೆಯಲ್ಲಿ ಅನುವು ಮಾಡಿಕೊಡುತ್ತದೆ.

(7)**ಗುಂಪಿನ ನಿಯಂತ್ರಣ:** ಗುಂಪಿನ ನಿಯಂತ್ರಣಕ್ಕೆ ಮಾನದಂಡಗಳು, ನಿಯಮಗಳು ರೂಢಿಯಲ್ಲಿವೆ. ಗುಂಪಿನ ಚರ್ಚೆಗೆ ತೆಗೆದುಕೊಳ್ಳಬೇಕಾದ ವಿಷಯಗಳು, ನಿರ್ಣಯಗಳು ಅಲಿಖಿತ ಕಟ್ಟುಪಾಡುಗಳು ಉದಾ: ಸಮಯಪಾಲನೆ, ಉಳಿತಾಯ, ಮರುಪಾವತಿ, ಬಡ್ಡಿದರ ಇತರೆ.

(8)**ಬದ್ಧತೆಗಳು:** ಗುಂಪಿನ ಸದಸ್ಯರು ಅಪ್ಪಿಕೊಂಡ ಒಪ್ಪಿಕೊಂಡ ಬದ್ಧತೆಗಳನ್ನು ಪೂರೈಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಗುಂಪು ರಚನೆಯ ಉದ್ದೇಶದ ಸಾರ್ಥಕತೆ ಇದರಿಂದಾಗುತ್ತದೆ.

(9)**ನಿರೀಕ್ಷೆಗಳು:** ಸದಸ್ಯರು ಗುಂಪು ರಚಿಸಿಕೊಂಡು ಅದರಿಂದ ಯಾವ ಅಪೇಕ್ಷೆಗಳು ಈಡೇರಿಕೆಯಾಗುತ್ತದೆ ಎಂಬ ನಿರೀಕ್ಷೆಗಳನ್ನು ಹೊಂದಿರುತ್ತಾರೋ ಆ ನಿರೀಕ್ಷೆಗಳು ಈಡೇರಿಕೆಯಾಗಿವೆಯೇ ಎಂಬುದು ಅತಿ ಮುಖ್ಯ. ಆಗ ಮಾತ್ರ ಗುಂಪು ಶಾಶ್ವತವಾಗುತ್ತದೆ. ಇಲ್ಲವಾದಲ್ಲಿ ನಶಿಸುತ್ತದೆ.

**ಗುಂಪುರಚನೆ:–**

ಸ್ವಸಹಾಯ ಗುಂಪು ಮತ್ತು ಜಂಟಿ ಬಾಧ್ಯತಾ ಗುಂಪು ರಚನೆ ಮತ್ತು ಕಾರ್ಯಾಚರಣೆಯ ಮೇಲ್ವಿಚಾರಣೆ ಕಾರ್ಯಕರ್ತರಿಗೆ ಗುಂಪು ರಚನೆಯ ವಿವಿಧ ಹಂತಗಳು ತಮ್ಮ ಅನುಭವಕ್ಕೆ ಬಂದಿರುತ್ತದೆ.

(1)**ಗುಂಪುರಚನೆ ಆರಂಭಿಕ ಹಂತ (forming)**: ಈ ಮೊದಲ ಹಂತದಲ್ಲಿ ಒಂದೇ ಪ್ರದೇಶದ ಸಮಾನ ಮನಸ್ಕರು ತಮ್ಮ ಆಕಾಂಕ್ಷೆ ನಿರೀಕ್ಷೆಗಳನ್ನು ಈಡೇರಿಸಿಕೊಳ್ಳಲು ಒಟ್ಟಿಗೆ ಸೇರುವುದು. ಒಬ್ಬರು ಮತ್ತೊಬ್ಬರ ನಿರೀಕ್ಷೆಗಳೇನು ಎಂದು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಪರಸ್ಪರ ಅನಿಸಿಕೆಗಳು ಹೊಂದಿಕೊಂಡಾಗ ಗುಂಪುರಚನೆಯಾದಂತಾಗುತ್ತದೆ.

(2)**ಕಡೆಯುವ(ಮಥನ) (ಬಿರುಗಾಳಿ) ಹಂತ (storming)** : ಪರಸ್ಪರ ತಪ್ಪು ತಿಳುವಳಿಕೆಗಳು ಹಿತಾಸಕ್ತಿ ಸಂಘರ್ಷಗಳು ಗುಂಪಿನ ನಿರೀಕ್ಷೆ, ಗುರಿ, ಆಕಾಂಕ್ಷೆ ಈಡೇರಿಕೆಯಲ್ಲಿ ತಮ್ಮ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು, ಭಿನ್ನಾಭಿಪ್ರಾಯಗಳು (ಈ ಹಂತದಲ್ಲಿ ಕಾರ್ಯಕರ್ತರ ಪಾತ್ರ ಬಹುಮುಖ್ಯ) ಇವುಗಳನ್ನು ಹೋಗಲಾಡಿಸಲು ಸದಸ್ಯರುಗಳು ಸಂಘರ್ಷಗಳಿಗೆ ಪರಿಹಾರ ಕಂಡುಹಿಡಿದು ಸ್ಪಷ್ಟ ಗುರಿಗಳೊಡನೆ ಹೊರಹೊಮ್ಮಿದಲ್ಲಿ ಯಶಸ್ವಿ ಗುಂಪು ರಚನೆಯಾಗುತ್ತದೆ. ಈ ಹಂತದಲ್ಲಿ ಗುಂಪು ತಪ್ಪದೇ ಸೇರುವುದು, ಮುಕ್ತ ಮನಸ್ಸಿನ ಚರ್ಚೆ, ಸ್ಪಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯತೆ ಇರುತ್ತದೆ.

(3)**ಸಾಮಾನ್ಯ (norming) ಹಂತ**: ಪಾತ್ರೆಯ ಹಾಲು ಕೊತಕೊತ ಕುದ್ದು ತಟಸ್ಥವಾಗುವಂತೆ ಗುಂಪು ಒಂದು ಹಂತ ತಲುಪುತ್ತದೆ. ಸದಸ್ಯರು ಪರಸ್ಪರ ಅರ್ಥೈಸಿಕೊಂಡಿರುತ್ತಾರೆ. ಅನುಮಾನಗಳು ಪರಿಹಾರವಾಗಿವೆ. ಹಿತಾಸಕ್ತಿ, ಸಂಘರ್ಷಗಳು ಪರಿಹಾರಕಂಡುಕೊಂಡಿವೆ. ಗುಂಪನ್ನು ಮುನ್ನಡೆಸುವ ಬಗ್ಗೆ ಸ್ಪಷ್ಟ ಮಾರ್ಗ ಕಂಡುಕೊಂಡಿದ್ದಾರೆ. ನಿರೀಕ್ಷೆಗಳೇನು ಎಂಬ ಬಗ್ಗೆ ಎಲ್ಲ ಸದಸ್ಯರಿಗೆ ಸ್ಪಷ್ಟ ತಿಳುವಳಿಕೆ ಇದೆ.

(4)**ಕಾರ್ಯಾಚರಣೆ (performing):** ಗುಂಪು ಫಲಿತವಾಗಿದೆ. ಸದಸ್ಯರ ನಡುವೆ ಹೊಂದಾಣಿಕೆಯಾಗಿದೆ. ಈ ಹಂತದಲ್ಲಿ ನಿರ್ಧಾರಗಳು ಗುರಿಗಳನ್ನು ಸಾಧಿಸಲು ಸದಸ್ಯರ ತರ್ಕಸಮ್ಮತವಾದ ವಿವೇಚನಯುತವಾದ ಆಲೋಚನೆಗಳಿಂದ ಹೊರಹೊಮ್ಮುತ್ತದೆ. ಆದೇಶದ ಹಂತವನ್ನು ಮೀರಿರುತ್ತದೆ. ನೀರೀಕ್ಷೆಗಳಿಗಿಂತ ಕಾರ್ಯ ಎಸಗುವ ಗುರಿತಲುಪುವ ಕೆಲಸ ಕಾರ್ಯಗಳನ್ನು ಮಾಡುವ ಹಂತ ತಲುಪಿರುತ್ತದೆ.

(5)**ಕರಗುವ (adjourning) ಹಂತ**: ತನ್ನ ನಿರೀಕ್ಷೆಗಳನ್ನು ತಲುಪಿದ ನಂತರ ಸದಸ್ಯರು 'ಸಾಕು' ಎನಿಸಲು ಆರಂಭವಾಗುತ್ತದೆ. ಒಂದು ರೀತಿಯ ದುಃಖ ದುಮ್ಮಾನಗಳು ಮೇಲ್ಪಂಕ್ತಿಯನ್ನು ಪಡೆಯುತ್ತವೆ. ಸದಸ್ಯರು ಗುಂಪು ತ್ಯಜಿಸಲು ಆರಂಭಿಸುತ್ತಾರೆ. ಗುಂಪು ಇನ್ನಿಲ್ಲವಾಗುತ್ತದೆ.

ಕಡೆಯ ಹಂತ ತಲುಪುವ ಮೊದಲಿಗೆ ಆರ್ಥಿಕ ಸಹಾಯ ಒದಗಿಸುತ್ತಿರುವ ಸಂಸ್ಥೆ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ತಾನು ನೀಡಿದ ಸಾಲ ಪೂರ್ಣ ಮರುಪಾವತಿಯಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳುವುದು ಅತಿ ಮುಖ್ಯ. ಕಾರ್ಯಕರ್ತ ಮೇಲ್ವಿಚಾರಕರ ಪಾತ್ರ ಗುಂಪು ನಿರಂತರವಾಗಿ ಕಾರ್ಯಾಚರಣೆಮಾಡುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ. ಗುಂಪಿನ ಸಭೆಗಳಿಗೆ ನಿರಂತರ ಭೇಟಿ, ಭಿನ್ನಾಭಿಪ್ರಾಯಗಳ ನಿವಾರಣೆ, ಹಿತಾಸಕ್ತಿ, ಸಂಘರ್ಷಗಳಿಗೆ ಪರಿಹಾರ ಸೂಚನೆ, ಮಾರ್ಗದರ್ಶನದಿಂದ ಇದು ಸಾಧ್ಯವಾಗುತ್ತದೆ. ಇದರಲ್ಲಿ ಈ ಕೆಳಕಂಡ ಹತ್ತು ಸೂತ್ರಗಳನ್ನು ಕಾರ್ಯಕರ್ತರು ನೆನಪಿನಲ್ಲಿಡ ಬೇಕಾಗುತ್ತದೆ.

(1)ಮಾನವ ಹುಟ್ಟಿನಿಂದ ಸಂಘ ಜೀವಿ, ಮನುಷ್ಯ ಏಕಾಂಗಿಯಾಗಿ ಜೀವಿಸಲಾರ, ಸಾಮಾಜಿಕ ಗುಂಪಿನ ಸದಸ್ಯನಾಗಲು ಮನಸ್ಸು ಹಂಬಲಿಸುತ್ತಿರುತ್ತದೆ. ಗುಂಪಿನಲ್ಲಿ ಸಮಾಜ ಗುರುತಿಸುತ್ತದೆ. ನಾವು ಯಾರೆಂಬುದು ಅರಿವಾಗುತ್ತದೆ.

(2)ಗುಂಪು ಸೇರಲು ವ್ಯಕ್ತಿ ಕಾತುರನಾಗಿರುತ್ತಾನೆ. ಆದರೆ ಆರಂಭಿಕ ಹಿಂಜರಿಕೆ ಇರುತ್ತದೆ. ಇದನ್ನು ಹೋಗಲಾಡಿಸಬೇಕು.

ಗುಂಪು ಆತನನ್ನು ಮೌಲ್ಯಮಾಪನ ಮಾಡುತ್ತದೆ.

(3)ವ್ಯಕ್ತಿ ಗುಂಪು ಸೇರುವುದರಿಂದ ಅವರ ವರ್ತನೆಗಳು ಬದಲಾವಣೆಯಾಗುತ್ತದೆ. ಗುಂಪು ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸುತ್ತದೆ. ನಾವು ನಿರೀಕ್ಷೆ ಮಾಡಿದುದಕ್ಕಿಂತ ತೀವ್ರತರವಾದ ಪರಿಣಾಮಕಾರಿಯಾದ ಬದಲಾವಣೆಯನ್ನು ಗುಂಪಿನ ಮಾನದಂಡನೆಗಳ ಪಾಲನೆಯಿಂದ ಸಾಧ್ಯವಾಗುತ್ತದೆ. ಗುಂಪು ಸದಸ್ಯರ ಸಮಾನ ವರ್ತನೆ ತರುವಲ್ಲಿ ಯಶಸ್ವಿಯಾಗುತ್ತದೆ.

(4)ಗುಂಪಿನ ಮಾನದಂಡಗಳು ಕಠಿಣವಾಗಿರುತ್ತವೆ ಮತ್ತು ಅದರ ಪಾಲನೆಯನ್ನು ನಿರೀಕ್ಷಿಸುತ್ತದೆ. ಪಾಲಿಸದಿದ್ದಲ್ಲಿ ಆ ವ್ಯಕ್ತಿ ಗುಂಪಿನಿಂದ ಹೊರಹಾಕಲ್ಪಡುತ್ತದೆ.

(5)ಗುಂಪು ವಹಿಸಿದ ಕರ್ತವ್ಯವನ್ನು ನಿರ್ವಹಿಸುವುದು ಸದಸ್ಯರ ಜವಾಬ್ದಾರಿ. ನಿಗದಿತ ನಿಯಮಗಳು ಕರ್ತವ್ಯಗಳು ಪ್ರತಿ ಸದಸ್ಯರಿಗೂ ಅನ್ವಯವಾಗುತ್ತದೆ. ವಹಿಸಿದ ಕರ್ತವ್ಯವು ಅವರ ಸ್ಥಾನವನ್ನು ಸೂಚಿಸುತ್ತದೆ.

(6)ಯಾವುದೇ ಗುಂಪಿನಲ್ಲಿ ಅದರ ನಾಯಕತ್ವ, ನಾಯಕನ ಪಾತ್ರ ಬಹುಮುಖ್ಯ. ನಾಯಕರು ಎಲ್ಲಿಂದ ಬರುತ್ತಾರೆ. ಗುಂಪಿನಲ್ಲಿಯೇ ಹುಟ್ಟಿಕೊಳ್ಳುತ್ತಾರೆ. (ಹೊರಗಿನ ನಾಯಕನ ಪಾತ್ರ ಮೇಲ್ವಿಚಾರಣೆಗಳಿಗೆ, ಮಾರ್ಗದರ್ಶನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದುದರಿಂದಲೇ ಸ್ವಸಹಾಯ ಗುಂಪುಗಳಲ್ಲಿ ಪ್ರತಿನಿಧಿ–1 ಮತ್ತು 2 ಎಂದು ಕರೆಯಲಾಗುತ್ತದೆ. ಪ್ರತಿ ಆರು ತಿಂಗಳಿಗೆ ಬದಲಾವಣೆ ಮಾಡುವ ಪದ್ಧತಿಯನ್ನು ರೂಢಿಗೆ ತಂದಿದೆ. ಇದರಿಂದ ಸದಸ್ಯರಲ್ಲಿ ಸಮಾನತೆ ಕಾಪಾಡಲು ಸಾಧ್ಯವಾಗುತ್ತದೆ.)

(7)ಗುಂಪು ತಮ್ಮ ಕಾರ್ಯಾಚರಣೆಯನ್ನು ಸುಧಾರಿಸಲು ಮತ್ತು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಗುಂಪಿಗೆ ಸೇರದ ಮತ್ತೊಬ್ಬರ ಇರುವಿಕೆ (ಹಾಜರಾತಿ) ಗುಂಪಿಗೆ ಸ್ಫೂರ್ತಿದಾಯಕವಾಗಿರುತ್ತದೆ. ಗುಂಪಿನ ವರ್ತನೆ ಆರೀತಿ ಇರುತ್ತದೆ ಎಂಬುದು ಪ್ರಯೋಗಗಳಿಂದ ಕಂಡುಬಂದಿರುವ ಸತ್ಯ. (ಕಾರ್ಯಕರ್ತ ಮೇಲ್ವಿಚಾರಕರು ಸ್ವಸಹಾಯ/ ಜಂಟಿಬಾಧ್ಯತಾ ಗುಂಪುಗಳ ಸಭೆಗೆ ಬೇಟಿ ನೀಡುವುದು ಅದರ ಕಾರ್ಯಾಚರಣೆಗೆ ಇಂಬುಕೊಟ್ಟಂತಾಗುತ್ತದೆ)

(8)ಗುಂಪು ಕಾರ್ಯಾಚರಣೆಯಲ್ಲಿ ಕೆಲವರು 'ಕಳ್ಳೆತ್ತುಗಳು' ಆಗುವುದು ಸಾಮಾನ್ಯ. ತಮ್ಮ ಪೂರ್ಣ ಪ್ರಮಾಣದ ಶಕ್ತಿ ವಿನಿಯೋಗ ಮಾಡದೇ ಇರುವುದು ಸರ್ವೇಸಾಮಾನ್ಯ. (ಇದನ್ನು ಹೋಗಲಾಡಿಸುವ ಪ್ರಯತ್ನ ಕಾರ್ಯಕರ್ತರು ಮತ್ತು ಇತರೆ ಸದಸ್ಯರಿಂದ ಸಾಧ್ಯ)

(9)ಗುಂಪುಗಳಲ್ಲಿ ಗುಂಪುಗಾರಿಕೆ, ಊಹಾಪೋಹಗಳು, ತೆರೆಮರೆಯ ಮಾತುಗಳು ಸರ್ವೇಸಾಮಾನ್ಯ. ಅನೇಕ ಈ ರೀತಿ ವಿಷಯಗಳು ಸತ್ಯ ಸಂಗತಿಗಳೇ ಆಗಿರುತ್ತವೆ ಎಂಬುದು ಸತ್ಯವೇ. (ಗುಂಪಿನ ಯಶಸ್ವಿ ಕಾರ್ಯಾಚರಣೆಗೆ ಇವುಗಳಿಗೆ ಅವಕಾಶವಿಲ್ಲದಂತೆ ನಿರ್ವಹಣೆ ಮಾಡುವುದು ಮುಖ್ಯ ಸಂಗತಿ)

(10) ಗುಂಪಿನ ಸದಸ್ಯರಲ್ಲಿ ಸ್ಪರ್ಧೆ ಮೂಡುವುದು ಮತ್ತು ಗುಂಪುಗಳ ನಡುವೆ ಸ್ಪರ್ಧೆಗಳು ನಡೆಯುತ್ತವೆ. ಸ್ಪರ್ಧೆಗಳು ಆರೋಗ್ಯಕರವಾಗಿದ್ದು ಬೆಳವಣಿಗೆಗೆ ಅವಕಾಶವಾಗುತ್ತದೆಯಾದರೆ ಇದನ್ನು ಪ್ರೋತ್ಸಾಹಿಸಬಹುದು. ಸ್ಪರ್ಧೆಗಿಂತ ಗುಂಪಿನ ಸದಸ್ಯರಲ್ಲಿ ಸಹಕಾರ, ಗುಂಪುಗಳ ನಡುವೆ ಸಹಕಾರ ಮತ್ತೂ ಒಳ್ಳೆಯ ಕ್ರಮವಾಗಿರುತ್ತದೆ.

**ಗುಂಪು ರಚನಾ ಸ್ವರೂಪ:–**

ಗುಂಪು ರಚನೆಯಲ್ಲಿ ಮತ್ತು ಗುಂಪು ಸುಸೂತ್ರವಾಗಿ ಕಾರ್ಯಾಚರಣೆ ಎಸಗುತ್ತದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಈ ಕೆಳಕಂಡ ಅಂಶಗಳ ಬಗ್ಗೆ ಖಚಿತತೆ ಮತ್ತು ಸ್ಪಷ್ಟತೆ ಇರತಕ್ಕದ್ದು.

(1)**ಪಾತ್ರ:** ಗುಂಪಿನಲ್ಲಿ ಆಯಾ ಸದಸ್ಯನ ಪಾತ್ರ ಏನು ಎಂಬ ಬಗ್ಗೆ ಖಚಿತತೆ ಪ್ರತಿನಿಧಿ–1 ಪ್ರತಿನಿಧಿ–2 ಇತರೆ ಸದಸ್ಯರು

ಅವರ ಕರ್ತವ್ಯಗಳಾವುವು ಸ್ವಚ್ಛತೆ, ತಿಳುವಳಿಕೆ ಪತ್ರ ನೀಡಿಕೆ, ಹಂಚಿಕೆ, ಪ್ರಾರ್ಥನೆ, ಸ್ವಾಗತ, ವಂದನಾರ್ಪಣೆ, ದೇವರ ಪೂಜೆ, ಪುಸ್ತಕ ನಿರ್ವಹಣೆ, ಬ್ಯಾಂಕಿನ ಲೆಕ್ಕ ನಿರ್ವಹಣೆ ಇತರೆ.

(2)**ಮಾನದಂಡಗಳು/ನಿಯಮಗಳು:** ನಿರ್ದಿಷ್ಠ ಮಾನದಂಡಗಳು ನಿಯಮಗಳಿದ್ದಲ್ಲಿ ಸದಸ್ಯರು ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

(3)**ಸ್ಥಾನಮಾನ:** ಸಮಾಜದಲ್ಲಿ ಗುಂಪಿಗೆ ಸ್ಥಾನಮಾನ ಮತ್ತು ಗುಂಪಿನಲ್ಲಿ ಪ್ರತಿ ಸದಸ್ಯನಿಗೆ ಸ್ಥಾನಮಾನ ಸಿಗುವುದು ವ್ಯಕ್ತಿಯ ಪ್ರತಿಷ್ಠೆಯಾಗುತ್ತದೆ. ಇದಕ್ಕೆ ಎಲ್ಲ ಸದಸ್ಯರಿಗೂ ಸಮಾನ ಅವಕಾಶವಿರಬೇಕಾಗುತ್ತದೆ.

(4)**ಹೊಂದಾಣಿಕೆ ಸ್ವಭಾವ:** ಗುಂಪಿನ ಸದಸ್ಯರ ನಡುವೆ ಒಂದು ರೀತಿಯ ಸಾವಯವ ಸಂಬಂಧ ಏರ್ಪಟ್ಟು ಹೊಂದಾಣಿಕೆಯ ಮನೋಭಾವ ರೂಪುಗೊಳ್ಳಬೇಕು.

**ಗುಂಪಿನಲ್ಲಿ ಸಂಘರ್ಷ:–**

ಗುಂಪು ಎಂದೊಡನೆ ಸಂಘರ್ಷ ಸರ್ವೇಸಾಮಾನ್ಯ. ಗುಂಪಿನಲ್ಲಿ ಉಪಗುಂಪುಗಳ ರಚನೆಯಾಗುತ್ತವೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಮೌಲ್ಯಗಳ, ಧರ್ಮ, ಜಾತಿಗಳ, ಹಿತಾಸಕ್ತಿಯು ಕಾರಣವಾಗುತ್ತದೆ.ಗುಂಪು ಸಕಾರಾತ್ಮಕ ಬೆಳವಣಿಗೆಗೆ ಪೂರಕವಾಗಿ ಸಂಘರ್ಷ ಉಂಟಾದರೆ ಒಳ್ಳೆಯದು ಆದರೆ ಮಾರಕವಾಗುವ ಸಂಘರ್ಷಗಳು ಉಂಟಾಗಬಾರದು. ನಕಾರಾತ್ಮಕ ಪರಿಣಾಮಗಳು ಗುಂಪು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಬಲ್ಲದು.ಹಾಳು ಮಾಡಬಲ್ಲದು ಸಂಘರ್ಷಗಳಿಗೆ ಕಾರಣಗಳುನ್ನು ಕಂಡುಹಿಡಿದು ಸಕಾಲದಲ್ಲಿ ಸೂಕ್ತ ಚಿಕಿತ್ಸಾ ಕ್ರಮ ತೆಗೆದುಕೊಳ್ಳುವುದು ಬಹುಮುಖ್ಯವಾಗುತ್ತದೆ.

**ಗುಂಪು ಕ್ರಿಯಾಶೀಲತೆ: (group dynamics)**

ಗುಂಪು ಕ್ರಿಯಾಶೀಲತೆ ಎಂದರೆ ಗುಂಪಿನ ಸದಸ್ಯರಲ್ಲಿನ ಅಂತರ ಸಂಬಂಧಗಳು. ಸದಸ್ಯರ ನಡವಳಿಕೆಗಳಲ್ಲಿ ಏರ್ಪಡುವ ಮಾನದಂಡಗಳು ಮತ್ತು ಮೌಲ್ಯಗಳು ಒಂದು ವಿಶಿಷ್ಟತೆಯನ್ನು ಸೃಷ್ಟಿ ಮಾಡುತ್ತದೆ. ತನ್ನ ಪಾತ್ರವನ್ನು ಬದಲಾಯಿಸುತ್ತದೆ. ಒಟ್ಟಾರೆ ವ್ಯಕ್ತಿಗಳ ಅಂತರ ಪ್ರಕ್ರಿಯೆಯು ಉತ್ಪನ್ನ ಗುಂಪಾಗುತ್ತದೆ.

ಗುಂಪಿನಲ್ಲಿ ವ್ಯಕ್ತಿಯ ವರ್ತನೆ ಬದಲಾವಣೆಗೊಳ್ಳುತ್ತದೆ. ಅಂತರ ಪ್ರಕ್ರಿಯೆಗುಂಪು ಮತ್ತು ಸದಸ್ಯನ 'ಕೊಡು–ಕೊಳ್ಳುವ' ಪ್ರಕ್ರಿಯೆ ಯಾಗಿರುತ್ತದೆ. ಗುಂಪು ವ್ಯಕ್ತಿಯ ವರ್ತನೆಯ ಬದಲಾವಣೆಗೆ ಕಾರಣವಾಗುತ್ತದೆ. ನಿಯಮಾನುಸಾರ ರಚನೆಯಾದ ಗುಂಪಾದರೂ ಸದಸ್ಯರ ನಡುವೆ ನಿಯಮಾನುಸಾರವಲ್ಲದ ಸಂಬಂಧಗಳು ಏರ್ಪಡುತ್ತದೆ. ಗುಂಪಿನ ಸದಸ್ಯರ ನಡುವೆ ನಿಯಮಾನಸಾರವಲ್ಲದ ವಾಹಿನಿಯಲ್ಲಿ ಹೆಚ್ಚು ಸಮರ್ಥವಾಗಿ ಸಂವಹನ ಸಾಧ್ಯವಾಗುತ್ತದೆ. ಉಪಗುಂಪುಗಳು ಹೆಚ್ಚು ಸಮಾನವಾಗಿರುತ್ತದೆ ಮತ್ತು ಗುಂಪಿನ ನಿರ್ಣಯಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಒತ್ತಡ ತರುತ್ತವೆ.

ಆದುದರಿಂದ ಗುಂಪು ಕ್ರಿಯಾಶೀಲತೆ ಎಂಬುದು ಕ್ಲಿಷ್ಟಕರ ಸಂಗತಿಯಾಗಿದ್ದು ಭೇದ್ಯಮಾಡಿ ಅಧ್ಯಯನ ಮಾಡುವುದು ಕಷ್ಟದವಿಷಯವೇ ಸರಿ. ಗುಂಪು ಕ್ರಿಯಾಶೀಲತೆ (dynamics) ಎರಡು ಪದಗಳನ್ನು ಹೊಂದಿದೆ. ಗುಂಪು ಎಂದರೆ ಏನು ಎಂಬುದನ್ನು ಅರಿತಿದ್ದೇವೆ. ಕ್ರಿಯಾಶೀಲತೆ (dynamics) ಎಂದರೇನು? ಇದರ ಮತ್ತೊಂದು ಅರ್ಥ ಬಲ (force), ಗುಂಪನ್ನು ಕ್ರಿಯಾಶೀಲವಾಗಿಸುವ ಬಲಗಳು ಗುಂಪು ಒಂದು ನಿರ್ದಿಷ್ಠ ಗುರಿಯಿಂದ ರಚನೆಯಾದಾಗ ಒಂದು ಸಾಮಾಜಿಕ ಬಲ ಏರ್ಪಾಡಾಗುತ್ತದೆ. ವ್ಯಕ್ತಿಯ ವರ್ತನೆ ನಿಂತ ನೀರಲ್ಲ. ಪರಸ್ಪರ ಅಂತರ ಪ್ರಕ್ರಿಯೆಯಿಂದ ಬದಲಾವಣೆಗೆ ಒಳಗಾಗುತ್ತದೆ. ಗುಂಪು ವ್ಯಕ್ತಿಗಳಲ್ಲಿ ಗೋಚರವಾಗಬಲ್ಲ ಪ್ರಮುಖ ಬದಲಾವಣೆ ತರುತ್ತದೆ. ಗುಂಪು ಸಕಾರಾತ್ಮಕ ಕ್ರಿಯಾತ್ಮಾಕ ಮತ್ತು ನಕಾರಾತ್ಮಕ ಅಘಾತಕಾರಿ ಬೆಳವಣಿಗೆಗೂ ಕಾರಣವಾಗಬಹುದು. ಆದರೆ ಹೆಚ್ಚು ಸಕಾರಾತ್ಮಕ ಹಾಗೂ ಕ್ರಿಯಾತ್ಮಕ ಬದಲಾವಣೆಗೆ ಗುಂಪು ಕ್ರಿಯಾಚರಣೆ ಕಾರಣವಾಗಿರುವುದು ಕಂಡುಬರುತ್ತದೆ. ಗುಂಪಿನ ಆಕರ್ಷಕತೆ ವ್ಯಕ್ತಿಗೆ ಅವಶ್ಯಕತೆಗಳನ್ನು ಪೂರೈಕೆ ಮಾಡುತ್ತದೆ. ಅದರಲ್ಲಿ ಗುಂಪಿನಲ್ಲಿ ಹೊಂದಾಣಿಕೆ ಬಹುಮುಖ್ಯ. ಇದರ ಸಾಧನೆಗೆ

ಕರ್ತವ್ಯದ ನಿರ್ಧಿಷ್ಟ ದಿಕ್ಕು ತಿಳಿದಿರಬೇಕು. ಪರಸ್ಪರ ವೈಯುಕ್ತಿಕ ಆಕರ್ಷಣೆ ಇರಬೇಕು. ಮಿಗಿಲಾಗಿ ಗುಂಪು ನನ್ನದು ಎಂಬ ಪ್ರತಿಷ್ಠೆ ಬಹಳ ಮುಖ್ಯ. ಗುಂಪಿನ ಕ್ರಿಯಾಶೀಲತೆ ಕರುಣೆ, ಸಲಹೆ, ಮಾರ್ಗದರ್ಶನ ಮತ್ತು ಅನುಕರಿಸುವ ಪ್ರಭಾವಕ್ಕೆ ಒಳಗಾಗುತ್ತದೆ. ಸದಸ್ಯರು ಮತ್ತೊಬ್ಬರು ಏನು ಅನುಭವಿಸುತ್ತಿರುತ್ತಾರೋ ಅದನ್ನು ಅನುಭವಿಸಲು ಆರಂಭಿಸುತ್ತಾರೆ. ನಾಯಕರು ನೀಡುವ ಸಲಹೆಯನ್ನು ಒಪ್ಪುತ್ತಾರೆ. ನಾಯಕರು ಗುಂಪಿನಿಂದಲೇ ಹೊರಹೊಮ್ಮಲು ಸಾಧ್ಯವಾಗುತ್ತದೆ. ತರಬೇತಿ ಬೇಟಿ ಕಾರ್ಯಕ್ರಮಗಳು ಅತ್ಯುತ್ತಮ ಪ್ರಭಾವ ಬೀರುತ್ತದೆ.

ಗುಂಪು ಕಾರ್ಯಾಚರಣೆಯಲ್ಲಿ ಈ ಮನೋವೈಜ್ಞಾನಿಕ ದೃಷ್ಟಿಕೋನದ ವಿಶ್ಲೇಷಣೆ ಸ್ವಸಹಾಯ ಗುಂಪು ಮತ್ತು ಜಂಟಿ ಬಾಧ್ಯತೆ ಗುಂಪುಗಳ ರಚನೆ, ಮೇಲ್ವಿಚಾರಣೆ ನಡೆಸುವವರಿಗೆ ಮತ್ತು ಸಾಲ ಒದಗಿಸಿ ಉಳಿತಾಯ ಪ್ರೋತ್ಸಾಹಿಸಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಬದಲಾವಣೆಗೆ ಕಾರಣೀ ಬೂತರಾಗಿರುವ ಸಹಕಾರ ಸಂಘ / ಬ್ಯಾಂಕ್‌ಗಳಿಗೆ ತಮ್ಮ ಕಾರ್ಯಾಚರಣೆಯನ್ನು ಮತ್ತಷ್ಟು ಬಲ ಪಡಿಸಲು ಸಹಾಯವಾಗಿರುತ್ತದೆ ಎಂದು ಭಾವಿಸಲಾಗಿದೆ.

(ಆಧಾರ: ಸ್ನಾತಕ್ಕೋತ್ತರ ಮನೋವಿಜ್ಞಾನ ಪುಸ್ತಕ, ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯ)

**************************************************************************************************

## 59. ಅಂತರಾಷ್ಟ್ರೀಯ ಸಹಕಾರ ದಿನ 06ನೇ ಜುಲೈ 2024.

ವಿಶ್ವದಲ್ಲಿ ಸಹಕಾರ ಚಳುವಳಿ ಉಗಮ ಗೊಂಡು ಎರಡು ಶತಮಾನದ ಸನಿಹದಲ್ಲಿದೆ. ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿ ಅಲ್ಲದೆ ಎಲ್ಲರನ್ನೂ ಒಳಗೊಳ್ಳುವ ಗುಣವಿಶೇಷ ಇರುವುದು 'ಸಹಕಾರ' ಮಾದರಿಯಲ್ಲಿ ಎಂಬದು ಅತಿಶಯೋಕ್ತಿಯಲ್ಲ. 'ಹನಿ ಹನಿ ಗೂಡಿದರೆ ಹಳ್ಳ, ತೆನೆತೆನೆಗೂಡಿದರೆ ಬಳ್ಳ' ಎಂಬ ನಾಣ್ಣುಡಿ ಸೃಷ್ಟಿಯಾಗಿರುವುದೇ ಸಹಕಾರ ಪದ್ಧತಿಯ ಅನುಸರಣೆಯಿಂದ, ಇವನಾರವ ಇವನಾರವ ಎಂದೆನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದ ಬಸವಣ್ಣನವರ ಉಕ್ತಿ ಇದನ್ನೇ ಧ್ವನಿಸುತ್ತದೆ. ಅಲ್ಲದೆ ಕಾಗೆಯೊಂದ ಅಗಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವ' ಎಂಬ ವಚನ ಸಹಕಾರ ತತ್ವಗಳ ಸಾರವನ್ನು ಸಾರುತ್ತದೆ. ಈ ಸಹಕಾರ ಪದ್ಧತಿ ಮಾನವನ ಹುಟ್ಟಿನಿಂದಲೇ ಆರಂಭಗೊಂಡರೂ ಒಬ್ಬ ಮನುಷ್ಯ ಸಾಧನೆ ಮಾಡಲಾಗದ್ದನ್ನು ಹತ್ತು ಜನ ಸೇರಿ ಮಾಡಬಹುದು. ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಸ್ವಯಂ ಸಹಾಯ ಮತ್ತು ಪರಸ್ಪರ ಸಹಾಯ ಎಂಬ ತತ್ವಗಳ ಆಧಾರದ ಮೇರೆಗೆ ಮಾನವ ತನ್ನ ಕನಿಷ್ಟ ಅಗತ್ಯತೆಯ ಪೂರೈಕೆ, ಅಲ್ಲದೆ, ಆರ್ಥಿಕ ಸಶಕ್ತತೆ ಪಡೆಯಲು ಆರಂಭಗೊಂಡಿದ್ದು ಯುರೋಪ್ ಖಂಡದ ದಲ್ಲಿ. ಈ ದಿಸೆಯಲ್ಲಿ ಆಲೋಚಿಸಿದ ಮತ್ತು ಕಾರ್ಯಗತ ಗೊಳಿಸಲು ಯತ್ನಿಸಿದ ಪ್ರಯತ್ನ ರಾಬರ್ಟ್ ಓವನ್(1771–1858) ರಂದು, ಆದುದರಿಂದಅವರನ್ನು ಸಹಕಾರ ಪಿತಾಮಹ ಎಂದು ಕರೆಯಲಾಗುತ್ತದೆ. ಅಂದಿನಿಂದ ಇಂದಿನ ವರೆಗೂ ಈ ಅವಿರತ ಪ್ರಯತ್ನ ನಡೆಯುತ್ತಲೇ ಬಂದಿದೆ.ಮಾನವ ಜನಾಂಗದ ಒಳಿತಿಗೆ ಇದರಿಂದ ಆಗಿರುವ, ಆಗಲಿರುವ ಪರಿಣಾಮಗಳ ವಿಶ್ಲೇಷಣೆ, 21 ನೇ ಶತಮಾನದ ಈ ಆಧುನಿಕ ಜಗತ್ತಿನಲ್ಲಿ ಇದರ ಪ್ರಸ್ಥುತೆ ಬಗ್ಗೆ ಚಿಂತನ–ಮಂಥನ, ವಿಶ್ಲೇಷಣೆ 2024 ನೇ ಇಸವಿ 06 ನೇ ಜುಲೈ ತಿಂಗಳಲ್ಲಿ ನಡೆಸಬೇಕಾಗಿರುವುದುಸಹಕಾರಿಗಳ ಮುಂದಿರುವ ಸವಾಲು. ಈ ಅಂತರರಾಷ್ಟ್ರೀಯ ಸಹಕಾರ ದಿನವು 102 ನೇ ಆಚರಣೆ ಯಾಗಿರುತ್ತದೆ. ಆದರೂ ಇದಕ್ಕೆ ವಿಶ್ವ ಸಂಸ್ಥೆ ಮುನ್ನಡೆ ದೊರೆತದ್ದು 1992 ರಲ್ಲಿ, ಪ್ರತಿ ವರ್ಷ ಮೊದಲ ಶನಿವಾರವನ್ನು ಅಂತಾರಾಷ್ಟ್ರೀಯ ಸಹಕಾರ ದಿನ ವೆಂದು ಆಚರಿಸಲಾಗುತ್ತದೆ.ಇದರಿಂದಾಗಿ ಸಹಕಾರದ ಬಗ್ಗೆ ಸರ್ಕಾರಗಳ, ನಾಗರೀಕ ಸಮಾಜ ಸಂಸ್ಥೆಗಳ ಮತ್ತು ಮಿಗಿಲಾಗಿ ಸಾರ್ವಜನಿಕರ ಗಮನ ಸೆಳೆಯಲು ಸಾಧ್ಯವಾಗಿದೆ.

ಈ ದಿಸೆಯಲ್ಲಿ ವಿಶ್ವದ ಸಹಕಾರ ಜಾಲದ ಶೃಂಗ ಸಂಸ್ಥೆ ಯಾದ 'ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ' ಯು ಈ ವರ್ಷದ ಘೋಷ ವಾಕ್ಯವನ್ನು ಈ ರೀತಿ ಹೊರಡಿಸಿದೆ."ಸರ್ವರಿಗೂ ಉತ್ತಮ ಭವಿಷ್ಯವನ್ನು ಸಹಕಾರ

ಸಂಸ್ಥೆಗಳು ನಿರ್ಮಿಸುತ್ತವೆ." ಇದು ಹೇಗೆ? ಎಂಬುದು ನಮ್ಮ ಮುಂದಿರುವ ಪ್ರಶ್ನೆ. ವಿಶ್ವದಲ್ಲಿ ಒಟ್ಟು 3 ದಶಲಕ್ಷ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು 280 ದಶಲಕ್ಷ ಅಂದರೆ ಸರಿ ಸುಮಾರು ಶೇ 12 ಮಾನವ ಜನಾಂಗದ ಜೀವನದ ದಾರಿಯಾಗಿದೆ. ಭಾರತದಲ್ಲಿ 8.5ಲಕ್ಷ ಸಹಕಾರ ಸಂಘಗಳಿದ್ದು 40 ಕೋಟಿ ಸದಸ್ಯರಿರುತ್ತಾರೆ. ಕರ್ನಾಟಕದಲ್ಲಿ 44024 ಸಹಕಾರ ಸಂಘಗಳಿದ್ದು 40 ಕೋಟಿ ಸದಸ್ಯತ್ವ ಹೊಂದಿದೆ ಎಂದು ಅಂಕಿಅಂಶಗಳು ತಿಳಿಸುತ್ತವೆ.

ವಿಶ್ವದ ಮೊದಲ 300 ಅತಿ ಹೆಚ್ಚಿನ ವಹಿವಾಟು ನಡೆಸುವ ಸಹಕಾರ ಸಂಘಗಳಲ್ಲಿ ಫ್ರಾನ್ಸ್ ನ' ಕ್ರೆಡಿಟ್ ಅಗ್ರಿಕೋಲ್' 117.01 ಅಮೆರಿಕನ್ ಡಾಲರ್, ಜರ್ಮನ್ ನ 'ರೆವೆ'(REWE)(ಗ್ರಾಹಕ ಸಹಕಾರ ಸಂಘ) 82.03 ಅಮೇರಿಕನ್ ಡಾಲರ್ ವ್ಯವಹಾರ ನಡೆಸುತ್ತಿದ್ದು ಅಗ್ರ ಸ್ಥಾನ ದಲ್ಲಿವೆ. ಇದರಲ್ಲಿ ಅಮೇರಿಕೆಯ 73, ಫ್ರಾನ್ಸ್ ನ 40, ಜರ್ಮನಿಯ 31, ಜಪಾನ್ ನ 21 ಸಂಸ್ಥೆಗಳಿವೆ. ಭಾರತದ ಎರಡು ಸಂಸ್ಥೆಗಳು ಇಫ್ಕೊ, ಮತ್ತು 'ಅಮುಲ್' ಇದರಲ್ಲಿ ಸ್ಥಾನ ಪಡೆದಿವೆ ಎಂಬುದು ಸಮಾಧಾನಕರ ಸಂಗತಿ.

ಮೇಲಿನ ಅಂಕಿ ಅಂಶಗಳು ಯುರೋಪ್ ಖಂಡದಲ್ಲಿ ಸಹಕಾರ ಚಳುವಳಿಯ ಮಹತ್ವವನ್ನು ಅರಿಯಬಹುದು. ಭಾರತದಲ್ಲಿ ಆರ್ಥಿಕ ಬೆಳವಣಿಗೆಗೆ ಹೋಲಿಸಿದರೆ ಪರಿಣಾಮಕಾರಿ ಸಾಧನೆ ಆಗಿದೆ, ಎಂಬ ತೃಪ್ತಿ ದೊರೆಯುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಆರಂಭಗೊಂಡ ನಂತರ ನೂತನವಾಗಿ ಸಹಕಾರ ಮಾರಾಟ, ಕೃಷಿ ಉತ್ಪನ್ನಗಳ ರಫ್ತು ಸಾವಯವ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ. ಬಿತ್ತನೆ ಬೀಜಗಳ ಉತ್ಪಾದನೆ ಸಹಕಾರ ಸಂಘಗಳ ಸ್ಥಾಪನೆಗೆ ಆಯೋಜಿಸಲಾಗಿದ್ದು ಈಗಾಗಲೆ ಕಾರ್ಯಾರಂಭ ಮಾಡಿವೆ. ಅಲ್ಲದೆ ನ್ಯಾಪೆಡ್, ಎನ್.ಸಿ. ಸಿ. ಎಫ್ ಗಳು ಈ ದಿಸೆಯಲ್ಲಿ ಸರ್ಕಾರಕ್ಕೆ, ಎನ್.ಸಿ.ಡಿ.ಸಿ, ನಬಾರ್ಡ್ ಸಹಯೋಗ, ಸಹಾಯದಿಂದ ಸಹಕಾರದಿಂದ ಭಾರತದ ಸಹಕಾರ ವಲಯ ಜನಸಾಮಾನ್ಯರ ಜೀವನವನ್ನು ಹಸನು ಮಾಡಿದೆ. ಆದರೂ ಒಟ್ಟಾರೆ ಆರ್ಥಿಕತೆಯ ಪಾಲು ತೃಪ್ತಿ ದಾಯಕ ವಾಗಿಲ್ಲ. ಇದರಿಂದ ಬಂಡವಾಳಶಾಹಿ ಬಲವರ್ಧನೆಗೊಂಡು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗಿರುತ್ತದೆ. ಉತ್ತಮ ಸಮತಾ ಸಮಾಜ ನಿರ್ಮಾಣಕ್ಕಾಗಿ ಸಹಕಾರ ವಲಯ ಮತ್ತಷ್ಟು ಬೆಳೆಯಬೇಕಾದ ಅವಶ್ಯಕತೆ ನಿಚ್ಚಳವಾಗಿ ಕಂಡುಬರುತ್ತದೆ. ಅದಕ್ಕಾಗಿ ಅಂತಾರಾಷ್ಟ್ರೀಯ ಮೈತ್ರಿ ಸಂಸ್ಥೆಯು ಈ ಕೆಳಕಂಡ ಉಪಕ್ರಮಗಳನ್ನು ಶಿಫಾರಸ್ಸು ಮಾಡಿದೆ.

ಅರಿವನ್ನು ವೃದ್ಧಿಸುವುದು; ಸಹಕಾರ ಸಂಘಗಳ ವೈವಿಧ್ಯತೆ ಮತ್ತು ಇದರಿಂದ ಜನರಿಗೆ ಆಗುವ ಉಪಯುಕ್ತತೆ ಬಗ್ಗೆ ತಿಳಿಸಿಕೊಡುವುದು. ವಿವಿಧ ಪ್ರದೇಶಗಳಲ್ಲಿ ವಿವಿಧ ವಲಯಗಳ ಪರಿಚಯ ಮಾಡಿಕೊಡುವುದು. ಯಶಸ್ಸನ್ನು ಸಂಭ್ರಮಿಸುವುದು; ವಿವಿಧ ಪ್ರದೇಶಗಳ ವಿವಿಧ ಸಮುದಾಯಗಳು ಸಹಕಾರ ಸಂಘಗಳ ಯಶಸ್ವಿ ಕಾರ್ಯಾಚರಣೆಯಿಂದ ಪಡೆದಿರುವ ಪ್ರಯೋಜನಗಳು, ಲಾಭಗಳು, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಸಾಧನೆ ಮತ್ತು ಅದರ ಪ್ರಭಾವಗಳನ್ನು ಅರಿತು ಸಂಭ್ರಮಿಸಿ ಇತರರಿಗೂ ಪ್ರೇರಣೆಯಾಗುವುದು.

ಬೆಂಬಲ ನೀಡಲು ಒತ್ತಾಸೆ ; ಸಹಕಾರ ಸಂಘಗಳ ಅಭಿವೃದ್ಧಿಗೆ ತಕ್ಕ ನೀತಿಗಳು ಮತ್ತು ಸಂಪನ್ಮೂಲ ಕ್ರೋಡಿಕರಣಕ್ಕೆ ತಕ್ಕ ಪರಿಸರ ನಿರ್ಮಾಣ ಮಾಡಿ ಭವಿಷ್ಯದಲ್ಲಿ ಸುಸ್ಥಿರ ಮತ್ತು ಸಮಾನತೆಯ ಸಮಾಜ ನಿರ್ಮಾಣ ಮಾಡುವುದು.

ಸಹಯೋಗವನ್ನು ಬಲ ಪಡಿಸುವುದು; ಹೆಚ್ಚು ಪರಿಣಾಮಕಾರಿಯಾಗಲು ಮತ್ತು ಪ್ರಭಾವಶಾಲಿಯಾಗಿ ಕಾರ್ಯನಿರ್ವಹಿಸಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸರ್ಕಾರ ಸಂಸ್ಥೆಗಳೊಡನೆ, ಖಾಸಗಿ ಸಂಸ್ಥೆಗಳೊಡನೆ ಸಹಯೋಗ, ಸಹ ಭಾಗಿತ್ವದಿಂದ ಕಾರ್ಯನಿರ್ವಹಿಸುವುದರಿಂದ ಜನ ಸಾಮಾನ್ಯರ ಮೇಲೆ ಹೆಚ್ಚಿನ ಪ್ರಭಾವ ಬೀರುವುದಲ್ಲದೇ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ. ಇದರೊಂದಿಗೆ ವಿವಿಧ ಸಹಾರ ಸಂಘಗಳು, ಶೃಂಗ ಸಹಕಾರ

ಸಂಘಗಳು ಸಹಕಾರ ತತ್ವವಾದ 'ಸಹಕಾರ ಸಂಘಗಳ ನಡುವೆ ಸಹಕಾರ' ತಳಮಟ್ಟದ ಮತ್ತು ಶೃಂಗ ಶ್ರೇಣಿಗಳ ನಡುವೆ ಬಾಂಧವ್ಯ ವೃದ್ಧಿಯಿಂದ ಒಗ್ಗಟ್ಟು ಮತ್ತು' ನಾವೆಲ್ಲ ಒಂದು' ಎಂಬ ಭಾವನೆಯಿಂದ ಕಾರ್ಯನಿರ್ವಹಿಸುವುದರಿಂದ ಸಹಕಾರ ಚಳುವಳಿಯನ್ನು ಬಲ ಪಡಿಸಬಹುದು. ಈ ದಿಸೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಅಂತರರಾಷ್ಟ್ರೀಯ ಸಹಕಾರ ದಿನದಂದು ಆಲೋಚಿಸುವುದಕ್ಕೆ ಕರೆ ನೀಡಲಾಗಿದೆ. ಪ್ರೇರಣೆ ಮತ್ತು ನೈತಿಕ ಮೌಲ್ಯಗಳ ವೃದ್ಧಿ; ಸಹಕಾರ ಸಂಘಗಳ ಯಶಸ್ಸನ್ನು ಸಂಭ್ರಮಿಸುವುದರಿಂದ ಸದಸ್ಯರಿಗೆ ಸಂಘದ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೊತ್ಸಾಹಿಸಿದಂತಾಗುತ್ತದೆ. ಇದರಿಂದ ಅವರು ಮತ್ತೂ ಉತ್ಸಾಹ ದಿಂದ ಕಾರ್ಯೋನ್ಮುಖರಾಗಿ ಮುಂದಿನ ಭವಿಷ್ಯವನ್ನು ಮತ್ತೂ ಉತ್ತಮವಾಗಿ ರೂಪಿಸ ಬಲ್ಲರು. ಇದರಿಂದ ಅವರ ಭವಿಷ್ಯ ಉತ್ತಮವಾಗುವುದಲ್ಲದೆ ಸಮುದಾಯದ ಭವಿಷ್ಯವನ್ನು ಉತ್ತಮ ಗೊಳಿಸಬಲ್ಲರು. ಉದಾಹರಣೆಗೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅಧಿಕ ಮತ್ತು ಉತ್ತಮ ಗುಣಮಟ್ಟದ ಹಾಲು ಸರಬರಾಜು ಮಾಡಿದ ಸದಸ್ಯರನ್ನು, ಪತ್ತಿನ ಸಹಕಾರ ಸಂಘದಲ್ಲಿ ಸ್ವ ಪ್ರೇರಣೆಯಿಂದ ಸಕಾಲದಲ್ಲಿ ಸಾಲ ಮರುಪಾವತಿಸಿದವರನ್ನು ಸನ್ಮಾನಿಸುವುದು.

ಬೆಳವಣಿಗೆ ಮತ್ತು ಅಭಿವೃದ್ಧಿ ಯನ್ನು ಉತ್ತೇಜಿಸುವುದು; ಸಹಕಾರದಿಂದ ವ್ಯಕ್ತಿಗಳು ಉದ್ಯೋಗದಲ್ಲಿ ತೊಡಗಿಕೊಳುತ್ತಾರೆ ಮತ್ತು ಉದ್ಯೋಗ ಸೃಷ್ಠಿಸುತ್ತಾರೆ. ಇದರಿಂದ ಅದರಲ್ಲಿಯೂ ಸೇವೆ ಲಭ್ಯವಿಲ್ಲದ ವಲಯ ಮತ್ತು ಪ್ರದೇಶಗಳಲ್ಲಿ ಇದು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಪತ್ತಿನ ಸಹಕಾರ ವಲಯ ಬಂಡವಾಳ ಒದಗಿಸುತ್ತದೆ. ಉತ್ಪಾದನಾ ಮತ್ತು ಮಾರುಕಟ್ಟೆ ಸಹಕಾರ ಸಂಘೆಗಳು ಮಾರುಕಟ್ಟೆ ಒದಗಿಸುತ್ತವೆ. ಅರಿವು ಹೆಚ್ಚಿಸುವುದು; ಸಹಕಾರ ಸಂಸ್ಥೆಗಳು ತಮ್ಮದೇ ಆದ ಸ್ವಯಂ ಸಂಸ್ಥೆಗಳು ಅನ್ನುವುದನ್ನು ಅರಿಯಬೇಕು. ಇದರಲ್ಲಿ ಮಧ್ಯಮ ವರ್ತಿಯ ಪಾತ್ರವಿಲ್ಲ ಇದರಿಂದ ಆಗುವ ಪ್ರಯೋಜನ ಮತ್ತು ಲಾಭ ತಮಗೆ ನೇರವಾಗಿ ದೊರೆಯುತ್ತಿದೆ ಎಂಬುದನ್ನು ತಿಳಿಸಿಕೊಡಬೇಕಾಗಿದೆ. ಸಾರ್ವಜನಿಕರಿಗೂ 'ಸಹಕಾರ'ದ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಇದರಿಂದಾಗುವ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ಪರಿಸರಾತ್ಮಕ ಸುಸ್ಥಿರತೆ ಬಗ್ಗೆ ತಿಳಿಯಪಡಿಸಲು ಕ್ರಮಗಳು ಅತ್ಯಗತ್ಯ ವಿಶ್ವದ ಸವಾಲುಗಳನ್ನು ಎದುರಿಸುವುದು(ಸರಿ ಪಡಿಸುವುದು); ಬಡತನ, ಹಸಿವು, ವಾತಾವರಣದ ಬದಲಾವಣೆ ಮತ್ತು ಅಸಮಾನತೆ ಸೃಷ್ಠಿಯಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಮತ್ತು ಅಸಮಾನತೆಯನ್ನು ತಡೆಗಟ್ಟುವುದರಲ್ಲಿ ಸಹಕಾರ ಸಂಘಗಳು ತೊಡಗಿಕೊಳ್ಳುವುದರಿಂದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ನೈತಿಕ ಮತ್ತು ಸುಸ್ಥಿರ ರೂಢಿಗಳನ್ನು ಉತ್ತೇಜಿಸುವುದು; ಪ್ರಜಾಸತ್ತಾತ್ಮಕ ಆಡಳಿತವು ಎಲ್ಲರನ್ನೂ ಒಳಗೊಳ್ಳುವುದರಿಂದ ಸಮುದಾಯದ ಅಭಿವೃದ್ಧಿಗೆ ಕಾರಣವಾಗುತ್ತದೆ. ಆದುದರಿಂದ ಸಹಕಾರ ಸಂಘಗಳು ನೈತಿಕ ಮೌಲ್ಯಗಳನ್ನು ಹೆಚ್ಚಿಸುವ ಮತ್ತು ಪರಿಸರ ಜವಾಬ್ದಾರಿ ಯನ್ನು ವೃದ್ಧಿಸುವುದಕ್ಕೆ ಆಧ್ಯತೆ ನೀಡಿ ಆಧಿಕ ಪ್ರಗತಿಗೆ ಕಾರಣವಾಗಬಲ್ಲ ಪರ್ಯಾಯ ಮಾರ್ಗವೆಂದರೆ ಸಹಕಾರ ಮಾರ್ಗ ಮಾತ್ರ ಆಗಿರುತ್ತದೆ. ಭಾಗವಹಿಸುವಿಕೆ ಮತ್ತು ಸಶಕ್ತತೆಯನ್ನು ಪ್ರೊತ್ಸಾಹಿಸುವುದು; ಸಹಕಾರ ಸಂಘಗಳು ವ್ಯಕ್ತಿಗಳನ್ನು ಸಮುದಾಯಗಳನ್ನು ಸಶಕ್ತರನ್ನಾಗಿ ಮಾಡುತ್ತದೆ. ಅವರ ಧ್ವನಿ ಕೇಳಲೇ ಬೇಕಾಗುತ್ತದೆ.

ಅವರಿಗೆ ಯಜಮಾನಿಕೆಯು ಸಶಕ್ತರನ್ನಾಗಿ ಮಾಡುತ್ತದೆ. ವಿಶ್ವಸಂಸ್ಥೆ ಯು ಮುಂದಿನ ವರ್ಷ 2025 ನ್ನು ಅಂತರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿರುವುದು ಈ ವರ್ಷದ ಅಂತರಾಷ್ಟ್ರೀಯ ಸಹಕಾರ ದಿನದ ಮಹತ್ವವನ್ನು ಹೆಚ್ಚಿಸಿದೆ. ಅಂತರರಾಷ್ಟ್ರೀಯ ಸಹಕಾರ ದಿನವು "ನಾವು ಮತ್ತು ನಮ್ಮ ಶಕ್ತಿ"ಯನ್ನು ಪ್ರತಿಧ್ವನಿಸುತ್ತದೆ. ಅನುರಣಿಸುತ್ತಲೇ ಇರುತ್ತದೆ.

****************************************************************************************************

## 7 ಸಹಕಾರಿ ತತ್ವಗಳು

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ

## ಸಹಕಾರಿ ಧ್ವಜದಲ್ಲಿನ 7 ಬಣ್ಣಗಳು

- ಸಹಕಾರ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನವನ ಇತರೆ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ

# ಲೇಖಕರ ನುಡಿ

**ಶ್ರೀ ಶಶಿಧರ ಎಲೆ**

ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ನಂ 281, ನೇಸರ, ಬಾಲಾಜಿ ಹೆಚ್.ಬಿ.ಸಿಎಸ್ ಲೇಔಟ್,
ವಾಜರಹಳ್ಳಿ, ಕನಕಪುರ ರಸ್ತೆ, ಬೆಂಗಳೂರು– 560109


ಪ್ರಪ್ರಥಮವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ರವರಿಗೆ ನನ್ನ ಆಯ್ದ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಒಪ್ಪಿದ್ದಕ್ಕೆ ನನ್ನ ಹೃದಯಪೂರ್ವಕ ನಮನಗಳು.

ನಾನು ವಿದ್ಯಾರ್ಥಿಯಾಗಿದ್ದಾಗ ಜನಪರ ವಿಜ್ಞಾನ ಲೇಖನ ಬರೆಯುವುದನ್ನು ನಮ್ಮ ಗುರುಗಳ ಪ್ರೋತ್ಸಾಹ ದಿಂದ ರೂಡಿಗೊಳಿಸಿಕೊಂಡಿದ್ದೆ. ವೃತ್ತಿಯಿಂದ ಸಹಕಾರ ಹೈನುಗಾರಿಕೆ, ನಂತರ ಸಹಕಾರ ಇಲಾಖೆಗೆ ಪಾದರ್ಪಣ ಮಾಡಿದಾಗಿನಿಂದ 'ಸಹಕಾರ' ನನ್ನ ಕಾರ್ಯಕ್ಷೇತ್ರ ವಾಯಿತು. ಎಲ್ಲರನ್ನೂ ಒಳಗೊಂಡು ಅಭಿವೃದ್ಧಿ ಪಥದಲ್ಲಿ ಕೊಂಡಯ್ಯಬಲ್ಲ ಕ್ಷೇತ್ರ ಎಂದರೆ ಅದು ಸಹಕಾರಿ ಕ್ಷೇತ್ರ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ **'ಸಹಕಾರ ಪತ್ರಿಕೆ'** ನನ್ನ ಬರವಣಿಗೆಗೆ ಪ್ರೋತ್ಸಾಹ ನೀಡಿರುವುದಲ್ಲದೆ, ಪ್ರಸಕ್ತ ವಿಷಯಗಳ ಬಗ್ಗೆ ಕೂಡ ಗಮನಹರಿಯುವಂತೆ ಮಾಡಿದೆ. ಅದರಂತೆ 2017 ರಿಂದ ಇತ್ತೀಚೆಗಿನವರೆಗೂ ಬರೆದ ವಿವಿಧ ಸಹಕಾರ ಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳು ಸಹಕಾರ ಕ್ಷೇತ್ರದ ಹಲವು ಮುಖಗಳನ್ನು ಹಲವು ವಿಷಯಗಳನ್ನು ಮತ್ತು ಸಹಕಾರ ಕ್ಷೇತ್ರದ ಪ್ರಸಕ್ತ ವಿಷಯಗಳನ್ನು **'ಸಹಕಾರ ಅವಲೋಕನ'** ಪುಸ್ತಕವು ಒಳಗೊಂಡಿರುತ್ತದೆ. ಸಹಕಾರಿ ಓದುಗರು ಎಂದಿನಂತೆ ಈ ಪುಸ್ತಕವನ್ನು ಸ್ವಾಗತಿಸುತ್ತಾರೆ ಎಂಬುದು ನನ್ನ ಅಭಿಲಾಷೆ.

ಈ ಲೇಖನ ಪುಸ್ತಕ ರೂಪಕ್ಕೆ ತರಲು ಸಹಕರಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ. ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿ ವರ್ಗದವರಿಗೆ ನಾನು ಸದಾ ಚಿರಋಣಿ.

ಸೇವೆಯಿಂದ ನಿವೃತ್ತಿ ನಂತರ ಈ ಹವ್ಯಾಸ ಮುಂದುವರಿಕೆಗೆ ಸಹಕರಿಸುತ್ತಿರುವ ನಮ್ಮ ಶ್ರೀಮತಿ ಸರೋಜ ಮತ್ತು ಕುಟುಂಬಕ್ಕೆ ನನ್ನ ಕೃತಜ್ಞತೆಗಳು.


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055
ದೂ : 080-23378375-80, ವೆಬ್ ತಾಣ : www.Souharda.coop